ಗಳೆಲ್ಲಾ ಕ್ಷೀಣದೆಸೆಗೆ ಬರುವದಲ್ಲದೆ ದೇಶವೇ ಕೆಟ್ಟು ಹೋಗುವದೆಂಬದಾಗಿಯೂ ಯುಕ್ತಿಯುಕ್ತವಾದ ಅನೇಕ ಸಂಗತಿಗಳನ್ನು ಪ್ರಚಾರಮಾಡುತ್ತಲಿದ್ದರು. ಈ ವಿಧವಾದ ತಾತ್ಪರ್ಯಗಳು ಜನಸಮುದಾಯದಲ್ಲಿ ಚರ್ಚಿಸಲ್ಪಟ್ಟು ಸಮಸ್ತರಿಗೂ ಅಭಿಮತವಾಗುತ್ತಾ ಬಂದವು. ಜನರು ನಿರ್ಭೀತರಾಗಿ ಕೆಟ್ಟವರನ್ನು ತಿರಸ್ಕಾರ ಮಾಡುವದಕ್ಕೆ ಪ್ರಾರಂಭಿಸಿದರು. ಈ ತಿರಸ್ಕಾರವು ರಾಜರ ದಂಡನೆಯಲ್ಲಿ ಪರ್ಯವಸಾನವಾಯಿತು. ಇಂಥಾ ತಾತ್ಪರ್ಯವನ್ನು ಆಚರಣೆಗೆ ತರುವದಕ್ಕೆ ಅನೇಕರು. ಅನೇಕ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಪೆಸ್ಟಲಾಟ್ಸೀಯವರು ಬರೆದ ಎರಡು ಗ್ರಂಥಗಳು ಬಹಳ ಪ್ರಸಿದ್ಧವಾದವುಗಳು. ಇವುಗಳಲ್ಲಿ ಮೊದಲನೇದು ಒಂದು ಕಥೆಯ ಪುಸ್ತಕ. ಇದರಲ್ಲಿ ವಿದ್ಯಾಭ್ಯಾಸ ಧರ್ಮ ರಾಜನೀತಿ ಮೊದಲಾದವುಗಳ ವಿಷಯದಲ್ಲಿ ಅರ್ಥ ಕಥೆಗಳನ್ನು ಬರೆದು ಇದಾರೆ. ಈ ಪುಸ್ತಕಕ್ಕೆ "ಬಾಲಬೋಧೆ" ಎಂದು ಹೆಸರಿಟ್ಟರು. ಈ ಗ್ರಂಥವನ್ನು ಪರಿಶೀಲಿಸಿ ನೋಡಿದರೆ ವಯೋವೃದ್ಧರಾಗಿದ್ದಾಗ್ಯೂ ವಿವೇಕದಲ್ಲಿ ಬಾಲಕರಾದ ಜನರಿಗೆ ಹಿತೋಪದೇಶವನ್ನು ಮಾಡುವದರಲ್ಲಿ ಈ ಗ್ರಂಥವು ಬಹಳ ಸಾಧಕವಾದದ್ದೆಂದು ಗೊತ್ತಾಗುತ್ತದೆ. ಈ ಗ್ರಂಥದಲ್ಲಿನ ಕೆಲವು ಕಥೆಗಳು ಸರ್ವರಿಗೂ ಅವಲೋಕನೀಯವಾದ್ದರಿಂದ ಇಲ್ಲಿ ಬರೆಯಲ್ಪಟ್ಟವೆ. ಅವು ಯಾವವೆಂದರೆ.

ಒಂದು ಕುದುರೆಯು ಎರಡು ಮರಿಗಳನ್ನು ಹಾಕಿತು. ಅದರಲ್ಲಿ ಒಂದು ಮರಿಯು ಒಬ್ಬ ರೈತನ ವಶವಾಯಿತು. ಅವನು ಅದನ್ನು ನೇಗಲಿಗೆ ಕಟ್ಟುತ್ತಾ, ಮೇಯುವದಕ್ಕೆ ಹೊಲಕ್ಕೆ ಅಟ್ಟುತ್ತಾ ಬಂದನು. ಅಲ್ಲಿ ಆ ಕುದುರೆಗೆ ಹಳ್ಳಿ ಕುದುರೆಗಳು ಕತ್ತೆಗಳು ಜೊತೆಗೆ ಸಿಕ್ಕುತಿದ್ದವು. ಅವುಗಳ ಸಹವಾಸದಿಂದ ಅವುಗಳ ಚೇಷ್ಟೆಗಳೆಲ್ಲಾ ಇದಕ್ಕೂ ಬಂತು. ಆ ಮರಿಯು ದೊಡ್ಡದಾದ ಮೇಲೆ ಹೊಲಾ ಉಳುವುದಕ್ಕೆ ವಿನಾ ಇನ್ನಾವುದಕ್ಕೂ ಪ್ರಯೋಜನವಾಗಲಿಲ್ಲಾ. ಮತ್ತೊಂದು ಮರಿಯು ಒಬ್ಬ ಸವಾರನ ಕೈಗೆ ಬಿತ್ತು. ಅವನು ಅದಕ್ಕೆ ಸರಿಯಾದ ತಿಂಡಿ ತೀರ್ಥಗಳನ್ನು ಹಾಕಿ ನಾನಾವಿಧವಾದ ನಡಿಗೆಗಳಲ್ಲಿ ಸರಿಯಾದ ಶಿಕ್ಷೆಯನ್ನು ಕಲ್ಪಿಸಿ ಬಹಳ ಬೆಲೆಯುಳ್ಳ ಮತ್ತು ರಾಜಯೋಗ್ಯವಾದ ಕುದುರೆಯನ್ನಾಗಿ ಮಾಡಿದನು ಮನುಷ್ಯರಂತೆ ಬುದ್ಧಿಶಕ್ತಿಯಿಲ್ಲದ ಚತುಷ್ಪಾದ ಜಂತುಗಳಲ್ಲಿಯೂ ಸಹವಾಸ ಬಲವು ಮತ್ತು ಶಿಕ್ಷಾಬಲವು ಉತ್ಕೃಷ್ಟಾಧಮಪದವಿಗಳಿಗೆ ಕಾರಣವಾದರೆ ಮೇಧಾವಂತರಾದ ಜನರಲ್ಲಿ ಹೇಳ

ಎಲೆಯು ಬಿಟ್ಟು ಇತ್ತು. ಆ ಯೆಲೆಗಳು ಗಿಡವನ್ನು ದೃಢವಾಗಿ ಅವಲಂಬಿಸಿರುವು ದನ್ನು ನೋಡಿ, ಇದರ ಪುಣ್ಯವಿಶೇಷವು ನನಗೆ ಬಹಳ ವಿಸ್ಮಯವನ್ನುಂಟುಮಾಡುತ್ತದೆ. ಈ ಯೆಲೆಗಳೆಲ್ಲಾ ಈ ಗಿಡಕ್ಕೆ ಭದ್ರವಾಗಿ ಅಂಟಿಕೊಂಡಿವೆ "ನನಗೂ ಈ ಗಿಡದ ಎಲೆಗಳಂತೆ ಅನೇಕಲಕ್ಷ ಪ್ರಜೆಗಳು ಇರುವರು. ಇವರೆಲ್ಲರೂ ಎಲೆಗಳು ಈ ಗಿಡ ವನ್ನು ಅವಲಂಬಿಸಿ ಇರುವಂತೆ ನನ್ನನ್ನು ಅವಲಂಬಿಸಿ ಇಲ್ಲ. ಇವರು ನನ್ನ ವಿಷಯ ದಲ್ಲಿ ಹೊಂದಿರತಕ್ಕ ಪ್ರೀತಿಯು ಬಹಳ ಕೃತ್ರಿಮನಾಗಿದೆ. ಈ ಪ್ರಜೆಗಳಿಗಿಂತಲೂ ಈ ಎಲೆಗಳು ಉತ್ತಮವಾದವು ನನಗಿಂತಲೂ ಈ ವೃಕ್ಷವು ಧನ್ಯವಾದದ್ದು ಎಂದನು." ಅದಕ್ಕೆ ಸವಿಾಪವರ್ತಿಯಾದ ಒಬ್ಬ ತೋಟದವನು ಮಹಾಸ್ವಾವಿಾ! ತಾವು ಅಪ್ಪಣೆಕೊಡಿಸಿದ್ದು ಬಹಳ ಯುಕ್ತಿಯುಕ್ತವಾಗಿದೆ. ಇದು ಬಹಳ ಸಾಧುವಾದ ವಾತು. ಈ ಗಿಡಕ್ಕೆ ಈ ಯೆಲೆಗಳೆಲ್ಲಾ ಪ್ರಜೆಗಳು, ಈ ಗಿಡದ ಪ್ರಜಾರಂಜನೆಯ ನ್ನು ತಾವು ಪರೀಕ್ಷಿಸಬೇಕು. ಇದು ತನ್ನ ಬೇರುಗಳಿಂದ ತನ್ನ ಪ್ರಜೆಗಳಿಗೆ ಆಧಾರ ಭೂತವಾದ ದ್ರವವನ್ನು ಪರಿಗ್ರಹಿಸಿ ಪ್ರತಿಯೊಂದು ಎಲೆಗೂ ಆಹಾರವನ್ನು ಕೊಡು ತ್ತದೆ. ಹೀಗೆ ಕೊಡುವದರಲ್ಲಿ ಪಕ್ಷಪಾತವೆಂಬುವದನ್ನು ಇದು ಎಂದಿಗೂ ಅರಿತದ್ದಲ್ಲ. ಈ ನಿಷ್ಪಕ್ಷಪಾತಭಾವವನ್ನು ನೋಡಿ ಸಮಸ್ತ ಎಲೆಗಳೂ ಇದರಲ್ಲಿ ಅಕೃತ್ರಿಮವಾದ ಭಕ್ತಿಯನ್ನು ಇಟ್ಟುಕೊಂಡಿವೆ ಪ್ರಜೆಗಳ ವಿಷಯದಲ್ಲಿ ಪ್ರಭುಗಳಿಗೆ ಗುಣೈಕಪಕ್ಷ ಪಾತವು ಇತರವಿಷಯಗಳಲ್ಲಿ ನಿಷ್ಪಕ್ಷಪಾತವು ಇರುವದು ಕಷ್ಟ. ಸಾಮಾನ್ಯವಾಗಿ ಪ್ರಭುಗಳಿಗೆ ಅಪ್ರಿಯವಾಗಿದ್ದಾಗ್ಯೂ ಹಿತವಾದ ಉಪದೇಶಗಳನ್ನು ಮಾಡತಕ್ಕವರು ಸವಿಾಪದಲ್ಲಿ ಸೇರುವದಕ್ಕೆ ಆಗುವದಿಲ್ಲ. ಅಂಥಾ ಪ್ರಜೆಗಳು ಸವಿಾಪದಲ್ಲಿ ಸೇರುವದು ಕಷ್ಟವಾಗಿರುವಾಗ ಅವರು ಪ್ರಭುವನ್ನು ಅವಲಂಬಿಸುವದು ಹ್ಯಾಗೆ? ಆದ್ದರಿಂದ ಕೃತ್ರಿಮವಾದ ಭಕ್ತಿಯುಳ್ಳವರು ಸಾಮಾನ್ಯವಾಗಿ ಪ್ರಭುಗಳ ಸವಿಾಪದಲ್ಲಿ ಇರುವದಕ್ಕೆ ಆಗುವದಿಲ್ಲ. ಅಂಥಾವರ ವಾತು ಪ್ರಭುಗಳಿಗೆ ರುಚಿಸುವದೂ ಇಲ್ಲ. ಆದ್ದರಿಂದ ಮಹಾಸ್ವಾವಿಯವರು ತಮ್ಮ ಸವಿಾಪವರ್ತಿಗಳಾದ ಕೃತ್ರಿವಿುಗಳಾದ ಪ್ರಜೆಗಳ ಅವ ಲಂಬನೆಯ ವಿಷಯದಲ್ಲಿ ಹೀಗೆ ಶೋಚಿಸುವದು ಏನು ಆಶ್ಚರ್ಯ! ಬೆಲ್ಲಕ್ಕೆ ಇರುವೆ, ನೊಣಗಳೇ ಮೊದಲಾದ ಪ್ರಾಣಿಗಳೂ, ಹೆಣಕ್ಕೆ ಕ್ಷುದ್ರ ಮೃಗಗಳೂ ಪಕ್ಷಿಗಳೂ ಯಾವರೀತಿಯಲ್ಲಿ ಮುತ್ತುಕೊಳ್ಳುತ್ತವೋ ಹಾಗೆಯೇ ಧನಿಕರ ಧನವನ್ನು ಚಮತ್ಕಾರ ದಿಂದ ಸೂರೆಗೊಳ್ಳುವದಕ್ಕೋಸ್ಕರ ಅಕೃತ್ರಿಮ ಭಕ್ತಿಯನ್ನು ಅಭಿನಯಿಸುವ ಕೃತ್ರಿ

ಶಾಗಿ ಪರಿಣಮಿಸದ ಜನರು ತಮಗೂ ಇತರರಿಗೂ ಮೃತ್ಯುಗಳಾಗಿ ಪರಿಣಮಿಸುವರು ಆದ್ದರಿಂದ ಚಿಕ್ಕ ತನದಲ್ಲಿ ಮಕ್ಕಳನ್ನು ಅಶಿಕ್ಷಿತರನ್ನಾಗಿಯೂ ಅಸಂಸ್ಕಾರಿಗಳಾಗಿಯೂ ಇರುವಂತೆ ಬಿಡತಕ್ಕವರು ಮಹಾ ಪಾತಕಿಗಳಾಗುವರು.

೩. ಒಂದು ಬಂಡೆಯು ಸಾವಿರಾರು ವರುಷಗಳಿಂದ ಬೆಟ್ಟದ ತೊಪ್ಪಲಲ್ಲಿ ಬಿದ್ದು ಇತ್ತು. ಅದರ ಕೆಳಭಾಗದಲ್ಲಿ ದನಕರುಗಳು ಮಳೆ ಬಿಸಿಲು, ಹೆಚ್ಚಾ ಆದಾಗ ಆಶ್ರಯಿಸುತ್ತಿದ್ದವು. ಕೆಲವು ಕಾಲದ ತರುವಾಯ ಈ ಬಂಡೆಯು ಸೀಳಿ ಕಲ್ಲಿನ ಚಕ್ಕೆಗಳು ಕೆಳಕ್ಕೆ ಬೀಳಲುಪಕ್ರಮವಾಯಿತು. ಆಗ ಭಂಡೆಯ ಕೆಳಗೆ ಆಶ್ರಯ ಹೊಂದುತ್ತಲಿದ್ದ ದನಕರುಗಳ ಮೇಲೂ ಚಕ್ಕೆಗಳು ಬೀಳುವದಕ್ಕೆ ಉಪಕ್ರಮವಾಗಲು ಅವುಗಳು ಈ ಸ್ಥಳವನ್ನು ಬಿಟ್ಟು ಓಡಿದವು. ಈ ಮುಂದೆಯನ್ನು ಕಾಯಿತಕ್ಕವನಿಗೆ ನೇತ್ರಪಾಟವು ಶ್ರೋತ್ರಪಾಟವು ಕಡಮೆಯಾಗಿದ್ದವು. ಇವನು ಈ ಮೃಗಗಳು ಓಡಿಹೋದ್ದಕ್ಕೆ ಸರಿಯಾದ ಕಾರಣವನ್ನು ನೋಡಿ ಅಥವಾ ಕೇಳಿ ತಿಳಿದುಕೊಳ್ಳುವುದಕ್ಕೆ ಅಶಕ್ತನಾಗಿ ಇದ್ದದ್ದಲ್ಲದೆ, ಇವುಗಳು ಹೀಗೆ ಓಡಿಹೋಗುವಂತೆ ತನಗೆ ಶತ್ರುವಾದ ಯಾವನೋ ಒಬ್ಬನು ಶೂನ್ಯಮಾಡಿದಾನೆಂಬದಾಗಿ ಭಾವಿಸಿದನು. ಈ ಭಾವನೆಯಿಂದ ನಿರಪರಾಧಿಗಳಾದ ತನ್ನ ಮಿತ್ರೇತರರಲ್ಲಿ ದೋಷವನ್ನು ಆರೋಪಿಸಿ, ತನಿಗೂ ಅವರಿಗೂ ಇನ್ನೂ ಹೆಚ್ಚಾದ ದ್ವೇಷವೂ ಉಂಟಾಗುವಂತೆ ಮಾಡಿಕೊಂಡನು. ಲೋಕದಲ್ಲಿ ಅನೇಕರು ಎಷ್ಟು ಬುದ್ಧಿಶಾಲಿಗಳೆಂದು ಹೆಸರನ್ನು ತೆಗೆದುಕೊಂಡಿದ್ದಾಗ್ಯೂ ಕುರುಡನಾಗಿಯೂ, ಬಧಿರನಾಗಿಯೂ ಇದ್ದ ಈ ದನಾಕಾಯುವವನಂತೆ ತಮಗೆ ಉಂಟಾಗತಕ್ಕ ವಿಪತ್ತು ಪರಂಪರೆಗಳ ಕಾರಣಗಳನ್ನು ಸರಿಯಾಗಿ ಪರೀಕ್ಷಿಸಿ ಅವುಗಳನ್ನು ನಿವಾರಣೆ ಮಾಡಿಕೊಳ್ಳಲಾರದೇ ವೃಥಾ ನಿರಪರಾಧಿಗಳಲ್ಲಿ ದೋಷವನ್ನು ಆರೋಪಿಸಿ ಶತ್ರುಮಂಡಲಿಯನ್ನು ಹೆಚ್ಚಿಸಿಕೊಳ್ಳುವರಲ್ಲವೆ ಇನ್ನೂ ಅನರ್ಥಗಳಿಗೆ ಗುರಿಯಾಗುವರು. ಜನರು ತಮಗೆ ಅನರ್ಥಗಳು ಉಂಟಾದಾಗ ಸಾವಧಾನವಾಗಿ ಅವುಗಳ ಕಾರಣಗಳನ್ನು ಪರೀಕ್ಷಿಸಿ ನಿವಾರಣೆಮಾಡಿಕೊಳ್ಳಬೇಕೇ ಹೊರ್ತು ಅವುಗಳಿಂದ ಉಂಟಾದ ಭೀತಿಯಿಂದ ಪರವಶರಾಗಿ ನಿರಪರಾಧಿಗಳಲ್ಲಿ ದೋಷಾರೋಪಣೆಯನ್ನು ಮಾಡಿ ಅವರ ಅನರ್ಥಕ್ಕೂ ಗುರಿಯಾಗಬಾರದು.

೪. ಒಬ್ಬ ದೊರೆಯು ತನ್ನ ಉದ್ಯಾನವನದಲ್ಲಿ ವ್ಯಾಯಾಮಾರ್ಥವಾಗಿ ಸಂಚರಿಸುತ್ತಿದ್ದನು. ಅಲ್ಲಿ ಒಂದು ನಿಂಬೆಗಿಡವು ಇತ್ತು. ಆ ಗಿಡದಲ್ಲಿ ತುಂಬಾ

ಎಲೆಯು ಬಿಟ್ಟು ಇತ್ತು. ಆ ಯೆಲೆಗಳು ಗಿಡವನ್ನು ದೃಢವಾಗಿ ಅವಲಂಬಿಸಿರುವು ದನ್ನು ನೋಡಿ, ಇದರ ಪುಣ್ಯವಿಶೇಷವು ನನಗೆ ಬಹಳ ವಿಸ್ಮಯವನ್ನುಂಟುಮಾಡುತ್ತದೆ. ಈ ಯೆಲೆಗಳೆಲ್ಲಾ ಈ ಗಿಡಕ್ಕೆ ಭದ್ರವಾಗಿ ಅಂಟಿಕೊಂಡಿವೆ ; ನನಗೂ ಈ ಗಿಡದ ಎಲೆಗಳಂತೆ ಅನೇಕಲಕ್ಷ ಪ್ರಜೆಗಳು ಇರುವರು. ಇವರೆಲ್ಲರೂ ಎಲೆಗಳು ಈ ಗಿಡ ವನ್ನು ಅವಲಂಬಿಸಿ ಇರುವಂತೆ ನನ್ನನ್ನು ಅವಲಂಬಿಸಿ ಇಲ್ಲ. ಇವರು ನನ್ನ ವಿಷಯ ದಲ್ಲಿ ಹೊಂದಿರತಕ್ಕ ಪ್ರೀತಿಯು ಬಹಳ ಕೃತ್ರಿಮವಾಗಿದೆ. ಈ ಪ್ರಜೆಗಳಿಗಿಂತಲೂ ಈ ಎಲೆಗಳು ಉತ್ತಮವಾದವು ನನಗಿಂತಲೂ ಈ ವೃಕ್ಷವು ಧನ್ಯವಾದದ್ದು ಎಂದನು " ಅದಕ್ಕೆ ಸವಿಾಪವರ್ತಿಯಾದ ಒಬ್ಬ ತೋಟದವನು ಮಹಾಸ್ವಾಮಿಾ ! ತಾವು ಅಪ್ಪಣೆಕೊಡಿಸಿದ್ದು ಬಹಳ ಯುಕ್ತಿಯುಕ್ತವಾಗಿದೆ. ಇದು ಬಹಳ ಸಾಧುವಾದ ವಾತು. ಈ ಗಿಡಕ್ಕೆ ಈ ಯೆಲೆಗಳೆಲ್ಲಾ ಪ್ರಜೆಗಳು, ಈ ಗಿಡದ ಪ್ರಜಾರಂಜನೆಯ ನ್ನು ತಾವು ಪರೀಕ್ಷಿಸಬೇಕು. ಇದು ತನ್ನ ಬೇರುಗಳಿಂದ ತನ್ನ ಪ್ರಜೆಗಳಿಗೆ ಆಧಾರ ಭೂತವಾದ ದ್ರವವನ್ನು ಪರಿಗ್ರಹಿಸಿ ಪ್ರತಿಯೊಂದು ಎಲೆಗೂ ಆಹಾರವನ್ನು ಕೊಡು ತ್ತದೆ. ಹೀಗೆ ಕೊಡುವದರಲ್ಲಿ ಪಕ್ಷಪಾತವೆಂಬುವದನ್ನು ಇದು ಎಂದಿಗೂ ಅರಿತದ್ದಲ್ಲ. ಈ ನಿಷ್ಪಕ್ಷಪಾತಭಾವವನ್ನು ನೋಡಿ ಸಮಸ್ತ ಎಲೆಗಳೂ ಇದರಲ್ಲಿ ಅಕೃತ್ರಿಮವಾದ ಭಕ್ತಿಯನ್ನು ಇಟ್ಟುಕೊಂಡಿವೆ ಪ್ರಜೆಗಳ ವಿಷಯದಲ್ಲಿ ಪ್ರಭುಗಳಿಗೆ ಗುಣೈಕಪಕ್ಷ ಪಾತವು ಇತರವಿಷಯಗಳಲ್ಲಿ ನಿಷ್ಪಕ್ಷಪಾತವು ಇರುವದು ಕಷ್ಟ. ಸಾಮಾನ್ಯವಾಗಿ ಪ್ರಭುಗಳಿಗೆ ಅಪ್ರಿಯವಾಗಿದ್ದಾಗ್ಯೂ ಹಿತವಾದ ಉಪದೇಶಗಳನ್ನು ಮಾಡತಕ್ಕವರು ಸವಿಾಪದಲ್ಲಿ ಸೇರುವದಕ್ಕೆ ಆಗುವದಿಲ್ಲ. ಅಂಥಾ ಪ್ರಜೆಗಳು ಸವಿಾಪದಲ್ಲಿ ಸೇರುವದು ಕಷ್ಟವಾಗಿರುವಾಗ ಅವರು ಪ್ರಭುವನ್ನು ಅವಲಂಬಿಸುವದು ಹ್ಯಾಗೆ ? ಆದ್ದರಿಂದ ಕೃತ್ರಿಮವಾದ ಭಕ್ತಿಯುಳ್ಳವರು ಸಾಮಾನ್ಯವಾಗಿ ಪ್ರಭುಗಳ ಸವಿಾಪದಲ್ಲಿ ಇರುವದಕ್ಕೆ ಆಗುವದಿಲ್ಲ. ಅಂಥಾವರ ವಾತು ಪ್ರಭುಗಳಿಗೆ ರುಚಿಸುವದೂ ಇಲ್ಲ. ಆದ್ದರಿಂದ ಮಹಾಸ್ವಾಮಿಯವರು ತಮ್ಮ ಸವಿಾಪವರ್ತಿಗಳಾದ ಕೃತ್ರಿಮಿಗಳಾದ ಪ್ರಜೆಗಳ ಅವ ಲಂಬನೆಯ ವಿಷಯದಲ್ಲಿ ಹೀಗೆ ಶೋಚಿಸುವದು ಏನು ಆಶ್ಚರ್ಯ ! ಬೆಲ್ಲಕ್ಕೆ ಇರುವೆ, ನೊಣಗಳೇ ಮೊದಲಾದ ಪ್ರಾಣಿಗಳೂ, ಹೊಣಕ್ಕೆ ಕ್ಷುದ್ರ ಮೃಗಗಳೂ ಪಕ್ಷಿಗಳೂ ಯಾವರೀತಿಯಲ್ಲಿ ಮುತ್ತುಕೊಳ್ಳುತ್ತವೋ ಹಾಗೆಯೇ ಧನಿಕರ ಧನವನ್ನು ಚಮತ್ಕಾರ ದಿಂದ ಸೂರೆಗೊಳ್ಳುವದಕ್ಕೋಸ್ಕರ ಅಕೃತ್ರಿಮ ಭಕ್ತಿಯನ್ನು ಅಭಿನಯಿಸುವ ಕೃತ್ರಿ

ರಾಗಿ ಪರಿಣಮಿಸಿದ ಜನರು ತಮಗೂ ಇತರರಿಗೂ ಮೃತ್ಯುಗಳಾಗಿ ಪರಿಣಮಿಸುವರು ಆದ್ದರಿಂದ ಚಿಕ್ಕ ತನದಲ್ಲಿ ಮಕ್ಕಳನ್ನು ಅಶಿಕ್ಷಿತರನ್ನಾಗಿಯೂ ಅಸಂಸ್ಕಾರಿಗಳಾಗಿಯೂ ಇರುವಂತೆ ಬಿಡತಕ್ಕವರು ಮಹಾ ಪಾತಕಿಗಳಾಗುವರು.

೩. ಒಂದು ಬಂಡೆಯು ಸಾವಿರಾರು ವರುಷಗಳಿಂದ ಬೆಟ್ಟದ ತೊಪ್ಪಲಲ್ಲಿ ಬಿದ್ದು ಇತ್ತು. ಅದರ ಕೆಳಭಾಗದಲ್ಲಿ ದನಕರುಗಳು ಮಳೆ ಬಿಸಿಲು, ಹೆಚ್ಚು ಆದಾಗ ಆಶ್ರಯಿಸುತ್ತಿದ್ದವು. ಕೆಲವು ಕಾಲದ ತರುವಾಯ ಈ ಬಂಡೆಯು ಸೀಳಿ ಕಲ್ಲಿನ ಚಕ್ಕೆಗಳು ಕೆಳಕ್ಕೆ ಬೀಳಲುಪಕ್ರಮವಾಯಿತು. ಆಗ ಭಂಡೆಯು ಕೆಳಗೆ ಆಶ್ರಯ ಹೊಂದುತ್ತಲಿದ್ದ ದನಕರುಗಳ ಮೇಲೂ ಚಕ್ಕೆಗಳು ಬೀಳುವದಕ್ಕೆ ಉಪಕ್ರಮವಾಗಲು ಅವುಗಳು ಈ ಸ್ಥಳವನ್ನು ಬಿಟ್ಟು ಓಡಿದವು. ಈ ಮುಂದೆಯನ್ನು ಕಾಯಿತಕ್ಕವನಿಗೆ ನೇತ್ರಪಾಟವು ಶ್ರೋತ್ರಪಾಟವು ಕಡವೆಯಾಗಿದ್ದವು. ಇವನು ಈ ಮೃಗಗಳು ಓಡಿಹೋದ್ದಕ್ಕೆ ಸರಿಯಾದ ಕಾರಣವನ್ನು ನೋಡಿ ಅಥವಾ ಕೇಳಿ ತಿಳಿದುಕೊಳ್ಳುವುದಕ್ಕೆ ಅಶಕ್ತನಾಗಿ ಇದ್ದದ್ದಲ್ಲದೆ, ಇವುಗಳು ಹೀಗೆ ಓಡಿಹೋಗುವಂತೆ ತನಗೆ ಶತ್ರುವಾದ ಯಾವ ನೋ ಒಬ್ಬನು ಶೂನ್ಯಮಾಡಿದಾನೆಂಬದಾಗಿ ಭಾವಿಸಿದನು. ಈ ಭಾವನೆಯಿಂದ ನಿರಪರಾಧಿಗಳಾದ ತನ್ನ ಮಿತ್ರೇತರರಲ್ಲಿ ದೋಷವನ್ನು ಆರೋಪಿಸಿ, ತನಗೂ ಅವರಿಗೂ ಇನ್ನೂ ಹೆಚ್ಚಾದ ದ್ವೇಷವೂ ಉಂಟಾಗುವಂತೆ ಮಾಡಿಕೊಂಡನು. ಲೋಕದಲ್ಲಿ ಅನೇಕರು ಎಷ್ಟು ಬುದ್ಧಿಶಾಲಿಗಳೆಂದು ಹೆಸರನ್ನು ತೆಗೆದುಕೊಂಡಿದ್ದಾಗ್ಯೂ ಕುರುಡನಾಗಿಯೂ, ಬಧಿರನಾಗಿಯೂ ಇದ್ದ ಈ ದನಾಕಾಯುವವನಂತೆ ತಮಗೆ ಉಂಟಾಗತಕ್ಕ ವಿಪತ್ತು ಪರಂಪರೆಗಳ ಕಾರಣಗಳನ್ನು ಸರಿಯಾಗಿ ಪರೀಕ್ಷಿಸಿ ಅವುಗಳನ್ನು ನಿವಾರಣೆ ಮಾಡಿಕೊಳ್ಳಲಾರದೇ ವೃಥಾ ನಿರಪರಾಧಿಗಳಲ್ಲಿ ದೋಷವನ್ನು ಆರೋಪಿಸಿ ಶತ್ರುಮಂಡಲಿಯನ್ನು ಹೆಚ್ಚಿಸಿಕೊಳ್ಳುವರಲ್ಲದೆ ಇನ್ನೂ ಅನರ್ಥಗಳಿಗೆ ಗುರಿಯಾಗುವರು. ಜನರು ತಮಗೆ ಅನರ್ಥಗಳು ಉಂಟಾದಾಗ ಸಾವಧಾನವಾಗಿ ಅವುಗಳ ಕಾರಣಗಳನ್ನು ಪರೀಕ್ಷಿಸಿ ನಿವಾರಣೆಮಾಡಿಕೊಳ್ಳಬೇಕೇ ಹೊರ್ತು ಅವುಗಳಿಂದ ಉಂಟಾದ ಭೀತಿಯಿಂದ ಪರವಶರಾಗಿ ನಿರಪರಾಧಿಗಳಲ್ಲಿ ದೋಷಾರೋಪಣೆಯನ್ನು ಮಾಡಿ ಅವರ ಅನರ್ಥಕ್ಕೂ ಗುರಿಯಾಗಬಾರದು.

೪. ಒಬ್ಬ ದೊರೆಯು ತನ್ನ ಉದ್ಯಾನವನದಲ್ಲಿ ವ್ಯಾಯಾಮಾರ್ಥವಾಗಿ ಸಂಚರಿಸುತ್ತಿದ್ದನು. ಅಲ್ಲಿ ಒಂದು ನಿಂಬೆಗಿಡವು ಇತ್ತು. ಆ ಗಿಡದಲ್ಲಿ ತುಂಬಾ

ವಾಗಲೂ ರಕ್ತ ಪರಿಚಲನೆ ನಿಲ್ಲುವುದಿಲ್ಲ. ಉಚ್ಛ್ವಾಸನಿಶ್ವಾಸಗಳೂ ಹೀಗೆಯೇ ನಡೆಯುತ್ತಲೇ ಇರುತ್ತವೆ. ಕೆಲಸ ಮಾಡುವ ಮನುಷ್ಯನ ದೇಹದಲ್ಲಿ ಈ ಕೆಲಸಗಳು ತೀವ್ರವಾಗಿ ನಡೆಯುತ್ತವಲ್ಲದೆ ಅಂಗಗಳಲ್ಲಿರುವ ಮಾಂಸಖಂಡಗಳೂ ಕೆಲಸಮಾಡುತ್ತವೆ ಹೆಚ್ಚಾಗಿ ದೇಹಶ್ರಮವಿಪಟ್ಟು ಕೆಲಸಮಾಡುವ ಮನುಷ್ಯನ ದೇಹದಲ್ಲಿ ಅನೇಕ ಅಂಗಗಳು ಹೆಚ್ಚಾಗಿ ಕೆಲಸಮಾಡುತ್ತವೆ ಬುದ್ಧಿಯು ಕೆಲಸವನ್ನು ಹೆಚ್ಚಾಗಿ ಮಾಡುವ ಮನುಷ್ಯನ ತಲೆಯಲ್ಲಿ ಮೆದುಳು ಹೆಚ್ಚಾಗಿ ಕೆಲಸಮಾಡುತ್ತದೆ.

ದೀಪ ಉರಿಯುವುದಕ್ಕಾಗಿ ಎಣ್ಣೆ ಬತ್ತಿ ಹೇಗೆ ವ್ಯಯವಾಗುತ್ತವೋ ಹಾಗೆಯೇ ಮನುಷ್ಯನ ದೇಹದಲ್ಲಿ ಕೆಲಸಗಳು ನಡೆಯುತ್ತಲೇ ಇರುವುದಕ್ಕಾಗಿ ಶಾರೀರಾಂಶಗಳು ವ್ಯಯವಾಗುತ್ತಲೇ ಇರುತ್ತವೆ. ಅಂಗಗಳಿಗೂ ಅವಯವಗಳಿಗೂ ಕೆಲಸ ಹೆಚ್ಚಿದಷ್ಟೂ ಶಾರೀರಾಂಶಗಳ ವ್ಯಯ ಹೆಚ್ಚುವುದು ಹೀಗೆ ವ್ಯಯವಾದ ಶಾರೀರಾಂಶಗಳನ್ನು ಪುನಃ ನಿರ್ಮಾಣಮಾಡುವುದಕ್ಕಾಗಿ ಸಾಕಾಗುವಷ್ಟು ಆಹಾರವನ್ನು ಮನುಷ್ಯನು ತಿನ್ನಬೇಕು. ಕೆಲಸ ಹೆಚ್ಚಿ ಆಹಾರವು ಕಡಮೆಯಾದರೆ ದೇಹವು ನಶಿಸಿ ಹೋಗುವುದು ಆಹಾರ ಹೆಚ್ಚಿ ಕೆಲಸವು ಕಡಮೆಯಾದರೆ ಮನುಷ್ಯನ ಆರೋಗ್ಯವು ಕೆಡುತ್ತದೆ.

ದೇಹದಲ್ಲಿ ಬಗೆಬಗೆಯಾದ ಕೆಲಸಗಳು ನಡೆಯುವುದರಿಂದ ಅಂಗಗಳೂ ಮತ್ತು ಅವಯವಗಳೂ ಸವೆಯುತ್ತವೆ. ಸವೆದ ಅವಯವಗಳ ಬಾಗವು ಶುದ್ಧರಕ್ತದಲ್ಲಿರುವ ಅಮ್ಲಜನಕದಿಂದ ಸುಡಲ್ಪಟ್ಟು ಕಲ್ಮಷಗಳಾಗುತ್ತವೆ. ಇದಲ್ಲದೆ ತಿಂದ ಆಹಾರಾಂಶಗಳ ಒಂದುಭಾಗ ಸುಡಲ್ಪಡುವುದರಿಂದಲೂ ಕಲ್ಮಷಗಳು ಉಂಟಾಗುತ್ತವೆ.

ಈ ಕಲ್ಮಷಗಳು ಬಗೆಬಗೆಯಾಗಿವೆ. ಸಕ್ಕರೆ ಮೇದಸ್ಸುಗಳು ಸುಡುವುದರಿಂದ ಇಂಗಾಲಾಮ್ಲ ಉಂಟಾಗುತ್ತದೆ. ಕೆಲಸ ಮಾಡುವುದರಿಂದ ಸವೆದ ಮಾಂಸಖಂಡಗಳ ಭಾಗವು ಸುಡಲ್ಪಟ್ಟು ಬಗೆಬಗೆಯಾದ ಸಾರಜನಕ ಸಂಬಂಧ ಕಲ್ಮಷಗಳು ಉಂಟಾಗುತ್ತವೆ. ಈ ಕಲ್ಮಷಗಳು ದೇಹದಲ್ಲಿ ನಿಲ್ಲಕೂಡದು. ಉಂಟಾದಹಾಗೆಲ್ಲಾ ಇವುಗಳನ್ನು ದೇಹದಿಂದ ಹೊರಕ್ಕೆ ತಳ್ಳುತ್ತಲೇ ಇರಬೇಕು ಮನುಷ್ಯನ ದೇಹದಲ್ಲಿ ಉಂಟಾಗುವ ಈ ಕಲ್ಮಷಗಳನ್ನು ದೇಹದಿಂದ ಹೊರಕ್ಕೆ ತೆಗೆದುಹಾಕುವ ಅವಯವಗಳನ್ನು ಶುದ್ಧಿಕರಣಾಂಗಗಳು ಎಂದು ಕರೆಯಬಹುದು. ಇವು ಯಾವವೆಂದರೆ—ಶ್ವಾಸಕೋಶ, ತ್ವಕ್ಕು, ಮೂತ್ರಜನಕಾಂಗಗಳು.

ಮಿಗಳು ಅವರಿಸಿಕೊಳ್ಳುತ್ತಾರೆ. ಇವರು ಶತ್ರುವನ್ನು ತಿಳಿದುಕೊಂಡು ಅವರನ್ನು ಎಷ್ಟು ದೂರದಲ್ಲಿಡಬೇಕೋ ಅಷ್ಟು ದೂರದಲ್ಲಿಟ್ಟು ಅಕೃತ್ರಿಮವಾದ ಭಕ್ತಿಯುಳ್ಳ ನಿಸ್ಪೃಹರನ್ನು ಸವಿಾಪದಲ್ಲಿಟ್ಟುಕೊಂಡು ಕೃತಕೃತ್ಯನಾಗತಕ್ಕ ಧೊರೆಯು ಎಲ್ಲಿಸಿಕ್ಕುವನು. ಲಕ್ಷಕ್ಕೆ ಒಬ್ಬನು ಈ ರೀತಿಯುಲ್ಲಿರುವದುಂಟು. ಅಂಥಾವನೇ ಹರಿಶ್ಚಂದ್ರ, ವಿಕ್ರಮಾರ್ಕ, ಯುಧಿಷ್ಠಿರರಂತೆ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಪಡೆದು ಶಕ್ತರುಷನಾಗಿ ಪರಿಣಮಿಸುವನು. ಆರೀತಿಯಲ್ಲಿ ನೀನು ಆಗಬೇಕಾದರೆ, ಆರೀತಿಯಲ್ಲಿ ನೀನು ನಡೆದುಕೊಳ್ಳಬೇಕು.

೫. ಒಂದು ಪಟ್ಣದಲ್ಲಿ ಒಬ್ಬ ಕುರುಬನು ಇದ್ದನು. ಅವನು ತನ್ನ ಮರಿ ಗಳಿಗೆಲ್ಲಾ ಅರ್ಧ ಹೊಟ್ಟೆ ತುಂಬುವಷ್ಟು ತಿಂಡಿ ಹಾಕುತ್ತಿದ್ದನು. ಆದರೆ ಹೀಗೆ ತಿಂಡಿ ಹಾಕುವ ವಿಷಯದಲ್ಲಿ ನಿಷ್ಪಕ್ಷಪಾತಿಯಾಗಿದ್ದನು. ಇದರಿಂದಾ ಕುರಿಗ ಳೆಲ್ಲಾ ಸಂಪೂರ್ಣನಾದ ತೃಪ್ತಿಯುಳ್ಳವುಗಳಾಗಿದ್ದವು. ಒಂದು ದಿನ ಈತನು ಹನ್ನೆರ ಡು ಕುರಿಗಳನ್ನು ಮುಂದೆ ಇಂದಾ ಅರಿಸಿಕೊಂಡು ಅವುಗಳಿಗೆ ಪೂರ್ಣಗ್ರಾಸವನ್ನು ತಿಂಡುತ್ತಾ ಬಂದನು. ಇದರಿಂದಾ ಮಿಕ್ಕ ಕುರಿಗಳಿಗೆ ಬಹಳ ಅತೃಪ್ತಿ ಉಂಟಾಯಿತು. ಕೆಲವು ದಿವಸಗಳಲ್ಲಿಯೇ ಈ ಅತೃಪ್ತಿಯಿಂದ ಸಂಕಟ ಪಟ್ಟು ಅನೇಕ ಕುರಿಗಳು ಸತ್ತು ಹೋದವು ತಾರತಮ್ಯಜ್ಞಾನವಿಲ್ಲದ ಕುರಿಗಳಲ್ಲಿಯೇ ಪಕ್ಷಪಾತದಿಂದ ಇಂಥಾ ಅನ ರ್ಥಗಳು ಹುಟ್ಟುತ್ತಿರಲಾಗಿ ತಾರತಮ್ಯಜ್ಞಾನವುಳ್ಳ ಲಕ್ಷಾಂತರ ಪ್ರಜೆಗಳುಳ್ಳ ರಾಜ್ಯ ವಾರದಲ್ಲಿ ಪಕ್ಷಪಾತದಿಂದ ಇಂಥಾ ಅನರ್ಥಗಳು ಹುಟ್ಟುವದು ಏನಾಶ್ಚರ್ಯ! ಆದ್ದ ರಿಂದ ವಿದ್ವಾಂಸರು ನಿಷ್ಪಕ್ಷಪಾತವಾಗಿ ರಾಜ್ಯಭಾರವನ್ನು ಮಾಡತಕ್ಕ ಕಷ್ಟವನ್ನು ತಿಳಿದುಕೊಂಡು ಎಲ್ಲಾ ಜೀವನಕ್ಕಿಂತಲೂ ಬಹಳ ಕಷ್ಟವಾದ ಜೀವನವು ಪ್ರಭುತ್ವ ವೆಂದು ನಿಶ್ಚರ್ಷೆ ಮಾಡಿದಾರೆ.

ಶುದ್ಧಿಕರಣಾಂಗಗಳು; ಮನುಷ್ಯನ ಆರೋಗ್ಯಕ್ಕೂ ಅವುಗಳಿಗೂ ಇರುವ ಸಂಬಂಧ.

ಬದುಕಿರುವ ಮನುಷ್ಯನ ದೇಹದಲ್ಲಿ ಬಗೆಬಗೆಯಾದ ಕೆಲಸಗಳು ನಡೆಯುತ್ತಾ ಇರುತ್ತವೆ ರಕ್ತವು ನಾಳಗಳಲ್ಲಿ ಸುತ್ತುತ್ತಲೇ ಇರುತ್ತದೆ. ನಿದ್ದೆ ಹೋಗು

ಶುದ್ಧಿಯಾದ ರಕ್ತವು ಶ್ವಾಸಕೋಶದಿಂದ ಹೃದಯಕ್ಕೆ ಹೋಗುತ್ತದೆ. ವಾಯುಲಿಂ ಕಣಕ್ಕೆ ಬಂದ ಇಂಗಾಲಾಮ್ಲವು ನಿಶ್ವಾಸದ ಮೂಲಕ ಹೊರಕ್ಕೆ ಬರುತ್ತದೆ.

ಮೇಲೆ ತಿಳಿಸಿದ ಸಂಗತಿಗಳಿಂದ ಶ್ವಾಸಕೋಶದ ಮುಖ್ಯಕೆಲಸವು ಗೊತ್ತಾಗಿರಬಹುದು. ಬದುಕಿರುವ ಮನುಷ್ಯನ ದೇಹದಲ್ಲಿ ಉಸುರಾಡುವುದರಿಂದ ರಕ್ತಶುದ್ಧಿಯಾಗುತ್ತಲೇ ಇರುತ್ತದೆ. ಆದುದರಿಂದ ನಿಶ್ವಾಸವಾಯುವಿನಲ್ಲಿ ಮುಖ್ಯವಾಗಿ ಇಂಗಾಲಾಮ್ಲವು ಹೆಚ್ಚಾಗಿ ಇರುತ್ತದೆ.

ಮನುಷ್ಯನ ದೇಹದಲ್ಲಿ ಉಂಟಾಗುವ ಕಲ್ಮಷಗಳಲ್ಲಿ ಇಂಗಾಲಾಮ್ಲವು ಒಂದಾಗಿದೆ ಎಂದು ಹಿಂದೆ ತಿಳಿಸಿದೆ. ಇಂಗಾಲಾಮ್ಲವು ಪ್ರಾಣಿಗಳ ದೇಹಕ್ಕೆ ವಿಷವಾಯುವಾದುದು. ಇದು ದೇಹದಿಂದ ಬೇಗಬೇಗ ತಳ್ಳಲ್ಪಡದಪಕ್ಷಕ್ಕೆ ಕೇಡಾಗುವುದು. ಇತರ ಶರೀರ ಕಲ್ಮಷಗಳ ವಿಷಯದಲ್ಲಿಯೂ ಹೀಗೆಯೇ ಎಂದು ತಿಳಿಯಬೇಕು. ಶ್ವಾಸಕೋಶದಲ್ಲಿ ರಕ್ತಶುದ್ಧಿಯಾಗುವುದಕ್ಕೆ ನಾವು ಉಚ್ಛ್ವಾಸಿಸುವ ವಾಯು ಶುದ್ಧವಾಯುವಾಗಿರಬೇಕು.

ಶ್ವಾಸಕೋಶಕ್ಕೂ ಮನುಷ್ಯನ ಆರೋಗ್ಯಕ್ಕೂ ಇರುವ ಸಂಬಂಧವನ್ನು ತಿಳಿಯುವುದು ಈಗ ಸುಲಭವಾಗಿದೆ. ಮನುಷ್ಯನ ಪ್ರಾಣಕ್ಕೆ ವಿಷವಾಯುವಾದ ಇಂಗಾಲಾಮ್ಲವು ದೇಹದಲ್ಲಿ ಉಂಟಾಗುತ್ತಲೇ ಇರುತ್ತದೆ. ಇದು ಅಶುದ್ಧರಕ್ತದಲ್ಲಿರುವುದರಿಂದ ಈ ರಕ್ತದೊಡನೆ ಶ್ವಾಸಕೋಶಕ್ಕೆ ಬರುತ್ತಲೇ ಇರುತ್ತದೆ. ಈ ವಾಯು ತಕ್ಕಷ್ಟು ಬೇಗಬೇಗನೆ ದೇಹದಿಂದ ಹೊರಕ್ಕೆ ಹೋಗುತ್ತಿರಬೇಕು.

ಇದಲ್ಲದೆ ದೇಹಕ್ಕೆ ಅತ್ಯಾವಶ್ಯಕವಾದ ಆಮ್ಲಜನಕ ಸಾಕಾಗುವಷ್ಟು ರಕ್ತಕ್ಕೆ ಸೇರುತ್ತಿರಬೇಕು. ಈ ಎರಡು ಕೆಲಸಗಳೂ ಜೊತೆಗಾಗಿ ಆಗದಪಕ್ಷಕ್ಕೆ ಮನುಷ್ಯನ ಆರೋಗ್ಯವು ಕೆಡುವುದು. ಇವುಗಳು ನಿಂತರೆ ಮನುಷ್ಯನು ಸಾಯುವನು. ಈ ಕೆಲಸಗಳು ಶ್ವಾಸಕೋಶದ ಮೂಲಕವಾಗಿ ನಡೆಯುತ್ತವಾದುದರಿಂದ ಇದು ತನ್ನ ಕೆಲಸಗಳನ್ನು ಸರಿಯಾಗಿ ಮಾಡುವುದಕ್ಕೆ ಏನಾದರೂ ಸ್ವಲ್ಪ ಕುಂದುಕಬಂದಪಕ್ಷದಲ್ಲಿ ಮನುಷ್ಯನ ಆರೋಗ್ಯವು ಕೆಡುವುದು. ಕೆಲಸವಾಡುವುದು ನಿಂತರೆ ಮನುಷ್ಯನು ಸಾಯುವನು. ಆದುದರಿಂದ ಮನುಷ್ಯನ ದೇಹದಲ್ಲಿರುವ ಮುಖ್ಯ ಅವಯವಗಳಲ್ಲಿ ಶ್ವಾಸಕೋಶ ಒಂದಾಗಿದೆ. ಇದು ಆರೋಗ್ಯವಾಗಿರಬೇಕಲ್ಲದೆ ಬಲವಾಗಿರವುದು

ಶ್ವಾಸಕೋಶ—ಶ್ವಾಸಕೋಶವು ಎದೆಯ ಗೂಡಿನಲ್ಲಿ ಇದೆ. ಇದು ಮುಖ್ಯವಾಗಿ ಎರಡು ಚೀಲಗಳಿಂದಲೂ ಒಂದು ನಾಳದಿಂದಲೂ ಮಾಡಲ್ಪಟ್ಟಿದೆ ಎಂದು ಹೇಳಬಹುದು. ಈ ಚೀಲಗಳಲ್ಲಿ ಒಂದು ಬಲಗಡೆ ಇದೆ, ಮತ್ತೊಂದು ಎಡಗಡೆ ಇದೆ. ಶ್ವಾಸನಾಳವು ಮೊದಲು ಎರಡು ದೊಡ್ಡಕವಲುಗಳಾಗಿ ಒಡೆಯುತ್ತದೆ ಬಲಗಡೆ ಇರುವ ಚೀಲಕ್ಕೆ ಒಂದು ಕವಲು ಹೋಗುತ್ತದೆ. ಎಡಗಡೆ ಇರುವ ಚೀಲಕ್ಕೆ ಮತ್ತೊಂದು ಕವಲು ಹೋಗುತ್ತದೆ. ಈ ಪ್ರತಿ ಒಂದು ಕವಲೂ ಅನೇಕ ಸಣ್ಣ ಕವಲುಗಳಾಗಿ ಒಡೆದು, ಕೊನೆಗೆ ಅತ್ಯಂತ ಸೂಕ್ಷ್ಮವಾದ ವಾಯುಅಂಕಣಗಳಾಗುತ್ತವೆ.

ಶ್ವಾಸನಾಳವು ವೃದ್ಧಸ್ಥಿಗಳ ಉಂಗುರಗಳಿಂದ ಮಾಡಲ್ಪಟ್ಟಿದೆ. ಈ ಉಂಗುರಗಳನ್ನು ದಪ್ಪದಪ್ಪ ಕವಲುಗಳಲ್ಲಿ ನೋಡಬಹುದು. ಆದರೆ ಸೂಕ್ಷ್ಮವಾದ ಕವಲುಗಳ ಗೋಡೆಗಳು ತೆಳುವಾದ ಪರೆಯಿಂದ ಮಾಡಲ್ಪಟ್ಟಿರುತ್ತವೆ. ವಾಯುಅಂಕಣಗಳೂ ಪರೆಯಿಂದಲೇ ಆಗಿರುತ್ತವೆ. ನಾವು ಉಚ್ಛ್ವಾಸಿಸುವ ವಾಯು ಮೂಗು ಬಾಯಿಗಳ ಮೂಲಕ ಶ್ವಾಸನಾಳವನ್ನು ಪ್ರವೇಶಿಸಿ ಎರಡು ದೊಡ್ಡಕವಲುಗಳಮಾರ್ಗವಾಗಿ ಎರಡು ಚೀಲಗಳಿಗೂ ಹೋಗಿ ಸೂಕ್ಷ್ಮಕವಲುಗಳನ್ನು ದಾಂಟಿ ಕೊನೆಗೆ ವಾಯುಅಂಕಣಗಳನ್ನು ತುಂಬಿಕೊಳ್ಳುತ್ತದೆ.

ಹೃದಯದಿಂದ ಹೊರಡುವ 'ಪಲ್ಮನರಿ ಆರ್ಟರಿ' ಎಂಬ ಅಶುದ್ಧ ರಕ್ತನಾಳವು ಶ್ವಾಸಕೋಶದಲ್ಲಿ ಅನೇಕ ಲೋಮನಾಳಗಳಾಗಿ ಒಡೆಯುತ್ತದೆ. ವಾಯುಅಂಕಣಗಳ ಸುತ್ತಲೂ ಲೋಮನಾಳಗಳಿವೆ. ಲೋಮನಾಳಗಳು ತೆಳುವಾದ ಪರೆಯಿಂದ ಮಾಡಲ್ಪಟ್ಟಿವೆ. ಲೋಮನಾಳಗಳಲ್ಲಿ ಅಶುದ್ಧ ರಕ್ತವಿದೆ. ವಾಯು ಅಂಕಣಗಳಲ್ಲಿ ವಾಯು ಇದೆ ಒಂದು ವಾಯು ಅಂಕಣದಲ್ಲಿರುವ ವಾಯುವಿಗೂ ಲೋಮನಾಳದಲ್ಲಿರುವ ಅಶುದ್ಧ ರಕ್ತಕ್ಕೂ ಮಧ್ಯೆ ತೆಳುವಾದ ಎರಡು ಪರೆಗಳಿವೆ ಎಂದು ತಿಳಿಯಬೇಕು. ಅವು ಯಾವವೆಂದರೆ—ವಾಯು ಅಂಕಣದ ಪರೆ ಒಂದು, ಲೋಮನಾಳದ ಪರೆ ಒಂದು

ಈ ಅನುಕೂಲಗಳಿರುವುದರಿಂದ ಶ್ವಾಸಕೋಶದಲ್ಲಿ ರಕ್ತಶುದ್ಧಿಯಾಗುತ್ತದೆ. ಲೋಮನಾಳಗಳಲ್ಲಿರುವ ಅಶುದ್ಧರಕ್ತದಲ್ಲಿಯ ಇಂಗಾಲಾಮ್ಲವು ವಾಯು ಅಂಕಣಕ್ಕೆ ಹೋಗುತ್ತದೆ. ವಾಯುಅಂಕಣದಲ್ಲಿರುವ ಆಮ್ಲಜನಕವು ಅಶುದ್ಧರಕ್ತಕ್ಕೆ ಬರುತ್ತದೆ ಇಂಗಾಲಾಮ್ಲವನ್ನು ಹೊಗಲಾಡಿಸಿಕೊಂಡು ಆಮ್ಲಜನಕವನ್ನು ಹೊಂದುವುದರಿಂದ

ಉಂಗುರದಂತೆ ಆಗುವಹಾಗೆ ಸುತ್ತಿದನು. ೨| ಆಂಗುಲ ಸುತ್ತಳತೆಯುಳ್ಳ ಇನ್ನೊಂದು ಸಲಾಕೆಯನ್ನು ತನ್ನ ಕುತ್ತಿಗೆ ಸುತ್ತಲೂ ಸುತ್ತಿದನು. ಎರಡುಸಾವಿರ ಪೌನು ತೂಕವನ್ನು ಧಾರಾಳವಾಗಿ ವಹಿಸಿದ್ದ ಒಂದು ಹಗ್ಗವನ್ನು ಕೆತ್ತು ಎರಡುತುಂಡು ಮಾಡಿದನು. ೩ ಪೌನು ತೂಕವುಳ್ಳ ಒಂದು ಲೋಹದ ತಟ್ಟೆಯನ್ನು ಕಾಗದವನ್ನು ಸುತ್ತುವಂತೆ ಬೆರಳಿನ ಸುತ್ತಲೂ ಸುರಳಿ ಸುತ್ತಿದನು. ಎರಡು ಕುರ್ಚಿಗಳನ್ನು ಮಧ್ಯ ಅವಕಾಶವಿಟ್ಟು ಒಂದರಸವಿಾಪದಲ್ಲಿ ಒಂದನ್ನು ಹಾಕಿ ಒಂದರಮೇಲೆ ಬೆನ್ನನ್ನು ಇನ್ನೊಂದರಮೇಲೆ ಪಾದಗಳನ್ನು ಇಟ್ಟು ಮೇಲೆ ನಾಲ್ಕು ಜನಗಳನ್ನು ನಿಲ್ಲಿಸಿಕೊಂಡು ಅವರನ್ನು ಮೇಲಕ್ಕೂ, ಕೆಳಕ್ಕೂ ತೂಗಾಡುವಂತೆ ಮಾಡಿದನು. ಅರಡಿ ಉದ್ದವುಳ್ಳ ಒಂದು ಮೇಜಿನಮೇಲೆ ೫೬ ಪೌನುತೂಕ ಸಾಮಾನುಗಳನ್ನು ಇಟ್ಟು ಹಲ್ಲಿನಿಂದ ಒಂದುಕಡೆಯಲ್ಲಿ ಕಚ್ಚಿಕೊಂಡು ಅದನ್ನು ಧಾರಾಳವಾಗಿ ಮೇಲಕ್ಕೆ ಎತ್ತಿದನು. ಇದಲ್ಲದೆ ನೂರುಕೊಡಾ ನೀರು ಹಿಡಿಯತಕ್ಕ ಒಂದು ಪೀಪಾಯಿಯನ್ನು ಆಯಾಸವಿಲ್ಲದೆ ಮೇಲಕ್ಕೆ ಎತ್ತಿದನು. ಇಂಥಾ ಅದ್ಭುತಶಕ್ತಿಯನ್ನು ತೋರಿಸತಕ್ಕವರ ಚರಿತ್ರೆಗಳು ಸಾಮಾನ್ಯವಾದ ಜನಗಳಲ್ಲಿ ವಿಶೇಷವಾಗಿ ಶಕ್ತುವದು. ಆದರೆ ಬಹಳ ದೊಡ್ಡಪದವಿಗೆ ಬಂದ ನವೀನರಲ್ಲಿಯೂ. ಈಗ್ಗೆ ಸ ಮಾರು ೧೫೦ ವರುಷಗಳ ಕೆಳಗೆ ನೋಡಲ್ಪಟ್ಟಿತು. ಒಂದುದಿವಸ ಒಬ್ಬ ವೇಷಧಾರಿಯಾದ ರಷ್ಯಾದೇಶಸ್ಥನು ರೈಲುಮಾರ್ಗವಾಗಿ ಹೋಗುತ್ತಿದ್ದನು. ಆಗ ಫ್ರಾನ್ಸ್‌ದೇಶದ ಪ್ರೆಸಿಡೆಂಟ್‌ರಾಗಿದ್ದ ಗ್ರಾಂಬೀಟ್ಟಾರವರು ಈತನ ಆಕೃತಿಯನ್ನು ನೋಡಿ ಬಹಳ ವಿಸ್ಮಿತರಾಗಿ ಇವನ ಪೂರ್ವೋತ್ತರಗಳನ್ನು ತಿಳಿದುಕೊಳ್ಳಬೇಕೆಂದು ಬಹಳ ಪ್ರಯತ್ನವಾಡಿದರು. ಅಷ್ಟರಲ್ಲಿಯೇ ಆತನು ಒಂದು ರೈಲ್‌ಸ್ಟೇಷನ್‌ನಲ್ಲಿ ಇಳಿದನು. ಗ್ರಾಂಬೀಟ್ಟಾರವರು ಕಾರ್ಯಾರ್ಥನಾಗಿ ಮುಂದಕ್ಕೆ ಹೋಗಬೇಕಾಗಿ ಇದ್ದಾಗ್ಯೂ ತಾವೂ ಆ ಸ್ಟೇಷನ್‌ನಲ್ಲಿಯೇ ಇಳಿದು ಆತನಜೊತೆಯಲ್ಲಿಯೇ ಒಂದು ಹೊಟೇಲಿಗೆ ಹೋದರು. ಇವರು ಅಲ್ಲಿಗೆ ಹೋದಾಗ ಅಲ್ಲಿ ಅನೇಕ ದೊಡ್ಡವನುಷ್ಯರು ಸೇರಿ ತಮ್ಮ ದೇಹಶಕ್ತಿಯನ್ನು ಪರೀಕ್ಷಿಸುತ್ತಿದ್ದರು. ಆ ಹೊಟೇಲಿನ ಹಾಲಿನಲ್ಲಿ ಬಂದು ವಿಶಾಲವಾದ ಮೇಜೂ ಒಂದು ಭಾರಿ ಕುರ್ಚಿಯೂ ಇತ್ತು. ಆ ಕುರ್ಚಿಯು ಒಂದು ಕಾಲನ್ನು ಹಿಡಿದುಕೊಂಡು, ಅಲ್ಲಾಡದಂತೆ ಅದನ್ನು ಮೇಜಿನಮೇಲಿಡಬೇಕೆಂದು ಪ್ರಯತ್ನವಡಿದರು. ಎಲ್ಲರಿಗೂ ಅದು ಅಸಾಧ್ಯವಾಯಿತು. ಆಗ ಗ್ರಾಂಬೀಟ್ಟಾರವರು ಸುಲಭವಾಗಿ ಅದನ್ನು ಎತ್ತಿ ಮೇಜಿನಮೇಲೆ

ಮನುಷ್ಯನಿಗ ಮುಖ್ಯ. ಇದಕ್ಕಾಗಿ ವ್ಯಾಯಾಮವೂ, ಶುದ್ಧ ವಾಯುವೂ ಆವಶ್ಯಕ ಗಳಾಗಿವೆ. (ಸಶೇಷ;)

ಅದ್ಭುತವಾದ ದೇಹಶಕ್ತಿ.

ಎಲ್ಲಾ ದೇಶದಲ್ಲಿಯೂ ದೇಹದ ಬೆಳವಳಿಕೆಗೂ, ಲಾಘವಕ್ಕೂ ಬೇಕಾದ ವ್ಯಾಯಾಮಗಳನ್ನು ಜನರು ಕಲ್ಪಿಸಿಕೊಂಡು ಇರುತ್ತಾರೆ. ತಪ್ಪದೆ ವ್ಯಾಯಾಮಗಳನ್ನು ಮಾಡುತ್ತಾ ಸರಿಯಾದ ಆಹಾರಗಳನ್ನು ತೆಗದುಕೊಳ್ಳುತ್ತಾ ಬೇಕಾದಷ್ಟು ವಿಶ್ರಾಂತಿಯನ್ನು ಹೊಂದಿ ಆಹಾರ ವಿಹಾರಗಳಲ್ಲಿ ಮಿತವಿಹಾರದೆ ನಡೆದುಕೊಳ್ಳತಕ್ಕ ಜನರು ಅದ್ಭುತವಾದ ದೇಹಶಕ್ತಿಯನ್ನು ಹೊಂದಿದ್ದಕ್ಕೆ ಅನೇಕ ದೃಷ್ಟಾಂತಗಳಿವೆ. ಹಿಂದೂಜನರಲ್ಲಿ ಬಹುಕಾಲದಿಂದ ಬಂದಿರತಕ್ಕ ಅನೇಕ ಗರಡಿಗಳುಂಟು. ಅವುಗಳಲ್ಲಿ ಪೂರ್ವೀಕರು ಸಾಧನೆಮಾಡುವದಕ್ಕೋಸ್ಕರ ಇಟ್ಟುಕೊಂಡಿದ್ದ ವ್ಯಾಯಾಮದ ಸಾಮಾನುಗಳು ಈಗಲೂ ಇವೆ. ಅವುಗಳನ್ನು ನಾವು ಉಲ್ಲಾಡಿಸುವದಕ್ಕೂ ಆಗುವದಿಲ್ಲ; ಇವುಗಳನ್ನು ನೋಡುವುದರಿಂದಲೇ ನಮ್ಮ ಪೂರ್ವೀಕರು ದೇಹಗಳನ್ನು ಯಾವರೀತಿಯಲ್ಲಿ ಕಾಪಾಡಿಕೊಳ್ಳುತ್ತಿದ್ದರೋ ಇದು ಗೊತ್ತಾಗುತ್ತದೆ. ಯೂರೋಖಂಡಕ್ಕೆ ಸೇರಿದ ರೋಮ್ ರಾಜ್ಯದಲ್ಲಿ ನಮ್ಮಲ್ಲಿ ನವರಾತ್ರಿಯಲ್ಲಿ ಜಟ್ಟಿಗಳು ತಮ್ಮ ಬಲವನ್ನು ಪರಸ್ಪರ ಯುದ್ಧಮಾಡಿ ಹಾಗೆ ತೋರಿಸುತ್ತಿದ್ದರೋ ಹಾಗೆ ಪೂರ್ವಕಾಲದಲ್ಲಿ ಆ ದೇಶದ ಜಟ್ಟಿಗಳು ಅದ್ಭುತವಾದ ಶಕ್ತಿಯನ್ನೂ ಪರಾಕ್ರಮವನ್ನೂ ತೋರಿಸುತ್ತಿದ್ದರು. ಈರೀತಿಯಲ್ಲಿ ದೇಹವನ್ನು ಕಾಪಾಡಿಕೊಂಡು ಇದ್ದವರು ಮಾಡುತ್ತಿದ್ದ ಕೆಲವು ಅದ್ಭುತಕಾರ್ಯಗಳನ್ನು ತಿಳಿಸುತ್ತೇವೆ.

ವಿಲಾಯತಿಯಲ್ಲಿ ೧೮೩೯ ನೇ ಇಸವಿ ಏಪ್ರೆಲ್ ೨೩ ರಲ್ಲಿ ಬಹಳ ಬಲಿಷ್ಠನಾದ ಥಾಂಮಸ್ಟೌಫಂನೆಂಬ ಒಬ್ಬ ಮನುಷ್ಯನು ತನ್ನ ದೇಹಶಕ್ತಿಯನ್ನು ತೋರಿಸುವದಕ್ಕೋಸ್ಕರ ಬಂದನು. ಆಗ ಇಂಗ್ಲೆಂಡಿನ ರಾಯಲ್ ಸೊಸ್ಯೆಟಿಯವರು ಈತನ ಶಕ್ತಿ ಪ್ರದರ್ಶನಾರ್ಥವಾಗಿ ಒಂದು ಸಭೆಯನ್ನು ಮಾಡಿದರು. ಆ ಸಭೆಯಲ್ಲಿ ಅವನು ೩ ಅಂಗುಲ ಸುತ್ತಳತೆಯುಳ್ಳ ಒಂದು ಕಬ್ಬಿಣದ ಸಲಾಕೆಯನ್ನು ತನ್ನ ಕೈಗೆ ಬಗ್ಗಿಸಿ

೧ನೇ ಗಾನ—ನೋಟು (ಬಾರೊಬಾರೊ ಹೋಗು, ಎಂಬಂತೆ)

ಬಾಲರೆಲ್ಲನೋಡಿರಿ । ಲೀಲೆಯಾಡಬನ್ನಿರಿ ॥ ಕಾಲನೂರಿನಿಲ್ಲಿರಿ । ಕಾಳಮಾಡಬೇಡಿರಿ॥

ಹೀಗೆ ಹಾಡುತ್ತಾ ಬಾಲಕರನ್ನು ಎಚ್ಚರಿಸಿ, ಚಂಡನ್ನು ಕೈಯ್ಯಲ್ಲಿ ತೆಗೆದು ಕೊಂಡು ತೋರಿಸಿ ನೆಲಕ್ಕೆ ಎಸೆಯುತ್ತಾ ಗಾನವಾಡುವುದು.

(೦) ಎದ್ದುನಿಂತುಕೊಳ್ಳಿರಿ । ಮುದ್ದುಚಂಡನೋಡಿರಿ । ಬಿದ್ದಚಂಡತೆಗೆಯಿರಿ । ಬುದ್ಧಿವಂತರಾಗಿರಿ ॥

ಉಪಾಧ್ಯಾಯನು ಚಂಡಿನ ಹೆಸರನ್ನು ಹೇಳಿಸಿ ಅದನ್ನು ಅವರ ಕೈಗೆ ಕೊಟ್ಟು ಪರೀಕ್ಷಿಸುವಂತೆ ಪ್ರೋತ್ಸಾಹಿಸುತ್ತಾ ಇರಬೇಕಲ್ಲದೆ ಯಾವದನ್ನೂ ಹೇಳದಿರಬೇಕು. ಬಾಲಕರು ಪರೀಕ್ಷಿಸಿ ಹೇಳುವ ಗಾನ—

(೩) ಚಂಡುದುಂಡಗಿರುವುದು । ಚಂಡುಕೊಳೆಯಬಿಟ್ಟುದು । ಚಂಡುಹೊಳೆದು ತೋರ್ಪುದು । ಚಂಡನೋಡಿನಲಿವುದು ॥

ಬಳಿಕ ಉಪಾಧ್ಯಾಯನು, ದುಂಡಗಿರುವ ಇತರ ವಸ್ತುಗಳನ್ನು ಸಾಧ್ಯವಾದಷ್ಟು ಉದಾಹರಣೆಗಾಗಿ ಹೇಳಿಸಿ, ಹೇಳಿ (ನಿಂಬೆ, ಕಿತ್ತಲೆ, ಚಕ್ಕೋತ, ಗೋಲಿ, ಲಡ್ಡಿಗೆ, ಮುಂತಾದುವು) ಕೊಳೆಯಿಲ್ಲದಿರುವುದರಿಂದ ಎಷ್ಟು ಶುಚಿಯಾಗಿಯೂ ಚೆನ್ನಾಗಿಯೂ ಕಾಣುವುದು, ಅದರಂತೆ ನೀವು ಶುಚಿಯಾಗಿದ್ದಲ್ಲಿ ಚೆನ್ನಾಗಿ ಕಾಣುವಿರೆಂದು ತಿಳಿಸಬೇಕು. ಹೀಗೆ ತಾನು ಬೋಧಿಸುವದೆಲ್ಲವನ್ನೂ ಬಾಲಕರ ನಡೆನುಡಿಗಳಿಗೆ ಹೋಲಿಸಿ ಬಳಿಕ ಚಲನೆಗಳನ್ನು ತಿಳಿಸುವುದು.

(೪) ಮಗುವೆಕೇಳಿತಿಳಿದುಕೊ । ಬೊಗಸೆವೊಡ್ಡಿನಿಂತುಕೊ । ಒಗೆದಚಂಡಹಿಡಿದುಕೊ । ಸೊಗಸಿನಿಂದಆಡಿಕೊ ॥

(೫) ಪುಟ್ಟಪುಟ್ಟಚಂಡಿದು । ಕೆಟ್ಟುಕೆಡೆದುಬೀಳುದು । ಕಟ್ಟಕಡೆಗೆಪೋಪುದು । ಪುಟ್ಟಬೆರಳಿಬಿಗಿದಿದು ॥

ಚಂಡನ್ನು ಮಾಸದೆ ಕೆಡಿಸದೆ ಹೂವಿನಂತೆ ಹಿಡಿದು ಆಡು ಎಂದು ಹೇಳುವುದು.

(ರಾಗ— ಶಂಕರಾಭರಣ. ನೋಟು)

(೬) ಪುಟ್ಟಚೆನ್ನಚಂಡನು । ಇಟ್ಟುಕೈಯತೊಟ್ಟಿಲೊಳ್ ॥ ತಟ್ಟಮಲಗಿಕೊಳ್ಳುವಂತೆ । ಕಟ್ಟುಮಾಡಿತೂಗಿರಿ ।

ಮಗು, ನಿಮ್ಮ ಮಗು ಬಹಳಹೊತ್ತು ಮಲಗಲಾರದು. ಅದನ್ನು ಆಡಿಸಿರೆಂದು ಹೇಳಿ

ಇಟ್ಟರು. ಅವರ ಶಕ್ತಿಯನ್ನು ನೋಡಿ, ಅಲ್ಲಿದ್ದವರೆಲ್ಲರೂ ಬಹಳ ಶ್ಲಾಘನೆಮಾಡಿ ಅತ್ಯಂತ ಆಶ್ಚರ್ಯಪಟ್ಟರು. ಆಗ ಆ ವೇಷಧಾರಿಯಾದ ರಷ್ಯಾದೇಶದವನು ತಿರಸ್ಕಾರದಿಂದ ಅವರನ್ನೆಲ್ಲಾ ನೋಡಿ ಗ್ಯಾಂಬೀಟ್ಟೌರವರನ್ನು ಆ ಕುರ್ಚಿಮೇಲೆ ಕೂತುಕೊಳ್ಳಿ ಎಂದು ಹೇಳಿದನು. ಅವರು ಅದರಮೇಲೆ ಕೂತುಕೊಂಡಕೂಡಲೇ ಒಂದೇಕೈಯಿಂದ ಆ ಕುರ್ಚಿಯನ್ನು ಸ್ವಲ್ಪವೂ ಅಲ್ಲಾಡದಂತೆ ಎತ್ತಿ ಆ ಮೇಜಿನಮೇಲೆ ಇಟ್ಟನು. ಗ್ಯಾಂಬೀಟ್ಟೌರವರು ೬೯ ಪೌನು ತೂಕವುಳ್ಳವರಾಗಿದ್ದರು. ಅವರನ್ನೂ ಕುರ್ಚಿಯನ್ನೂ ಮೇಜಿನಮೇಲೆ ಇಟ್ಟಿದ್ದನ್ನೂ ನೋಡಿ ಸರ್ವರೂ ಅತ್ಯಂತ ವಿಸ್ಮಿತರಾದರು. ಲೋಕದಲ್ಲಿ ಸರ್ವರೂ ವೀರ್ಯಸಂರಕ್ಷಣೆಯನ್ನು ಮಾಡಿಕೊಂಡು ಆಹಾರವಿಹಾರ ವ್ಯಾಯಾಮಾದಿಗಳಲ್ಲಿ "ಅತಿಸರ್ವತ್ರವರ್ಜಯೇತ್" ಎಂಬ ಆರೋಗ್ಯನಿದಾನ ವಿಧಿಯನ್ನು ಆಚರಿಸಿ ನಡೆಯುತ್ತಾಬಂದರೆ ಇಂಥಾ ಅದ್ಭುತವಾದ ದೇಹಶಕ್ತಿಯನ್ನು, ಇದಕ್ಕಿಂತಲೂ ಮೇಲಾದ ಆರೋಗದೃಢಕಾಯತ್ವವನ್ನು ಹೊಂದುವದರಲ್ಲಿ ಯಾವಸಂಶಯವೂ ಇಲ್ಲ.

ಕಿಂಡರ್‌ಗಾರ್ಟ್ನ್‌ಗಾನವು.

೧ನೇ ಕರಣದ ವಿಷಯವಾಗಿ

ಕಿಂಡರ್‌ಗಾರ್ಟ್ನ್ ಪಾಠಹೇಳುವಾಗ ಬಾಲಕರಿಗೆ ಸಂತೋಷಕರಗಳಾದ ಗಾನಗಳು ಇಂಗ್ಲೀಷುಭಾಷೆಯಲ್ಲಿ ಪ್ರಚುರವಾಗಿವೆ. ನಮ್ಮ ದೇಶಭಾಷೆಯಲ್ಲಿ ಇಂತು ಸುಲಭವಾದ ಗಾನಗಳು ಇಲ್ಲವು.

ಉಪಾಧ್ಯಾಯನು ಕಿಂಡರಗಾರ್ಟ್ನ್ ಹೇಳಿಕೊಡುವಾಗ ಮಕ್ಕಳಿಗೆ ಪಾಠದಲ್ಲಿ ಪ್ರೀತಿಹುಟ್ಟುವಂತೆ ಮಧುರವಾದ ಮಾತುಗಳಾಡುತ್ತಾ ಅವರನ್ನು ಒಲಿಸಿಕೊಳ್ಳಬೇಕು. ಮಕ್ಕಳಿಗೆ ಇಂಪಾದ ಮಾತುಗಳಲ್ಲಿಯೂ, ಇಂಪಾದ ಗಾನಗಳಲ್ಲಿಯೂ ಅಭಿರುಚಿ ಹೆಚ್ಚಾಗಿರುವದಷ್ಟೆ. ಆದುದರಿಂದ ಸುಲಭವಾಗಿಯೂ ಹುಡುಗರಿಗೆ ತಕ್ಕುದಾಗಿಯೂ ಇರುವ ಗಾನವನ್ನು ಹೇಳುತ್ತಾ ಪಾಠನಡೆಸುವುದು ಉತ್ತಮ. ಅಲ್ಲದೆ ಬಾಲಕನಿಂದಲಾದರೂ ಹೇಳಿಸಬಹುದು.

ಉತ್ತರ—(೧೫) ಬಲಿತನಿಂಬೆಹಣ್ಣಿನ । ಹಳದಿಬಣ್ಣದಚಂಡನು । ಕಲಿತನೀತಿ ಪೇಳಿನಾನ್ । ಒಲಿದುತೆಗೆದುಕೊಳ್ವೆವು ॥

ಇತರ ಬಣ್ಣಗಳ ಕೂಡಿಸಿಟ್ಟು ಪ್ರಶ್ನೆಮಾಡುವಾಗ ಹೇಳುವಗಾನ.

(೧೬) [ರಾರೆಕೋಲಲಾಡಗ—ಎಂಬಂತೆ]

ಹಸುರುಬಣ್ಣವಿಂತಿದೆಂ । ದುಸರಿನೀವ್ರತೆಗೆಯಿರಿ । ಹಸರ ಎಲೆಯಬಣ್ಣದ । ಒಸೆದುಚಂಡನಾಡಿರಿ ।

(೧೭) ಬದನೆಕಾಯಹೋಲುವ । ಊದಬಣ್ಣದಚಂಡನು । ವೋದದಿಂದನೋಡಿರಿ । ಮಧುರವಾಗಿತೋರ್ಪುದು ।

(೧೮) ಇತ್ತನೋಡಿಪ್ರಿಯರೆನೀನ್ । ಕೆತ್ತಲೆಬಣ್ಣದಚಂಡನು । ಒತ್ತಿಪಿಡಿದು ನೋಡಲು । ಮೆತ್ತಗಾಗಿತೊರ್ಪುದು ॥

ಈ ಮೇರೆ ಬಣ್ಣಗಳ ನಿಯಮವಾಗಿ ತಿಳಿಸಿ ಸಾಮಾನ್ಯ ಪ್ರಶ್ನೆಯಿಂದ ತಿಳಿಸುವದು.

(೧೯) ಇಲ್ಲಿಯಿಲ್ಲದಚಂಡನು । ಮೆಲ್ಲಗೆಹುಡುಕಿಹೋಳೆತೋ । ಸೊಲ್ಲುಬೇಗ ರಾವ.ನೆ । ಲಲ್ಲೆಹಾಕೆನಗುವೆವು ।

(೨೦) ನಿಮ್ಮನಿಮ್ಮಚಂಡನು । ಸುಮ್ಮನಿತ್ತಿತನ್ನಿರಿ । ತಮ್ಮತಮ್ಮಗೂಡನು। ನೆಮ್ಮಿನಿದ್ದೆವಾಳ್ವೆವು ।

ಎಂಬದಾಗಿ ಪಾಠವನ್ನು ಮುಗಿಸುವದು.

ಕೆ. ಸುಬ್ರಹ್ಮಣ್ಯಶಾಸ್ತ್ರಿ,
ಅ। ಮಾಸ್ಟರು,
ಗ್ವಾ। ಗರ್ಲಸ್‌ಸ್ಕೂಲ್, ಶಿವಮೊಗ್ಗಾ

ಭಿನ್ನರಾಶಿಯಭಾಗಾಕಾರವನ್ನು ತಿಳಿಸತಕ್ಕಕ್ರಮ.

ಭಿನ್ನರಾಶಿಯು ಭಾಗಾಕಾರವನ್ನು ಮೂರು ಅಂತಸ್ತನ್ನಾಗಿ ಮಾಡಿ ತಿಳಿಸಬೇಕು. ಹೀಗೆ ತಿಳಿಸುವಲಕ್ಕೆ ಮೊದಲು ಸಾಧಾರಣ ಭಾಗಾಹಾರದ ವಿಷಯದಲ್ಲಿ ಹೀಗೆ ಪ್ರಶ್ನೆಮಾಡಬೇಕು.

ಉರಳಿಸುವುದು, ಎಸೆಯುವುದು, ಅಡ್ಡಲಾಗಿ ನಡಿಸುವುದು ಮುಂತಾದ ಚಲನೆಗಳನ್ನು ಮಾಡಿಸುವುದು. ಆಗ ಹುಡುಗರು ಹೇಳುವಗಾನ—

(೩) ಮುಂದೆಬ್ಬೇಗನಡೆವುದು । ಹಿಂದೆಒಡನೆಬರ್ವುದು । ಹಿಂದೆಮುಂದೆನಡೆವುದು । ಒಂದೆವಿುಯ್ಯಿಯಿರುವುದು ।

(೪) ಹಕ್ಕಿಯಂತೆಹಾರುವುದು । ಸೊಕ್ಕಿನಿಂದಬೀಳ್ವುದು । ಉಕ್ಕಿಉಕ್ಕಿಹರಿವುದು । ಸಿಕ್ಕುಕ್ಕೈಯ್ಯೊಳಿರ್ಪುದು ।

ಈರೀತಿ ಚಲನಭೇದಗಳನ್ನು ತಿಳಿಸಿ ಅನಂತರ ಬಣ್ಣಗಳ ವಿಷಯವಾಗಿ ತಿಳಿಸುವಾಗ ಹೇಳಬೇಕಾದ ಗಾನವು.

(೯) ಕೆಂಪುನೀಲಹಳದಿಯು । ಇಂಪುಕಸುರುಊದವು ।॥ ಸೊಂಪುವೆರೆದಕಿತ್ತಲೆ । ಇಂಪುಬೀರಿವೆರೆವುವು ॥

ಈ ಬಣ್ಣಗಳ ಹೆಸರನ್ನು ಬಾಲಕರಿಂದ ಹೇಳಿಸಿ ಒಂದೊಂದಕ್ಕೆ ನಾಡಿಕೆಯಾದ ಬೇಕಾದಷ್ಟು ಉದಾಹರಣೆಗಳನ್ನು ಹೇಳಿಸುವುದು, ಆಮೇಲೆ ಒಂದೊಂದು ಬಣ್ಣದ ಚಂಡನ್ನು ಬಾಲಕರಿಗೆ ಕೊಟ್ಟು ಪರೀಕ್ಷಿಸುವುದು, ಆಗ ಹುಡುಗರು ತಮ್ಮ ಮನಬಂದಂತೆ ಗಾನ ಮಾಡುತ್ತಾ ಒಬ್ಬೊಬ್ಬರನ್ನು ಕೇಳುತ್ತಾ ಉತ್ತರಕೊಡುತ್ತಾ ಆಡಲಿ, ಉಪಾಧ್ಯಾಯನು ಸಮಯೋಚಿತವಾಗಿ ಸಹವಾಸ, ಐಕಮತ್ಯ, ಸಂತೋಷ, ನಡತೆ, ನೀತಿ, ಸ್ನೇಹ, ಮುಂತಾದ ಒಳ್ಳೇಗುಣಗಳು ಬಾಲಕರಲ್ಲಿ ನೆಲೆಗೊಳ್ಳುವಂತೆ ಬೋಧಿಸುತ್ತಿರಬೇಕು.

ಪ್ರಶ್ನೆ—(೧೦) ಕೊಂಡುಕೊಳ್ಳಿಬೇಗನೆ । ತೊಂಡೆಹಣ್ಣಬಣ್ಣದ । ಚಂಡನೀಗ ಕೊಟ್ಟುಬಿಲೆಯ । ಕೊಂಡುಕೊಳ್ಳಿಗೆಳೆಯರೆ ।

(ರಾಗ—ಕವಾಜ್. ನೋಟು)

ಉತ್ತರ—(೧೧) ಕೊಂಡುಕೊಳ್ವೆನಾನದ । ತೊಂಡೆಹಣ್ಣಬಣ್ಣದ । ಚಂಡನೀಗಕೊಟ್ಟುಬಿಲೆಯು । ಕೊಂಡುಕೊಳ್ವೆನೇಹದ ।

ಪ್ರಶ್ನೆ—(೧೨) ನೀಲನೆರಳೆಬಣ್ಣದ । ಇದೊ । ಕೈಲಿಹಿಡಿದಚಂಡನು । ಬೆಲೆಯನಿತ್ತುಕರುಣದ । ಲೀಲೆಯಿಂದಕೊಳ್ಳಿರಿ ।

ಉತ್ತರ—(೧೩) ನೀಲನೆರಳೆಬಣ್ಣದ । ತಾ । ಕೈಲಹಿಡಿದಚಂಡನು । ಬೆಲೆಯನೀವೆಕರುಣದ । ಲೀಲೆಯಿಂದಕೊಳ್ಳುವೆ ।

ಪ್ರಶ್ನೆ—(೧೪) ಬಲಿತನಿಂಬೆಬಣ್ಣದ । ಇಕೊ । ಹಳದಿಬೆರೆದಚಂಡನು । ಕಲಿತ ನೀತಿಸೇಳಿನಾವ್ । ಒಲಿದುತೆಗೆದುಕೊಳ್ಳಿರಿ ।

ಉತ್ತರ—(೧೫) ಬಲಿತನಿಂಬೆಹಣ್ಣಿನ । ಹಳದಿಬಣ್ಣದಚಂಡನು । ಕಲಿತನೀತಿ ಪೇಳಿನಾನ್ । ಒಲಿದುತೆಗೆದುಕೊಳ್ಳಿವು ॥

ಇತರ ಬಣ್ಣಗಳ ಕೂಡಿಸಿಟ್ಟು ಪ್ರಶ್ನೆಮಾಡುವಾಗ ಹೇಳುವಗಾನ.

(೧೬) [ರಾರೆಕೋಲಲಾಡಗ—ಎಂಬಂತೆ]

ಹಸುರುಬಣ್ಣವಿಂತಿದೆಂ । ದುಸುರಿನೀವ್ರತೆಗೆಯಿರಿ । ಹಸರ ಎಲೆಯಬಣ್ಣದ । ಒಸೆದು ಚಂಡನಾಡಿರಿ ।

(೧೭) ಬದನೆಕಾಯಹೋಲುವ । ಊದಬಣ್ಣದಚಂಡನು । ವೇದದಿಂದನೋಡಿರಿ । ಮಧುರನಾಗಿತೋರ್ಪುದು ।

(೧೮) ಇತ್ತನೋಡಿಪ್ರಿಯರೆನೀನ್ । ಕಿತ್ತಲೆಬಣ್ಣದಚಂಡನು । ಒತ್ತಿಪಿಡಿದು ನೋಡಲು । ಮೆತ್ತಗಾಗಿತೊರ್ಪುದು ॥

ಈ ಮೇರೆ ಬಣ್ಣಗಳ ವಿಷಯವಾಗಿ ತಿಳಿಸಿ ಸಾಮಾನ್ಯ ಪ್ರಶ್ನೆಯಿಂದ ತಿಳಿಸುವದು.

(೧೯) ಇಲ್ಲಿಯಿಲ್ಲದಚಂಡನು । ಮೆಲ್ಲಗೆಹುಡುಕಿಹೇಳೆತೋ । ಸೊಲ್ಲುಬೇಗ ರವೆ. ನೆ । ಲಲ್ಲೆಹಾಕೆನಗುವೆವು ।

(೨೦) ನಿಮ್ಮನಿಮ್ಮಚಂಡನು । ಸುಮ್ಮನಿತ್ತುತನ್ನಿರಿ । ತಮ್ಮತಮ್ಮಗೂಡನು। ನೆಮ್ಮಿನಿದ್ದೆವಾಳ್ವೆವು ।

ಎಂಬದಾಗಿ ಪಾಠವನ್ನು ಮುಗಿಸುವದು.

ಕೆ. ಸುಬ್ರಹ್ಮಣ್ಯಶಾಸ್ತ್ರಿ
ಅ। ಮಾಸ್ಟರು,
ಗ್ರಾ। ಗರ್ಲಸ್‌ಸ್ಕೂಲ್, ಶಿವಮೊಗ್ಗಾ

ಭಿನ್ನರಾಶಿಯಭಾಗಾಕಾರವನ್ನು ತಿಳಿಸುತಕ್ಕ ಕ್ರಮ.

ಭಿನ್ನರಾಶಿಯು ಭಾಗಾಕಾರವನ್ನು ಮೂರು ಅಂತಸ್ತನ್ನಾಗಿ ಮಾಡಿ ತಿಳಿಸಬೇಕು. ಹೀಗೆ ತಿಳಿಸುವಷ್ಟಕ್ಕೆ ಮೊದಲು ಸಾಧಾರಣ ಭಾಗಾಹಾರದ ವಿಷಯದಲ್ಲಿ ಹೀಗೆ ಪ್ರಶ್ನೆಮಾಡಬೇಕು.

ಉರಳಿಸುವುದು, ಎಸೆಯುವುದು, ಅಡ್ಡಲಾಗಿ ನಡಿಸುವುದು ಮುಂತಾದ ಚಲನೆಗಳನ್ನು ಮಾಡಿಸುವುದು. ಆಗ ಹುಡುಗರು ಹೇಳುವಗಾನ—

(೩) ಮುಂದೆಬೇಗನಡೆವುದು । ಹಿಂದೆಓಡನೆಬರ್ಪುದು । ಹಿಂದೆಮುಂದೆನಡೆವುದು । ಒಂದೆಮಿಮ್ಮಿಯಿರುವುದು ।

(೪) ಹಕ್ಕಿಯಂತೆಹಾರ್ವುದು । ಸೊಕ್ಕಿನಿಂದಬೀಳ್ವುದು । ಉಕ್ಕಿಉಕ್ಕಿಹರಿವುದು । ಸಿಕ್ಕುಕೈಯ್ಯೊಳಿರ್ಪುದು ।

ಈರೀತಿ ಚಲನಭೇದಗಳನ್ನು ತಿಳಿಸಿ ಅನಂತರ ಬಣ್ಣಗಳ ವಿಷಯವಾಗಿ ತಿಳಿಸುವಾಗ ಹೇಳಬೇಕಾದ ಗಾನವು.

(೯) ಕೆಂಪುನೀಲಹಳದಿಯು । ಇಂಪುಕಸುರುಗೂದವು ।। ಸೊಂಪುವೆರೆದಕಿತ್ತಲೆ । ಇಂಪುಬೀರಿವಿರೆವುವು ।।

೫ ಬಣ್ಣಗಳ ಹೆಸರನ್ನು ಬಾಲಕರಿಂದ ಹೇಳಿಸಿ ಒಂದೊಂದಕ್ಕೆ ನಾಡಿಕೆಯಾದ ಬೇಕಾದಷ್ಟು ಉದಾಹರಣೆಗಳನ್ನು ಹೇಳಿಸುವುದು, ಆಮೇಲೆ ಒಂದೊಂದು ಬಣ್ಣದ ಚಂಡನ್ನು ಬಾಲಕರಿಗೆ ಕೊಟ್ಟು ಪರೀಕ್ಷಿಸುವುದು, ಆಗ ಹುಡುಗರು ತಮ್ಮ ಮನಬಂದಂತೆ ಗಾನ ಮಾಡುತ್ತಾ ಬಬ್ಬೊಬ್ಬರನ್ನು ಕೇಳುತ್ತಾ ಉತ್ತರಕೊಡುತ್ತಾ ಆಡಲಿ, ಉಪಾಧ್ಯಾಯನು ಸಮಯೋಚಿತವಾಗಿ ಸಹವಾಸ, ಐಕ್ಯಮತ್ಯ, ಸಂತೋಷ, ನಡತೆ, ನೀತಿ, ಸ್ನೇಹ, ಮುಂತಾದ ಒಳ್ಳೇಗುಣಗಳು ಬಾಲಕರಲ್ಲಿ ನೆಲೆಗೊಳ್ಳುವಂತೆ ಬೋಧಿಸುತ್ತಿರಬೇಕು.

ಪ್ರಶ್ನೆ—(೧೦) ಕೊಂಡುಕೊಳ್ಳಿಬೇಗನೆ । ತೊಂಡೆಹಣ್ಣುಬಣ್ಣದ । ಚಂಡನೀಗ ಕೊಟ್ಟುಬಿಲೆಯ । ಕೊಂಡುಕೊಳ್ಳಿಗೆಳಯರೆ ।

(ರಾಗ—ಕಮಾಚ್. ನೋಟು)

ಉತ್ತರ—(೧೧) ಕೊಂಡುಕೊಳ್ವೆನಾನದ । ತೊಂಡೆಹಣ್ಣುಬಣ್ಣದ । ಚಂಡನೀಗಕೊಟ್ಟುಬಿಲೆಯ । ಕೊಂಡುಕೊಳ್ವೆನೇಹದ ।

ಪ್ರಶ್ನೆ—(೧೨) ನೀಲನೆರಳೆಬಣ್ಣದ । ಇದೊ । ಕೈಲಿಹಿಡಿದಚಂಡನು । ಬಿಲೆಯನಿತ್ತುಕರುಣದ । ಲೀಲೆಯಿಂದಕೊಳ್ಳಿರಿ ।

ಉತ್ತರ—(೧೩) ನೀಲನೆರಳೆಬಣ್ಣದ । ತಾ । ಕೈಲಹಿಡಿದಚಂಡನು । ಬಿಲೆಯು ನೀವೆಕರುಣದ । ಲೀಲೆಯಿಂದಕೊಳ್ಳುವೆ ।

ಪ್ರಶ್ನೆ—(೧೪) ಬಲಿತನಿಂಬಿಬಣ್ಣದ । ಇಕೊ । ಹಳದಿಬೆರೆದಚಂಡನು । ಕಲಿತ ನೀತಿಪೇಳಿನಾನ್ । ಒಲಿದುತೆಗೆದುಕೊಳ್ಳಿರಿ ।

$\frac{1}{8}$ .. .. ——— $\frac{7}{1} \times \frac{1}{8} = \frac{8}{7}$ ರಿಂದ ಗುಣಿಸಬೇಕು

(3) ನೀವರ್ಜಿ $\frac{3}{7}$ನ್ನು ಯಾವ ಅಂಕಿಯಿಂದ ಗುಣಿಸಿದರೆ $\frac{5}{8}$ ಆಗುವದೋ ಅದನ್ನು ಕಾಣಬೇಕು.

∴ $\frac{3}{7}$ಒಂದು ಆಗಬೇಕಾದರೆ ——— $\frac{7}{3}$ರಿಂದ ಗುಣಿಸಬೇಕು.

$\frac{5}{8}$ .. .. ——— $\frac{7}{3} \times \frac{5}{8} = \frac{35}{24}$ರಿಂದ ಗುಣಿಸಬೇಕು.

ಪ್ರತಿಯೊಂದು ಭಾಗದಲ್ಲಿಯೂ ಉತ್ತರ ಬರಬೇಕಾದರೆ ಭಾಜಕದ ಅಂಶಛೇದಗಳನ್ನು ತಲೆಕೆಳಕುಮಾಡಿ ಗುಣಿಸಿ ಮಿಡುವರು ಆದ್ದರಿಂದ ಭಿನ್ನರಾಶಿಯು ಭಾಗಾಕಾರದಲ್ಲಿ ಲಬ್ಧವನ್ನು ಕಂಡುಹಿಡಿಯಬೇಕಾದರೆ ಭಾಜಕದ ಅಂಶಛೇದಗಳನ್ನು ವ್ಯತ್ಯಾಸಮಾಡಿ ಗುಣಿಸಬೇಕೆಂಬ ವಿಧಿಯನ್ನು ಬಾಲಕರಿಂದ ಹೊರಡಿಸಬೇಕು.

ಎಚ್. ಸೂರ್ಯನಾರಣಪ್ಪ ಅ। ಮಾಸ್ಟರ್,
ನಜರ್‌ಬಾದ್ ತಾ॥ ಸ್ಕೂಲ್, ಮೈಸೂರು.

ಚರಿತ್ರೆ ಭೂಗೋಳ ಮತ್ತು ನಕ್ಷೆಬರೆಯುವದು.

1. ಬೌದ್ಧಮತವು ಯಾರಿಂದ ಯಾತಕ್ಕೋಸ್ಕರ ಸ್ಥಾಪಿಸಲ್ಪಟ್ಟಿತು? ಇದು ವೃದ್ಧಿ ಮತ್ತು ಕ್ಷೀಣದಸೆಯನ್ನು ಹೊಂದಿದ ರೀತಿಯನ್ನು ತಿಳಿಸಿರಿ?

2. (a) ವಿಜಯನಗರರಾಜ್ಯವು ನಾಶಹೊಂದಲು ಕಾರಣವೇನು? (b) ಬಹ ಮನಿರಾಜ್ಯ ಒಡೆದು ಭಿನ್ನವಾದ ರಾಜ್ಯಗಳಾವವು?

3. ಅಕ್ಬರನಿಗೂ ಔರಂಗಸೇಬನಿಗೂ ರಾಜ್ಯಭಾರದ ವಿಷಯವಾಗಿ ಇರತಕ್ಕ ತಾರತಮ್ಯವನ್ನು ವಿಶದವಾಗಿ ತಿಳಿಸಿ?

I. 36ನ್ನು 9ರಿಂದ ಭಾಗಿಸುವದಂದರೇನು.

II. ಯಾವ ಅಂಕೆಯನ್ನು ಮತ್ತು 9ನ್ನು ಗುಣಿಸಿದರೆ 36ಬರುವದು ಎಂಬುವದೇ ಈ ಪ್ರಶ್ನೆಯ ಅರ್ಥವೆಂದು ಬಾಲಕರಿಂದಲೇ ಹೇಳಿಸಬೇಕು. ಈ ಪ್ರಶ್ನೆಯ ಅರ್ಥವನ್ನು ಭಿನ್ನರಾಶಿಯಲ್ಲಿ ಉಪಯೋಗಿಸಬೇಕು.

I. $\frac{1}{2}$ನ್ನು 2ರಿಂದ ಭಾಗಿಸಬೇಕು. ಅಂದರೆ 2ನ್ನು ಯಾವ ಸಂಖ್ಯೆಯಿಂದ ಗುಣಿಸಿದರೆ $\frac{1}{2}$ನಾಗುವದು. ಹೀಗೆ ಭಾಗಾಕಾರವನ್ನು ತಿಳಿಸುವದಕ್ಕೆ ಮೊದಲು ಪ್ರತಿಯೊಂದು ಭಿನ್ನರಾಶಿಯನ್ನು ಏಕವನ್ನಾಗಿ ಮಾಡಬೇಕಾದರೆ ಯಾವದರಿಂದ ಗುಣಿಸಬೇಕು ಎಂಬುವದನ್ನು ಚೆನ್ನಾಗಿ ತಿಳಿಸಬೇಕು.

ಭಾಗಾಕಾರವನ್ನು ಈ ವಿಧನಾಗಿ ಮೂರುಭಾಗವನ್ನಾಗಿ ಮಾಡಬೇಕು.

(1) $8 \div \frac{1}{7}$, ಪೂರ್ಣಾಂಕವನ್ನು ಭಿನ್ನರಾಶಿಯಲ್ಲಿ ಭಾಗಿಸುವದು.

(2) $\frac{1}{8} \div \frac{1}{7}$, ಒಂದೇ ಅಂಶವಾಗುಳ್ಳ ಭಿನ್ನರಾಶಿಯಿಂದ ಭಾಗಿಸುವದು.

(3) $\frac{5}{8} \div \frac{3}{7}$, ಯಾವದೋ ಒಂದು ಭಿನ್ನರಾಶಿಯನ್ನು ಯಾವದೋ ಒಂದು ಭಿನ್ನಯಿಂದ ಭಾಗಿಸುವದು.

(1) ನೇ ಪ್ರಶ್ನೆಗೆ ಅರ್ಥವೇನೆಂದರೆ—$\frac{1}{7}$) 8 (ಅಂದರೆ $\frac{1}{7}$ನ್ನು ಯಾವ ಸಂಖ್ಯೆಯಿಂದ ಗುಣಿಸಿದರೆ 8ಆಗುವದು. ಎಂದು.

∴ $\frac{1}{7}$ ಒಂದು ಆಗಬೇಕಾದರೆ——$\frac{7}{1}$ರಿಂದ ಗುಣಿಸಬೇಕು.

8 ..—— $\frac{7\times8}{1}$ = 56 ರಿಂದ ಗುಣಿಸಬೇಕು.

(2) ನೇದರಲ್ಲಿ $\frac{1}{7}$ರಿಂದ $\frac{1}{8}$ನ್ನು ಭಾಗಿಸಬೇಕು.

∴ $\frac{1}{7}$ಒಂದು ಆಗಬೇಕಾದರೆ 7 ರಿಂದ ಗುಣಿಸಬೇಕು.

(b) ಮೈಸೂರು ದೇಶದಲ್ಲಿ ರೇಷ್ಮೆವಸ್ತ್ರಗಳು, ಕಂಬಳಿ ಎಲ್ಲೆಲ್ಲಿ ತಯಾರಾಗುವವು?

4. (1) ಡ್ಯಾನ್ಯೂಬ್ (Danube) ನದಿಯು ಹರಿಯುವ ದೇಶಗಳನ್ನೂ ಅದರ ಉಪನದಿಗಳನ್ನೂ ಬರೆ?

(2) ಜಪಾನಿನ ನಾಲ್ಕುಭಾಗಗಳು, ವಾಯುಗುಣ ಖನಿಜಗಳನ್ನು ತಿಳಿಸಿ?

5. ಈ ಕೆಳಗಿನವು ಎಲ್ಲಿವೆ? ಏತರಿಂದ ಪ್ರಸಿದ್ಧ?

(1) ಸಾವನ್ನಿ, (2) ಅಮೃತಶಿರ, (3) ಬೆಹರೀಕ್, (4) ಬ್ರಿಸ್ಟಾಲ್, (5) ತಿರುಚನಾಪಲ್ಲಿ, (6) ಪಿರಾಸ್, (7) ಟೂಲ, (8) ಖಟ್ವಾ, (9) ಮೈಲಾನ್, (10) ನಾಗಪುರ

6. ಮೆಡಿಟರೇನಿಯನ್ ಸಮುದ್ರದ ನಕ್ಷೆಯನ್ನು ಬರೆದು ಮೇರೆ ಇರುವ ಮುಖ್ಯದ್ವೀಪಗಳು, ಉಪಸಮುದ್ರ, ಮುಖ್ಯನಾದ ರೇವುಗಳನ್ನು ಗುರ್ತುಮಾಡು.

ಫಿಲಿಪ್ ಸಿಡ್ನಿ.

ಇಂಗ್ಲೆಂಡ್ ದೇಶವನ್ನು ಎಲೆಜಿಬಿತ್ ಎಂಬ ರಾಣಿಯು ಆಳುತಿದ್ದಳು. ಅವಳ ಕಾಲದಲ್ಲಿ ಆದೇಶದಲ್ಲಿ ಪಂಡಿತರು, ಶೂರರೂ ಅನೇಕರಿದ್ದರು. ಅವರಲ್ಲಿ ಸಿಡ್ನಿ ಎಂಬುವನೊಬ್ಬನು. ಇವನು ಎಂಥಾಶೂರ! ಎಷ್ಟುದಯಾಳು! ಕೇಳಿ. ಇವನು ಆಕಾಲದ ಪಂಡಿತರಲ್ಲಿ ಪಂಡಿತನಾಗಿಯೂ ಕವಿಗಳಲ್ಲಿ ವರಕವಿಯಾಗಿಯೂ ಇದ್ದನು. ಇದರಮೇಲೆ ಇವನು ಗುಣಶಾಲಿ. ಇವನ ವಿದ್ಯೆಗೂ, ಬುದ್ಧಿಗೂ, ಗುಣಕ್ಕೂ ಇವನನ್ನು ಎಲ್ಲರೂ ಕೊಂಡಾಡುತಿದ್ದರು. ಶತ್ರುಗಳಿಂದ ಪೀಡಿತರಾಗಿದ್ದ ಡಚ್ಚ್‌ಜನರಿಗೆ ಸಹಾಯಮಾಡಲು ರಾಣಿಯು ಒಂದು ಸೇನೆಯೊಡನೆ ಸಿಡ್ನಿಯನ್ನು ಕಳುಹಿಸಿದಳು ರಾಣಿಯುಆಜ್ಞೆಯನ್ನು ಪಡೆದು ಸಿಡ್ನಿಯು, ಡಚ್ಚ್‌ಜನರಿರತಕ್ಕ ಹಾಲೆಂಡ್ ದೇಶವನ್ನು ಸೇರಿ, ಜಟ್‌ಫನ್ ಎಂಬಸ್ಥಳದಲ್ಲಿ ಶತ್ರುವಿನಮೇಲೆ ಬಹಳವಾಗಿ ಹೋರಾಡಿದನು. ಆಹೋರಾಟದಲ್ಲಿ ಸಿಡ್ನಿಯು ಏರಿದ ಎರಡು ಕುದುರೆಗಳು ಸತ್ತುಬಿದ್ದವು. ಆಗ ಮೂರನೇಕುದುರೆಯನ್ನು ಏರುತಲಿದ್ದಾಗ ಒಂದು ಗುಂಡು ಬಂದು ಅವನಿಗೆ

4. (a) ಪೇಷ್ವೆಗಳಲ್ಲಿ ಅತ್ಯಂತ ಶಕ್ತನು ಯಾರು? ಆತನ ಶಕ್ತಿಯನ್ನು ವಿಶದವಾಗಿ ತಿಳಿಸಿರಿ?

(b) ಮಿಸ್ಟರ್ ಖಾಸೀಮನಿಗೂ ಕಂಪೆನಿಯವರಿಗೂ ವೈಷಮ್ಯವೇಕೆಹುಟ್ಟಿತು? (c) ಕ್ಲೈವನು ಸೈನ್ಯದಲ್ಲಿ ಯಾವಯಾವ ಬದಲಾವಣೆಗಳನ್ನು ಮಾಡಿದನು? ಹಾಗೆ ಮಾಡಲು ಕಾರಣವೇನು?

5. (a) ಸೆಲ್ಯೂಕ್ ಬಲ್ಬ್, ಬುಸ್ಸಿ, ವಿಜರ್ಾಫರ್ ಇವರು ಚರಿತ್ರೆಯಲ್ಲಿ ಹೇಗೆ ಪ್ರಸಿದ್ಧಿಪಡೆದಿರುವರು?

(b) ಕ್ರಿ. ಪೂ. 557, ಕ್ರಿ. ಶ. 1674, 1746, 1802, 1751, 1795, 1782, ಈ ಸಂವತ್ಸರಗಳಲ್ಲಿ ನಡೆದ ಸಂಗತಿಗಳನ್ನೂ ಯುದ್ಧಗಳು ನಡೆದಿದ್ದರೆ ಉಭಯ ಕಕ್ಷಿ ಜಯಾಪಜಯ ಹೊಂದಿದವರನ್ನೂ ಕರಾರು ನಡೆದಿದ್ದರೆ ಅದರ ಷರತ್ತುಗಳನ್ನೂ ಬರೆಯಿರಿ.

ಭೂಗೋಳಶಾಸ್ತ್ರ—2 ನೇ ಭಾಗ.

1. (a) ರೇಖಾಂಶವೃತ್ತ, ಸಮಭಾಜಕವೃತ್ತ, ಅಳಿವೆ, ಸಕ್ಷಮಧ್ಯದಿಳಿತಗಳಂದರೇನು?

(b) ಈ ಕೆಳಗಿನವುಗಳ್ಯಾವವು?

(1) ಇಟಲಿಗೂ ಸಿಸಲಿಗೂ ಮಧ್ಯದಲ್ಲಿರುವ ಜಲಸಂಧಿ

(2) ಎರಲ್ ಸಮುದ್ರಕ್ಕೆ ಬೀಳುವ ಯಮುಳನದಿಗಳು

(3) ಫ್ರಾನ್ಸ್‌ದೇಶದ ತೀರಪಟ್ಟಣಗಳು

(4) ಬೆಲೂಚೀಸ್ಥಾನಕ್ಕೂ ಸಿಂಧೂದೇಶಕ್ಕೂ ಮಧ್ಯದಲ್ಲಿರುವ ಪರ್ವತ

(5) ಇಟಲಿಯ ಲಿವರ್ಪೂಲ್

2. (a) ಬೊಂಬಾಯಿಂದ ಹೊರಟುಹೋಗುವ ಹಡಗು ಇಂಗ್ಲೆಂಡನ್ನು ಸೇರುವುದರೊಳಗಾಗಿ ಮಧ್ಯೆ ಯಾವಯಾವ ರೇವುಗಳನ್ನು ಸಂಧಿಸುವುದು? ನಕ್ಷೆಯೊಡನೆ ತಿಳಿಸು?

(b) ಪೋರ್ಚುಗಲ್ ದೇಶಕ್ಕೆ ಸೇರಿದ ರಾಷ್ಟ್ರಗಳು ಯಾವವು?

3. (a) ಇಂಗ್ಲೆಂಡಿನಲ್ಲಿ ಹತ್ತಿಬಟ್ಟೆಗಳು ತಯಾರಾಗುವ ಸ್ಥಳಗಳ್ಯಾವವು?

ಆದುದು ಮಧುಗಿರಿವೋದದಿಂ । ಆಳಿ । ಪಾದಮನ್ನಿಡೆ ಪಾಡುತಂ । ಮಾ
ಧವಿವಸುಲತಿ । ಮಾದಲದೊಳುವಧು । ಶೋಧಿಸಿಸಾಧಿಸಿ ॥

ನೀಡೆಕೈಪೆಯ ಶ್ರೀಕಂಠನು । ಶಶಿ । ಚೂಡನಾದ ಮಹೇಶನು । ಷೋಡಶ
ಕಲೆಗಳ । ಕೂಡಿಕೃಷ್ಣೇಂದುವು । ಪೋಡಗಳಾಡದೆ । ನಾಡೊಳು ಶೋಭಿಸೆ ॥

॥ ಶಹನ. ಆದಿತಾಳ ॥

ರೀ ರಿರಿ ರಿರಿರಿರಿ ಗಾಮಾಪಾ ಮುಮ ಗಾಗಮ ರಿಸಾಸ ರೀನೀಸಾ ॥
ಸಾಸಸ ಸಾಸಸ ನೀನಿಪ ಧಾಪಪ ರೀಗಗ ಮುಪಮಾ ಗಾಗಮ ರೀಸಸ ॥

ಶ್ರೀಕಂಠೇಶಗೌಡ. ಬಿ. ಎ. ಬಿ. ಎಲ್

ಮಃ॥ ರಾ॥ ವಿದ್ಯಾನಾಯಿನಿ ಎಡಿಟರವರ ಸ॥ ಕ್ಕೆ ॥

ಸ್ವಾಮಿಾ ! ತಾವ್ರು ೯೯ ನೇ ಮೇ ತಿಂಗಳ ವಿದ್ಯಾದಾಯಿನಿಯಲ್ಲಿ ಪ್ರಕಟಿಸಿದ್ದ ಒಗಟಿಗೆ ಉತ್ತರ.

" ವಿಜಯನಗರ "

ಲಕ್ಕೂರ್ ರಾಮಚಂದ್ರರಾವ್,

V ನೇ ತರಗತಿಯ ವಿದ್ಯಾರ್ಥಿ,
ಮರಿಮಲ್ಲಪ್ಪಾಸ್ಕೂಲ್,
ಮೈಸೂರು.

ಗ್ರಂಥವಿಮರ್ಶೆ.

ಮೈಸೂರು ಶ್ರೀಮನ್ಮಹಾರಾಣಿಯವರ ಬಾಲಿಕಾಸಾಠಶಾಲೋಪಾಧ್ಯಾಯಿನಿಯರಾದ ಸಿ. ಆರ್. ಜೆಲ್ಲಮ್ಮನವರು ಭಾಮಿನಿಷಟ್ಪದಿಯಲ್ಲಿ ೧೬೩ ಪದ್ಯಗಳಿಂದ " ರುಕ್ಮಿಣೀಪರಿಣಯವೆಂಬ " ಗ್ರಂಥವನ್ನು ರಚಿಸಿರುವರು. ಇದರಸಾರಾಂಶ:—

ತಗಲಿತು. ಅವಟನಿಂದ ರಕ್ತವು ಸುರಿದು ಮೂರ್ಛೆ ಹೋಗಲು ಜನರು ಒಡನೆಯೆ ಯುದ್ಧರಂಗದಿಂದ ಹೊರಗೆ ಇದ್ದ ಠಾಣೆಗೆ ಅವನನ್ನು ಎತ್ತಿಕೊಂಡು ಹೋದರು. ಯುದ್ಧದಲ್ಲಿ ಪೆಟ್ಟುತಿಂದವರಿಗೆ ಅಯಾಸದಿಂದ ಬಾಯಾರಿಕೆಯು ಹೆಚ್ಚು. ಆದರೆ ಯುದ್ಧ ನಡೆಯುವಕಡೆ ನೀರು ಸುಲಭವಾಗಿ ದೊರೆಯುವುದಿಲ್ಲವು. ಜನರು ಹೋಗಿ ನೀರು ತರುವಷ್ಟು ಅವಕಾಶವೂ ಇರುವುದಿಲ್ಲ. ಆದರೆ, ಎಲ್ಲರಿಗೂ ಬೇಕಾದ ಸಿಡ್ನಿಯು ಪೆಟ್ಟುತಿಂದು ಮೂರ್ಛಿತನಾಗಿರುವಾಗ, ಅವನನ್ನು ಸುದಾರಿಸಲು, ಬಹಳ ಕಷ್ಟಪಟ್ಟು ಒಂದು ಬಟ್ಲು ನೀರನ್ನು ತಂದರು. ಮೂರ್ಛೆಯಿಂದ ಎಚ್ಚೆತ್ತ ಸಿಡ್ನಿಯು ಆ ಬಟ್ಲು ನೀರನ್ನು ಒಣಗಿಹೋಗಿರುವ ತನ್ನ ತುಟಿಯಹತ್ತಿರ ತೆಗೆದುಕೊಂಡು ಹೋಗುತಿರುವಾಗ್ಗೆ, ಅದೇತಾನೆ ಪೆಟ್ಟುತಿಂದು ಸಂಕಟಪಡುತಲಿದ್ದ ಒಬ್ಬ ಸಿಪಾಯಿಯು ಇವನ ಕೈಯಲ್ಲಿದ್ದ ಬಟ್ಲನ್ನೇ ದೃಷ್ಟಿಸಿ ನೋಡುತಿದ್ದುದನ್ನು ಸಿಡ್ನಿಯು ಕಂಡು ತನ್ನ ದಣುವನ್ನೂ ಬಾಯಾರಿಕೆಯನ್ನೂ ಆರಿಸಿಕೊಳ್ಳುವುದಕ್ಕೆ ತಂದಿದ್ದ ಆ ಸ್ವಲ್ಪ ನೀರನ್ನು ತಾನು ಕುಡಿಯದೆ- ' ಈ ನೀರನ್ನು ಅವನಿಗೆ ಕೊಡಿ ; ನನಗಿಂತಲೂ ಅವನಿಗೆ ನೀರು ಅವಶ್ಯಕವಾಗಿ ಬೇಕಾಗಿರುವುದು ' ಎಂದು ಹೇಳಿ ಅವನಿಗೆ ನೀರನ್ನು ಕೊಡಿಸಿ, ತನ್ನ ದಾಹವನ್ನು ಹಾಗೆಯೇ ಸೈರಿಸಿಕೊಂಡು ಸ್ವಲ್ಪಹೊತ್ತಿನಲ್ಲಿಯೇ ಪ್ರಾಣವನ್ನು ಬಿಟ್ಟನು. ಇದಲ್ಲವೇ ದಯ ! ನಮ್ಮಲ್ಲಿ ಹೆಚ್ಚಾಗಿರುವುದನ್ನಾಗಲಿ, ನಮಗೆ ಬೇಡವಾದುದನ್ನಾಗಲಿ ಕೊಡುವುದು ಕೊಡುವುದಲ್ಲ. ನಮಗೆ ಅವಶ್ಯಕವಾಗಿ ಬೇಕಾಗಿರುವುದು, ನಮಗೇ ಸಾಲದೆ ಇರುವುದನ್ನು ಕೊಡುವುದೇ ಕೊಟ್ಟದ್ದು. ಇದೇ ದಾನ.

ಮೈಸೂರು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ

ಸಾರಿತುಬನದೊಳುಕೋಕಿಲಂ । ಶುಕ । ಶಾರಿಕೆಗಳಕೂಡಾಡುತಂ ॥ ಪ ॥
ಸಾರದಸಾರವು । ಸಾರಿರಸಾಲವು । ಸಾರವ ಕುಡಿಸಂಸಾರದಸಾರಕೆ ॥ ಅನುಪಲ್ಲವಿ ॥
ಸಿಂಗರವಾದವೃಶೃಂಗಗಳ್ । ವನ । ರಂಗರಾಜಿಯು ಮಂಗಳಂ । ತಂಗೊಳಗಳಕಮ । ಲಂಗಳುಬಿರಿಯುತೆ । ಭೃಂಗಗಳಾಡುತ । ಕಂಗೊಳಿಸುತ್ತಿರೆ ॥

ವಿದ್ಯಾದಾಯಿನಿ.

ಭಾಗ V.] ಜುಲೈ ೧೯೦೯. [ಸಂಚಿಕೆ ೭.

ಎಡಿಟರವರ ನೋಟ್ಸ್.

ನಮ್ಮ ದೇಶದಲ್ಲಿನ ಸರ್ಕಾರದ ಪಾಠಶಾಲೆಗಳಲ್ಲಿ ಕೆಲಸ ಮಾಡುತಲಿರ.ವ ಉಪಾಧ್ಯಾಯರುಗಳಲ್ಲಿ ಕೆಲವು ಮಂದಿಗೆ ತಿಂಗಳಿಗೆ ೫ ರೂಪಾಯಿ ಮಾತ್ರ ಸಂಬಳವಿರುವುದು ಎಲ್ಲರಿಗೂ ತಿಳಿದೇ ಇದೆಯಷ್ಟೆ. ಈಗ ಇಂಥಾ ಉಪಾಧ್ಯಾಯರಿಗೆಲ್ಲ ಸರ್ಕಾರದವರು ದಯವಿಟ್ಟು ಎರಡೆರಡು ರೂಪಾಯಿ ಸಂಬಳವನ್ನು ಹೆಚ್ಚಿಸಿದಾರೆಂದು ಕೇಳಿ ಬಹಳ ಸಂತೋಷಪಡುತ್ತೇವೆ. ನಮ್ಮ ದೇಶದಲ್ಲಿ ಬಾಲವಿದ್ಯಾಭ್ಯಾಸವು ಅಭಿವೃದ್ಧಿಸ್ಥಿತಿಗೆ ಬರುವುದಕ್ಕೆ ಇದು ಒಂದು ಮುಖ್ಯ ಮಾರ್ಗ. ನಾವು ಈ ಪತ್ರಿಕೆಯಲ್ಲಿ ಪದೇಪದೇ ಹೇಳುತ್ತಿರುವಂತೆ ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸುವವರಿಗೆ ಅನುಭವವೂ, ಪ್ರೀತಿಯೂ, ಉತ್ಸಾಹವೂ, ತಾಳ್ಮೆಯೂ ವಿಶೇಷವಾಗಿರಬೇಕು. ಇಂಥ ಉಪಾಧ್ಯಾಯರು ಸಿಕ್ಕಬೇಕಾದರೆ ಸ್ವಲ್ಪ ಹೆಚ್ಚಾದ ಸಂಬಳವನ್ನೇ ಕೊಡಬೇಕು. ಇಲ್ಲದಿದ್ದರೆ ಅಷ್ಟು ಯೋಗ್ಯತೆಯುಳ್ಳವರು ದೊರೆಯುವುದಿಲ್ಲ. ಆದುದರಿಂದ ಸರ್ಕಾರದ ಪಾಠಶಾಲೆಗಳಲ್ಲಿ ಕೆಲಸಮಾಡುವವರಿಗೆ ಏಳು ರೂಪಾಯಿಗೆ ಕಡಮೆಯಿಲ್ಲದ ಸಂಬಳವನ್ನು ಕೊಡುವಂತೆ ಮಾಡಿದ್ದು ವಿದ್ಯಾಭಿವೃದ್ಧಿವಿಷಯದಲ್ಲಿ ಸರಿಯಾಗಿ ಕೆಲಸ ಮಾಡದೇ ಇರದು.

* * *

ಉಪಾಧ್ಯಾಯರಿಗೆ ಸಂಬಳವೊಂದೇ ಮುಖ್ಯವಾದುದಲ್ಲ. ಅವರಿಗೆ ಮುಖ್ಯವಾಗಿ ಉತ್ಸಾಹವಿರಬೇಕು. ಮನಃಪೂರ್ವಕವಾಗಿ ಕೆಲಸಮಾಡುವ ಉಪಾಧ್ಯಾಯರಿಗೆ ತಕ್ಕಂತೆ ಸಂಬಳವನ್ನು ಕೊಡುವುದು ಸಾಧ್ಯವಿಲ್ಲವೆಂದೇ ಹೇಳಬಹುದು. ಉಪಾಧ್ಯಾಯರು ಮಾಡುವ ಉಪಕಾರವೆಂಥಾ ಬೆಲೆಯುಳ್ಳದ್ದು. ಈ ಕಾರಣಾದಿಂದಲೇ ನಮ್ಮ

ವಿದರ್ಭಾಧಿಪತಿಯೂದ ಭೀಷ್ಮನೆಂಬ ಧೊರೆಗೆ ರುಕ್ಮಿಣಿಯೆಂಬ ಮಗಳು ಹುಟ್ಟಿ ಯೌವನವತಿಯಾಗಲು, ನಾರದಮಹರ್ಷಿಗಳು ಬಂದು ರುಕ್ಮಿಣಿಯು ಶ್ರೀ ಕೃಷ್ಣನಿಗೆ ತಕ್ಕ ವಧುವೆಂದು ಹೇಳಿ ಅಲ್ಲಿಂದ ದ್ವಾರಕೆಗೆ ಹೋಗಿ ಶ್ರೀಕೃಷ್ಣನಿಗೂ ರುಕ್ಮಿಣಿಯ ಸಮಾಚಾರವನ್ನು ಹೇಳಿದರು ಆ ಮಾತನ್ನು ಕೃಷ್ಣನು ಕೇಳಿ ತಾನು ರುಕ್ಮಿಣಿಯನ್ನು ಮದುವೆಯಾಗಬೇಕೆಂದು ಆಲೋಚಿಸುತ್ತಿದ್ದನು. ಇತ್ತ ವಿದರ್ಭಾಧಿಪತಿಯಾದ ಭೀಷ್ಮನು ಸಭೆಮಾಡಿ ಶ್ರೀಕೃಷ್ಣನು ತನ್ನ ಮಗಳಿಗೆ ತಕ್ಕವರನೆಂದು ಹೇಳಲು ಈ ಭೀಷ್ಮನ ಮಗನಾದ ರುಕ್ಮಿಯು ಅದಕ್ಕೆ ಸಮ್ಮತಿಸದೆ ಶಿಶುಪಾಲನಿಗೆ ತನ್ನ ತಂಗಿಯಾದ ರುಕ್ಮಿಣಿಯನ್ನು ಕೊಡುವಂತೆ ದೇಶದೇಶಕ್ಕೂ ಲಗ್ನಪತ್ರಿಕೆಯನ್ನು ಬರೆದುಕಳುಹಿಸಿದನು. ಈ ಸಮಾಚಾರವನ್ನು ರುಕ್ಮಿಣಿಯು ಕೇಳಿ ತನ್ನ ಉಪಾಧ್ಯಾಯರ ಮೂಲಕವಾಗಿ ಶ್ರೀಕೃಷ್ಣನನ್ನು ಮನಸ್ಸಿನಲ್ಲಿ ವರಿಸಿರುವೆನಾದ್ದರಿಂದ ಕೃಷ್ಣನು ಕಾಪಾಡದಿದ್ದರೆ ತಾನು ಅಗ್ನಿಪ್ರವೇಶಮಾಡುವೆನೆಂದು ಕೃಷ್ಣನಿಗೆ ಹೇಳಿಕಳುಹಿಸಿದಳು. ಈ ಸಮಾಚಾರವನ್ನು ಶ್ರೀಕೃಷ್ಣನು ಕೇಳಿ ಬಲರಾಮನೊಡನೆ ವಿದರ್ಭದೇಶಕ್ಕೆ ಹೊಡರಲು ಸಿದ್ಧನಾಗಲು ಈ ಸಮಾಚಾರವನ್ನೆಲ್ಲಾ ಆ ಉಪಾಧ್ಯಾಯರು ರುಕ್ಮಿಣಿಗೆ ತಿಳಿಸಿ ಹೊರಟುಹೋದರು ಆಮೇಲೆ ಲಗ್ನವು ನಿಶ್ಚಿತವಾದ ದಿನದಲ್ಲಿ ರುಕ್ಮಿಣಿಯು ಗೌರೀದೇವಾಲಯಕ್ಕೆ ಹೋಗಿ ಪೂಜಿಸಿ ಕೃಷ್ಣನೇ ತನ್ನನ್ನು ವರಿಸುವಂತೆ ಮಾಡಬೇಕೆಂದು ಬೇಡಿಕೊಂಡು ಬರುತ್ತಿರುವಾಗ ಕೃಷ್ಣನು ಗರುಡಾರೂಢನಾಗಿ ಬಂದು ರುಕ್ಮಿಣಿಯನ್ನು ಅಪಹರಿಸಿಕೊಂಡು ಯುದ್ಧಕ್ಕೆ ಬಂದವರನ್ನೆಲ್ಲಾ ಗೆದ್ದು ಹಿಂದೆ ಹೇಳಿದ ರುಕ್ಮಿಗೆ ಅವಮಾನವನ್ನು ಮಾತ್ರ ಮಾಡಿ ದ್ವಾರಕೆಗೆ ಹೋಗಿ ಅಲ್ಲಿ ರುಕ್ಮಿಣಿಯನ್ನು ಮದುವೆಯಾದನು. ಈ ಗ್ರಂಥವನ್ನು ಭಾಗವತದಲ್ಲಿರುವ ರುಕ್ಮಿಣೀವಿವಾಹದ ಕಥೆಯ ಆಧಾರದ ಮೇಲೆ ಬರೆದಿರುವರು. ವ್ಯಾಕರಣವಿಷಯದಲ್ಲಿ ಜಾನ್ಸನ್‌ಸಿಂಧು ಮೊದಲಾದ ಷಟ್ಪದಿ ಗ್ರಂಥಗಳಿಗೆ ಸರಿಹೋಗಬಹುದೆಂದು ಹೇಳಬಹುದು. ಈ ಗ್ರಂಥವು ಸಾಮಾನ್ಯವಾಗಿ ಲೋಕರೂಢಿಯಾದ ಪದಗಳ ಪ್ರಯೋಗವಿರುವದರಿಂದಲೂ ಹೊಸಗನ್ನಡದ ಶೈಲಿಯಲ್ಲಿರುವದರಿಂದಲೂ ಕರ್ಣಾಟಕ ಭಾಷೆಯಲ್ಲಿ ಸ್ವಲ್ಪಮಟ್ಟಿಗೆ ಪರಿಶ್ರಮವಿರತಕ್ಕವರಿಗೆ ಅರ್ಥವಾಗುವದು. ಈ ವಿಧವಾಗಿ ಸ್ತ್ರೀಜನಗಳು ಗ್ರಂಥವನ್ನು ಬರೆಯುವದು ಈ ಕಾಲದಲ್ಲಿ, ಅತಿವಿರಳವಾಗಿರುವದಲ್ಲದೆ ಹೀಗೆ ಬರೆಯುವದು ಶ್ಲಾಘನೀಯವೆಂದು ಹೇಳಬಹುದು.

ದಲ್ಲಿ ಬದಲಾವಣೆಗೆ ಆಸ್ಪದವಿದ್ದೇ ಇರಬೇಕು. ಇಂಥ ಅಂಶಗಳು ಮುಖ್ಯವಾಗಿ ಕಾಲದ ಪರಿಣಾಮವೇ ಸರಿ. ಇದರಂತೆಯೇ ವಿದ್ಯಾಭ್ಯಾಸ ಕ್ರಮದಲ್ಲಿ ದೊಡ್ಡದಾದ ಬದಲಾವಣೆಯನ್ನು ತಂದಿರುವ ಕಿಂಡರ್‌ಗಾರ್ಟ್ನ್ ಕ್ರಮಕ್ಕೂ ಆದಿಯನ್ನೂ ನಿರ್ದಿಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ. ಫ್ರೊಬೆಲ್ಲಿಂಬಾತನೂ ಈ ಕ್ರಮಕ್ಕೆ ಪ್ರವರ್ತಕನಾದಾಗ್ಯೂ ಅವನು ಹುಟ್ಟುವುದಕ್ಕೆ ಹಿಂದಿನಿಂದಲೂ ಈ ವಿಧವಾದ ಬದಲಾವಣೆಯು ಬರುವಂಥ ಪ್ರಯತ್ನಗಳನೇಕವಾಗಿದ್ದವು. ಇವುಗಳಲ್ಲಿ ಮುಖ್ಯವಾದುದು ಫ್ರೆಂಚ್ ದೇಶವಲ್ಲಿ ಹುಟ್ಟಿದ ರುಸೊ ಎಂಬಾತನದೊಂದು, ಸ್ವಿಟ್ಸರ್ಲೆಂಡ್ ದೇಶದವನಾದ ಪೆಸ್ಟಲಾಟ್ಸಯೆಂಬಾತನದು ಮತ್ತೊಂದು.

ಹೀಗೆ ಅನೇಕರು ಫ್ರೊಬೆಲ್‌ಗಿಂತಲೂ ಹಿಂದಿನಿಂದಲೂ ಈ ವಿಧವಾಗಿ ಪ್ರಯತ್ನ ಪಟ್ಟಿದ್ದರೂ ಫ್ರೊಬೆಲ್‌ಗೆ ಗಟ್ಟಿ ನೆಲ ಸಿಕ್ಕಿದ್ದು; ಇದರಿಂದಲೇ ಅವನಿಗೆ ಅಸ್ತಿಭಾರ ಹಾಕುವುದು ಸಾಧ್ಯವಾದದ್ದು. ಫ್ರೊಬೆಲ್‌ನು ಪೆಸ್ಟಲಾಟ್ಸ್ ಮುಂತಾದ ವರ ಪ್ರಯತ್ನಗಳನ್ನು ಆದರದಿಂದ ತಿಳಿದು, ಸ್ವತಃ ಮಕ್ಕಳ ಸ್ವಭಾವವನ್ನು ಪರೀಕ್ಷಿಸಿ ಕೊನೆಯಲ್ಲಿ ತನ್ನ ಕಿಂಡರ್‌ಗಾರ್ಟ್ನ್ ಕ್ರಮವನ್ನು ಏರ್ಪಾಡು ಮಾಡಿದನು. ಬಾಲಕರಿಗೆ ಆಟವಾಡುವ ಬುದ್ಧಿಯು ಸ್ವಾಭಾವಿಕವಾಗಿರುವುದು ಎಲ್ಲರಿಗೂ ಗೊತ್ತಿದೆ. ಇದಕ್ಕೆ ಮುಖ್ಯವಾಗಿ ಅವರಲ್ಲಿರುವ ಲವಲವಿಕೆಯೇ ಕಾರಣ. ಇದನ್ನು ತಿಳಿದು ತದನುಗುಣವಾಗಿ ಕಿಂಡರ್‌ಗಾರ್ಟನ್ನು ಏರ್ಪಾಡು ಮಾಡಿರುವನು. ಕಿಂಡರ್‌ಗಾರ್ಟ್ನ್ ಎಂಬುದು ಆಟವೇ ಹೊರತು ಮತ್ತೇನೇರೇ ಅಲ್ಲ. ಆದರೆ ಸಾಮಾನ್ಯವಾಗಿ ಮಕ್ಕಳು ಆಡುವಂತೆ ಅಕ್ರಮವಾದುದಲ್ಲ; ಕ್ರಮವಾದ ಆಟ. ಇಷ್ಟೇ ವಿಶೇಷ, ಮೇಲೆ ನೋಡಿಕೊಳ್ಳುತಿರುವ ಕಿಂಡರ್‌ಗಾರ್ಟ್ನ್ ಉಪಾಧ್ಯಾಯರು ಬಾಲಕರ ಯೋಗ್ಯತಾನುಗುಣವಾಗಿ ಆಟಗಳನ್ನು ಕಲ್ಪಿಸಿ ಅವುಗಳ ಮೂಲಕ ಕೆಲಕೆಲವು ಉಪಯುಕ್ತವಾದ ಅಂಶಗಳನ್ನು ಅವರಿಗೆ ತಿಳಿಸುವರು. ಬಾಲಕರಿಗೆ ತಾವು ಇಂಥ ಅಂಶಗಳನ್ನು ಕಲಿಯುತ್ತೇವೆಂಬುದೇ ತಿಳಿಯುವುದಿಲ್ಲ. ಆಟವಾಡುತ್ತಿದೇವೆ ಯೆಂದು ಭಾವಿಸುವರು. ಸಮಯ ದೊರೆತ ಹಾಗೆಲ್ಲ ಅವರಿಗೆ ಆಟವಾಡುವಾಗಲೇ ಉಪಯುಕ್ತಾಂಶಗಳು ಉಪಾಧ್ಯಾಯರ ಮೂಲಕ ಗೊತ್ತಾಗುವುವು.

ಉಪಯುಕ್ತವಾದ ಅಂಶಗಳು ತಿಳಿಯುವುದು ಮಾತ್ರವಲ್ಲದೆ, ಬಾಲಕರಿಗೆ ಕಿಂಡರ್‌ಗಾರ್ಟ್ನ್ ಕ್ರಮದಿಂದ ಸಂಸ್ಕಾರವು ಚೆನ್ನಾಗುವುದು. ವಿದ್ಯಾಭ್ಯಾಸದಿಂ

ಪೂರ್ವಿಕರು ಗುರುವಿಗೆ ಸಂಬಳವೆ ಇಲ್ಲವೆಂದು ಮಾಡಿದ್ದರೆಂದು ಹೇಳಬಹುದು. ಆದು ದರಿಂದ ಉಪಾಧ್ಯಾಯರು ತಾವು ಮಾಡುವ ಕೆಲಸದ ಗೌರವವನ್ನು ಅರಿತು ಬಾಲಕ ರಲ್ಲಿ ಸಂಪೂರ್ಣ ಪ್ರೀತಿಯಿಟ್ಟು ಕೆಲಸಮಾಡಬೇಕು. ಹಾಗೆ ಮಾಡುತಿದ್ದರೆ ಅವರಿಗೆ ತಕ್ಕ ಆದಾಯವೂ ಆಗದೇ ಹೋಗದು.

***

ಉಪಾಧ್ಯಾಯರಾಗಿರುವವರಲ್ಲಿ ಅನೇಕರು ಯಾವ ಪರೀಕ್ಷೆಯನ್ನೂ ಕೊಡ ದೇ ಇರುವರು. ಇವರು ತಮ್ಮ ಯೋಗ್ಯತೆಯನ್ನು ವೃದ್ಧಿಮಾಡಿಕೊಂಡು ಮೇಲ್ಪ ಟ್ಟವರಿಗೆ ಅದನ್ನು ತಿಳಿಯಪಡಿಸುವುದಕ್ಕಾಗಿ ಯಾವುದಾದರೊಂದನ್ನಾದರೂ ಪರೀಕ್ಷೆ ಯನ್ನು ಕೊಡಬೇಕೆಂದು ತೋರುತ್ತೆ. ಲೋವರ್‌ಸೆಕೆಂಡರಿ ಪರೀಕ್ಷೆಯಾಗದಿರುವ ವರು ಆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ಪ್ರಯತ್ನಪಡಬೇಕು. ಅಷ್ಟಕ್ಕೆ ಅನುಕೂಲವಿಲ್ಲದವರು ಉಪಾಧ್ಯಾಯ ಯೋಗ್ಯತಾ ನಿರ್ಣಯಪರೀಕ್ಷೆಯಲ್ಲಿ ಕೊನೆಯ ದಾದ ಪ್ರೇಮೆರಿ ಗ್ರೇಡಿನ ಪರೀಕ್ಷೆಯನ್ನಾದರೂ ಕೊಡಬೇಕು. ಹೀಗೆ ಉಪಾಧ್ಯಾ ಯರು ತಮ್ಮತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಂಡು, ಉತ್ಸಾಹದೊಡನೆ ಕೆಲಸ ಮಾಡುತ ಬಂದರೆ—ಸರ್ಕಾರದವರು ಕ್ರಮೇಣ ಅವರಿಗೆ ಹತ್ತು ರೂಪಾಯಿಗೆ ಕಡಮೆ ಯಿಲ್ಲದ ಸಂಬಳವನ್ನೂ ಕೊಡುವರೆಂಬುದರಲ್ಲಿ ಸಂಶಯವಿಲ್ಲ.

ಕಿಂಡರ್ ಗಾರ್ಟನ್.

ಲೋಕದಲ್ಲಿ ಆಗಿರುವ ದೊಡ್ಡ ಬದಲಾವಣೆಗಳಲ್ಲಿ ಯಾವುದೇ ಆಗಲಿ ಇಂದಿ ನಿಂದ ಪ್ರಾರಂಭವಾಯಿತೆಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ. ಹಿಂ ದೂ ದೇಶದಲ್ಲಿ ಬೌದ್ಧ ಮತವು ಇಂದಿನಿಂದಲೇ ಪ್ರಾರಂಭವಾಯಿತೆಂದು ಹೇಳುವು ದಕ್ಕೆ ಯಾರಿಂದಾದೀತು. ಬುದ್ಧನು ಹುಟ್ಟುವುದಕ್ಕೆ ಮುಂಚಿನಿಂದಲೂ ಕೂಡ ಮತ

ದೇಶದ ಅಭಿವೃದ್ಧಿಗೆ ಒಗ್ಗಟ್ಟು ಮುಖ್ಯಕಾರಣ ಇದಿಲ್ಲದಿದ್ದರೆ ಮಿಕ್ಕದ್ದೆಲ್ಲ ವ್ಯರ್ಥವಾಗುವುವು. ಮುಂದಕ್ಕೆ ಈ ಗುಣವನ್ನುಂಟುಮಾಡಬೇಕಾದರೆ ಈಗಿನ ಬಾಲಕರನ್ನೆಲ್ಲವೇ ಸರಿಯಾಗಿ ತಿದ್ದಬೇಕಾದ್ದು. ಇದಕ್ಕೆ ಅನುಕೂಲ್ಯಗಳು ಕಿಂಡರ್‌ಗಾರ್ಟ್ನ ನಲ್ಲಿ ದೊರೆಯುವುವು. ಆದಿಯಿಂದಲೂ ಮಕ್ಕಳು ಒಂದುಕಡೆ ಒಟ್ಟಾಗಿ ಸೇರಿ ಪರಸ್ಪರವಾಗಿ ಉಚಿತವಾದ ಭಾವನೆಗಳೊಡನೆ ಒಂದೇ ಉದ್ದೇಶದಿಂದ ಕೆಲಸಮಾಡುವರು, ಇದರಿಂದ ಈಗಿನ ಕೊರತೆಯು ಕ್ರಮೇಣ ಕಡಮೆಯಾಗುವುದು.

ನಮ್ಮ ಪ್ರಾಚೀನ ವಿದ್ಯಾಭ್ಯಾಸ ಕ್ರಮವೆಲ್ಲ ವಿಷಯಗಳನ್ನು ಬಾಲಕರಿಗೆ ತಿಳಿಸುವುದರಲ್ಲಿ ಮಾತ್ರವೇ ಪರ್ಯವಸಿತವಾಗುತಿತ್ತು. ಇದರಲ್ಲೂ ಭಾಷೆ ಮುಂತಾದ ಆಂತಃ ಪ್ರಪಂಚ ವಿಷಯಕವಾದ ಅಂಶಗಳೇ ವಿಶೇಷವಾಗಿರುತಿದ್ದವು. ಬಹಿಃಪ್ರಪಂಚಕ್ಕೆ ಸಂಬಂಧಪಟ್ಟ ಪದಾರ್ಥಗಳ ಜ್ಞಾನವು ಕಡಮೆಯಾಗಿತ್ತು. ಕಿಂಡರ್‌ಗಾರ್ಟನ್ನಲ್ಲಿ ಬಹಿಃಪ್ರಪಂಚ ವಿಷಯವಾಗಿಯೇ ಅಂಶಗಳನ್ನು ತಿಳಿಸಬೇಕಾಗುವುದು. ಇದರಿಂದ ನಮ್ಮ ದೇಶದ ವಿದ್ಯಾಭ್ಯಾಸ ಕ್ರಮದ ಕೊರತೆಯು ಕಡಮೆಯಾಗುವುದಕ್ಕೆ ಅವಕಾಶವಾಗುವುದು. ಈ ಕಿಂಡರ್‌ಗಾರ್ಟ್ನ ಪಾಠವು ಮುಗಿಯುತಲು ಮುಂದಕ್ಕೆ ಸ್ಕೂಲುಗಳಲ್ಲಿ ಶಾಸ್ತ್ರ (Science) ಪಾಠಗಳನ್ನಿಟ್ಟುಕೊಂಡರೆ, ಜನಗಳಿಗೆ ಈಗ ಬಹಿಃಪ್ರಪಂಚಕ್ಕೆ ಸಂಬಂಧಪಟ್ಟ ವಸ್ತುಗಳ ವಿಷಯವಾಗಿರುವ ಅಜ್ಞಾನವು ಕ್ರಮೇಣ ಕಡಮೆಯಾಗುತ ಬರುವುದು.

(ಸಶೇಷ).

ಪೆಸ್ಟಲಾಜ್ಜೀಯವರ ಚರಿತ್ರೆ.

ಪೆಸ್ಟಲಾಟ್ಸೀಯವರು ಬರೆದ ಪುಸ್ತಕಗಳೆಲ್ಲೆಲ್ಲಾ ಈ ಪುಸ್ತಕವು ಜನಗಳಿಗೆ ಅತ್ಯಂತ ಪ್ರಯೋಜನಕರವಾದದ್ದು. ವಿದ್ಯಾಭ್ಯಾಸ, ರಾಜನೀತಿ, ಮಾನವ

ದಾಗಬೇಕಾದ ಮೂರು ವಿಧವಾದ ಸಂಸ್ಕಾರವೂ ಈ ಕ್ರಮದಲ್ಲಿ ಸಿದ್ಧಿಸುವುದು. ಉದಾಹರಣೆಗಾಗಿ ಒಂದೊಂದಕ್ಕೆ ಒಂದೊಂದನ್ನೂ ಹೇಳೋಣ. ಚಿತ್ರ ಬರೆಯುವುದರಿಂದ ಬಾಲಕರಿಗೆ ಬುದ್ಧಿಸಂಸ್ಕಾರವಾಗುವುದು. ಚಿತ್ರವನ್ನು ಸರಿಯಾಗಿ ಬರೆಯುವುದಕ್ಕೆ ಮುಖ್ಯವಾಗಿ ಅವಧಾನ ಬೇಕು. ಈ ಏಕಾಗ್ರತೆಯಿಂದ ಬುದ್ಧಿಗೆ ಕೂಡಲೆ ಶಕ್ತಿ ಕುದುರುವುದು. ಕಿಂಡರ್‌ಗಾರ್ಟ್ನ್ ಕ್ರಮದಲ್ಲಿ ಡ್ರಿಲ್ ಮಾಡಿಸುವುದುಂಟು. ಇತರ ವಿಧವಾದ ವ್ಯಾಯಾಮ ರೂಪವಾದ ಆಟಗಳೂ ಉಂಟು. ಇದರಿಂದ ಅವರ ದೇಹಶಕ್ತಿಯು ಹೆಚ್ಚುವುದು. ಬಾಲಕರಿಂದ ಮಾಡಿಸಬೇಕಾದ ಕರಣಗಳಲ್ಲಿ ಅವರಿಗೆ ಅನೇಕವಾಗಿ ಮರ್ಯಾದೆ ಮುಂತಾದುದೂ ಗೊತ್ತಾಗುವುದು. ಉಪಕರಣಗಳನ್ನು ಪರಸ್ಪರ ಒಬ್ಬೊಬ್ಬರಿಗೆ ಕೊಡುವುದರಲ್ಲೂ, ಉಪಾಧ್ಯಾಯರಿಂದ ತೆಗೆದುಕೊಳ್ಳುವುದರಲ್ಲೂ ಉಚಿತವಾದ ಭಾವಗಳನ್ನು ಅವರು ತೋರಿಸಬೇಕು. ಇಲ್ಲದಿದ್ದರೆ ಕಿಂಡರ್‌ಗಾರ್ಟ್ನ್ ಪಾಠದಿಂದ ಸಂಪೂರ್ಣ ಫಲವಾಗದೇ ಹೋಗುವುದು. ಹೀಗೆಯೇ ಕಿಂಡರ್‌ಗಾರ್ಟ್ನ್ ಕ್ರಮದಲ್ಲಿ ವಿದ್ಯಾಭ್ಯಾಸ ಮಾಡಿಸುವುದರಿಂದ ಬಾಲಕರಿಗೆ ಬುದ್ಧಿಸಂಸ್ಕಾರವೂ, ದೇಹದಾರ್ಢ್ಯವೂ, ನಡತೆಯೂ ಬರುವುವೆಂದು ತೋರಿಸಬಹುದು. ಕಿಂಡರ್‌ಗಾರ್ಟ್ನ್ ಪಾಠವು ಮುಖ್ಯವಾಗಿ ಮಕ್ಕಳಿಗೆ ಮೂರು ವರ್ಷ ವಯಸ್ಸಿಗೆ ಪ್ರಾರಂಭಿಸಿ ಏಳುವರ್ಷ ವಯಸ್ಸಾಗುವುದರೊಳಗೆ ಮುಗಿಯಬೇಕು. ಅಂದರೆ ಬಾಲಕರು ಈಗ ಅವ್ಯವಸ್ಥಿತವಾಗಿ ಕಳೆಯುವ ವಯಸ್ಸಿನಲ್ಲಿ ಈ ವಿದ್ಯಾಭ್ಯಾಸವು ನಡೆಯುವುದೆಂದಾಯಿತು. ಈ ಕ್ರಮದಿಂದ ಎಷ್ಟು ದೊಡ್ಡ ಪ್ರಯೋಜನವಾದಂತಾಯಿತು. ಸುಮ್ಮನೆ ಕಳೆಯುವ ಕಾಲದಲ್ಲಿ ಇಷ್ಟುಮಟ್ಟಿಗೆ ನಡೆದರೆ ಕಿಂಡರ್‌ಗಾರ್ಟ್ನ್‌ನಿಂದ ಎಷ್ಟು ಒಳ್ಳೇದು!

ಈ ಮೇಲೆ ಹೇಳಿದ ಪ್ರಯೋಜನಗಳು ಸಾಮಾನ್ಯವಾದವುಗಳು. ವಿಶೇಷವಾಗಿ ಇನ್ನೂ ಕೆಲವು ಪ್ರಯೋಜನಗಳನೇಕವಾಗಿವೆ. ಅವುಗಳನ್ನೆಲ್ಲ ಇಲ್ಲಿ ತಿಳಿಸುವುದಕ್ಕಾಗುವುದಿಲ್ಲ. ಮುಖ್ಯವಾಗಿ ಈಗ ನಮ್ಮ ದೇಶಕ್ಕೆ ಅವಶ್ಯಕವಾಗಿರುವ ಗುಣಗಳನ್ನು ಬಾಲಕರಲ್ಲುಂಟುಮಾಡುವ ಎರಡನ್ನು ಮಾತ್ರ ತಿಳಿಸುವೆವು.

ಇವುಗಳಲ್ಲಿ ಮೊದಲನೆಯದು ಒಗ್ಗಟ್ಟಾಗಿ ಕೆಲಸಮಾಡುವುದು. ಈಗ ನಮ್ಮ ದೇಶದ ಜನಗಳಲ್ಲಿ ಒಗ್ಗಟ್ಟು ಕಡಮೆ ಪರಸ್ಪರವಾಗಿ ದ್ವೇಷಾಸೂಯೆಗಳನ್ನು ತೋರಿಸುವುದರಿಂದ ದೊಡ್ಡ ಕೆಲಸವು ಯಾವುದೂ ನಡೆಯದೆ ಇರುವುದು.

ಪೆಸ್ಟಲಾಟ್ಸೀಯವರು ಈ ಗ್ರಂಥದಲ್ಲಿ ಅನೇಕ ಧರ್ಮ ಸೂಕ್ಷ್ಮಗಳನ್ನು ಬರೆದು ಇದಾರೆ. ಈ ಧರ್ಮಗಳು ಆಕಾಲದಲ್ಲಿ ಅನೇಕರಿಗೆ ರುಚಿಸಲಿಲ್ಲ, ಅಂಥಾವರು ಅನೇಕರು ಈವರನ್ನು ವೃಥಾ ನಿಂದಿಸುವುದಕ್ಕೆ ಉಪಕ್ರಮಿಸಿದರು. ಇಂಥಾವರ ಮಧ್ಯದಲ್ಲಿ ಜೀವನೋಪಾಯವು ಒದಗುವದೇ ಕಷ್ಟವಾಯಿತು. ಆದಾಗ್ಯೂ ಭಯಪಡದೇ ತಮ್ಮ ಸಿದ್ಧಾಂತಗಳನ್ನೂ ಪ್ರಚಾರಮಾಡುತ್ತಾ, ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ಮಾಡುತ್ತಾ ವಿವೇಕಶಾಲಿಗಳಾದ ಕೆಲವು ಜನರ ಪ್ರೋತ್ಸಾಹನ ದಿಂದ ಬಹುಕಾಲದಿಂದ ಬಂದಂಥಾ ಜನರ ಅಜ್ಞಾನವನ್ನು ತಮ್ಮ ಉಪನ್ಯಾಸಗಳಿಂದ ವಿವೇಚನ ಮಾಡುತ್ತಾ ಬಂದರು. ಕೆಲವು ದಿವಸಗಳಲ್ಲಿ ಇವರ ಪ್ರಯತ್ನವು ಸಫಲವಾಗುವುದಕ್ಕೆ ಪ್ರಾರಂಭವಾಯಿತು. ದವಲತ್ತು ಮಾಡತಕ್ಕ ಪ್ರಭುಗಳು, ಸಚಿವರು, ಇವರ ರಾಜನೀತಿಯನ್ನು ಧರ್ಮಸೂಕ್ಷ್ಮ ಪ್ರಶಂಸೆಗಳನ್ನು ಕೇಳಿ ಸಂತುಷ್ಟರಾಗಿ ಅವುಗಳನ್ನು ವಿಶದವಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಇವರ ಭೇಟಿಯನ್ನು ಅಪೇಕ್ಷಿಸುತ್ತಾ ಬಂದರು. ಇದರಿಂದ ಇವರು ಲಬ್ಧಪ್ರತಿಷ್ಠಿತರಾದರು. ಕ್ರಮಕ್ರಮವಾಗಿ ಇವರ ದಾರಿದ್ರ್ಯವು ಹತವಾಯಿತ.. ಬಡವರಾಗಿದ್ದಾಗ ಈವರನ್ನು ತಿರಸ್ಕಾರದಿಂದ ನೋಡುತ್ತಲಿದ್ದವರೆಲ್ಲರೂ ಇವರನ್ನು ಪುರಸ್ಕರಿಸವುದಕ್ಕೆ ಉಪಕ್ರಮಿಸಿದರು. ಕೊಂಚ ಕಾಲದೊಳಗಾಗಿ ಭೂತದಯೆಯೇ ಪೆಸ್ಟಲಾಟ್ಸೀಯವರ ರೂಪವನ್ನು ವಹಿಸಿ ಇದೆ ಎಂದು ಪ್ರಭುಗಳು ಮೊದಲುಗೊಂಡು ಇವರ ಗುಣಾತಿಶಯಗಳನ್ನು ಬಲ್ಲವರೆಲ್ಲರೂ, ಗಣನೆ ಮಾಡುವುದಕ್ಕೆ ಉಪಕ್ರಮಿಸಿದರು. ಈ ರೀತಿಯಾಗಿ ಪ್ರಭುಗಳು ಮೊದಲುಗೊಂಡು ಸಾಮಾನ್ಯರಾದ ಪ್ರಜೆಗಳ ವರಿಗೂ ಪ್ರತ್ಯಯವುಂಟಾಗುವಂತೆ ಹಾಯ್ದಾಗಾಯಿತು ಇದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅವರು ಹೇಳಿರತಕ್ಕ ಕೆಲವು ಅಂಶಗಳನ್ನು ಇಲ್ಲಿ ತಿಳಿಸತಕ್ಕದ್ದು ಅವಶ್ಯಕವಾಗಿರುವುದು, ಅವುಗಳು ಯಾವಯಾವಂದರೆ:— ಈ ಪ್ರಪಂಚವು ಜಗದೀಶ್ವರನಿಂದಾ ಸೃಷ್ಟಿಯಾದದ್ದು. ಈಶ್ವರನಿಗೆ ಕೆಲವರಲ್ಲಿ ಅಭಿಮಾನವೂ ಕೆಲವರಲ್ಲಿ ದ್ವೇಷವೂ ಇಲ್ಲ. ಆತನು ಸರ್ವತ್ರ ಸಮದೃಷ್ಟಿಯುಳ್ಳವನು, ಆತನಿಗೆ ದೊರೆಯುಮಂದೇ. ಜಾಡಮಾಲಿಯೂ ಒಂದೇ. ಸೂರ್ಯ ಚಂದ್ರಾದಿಗಳು ತಮ್ಮ ಬೆಳಕನ್ನು ಕಾಕ್ಷಸಾತವಿಲ್ಲದೇ ಸಕಲ ಪ್ರಾಣಿಗಳಿಗೂ ದೊರೆಯುವಂತೆ ಮಾಡುವ ಹಾಗೆ ದೇವರು ತನ್ನ ಪ್ರೀತಿಯನ್ನು ಎಲ್ಲರಲ್ಲಿಯೂ ಏಕ ವಿಧವಾಗಿ ಇಟ್ಟು ಇದ್ದಾನೆ. ಆದಾಗ್ಯೂ ಜನರು ತಮ್ಮ ಕರ್ತವ್ಯವನ್ನು ಮಾಡುವದರಿಂದಲೂ ಮಾಡ

ಧರ್ಮಗಳು, ಇವುಗಳ ವಿಷಯದಲ್ಲಿ ಅನೇಕ ಧರ್ಮಸೂಕ್ಷ್ಮಗಳನ್ನು ಈ ಪುಸ್ತಕದಲ್ಲಿ ಬರೆದು ಇದಾರೆ. ವಿದ್ಯಾಭ್ಯಾಸದ ವಿಷಯದಲ್ಲಿ ಇವರು ಹೇಳಿರುವ ಸಂಗತಿಗಳಲ್ಲಿ ಒಂದೆರಡನ್ನು ಉದಹರಿಸುತ್ತೇವೆ. "ಜನಗಳು ಮೂರು ವಿಧವಾಗಿರುತ್ತಾರೆ. ತಿರ್ಯಕ್ ಜಂತುಗಳಂತೆ ಆಹಾರ ನಿದ್ರಾದಿಗಳಲ್ಲಿ ಆಸಕ್ತರಾಗಿರತಕ್ಕವರು ಕೆಲವರು ವಿದ್ಯಾವಿನಯ ಸಂಪನ್ನರಾಗಿ ಸ್ವಾರ್ಥಪರರಾಗಿ ಇರತಕ್ಕವರು ಕೆಲವರು, ತಾವು ಮಾಡತಕ್ಕ ಕೆಲಸಗಳಲ್ಲೆಲ್ಲಾ ಧರ್ಮವಾರ್ಗೈಕಪರಾಯಣರಾಗಿರತಕ್ಕವರು ಕೆಲವರು, ಆಹಾರ ನಿದ್ರಾದಿಗಳೇ ಇಷ್ಟಾರ್ಥಗಳಲ್ಲಿ ಪರಾಕಾಷ್ಠೆವೆಂದು ಭಾವಿಸಿ ಇರತಕ್ಕ ಜನರಿಗೂ ಪಶುಪಕ್ಷಿ ಮೃಗಾದಿಗಳಿಗೂ ವಿಶೇಷ ವ್ಯತ್ಯಾಸ ಏನೂ ಇರುವುದಿಲ್ಲ. ವಿದ್ಯಾವಿನಯ ಸಂಪನ್ನರಾಗಿ ಇರತಕ್ಕವರಲ್ಲಿ ಸಕಲ ವಿದ್ಯೆಗಳೂ, ಕೆಲಸಗಳೂ, ಆತ್ಮಾರ್ಥವಾಗಿಯೇ ಎಂಬದಾಗಿ ತಿಳಿದುಕೊಂಡಿರತಕ್ಕವರುಂಟು. ಇವರಲ್ಲಿ ತಾವು ನ್ಯಾಸಂಗ ಮಾಡಿದ ಧರ್ಮಸೂಕ್ಷ್ಮಗಳ ಬಲದಿಂದಪರಹಿತಾರ್ಥವಾಗಿ ಮಾಡತಕ್ಕ ಕೆಲಸಗಳೇ ಆತ್ಮಾರ್ಥವಾಗಿ ಪರಿಣಮಿಸುತ್ತದೇ ಎಂದು ಭಾವಿಸಿ ಭೂತದಯೆ ಪಶ್ಚಾತ್ತಾಪವುಳ್ಳವರಾಗಿ ಪರಹಿತಾಚರಣೆಯುಳ್ಳವೇ ಆಸಕ್ತರಾಗಿರುವುದುಂಟು. ಈ ರೀತಿಯಲ್ಲಿ ಲೋಕಹಿತೈಷಿಗಳಾಗಿ ಆಗುವದರ ಮೂಲಕ ಆತ್ಮ ಹಿತವನ್ನು ಮಾಡಿಕೊಳ್ಳತಕ್ಕವರು ಉತ್ತಮರು. ಅವರು ಮಾಡಿದ ವಿದ್ಯಾಭ್ಯಾಸವೇ ವಿದ್ಯಾಭ್ಯಾಸ, ಆ ವಿದ್ಯಾಭ್ಯಾಸದ ಫಲವೇ ಇಹಪರಗಳು. ವಿದ್ಯಾವಿನಯ ಸಂಪನ್ನರಾದಾಗ್ಯೂ ಸ್ವಾರ್ಥಪರರಾಗಿ ಜೀವಿಸತಕ್ಕವರಿಗೂ ಮೃಗಗಳಂತೆ ಸದಾ ಆಹಾರನಿದ್ರಾದಿಗಳಲ್ಲಿ ಮಗ್ನರಾಗಿರತಕ್ಕವರಿಗೂ ವಿಶೇಷ ತಾರತಮ್ಯ ಏನೂ ಇಲ್ಲ. ಯಾವ ಮನುಷ್ಯನು ಸದ್ವಿದ್ಯಾಭ್ಯಾಸವನ್ನು ಮಾಡಿ, ಅವುಗಳ ಮೂಲಕವಾಗಿ ತಿಳಿದುಕೊಂಡ ಧರ್ಮಗಳನ್ನು ಅನುಷ್ಠಾನ ಮಾಡುತ್ತಾನೋ ಅವನೇ ವಿದ್ವಾಂಸನು. ಅವನ ವಿದ್ಯೆಯೇ ಅವನಿಗೂ ಅವನ ಕುಟುಂಬಕ್ಕೂ ಅವನ ದೇಶಕ್ಕೂ ಪ್ರಯೋಜನಕಾರಿಯಾಗುವುದು. ಅವನು ಅರಿಷಡ್ವರ್ಗಗಳಿಗೆ ಅಧೀನನಾಗಿ ಕೆಟ್ಟುಹೋಗದೇ ಯಶೋವಂತನಾಗಿ ತಾನು ಬದುಕುವದಲ್ಲದೇ ಹಾಗೆ ಬದುಕಲು ಅಪೇಕ್ಷೆಯುಳ್ಳವರೆಲ್ಲರಿಗೂ ಮೇಲು ಪಜ್ಞೆಯಾಗಿ ಆಚರಿಸುವನು. ತಿಳಿದುಕೊಂಡಿರತಕ್ಕ ಧರ್ಮಗಳನ್ನು ಅನುಷ್ಠಿಸಲಾರದೇ ಕಾಮಕ್ರೋಧಾದಿಗಳಿಗೆ ವಶರಾಗಿ ಇರತಕ್ಕ ಲಕ್ಷಾಂತರ ಜನಗಳಿಗಿಂತಲೂ ಇಂಥಾ ಒಬ್ಬ ಮನುಷ್ಯನ ಜೀವನವೂ ಕೂಡಾ ಧರ್ಮಪ್ರತಿಷ್ಠೆಗೆ ಅತ್ಯಂತ ಸಾಧಕವಾದದ್ದು".

ನೆಯು ವಿಷಯದಲ್ಲಿ ಸನ್ಮಾರ್ಗವನ್ನೇ ಅವಲಂಬಿಸಬೇಕೆಂಬ ನಿರ್ಬಂಧವುಳ್ಳವರಾಗಿರುವುದಿಲ್ಲ. ಇವರಿಗೆ ಸಹವಾಸಕ್ಕೆ ಇವರಂತೆಯೇ ಇರತಕ್ಕ ಜನಗಳೇ ಸಿಕ್ಕುವರು. ಇಂದ್ರಿಯ ಗ್ರಾಮಗಳನ್ನು ನಿಗ್ರಹಿಸಿ ಸನ್ಮಾರ್ಗ ಪ್ರವರ್ತಕರಾದರೆ ಉಂಟಾಗತಕ್ಕ ಫಲ ಪರಂಪರೆಗಳು ಇವರಿಗೆ ಸುಳ್ಳಾಗಿ ತೋರುವುದು. ಪಾನದ್ಯೂತಾದಿ ಸ್ವೇಚ್ಛಾಪ್ರವರ್ತನೆಗಳು ಇವರಲ್ಲಿ ಅಚಲವಾಗಿ ಬರುವುದು. ಕುಟುಂಬಗಳು ಹೀನಸ್ಥಿತಿಗೆ ಬರುವವು. ಇವರ ಬುದ್ಧಿಯು ಮಾಂದ್ಯವನ್ನು ಹೊಂದುವುದು. ಉತ್ಸಾಹವು ಕಡಮೆಯಾಗುವದು. ಸಾಹಸವು ಕಡಮೆಯಾಗುವುದು. ಈ ಹೀನಸ್ಥಿತಿಯು ದುಃಖಗಳನ್ನು ಮರೆಯುವುದಕ್ಕೋಸ್ಕರ ನಿಷಾ ಬರತಕ್ಕ ದ್ರವ್ಯಗಳನ್ನು ಸೇವಿಸಿ ಮನುಷ್ಯರೂಪವನ್ನು ಹೊಂದಿದ್ದರೂ ಮೃಗಗಳಂತೆ ನೀಚವಾದ ಅವಸ್ಥೆಯನ್ನು ಹೊಂದುವರು. ಈ ಜನರ ಬುದ್ಧಿಶಕ್ತಿಯು, ದೇಹಶಕ್ತಿಯು ಅವಿಭಾಗದಲ್ಲಿ ಸರ್ವೋತ್ಕೃಷ್ಟವಾಗಿರುವುದು. ಇವರು ಸನ್ಮಾರ್ಗದಲ್ಲಿ ಪ್ರವರ್ತಿಸಿದರೆ ರಾಜ್ಯಭಾರ ಮಾಡತಕ್ಕ ಸಾಮರ್ಥ್ಯವನ್ನು ಬಹಳ ಸುಲುಭವಾಗಿ ಹೊಂದಿ, ಲೋಕೋಪಕಾರಿಗಳಾಗಬಹುದು. ಹೀಗಿದ್ದಾಗ್ಯೂ ಇವರುಗಳೆಲ್ಲಾ ಬಾಲ್ಯದಲ್ಲಿ ಸರಿಯಾದ ಶಿಕ್ಷೆಯನ್ನು ಹೊಂದದೇ ಅತ್ಯಂತ ಶೋಚನೀಯವಾದ ಅವಸ್ಥೆಗೆ ಬರುವರು. ಇವರನ್ನು ಬಾಲ್ಯಾವಸ್ಥೆಯಲ್ಲಿ ಸರಿಯಾಗಿ ಶಿಕ್ಷಿಸತಕ್ಕ ಶಕ್ತಿಯನ್ನು ತಂದೆತಾಯಿಗಳು ಹೊಂದದೇ ಇರಬಹುದು. ಅಂಥಾ ಸಂದರ್ಭಗಳಲ್ಲಿ ಅವರಿಗೆ ತಂದೆತಾಯಿಗಳಿದ್ದಾಗ್ಯೂ ಅವರನ್ನು ಅನಾಥರೆಂದು ಭಾವಿಸಿ ಸರಕಾರದವರಾಗಲೀ ಅಥವಾ ಉನ್ನತ ಸ್ಥಿತಿಯಲ್ಲಿರತಕ್ಕ ದೇಶೀಯರಾಗಲೀ ಅವರಿಗೆ ಸರಿಯಾದ ಶಿಕ್ಷೆಯನ್ನು ಕಲ್ಪಿಸಬೇಕು. ಹಾಗೆ ಮಾಡದ ಪಕ್ಷದಲ್ಲಿ ಆ ಜನರು ಹೀನಸ್ಥಿತಿಗೆ ಬರುವದಲ್ಲದೇ ರಾಜ್ಯವೂ ಹೀನಸ್ಥಿತಿಗೆ ಬರುವದರಲ್ಲಿಯಾವ ಸಂಶಯವೂ ಇಲ್ಲ. ಸರಿಯಾದ ಶಿಕ್ಷೆಯನ್ನು ಹೊಂದಿದ ಜಾಡವಾಲಿಗಳಿಗೂ ಪ್ರಭುತ್ವ ಮಾಡುವುದಕ್ಕೆ ಶಕ್ತಿಯುಂಟಾಗುವದು. ಅಶಿಕ್ಷಿತರಾದ ಪ್ರಭುಗಳು ಜಾಡವಾಲೀ ಕೆಲಸಕ್ಕೂ ಕೂಡ ಅನರ್ಹರಾಗಿ ಆಗುವುದೂ ಉಂಟು. ಆದ್ದರಿಂದ ಸರ್ವರಿಗೂ ಸನ್ಮಾರ್ಗಾವಲಂಬಿಗಳಾಗುವುದಕ್ಕೆ ತಕ್ಕ ವಿದ್ಯಾಭ್ಯಾಸವ ಏರ್ಪಾಡುಬಾಲ್ಯದಲ್ಲಿ ಇದ್ದೇ ಇರಬೇಕು.

ಲೋಕದಲ್ಲಿ ಅನೇಕ ವೃತ್ತಿಗಳುಂಟು. ಯಾವ ವೃತ್ತಿಯಲ್ಲಿ ಪಾಂಡಿತ್ಯವಾಗಬೇಕಾಗಿದ್ದಾಗ್ಯೂ ಆವೃತ್ತಿಗೆ ಸಂಬಂಧಪಟ್ಟ ಕೆಲಸವನ್ನು ಬಾರಿಬಾರಿಗೂ ಮಾಡುತ್ತಾ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಅನೇಕ ವರ್ಷಗಳು ಕಳೆದರೆ ಅನಂತರ

ೀ ಹೋಗುವದರಿಂದಲೂ ಕೆಲವರು ಉಪಪನ್ನರಾಗಿಯೂ ಕೆಲವರು ದರಿದ್ರರಾಗಿಯೂ, ಕೆಲವರು ಆರೋಗ್ಯದೃಢಕಾಯರಾಗಿಯೂ, ಕೆಲವರು ನಾನಾವಿಧವಾದ ರೋಗದಿಂದ ೀಡಿತರಾಗಿಯೂ ಇರುತ್ತಾರೆ. ಇದಕ್ಕೆ ಅವರ ಕೆಲಸಗಳು ಕಾರಣವೇ ಹೊರತು ೀವರು ಎಂದಿಗೂ ಕಾರಣಭೂತನಲ್ಲ. ಸಕಲರಿಗೂ ದೇಹಶಕ್ತಿ, ಬುದ್ಧಿಶಕ್ತಿ, ಆರೋಗ್ಯ ಶಕ್ತಿಗಳು ಉಂಟಾಗಿ ಸಕಲರೂ ಸೌಖ್ಯವಾಗಿರುವುದೇ ದೇವರಿಗೆ ಅಭಿಮತವು. ಈ ರೀತಿಯಲ್ಲಿರುವುದಕ್ಕೆ ಸಾಧಕವಾದ ಶಕ್ತಿಗಳನ್ನೆಲ್ಲಾ ದೇವರು ಮನುಷ್ಯನಿಗೆ ಕೊಟ್ಟು ಇದಾನೆ. ಅವುಗಳನ್ನು ಸದ್ವಿನಿಯೋಗ ಮಾಡಿದರೆ ಒಳ್ಳೇ ಫಲಪ್ರಾಪ್ತಿಯಾಗುವುದು ದುರ್ವಿನಿಯೋಗ ಮಾಡಿದರೆ ಕೆಟ್ಟ ಫಲಪ್ರಾಪ್ತಿಯಾಗುವುದು. ಇಷ್ಟವಾದ ರೀತಿಯಲ್ಲಿ ತನ್ನ ಶಕ್ತಿಯನ್ನು ವಿನಿಯೋಗಿಸತಕ್ಕ ಸ್ವಾತಂತ್ರ್ಯವನ್ನು ಮನುಷ್ಯನು ಹೊಂದಿರುತ್ತಾನೆ. ಆದ್ದರಿಂದ ಅವನ ಫಲವು ಅವನ ಕರ್ಮಕ್ಕೆ ಅನುಸಾರವಾಗಿರುವುದು. ಕೆಟ್ಟ ಕರ್ಮಗಳನ್ನು ಮಾಡಿ ಅದರ ಫಲವನ್ನು ಅನುಭವಿಸುವವರಿಲ್ಲವೆಂದರೆ ತೆಪ್ಪವಲ್ಲವೇ ? ಸರ್ವರೂ ತಮ್ಮ ತಮ್ಮ ಪುಣ್ಯ ಪಾಪಗಳ ಫಲವನ್ನು ಅನುಭವಿಸಿಯೇ ತೀರಬೇಕು. ಆದ್ದರಿಂದ ಜನರಿಗೆ ದಾರಿದ್ರ್ಯವು, ರೋಗಾದಿ ಸಂಕಟಗಳೂ ನಿವಾರಣೆಯಾಗಿ ಸ್ವತಂತ್ರವಾಗಿಯೂ, ಗೌರವವಾಗಿಯೂ ಇರತಕ್ಕ ಜೀವನವು ಉಂಟಾಗಬೇಕಾದರೆ ಬಾಲ್ಯದಿಂದ ಅವರ ಕೈಲಿ ಉತ್ತಮ ಕರ್ಮಗಳನ್ನು ಮಾಡಿಸಬೇಕು. ಅಂಥಾ ಉತ್ತಮ ಕರ್ಮಗಳು ಯಾವವು ? ಅವುಗಳನ್ನು ಹ್ಯಾಗೆ ಮಾಡಿಸುವದು ? ಬಾಲ್ಯದಿಂದ ಸದ್ವಿದ್ಯಾಭ್ಯಾಸವನ್ನು ಮಾಡಿಸಿ, ಸದ್ಧರ್ಮಗಳನ್ನು ಅನುಷ್ಠಿಸುವಂತೆ ಮಾಡುವುದು ಮತ್ತು ದುರ್ಮಾರ್ಗಕ್ಕೆ ಎಳೆಯತಕ್ಕ ಇಂದ್ರಿಯಗಳಿಗೆ ಪರವಶರಾಗಿ ದುರ್ಮಾರ್ಗತಪ್ಪಿ ನಡೆದುಕೊಳ್ಳುವವರಿಗೆ ತಪ್ಪದೇ ಉಂಟಾಗತಕ್ಕ ಅನರ್ಥಗಳನ್ನು ತೋರಿಸಿ ಜನರನ್ನು ಜಿತೇಂದ್ರಿಯರನ್ನಾಗಿ ಮಾಡುವುದು. ಇವೇ ಜನರನ್ನು ಉದ್ಧಾರಮಾಡತಕ್ಕ ಕರ್ಮಗಳು. ಈ ಕರ್ಮಗಳನ್ನು ಮಾಡುವುದರಿಂದ ಜನರಿಗೆ ಸನ್ಮಾರ್ಗಾವಲಂಬನೆಯು ಅದಕ್ಕೆ ಅನುರೂಪವಾದ ಫಲವು ತಪ್ಪದೇ ದೊರಿಯುವದು.

ಬಹಳ ದಾರಿದ್ರ್ಯಸ್ಥಿತಿಯಲ್ಲಿಯೂ ಇರತಕ್ಕ ಕುಟುಂಬಗಳು ಅನೇಕವಾಗಿರುತ್ತವೆ. ಅಂಥಾ ಕುಟುಂಬಕ್ಕೆ ಸೇರಿದವರಿಗೆ ದಾರಿದ್ರ್ಯದ ದೋಷದಿಂದ ವಿದ್ಯಾಭ್ಯಾಸಕ್ಕೆ ಅವಕಾಶವಿರುವದಿಲ್ಲ. ಆದರಿಂದಲೇ ಅವರಿಗೆ ತಾರತಮ್ಯಜ್ಞಾನವುಂಟಾಗುವುದಿಲ್ಲ. ಅವರು ಅನ್ನ ವಸ್ತ್ರಗಳಿಗೆ ಇಲ್ಲದೇ ತಾಪತ್ರಯ ಪಡುತ್ತಾ ಸಂಸಾರ

ಯುಗಳೂ ಕರ್ಮಾರ್ಥಕಕೃತ್ಪ್ರತ್ಯಯಗಳೂ ಬಾರದಿದ್ದಾಗ ಎಂದರೆ ಕರ್ತೃರ್ಥದಲ್ಲಿ ಆಖ್ಯಾತಪ್ರತ್ಯಯವನ್ನೂ ಕೃತ್ಪ್ರತ್ಯಯವನ್ನೂ ಮಾಡಿದ್ದರೆ ಆಯಾಯ ಧಾತ್ವರ್ಥ ಮುಖ್ಯ ಕ್ರಿಯೆ ಯಿಂದುಂಟಾದ ಮುಖ್ಯ ಫಲಕ್ಕೆ ಆಶ್ರಯವಾದ ವಸ್ತುವಾಚಕದ ಮೇಲೆ ಬರುವುದು. ಆ ವಸ್ತುವೇ ಆ ಧಾತುವಿಗೆ ಕರ್ಮವಾಗಿರುವುದು. ಆ ಕರ್ಮವು ನಿರ್ವರ್ತ್ಯವೆಂತಲೂ, ವಿಕಾರ್ಯವೆಂತಲೂ, ಪ್ರಾಪ್ಯವೆಂತಲೂ ಮೂರು ತೆರವಾಗಿರುವುದು.

(1) ಇವುಗಳಲ್ಲಿ,—"ಯನ್ನಿರ್ವರ್ತ್ಯತೆಪ್ರಾಗಸದವಸ್ಥ್ಯಂ ಸತ್ತಾಪ್ರದುರ್ಭಾವ್ಯತೆತನ್ನಿರ್ವರ್ತ್ಯಂ" ಎಂಬ ವ್ಯುತ್ಪತ್ತಿಯಿಂದ ಯಾವದು ಪೂರ್ವದಲ್ಲಿ ಯಾವುದೋ ಒಂದು ರೂಪದಲ್ಲಿದ್ದ ವಸ್ತುವು ಮತ್ತೊಂದು ರೂಪವಾಗಿ ಮಾಡಲ್ಪಡುವುದೊ ಅದೇ ನಿರ್ವರ್ತ್ಯಕರ್ಮವೆಂದು ತಿಳಿಯಬೇಕು.

(2) "ಯದ್ವಿಕ್ರಿಯತೆ ಸದೇವಾವಸ್ಥಾಂತರಂನೀಯತೇತದ್ವಿಕಾರ್ಯಂ" ಎಂಬ ವ್ಯುತ್ಪತ್ತಿಯಿಂದ ಮೊದಲು ಇದ್ದ ವಸ್ತುವೆ ಕಾರಣಾಂತರದಿಂದ ವಿಕಾರವನ್ನು ಹೊಂದುವುದು ಯಾವುದೋ ಅದೇ ವಿಕಾರ್ಯಕರ್ಮವೆಂದರ್ಥವಾಗುವುದು. ಇಂಥಾ ವಿಕಾರ್ಯವೆಂಬ ಕರ್ಮವು ಪೂರ್ವರೂಪ ನಾಶದಿಂದ ವಿಕಾರವನ್ನು ಹೊಂದುವದಾಗಿಯೂ ಪೂರ್ವರೂಪ ನಾಶವಿಲ್ಲದೆ ವಿಕಾರವನ್ನು ಹೊಂದುವದಾಗಿಯೂ ಇರುವುದರಿಂದ ಎರಡು ಭಾಗಗಳಾಗಿರುವುದು.

(3) "ಯತ್ತುನನಿವರ್ತ್ಯತೆ ನಾಪ್ಯನ್ಯಥಾಕ್ರಿಯತೆ ಅಪಿತುಸದೇವಪ್ರಾಪ್ಯತೆ ನಿಷ್ಪಯಿತಾಕ್ರಿಯತೆ ಇತಿತತ್ಪ್ರಾಪ್ಯಂ" ಎಂಬ ವ್ಯುತ್ಪತ್ತಿಯಿಂದ ಯಾವುದು ನಿರ್ವರ್ತ್ಯವೂ ಅಲ್ಲದೆ ವಿಕಾರ್ಯವೂ ಅಲ್ಲದೆ ಇದ್ದರೂಪದಲ್ಲೇ ಇದ್ದು ಕರ್ತೃವಿನ ಕ್ರಿಯೆಗೆ ನಿಷ್ಪಯೀಕರಿಸಲ್ಪಡುವುದೊ ಅದೇ ಪ್ರಾಪ್ಯಕರ್ಮವೆಂಬುವುದು.

ಹೀಗೆ ಸಾಮಾನ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ಕರ್ಮಗಳಿಗೆ ಕ್ರಮವಾಗಿ ಉದಾಹರಣೆಗಳು, ಅವಾವುವೆಂದರೆ,—ಕುಂಬಾರನು ಗಡಿಗೆಯನ್ನು ಮಾಡಿದನು, ಮನೆಯನ್ನು ಕಟ್ಟಿದನು, ಅನ್ನವನ್ನು ಮಾಡಿದನು, ಇವೇ ಮೊದಲಾದ ವಾಕ್ಯಗಳಲ್ಲಿ ಪೂರ್ವದಲ್ಲಿ ಬೇರೆಬೇರೆ ರೂಪದಲ್ಲಿದ್ದ ವಸ್ತುಗಳೆನ್ನು ಆ ರೂಪಕ್ಕೆ ಸರ್ವಥಾ ನಾಶವಿಲ್ಲದೆ ಮತ್ತೊಂದು ರೂಪದಲ್ಲಿ ಪಾದುರ್ಭವಿಸಿರುವ ಗಡಿಗೆ ಮೊದಲಾದವುಗಳೇ ನಿರ್ವರ್ತ್ಯಕರ್ಮಗಳೆಂದರಿಯುದು. ಹೇಗೆಯೆ ಬಿಲ್ಲನ್ನು ಮಾಡಿದನು,

ಆ ಕೆಲಸವನ್ನು ಸರಿಯಾಗಿ ಮಾಡತಕ್ಕ ಶಕ್ತಿಯು ಉಂಟಾಗುತ್ತದೆ. ಈ ವಿಧವಾದ ಅಭ್ಯಾಸವು ಆಗದೇ ಒಂದೇ ಅವರ್ತಿ ಯಾವ ಕೆಲಸವನ್ನೂ ಚೆನ್ನಾಗಿ ಮಾಡಿಕೊಳ್ಳುವುದಕ್ಕೆ ಆಗುವದಿಲ್ಲ. ಬೀದಿ ಗುಡಿಸುವದು ಮೊದಲುಗೊಂಡು ಪ್ರಭುತ್ವ ಮಾಡತಕ್ಕ ವೃತ್ತಿಯವರಿವಿಗೂ ಎಲ್ಲಾ ವೃತ್ತಿಗಳಲ್ಲಿಯೂ ಅಭ್ಯಾಸಜನ್ಯವಾದ ಅನುಭವವು ಬೇಕು. ಕುದುರೆ ಮೊದಲಾದ ಪ್ರಾಣಿಗಳಿಗೂ ಕೂಡಾ ಅವುಗಳು ಮಾಡಬೇಕಾದ ಕೆಲಸಗಳಲ್ಲಿ ಕ್ರಮಕ್ರಮವಾಗಿ ಅಭ್ಯಾಸಮಾಡಬೇಕು. ಹಾಗಿಲ್ಲದ ಪಕ್ಷದಲ್ಲಿ ಅವುಗಳು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುವದಿಲ್ಲ. ಆದ್ದರಿಂದ ಜನರು ತಾವು ಅವಲಂಬಿಸುವ ವೃತ್ತಿಗೆ ಬೇಕಾದ ಶಿಕ್ಷೆಯನ್ನು ಬಾಲ್ಯದಲ್ಲಯೇ ಹೊಂದಿ ಆ ಕೆಲಸಗಳಲ್ಲಿ ಚತುರರಾದರೆ ನಿರಾಯಾಸವಾಗಿ ಜೀವನೋಪಾಯವನ್ನು ಯಶಸ್ಸನ್ನೂ ಸಂಪಾದಿಸಿಕೊಂಡು, ಸ್ವಶಕ್ತಿಬಲದಿಂದ ಬದುಕುವರು. ಇಂಥಾ ಶಿಕ್ಷೆಯನ್ನು, ತಂದೆ ತಾಯಿಗಳಾಗಲೀ ಸರಕಾರದವರಾಗಲೀ ಅಥವಾ ಲೋಕಾಭಿಮಾನಿಗಳಾದ ಇತರ ಪ್ರಜೆಗಳೇ ಆಗಲಿ ಸರ್ವರಿಗೂ ಬಾಲ್ಯದಾರಭ್ಯ ಮಾಡಿಸುತ್ತಾ ಬರಬೇಕು. ಹೀಗೆ ಮಾಡಿಸುವದರಿಂದ ಸರಕಾರವೂ, ದೇಶವೂ, ಜನರೂ ಎಲ್ಲರೂ ಉನ್ನತಸ್ಥಿತಿಗೆ ಬರುವರು. ಈ ವಿಷಯದಲ್ಲಿ ಉದಾಸೀನ ಮಾಡಿದರೆ ಎಲ್ಲರೂ ಹೀನಸ್ಥಿತಿಗೆ ಬರುವದರಲ್ಲಿ ಯಾವ ಸಂಶಯವೂ ಇಲ್ಲ.

ವ್ಯಾಕರಣ ಶಾಸ್ತ್ರ ೨೦.

ದ್ವಿತೀಯಾವಿಭಕ್ತಿ ಪ್ರಕರಣಂ.

ಹಿಂದಿನ ಸಂಚಿಕೆಯಲ್ಲಿ ಪ್ರಥಮಾ ವಿಭಕ್ತಿಯು ಸಾಮಾನ್ಯವಾಗಿ ಹೇಳಲ್ಪಟ್ಟಿರುವುದು. ಇಲ್ಲಿ ದ್ವಿತೀಯಾ ವಿಭಕ್ತಿಯು ಹೇಳಲ್ಪಡುವುದು. ದ್ವಿತೀಯಾ ವಿಭಕ್ತಿಯು ಸಾಮಾನ್ಯವಾಗಿ ಸಕರ್ಮಕ ಧಾತುಗಳ ಮೇಲೆ ಕರ್ಮಾರ್ಥಕಾಖ್ಯಾತ ಪ್ರತ್ಯ

ಗಳು ಅನೇಕ ದೊರೆಯುವದರಿಂದ ವ್ಯಾಕರಣದಲ್ಲಿ ಈ ವಿಷಯವು ಹೇಳಲ್ಪಟ್ಟಿರುವುದು.

(3) ಅಕರ್ಮಕ ಧಾತುಗಳಿಗೆ,—ತಾಯಿ ಕೂಸನ್ನು ಮಲಗಿಸಿದಳು, ಕೂಸು ಮಲಗಿತು, ಅದನ್ನು ತಾಯಿ ಮಲಗಿಸಿದಳು ಎಂದು ಮೊದಲಾಗಿ ಪ್ರಯೋಗಗಳನ್ನು ಊಹಿಸಿಕೊಳ್ಳಬೇಕು.

ಹೀಗೆ ಮೇಲೆ ಹೇಳಿದ ಮೂರು ವಿಧವಾದ ಧಾತುಗಳನ್ನು ಹೊತ್ತು ಉಳಿದ ಧಾತುಗಳ ಪ್ರಯೋಗವಿದ್ದರೆ ಪ್ರಯೋಜ್ಯಕರ್ತೃವಿನಲ್ಲಿ ದ್ವಿತೀಯಾ ವಿಭಕ್ತಿಯು ಬರಲಾರದು. ಆದರೆ ಗುರು ಶಿಷ್ಯನನ್ನು ವ್ಯಾಕರಣವನ್ನು ಓದಿಸಿದನು. ಮೊದಲಾದ ಪ್ರಯೋಗವಿರುವದರಿಂದ, ಜ್ಞಾನಾರ್ಥಕ, ಅಶನಾರ್ಥಕ, ನಮಸ್ಕಾರಾರ್ಥಕ, ಧಾತುಗಳ ಪ್ರಯೋಗವಿದ್ದಾಗ ಮಾತ್ರ ಪ್ರಯೋಜ್ಯ ಕರ್ತೃವಿನಲ್ಲಿ ಎಂದರೆ ಪ್ರೇರ್ಯನಲ್ಲಿ ದ್ವಿತೀಯಾ ವಿಭಕ್ತಿಯೂ ತೃತೀಯಾವಿಭಕ್ತಿಯೂ, ಬರುವದು. ಆದುದರಿಂದಲೆ, ಗುರು ಶಿಷ್ಯನಿಂದ ವ್ಯಾಕರಣವನ್ನು ಓದಿಸಿದನು. ತಂದೆ ಮಗನಿಂದ ಕಥೆಯನ್ನು ಹೇಳಿಸಿದನು. ತಾಯಿ ಮಗುವನ್ನು ಎರಗಿಸಿದಳು. ಇವು ಮೊದಲಾಗಿ ಲೋಕದಲ್ಲಿ ಹೇಳುವವು. ಮತ್ತು, ನಮಸ್ಕಾರಾರ್ಥಕ ಧಾತುಗಳಿದ್ದರೆ ಚತುರ್ಥೀ ವಿಭಕ್ತಿಯನ್ನು ಉಪಯೋಗಿಸುವದುಂಟು.—ಮತ್ತು ದ್ರವ್ಯಗಳಿಂದಲೂ, ಗುಣಗಳಿಂದಲೂ ಕ್ರಿಯೆಗಳಿಂದಲೂ, ಕಾಲಕ್ಕೂ, ಮೂರ್ಗಕ್ಕೂ ನಿರಂತರ ಸಂಬಂಧವು ತೋರುತ್ತಿದ್ದರೂ ಆ ಕಾಲವಾಚಕ ಶಬ್ದದ ಮೇಲೂ, ಮೂರ್ಗವಾಚಕ ಶಬ್ದದಮೇಲೂ, ದ್ವಿತೀಯೆ ಬರುವುದು.

ಹಾಲು.

ಲೋಕದಲ್ಲಿ ಹಾಲು ಅನೇಕವಿಧವಾದ ಗಳುಂಟು. ಅದರಲ್ಲಿ ಎಲ್ಲಾ ಹಾಲು ಸಾರ್ವತ್ರಿಕ ಆಹಾರವೆನ್ನಿಸಿಕೊಳ್ಳುವದು. ಹಾಲುಗಳಲ್ಲಿ ಅನೇಕಬಗೆ ಹಾಲುಗಳುಂಟು. (1) ಎದೇಹಾಲು, (2) ಹಸುವಿನಹಾಲು, (3) ಎಮ್ಮೆಹಾಲು

ಮೊದಲಾದುವು ವಿಕಾರ್ಯಕ್ಕೂ, —ಊರನ್ನು ಹೊಂದಿದನು ಮೊದಲಾದುವು ಪ್ರಾಪ್ಯಕ್ಕೂ, ಉದಾಹರಣೆಗಳೆಂದು ತಿಳಿಯತಕ್ಕದ್ದು.

ಇಂಥಾಕರ್ಮಗಳಲ್ಲಿ ದ್ವಿತೀಯಾವಿಭಕ್ತಿಯು ಬರುವುದು ಮತ್ತು ಗತ್ಯರ್ಥಕಗಳಾದ ಧಾತುಗಳಿನ್ನೂ, ಶಬ್ದಾರ್ಥಕಗಳಾದ ಧಾತುಗಳನ್ನೂ, ಅಕರ್ಮಕಧಾತುಗಳನ್ನೂ ಪ್ರೇರಣಾರ್ಥಕ ಇಸುಪ್ರತ್ಯಯಾಂತಗಳನ್ನಾಗಿ ಪ್ರಯೋಗಿಸಿದಾಗ ಅವುಗಳಲ್ಲಿ ಪ್ರೇಯ್ಯರ್ನಾವ್ಯದೋತಡಾವ್ಚಕದ ಮೇಲೆಯೂ ದ್ವಿತೀಯಾವಿಭಕ್ತಿಯು ಬರುವುದು.

ಇವುಗಳಿಗೆ ಕ್ರಮವಾಗಿ ಉದಾಹರಣೆಗಳು.

(1) ಗತ್ಯರ್ಥಕಧಾತುಗಳಿಗೆ—ದೊರೆಯು ಅಳನ್ನು ಊರನ್ನು ಹೊಂದಿಸಿದನು. ಇಲ್ಲಿ ಧಾತುವಿನ ಮೇಲೆ ಇಸುಪ್ರತ್ಯಯವನ್ನು ಮಾಡದೆ ಇದ್ದಾಗ, ಅಳು ಊರನ್ನು ಹೊಂದಿದನು, ಎಂದು ಅಳುಎಂಬುವುದು ಕರ್ತೃವಾಗಿರುವುದು. ಅದೇ ಪ್ರೇರಣಾರ್ಥದಲ್ಲಿ ಇಸುಪ್ರತ್ಯಯವನ್ನ ಮಾಡಿದಾಗ ಕರ್ಮವಾಗುವುದು, ಆದುದರಿಂದಲೆ ಅಳು ಎಂಬುವದರಮೇಲೆ ದ್ವಿತೀಯಾವಿಭಕ್ತಿಯುಬಂದಿರುವುದು. ಇವನಿಗೆ ಪ್ರೇರಕನಾದವನು ಬೇರೆಯುವನಾದುದರಿಂದ ದೊರೆಎಂಬ ಶಬ್ದದಮೇಲೆ ಕರ್ತೃರ್ಥಕಾಖ್ಯಾತಪ್ರತ್ಯಯವಿರುವವರಿಂದ ಪ್ರಥಮಾವಿಭಕ್ತಿ ಬಂದಿರುವುದು. ಹೀಗೆಯೇ ಇಸುಪ್ರತ್ಯಯಾಂತಗಳಾದ ಗತ್ಯರ್ಥಕ ಧಾತುಗಳ ಪ್ರಯೋಗವಿದ್ದೆಡೆಗಳಲ್ಲಿ ಊಹಿಸಿಕೊಳ್ಳಬೇಕು. ಆದರೆ ವ್ಯಾಕರಣರೀತಿಯಲ್ಲಿ ಮೇಲೆ ಹೇಳಿದ ಉದಾಹರಣೆಯಲ್ಲಿ ಎರಡುಕರ್ಮಗಳಿಗೆ ಪ್ರಯೋಗವಿದ್ದರೂ ವ್ಯವಹಾರದಲ್ಲಿ ಎರಡುಕರ್ಮಪದಗಳುಳ್ಳ ಪ್ರಯೋಗವು ಅಪೂರ್ವವಾಗಿರುವುದು.

(2) ಶಬ್ದಾರ್ಥಧಾತುಗಳಿಗೆ—ತಂದೆಯು ಮಗುವನ್ನು ಒಳ್ಳೇಮಾತನ್ನು ಆಡಿಸಿದನು. ಇಲ್ಲಿಯೂ ಮೇಲೆ ಹೇಳಿರುವಂತೆ, ಮಗು ಒಳ್ಳೇಮಾತನ್ನಾಡಿತು, ತಂದೆಯು ಆಡಿಸಿದನು, ಎಂದು ಇಸುಪ್ರತ್ಯಯವನ್ನು ಮಾಡುವದಕ್ಕೆ ಮುಂಚೆ ಕರ್ತೃವಾಗಿದ್ದ ಪದವು ಈಗ ಕರ್ಮವಾಗಿ ದ್ವಿತೀಯಾವಿಭಕ್ತಿಯನ್ನು ಹೊಂದಿರುವುದೆಂದು ತಿಳಿಯಬೇಕು. ಆದರೆ ಲೋಕದಲ್ಲಿ ಮಾತ್ರ ತಂದೆಯು ಮಗುವಿನಿಂದ ಒಳ್ಳೇಮಾತನ್ನಾಡಿಸಿದನು, ಎಂದು ಪ್ರಸಿದ್ಧವಾಗಿ ಪ್ರಯೋಗಿಸುವರೆಹೊರ್ತು ಹೀಗೆ ಎರಡುಕರ್ಮವಾಗಿ ಉಪಯೋಗಿಸುವದಿಲ್ಲ.—ಆದರೂ ದೊಡ್ಡದೊಡ್ಡ ಗ್ರಂಥಗಳಲ್ಲಿ ಇಂಥಾಪ್ರಯೋಗ

ಗೊತ್ತುವಾಡಬಹುದು. ಆದರೆ ಆ ಹಾಲಿನಲ್ಲಿ ರೋಗಗಳು ಸೊಂಕು ಇರುವದೊ ಇಲ್ಲವೊ ಅದನ್ನು ಗೊತ್ತು ಮಾಡುವದಕ್ಕೆ ಆಗುವದಿಲ್ಲ. ಆದರೆ ಅನೇಕ ಡಾಕ್ಟರುಗಳು ಹಾಲನ್ನು ಚೆನ್ನಾಗಿ ಕಾಯಿಸಿಬಿಟ್ಟರೆ ದೋಷಗಳು ಯಾವದಿದ್ದರೂ ಹೋಗುತ್ತದೆಂದು ಹೇಳುತ್ತಾರೆ. ಕೆಲವುಜನ ವೈದ್ಯರು ಚೆನ್ನಾಗಿ ಕಾಯಿಸುವದರಿಂದ ಜಲದೋಷಗಳು ಯೇನಾದರೂ ಇದ್ದರೆಹೊಗುವದೇಹೊರ್ತು ಹಾಲುಕೆಡತಕ್ಕ ಹಸುಗಳಲ್ಲಿ ರೋಗವಿದ್ದ ಪಕ್ಷದಲ್ಲಿ ಆ ರೋಗದ ದೋಷವು ಕಾಯಿಸುವದರಿಂದ ಸಂಪೂರ್ಣವಾಗಿ ಪರಿಹಾರವಾಗುವದಿಲ್ಲ ಎಂದು ಹೇಳುತ್ತಾರೆ. ಹಾಲು ಮಕ್ಕಳಿಗೆ ದೇಹಪುಷ್ಟಿಗೆ ಬೇಕಾದ ಸಮಸ್ತ ಪದಾರ್ಥಗಳನ್ನು ಸರಪರಾಜು ಮಾಡತಕ್ಕದ್ದಾದಾಗ್ಯೂ ದೊಡ್ಡವರಿಗೆ ಇದೆ ರೀತಿಯುಲ್ಲಿ ಆಚರಿಸಲಾರದು. ಹಾಗೆ ಆಚರಿಸಬೇಕಾದರೆ ದೊಡ್ಡವರು ಬಹಳ ಹಾಲನ್ನು ಆಚರಿಸಬೇಕಾಗುತ್ತದೆ ಹಾಲಿನಿಂದ ಮೊಸರು, ಬೆಣ್ಣೆ, ಬೆಣ್ಣೆಯಿಂದ ತುಪ್ಪ ಸರಪರಾಜು ಆಗುತ್ತವೆ. ಇದು ಯಾವದಾದರೂ ಒಂದು ರೂಪದಿಂದ ಹಾಲು ಆಬಾಲ ವೃದ್ಧರಿಗೂ ಸೇವನಾರ್ಹವಾಗುತ್ತದೆ. ಹಾಲು, ಬೆಣ್ಣೆ, ಮೊಸರು, ಮೊದಲಾದ ವುಗಳು ಪ್ರಾಣಿಗಳ ಶರೀರ ಸಂಬಂಧವುಳ್ಳವುಗಳಾದ್ದರಿಂದ ಮಾಂಸಾಹಾರಕ್ಕೆ ಸಮಾನವಾದದ್ದೆಂದು ಕೆಲವರು ಅನ್ನುವದುಂಟು. ಮಾಂಸವು ಪ್ರಾಣಿಹಿಂಸೆಯಿಂದ ಉತ್ಪನ್ನವಾದ ಆಹಾರವು ಈ ಪದಾರ್ಥಗಳ ಉತ್ಪತ್ತಿಗೆ ಅಂಥಾ ಹಿಂಸೆ ಯಾವದೂ ಇರವದಿಲ್ಲ. ಆದ್ದರಿಂದ ಇವುಗಳ ಸೇವನೆಯು ಮಾಂಸಾಹಾರದೊಡನೆ ಹೋಲಿಸುವದು ಸಮಂಜಸವಾಗಿ ತೋರುವದಿಲ್ಲ.

ಭೂಗೋಳಶಾಸ್ತ್ರ.

ಈ ಶಾಸ್ತ್ರವು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿವೆ. ಇದರಲ್ಲಿ ಮೊದಲನೇ ಭಾಗವು ಭೂಮಿಯ ಆಕಾರವನ್ನೂ, ಅದರ ಗಾತ್ರವನ್ನೂ, ಅದಕ್ಕೂ ಇತರ ಗ್ರಹಗಳಿಗೂ ಇರತಕ್ಕ ಸಂಬಂಧವನ್ನೂ ತೋರಿಸುತ್ತದೆ. ಎರಡನೆಯ ಭಾಗವು ನಿಮ್ನೋನ್ನತಿಗೆ ಗೋಚರವಾಗತಕ್ಕ ಬೆಟ್ಟ, ಕಣಿವೆ, ನದಿಗಳು, ಪರ್ವತಗಳು, ಅಗ್ನಿ ಪರ್ವತ ಭೂಕಂಪ, ಕಾಡುಗಳು, ಜಲಪತನಗಳು, ಗಾಳಿ, ಹಿಮ, ಮಳೆ, ಮೇಘ

(4) ಆಡಿನಹಾಲು, (5) ಕತ್ತೆ ಕುದುರೆ ಮೊದಲಾದ ಚತುಷ್ಪಾದ ಜಂತುಗಳಹಾಲು. ಈ ಹಾಲುಗಳಲ್ಲಿ ಕತ್ತೆ ಮೊದಲಾದ ಚತುಷ್ಪಾದ ಜಂತುಗಳ ಹಾಲು ಔಷಧಗಳಿಗೆ ಉಪಯೋಗಿಸುತ್ತಾರೆ. ವಕ್ಕಳಿಗೆ ಎದೇಹಾಲನ್ನೂ ಹಸುವಿನ ಹಾಲನ್ನೂ ಉಪಯೋಗಿಸುವರು. ಹಸುವಿನ ಹಾಲು ಸರ್ವೋತ್ಕೃಷ್ಟವಾದುದು. ಹಾಲಿನಲ್ಲಿ ಮನುಷ್ಯನ ದೇಹಪೋಷಣೆಗೆ ಬೇಕಾದ ಸಕಲ ಪದಾರ್ಥಗುಣಗಳೂ ಇರುತ್ತವೆ. ಮಕ್ಕಳಿಗೆ ಮುಖ್ಯವಾಗಿ ಇದರಲ್ಲಿ ವಿಶೇಷ ಪುಷ್ಟಿಯು ಉಂಟಾಗುವದು ಒಳ್ಳೇಹಾಲು ವರ್ಣದಲ್ಲಿ ಬೆಳ್ಳಗೂ, ರುಚಿಗೆ ಸಿಹಿಯಾಗಿಯೂ, ಮುಟ್ಟುವದಕ್ಕೆ ಮೃದುವಾಗಿಯೂ ಇರುತ್ತದೆ ಹಾಲು ವಿಶೇಷ ಪುಷ್ಟಿಕರವಾದಾಗ್ಯೂ ಒಳ್ಳೇ ಹಾಲು ಸಿಕ್ಕುವದುಕಷ್ಟ ಹಾಲನ್ನು ಉಪಯೋಗಿಸುವದಕ್ಕೆ ಮುಂಚೆ ಆ ಹಾಲು ಯಾವ ಹಸುವಿನದೊ ಅದರ ದೇಹಸ್ಥಿತಿಯನ್ನು ಪರೀಕ್ಷಿಸಬೇಕು. ಹಸುಗಳು ಒಳ್ಳೇ ಹುಲ್ಲನ್ನು ತಿಂದು ನಿರ್ಮಲವಾದ ನೀರನ್ನು ಕುಡಿದು, ಸೇವನೆಗೆ ನಿರ್ಮಲವಾದ ವಾಯುವನ್ನು ಹೊಂದುತ್ತಲಿದ್ದರೆ ಅದರ ಹಾಲು ಒಳ್ಳೇದು ಅನೇಕಹಸುಗಳು ಈ ಮೂರನ್ನು ಹೊಂದದೆ ಇರುವದೂ ಉಂಟು ಕೆಲವು ಹಸುಗಳು ಅವೀರ್ಯಭಕ್ಷಣೆ ಮಾಡುವದೂ ಉಂಟು. ಇಂಥಾ ಹಸುಗಳ ಹಾಲು ಪ್ರಾಯಶಃ ರೋಗವನ್ನುಂಟುಮಾಡುತ್ತದೆ. ಅನೇಕ ಹಸುಗಳಿಗೆ ಕೆಚ್ಚಿಲಿನ ಸ್ಥಳದಲ್ಲಿ ಗುಳ್ಳೆಗಳು ಆಗಿರುವದೂ ಉಂಟು. ಇಂಥಾ ಹಸುವಿನ ಹಾಲು ಅನೇಕ ರೋಗಗಳಿಗೆ ಕಾರಣಭೂತವಾಗುತ್ತದೆ. ಇದಲ್ಲದೆ ಮೂರತಕ್ಕ ಹಾಲಿನಲ್ಲಿ ಅನೇಕ ವಿಧನಾದ ದೋಷಗಳುಸೆರುವದುಂಟು. ಪ್ರಥಮತಃ ಹಾಲು ಕರೆಯತಕ್ಕ ಪಾತ್ರೆಯು ಒಳಭಾಗದಲ್ಲಿ ನಿರ್ಮಲವಾಗಿ ತೊಳೆದಿರುವದಿಲ್ಲ. 2 ನೇದು ದುರಾಶೆಯಿಂದ ಇವರು ಹಾಲಿಗೆ ನೀರನ್ನು ಬೆರಿಸುವರು. ಹಾಗೆ ಬೆರಿಸಲ್ಪಡುವ ನೀರು ಪ್ರಾಯಕವಾಗಿ ನಿರ್ಮಲವಾಗಿರುವದಿಲ್ಲ. ನೀರಿಗೆ ಅನೇಕ ವಿಧವಾದ ರೋಗಗಳ ಸೊಂಕು ಸೇರುವದುಂಟು. ಇಂಥಾ ಸೊಂಕುಳ್ಳ ನೀರು ಹಾಲಿಗೆ ಬೆರದರೆ ಆ ರೋಗಗಳು ಉಲ್ಬಣದೆಶೆಗೆ ಬರುವದಕ್ಕೆ ಅವಕಾಶವಾಗವದು. ಆದ್ದರಿಂದ ಹಾಲನ್ನು ಸೇವಿಸತಕ್ಕವರು ಹಾಲನ್ನು ಕೊಂಡುಕೊಳ್ಳುವದರಲ್ಲಿ ಬಹಳ ಜಾಗರೂಕರಾಗಿರಬೇಕು. ಹಾಲುಗಳಲ್ಲಿ ನೀರು ಬೆರಿಸಿದ್ದರೆ ಇದನ್ನು ಪರೀಕ್ಷಿಸುವದಕ್ಕೆ ಲಕ್ಟಾವಿಟರ್ ಎಂಬ ಒಂದು ಕ್ಷೀರಮಾಪಕ ಯಂತ್ರವನ್ನು ನಿರ್ಮಾಣಮಾಡಿದಾರೆ. ಅದರ ಸಹಾಯದಿಂದ ಕೊಂಡುಕೊಳ್ಳತಕ್ಕ ಹಾಲಿನಲ್ಲಿ ಸೇರಿಸಲ್ಪಟ್ಟಿರುವ ನೀರಿನ ಪ್ರಮಾಣವನ್ನು

ಭೂಮಿಯು ಗೋಳಾಕಾರವಾಗಿ ಇರುವುದೆಂದು ಶಾಸ್ತ್ರಜ್ಞರು ಪರೀಕ್ಷಿಸಿ ನಿಷ್ಕರ್ಷೆ ಮಾಡಿರುತ್ತಾರೆ ಸಾಮಾನ್ಯವಾಗಿ ಭೂಗೋಳಶಾಸ್ತ್ರಗಳಲ್ಲಿ ಭೂಮಿಯು ಗೋಳಾಕಾರವಾಗಿರುವುದೆಂದು ತೋರಿಸುವುದಕ್ಕೆ ಕೆಲವು ನಿದರ್ಶನಗಳನ್ನು ಕೊಡುವರು. ಅವು ಯಾವವೆಂದರೆ.

(1) ಹಡಗು ದೂರದಿಂದಾ ಥಡದ ಕಡೆಗೆ ಬರುವಾಗ್ಯೆ ಪ್ರಥಮತಃ ಅಧರ ಭಾವುಟಗಳು ನಮ್ಮ ದೃಷ್ಟಿಪಥಕ್ಕೆ ಬೀಳುವದು. ಸವಿಾಪಕ್ಕೆ ಬಂದ ಹಾಗೆಲ್ಲಾ, ಕ್ರಮಕ್ರಮವಾಗಿ ಮೇಲಿನಿಂದಾ ಕೆಳಗಿನವರಿವಿಗೂ ಕಾಣುತ್ತಾ ಬರುವುದು, ಸವಿಾಪಕ್ಕೆ ಬಂದಾಗ ಅದರ ಕೆಳಭಾಗವು ಕೂಡಾ ಕಾಣಬರುವುದು. ಹಡಗಿನ ಮೇಲು ಭಾಗಕ್ಕಿಂತ ಕೆಳಭಾಗವು ದೊಡ್ಡದಾಗಿರುವುದು. ಭೂಮಿಯು ಗುಂಡಿಗೆ ಇಲ್ಲದೆ ಮಟ್ಟವಾಗಿದ್ದ ಪಕ್ಷದಲ್ಲಿ ಪ್ರಥಮತಃ, ಈ ಹಡಗಿನ ಕೆಳಭಾಗವು ನಮ್ಮ ದೃಷ್ಟಿಗೆ ಗೋಚರವಾಗಬೇಕು ಆದರೆ ಹೀಗೆ ಆಗುವದಿಲ್ಲ. ಭೂಮಿಯು ಗುಂಡಗೆ ಇರುವದೇ ಇದಕ್ಕೆ ಮುಖ್ಯಕಾರಣ.

(2) ಹಡಗುಗಳು ಯಾವದಾದರೂ ಒಂದು ದಿಕ್ಕಿಗೆ ಪ್ರಯಾಣಮಾಡಿ ಆ ದಿಕ್ಕನ್ನು ಬದಲಾಯಿಸದೇ ಪ್ರಯಾಣವನ್ನು ಬೆಳಿಸಿದರೆ ಕೊನೆಗೆ ಅದಕ್ಕೆ ಅಭಿಮುಖವಾದ ದಿಕ್ಕಿನಿಂದ ಅವುಗಳು ಹೊರಟ ಸ್ಥಳಕ್ಕೆ ಬರುವವು ಅಂದರೆ ಪೂರ್ವದಿಕ್ಕಿಗೆ ಪ್ರಯಾಣಮಾಡಿದ ಹಡಗುಗಳು ಪಶ್ಚಿಮ ದಿಕ್ಕಿನಿಂದಾ ಹೊರಟಸ್ಥಳಕ್ಕೆ ಬರುವವು. ಉತ್ತರ ದಿಕ್ಕಿಗೆ ಹೊರಟಂಥಾವುಗಳು ದಕ್ಷಿಣದಿಕ್ಕಿನಿಂದಾ ಅದೇ ಸ್ಥಳಕ್ಕೆ ಬರುವವು. ಭೂಮಿಯು ಗುಂಡಾಗಿರುವದ್ದರಿಂದಾ ಭೂಪ್ರದಕ್ಷಿಣವನ್ನು ಮಾಡಿಕೊಂಡು ಯಾವ ದಿಕ್ಕಿಗೆ ಹೊರಟವೋ ಅದರ ಎದರು ದಿಕ್ಕಿನಿಂದಾ ಹೊರಟ ಸ್ಥಳಕ್ಕೆ ಬರುವದು ಸಾಧ್ಯವಾಗಿಧೆ. ಭೂಮಿಯು ಮಟ್ಟವಾಗಿದ್ದ ಪಕ್ಷದಲ್ಲಿ ಹೀಗೆ ನಡೆಯುವದು ಸಂಭವವೇ ? ಎಂದಿಗೂ ಇಲ್ಲ.

(3) ಜ್ಯೋತಿಷ್ಕರು ಪರೀಕ್ಷಿಸಿ ಚಂದ್ರಗ್ರಹಣವಾಗುವಾಗ್ಯೆ ಚಂದ್ರಬಿಂಬದ ಮೇಲೆ ಭೂಛಾಯೆಯು ಬೀಳುವದನ್ನು ಗೊತ್ತುಮಾಡಿಧಾರೆ. ಈ ಗ್ರಹಣವು ಆಗುವಾಗ ಸೂರ್ಯನ ಬೆಳಕು ಭೂಮಿಯಮೇಲೆ ಬೀಳುವುದು. ಅದರ ಛಾಯೆಯು ಚಂದ್ರನ ಮೇಲೆ ಬೀಳುವದು. ಆ ಛಾಯೆಯು ವರ್ತುಳಾಕಾರವಾಗಿರುವುದು. ಅದರಿಂದಲೇ ಭೂಮಿಯು ಗೋಳಾಕಾರವಾಗಿದೆ ಎಂದು ಗೊತ್ತಾಗುತ್ತದೆ.

(4) ಆಕಾಶವು ಗುಂಡಾಗಿ ಕಾಣುತ್ತದೆ. ಹೀಗೆ ಕಾಣುವುದಕ್ಕೆ ಭೂಮಿಯು ಗೋಳಾಕಾರವಾಗಿರುವುದೇ ಮುಖ್ಯ ಕಾರಣವು. ಈ ಸಂಗತಿಯು ಅನುಭವಕ್ಕೆ ಬರಬೇಕಾದರೆ, ಪರೀಕ್ಷೆಮಾಡಲು ಅಪೇಕ್ಷೆಯುಳ್ಳವರು ಉನ್ನತವಾದ ಪರ್ವತಾರೋಹಣವನ್ನು ಮಾಡಬಹುದು. ಪರ್ವತದ ತಪ್ಪಲಲ್ಲಿರುವಾಗ ಸ್ವಲ್ಪ ದೂರದವರಿವಿಗೂ ಭೂಮಿಯು ಕಾಣುವದು. ಅದರ ಕೊನೆಯಲ್ಲಿ ಭೂಮಿಯು ಆಕಾಶದೊಡನೆ ಸೇರಿ

ಇವೇ ಮೊದಲಾದ ಶಿಲಾವಸ್ಥೆ, ಜಲಾವಸ್ಥೆ, ಅನಿಲಾವಸ್ಥೆಯಲ್ಲಿ ಭಿನ್ನಭಿನ್ನವಾದ ರೂಪಗಳನ್ನು ವಹಿಸಿರತಕ್ಕ ಸ್ಥಾವರ ಜಂಗಮಾತ್ಮಕವಾದ ಎಲ್ಲ ಪದಾರ್ಥಗಳ ವಿಷಯಗಳನ್ನೂ ತಿಳಿಸುತ್ತದೆ. ಭೂಗೋಳಶಾಸ್ತ್ರದಲ್ಲಿ ಈ ಭಾಗದಷ್ಟು ಮನೋಹರವಾದ ಭಾಗವು ಯಾವದೂ ಇಲ್ಲ. ಈ ಭಾಗವನ್ನು ವ್ಯಾಸಂಗ ಮಾಡುವದರಿಂದ ಈ ಭೂಮಂಡಲವು ಯಾವಯಾವ ಭಾಗದಲ್ಲಿ ಸಮುದ್ರದಿಂದ ಆವೃತವಾಗಿ ಇದೆಯೋ, ಆಯಾಯ ಸಮುದ್ರಗಳಲ್ಲಿ ಯಾವಯಾವ ಭೋಗ್ಯವಸ್ತುಗಳು ಶಿಕ್ಕುತ್ತವೆಯೋ, ಯಾವಯಾವ ಭೂಮಿಗಳು ಎಲ್ಲೆಲ್ಲಿ ಏನು ಏನು ಧಾನ್ಯಗಳನ್ನು ಬೆಳೆಯುತ್ತವೆಯೊ ಮತ್ತು ಯಾವಯಾವ ಸ್ಥಳಗಳಲ್ಲಿ ಅಮೂಲ್ಯವಾದ ನವರತ್ನಗಳು ಲೋಹಗಳು ಶಿಕ್ಕುತ್ತವೆಯೋ ಅವುಗಳನ್ನೆಲ್ಲ ಜನರಿಗೆ ಉಪಯೋಗವಾಗುವಂತೆ ಮಾಡುವುದಕ್ಕೋಸ್ಕರ ಬಂಡವಾಳಸ್ಥರಾದ ವರ್ತಕರು ಎಂಥೆಂಥಾ ಅದ್ಭುತ ಕಾರ್ಯಗಳನ್ನು ಮಾಡುತ್ತಾರೋ ಸಮುದ್ರದ ಸಹಾಯದಿಂದ ಬಹುದೂರದಲ್ಲಿರತಕ್ಕ ದ್ವೀಪ ನಿವಾಸಿಗಳೂ ಕಾಡಾ ಸಹೋದರರಂತೆ ಸವ್ಯವಹಾರದಲ್ಲಿರುವುದಕ್ಕೆ ಯಾವ ರೀತಿಯಾದ ಸೌಲಭ್ಯಗಳು ಉಂಟಾಗುತ್ತವೆಯೋ ಇವೆಲ್ಲಾ ಭೂಗೋಳ ಶಾಸ್ತ್ರದ ಈ ಎರಡನೇ ಭಾಗದಿಂದ ವೇದ್ಯವಾಗುತ್ತದೆ ಇದಲ್ಲದೆ ಭೂಗೋಳಶಾಸ್ತ್ರಕ್ಕೆ ಮೂರನೆಯ ಭಾಗ ವೊಂದು ಉಂಟು. ಈ ಭಾಗದಲ್ಲಿ ಮನುಷ್ಯನು ತನ್ನ ಬುದ್ಧಿಶಕ್ತಿಯಿಂದ, ಈ ಭೂಮಂಡಲವನ್ನು ಅನೇಕ ರಾಜ್ಯಗಳಾಗಿ ವಿಂಗಡಿಸಿಕೊಂಡು, ಹಾಗೆ ವಿಂಗಡಿಸಲ್ಪಟ್ಟ ಸಮಸ್ತ ವಿಭಾಗಗಳಿಗೂ, ಸಮುದ್ರಗಳಿಗೂ, ನದಿಗಳಿಗೂ, ಪರ್ವತಗಳಿಗೂ ಸಕಲ ಚರಾಚರ ವಸ್ತುಗಳಿಗೂ ನಾಮಕರಣವನ್ನು ಮಾಡಿ ಅವುಗಳನ್ನು ತನ್ನ ಅಧಿಕಾರಕ್ಕೆ ಒಳಪಡಿಸಿಕೊಂಡು ಸಕಲ ಶಕ್ತಿಗಳಿಗಿಂತಲೂ, ಬುದ್ಧಿಶಕ್ತಿಯೇ ಮೇಲಾದದ್ದು ಎಂದು ಯಾವ ವ್ಯಾಪಾರಗಳಿಂದ ವ್ಯಕ್ತಮಾಡಿ ಇರುವದೋ ಅಂಥ ವಿಷಯವನ್ನು ಬೋಧಿಸುತ್ತದೆ. ಭೂಗೋಳದ ಮೊದಲನೇ ವಿಭಾಗವನ್ನು, ಮೂರನೆ ವಿಭಾಗವನ್ನು, ಭೂಗೋಳವನ್ನು ಬರೆದು ಇರತಕ್ಕ ಅನೇಕ ಗ್ರಂಥಕರ್ತರು ಸ್ಪಷ್ಟವಾಗಿ ತಿಳಿಸಿರುತ್ತಾರೆ, ಈ ಎರಡನೇ ಭಾಗವನ್ನು ಮಾತ್ರ ವಿಸ್ತಾರವಾಗಿಯೂ ವಿಶದವಾಗಿಯೂ, ಇರುವಂತೆ ನಮ್ಮ ಕನ್ನಡಿಗರಿಗೆ ತಿಳಿಸಿರತಕ್ಕ ಗ್ರಂಥಗಳು ವಿಶೇಷವಾಗಿಲ್ಲ ಆದ್ದರಿಂದ ಈ ಭಾಗದಲ್ಲಿ ಮುಖ್ಯವಾದ ಕೆಲವು ಅಂಶಗಳನ್ನು ನಮ್ಮ ವಾಚಕರ ಪ್ರಯೋಜನಾರ್ಥವಾಗಿ ಈ ಪತ್ರಿಕೆಯಲ್ಲಿ ತಿಳಿಸುವೆವು

ರೂಪಾಯಿನಿಂದಾ ೩೫ ರೂಪಾಯಿ ಆಗುವವರೆಗೂ ಪ್ರತಿ ಸಂವತ್ಸರದಲ್ಲಿಯೂ ೫ ರೂಪಾಯಿ ಬಡತಿ ನಿಶಿ ಸಂಗೀತೋಪಾಧ್ಯಾಯಿನಿಯರಾಗಿ ನೇಮಿಸಲ್ಪಟ್ಟು ಇರುತ್ತಾರೆ.

(4) ಮಿಸ್. ರಿಡ್ಸ್‌ಡೇಲ್‌ರವರು ಮೈಸೂರು ಶ್ರೀಮನ್ಮಹಾರಾಣಿಯವರು ಬಾಲಿಕಾಪಾಠಶಾಲಾ ಕಾರ್ಯನಿರ್ವಾಹಕ ಸಭಾ ಮೆಂಬರುಗಳಾಗಿ ನೊಕರೂರು ಮಾಡಲ್ಪಟ್ಟಿರುತ್ತಾರೆ.

(5) ಜಿ ಯಃಫ್ ನರೊಂನ್ಹಾ, ಈಶ್ವರೈಯ್ಯ, ದೊರೆಸಾಮಿ ಮೊದಲಿಯಾರು ಈ ಮೂರುಜನ ವಿದ್ಯಾರ್ಥಿಗಳಿಗೂ ವೈದ್ಯಶಾಸ್ತ್ರವನ್ನು ಅಭ್ಯಾಸಮಾಡಲು ೨೫ ರೂಪಾಯಿಗಳ ವೇತನವೂ ಮುಂಜೂರಾಗಿರುತ್ತೆ.

(6) ಅರಕಲಗೂಡು ಎ. ವಿ. ಸ್ಕೂಲು ಅ॥ ಮಾಸ್ಟರು ಅಳಸಿಂಗಾಚಾರು ಮೃತಪಟ್ಟ ಸುಬ್ಬಣ್ಣನೆಂಬುವರ ಬದಲಾಗಿ ಹಾಲಿ ಈಗ ಸಲ್ಲುತ್ತಿರುವ ೩೦ ರೂಪಾಯಿ ತಲಬಿನಿಂದಾ ಹಾಸನದ ಕನ್ನಡಾ ಸ್ಕೂಲ್ ಹೆಡ್‌ಮಾಸ್ಟರು ಆಗಿ ನೊಕರೂರು ಮಾಡಲ್ಪಟ್ಟಿರುತ್ತಾರೆ.

(7) ಬೇಲೂರು ಎ. ವಿ. ಸ್ಕೂಲ್ ಹೆಡ್‌ಮಾಸ್ಟರು ನರಸುಂಹೈಯ್ಯನೆಂಬುವರು ಮೃತಿಹೊಂದಿದ ಸುಬ್ಬಣ್ಣನಿಗೆ ಬದಲಾಗಿ ೨೫ ರಿಂದಾ ೩೦ ಕ್ಕೆ ಬಡತಿ ಮಾಡಲ್ಪಟ್ಟಿರುತ್ತಾರೆ.

(8) ಚಾಮರಾಜನಗರದ ಎ. ವಿ. ಸ್ಕೂಲ್ ಅ ॥ ಮಾ ॥ ಬ್ರಹ್ಮದೇವ ಪಂಡಿತರಿಗೆ ೧೫ ರಿಂದಾ ೨೦ ಕ್ಕೆ ಬಡತಿ ಮಾಡಲ್ಪಟ್ಟಿದೆ

(9) ಬೀರೂರು ಎ. ವಿ. ಸ್ಕೂಲ್ ಹೆಡ್‌ಮಾಸ್ಟರು ಕೆ, ನಾರಾಯಣರಾವು ಬಿ, ಎ, ಯವರು ಚಿತ್ರದುರ್ಗದ ಹೈಸ್ಕೂಲಿಗೆ ರಾಜಿನಾಮೆ ಕೊಟ್ಟ ಡಿ, ನರಸಿಂಗರಾಯರವರ ಬದಲಾಗಿ ಹಾಲಿ ಸಲ್ಲುತ್ತಿರುವ ೩೦ ರೂಪಾಯಿ ತಲಬಿನಿಂದ ವರ್ಗ ಮಾಡಲ್ಪಟ್ಟಿರುತ್ತಾರೆ.

(10) ತರಿಕೆರೆ ಎ. ವಿ. ಸ್ಕೂಲ್ ಹೆಡ್‌ಮಾಸ್ಟರು ಜೆ, ಅನಂತರಾಯರು ಬೀರೂರಿಗೆ ನಾರಾಯಣರಾಯರವರ ಬದಲಾಗಿ ೨೫ ರಿಂದಾ ೩೦ ಕ್ಕೆ ಬಡತಿ ಮಾಡಲ್ಪಟ್ಟು ವರ್ಗಾಯಿಸಲ್ಪಟ್ಟು ಇರುತ್ತಾರೆ.

(11) ವೆಂಕಟಕೃಷ್ಣಪ್ಪ ಬಿ. ಎ. ಯವರು ಅನಂತರಾಯರ ಬದಲಾಗಿ ಮಾಹೆಯಾನ ೨೫ ರೂ. ತಲಬಿನಿಂದಾ ತರಿಕೆರೆ ಎ. ವಿ. ಸ್ಕೂಲ್ ಹೆಡ್‌ಮಾಸ್ಟರಾಗಿ ನೊಕರೂರು ಮಾಡಲ್ಪಟ್ಟಿರುತ್ತಾರೆ

ಕೊಂಡಿರುವಂತೆ ತೋರುವುದು. ಮೇಲಕ್ಕೆ ಹತ್ತಿದ ಹಾಗೆಲ್ಲಾ ಭೂಮಿಗೂ ಆಕಾಶಕ್ಕೂ ಸೇರಿದ ಸ್ಥಳವು ವಿಸ್ತಾರವಾಗುವುದು. ತಪ್ಪಲಲ್ಲಿ ದೃಷ್ಟಿಗೆ ಬೀಳದೇ ಇರತಕ್ಕ ಪದಾರ್ಥಗಳೆಲ್ಲಾ ಪರ್ವತಾಗ್ರಕ್ಕೆ ಹೋದಮೇಲೆ ದೃಷ್ಟಿಗೆ ಗೊತ್ತಾಗುವುದು. ಭೂಮಿಯು ಗುಂಡಾಗಿಲ್ಲದೆ ಮಟ್ಟವಾಗಿದ್ದ ಪಕ್ಷದಲ್ಲಿ ಪರ್ವತಾಗ್ರದಲ್ಲಿ ಕಾಣತಕ್ಕ ಪದಾರ್ಥಗಳೆಲ್ಲಾ ಪರ್ವತದ ಕಿಬ್ಬಿಯಲ್ಲಿಯೂ ಕಾಣಬೇಕು. ಆದರೆ ಹೀಗೆ ಕಾಣುವುದಿಲ್ಲ. ಆದ್ದರಿಂದಲೇ ಭೂಮಿಯು ಗೋಳಾಕಾರವಾಗಿದೆಯೆಂದು ದೃಢವಾಗಿ ಹೇಳಬಹುದು.

(5) ಭೂಮಿಯು ಗೋಳಾಕಾರವು ಪ್ರತ್ಯಕ್ಷವಾದ ಇನ್ನೊಂದು ಪ್ರಮಾಣದಿಂದ ಗೊತ್ತಾಗುತ್ತದೆ ಆಕಾಶಬುಟ್ಟಿಯು ಸಹಾಯದಿಂದ ಭೂಮಿಯಿಂದ ಮೂರು ನಾಲ್ಕು ಮೈಲಿಗಳವರೆವಿಗೂ ಅಂತರಿಕ್ಷಕ್ಕೆ ಹೊರಟುಹೋಗಬಹುದು. ಅಲ್ಲಿಂದ ಭೂಮಿಯನ್ನು ನೋಡಿದರೆ, ಭೂಮಿಯು ಮಂಡಲಾಕಾರವಾದ ಒಂದು ದೊಡ್ಡ ಪದಾರ್ಥದಂತೆ ಕಾಣುವುದು. ನೂರಾರು ಮೈಲಿಗಳು ಈ ಬುಟ್ಟಿಯಲ್ಲಿ ಹೋಗುವುದು ಸಾಧ್ಯವಾದರೆ ಅಲ್ಲಿಗೆ ಈ ಭೂಮಿಯು ಚಂದ್ರಮಂಡಲದೋಪಾದಿಯಲ್ಲಿ ಕಾಣುವುದು. ಆಕಾಶಬುಟ್ಟಿಯಲ್ಲಿ ಮೂರು ನಾಲ್ಕು ಮೈಲಿಗಳು ಮೇಲಕ್ಕೆ ಹೋಗಿ ಅಲ್ಲಿಂದಾ ಈ ಭೂಮಿಯ ಸ್ಥಿತಿಯನ್ನು ಅನೇಕ ಶಾಸ್ತ್ರಜ್ಞರು ತೆಗೆದು ಅವುಗಳನ್ನು ಭೂಗೋಳ ಗ್ರಂಥಗಳಲ್ಲಿಯೂ ಖಗೋಳ ಗ್ರಂಥಗಳಲ್ಲಿಯೂ ಗರ್ಭೀಕರಿಸಿ ಇದಾರೆ. ಅವುಗಳೆಲ್ಲಾ ಗೋಳಾಕಾರವಾಗಿ ಇರುತ್ತವೆ. ಈ ನಿದರ್ಶನಗಳಿಂದ ಭೂಮಿಯು ಮಟ್ಟವಾಗಿಲ್ಲ ಎಂಬದಾಗಿಯೂ ಗೊಳಾಕಾರವಾಗಿದೆ ಎಂಬದಾಗಿಯೂ ಸಿದ್ಧಾಂತವಾಗುತ್ತದೆ.

ಸೂಚನೆಗಳು ಮತ್ತು ಸಮಾಚಾರಗಳು.

(1) ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಮತ್ತು ಪರೀಕ್ಷೆ ಇಲ್ಲದಿದ್ದಾಗ್ಯೂ ಮೂರುವರುಷಗಳೂ ತೃಪ್ತಿಕರವಾಗಿ ಕೆಲಸಮಾಡಿರುವ ಪ್ರೊಬೇಷನರಿ ಟೀಚರುಗಳಿಗೆ ೫ ರೂಪಾಯಿನಿಂದ ೭ ರೂಪಾಯಿ ಬಡತಿ ಕೊಡುವ ದಕ್ಕಾಗಿ ೪೨೪ ರೂಪಾಯಿಗಳು ಸ್ವಾಂಕ್ಷ್ಯ ಆಗಿರುತ್ತೆ.

(2) ತಾಲ್ಲೂಕ್ ಮತ್ತು ಕಸಬಾತಾಲ್ಲೂಕ್ ಜಾಗಗಳಲ್ಲಿ ೨೩ ಹೊಸ ಪಾಠಶಾಲೆಗಳನ್ನು ಸ್ಥಾಪಿಸುವದಕ್ಕಾಗಿಯೂ ಹಾಲಿ ಇರತಕ್ಕ ಕನ್ನಡಾ ತಾಲ್ಲೂಕ್ ಗಳಿಗೆ ಐದಕ್ಕೆ ಇಂಗ್ಲಿಷ್‌ತರಗತಿಗಳನ್ನು ಸೇರಿಸವದಕ್ಕೂ ೬೯೫೮ ರೂಪಾಯಿಗಳೂ ಮಂಜೂರಾಗಿರುತ್ತೆ.

(3) ಬರೋಡಾಮಹಾರಾಣಿಯವರಿಗೆ ವೀಣಾಭ್ಯಾಸ ಮಾಡಿಸಲು ಕಳಹಿಸಲ್ಪಟ್ಟದ್ದ ಸೌಮಂಗಮ್ಮನೆಂಬುವರು ಮಹಾರಾಣಿಯವರ ಬಾಲಿಕಾಪಾಠಶಾಲೆಯಲ್ಲಿ ೬೦

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ, ರೇಖಾ, ಕ್ಷೇತ್ರಮತ್ತು ಬೀಜಗಣಿತ ಲೋವರ್‌ಸೆಕೆಂಡರಿ ಪರೀಕ್ಷೆಗೆ ಕ್ಷೇತ್ರ ಗಣಿತ.	ಬೆಂಗಳೂರು ಸೆಂಟ್ರಲ್‌ಕಾಲೇಜ್ ವ್ಯಾಥೆಮ್ಯಾಟಿಕ್ಸ್ ಪ್ರೊಫೇಸರಾದ ಮ॥ ಎಂ, ಟಿ. ನಾರಣ್ಯೆಯ್ಯಂಗಾರ್ ಎಂ, ಎ ಯವರು.
ಕನ್ನಡ ಟಿಕ್ಸ್‌ಟ್ (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ಕನ್ನಡ ವ್ಯಾಕರಣ (ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಕನ್ನಡ ಗೌರ್ನಮೆಂಟ್ ಪಾಠಶಾಲೆ ಹೆಡ್ಮಾಸ್ಟರು ಮ॥ ಬಿ. ಮಲ್ಲಪ್ಪ ನವರು.
ಕನ್ನಡ ಟೆಕ್ಸ್‌ಟ್ (ಲೋವರ್‌ಸೆಕೆಂಡರೀ ಪರೀಕ್ಷೆಗೆ) ಕನ್ನಡ ವ್ಯಾಕರಣ (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ)	ಮ॥ ರಾ॥ ಆರ್. ನರಸಿಂಹಾಚಾರ್ಯರು ಎಂ. ಎ, ಶಾಸನದ ಇಲಾಖ.
(ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಗಳಿಗೆ) ವಾಕ್ಯರಚನೆ.	ಮೈಸೂರು ಗೌರ್ನಮೆಂಟ್ ಓರಿಯಂಟಲ್ ಸಂಸ್ಕೃತಪುಸ್ತಕ ಭಂಡಾರದ ಲೈಬ್ರೆರಿಯರ್ ಮ॥ ಎಸ್, ಜಿ, ನರಸಿಂಹಾಚಾರ್ಯರು
ಕನ್ನಡ ಉಕ್ತಲೇಖನ (ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನ ಮ್ಯಾನೇಜರ್ ಮ॥ ಸಿ, ವಾಸುದೇವೈಯ್ಯನವರು.
ಕನ್ನಡ ಬರವಣಿಗೆ (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ವೆಸ್ಲ್ಯನ್‌ಸ್ಕೂಲ್ ಸಹಾಯೋಪಾಧ್ಯರಾದ ಮ॥ ಎಂ, ಎ, ರಾಮಾನುಜೈಯ್ಯಂಗಾರ್‌ರವರು.
ಹಿಂದೂಸ್ತಾನೀ ವ್ಯಾಕರಣ ಮತ್ತು ಫಾರಷೀ ಭಾಷಾ ಪುಸ್ತಕಗಳು (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ) ಮತ್ತು ಫಾರಷಿ ವ್ಯಾಕರಣ ಮತ್ತು ಉಕ್ತಲೇಖನ ಇತರ ಭಾಷಾ	ಮಹಾರಾಜ ಕಾಲೇಜ್ ಹಿಂದುಸ್ತಾನಿ ಮತ್ತು ಪಾರ್ಸಿ ಮುನಷಿಯವರು ಮೆ॥ ಸುಲ್ತಾನ್ ಮಹಮ್ಮದ್‌ಖಾನ್.

ನರ್ ೧೯೯೯ ನೇ ಇಸವಿ ಮೈಸೂರು ದೇಶೀಯಪರೀಕ್ಷೆ.

ವಿಷಯಗಳು	ಪರೀಕ್ಷಕರ ಹೆಸರು ಮತ್ತು ವಿಳಾಸ
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೨ ನೇ ಭಾಗಕ್ಕೆ ; ಮೈಸೂರು ವೆಸ್ಲಿಯನ್ ಮಿಷ್ ಹೈಸ್ಕೂಲು ಪ್ರಿನ್ಸಿಪಲ್ ರೆವರೆಂಡ್ ಹೋಲ್ಡ್‌ಸ್ವರ್ತ್ ಎಂ. ಎ. ಯವರು, ೧ ನೇ ಭಾಗಕ್ಕೆ ತುಮಕೂರು ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರು ಮ ॥ ರಾ ॥ ಸಿ. ಕೃಷ್ಣರಾವ್, ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಕ್ತಲೇಖನ	ಹಾಸನದ ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರು ಮಿ॥ ಎಸ್ ॥ ಕ್ರಿಸ್. ಬಿ, ಎ. ಯವರು.
ಲೋವರ್‌ಸೆಕೆಂಡರಿ ಪರೀಕ್ಷೆಗೆ ಭಾಷಾಂತರ.	ಮೈಸೂರು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಟ್ರಾನ್ಸ್‌ಲೇಟರ್ ಮ॥ ಎಂ. ಬಿ, ಶ್ರೀನಿವಾಸೈಯ್ಯಂಗಾರ್ ಎಂ ಎ ಯವರು.
ಲೋವರ್‌ಸೆಕೆಂಡರಿ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ ಗಣಿತ.	ಮೈಸೂರು ಮಹಾರಾಣಿಯವರ ಬಾಲಿಕ ಪಾಠಶಾಲೆ ಹೆಡ್ಮಾಸ್ಟರು ಮ॥ ಎಸ್ ಮಲ್ಲಿಕಾರಿರಾವ್ ಬಿ, ಎ, ಯವರು
ದೇಶಾ ಮತ್ತು ಬೀಜಗಣಿತ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ.	ಮೈಸೂರು ಮಹಾರಾಜಕಾಲೇಜ್ ಸಹಾಯೋಪಾಧ್ಯಾಯರು ಮ ॥ ಎಚ್, ಆರ್ ಕೃಷ್ಣಮೂರ್ತಿ ಬಿ, ಎ ಯವರು.
ಗಣಿತ. ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ (ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಹೊರತು)	ಬೆಂಗಳೂರು ಶಿಟಿ ಮುನಿಸಿಪಲ್ ಪಾಠಶಾಲೆ ಹೆಡ್ಮಾಸ್ಟರು ಮ॥ ಕೆ॥ ಕೃಷ್ಣಸ್ವಾಮಿಯ್ಯ. ಬಿ, ಎ, ಯವರು.

೨೦೦೦೦೦೦೦೦

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ, ರೇಖಾ, ಕ್ಷೇತ್ರಮತ್ತು ಬೀಜಗಣಿತ ಲೋವರ್‌ಸೆಕೆಂಡರಿ ಪರೀಕ್ಷೆಗೆ ಕ್ಷೇತ್ರ ಗಣಿತ.	ಬೆಂಗಳೂರು ಸೆಂಟ್ರಲ್‌ಕಾಲೇಜ್ ವ್ಯಾಥೆವ್ಯಾಟಿಕ್ಸ್ ಪ್ರೊಫೇಸರಾದ ಮಾ॥ ಎಂ, ಟಿ, ನಾರಣ್ಯೈಯ್ಯಂಗಾರ್ ಎಂ, ಎ ಯವರು.
ಕನ್ನಡ ಟೆಕ್ಸ್‌ಟ್ (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ) ಕನ್ನಡ ವ್ಯಾಕರಣ (ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಕನ್ನಡ ಗೌರ್ನಮೆಂಟ್ ಪಾಠಶಾಲೆ ಹೆಡ್‌ಮಾಸ್ಟರು ಮಾ॥ ಬಿ. ಮಲ್ಲಪ್ಪನವರು.
ಕನ್ನಡ ಟೆಕ್ಸ್‌ಟ್ (ಲೋವರ್‌ಸೆಕೆಂಡರೀ ಪರೀಕ್ಷೆಗೆ) ಕನ್ನಡ ವ್ಯಾಕರಣ (ಅಪ್ಪರ್‌ಸೆಕೆಂಡರೀ ಪರೀಕ್ಷೆಗೆ)	ಮಾ॥ ರಾ॥ ಆರ್. ನರಸಿಂಹಾಚಾರ್ಯರು ಎಂ. ಎ, ಶಾಸನದ ಇಲಾಖೆ.
(ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆಗಳಿಗೆ) ವಾಕ್ಯರಚನೆ.	ಮೈಸೂರು ಗೌರ್ನಮೆಂಟ್ ಓರಿಯಂಟಲ್ ಸಂಸ್ಕೃತಪುಸ್ತಕ ಭಂಡಾರದ ಲೈಬ್ರೆರಿಯರ್ ಮಾ॥ ಎಸ್, ಜಿ, ನರಸಿಂಹಾಚಾರ್ಯರು
ಕನ್ನಡ ಉಕ್ತಲೇಖನ (ಲೋವರ್‌ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನ ಮ್ಯಾನೇಜರ್ ಮಾ॥ ಸಿ, ವಾಸುದೇವೈಯ್ಯನವರು.
ಕನ್ನಡ ಬರವಣಿಗೆ (ಲೋವರ್‌ಸೆಕೆಂಡರಿ ಪರೀಕ್ಷೆಗೆ)	ಮೈಸೂರು ವೆಸ್ಲ್ಯನ್ ಸ್ಕೂಲ್ ಸಹಾಯೋಪಾಧ್ಯರಾದ ಮಾ॥ ಎಂ, ಎ, ರಾಮಾನುಜೈಯ್ಯಂಗಾರ್‌ರವರು.
ಹಿಂದೂಸ್ತಾನೀ ವ್ಯಾಕರಣ ಮತ್ತು ಫಾರಸೀ ಭಾಷಾ ಪುಸ್ತಕಗಳು (ಅಪ್ಪರ್ ಸೆಕೆಂಡರೀ ಪರೀಕ್ಷೆಗೆ] ಮತ್ತು ಫಾರಸಿ ವ್ಯಾಕರಣ ಮತ್ತು ಉಕ್ತಲೇಖನ ಇತರ ಭಾಷಾ	ಮಹಾರಾಜ ಕಾಲೇಜ್ ಹಿಂದುಸ್ತಾನಿ ಮತ್ತು ಪಾರ್ಸಿ ಮುನಷಿಯವರು ಮಾ॥ ಫುಲ್ತಾ ಮಹಮ್ಮದ್‌ಖಾ.

ಸರ್ ಎಂ.ವಿ.ಎಫ್ ನೇ ಇನವಿ ಮೈಸೂರು ದೇಶೀಯವರೀಕ್ಷೆ.

ವಿಷಯಗಳು	ಪರೀಕ್ಷಕರ ಹೆಸರು ಮತ್ತು ವಿಳಾಸ
ಇಂಗ್ಲೀಷು ವ್ಯಾಕರಣ ಮತ್ತು ಭಾಷೆ.	೨ ನೇ ಭಾಗಕ್ಕೆ ; ಮೈಸೂರು ವೆಸ್ಲಿಯನ್ ಮಿಷ್ ಹೈಸ್ಕೂಲು ಪ್ರಿನ್ಸಿಪಲ್ ರೆವರೆಂಡ್ ಹೋಲ್ಡ್‌ಸ್ವರ್ತ್ ಎಂ. ಎ. ಯವರು, ೧ ನೇ ಭಾಗಕ್ಕೆ ತುಮಕೂರು ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರು ಮ ॥ ರಾ ॥ ಸಿ. ಕೃಷ್ಣರಾವ್, ಬಿ. ಎ. ಯವರು.
ಇಂಗ್ಲೀಷು ಬರವಣಿಗೆ ಮತ್ತು ಉಚ್ಚಲೇಖನ	ಹಾಸನದ ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರು ನಿ॥ ಎಸ್ ॥ ಕ್ರಿಸ್. ಬಿ, ಎ. ಯವರು.
ಲೋವರ್‌ಸೆಕೆಂಡರಿ ಪರೀಕ್ಷೆಗೆ ಭಾಷಾಂತರ.	ಮೈಸೂರು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಟ್ರಾನ್ಸ್‌ಲೇಟರ್ ಮ॥ ಎಂ. ಬಿ, ಶ್ರೀನಿವಾಸೈಯ್ಯಂಗಾರ್ ಎಂ ಎ ಯವರು.
ಲೋವರ್‌ಸೆಕೆಂಡರಿ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ ಗಣಿತ.	ಮೈಸೂರು ಮಹಾರಾಣಿಯವರ ಬಾಲಿಕ ಪಾಠಶಾಲೆ ಹೆಡ್ಮಾಸ್ಟರು ಮ॥ ಎಸ್ ಮಲ್ಲಾಪ್ಪಿರಾವ್ ಬಿ, ಎ, ಯವರು
ರೇಖಾ ಮತ್ತು ಬೀಜಗಣಿತ ಇಂಗ್ಲೀಷು ವಿದ್ಯಾರ್ಥಿಗಳಿಗೆ ಮಾತ್ರ.	ಮೈಸೂರು ಮಹಾರಾಜಕಾಲೇಜ್ ಸಹಾಯೋಪಾಧ್ಯಾಯರು ಮ ॥ ಎಚ್, ಆರ್ ಕೃಷ್ಣಮೂರ್ತಿ ಬಿ, ಎ ಯವರು.
ಗಣಿತ. ಲೋವರ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷೆಗೆ (ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಹೊರತು)	ಬೆಂಗಳೂರು ಶಿಟಿ ಮುನಿಸಿಪಲ್ ಪಾಠಶಾಲೆ ಹೆಡ್ಮಾಸ್ಟರು ಮ॥ ಕೆ॥ ಕೃಷ್ಣಸ್ವಾಮಿಯ್ಯ. ಬಿ, ಎ, ಯವರು.

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ
ಉಕ್ತಲೇಖನ, ಕೈಬರಹ, ಮತ್ತು ಅಪ್ಪರ್ ಸೆಕಂಡರಿಯ ಭಾಷಾಂತರ.	
ತೆಲುಗುಭಾಷೆ ಮತ್ತು ತೆಲಗು ಇತರ ಗ್ರಂಥಗಳಿಗೆ	ಮೈಸೂರು ಗೌರ್ನಮೆಂಟ್ ಸಂಸ್ಕೃತ ಲೈಬ್ರೇರಿ ಕ್ಯೂರೇಟರ್ ಮಾ॥ ಮಹದೇವಶಾಸ್ತ್ರಿ ಬಿ. ಎ. ಯವರು
ತಮಿಳುಭಾಷೆ ಮತ್ತು ಇತರ ತಮಿಳು ಭಾಗಗಳಿಗೆ	ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಹಾಯೋಪಾಧ್ಯಾಯರಾದ ಮಾ॥ ಕೆ. ಕೃಷ್ಣಸ್ವಾಮಿ ಐಯರ್ ಬಿ. ಎ ಯವರು
ಆರೋಗ್ಯಶಾಸ್ತ್ರ (ಅಪ್ಪರ್ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಗೆ)	ಮೈಸೂರು ಕುದುರೆ ಮೊದಲನೇ ರಿಜಮೇಂಟಿನ ವಟರ್‌ನೆರಿ ಸರ್ಜರ್‌ರಾದ ಮಾ॥ ಎಸ್. ನರಸಿಂಹೈಯಂಗಾರ್ರು
ವ್ಯವಸಾಯಶಾಸ್ತ್ರ [ಅಪ್ಪರ್ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಗೆ]	ಮೈಸೂರು ನಾರ್ಮಲ್ ಸ್ಕೂಲ್ ವ್ಯವಸಾಯದ ಲಕ್ಚರರ್ ಮಾ॥ಕೆ. ನರಸಿಂಹೈಯಂಗಾರು
ಭೌತಿಕಶಾಸ್ತ್ರ ಅಪ್ಪರ್ ಸೆಕೆಂಡರೀ ಪರೀಕ್ಷೆ—ಭೌತಿಕ-ಭೂಗೋಳಶಾಸ್ತ್ರ—ಮತ್ತು ಭೂಗೋಳ, ನಕ್ಷೆ-ಲೋವರ್ ಸೆಕೆಂಡರೀ ಪರೀಕ್ಷೆ	ಬೆಂಗಳೂರು ಅಬ್‌ಸರ್ವೇಟರೀ ಚೀಫ್ ಅಬ್‌ಸರ್ವರ್ ಮಾ॥ ಎಕ್. ವೆಂಕಟೇಶಯ್ಯಂಗಾರ್ ಬಿ ಎ ಯವರು
ಲೋವರ್ ಸೆಕೆಂಡರೀಪರೀಕ್ಷೆಯ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಯ ಚರಿತ್ರೆ	ಲೋವರ್ ಮತ್ತು ಅಪ್ಪರ್‌ಸೆಕೆಂಡರೀ ಪರೀಕ್ಷೆ ಹಿಂದೂಚರಿತ್ರೆಯ ಎರಡನೇ ಭಾಗಕ್ಕೆ ಬೆಂಗಳೂರು ವೆಸ್ಲಿಯನ್ ಹೈಸ್ಕೂಲ್ ಸಹಾಯೋಪಾಧ್ಯಾಯರಾದ ಮಾ॥ ಎಕ್. ನರ

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
ಪುಸ್ತಕಗಳು (ಲೋವರ್‌ಸೆಕಂಡರೀ ಪರೀಕ್ಷೆಗೆ]	
ಅಪ್ಪರ್ ಸೆಕೆಂಡರೀ ಪರೀಕ್ಷೆಯು ಹಿಂದುಸ್ತಾನೀ ಭಾಷಾಂತರಗಳು ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಯು ವ್ಯಾಕರಣ, ವಾಕ್ಯರಚನೆ, ಕೈಬರಹ, ಭಾಷಾಂತರ,	ಮೈಸೂರು ಮಂಡೀ ಮೊಹಲ್ಲಾದಲ್ಲಿರುವ ಮೌಲ್ವಿಸಯದ್ ಮಹಬುದ್ದೀ ಸಾಹೇಬರವರು
ಅಪ್ಪರ್ ಸೆಕೆಂಡರೀ ಪರೀಕ್ಷೆಯು ಹಿಂದೂಸ್ತಾನೀ ಚರಿತ್ರೆ, ಭೂಗೋಳ, ಗಣಿತ, ರೇಖಾ ಮತ್ತು ಬೀಜಗಣಿತ, ಕ್ಷೇತ್ರಗಣಿತ, ವ್ಯವಸಾಯ, ಆರೋಗ್ಯ, ಶಾರೀರಶಾಸ್ತ್ರ, ಮತ್ತು ಲೋವರ್ ಸೆಕೆಂಡರೀಪರೀಕ್ಷೆಯು ಹಿಂದೂಸ್ತಾನಿ ಭಾಷಾಂತರ, ಗಣಿತ, ಹಿಂದೂದೇಶದ ಚರಿತ್ರೆ, ಭೂಗೋಳ, ನಕ್ಷೆ ಬರೆಯುವದು, ಆರೋಗ್ಯ ಮತ್ತು ವ್ಯವಸಾಯ ಶಾಸ್ತ್ರಗಳಿಗೆ	ಬೆಂಗಳೂರು ಹಿಂದೂಸ್ತಾನೀ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ॥ ಸೈಯದ್ ತಾಜಾಪೀರಾರ್ ಬಿ ಎ ಯವರು
ವ್ಯಾಕರಣ, ಟೆಕ್ಸ್‌ಟ್, ಭಾಷಾಂತರ, ಉಕ್ತಲೇಖನ, ಕೈಬರಹ, ಸಂಸ್ಕೃತಭಾಷೆ ಮತ್ತು ವ್ಯಾಕರಣ (ಅಪ್ಪರ್	ಮೈಸೂರು ಗೌ॥ ನಾರ್ಮಲ್‌ಸ್ಕೂಲ್ ಸಂಸ್ಕೃತಪಂಡಿತರಾದ ಶ್ರೀಕಂಠಶಾಸ್ತ್ರಿಗಳು
ಸೆಕೆಂಡರೀ ಪರೀಕ್ಷೆಗೆ) ಲೋವರ್ ಸೆಕೆಂಡರೀ ಪರೀಕ್ಷೆಯು ಸಂಸ್ಕೃತ ವ್ಯಾಕರಣ ಮತ್ತು ಭಾಷೆ, ಭಾಷಾಂತರ,	ಮೈಸೂರು ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ಮು॥ ರಾ॥ ಎಂ. ಹಿರಿಯಣ್ಣ. ಬಿ. ಎ ಎಲ್. ಟಿ. ಯವರು

ವಿದ್ಯಾದಾಯಿನಿ.

ಭಾಗ ೭.] ಆಗಸ್ಟ್ ೧೯೧೯. [ಸಂಚಿಕೆ ೮.

ಎಡಿಟರವರ ನೋಟ್ಸ್.

ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್, ಕೆಂಬ್ರಿಡ್ಜ್ ಎಂಬ ಸ್ಥಳಗಳಲ್ಲಿ ಪುರಾತನವಾದ ಸರ್ವವಿದ್ಯಾಶಾಲೆಗಳಿವೆಯೆಂಬುದು ನಮ್ಮ ವಾಚಕರಿಗೆಲ್ಲ ತಿಳಿದಿರಬಹುದು. ಅವುಗಳಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದನ್ನು ಬಹಳ ದೊಡ್ಡದನ್ನಾಗಿ ಜನರು ಎಣಿಸುವರು. ಕೆಂಬ್ರಿಡ್ಜ್‌ನಲ್ಲಿ ಲೆಕ್ಕಭಾಗವು, ಆಕ್ಸ್‌ಫರ್ಡ್‌ನಲ್ಲಿ ಭಾಷಾಭಾಗವು ಪ್ರಬಲವಾಗಿರುವುದೆಂಬುದೂ ಒಂದು ಪುರಾತನವಾದ ಪ್ರವಾದ. ಈ ವರ್ಷದಲ್ಲಿ ಕೆಂಬ್ರಿಡ್ಜ್‌ನಲ್ಲಿ ನಡೆದ ಲೆಕ್ಕದ ಪರೀಕ್ಷೆಯಲ್ಲಿ ನಮ್ಮ ಹಿಂದೂದೇಶದವರಾದ ಮು॥ ರಾ॥ ರಘುನಾಥ ಪುರುಷೋತ್ತಮ ಪರಂಜಪ್ಪೆ ಎಂಬುವರು ಮೊದಲನೇ ಶ್ರೇಣ್ಯಿಯಲ್ಲಿ ಮೊದಲನೆಯವರಾಗಿ ತೇರ್ಗಡೆಯಾಗಿದಾರೆಂಬುದನ್ನು ನಮ್ಮ ವಾಚಕರಿಗೆ ತಿಳಿಸುವುದಕ್ಕೆ ಬಹಳ ಸಂತೋಷಪಡುತ್ತೇವೆ. ಇವರು ಬ್ರಾಹ್ಮಣರು. ಬೊಂಬಾಯಿ ಆಧಿಪತ್ಯದಲ್ಲಿ ರತ್ನಗಿರಿಯೆಂಬ ಪಟ್ಟಣದ ಹತ್ತಿರ ಬಡವರ ಹೊಟ್ಟೆಯಲ್ಲಿ ಹುಟ್ಟಿ, ತಮ್ಮ ಬುದ್ಧಿಬಲದಿಂದ ವೇತನಗಳನ್ನು ಪಡೆಯುತ್ತ ಬಿ. ಎಸ್ ಸಿ. ಎಂಬ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರೆಗೂ ಈ ದೇಶದಲ್ಲೇ ಓದಿದರು. ಅನಂತರದಲ್ಲಿ ತಾವು ಓದಿದ ಪುನಹೆಯಲ್ಲಿರುವ ಫರ್ಗ್ಯುಸನ್ ಕಾಲೇಜಿನಲ್ಲಿ ಒಂದು ವರ್ಷ ಉಪಾಧ್ಯಾಯರಾಗಿದ್ದರು. ಇವರು ಮೊದಲಿಂದಲೂ ಲೆಕ್ಕದಲ್ಲಿ ಬಹಳ ಪ್ರವೀಣರೆಂಬ ಹೆಸರನ್ನು ಪಡೆದಿದ್ದರು. ಇಂಡಿಯಾ ಸರ್ಕಾರದವರು ಕೊಡುವ ಒಂದು ವೇತನವನ್ನು ಪಡೆದು ಇಂಗ್ಲೆಂಡಿಗೆ ಹೋಗಿ ಮೂರುವರ್ಷ ಅಲ್ಲಿ ವ್ಯಾಸಂಗ ಮಾಡಿ, ಈಗ ಪರೀಕ್ಷೆಯಲ್ಲಿ ಮೊದಲನೆಯವರಾಗಿ ಉತ್ತೀರ್ಣರಾಗಿದಾರೆ. ಇವರಿಂದ ನಮ್ಮ ಹಿಂದೂದೇಶಕ್ಕೆ ಒಂದು ದೊಡ್ಡ ಬಹುಮಾನವುಂಟಾದಂತೆ ಎಣಿಸುವದೇನೂ ದೊಡ್ಡದಲ್ಲ. ಈ ಶುಭವರ್ತಮಾನವು ತಿಳಿದಿಂ

ವಿಷಯಗಳು.	ಪರೀಕ್ಷಕರ ಹೆಸರು ಮತ್ತು ವಿಳಾಸ.
	ಸಿಂಗರಾವ್, ಬಿ. ಎ. ಯವರು ಎರಡನೇ ಭಾಗಕ್ಕೂ ಮತ್ತು ಲೋವರ್ ಸೆಕೆಂಡರೀ ಪರೀಕ್ಷೆಯ ಹಿಂದೂಚರಿತ್ರೆ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆಯ ಇಂಗ್ಲೀಷು ಚರಿತ್ರೆಯ ಒಂದನೇ ಭಾಗಕ್ಕೆ ಮೈಸೂರು ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ಹೆಡ್ಮಾಸ್ಟರ್ ಮ|| ಕೆ. ನಾರಣ್ಯೆಯಂಗಾರ್ ಬಿ. ಎ. ಯವರು
ಲೋವರ್ ಸೆಕೆಂಡರೀ ಪರೀಕ್ಷೆ ನಕ್ಷೆ ಬರೆಯುವದು	ಮೈಸೂರು ಮಹಾರಾಜಾ ಕಾಲೆಜ್ ಸಹಾಯೋಪಾಧ್ಯಾಯರು ಮ || ಬಿ. ಸುಬ್ಬರಾನ್ ಬಿ. ಎ. ಯವರು
ಲೋವರ್ ಸೆಕೆಂಡರೀ ಪರೀಕ್ಷೆ ಭೂಗೋಳಶಾಸ್ತ್ರ	ಮೈಸೂರು ದೇಶೀಯ ಪರೀಕ್ಷೆಯ ವ್ಯಾನೇಜರ್ ಮ|| ಎಸ್. ಗೋಪಾಲರಾಯರು ಬೆಂಗಳೂರು
ಪಾಕಶಾಸ್ತ್ರ ಲೋವರ್ ಸೆಕೆಂಡರೀ ಪರೀಕ್ಷೆ	ಮೈಸೂರು ಮಹಾರಾಣಿಯವರ ಬಾಲಿಕಾಪಾಠಶಾಲೆಯ ಸಹಾಯೋಪಾಧ್ಯಾಯಿನೀಯರಾದ ಸಿ. ಆರ್. ಚಲ್ಲಮ್ಮನವರು
ಕಸೂತಿಕೆಲಸ, ಲೋವರ್ ಮತ್ತು ಅಪ್ಪರ್ ಸೆಕೆಂಡರೀ ಪರೀಕ್ಷೆ	ಮಹಾರಾಣೀ ಬಾಲಿಕಾ ಪಾಠಶಾಲೆಯ ಲೇಡೀ ಸೂಪರಿಂಟೆಂಡೆಂಡ್ ವಿ ಸ್. ರಿಸ್ಡೇಲ್ ಮತ್ತು ಮೈಸೂರು ಹಾರ್ಡ್ವಿಕ್‌ನಲ್ಲಿರುವ ವಿ.ಸ್ ಕುಕ್
ಸಂಗೀತ, ಅಪ್ಪರ್ ಸೆಕೆಂಡರೀ ಪರೀಕ್ಷೆ	ಮ|| ರಾ|| ಆರ್ ನರಸಿಂಹಾಚಾರ್ಯರು ಎಂ, ಎ, ಶಾಸನದ ಇಲಾಖಾ

ಪೆಸ್ಟಲಾಟ್ಸ್ಸೀಯವರಚರಿತ್ರೆ.

ಫ್ರೆಂಚ್‌ಚಕ್ರಾಧಿಪತ್ಯದಲ್ಲಿ ಚಕ್ರವರ್ತಿಯವರ ದವಲತ್ತುಹೋಗಿ ಪ್ರಜೆಗಳ ದವಲತ್ತು ಬಂದ ವಿಷಯವನ್ನು ಮೊದಲೇ ಸೂಚಿಸಿದೆ. ೧೭೯೯ನೇ ಇಸವಿಯಲ್ಲಿ ಫ್ರೆಂಚ್‌ದೇಶದ ಪ್ರಜಾಪ್ರತಿನಿಧಿಸಭೆಯವರು ತಮ್ಮ ರಾಜ್ಯಭಾರದ ಏರ್ಪಾಡನ್ನು ಇತರ ಚಿಕ್ಕಚಿಕ್ಕರಾಜ್ಯಗಳಿಗೆ ಹರಡಿಕೊಳ್ಳುವಂತೆ ಮಾಡುವದಕ್ಕೆ ಪ್ರಯತ್ನಿಸಿದರು. ೧೭೯೮ ರಲ್ಲಿ ಸ್ವಿಟ್ಜರಲೆಂಡ್ ಪ್ರತಿನಿಧಿಸಭೆಯು ಕ್ರಮಪಡಿಸಲ್ಪಟ್ಟಿತು. ಆ ದೇಶದ ರಾಜ್ಯಭಾರವನ್ನು ಮಾಡುವದಕ್ಕಾಗಿ ೫ ಜನ ಡೈರೆಕ್ಟರುಗಳು ಏರ್ಪಡಿಸಲ್ಪಟ್ಟರು. ಈ ಕಾಲದಲ್ಲಿ ರಾಜ್ಯಭಾರಮಾಡತಕ್ಕವರ ಕರ್ತವ್ಯವನ್ನೂ ಪ್ರಜೆಗಳ ಹಕ್ಕುಗಳನ್ನೂ ಕುರಿತು ರಾಜಧರ್ಮಗರ್ಭಿತಗಳಾದ ಅನೇಕ ಗ್ರಂಥಗಳನ್ನೂ ಪೆಸ್ಟಲಾಟ್ಸ್ಸಯವರು ಬರೆದು ಮುದ್ರಿಸಿದರು. 'ಲೆನರ್ಡ್ ಮತ್ತು ಜರಟ್ರೂಡ್' ಗ್ರಂಥದಲ್ಲಿ ತಾವು ಸೂಚಿಸಿದ್ದ ವಿದ್ಯಾಭ್ಯಾಸದ ಏರ್ಪಾಡುಗಳಿಗೋಸ್ಕರ ಸಹಾಯಮಾಡಬೇಕೆಂದು ಇವರು ಸ್ವಿಟ್ಜರಲೆಂಡ್ ಗೌರ್ನಮೆಂಟಿನವರನ್ನು ಪ್ರಾರ್ಥಿಸಿದರು. ಆ ಗೌರ್ನಮೆಂಟಿನವರು ಇವರಿಗೆ ಬೇಕಾದ ಸಹಾಯವನ್ನು ಕೊಡುವದಕ್ಕೊಪ್ಪಿದರು.

ಅಷ್ಟರಲ್ಲಿಯೇ ಸ್ವಿಟ್ಜರಲೆಂಡಿನ ಒಂದು ತುಕಡಿಯವರು ಫ್ರೆಂಚ್‌ಜನಗಳ ರಾಜ್ಯಭಾರದ ಮೇಲುಪಜ್ರೆಗನುಸಾರವಾಗಿ ಮಾಡಲ್ಪಟ್ಟ ಏರ್ಪಾಡುಗಳನ್ನು ಒಪ್ಪಲಿಲ್ಲ. ಅದರ ತುಕಡಿಯ ಜನರೆಲ್ಲರೂ ಸರಕಾರಕ್ಕೆ ವಿರೋಧವಾಗಿ ಪ್ರತಿಭಟಿಸಿದರು. ಆಗ ಫ್ರೆಂಚ್‌ದೇಶದವರು ಒಂದು ಸೈನ್ಯವನ್ನು ಕಳುಹಿಸಿದರು. ಈ ತುಕಡಿಯವರಿಗೂ ಆ ಸೈನ್ಯಕ್ಕೂ ಅನರ್ಥವಾದ ಯುದ್ಧವು ಆಯಿತು. ಸದರಿ ಸೈನ್ಯದವರು ಈ ತುಕಡಿಯ ಜನರನ್ನು ಮಕ್ಕಳು ವೃದ್ಧರು ಎಂಬದಾಗಿಯೂ, ಶಕ್ತಿಯಿಲ್ಲದವರು ಹೆಂಗಸರು ಎಂಬದಾಗಿಯೂ, ನೋಡದೆ ಎರಡುದಿವಸಗಳವರೆವಿಗೂ ಗುಂಡಿನಿಂದ ಸುಟ್ಟು ಕೊಂದು ಹಾಕಿದರು. ಇದರಿಂದ ಅನೇಕ ಕುಟುಂಬದವರು ನಿರ್ಗತಿಕರಾದರು. ಅನೇಕ ಮಕ್ಕಳು ಅನಾಥರಾದರು.

ಆಗ ಸ್ವಿಟ್ಜರಲೆಂಡ್ ಗೌರ್ನಮೆಂಟಿನವರು ಒಂದು ಅನಾಥಾಲಯವನ್ನು ಕಟ್ಟಿಸಿ ಅನಾಥರಾದ ಮಕ್ಕಳನ್ನೆಲ್ಲಾ ಅಲ್ಲಿ ಇಡಿಸಿ ಅವರನ್ನು ನೋಡಿಕೊಳ್ಳುವದಕ್ಕೋಸ್ಕರ ಪೆಸ್ಟಲಾಟ್ಸ್ಸೀಯವರನ್ನೇ ಸದರೀ ಅನಾಥಾಲಯದ ಡೈರೆಕ್ಟರುಗಳಾಗಿರು

ದೀಚೆಗೆ ಹಿಂದೂದೇಶದ ಅನೇಕ ಪಟ್ಟಣಗಳಿಂದ ಜನಗಳ ಆನಂದಸೂಚಕವಾದ ವರ್ತಮಾನಗಳು ಮು॥ ರಾ॥ ಪರಂಜಪ್ಪೆರವರಿಗೆ ಕಳುಹಿಸಲ್ಪಟ್ಟವೆ. ಕಳೆದವಾರ ಬೆಂಗಳೂರಲ್ಲೂ ಸಹ ಬಹಳ ಜನರು ಸೇರಿ ತಮ್ಮ ಆನಂದವನ್ನು ಅವರಿಗೆ ತಿಳಿಸಿದರು. ಅನುಕೂಲವಿದ್ದರೆ ನಮ್ಮ ದೇಶದಲ್ಲಿ ಬುದ್ಧಿವಂತರಾಗಿರುವವರು ಎಂಥ ಕೆಲಸಗಳನ್ನು ಮಾಡಬಲ್ಲರೆಂಬುದು ಇದರಿಂದ ಸುವ್ಯಕ್ತವಾಗುವುದು.

***

ಇವರು ಈ ದೇಶದಲ್ಲಿ ಓದಿದ ಕಾಲೇಜಿನ ವಿಷಯವಾಗಿ ನಾವು ಈ ಸಮಯದಲ್ಲಿ ಬರೆಯಬೇಕಾದುದು ಸ್ವಲ್ಪವಿದೆ. ಈ ಕಾಲೇಜು ಇರತಕ್ಕದ್ದು ಪುನಹೆ ಪಟ್ಟಣದಲ್ಲಿ. ಇದರಲ್ಲಿ ಬಿ. ಎ. ಪರೀಕ್ಷೆಯವರೆಗೂ ಸಾಠಹೇಳುವವರೆಲ್ಲ ನಮ್ಮ ಹಿಂದೂದೇಶದವರೇ. ಪಾಠಶಾಲೆಯು ಸರ್ಕಾರದಿಂದ ಏರ್ಪಾಡಾದುದಲ್ಲ. ಉದಾರರಾದ ಕೆಲವರ ಸಹಾಯದಿಂದ ಇದನ್ನು ಮೊದಲು ಸ್ಥಾಪಿಸಿದರು. ಇದರಲ್ಲಿ ಈಗ ಕೆಲಸಮಾಡುವವರೆಲ್ಲ ದೇಶಾಭಿಮಾನದಿಂದಲೂ ವಿದ್ಯೆಯಲ್ಲಿ ತಮಗಿರುವ ಅಭಿರುಚಿಯಿಂದಲೂ ಕೆಲಸಮಾಡುವರು. ಮುಖ್ಯೋಪಾಧ್ಯಾಯರಿಗೆ ಈ ಪಾಠಶಾಲೆಯಲ್ಲಿ ತಿಂಗಳಿಗೆ ನೂರುರೂಪಾಯಿ ಮಾತ್ರ ಸಂಬಳವಂತೆ. ಇತರರಿಗೆ ಎಪ್ಪತ್ತೈದು ರೂಪಾಯಿ ಮಾತ್ರವಂತೆ. ಹೀಗೆ ಸಂಬಳ ಕಡಮೆಯಾದರೂ ಆದರದಿಂದ ಕೆಲಸಮಾಡುವುದರಿಂದ ಅಲ್ಲಿ ಎಷ್ಟು ಉತ್ತಮವಾದ ವಿದ್ಯಾಭ್ಯಾಸವು ನಡೆಯುವುದೆಂಬುದು ಮು ॥ ರಾ ॥ ಪರಂಜಪ್ಪೆರವರ ಜಯದಿಂದ ಚೆನ್ನಾಗಿ ಗೊತ್ತಾಗುವುದು. ಮು॥ ರಾ॥ ಪರಂಜಪ್ಪೆರವರೂ ತಾವೂ ಈ ದೇಶಕ್ಕೆ ಪುನಃ ಬಂದಮೇಲೆ ಅದೇ ಕಾಲೇಜಿನಲ್ಲಿ ಅಷ್ಟೇ ಸಂಬಳಕ್ಕೆ ಉಪಾಧ್ಯಾಯರಾಗಿರುವರೆಂಬ ತಮ್ಮ ಅಭಿಪ್ರಾಯವನ್ನು ತಿಳಿಸಿದಾರೆ. ಇವರ ದೊಡ್ಡತನವೆಂಥಾದ್ದು !

***

ಮದರಾಸ್ ಯೂನಿವರ್ಸಿಟಿಯಲ್ಲಿ ಸಂಸ್ಕೃತ, ದ್ರವಿಡಭಾಷೆಗಳನ್ನು ಮಾತ್ರ ತಿಳಿದವರಿಗೂ ಬಿ. ಎ. ಎಂ. ಎ. ಯಂಥ ಪರೀಕ್ಷೆಗಳನ್ನಿಟ್ಟು ಆ ಭಾಷೆಗಳನ್ನು ವ್ಯಾಸಂಗಮಾಡುವುದನ್ನು ಪ್ರೋತ್ಸಾಹಮಾಡಬೇಕೆಂಬ ಅಭಿಪ್ರಾಯವು ಮದರಾಸಿನ ಕೆಲವು ವಿದ್ಯಾಭಿಮಾನಿಗಳಿಗೆ ಇರುವುದೆಂದು ನಾವು ತಿಳಿಸಿದ್ದೆವಷ್ಟೆ. ಈಚೆಗೆ ನಡೆದಿರುವುದರಿಂದ ಮದರಾಸ್ ಯೂನಿವರ್ಸಿಟಿಯವರು ಇಂಥ ಪರೀಕ್ಷೆಗಳನ್ನು ಸದ್ಯದಲ್ಲಿ ಏರ್ಪಾಡುಮಾಡುವಂತಿಲ್ಲವೆಂದು ತಿಳಿಸಬೇಕಾಗಿದೆ. ಆದರೆ ಮದರಾಸ್ ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯವರು ಇಂಥ ಕೆಲವು ಪರೀಕ್ಷೆಗಳನ್ನು ಮಾಡಿ ಈ ಭಾಷೆಗಳ ವ್ಯಾಸಂಗಕ್ಕೆ ಪ್ರೋತ್ಸಾಹಕೊಡುವಂತಿದೆ.

ಡುವದರಲ್ಲಿ ಸಾಮ, ದಾನ, ಭೇದ, ದಂಡಗಳನ್ನೆಲ್ಲಾ ಮಾಡಬೇಕಾಗುತ್ತಿತ್ತು. ಇವರ ಪ್ರಯತ್ನವು ಸಾಧುವಾದದ್ದಲ್ಲಾ ಎಂಬದಾಗಿಯೂ, ಇವರು ವಾಸ್ತವವಾಗಿ ಈ ಅನಾಥರ ಹಿತಚಿಂತಕರಲ್ಲ ಎಂಬದಾಗಿಯೂ ಅನೇಕರು ಪ್ರಲಪಿಸುತ್ತಿದ್ದರು. ಈ ಪ್ರಲಾಪಗಳನ್ನು ಲಕ್ಷ್ಯಮಾಡದೆ ಎಲ್ಲಾ ಮಕ್ಕಳಲ್ಲಿಯೂ ಪುತ್ರವಾತ್ಸಲ್ಯವನ್ನಿಟ್ಟು ತಪ್ಪುಮಾಡಿದವರನ್ನು ಪೂರ್ವಾಪರಜ್ಞರಾದ ತಂದೆತಾಯಿಗಳಂತೆ ತಪ್ಪಿಗೆ ಅನುರೂಪವಾದ ಶಿಕ್ಷೆಯನ್ನು ಕೊಡುತ್ತಾ, ಗುಣಾಢ್ಯರ ಪ್ರವರ್ತನೆಗಳನ್ನು ವೀಚ್ಚುತ್ತಾ ಎಲ್ಲರಿಗೂ ವಿದ್ಯಾಭ್ಯಾಸಮಾಡಿಸುವದಲ್ಲದೆ ಬುದ್ಧಿವಾದಗಳನ್ನು ಹೇಳುತ್ತಾ ವಿದ್ಯಾಭ್ಯಾಸವು ಪೂರೈಸಿ ವಯೋವಂತರಾದ ಕೂಡ್ಲೆ ಅವರಿಗೆ ಸಹಾಯರಾಗಿ ಜೀವನಮಾಡುವದಕ್ಕೆ ಬೇಕಾದ ವೃತ್ತಿಗಳನ್ನೆಲ್ಲಾ ಕಲ್ಪಿಸುತ್ತಾ ಸದಾ ೮ ಅನಾಥರ ಪುರೋವೃದ್ಧಿಯನ್ನು ಎದರು ನೋಡತ್ತಾ ಇದ್ದರು. ಈ ಅನಾಥಾಲಯವು ಪ್ರತಿಷ್ಠೆಯಾದ ಕಾಲದಲ್ಲಿ ಇವರು ಒಬ್ಬ ಸ್ನೇಹಿತರಿಗೆ ಬರೆದಿರತಕ್ಕ ಒಂದು ಲೇಖನವು ಜ್ಞಾತವ್ಯವಾಗಿದೆ. ಅದರಲ್ಲಿ ಅವರು ಹೇಳುವದೇನೆಂದರೆ;—ಈ ಆಲಯ ಪ್ರತಿಷ್ಠೆಯಾದ ಕೆಲವು ದಿವಸಗಳಮೇಲೆ ಆಲ್ಟಾರ್ಫ್ ಎಂಬ ಪಟ್ಟಣವು ಸುಟ್ಟುಹೋಯಿತು. ನೂರಾರುಜನ ಬಾಲರು ನಾಥರು ಇಲ್ಲದೇಹೋದರು. ಈ ಸಂಗತಿಯು ತಿಳಿದಕೂಡ್ಲೆ ಒಂದುದಿನ ನನ್ನ ಅನಾಥಶಾಲೆಗೆ ಸೇರಿದ ಅನಾಥರನ್ನು ಕುರಿತು "ಈ ಬೆಂಕಿಬಿದ್ದದ್ದರಿಂದ ಅನೇಕರು ಅನಾಥರಾದರು. ಅನ್ನವಸ್ತ್ರಗಳಿಗೆ ಇಲ್ಲದೆ ಬಹಳ ಸಂಕಟಪಡುತ್ತಲಿದಾರೆ. ಏನು ಮಾಡತಕ್ಕದ್ದು" ಎಂದು ನಾನು ಅನುತಾಪಪಟ್ಟೆನು. ಅದಕ್ಕೆ ಈ ಅನಾಥಾಲಯಕ್ಕೆ ಸೇರಿದ ಬಾಲರೆಲ್ಲರೂ ಅವರನ್ನು ಇಲ್ಲಿಗೆ ಕರೆಸಿಕೊಂಡು ಅನ್ನವಸ್ತ್ರಗಳನ್ನು ಕೊಟ್ಟು ವಿದ್ಯಾಭ್ಯಾಸವನ್ನು ಮಾಡಿಸಬೇಕು ಎಂದು ಹೇಳಿದರು. ಅದಕ್ಕೆ "ಸರ್ಕಾರದವರು ನಮಗೆ ಈಗ ಮಾಡತಕ್ಕ ಸಹಾಯಕ್ಕಿಂತ ಹೆಚ್ಚಾಗಿ ಸಹಾಯಮಾಡುವದಿಲ್ಲ. ಈ ನೂರಾರುಮಂದಿ ಅನಾಥರನ್ನು ಇಲ್ಲಿಗೆ ಸೇರಿಸಿಕೊಂಡರೆ ಈಗ ಬರತಕ್ಕ ಸಹಾಯದಿಂದಲೇ ನೀವು ಅವರು ಎಲ್ಲರೂ ಅನ್ನವಸ್ತ್ರಗಳನ್ನು ಹೊಂದಬೇಕು. ಅವರು ಬಂದಪಕ್ಷದಲ್ಲಿ ನಿಮಗೆ ಸಲ್ಲತಕ್ಕ ಅನ್ನವಸ್ತ್ರಗಳಲ್ಲಿ ಅವರಿಗೂ ಒಂದುಭಾಗ ಕೊಡಬೇಕಾಗುತ್ತದೆಯಲ್ಲಾ ಏನು ಮಾಡುತ್ತೀರಿ" ಎಂದು ಕೇಳಿದೆನು. ಅದಕ್ಕೆ ಅವರು ನಾವುಗಳು ಎಲ್ಲರೂ ಕಷ್ಟಪಟ್ಟು ಕೆಲಸಮಾಡಿ ಏನಾದರೂ ಹೆಚ್ಚಾಗಿ ಉರ್ಜನೆಮಾಡುವದಕ್ಕೆ ಪ್ರಯತ್ನಮಾಡುತ್ತೇವೆ. ಹಾಗೆ ಉರ್ಜಿಸುವದು ಸಾಧ್ಯವಾದರೇ ಆಗಲಿ, ಹಾಗೆ ಆಗದಪಕ್ಷದಲ್ಲಿ ನಾವೆಲ್ಲರೂ ಅರ್ಧ

ವಂತೆ ನೇಮಿಸಿದರು. ಪೆಸ್ಟಲಾಟ್ಸೀಯವರು ಸಂಬಳವಿಲ್ಲದೇ ಇಂಥಾ ಕೆಲಸವನ್ನು ನೋಡುತ್ತಿದ್ದರು. ಈಗ ಲೆನರ್ಡ್ ಮತ್ತು ಜರಟ್ರೂಡ್ ಎಂಬ ಗ್ರಂಥದಲ್ಲಿ ತಾವು ಬರೆದಿದ್ದ ಎಪಿಸೋಡುಗಳನ್ನೆಲ್ಲಾ ಆಚರಣೆಗೆ ತರುವದಕ್ಕೆ ಅವಕಾಶವುಂಟಾಯಿತು. ಪ್ರತಿದಿನದಲ್ಲಿಯೂ ಈ ಅನಾಥಾಲಯಕ್ಕೆ ಹೊಟ್ಟೆಗೆ ಅನ್ನವೂ, ಹೊದ್ದುಕೊಳ್ಳುವದಕ್ಕೆ ಬಟ್ಟೆಯೂ ಇಲ್ಲದೇ ಅನೇಕ ವಿಧವಾದ ರೋಗಗಳಿಂದ ಕಷ್ಟಪಡುತ್ತಿರುವ ಮಕ್ಕಳು ಗುಂಪುಗುಂಪಾಗಿ ಬರುತ್ತಿದ್ದರು. ಪೆಸ್ಟಲಾಟ್ಸಿಯವರು ಈ ಮಕ್ಕಳನ್ನು ತಮ್ಮ ಅನಾಥಾಲಯಕ್ಕೆ ಸೇರಿಸಿಕೊಂಡು ಅವರಿಗೆ ಸ್ನಾನಾದಿಗಳನ್ನು ಮಾಡಿಸಿ, ಒಳ್ಳೇ ಉಡಿಗೆಗಳನ್ನು ಹಾಕಿ ಸರಿಯಾದ ಚಿಕಿತ್ಸೆಗಳಿಂದ ರೋಗಾವಿಗಳನ್ನು ನಾಸಿಮಾಡಿ ಆರೋಗ್ಯವನ್ನು ಹೊಂದಿದ ಕೂಡಲೇ ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಸದಾ ಅವರ ಯೋಗಕ್ಷೇಮಚಿಂತೆಯಲ್ಲಿಯೇ ಪರಾಯಣರಾಗಿರುತ್ತಿದ್ದರು. ಪ್ರಜಾಪ್ರತಿನಿಧಿಗಳಿಂದ ದವಲತ್ತು ಮಾಡಲ್ಪಟ್ಟ ರಾಜ್ಯಗಳೆಲ್ಲೆಲ್ಲಾ ಸ್ವಿಟ್ಜರಲೆಂಡ್ ರಾಜ್ಯವು ಬಹಳ ಚಿಕ್ಕದು. ಆದಾಗ್ಯೂ ರಾಮರಾಜ್ಯಕ್ಕೆ ಸರಿಯಾದದ್ದು ಎಂದು ಪ್ರತಿಷ್ಠೆಯನ್ನು ಪಡೆದು ಇದೆ. ಅಂಥಾ ಪ್ರತಿಷ್ಠೆಯು ಈ ರಾಜ್ಯಕ್ಕೆ ಬರುವದಕ್ಕೆ ಪೆಸ್ಟಲಾಟ್ಸಿಯವರು ಬಹಳದೂರದ ವರೆವಿಗೂ ಕಾರಣಭೂತರಾದವರು. ಅದೇಶದ ಬಾಲರಿಗೆ ವಿದ್ಯಾವಿನಯಸಂಪತ್ತುಗಳನ್ನು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಉಂಟುಮಾಡಿದವರೇ ಇವರು. ರಾಜ್ಯಭಾರಮಾಡತಕ್ಕವರು ಪ್ರಜಾರಂಜನೆಯನ್ನು ಮಾಡತಕ್ಕದ್ದರಲ್ಲಿ ಬದ್ಧಾದರರಾಗಿರಬೇಕಾದರೆ ಪ್ರಜೆಗಳು ಸರಕಾರದಿಂದ ಉಂಟಾಗಿರತಕ್ಕ ನ್ಯೂನಾತಿರಿಕ್ತಗಳನ್ನು ತಿಳಿದು ಕೊಳ್ಳುತ್ತಾ ಅವುಗಳನ್ನು ಚರ್ಚಿಸುತ್ತಾ ಭಕ್ತಿವಿನಯಪುರಸ್ಸರವಾಗಿ ಅವುಗಳನ್ನ ಸರಕಾರಕ್ಕೆ ತಿಳಿಸಿ ಪರಿಹಾರವಾಡಿಕೊಳ್ಳುತ್ತಾ ಬರುವದು ಪ್ರಜೆಗಳ ಮುಖ್ಯಕರ್ತವ್ಯವೆಂದು ಜನರಿಗೆ ತಿಳಿಸಿ ಅವರಲ್ಲಿ ಐಕಮತ್ಯವನ್ನುಂಟುಮಾಡಿದವರೇ ಇವರು.

ಲೋಕೋಪಕಾರಿಗಳ ಪ್ರಯತ್ನವು ಸಫಲವಾದರೆ ಅದಕ್ಕೂ ಹೊಟ್ಟೆಕಿಚ್ಚುಪಡತಕ್ಕವರು ಉಂಟಾಗುವದು ಆಶ್ಚರ್ಯವಲ್ಲ. ಸರಕಾರದವರು ಮಾಡಿದ ಈ ಅನಾಥಾಲಯದ ಪ್ರಯತ್ನವನ್ನೂ ಪೆಸ್ಟಲಾಟ್ಸೀಯವರು ಈ ಅನಾಥರ ಪೋಷಣೆಯಲ್ಲಿಯೂ, ಅವರ ವಿದ್ಯಾಭ್ಯಾಸದ ವಿಷಯದಲ್ಲಿಯೂ, ಅವರ ಪುರೋವೃದ್ಧಿಯ ವಿಷಯದಲ್ಲಿಯೂ ಅವರು ಮಾಡುತ್ತಿದ್ದ ಕಾರ್ಯಗಳನ್ನೂ ನಿಂದಿಸುವದರಲ್ಲಿ ಬದ್ಧಾದರರಾದವರು ಅನೇಕರು ಇದ್ದರು. ಪೆಸ್ಟಲಾಟ್ಸೀಯವರು ಅಶಿಕ್ಷಿತರಾದ ಈ ಅನಾಥರನ್ನು ಶಿಕ್ಷಿತರನ್ನಾಗಿ ಮಾ

ವಾಕ್ಯಗಳಲ್ಲಿ ಅತನು, ಈತನು ಮೊದಲಾದುವು ಕರ್ತೃಪದಗಳಾಗಿಯೂ, ಗಡಿಗೆಯಲ್ಲಿ ಎಂಬುವುದು ಅಧಿಕರಣಕಾರಕವಾಗಿಯೂ, ಬೆಂಕಿಯಿಂದ, ಸೌಟಿನಿಂದ ಮೊದಲಾದುವು ಕರಣಕಾರಕಗಳಾಗಿಯೂ, ಅಕ್ಕಿಯನ್ನು, ಅನ್ನವನ್ನು ಮೊದಲಾದುವು ಕರ್ಮಕಾರಕಗಳಾಗಿಯೂ, ಬೇಯಿಸುತ್ತಾನೆ, ಕೆದರುತ್ತಾನೆ ಮೊದಲಾದವು ಕ್ರಿಯಾಪದಗಳಾಗಿಯೂ ಇರುವುವು. ಇಲ್ಲಿ ಅತ, ಈತ ಎಂಬುವರು ಇತರರಿಂದಲೂ ಪ್ರೇರಿತರಾಗದೆ ಇತರ ಕಾರಕಗಳಲ್ಲಿ ತಾನೇ ವ್ಯಾಪಾರವನ್ನು ಹುಟ್ಟಿಸುವುದರಿಂದ ಸ್ವತಂತ್ರ ಕರ್ತೃಗಳೆಂದರಿವುದು.

ಯಾವನು, ನೀನು ಹೀಗೆಮಾಡು, ಎಂದು ಮತ್ತೊಬ್ಬನಿಂದ ಪ್ರೇರಿತನಾಗಿಯೇ ಒಂದು ಕಾರ್ಯದಲ್ಲಿ ಪ್ರವರ್ತಿಸುತ್ತಾನೋ ಅವನೇ ಪರತಂತ್ರನು. ಹ್ಯಾಗೆಂದರೆ—ಬಾಣಸಿಗ! ನೀನು ಬೋನವನ್ನಡು. ಗುರುಗಳೇ! ನೀವು ನಮಗೆ ತತ್ವವನ್ನು ಹೇಳಿರಿ, ಎಂಬಲ್ಲಿ ಬಾಣಸಿಗ, ಗುರು, ಇವರಿಬ್ಬರೂ ಇತರರಿಂದ ಪ್ರೇರಿತರಾಗಿಯೇ ಪಾಕದಲ್ಲೂ ಉಪದೇಶದಲ್ಲೂ, ಪ್ರವರ್ತಿಸುವರಾದುದರಿಂದ ಇವರು ಪರತಂತ್ರರು. ಇವರೇ ಇಲ್ಲಿ ಪ್ರಯೋಜ್ಯಕರ್ತೃಗಳೆಂಬುವರು. ಯಾರು ಪ್ರಯೋಜಕರೊ, (ಪ್ರೇರಕರೊ) ಅವರಿಗೂ ಕರ್ತೃವೆಂದೇ ವ್ಯವಹಾರವಿರುವದು. ಇಂಥಾ ಪ್ರಯೋಜ್ಯಕರ್ತೃವಿನಲ್ಲೇ ಇಸುಪ್ರತ್ಯಯಾಂತಗಳಾದ ಕೆಲವು ಧಾತುಗಳಿಗೆ ಪ್ರಯೋಗವಿದ್ದಾಗ ದ್ವಿತೀಯಾವಿಭಕ್ತಿಯನ್ನು ಉಪಯೋಗಿಸಬೇಕೆಂದು ಹೇಳಿರುವದು.

ಮತ್ತು ಹಿಂದಿನ ಸಂಚಿಕೆಯಲ್ಲಿ ಕಾಲಾಧ್ವವಾಚಕಗಳಿಗೆ ದ್ರವ್ಯಗುಣಕ್ರಿಯೆಗಳಿಂದ ನಿರಂತರಸಂಬಂಧವು ತೋರುವಾಗ ಕಾಲವಾಚಕದಮೇಲೂ, ಅಧ್ವವಾಚಕದಮೇಲೂ ದ್ವಿತೀಯಾವಿಭಕ್ತಿಯು ಬರುವುದೆಂದು ಹೇಳಲ್ಪಟ್ಟಿರುವುದು. ಅಲ್ಲಿ ಕಾಲವೆಂದರೆ-ಅಖಂಡವಾಗಿಯೂ ನಿತ್ಯವಾಗಿಯೂ ಇರುವ ಮಹಾಕಾಲವನ್ನು ಗ್ರಹಿಸದೆ ಸೂರ್ಯಚಂದ್ರರ ಗತಿಯಿಂದ ಲೋಕದಲ್ಲಿ ವ್ಯವಹರಿಸುವದಕ್ಕೋಸ್ಕರ ಶಾಸ್ತ್ರಜ್ಞರಿಂದ ಕಲ್ಪಿತವಾದ ಕ್ಷಣ, ಮುಹೂರ್ತ, ದಿನ, ರಾತ್ರಿ, ಪಕ್ಷ, ಮಾಸ, ವರ್ಷ, ಮೊದಲಾದ ಕಾಲಗಳೆಂದು ತಿಳಿಯಬೇಕು.

ಇದರಂತೆ ಅಧ್ವವೆಂಬುವುದೂ, ಕ್ರೋಶ, ಯೋಜನ, ಮೊದಲಾದ ವ್ಯವಹಾರಕ್ಕೆ ವಿಷಯವಾದ ಮಾರ್ಗವೆಂದು ತಿಳಿಯುತಕ್ಕದ್ದು. ಇಂಥಾ ಕಾಲಾಧ್ವಗಳಿಗೆ ಅತ್ಯಂತ ಸಂಯೋಗವೆಂದರೆ ಅವಿಚ್ಛಿನ್ನವಾದ ದ್ರವ್ಯಗುಣಕ್ರಿಯಾಸಂಬಂಧವು, ಎಂದು

ಹೊಟ್ಟೆ ಭೋಜನವನ್ನಾದರೂವಾಡಿ ಉಳಿದದ್ದನ್ನು ಅವರಿಗೆ ವಿನಿಯೋಗಿಸು ವದಕ್ಕೋಸ್ಕರ ಅವಕಾಶವಾಡುತ್ತೇವೆ. ತಾವು ಸರ್ವಪ್ರಯತ್ನದಿಂದಲೂ ಅವರನ್ನು ಕರೆಸಿ ನಮ್ಮ ಉಡಿಗೆಗಳಲ್ಲಿ ಕೆಲವನ್ನು ಅವರಿಗೆ ಕೊಡುತ್ತೇವೆ. ನಮ್ಮ ಅನ್ನದಲ್ಲಿ ಒಂದು ಭಾಗವನ್ನು ಅವರು ಹೊಂದಲಿ ನಾವು ಕಷ್ಟಪಟ್ಟು ಕೈಲಾದಮಟ್ಟಿಗೂ ಸಂಪಾದಿಸಿ ಅವರ ಪೋಷಣೆಯು ವಿದ್ಯಾಭ್ಯಾಸವು ಎರಡೂ ನಡೆಯುವದಕ್ಕೆ ಅವಕಾಶ ವಾಡುತ್ತೇವೆ'' ಎಂದರು. ಈ ಮಾತವನ್ನು ಕೇಳಿದ ಕೂಡ್ಲೆ ಇವರ ವಿದ್ಯಾಭ್ಯಾಸ ಕ್ಕೋಸ್ಕರ ನಾನು ಪಟ್ಟ ಶ್ರಮವೆಲ್ಲಾ ಸಾರ್ಥಕವಾಯಿತೆಂದು ನಾನು ಭಾವಿಸಿದೆನು''

ಈ ಲೇಖನದಿಂದಲೇ ಪೆಸ್ಟಲಾಟ್ಸೀಯವರು ತಮ್ಮ ವಿದ್ಯಾರ್ಥಿಗಳ ಭೂತ ದಯೆ ಪಶ್ಚಾತ್ತಾಪಗಳನ್ನು ಎಷ್ಟುಮಟ್ಟಿಗೆ ಕ್ರಮಪಡಿಸಿ ಇದ್ದರು ಎಂಬುದು ಗೊತ್ತಾ ಗುತ್ತದೆ. ಇಂಥಾ ಧರ್ಮಬುದ್ಧಿಯನ್ನುಂಟುಮಾಡತಕ್ಕ ವಿದ್ಯಾಭ್ಯಾಸವೇ ವಿದ್ಯಾಭ್ಯಾಸ. ಅನೇಕರು ಬಹಳ ವಿದ್ಯಾವಂತರೆನ್ನಿಸಿಕೊಂಡು ಸ್ವಕಾರ್ಯಧುರಂಧರರಾಗಿ ಬೇಕಾದಷ್ಟು ಧನವನ್ನು ಸಂಪಾದಿಸಿ ಆದನ್ನು ಧನಪಿಶಾಚಿಗಳಂತೆ ಸಂರಕ್ಷಿಸುತ್ತಾ ಇರುವರು. ಅಂಥ ವರ ವಿದ್ಯವನ್ನು ಸದ್ವಿದ್ಯೆಯೊಂದು ಯಾರುತಾನೆ ಭಾವಿಸುವರು.

ವ್ಯಾಕರಣಶಾಸ್ತ್ರ.

ಹಿಂದಿನ ಸಂಚಿಕೆಯಲ್ಲಿ ಪ್ರಯೋಜ್ಯಕರ್ತೃರೂಪಾರ್ಥದಲ್ಲಿ ದ್ವಿತೀಯಾವಿಭ ಕ್ತಿಬರುವುದೆಂದು ಹೇಳಲ್ಪಟ್ಟಿರುವುದು. ಅಲ್ಲಿ ಕರ್ತೃವು ಪ್ರಯೋಜ್ಯನೆಂದೂ, ಪ್ರೇರ ಕನೆಂದೂ, ಎರಡು ಇರುವುದು. ಸಾಮಾನ್ಯವಾಗಿ ಧಾತ್ವರ್ಥಕ್ಕನುಕೂಲವಾದ ವ್ಯಾ ಪಾರವುಳ್ಳವನಾರೋ, ಅವನೇ ಕರ್ತೃವೆಂಬವನು. ಇಂಥಾ ವ್ಯಾಪಾರವುಳ್ಳವನು ಸ್ವ ತಂತ್ರನೆಂತಲೂ, ಪರತಂತ್ರನೆಂತಲೂ, ಎರಡು ವಿಧವಾಗಿರುವನು. ಇವರಲ್ಲಿ ಯಾವ ನು ಪರರಿಂದ ಅಪ್ರಯುಕ್ತನಾಗಿಯೇ ಕರ್ಮ ವೊದಲಾದ ಕಾರಕಗಳನ್ನು ಅದರದರ ವ್ಯಾಪಾರಗಳಲ್ಲಿ ಪ್ರವರ್ತಿಸುವಂತೆ ಮಾಡಿ ಧಾತ್ವರ್ಥಫಲವನ್ನು ನಿರವೇರಿಸುವನೋ ಅವನೇ ಸ್ವತಂತ್ರಕರ್ತನು.

ಹ್ಯಾಗಂದರೆ, ಆತನು ಗಡಿಗೆಯಲ್ಲಿ ಬೆಂಕಿಯಿಂದ ಅಕ್ಕಿಯನ್ನು ಬೇಯಿಸು ತ್ತಾನೆ. ಈತನು ಸೌಟಿನಿಂದ ಅನ್ನವನ್ನು ಕೆದರುತ್ತಾನೆ ಇವೇ ಮೊದಲಾದ

II. ಅಡಿಕೆಯು ಬೆಳೆಯುವ ಮರಕ್ಕೆ ಅಡಿಕೆಯಮರವೆಂದು ಹೆಸರು

ಅಡಿಕೆಯಮರವು "ತೃಣರಾಜೀಯವೃಕ್ಷ"ವೆಂದು ಕರೆಯಲ್ಪಡುವದು. [ಅಂದರೆ ಬಹಳ ವರುಷಗಳು ಸುಮ್ಮನೆ ಬೆಳೆದು, ಅನಂತರ ಹೂ, ಕಾಯಿಗಳನ್ನು ಬಿಡುತ್ತಲೆ ಇರುತ್ತದೆ]

III. ವರ್ಣನೆ :—

(i) ಬಣ್ಣ—ಚೆನ್ನಾಗಿ ಪಕ್ವಕ್ಕೆ ಬಂದ ಅಡಿಕೆಯು ಕಾಯಿಯು ಹಳದಿಮಿಶ್ರವಾದ ಕೆಂಪು ಬಣ್ಣವುಳ್ಳದ್ದು. ಈ ಬಣ್ಣವನ್ನು ಕಂಡ ಹೊರತು ಅಡಿಕೆಯನ್ನು ಕುಯ್ಯುವದಿಲ್ಲ.

(ii) ಭಾಗಗಳು—

ಕಾಯಿಯ ಮೇಲ್ಭಾಗದಲ್ಲಿ ಗಟ್ಟಿಯಾದ ಹೊಟ್ಟು ಇರುವದು. ಮಧ್ಯಭಾಗದಲ್ಲಿ ಗುಂಡಾಗಿ ಅಡಿಕೆಯಿರುವದು. ಹೊಟ್ಟಿನ ಕೆಳಭಾಗದಲ್ಲಿ ನಾರು ಇರುವದು.

(iii) ಅಡಿಕೆಯು "ದೃಢಫಲ" ವೆಂದು ತಿಳಿಸುವದು. (ದೃಢಫಲವೆಂದರೆ-ಉತ್ತಮಾಂಡಾಶಯವಾದ ಒಂದೇ ಅಂಕಣವಿದ್ದು ಒಂದು ಅಥವಾ ಎರಡು ಬೀಜಗಳುಳ್ಳ ಫಲವು)

IV. ರುಚಿ—ಒಗರು

ಅಡಿಕೆಯನ್ನು ಚೆನ್ನಾಗಿ ಬೇಯಿಸಿ ಅದನ್ನು ನಾನಾವಿಧವಾಗಿ ಕತ್ತರಿಸಿ ಬಣ್ಣಕಟ್ಟಿ ಮಾರುವದಕ್ಕೆ ಸಿದ್ಧಪಡಿಸುತ್ತಾರೆ.

II. ಇದನ್ನು ತಿಳಿಸುವದಲ್ಲದೆ ಅಡಿಕೆಯ ಮರದ ಚಿತ್ರವನ್ನು ಬಾಲಕರಿಗೆ ತೋರಿಸಬೇಕು. ತೆಂಗಿನಮರವನ್ನು ಜ್ಞಾಪಿಸುವದು. ಚಿತ್ರದಲ್ಲಿ ಪ್ರತಿಭಾಗವನ್ನೂ ಹೊಂಬಾಳೆಬಿಡುವ ಸ್ಥಳವನ್ನೂ ಅಡಿಕೆಯುಗೊನೆಗಳಿರುವದನ್ನೂ ತಿಳಿಸಬೇಕು.

ಇದನ್ನು ಹಲಗೆಯಮೇಲೆ ಬರೆಯಬೇಕು ತೆಂಗು, ತಾಳೆ, ಈಚಲು ಇವುಗಳೂ "ತೃಣರಾಜೀಯವೃಕ್ಷಗಳೆಂದು ತಿಳಿಸಬೇಕು. ಅಡಿಕೆಯು ಫಲಕ್ಕೆ ಬಂದನಂತರ ಚೆನ್ನಾಗಿ ವ್ಯವಸಾಯ ಮಾಡುತ್ತಿದ್ದಲ್ಲಿ ೫೦—೬೦ ವರುಷಗಳು ಸಂಪೂರ್ಣಫಲವನ್ನು ಹೊಂದಬಹುದು ಎಂದು ಹೇಳಿಬೇಕು.

III. (i) ಬಣ್ಣಗಳನ್ನು ಸೇರಿಸುವದರಿಂದಲಾಗಲೀ ಅಥವಾ ಬಣ್ಣದ ಪಥದಿಂದಲಾಗಲೀ ಇದನ್ನು ಹೇಳಿಸಬೇಕು.

(ಹಳದಿ+ಕೆಂಪು = ಕಿತ್ತಲೆಯಬಣ್ಣ)

ಇದನ್ನು ದೃಢಪಡಿಸಬೇಕು.

(ii) ತೆಂಗಿನಕಾಯಿಯಮೇಲೆ ಹೊಟ್ಟು ಇರುವದನ್ನು ಸೂಚಿಸಬೇಕು. ಒಂದು ಕಾಯಿಯನ್ನು ತೆಗೆದುಕೊಂಡು ಚೂರಿಯಿಂದ ಕತ್ತರಿಸಿ ಅದರ ಭಾಗಗಳನ್ನು ಬೇರೆಬೇರೆ ಹೇಳಿಸಬೇಕು. ಇದನ್ನು ಸೂಕ್ಷ್ಮವಾಗಿ ವಿವರಿಸುವದು. ಮತ್ತು ಇದನ್ನು ಹಲಗೆಯಮೇಲೆ ಬರೆಯಬೇಕು.

IV. ಹುಡುಗರನ್ನೇ ರುಚಿನೋಡುವಂತೆ ಹೇಳಿ ಅವರಿಂದಲೇ ಹೇಳಿಸಬೇಕು ಬಟ್ಟಲು ಅಡಿಕೆ ಲವಂಗಚೂರು ಮೊದಲಾದ ವಿಧಗಳನ್ನು ಹೇಳಿಸುವದು. ಅಡಿಕೆಯು ಕಪ್ಪಾಗುವದಕ್ಕೆ ಕಾರಣವನ್ನು ಹೇಳಿಸುವದ

ತಿಳಿಯಬೇಕು. ಆ ಇವುಗಳಿಗೆಲ್ಲಾ ಲೋಕವ್ಯವಹಾರದಲ್ಲಿ ಪ್ರಯೋಗ ದೊರೆಯುವುದು ಕಷ್ಟ. ಆದರೆ ಆರುತಿಂಗಳು ಓದಿದನು, ಒಂದು ಗಾವುದ ಪರ್ವತವಿರುವುದು, ವೀಂದಲಾದ ವಾಕ್ಯಗಳಲ್ಲಿ ದ್ವಿತೀಯಾವಿಭಕ್ತಿಯಿಲ್ಲದಿದ್ದರೂ ಅತ್ಯಂತ ಸಂಯೋಗವಿರುವುದೆಂದು ವ್ಯವಹಾರದಿಂದ ತಿಳಿಯಬೇಕು. ಹಾಗೆ ಅತ್ಯಂತ ಸಂಯೋಗವಿಲ್ಲದಿದ್ದರೆ ಆರುತಿಂಗಳಲ್ಲಿ ಓದಿದನು, ಒಂದು ಗಾವುದದಲ್ಲಿ ಪರ್ವತವಿರುವುದೆಂದು ಸಪ್ತಮ್ಯಾವಿಭಕ್ತಿಯನ್ನು ಉಪಯೋಗಿಸಬೇಕು. ಶಾಸ್ತ್ರದಲ್ಲಿ ಹೀಗೆ ದ್ವಿತೀಯಾವಿಭಕ್ತಿಯನ್ನು ವಿಧಿಸಿರುವುದು ಕೇವಲ ಪ್ರಾಚೀನ ಗ್ರಂಥಗಳಲ್ಲಿ ಮಾತ್ರ ಪ್ರಯೋಗಿಸಿರುವದಕ್ಕೆ ಸಾಧುತ್ವವನ್ನು ತಿಳಿಸುವದಕ್ಕಾಗಿಯೇ ಎಂದು ತಿಳಿಯಬೇಕು.

ಸಂಸ್ಕೃತದಲ್ಲಿ ಮಾತ್ರ ಇವುಗಳಿಗೆ ಗ್ರಂಥಗಳಲ್ಲೂ ಮಾತನಾಡುವುದರಲ್ಲೂ ಉದಾಹರಣೆಗಳನ್ನು ಕೊಡಬಹುದು. ಅವು ಯಾವುವೆಂದರೆ—ಮಾಸಮಧೀತೆ, ಮಾಸಂ ಕಲ್ಯಾಣೀ, ಮಾಸಂಗುಡಧಾನಾಃ ಇತ್ಯಾದಿ ವಾಕ್ಯಗಳಲ್ಲಿ ಕಾಲಕ್ಕೂ, ಅಧ್ಯಯನಕ್ರಿಯೆಗೂ, ಕಲ್ಯಾಣತ್ವರೂಪಗುಣಕ್ಕೂ, ಗುಡವಿಶ್ರವಾದ ಪುರಿಗೂ ಅವಿಚ್ಛಿನ್ನ ಸಂಬಂಧವು ಮಾಸಶಬ್ದದ ಮೇಲಿರುವ ವಿಭಕ್ತಿಯಿಂದ ತೋರುವುದು. ಹೀಗೆಯೇ ಅಧ್ವವಾಚಕಕ್ಕೂ ಕ್ರಿಯಾದಿಗಳಿಂದ ಸಂಬಂಧವಿರುವುದನ್ನು ಸಂಸ್ಕೃತ ಗ್ರಂಥಗಳಿಂದ ಊಹಿಸಿಕೊಳ್ಳುವುದು.

ವಸ್ತುಪಾಠ.—ಅಡಕೆ.

ಎರಡನೆಯುತರಗತಿ] ಬೋಧನಕ್ರಮ. [ಕಾಲ—50ನಿಮಿಷ

ಬೇಕಾದಸಾಮಗ್ರಿಗಳು:—ಅಡಕೆಯಕಾಯಿ, ಅಡಕೆಯಮರದಚಿತ್ರ, ನೀರು, ಬಿಳೀಬಟ್ಟೆ

ವಿಷಯ.	ನಿದರ್ಶನ.
I. ಹೆಸರು—ಅಡಿಕೆ.	I. ಹುಡುಗರನ್ನು ಪ್ರಶ್ನೆಮಾಡಿ ಅಥವಾ ಒಬ್ಬೊಬ್ಬ ಹುಡುಗನ ಕೈಲಿ ಒಂದೊಂದು ಅಡಕೆಯನ್ನು ಕೊಟ್ಟು ಒಬ್ಬನಿಂದ ಹೆಸರನ್ನು ಹೇಳಿಸಿ ಕಪ್ಪು ಹಲಗೆಯ ಮೇಲೆ "ಅಡಕೆ" ಎಂದು ಬರೆಯಬೇಕು.

ಗಳು ಅವುವೆಂದರೆ—ಸಾರಜನಕ (ನೈಟ್ರಜಿನ್) ರಂಜಕ (ಫಾಸ್ಪರಸ್), ಪೊಟಾಷ್, ಮತ್ತು ಸುಣ್ಣ.

ಯಾವ ಆಹಾರವಸ್ತುವೇ ಆಗಲಿ ಉಪಯೋಗವಾಗಬೇಕಾದರೆ ಅದು ನೀರಿನಲ್ಲಿ ಕರಗುವ ಸ್ಥಿತಿಯಲ್ಲಿರಬೇಕು. ಕರಗದ ವಸ್ತು ಸಸ್ಯಗಳಿಗೆ ಆಹಾರವಾಗುವುದಿಲ್ಲ. ಕರಗುವ ಆಹಾರವಸ್ತುಗಳು ಮಣ್ಣಿನಲ್ಲಿರುವ ನೀರಿನಲ್ಲಿ ಕರಗಿ ಸಸ್ಯಗಳ ತೆಳುವಾದ ಬೇರುಗಳಲ್ಲಿ ಪ್ರವೇಶಮಾಡುತ್ತವೆ. ಉತ್ತಮವಾದ ಮಣ್ಣಿನಲ್ಲಿ ಇಂತಹ ಆಹಾರವಸ್ತುಗಳು ಪೈರಿಗೆ ಸಾಕಾಗುವಷ್ಟು, ಕೆಲವುವೇಳೆ ಇನ್ನೂ ಹೆಚ್ಚಾಗಿಯೂ ಇರುತ್ತವೆ. ಕೆಟ್ಟಮಣ್ಣಿನಲ್ಲಿ ಬಹಳ ಕಡಮೆಯಾಗಿ ಇರುತ್ತವೆ. ನೈಟ್ರಜಿನ್, ಫಾಸ್ಪರಸ್, ಪೊಟಾಷ್, ಮತ್ತು ಸುಣ್ಣ, ಇವೇ ಮಣ್ಣಿನಿಂದ ಬರುವ ಅಮೂಲ್ಯ ಸಸ್ಯಾಹಾರ ವಸ್ತುಗಳಾದುದರಿಂದ ಇವುಗಳನ್ನು ಸಾಕಾಗುವಷ್ಟು ಪಡೆದಿರುವ ಮಣ್ಣು ಉತ್ತಮವಾದ ಮಣ್ಣಾಗಿದೆ. ಆದರೆ ಸಾಮಾನ್ಯವಾಗಿ ಇವುಗಳು ಬೇಗನೆ ಮಣ್ಣಿನಲ್ಲಿ ಮುಗಿದು ಹೋಗುತ್ತವೆ. ಈ ನಾಲ್ಕು ವಸ್ತುಗಳಲ್ಲಿ ಒಂದೆರಡು ಮಾತ್ರ ಮಣ್ಣಿನಲ್ಲಿ ಹೆಚ್ಚಾಗಿ ಇದ್ದು ಉಳಿದುವು ಕಡಮೆಯಾಗಿ ಇದ್ದರೆ ಸಾಲದು. ನಾಲ್ಕೂ ಸಾಕಾಗುವಷ್ಟು ಇರಬೇಕು. ಇವುಗಳ ಪೈಕಿ ಸಾಕಾಗುವಷ್ಟು ಒಂದು ಇಲ್ಲದಿದ್ದರೂ ಮಣ್ಣು ಬಂಜರಾಗುತ್ತದೆ

ಮೇಲೆ ತಿಳಿಸಿದರೀತಿಯಲ್ಲಿ ಎಂದರೆ ಮುಖ್ಯ ಸಸ್ಯಾಹಾರ ವಸ್ತುಗಳಲ್ಲಿ ಒಂದಾಗಲಿ ಅಥವಾ ಒಂದಕ್ಕಿಂತ ಹೆಚ್ಚಿಗಾಗಲಿ ಇಲ್ಲದಿರುವುದರಿಂದ ಬಂಜರಾದ ಮಣ್ಣಿಗೆ ಆ ವಸ್ತು ಅಥವಾ ವಸ್ತುಗಳನ್ನು ಒದಗಿಸುವ ಪದಾರ್ಥಗಳನ್ನು ಹಾಕಬೇಕು. ಇಂತಹ ಪದಾರ್ಥವನ್ನು 'ಗೊಬ್ಬರ' ಎಂದು ಕರೆಯುವರು. ಯಾವ ಸಸ್ಯಾಹಾರ ವಸ್ತುಗಳನ್ನು ಮಣ್ಣಿನಲ್ಲಿ ಸೇರಿಸಬೇಕೆಂಬ ಜಿಜ್ಞಾಸ್ಯಾಯದಿಂದ ಇರುವೆವೋ ಆ ವಸ್ತುಗಳನ್ನು ಸುಲಭದಲ್ಲಿ, ಮಣ್ಣಿಗೆ ಹಾಕಿದರೆ, ಸಸ್ಯಗಳಿಗೆ ಕೊಡುವ ಪದಾರ್ಥವನ್ನು 'ಗೊಬ್ಬರ' ಎಂದು ಕರೆಯಬಹುದು.

ಗೊಬ್ಬರಗಳಲ್ಲಿ 'ಸಾಮಾನ್ಯಗೊಬ್ಬರ' ಎಂತಲೂ, 'ವಿಶೇಷಗೊಬ್ಬರ' ಎಂತಲೂ, ಎರಡುವಿಧ ಉಂಟು. ಸಾಮಾನ್ಯವಾಗಿ ನಾವು ಮಣ್ಣಿಗೆ ಹಾಕಬೇಕಾದ ಮೇಲೆ ತಿಳಿಸಿದ ನಾಲ್ಕು ಎಂದರೆ, ನೈಟ್ರಜಿನ್, ಫಾಸ್ಪರಸ್, ಪೊಟಾಷ್ ಮತ್ತು ಸುಣ್ಣ, ಈ ವಸ್ತುಗಳನ್ನು ಸಸ್ಯಗಳಿಗೆ ಕೊಡುವ ಗೊಬ್ಬರವನ್ನು ಸಾಮಾನ್ಯಗೊಬ್ಬ

V. ಬೆಳೆಯುವಸ್ಥಳ—
ಕೊಚ್ಚಿನ್‌ಚೈನ, ವಿಷ್ಯಾಖಪಂಡದಲ್ಲಿ ಉಷ್ಣವೆಲಯ ಪ್ರಾಂತ್ಯಗಳು, ಸುಮಾತ್ರ, ಮೊಲಕ್ಕಾ ದ್ವೀಪಗಳು.

V. ಇವುಗಳನ್ನು ಹೇಳಿ ಭೂಪಠದಲ್ಲಿ ತೋರಿಸಬೇಕು.

VI. ಉಪಯೋಗ—

1. ವೀಳ್ಯದ ಎಲೆಯು ಜೊತೆಯಲ್ಲಿ ಸೇವಿಸುವದರಿಂದ ಜೀರ್ಣಕಾರಿ.

VI. 1. ಪ್ರತಿದಿನವೂ ತಾಂಬೂಲ ಹಾಕಿಕೊಳ್ಳುವದನ್ನು ಹೇಳಿಸಬೇಕು.

2. ಔಷಧಗಳಿಗೂ

2. ಹಾಲಿನಲ್ಲಿ ತೆಯ್ದು ಕೊಡುವದರಿಂದ ಹೊಟ್ಟೆಯಲ್ಲಿನ ಹುಳುಗಳು ನಾಶವಾಗುತ್ತವೆಂದು ತಿಳಿಸುವದು.

3. ಬಣ್ಣಹಾಕುವದಕ್ಕೂ

3. ಅಡಿಕೆಯನ್ನು ನೀರಿನಲ್ಲಿ ನೆನೆಯಿಸಿ ಬಟ್ಟೆಗೆ ಉಜ್ಜುವದರಿಂದ ಉಂಟಾಗುವ ಬಣ್ಣವನ್ನು ತೋರಿಸಬೇಕು.

ಹೇಳಿದುದನ್ನೆಲ್ಲಾ ಪುನರಾವರ್ತನೆ ಮಾಡಬೇಕು.

ಸಿ. ಪುಟ್ಟಯ್ಯ,
ಮಾಸ್ಟರ್,
ತಾಲ್ಲೂಕ್ ಗೌ॥ ಕನ್ನಡಬಾಯಿಸ್ ಸ್ಕೂಲ್,
ಚಿಕ್ಕಬಳ್ಳಾಪುರ.

ಗೊಬ್ಬರ ಮತ್ತು ಗೊಬ್ಬರಹಾಕುವ ಉದ್ದೇಶಗಳು.

ಪೈರುಗಳು ವಾಯುವಿನಿಂದಲೂ ಮಣ್ಣಿನಿಂದಲೂ ತಮಗೆ ಆಹಾರವಾಗುವ ವಸ್ತುಗಳನ್ನು ಹೊಂದುತ್ತವೆ ಎಂದು ತಿಳಿದಿದೆಯಷ್ಟೆ. ಆಹಾರವಸ್ತುಗಳಲ್ಲಿ ವಾಯುವಿನಿಂದ ಬರುವುದು ಮುಖ್ಯವಾಗಿ ಇಂಗಾಲಾಮ್ಲ (ಕಾರ್ಬಾನಿಕ್ಯಾಸಿಡ್). ಇದು ಸಾಕಾಗುವಷ್ಟು ವಾಯುವಿನಲ್ಲಿರುವುದರಿಂದ ಇದರ ವಿಷಯದಲ್ಲಿ ರೈತನು ಆಲೋಚಿಸಬೇಕಾದುದಿಲ್ಲ ಆದರೆ ಮಣ್ಣಿನಿಂದ ದೊರೆಯುವ ವಸ್ತುಗಳ ವಿಷಯದಲ್ಲಿ ಮಾತ್ರ ಹೆಚ್ಚಾಗಿ ಆಲೋಚಿಸಬೇಕಾಗುತ್ತದೆ ಈ ವಸ್ತುಗಳಲ್ಲಿ ಅತ್ಯಂತ ಮುಖ್ಯವಾದ ವಸ್ತು

ನಿಸ್ಸಾರವಾದ ಮಣ್ಣನ್ನು ಗೊಬ್ಬರಹಾಕುವುದರಿಂದ ಒಳ್ಳೆಯಸ್ಥಿತಿಗೆ ಜಾಗ್ರತೆಯಲ್ಲಿತರಬಹುದು. ಹಾಕಿದಗೊಬ್ಬರವು ಮಣ್ಣಿನಲ್ಲಿ ಇಲ್ಲದಸಸ್ಯಾಹಾರವಸ್ತುಗಳನ್ನು ಕೊಡುತ್ತವೆ. ಆದ್ದರಿಂದ ಸೈರು ಚೆನ್ನಾಗಿ ಬೆಳೆಯುತ್ತದೆ.

ಸಾಮಾನ್ಯಗೊಬ್ಬರಗಳಲ್ಲಿ ಕೆಲವನ್ನು ಮಣ್ಣಿಗೆಹಾಕಿದರೆ ಮಣ್ಣು ಒಳ್ಳೆಯಸ್ಥಿತಿಗೆಬರುತ್ತದೆ. ಹೇಗೆಂದರೆ ಚೆನ್ನಾಗಿ ಕೊಳೆಯದ ದನಕರಗಳ ಗೊಬ್ಬರ, ಹಸಿಸಸಿಗೊಬ್ಬರ ಇವುಗಳನ್ನು ಹಾಕಿದರೆ ಜೇಡಿಯ ಜಿಗಟು ಕಡಮೆಯಾಗುತ್ತದೆ; ಮತ್ತು ಇವುಗಳನ್ನು ಚೆನ್ನಾಗಿ ಕೊಳೆಯಿಸಿ ಹಾಕಿದರೆ ಮರಳಿನಲ್ಲಿ ಬಿಗಿಹೆಚ್ಚುವುದು.

ಕಿಂಡರ್‌ಗಾರ್ಟ್ನ್.

ಉದ್ದೇಶ್ಯಗಳು :—(೧) ಸಾಧಾರಣವಸ್ತುಜ್ಞಾನ (೨) ಯಾವದಾದರೂ ಒಂದು ವಸ್ತುವನ್ನು ನೋಡುವದರಿಂದ ಗ್ರಹಿಸುವಿಕೆ (೩) ಗುಣ ಮತ್ತು ಸಂಬಂಧಗಳನ್ನು ಗಮನಿಸಿ ನೋಡುವಿಕೆ (೪) ಹೋಲಿಸುವಿಕೆ (೫) ತೀರ್ಮಾನಮಾಡುವಿಕೆ (೬) ಫಲಿತಾಂಶವನ್ನೂಹಿಸುವಿಕೆ. ಮೊದಲಾದವುಗಳನ್ನು ಬಾಲಕರಲ್ಲಿ ಉಂಟುಮಾಡಿ ಇಂದ್ರಿಯಪಾಟವನ್ನು ಹೆಚ್ಚಿಸುವುದು.

ಕರಣಗಳು :—ಈ ಕಿಂಡರ್‌ಗಾರ್ಟ್ನಲ್ಲಿ ೨೦ ಕರಣಗಳಿರುವುವು. ಅವುಗಳಲ್ಲಿ ಮಕ್ಕಳ ತರಗತಿಗೆ ಮೊದಲಿನ ೬ ಕರಣಗಳನ್ನು ಕಲಿಸಬೇಕು. ಅವುಗಳನ್ನು ಮಾತ್ರ ಬರೆಯುತ್ತೇನೆ.

ಕರಣಗಳ ಸಾಮಾನ್ಯಗಳು :—೧ನೇ ಕರಣದಲ್ಲಿ ಕಸೂತಿಹಾಕಿದ ಬೇರೆಬೇರೆ ಬಣ್ಣದ ೬ ಚೆಂಡುಗಳು (೨) ನೇ ಕರಣದಲ್ಲಿ ೧ ಮರದಗೋಳ ೧ ಘನ ೧ ಸಿಲಿಂಡ್ರ (೩) ನೇ ಕರಣದಲ್ಲಿ ೪ ಸಣ್ಣ ಘನಗಳಾಗಿ ಕೊಯ್ದಿರುವ ಒಂದು ದೊಡ್ಡ ಘನ. ೪ನೆ ಕರಣದಲ್ಲಿ ೪ ಉದ್ದನಾದ ಭಾಗಗಳಾಗಿ ಸೀಳಿದ ಒಂದು ದೊಡ್ಡ ಘನ. ೫ ನೆ ಕರಣದಲ್ಲಿ ಪೂರ್ಣ, ಅರ್ಧ, ಕಾಲು ಭಾಗಗಳಾಗಿ ಮಾಡಿದ ಸಣ್ಣ ಘನಗಳಿಂದ ಕೂಡಿದ ಒಂದು ದೊಡ್ಡಘನ, ೬ ನೆ ಕರಣದಲ್ಲಿ ಎಡೆಬಿಡದೆ ಭಾಗಿಸಿದ ಉದ್ದನಾದ ಭಾಗಗಳಿಂದ ಕೂಡಿದ ಒಂದು ದೊಡ್ಡ ಘನ.

ಎಂದು ಕರೆಯಬಹುದು. ಈ ವಸ್ತುಗಳಲ್ಲಿ ಯಾವದಾದರೂ ಒಂದೆರಡನ್ನು ಮಾತ್ರವೇ ಹೆಚ್ಚಾಗಿ ಕೊಡುವ ಗೊಬ್ಬರಗಳನ್ನು ವಿಶೇಷ ಗೊಬ್ಬರಗಳು ಎಂದು ಕರೆಯಬಹುದು. ಸಸ್ಯ ಮತ್ತು ಪ್ರಾಣಿಸಂಬಂಧವಾದ ವಸ್ತುಗಳೆಲ್ಲಾ ಸಾಮಾನ್ಯಗೊಬ್ಬರಗಳಾಗಿವೆ. ಮೇಲೆ ತಿಳಿಸಿದ ನಾಲ್ಕು ವಸ್ತುಗಳಲ್ಲಿ ಅನೇಕವೇಳೆ ಸುಣ್ಣವನ್ನು ಮಣ್ಣಿಗೆ ಹಾಕುವ ಆವಶ್ಯಕತೆ ಇರುವುದಿಲ್ಲ. ಯಾಕೆಂದರೆ ಸುಣ್ಣ ಸಾಧಾರಣವಾಗಿ ಸಕಾಗುವಷ್ಟು ಮಣ್ಣುಗಳಲ್ಲಿ ಇರುತ್ತವೆ. ಆದುದರಿಂದ ಸುಣ್ಣ ವಿನಾ ಉಳಿದ ಮೂರು ವಸ್ತುಗಳನ್ನು ಸಸ್ಯಗಳಿಗೆ ಕೊಡುವ ಗೊಬ್ಬರವನ್ನೂ ಸಾಮಾನ್ಯಗೊಬ್ಬರವೆಂದು ಕರೆಯಬಹುದು

ನಮ್ಮ ರೈತರಿಗೆ ಸುಲಭವಲ್ಲಿ ದೊರೆಯುವ ಸಾಮಾನ್ಯ ಗೊಬ್ಬರಗಳು ಯಾವುವೆಂದರೆ—ದನಕರುಗಳ ಗೊಬ್ಬರ, ಕುರಿಮೇಕೆಗಳ ಗೊಬ್ಬರ, ಕುದುರೆಗಳ ಗೊಬ್ಬರ, ಹಸಿಸಿ ಗೊಬ್ಬರ, ಬಗೆಬಗೆಯಾದ ಹಿಂಡಿಗಳು, ಊರುಗೊಬ್ಬರ; ವಿಶೇಷಗೊಬ್ಬರಗಳು ಯಾವುವೆಂದರೆ—ಎಲುಬುಗಳು, ಪೆಟ್ಲುಪ್ಪು, ಬೂದಿ, ಸುಣ್ಣ.

ಮೇಲೆ ತಿಳಿಸಿದ ಸಾಮಾನ್ಯಗೊಬ್ಬರಗಳೆಲ್ಲಾ ಹಿಂದೆ ತಿಳಿಸಿದ ಆಹಾರವಸ್ತುಗಳನ್ನೆಲ್ಲಾ ಕೊಡುತ್ತವೆ. ವಿಶೇಷ ಗೊಬ್ಬರಗಳಲ್ಲಿ ಎಲುಬುಗಳು ಮುಖ್ಯವಾಗಿ ಪಾಸ್ಫರಸ್ಸನ್ನೂ, ನೆಪ್ರಜನ್ನನ್ನೂ ಕೊಡುತ್ತವೆ. ಬೂದಿಯಿಂದ ಪೊಟಾಷನ್ನೂ ಸುಣ್ಣವನ್ನೂ ಪಡೆಯಬಹುದು, ಕೆಲವು ಬೂದಿಗಳಲ್ಲಿ ಪಾಸ್ಫರಸ್ ಹೆಚ್ಚಾಗಿ ಇರುತ್ತದೆ

ಮಣ್ಣಿನ ಸಾರವನ್ನು ಕಾಪಾಡಿಕೊಳ್ಳುವುದಕ್ಕೂ ಸಾರವನ್ನು ಹೆಚ್ಚಿಸುವದಕ್ಕೂ ನಾವು ಗೊಬ್ಬರಹಾಕಬೇಕು.

ಪ್ರತಿವರ್ಷದಲ್ಲಿಯೂ ಬೆಳೆಯುವ ಪೈರು ಮಣ್ಣಿನಲ್ಲಿಯ ಸಸ್ಯಾಹಾರವಸ್ತುಗಳನ್ನು ತೆಗೆದುಕೊಂಡು ಬೆಳೆಯುವದರಿಂದ ಮಣ್ಣಿನಲ್ಲಿ ಗಾಳಿಯು ನೀರು ಮೊದಲಾದ ಸ್ವಭಾವಿಕವಾದ ಶಕ್ತಿಗಳ ಬಲದಿಂದ ಉಪಯೋಗಸ್ಥಿತಿಗೆ ಬರುವ ಆಹಾರವಸ್ತುಗಳಿಗಿಂತಲೂ ಹೆಚ್ಚಾಗಿಯೇ ಖರ್ಚಾಗುತ್ತವೆ. ಗೊಬ್ಬರಹಾಕದೆ ಬೆಳೆಗಳನ್ನು ಬೆಳೆಯುತ್ತಾ ಬಂದರೆ ಮಣ್ಣಿನ ಸಾರವು ಕ್ರಮೇಣ ಕಡಮೆ ಯಾಗುತ್ತಾ ಬಂದು ಕೆಲವು ವರ್ಷಗಳ ಮೇಲೆ ಮಣ್ಣು ಲಾಭ ಕೊಡದಷ್ಟು ಬೆಳೆಯನ್ನು ಕೊಡುವ ಸ್ಥಿತಿಗೆ ಬರುವದು ಇಂತಹ ಮಣ್ಣನ್ನು ನಿಸ್ಸಾರವಾದ ಮಣ್ಣು ಎಂದು ಕರೆಯುವರು. ಪ್ರತಿವರ್ಷವೂ ಸಾಕಾಗುವಷ್ಟು ಗೊಬ್ಬರವನ್ನು ಸೈರಿಗೆತಕ್ಕಷ್ಟು ಹಾಕುತ್ತಾ ಬಂದರೆ ಮಣ್ಣಿನ ಸಾರವು ಕಡಮೆಯಾಗದೆ ಒಂದೇ ಸ್ಥಿತಿಯಲ್ಲಿರುವುದು.

ಕಟ್ಟಿಗೆಗೆ ಒಂದೊಂದಾಗಿ ಕಟ್ಟುತ್ತಾ ಹುಡುಗರೇ ! ನಾನು ಈಗ ಯಾವ ಚಂಡನ್ನು ಕಟ್ಟುತ್ತೇನೆ ಮೊದಲಾದೆಲ್ಲವನ್ನು ಅವರಿಂದ ಹೇಳಿಸಬೇಕು. ಬಿಚ್ಚುವಾಗಲೂ ಇದೇ ರೀತಿ ಹೇಳಿಸಬೇಕು. ಹುಡುಗರ ಕೈಲಿ ಚಂಡನ್ನಿಡುವಾಗಲು ಅವನ್ನು ಪೆಟ್ಟಿಗೆಯಲ್ಲಿಡುವಾಗಲೂ ಹೇಳಿಸಿ ಬಣ್ಣಗಳನ್ನು ದೃಢಪಡಿಸಿ ಅದೇಬಣ್ಣದ ಕೆಲವು ವಸ್ತುಗಳನ್ನು ಅವರಿಂದ ಹೇಳಿಸಬೇಕು. ನಂತರ ಬಾಲಕರಿಂದ ನನ್ನ ಚಂಡು ಎಲೆಯಂತೆ ಹಸುರಾಗಿದೆ ಮೊದಲಾದ ವಾಕ್ಯಗಳನ್ನು ಹೇಳಿಸಬೇಕು ಇಲ್ಲಿಗೆ ಬಣ್ಣಗಳ ಪ್ರಾಥಮಿಕ ಜ್ಞಾನ ವಾಗುವುದು.

ಚಂಡುಗಳನ್ನು ಹುಡುಗರ ಕೈಲಿಡುವಾಗ ಅವರು "ವಂದನೆ" ಎಂದು ಹೇಳುವಂತೆಯೂ ಬಲಗೈ ಉಪಯೋಗಿಸುವ ಸಂದರ್ಭದಲ್ಲಿ ಎಡಗೈ ಉಪಯೋಗಿಸದಂತೆಯೂ ಇಂತ ತಪ್ಪಿತಗಳನ್ನೂ ಬಹಳ ಜಾಗರೂಕತೆಯಿಂದ ತಿದ್ದುತ್ತಿರಬೇಕು.

ಎಂ. ಸುಬ್ಬರಾವ್,
ಹೆಡ್‌ಮಾಸ್ಟರ್,
ಗರ್ಲ್ಸ್ ಸ್ಕೂಲ್, ಕೋಲ್ಲಾರ.

ಮೈಸೂರು ಗೌ॥ ನಾರ್ಮಲ್‌ಸ್ಕೂಲ್.

VIIನೇ ತರಗತಿ

ತಾ॥ 5ನೇ ಜುಲೈ ಆಗಸ್ಟ್] ಪಾಠಕ್ರಮ. [ಕಾಲ 3ಘಂಟೆ

1. ಪಾಠಶಾಲೆಯಲ್ಲಿ ಗಾಳಿ ಬೆಳಕು ಸರಿಯಾಗಿ ಬರುವುದಕ್ಕೆ ಮಾಡಬೇಕಾದ ಉಪಾಯಗಳನ್ನು ವಿಶದವಾಗಿ ತಿಳಿಸಿ ?

2. ಪಾಠಶಾಲೆಯಲ್ಲಿ ಬಾಲಕರಿಗೆ ಡ್ರಿಲ್ ಮಾಡಿಸುವುದರಿಂದಾಗುವ ಪ್ರಯೋಜನಗಳು ಯಾವುವು ? ಡ್ರಿಲ್ ಅಭ್ಯಾಸವಾಡುವುದರಿಂದ ನೀತ್ಯನುಶಾಸನಕ್ಕೆ ಆಗುವ ಸಾಹಾಯ್ಯವನ್ನು ಸ್ಪಷ್ಟಪಡಿಸಿ ?

3. ವ್ಯಾಯಾಮಭೂಮಿಯಿಂದ ಪ್ರಯೋಜನವೇನು ? ಆ ಪ್ರಯೋಜನವು ನೆರವೇರುವಂತೆ ಅವನ್ನು ಉಪಯೋಗಿಸಿಕೊಳ್ಳುವ ಕ್ರಮವೇಗೆ ?

4. ಬೇರೆಬೇರೆ ವಯಸ್ಸಿನವರಿಗೆ ಬೆಂಚು, ಡೆಸ್ಕು ಇವುಗಳ ಗಾತ್ರದಲ್ಲಿ ಇರಬೇ

೧ ನೇ ಕರಣ.

ಏವರ :—ಇದರಲ್ಲಿರುವ ೬ ಚೆಂಡುಗಳಲ್ಲಿ ೩ ಮೂಲ (ಶುದ್ಧ) ಬಣ್ಣಗಳು. ಯಾವವಂದರೆ—೧ ಕೆಂಪು, ೨ ಹಳದಿ, ೩ ನೀಲಿ, ಮತ್ತೆ ಮೂರು, ವಿಶ್ರಬಣ್ಣಗಳು. ಯಾವವಂದರೆ, ೪ ಹಸುರು, ೫ ಕಾವಿ, ೬ ಊದ (ವೈಯೊಲೆಟ್)

ಕಲಿಸುವ ವಿಧ :—ಉಪಾಧ್ಯಾಯನು ಗೆರೆ ಗೀಚಿ ಹುಡುಗರನ್ನು ೨—೩ ಸಾಲುಗಳಾಗಿ ನಿಲ್ಲಿಸಬೇಕು. ಹುಡುಗರು ಅಟೆಂಷ್ ಆಗಿ ವಿಸ್ತರನು ಕೊಟ್ಟ ಗೆರೆಯಲ್ಲಿ ನಿಲ್ಲಬೇಕು. ಉಪಾಧ್ಯಾಯನು—ನಿಮ್ಮ ಬಲಗೈಗಳನ್ನು ಮೇಲಕ್ಕೆತ್ತಿರಿ? ಕೆಳಕ್ಕಿಳಿಸಿರಿ? ಎಡಗೈಗಳನ್ನು ಮೇಲಕ್ಕೆತ್ತಿರಿ? ಕೆಳಕ್ಕಿಳಿಸಿರಿ? ನಿಮ್ಮ ಬಲಗೈಗಳನ್ನು ಮುಂದಕ್ಕೆ ಚಾಚಿರಿ? ನನ್ನ ಪೆಟ್ಟಿಗೆಯಲ್ಲಿರುವ ಒಂದು ವಸ್ತುವನ್ನು ನಿಮಗೆ ಕೊಡುವೆನು ಎಂದು ಒಬ್ಬೊಬ್ಬನ ಕೈಲಿ ಒಂದೊಂದು ಚೆಂಡನ್ನು ಕೊಟ್ಟು ಹುಡುಗರೇ! ನಿಮಗೆ ನಾನು ಕೊಟ್ಟ ವಸ್ತುವಿನ ಹೆಸರನ್ನು ಯಾರುಹೇಳುವಿರಿ. ಇದರಂತೆಯೇ ಬಣ್ಣ, ವಸ್ತು, ಆಕಾರ, ಪರಿಮಾಣ, ತೂಕ ಮೊದಲಾದವುಗಳನ್ನು ಕೇಳಿರೆ ಉತ್ತರಗಳು ಕೆಂಪು, ಹಳದಿ, ಕಸೂತಿದಾರದ್ದು, ಗುಂಡು, ಹಗುರ, ಮೃದು ಎಂದು ಇತ್ಯಾದಿ ಬರುವುದು.

ನಂತರ ಮಕ್ಕಳು ಚೆಂಡು ಗುಂಡಾಗಿದೆ. ನನ್ನ ಚೆಂಡು ಹಸುರದು, ಈ ಎಲ್ಲಾ ಚೆಂಡುಗಳು ಕಸೂತಿಯಿಂದ ಮಾಡಿವೆ. ಎಲ್ಲಾ ಚೆಂಡು ಹಗುರವಾಗಿವೆ.

ಎಲ್ಲಾ ಚೆಂಡುಗಳು ಮೃದುವಾಗಿವೆ. ಮೊದಲಾದ ವಾಕ್ಯಗಳನ್ನು ಉಚ್ಚರಿಸಬೇಕು. ನಂತರ ನೀಲಿ ಚೆಂಡು ಏನಾ ಬಾಕಿಯ ಚೆಂಡುಗಳನ್ನು ವಾಪಸುಕೊಡಿರಿಯೆಂದು ತೆಗೆದುಕೊಳ್ಳಬೇಕು. ಈಗ ನಿಮ್ಮಲ್ಲಿ ಒಂದು ನೀಲಿ, ಕಸೂತಿ, ಗುಂಡಗಿರುವ ಹಗುರವಾದ ಚೆಂಡು ಇದೆ. ಇದು ನಿಮ್ಮ ಆಡುವ ಚೆಂಡು, ನಾನು ನಾಳೆದಿನ ಮತ್ತೊಂದು, ಇನ್ನೊಂದುದಿನ ಇನ್ನೊಂದು, ಈರೀತಿ ಶಾನೆ ಚೆಂಡುಗಳನ್ನು ಕೊಡುವೆನು ಎಂದು ಆದಿನ ನೀಲಿಯ ಚೆಂಡನ್ನು ತಿಳಿಸಿ. ಇದೆಬಣ್ಣದ ಕೆಲವು ವಸ್ತುಗಳನ್ನು ಅಂದರೆ ಕಾಗದ, ಬಣ್ಣದ ಹಲಗೆ, ಬಣ್ಣದ ಪೆಟ್ಟಿಗೆ, ಬಟ್ಟೆಚೂರು, ಮೊದಲಾದವುಗಳನ್ನು ತೋರಿಸಿ ಅದನ್ನು ದೃಢಪಡಿಸಬೇಕು.

ಇದೇರೀತಿ ದಿನಕ್ಕೆ ಒಂದೊಂದು ಬಣ್ಣದ ಚೆಂಡಿನಂತೆ ೬ ದಿನವು ೬ ತರಹ ಬಣ್ಣವನ್ನು ತಿಳಿಸಬೇಕು ನಂತರ ಎಲ್ಲಾ ಚೆಂಡುಗಳನ್ನು ಇದಕ್ಕಾಗಿ ಮಾಡಿರುವ

ಶಾಸ್ತ್ರ.

ಯವಕ್ಷಾರಜನಕವಾಯು (Nitrogen)

೧ ಈ ವಾಯುವಿನ ಸ್ಥಿತಿ.

ಆಮ್ಲಜನಕವಾಯು (Oxygen) ಮತ್ತು ಜಲಜನಕವಾಯು (Hydrogen) ಗಳೋಪಾದಿಯಲ್ಲಿ ಇದು ವಾಯುಸ್ಥಿತಿಯಲ್ಲಿರುವುದು.

೨ ಈ ವಾಯುವಿನ ಗುಣಗಳು.

ಇದಕ್ಕೆ ಬಣ್ಣವಿಲ್ಲ; ವಾಸನೆಯಿಲ್ಲ; ಮತ್ತು ರುಚಿಯೂ ಇಲ್ಲ. ಇದು ವಾಯುಮಂಡಲದಲ್ಲಿ ಇತರ ವಸ್ತುಗಳೊಡನೆ ಸಂಯೋಗವಾಗದೆ ಸ್ವಸ್ಥಿತಿಯಲ್ಲಿ (In free state) ಇರುತ್ತದೆ. ಈ ವಾಯು ಇತರ ವಸ್ತುಗಳೊಡನೆ ಸಂಯೋಗವಾಗಿ, ಪೆಟ್ಲ್ಪು (Nitre), ನವಾಸಾಗರ (Ammonium chloride), ಯವಕ್ಷಾರ ದ್ರಾವಕ (Nitric acid), ಜೀವಜಂತುಗಳ ಮಾಂಸಖಂಡಗಳು, ಸಸ್ಯಾದಿಗಳು, ಇವೇ ಮೊದಲಾದ ಭೇದ್ಯವಸ್ತುಗಳಲ್ಲಿ (Compounds) ಯಿದೆ. ನೂರುಘನಅಡಿಗಳ ಪ್ರಮಾಣದ ವಾಯುಮಂಡಲದ ವಾಯುವಿನಲ್ಲಿ ಸುಮಾರು ೭೯ ಘನಅಡಿಗಳ ಪ್ರಮಾಣವು ಈ ವಾಯುವಿಗೆ ಸೇರಿರುತ್ತೆ; ಮತ್ತು ವಾಯುಮಂಡಲದ ಒಟ್ಟು ತೂಕದಲ್ಲಿ ಈ ವಾಯುವಿನ ತೂಕವು ಸೇಕಡಾ ಸುಮಾರು ೭೭ ಭಾಗಗಳಾಗಿರುತ್ತದೆ. ಈ ವಾಯು ಹತ್ತಿಕೊಂಡು ಉರಿಯುವದಿಲ್ಲ; ಮತ್ತು ಒಂದು ಮೋಣದಬತ್ತಿಯನ್ನು ಹತ್ತಿಸಿ, ಈ ವಾಯು ತುಂಬಿರುವ ಸೀಸೆಯೊಳಕ್ಕೆ ತೆಗೆದುಕೊಂಡುಹೋದರೆ ಆ ಮೋಣದಬತ್ತಿಯು ಆರಿಹೋಗುತ್ತದೆ. • ಅಭೇದ್ಯವಸ್ತುಗಳೊಳಗಾಗಿ (Elements) ಈ ವಾಯು ಬಹಳ ಜಡವೆಂತ ಹೇಳಲು ಕಾರಣವಿದೆ. ಏತಕ್ಕೆ ಅಂದರೆ ಇತರ ವಸ್ತುಗಳೊಂದಿಗೆ ಈ ವಾಯು ಸುಲಭವಾಗಿ ಸಂಯೋಗವಾಗುವದಿಲ್ಲ.

೩ ಈ ವಾಯುವನ್ನು ಹೊಂದುವ ವಿಧಾನ.

ಒಂದು ಚಿಕ್ಕಬಟ್ಟಲಿನಲ್ಲಿ ಸುಮಾರು ಒಂದು ಬಟಾಣಿಕಾಳುಗಾತ್ರವಿರುವ ಒಂದು ಚೂರು Phosphorus (ರಂಜಕ) ಇಟ್ಟು ಆ ಬಟ್ಟಲನ್ನು (ಜೇಬುಗಳಲ್ಲಿ ಸಾಧಾರಣವಾಗಿ ಇಟ್ಟುಕೊಂಡಿರುವ ಗಡಿಯಾರಗಳಿಗೆ ಹಾಕಿರುವ ಗಾಜಿನ ಗುಂಡು

ಕಾದ ವ್ಯತ್ಯಾಸಗಳನ್ನು ಒಂದು ಪಟ್ಟಿಯರೂಪದಲ್ಲಿ ಬರೆದು ವಿವರಿಸಿ.

5. ಒಂದು ತರಗತಿಯಲ್ಲಿ ಬಾಲಕರು ಕಾಪಿಮಾಡುತಿದ್ದರೆ ಅದಕ್ಕೆ ಉಪಾಧ್ಯಾಯರ ಅಯೋಗ್ಯತೆಯು ಎಷ್ಟುಮಟ್ಟಿಗೆ ಕಾರಣವಾಗಿರಬಹುದು ? ಕಾಪಿಮಾಡುವುದಕ್ಕೆ ಬೇರೇಕಾರಣಗಳುಂಟೇ ?

6. ಅವಧಾನವು ಕಡಮೆಯಾದಾಗ ತರಗತಿಯವರನ್ನು ಪಾಠಕ್ಕೆ ಗಮನಕೊಡುವಂತೆ ಮಾಡುವುದಕ್ಕೆ ಇರುವ ಉಪಾಯಗಳು ಯಾವುವು ? ವಿಶದಪಡಿಸಿ ?

7. 'ಮನೇಪಾಠ' ದ ಪ್ರಯೋಜನಗಳನ್ನು ತಿಳಿಸಿ ನಾಲ್ಕನೇ ತರಗತಿಯವರು ಒಂದುವಾರದಲ್ಲಿ ತರಬೇಕಾದ ಮನೇಪಾಠಗಳ ಪಟ್ಟಿಯನ್ನು ಬರೆಯಿರಿ.

8. ಋತುಗಳ ಸ್ವರೂಪವನ್ನು ಕಾರಣವನ್ನೂ ಬಾಲಕರಿಗೆ ತಿಳಿಸುವುದಕ್ಕೆ ಅನುಕೂಲಿಸುವಂತೆ ಟಿಪ್ಪಣಿಯನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

9. ವಸ್ತುಪಾಠದಿಂದಾಗುವ ಪ್ರಯೋಜನಗಳು ಯಾವುವು ? ಕಬ್ಬಿಣದ ವಿಷಯವಾಗಿ ಪಾಠಹೇಳುವುದರಲ್ಲಿ ಈ ಪ್ರಯೋಜನಗಳನ್ನು ಬಾಲಕರಿಗೆ ಹೇಗೆ ಉಂಟುಮಾಡುವಿರಿ—ತಿಳಿಸಿ.

10 ತ್ರೈರಾಶಿಯನ್ನು ಅನುಪಾತಮಾರ್ಗದಲ್ಲಿ ತಿಳಿಸುವುದಕ್ಕೆ ತಕ್ಕಂತೆ ಟಿಪ್ಪಣಿಯನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

11. ಮನೋಗಣಿತಕ್ಕೆ ತಕ್ಕ ಕಾಲವು ಯಾವುದು ? ಇದಕ್ಕೆ ಸರಿಯಾದ ಲೆಕ್ಕಗಳು ಕೆಲವನ್ನು ಬರೆಯಿರಿ.

12. ೧೪೦ಮಂದಿ ಬಾಲಕರಿರುವ ತಾಲ್ಲೂಕುಸ್ಕೂಲಿಗೆ ಸರಿಹೋಗುವ ಕಟ್ಟಡದ ನಕ್ಷೆಯನ್ನು ಬರೆದು ಅದರಲ್ಲಿ ಸಾಮಾನ್ಯವಾಗಿ ಕಾಣಿಸಬೇಕಾದ ಅಂಶಗಳನ್ನೆಲ್ಲ ಗುರುತುಮಾಡಿ.

ಆಮೇಲೆ ಎಲ್ಲರೂ ಬೇಗ ಬೇಗಸುತ್ತುತ್ತಾ ಒಂದು ಸುತ್ತಾದಮೇಲೆ ಒಟ್ಟಿಗೆ ಕೂತು ಕೊಂಡು ತಿರಿಗಿ ಎದ್ದು ಸುತ್ತಬೇಕು.

(೪) ನಡೆಯಿರಿ ಬೇಗನೆ ಯೆಳೆಯುತ್ತಾ । ಕಡುವೇಗದಿ ಕಾಲಿಕ್ಕುತ್ತಾ ।
ಒಡನೆಲ್ಲರುಸಲೆಸರಿಯುತ್ತಾ । ಸಡಗರದಿಂದಲೆ ಸುತ್ತುತ್ತಾ ।

(೫) ಕೂಡುವ ಮೆಲ್ಲನೆ ಒಟ್ಟಾಗಿ । ಕೂಡಲೆ ಯೇಳುವ ಜೋರಾಗಿ ।
ಕೂಡಿದ ಬಾಲರ ಕೈಬಿಡದೆ । ಆಡುವ ಬನ್ನಿರಿ ಬೇಸರದೆ ॥

ಚಲ್ಲಮ್ಮ,
ಸಹಾಯೋಪಾಧ್ಯಾಯಿನಿ,
ಮಹಾರಾಣಿಗರ್ಲ್ಸ ಸ್ಕೂಲ್.

ಗ್ರಂಥವಿಮರ್ಶೆ.

ಮೈಸೂರ್ ಓರಿಯಂಟಲ್ ಲೈಬ್ರೇರಿಯನ್ ಮಾ॥ ರಾ॥ ಎಸ್. ಜಿ. ನರಸಿಂಹಾಚಾರ್ಯರು ಕನ್ನಡಿಸಿರುವ ಅಲ್ಲಾವುದ್ದೀನ್ ಮತ್ತು ಅದ್ಭುತದೀಪವೆಂಬ ಕಥೆಯನ್ನು ಮೊದಲಿಂದ ಕೊನೆಯವರಿವಿಗೂ ಆದರವಾಗಿ ನೋಡಲಾಯಿತು. ಇದ

ಚೂರುಗಳನ್ನು ನಿಧಾನವಾಗಿ ನೀರಿನಮೇಲೆ ತೇಲುವಂತೆ ಮಾಡಬಹುದು) ಒಂದು ಪಾತ್ರೆಯಲ್ಲಿರುವ ನೀರಿನಮೇಲೆ ಇರುವಂತೆ ಇಟ್ಟು, ಆ ಬಟ್ಟಲಿನಮೇಲೆ ವಾಯುವುಮಂತಲದ ವಾಯು ತುಂಬಿರುವ ಒಂದು ಗಾಜಿನಪಾತ್ರೆಯನ್ನು, ಆ Phosphorus ಗೆ (ರಂಜಕಕ್ಕೆ) ಕೊಂಚ ಬೆಂಕಿಯಿಟ್ಟು, ನಂತರ ಮೊಗಚಿದರೆ, ಕೆಲವು ನಿಮಿಷಗಳಲ್ಲಿಯೇ Phosphorus (ರಂಜಕ) ಉರಿದುಹೋದನಂತರ [ಆ ಪಾತ್ರೆಯಲ್ಲಿದ್ದ ಈ ವಾಯುವುಮಂಡಲದ ಪ್ರಾಣಾಧಾರಕವಾಯು Phosphorus (ರಂಜಕ) ಒಡನೆ ಸಂಯೋಗವಾಗಿ, Phosphorus oxide ಆಗಿ, ಅದು ಆ ನೀರಿನಲ್ಲಿ ಕರಿಗಿ ಹೋಗುತ್ತದೆ]. ಸಾರಜನಕವಾಯು ಮಾತ್ರ ಆ ಗಾಜಿನಪಾತ್ರೆಯಲ್ಲಿ ನಿಲ್ಲುತ್ತದೆ.

ಜಿ. ಭೀಮರಾವ್, ಬಿ. ಎ.
ಪ್ರಥಮಸಹಾಯೋಪಾಧ್ಯಾಯ,
ಚಿಕ್ಕಮಗಳೂರು ಹೈಸ್ಕೂಲ್.

ಆಡುವಆಟ

ಕಿಂಡರ್‌ಗಾರ್ಟ್ನ್ ಹಾಡು.

೪—೧೦ ಜನಹುಡುಗರು ಗುಂಡಾಗಿಸೇರಿ ತಮ್ಮ ತಮ್ಮ ಕೈಗಳನ್ನು ಜೋಡಿಸಿನಿಂತುಕೊಂಡು ಮೆಲ್ಲ ಮೆಲ್ಲನೆ ಸುತ್ತುತಾ ಕ್ರಮ ಕ್ರಮವಾಗಿ ಒಬ್ಬರ ಕೈಯನ್ನೊಬ್ಬರು ಸರಪಣಿಯಹಾಗೆ ಹಿಡಿದುಕೊಂಡುಸುತ್ತ ಬೇಕು.

ರಾಗ—ನೋಟ್

(೧) ಆಡುವಬಾಲರೆಬನ್ನಿರಿ । ಜೋಡಿಸಿಕೈಗಳನಿಲ್ಲಿರಿ ।
ನೀಡಿರಿತೋಳ್ಗಳಬಲವಿತ್ತು । ಕೂಡಲೆ ಹಿಡಿ ಹಿಡಿಯಿರಿಕೈಯಿತ್ತು ॥

(೨) ಮೆತ್ತಗೆ ಮೆಲ್ಲಗೆಒಟ್ಟಾಗಿ । ಸುತ್ತಲುಸುತ್ತುವಗುಂಡಾಗಿ
ಚಿತ್ತಕ್ಕಾಗಳೆ ಆಟೆದಲಿ । ಹತ್ತುಗು ಮೋದವುಬೇಗದಲಿ ॥

ಎಲ್ಲರೂ ಹೀಗೆ ಸುತ್ತುತಾ ಒಂದು ಸುತ್ತು ಆದಮೇಲೆ ಎಲ್ಲರೂ ಚಪ್ಪಾಳೆಹೊಡೆದು ಪೂರ್ವದಂತೆ ಕೈಗಳನ್ನು ಹಿಡಿದುಕೊಂಡು ಸುತ್ತುವರು.

(೩) ನೀಡಿರಿ ನೀಡಿರಿ ಕಾಲೆರಡಾ । ಜೋಡಿಸಿಯೆಳೆಯಿರಿ ಕೈಯೆರಡಾ ।
ನೋಡುವೆ ನಿಮ್ಮಯಶಕ್ತಿಯನು । ಕೂಡಿಸಿಕೈಚಪ್ಪಾಳೆಯನು ॥

ಯ ಮಹಿಮೆಯಿಂದ ತನ್ನ ಜೀವನವನ್ನು ಮಾಡಿಕೊಂಡು ಕಾಲಕ್ರಮದಲ್ಲಿ ಬುದ್ಧಿವಂತನಾಗಿ ಆ ಊರಿನ ದೊರೆಯ ಮಗಳನ್ನು ಮದುವೆಯಾಗಿ ಮೇಲೆ ಹೇಳಿದ ದೀವಿಗೆಗೆ ಅಭಿಮಾನದೇವತೆಯಾದ ಭೂತದ ಶಕ್ತಿಯಿಂದ ಒಂದು ಅರಮನೆಯನ್ನು ಕಟ್ಟಿಸಿಕೊಂಡು ಅಲ್ಲಿ ಸುಖನಾಗಿದ್ದನು.

ಹೀಗಿರುವಲ್ಲಿ ಮೇಲೆಹೇಳಿದ ಆಫ್ರಿಕಾದೇಶದ ಮುಂತ್ರವಾದಿಯು ಈ ಊರಿಗೆ ಬಂದು ಅಲಾವುದೀನನ ಅರಮನೆಯನ್ನು ನೋಡಿ ದೀವಿಗೆಯ ಮಹಿಮೆಯಿಂದಾದ ಮನೆಯೆಂದು ಭಾವಿಸಿ ಅಲಾವುದೀನನು ಬೇಟೆಗೆ ಹೋಗಿದ್ದಾಗ ಆ ದೀವಿಗೆಯು ತನ್ನ ಕೈಸೇರುವಂತೆ ಎತ್ತುಗಡೆಮಾಡಿ ಆ ಅರಮನೆಯೂ ರಾಜಪುತ್ರಿಯೂ ಕೂಡ ತನ್ನ ದೇಶಕ್ಕೆ ಬರುವಂತೆ ಮಾಡಿಬಿಟ್ಟನು. ಆ ಊರಿನ ದೊರೆಯು ತನ್ನ ಮಗಳೂ ಮಗಳ ಮನೆಯೂ ಮಾಯವಾಗಿರುವದನ್ನು ತಿಳಿದು ಕೈಕೋಳವನ್ನು ಹಾಕಿ ಅಳಿಯನನ್ನು ಹಿಡಿದುತರುವಂತೆ ತನ್ನಾಳುಗಳಿಗೆ ಹೇಳಿದನು. ಅವರು ಹಾಗೆ ಮಾಡಿದಮೇಲೆ ತನ್ನ ಅಳಿಯನ ಪ್ರಾರ್ಥನೆಯಂತೆ ಅತನಿಗೆ ೪೦ ದಿನ ಗಡುವನ್ನು ಕೊಟ್ಟನು. ಅಮೇಲೆ ಅಲಾವುದೀನನು ಮೊದಲು ತನ್ನ ಕೈಬೆರಳಿಗೆ ಇಟ್ಟಿದ್ದ ಉಂಗುರದ ಶಕ್ತಿಯಿಂದ ತನ್ನ ಅರಮನೆಯೂ ರಾಣಿಯೂ ಇರತಕ್ಕ ಸ್ಥಳಕ್ಕೆ ಹೋಗಿ ಆ ಮಂತ್ರವಾದಿಯನ್ನು ಉಪಾಯದಿಂದ ಸಾಯಿಸಿ ತನ್ನ ಊರಿಗೆ ಬಂದು ಕಾಲಕ್ರಮದಲ್ಲಿ ಆ ದೇಶಕ್ಕೆ ತಾನೇ ದೊರೆಯಾಗಿ ಸುಖವಾಗಿದ್ದನು.

ಇಷ್ಟು ಕಥೆಯೂ ೯೦ ಪುಟಗಳಲ್ಲಿ ಬರೆದಿರುವದಲ್ಲದೆ ಅಯಾಯ ಕಥಾಭಾಗವು ಸೂಚನೆಯಾಗುವಂತೆ ಅಲ್ಲಲ್ಲಿ ೪೮ ಚಿತ್ರಗಳನ್ನು ಚಿತ್ರಿಸಿರುವದು. ಈ ಗ್ರಂಥವು ಸಾಮಾನ್ಯವಾಗಿ ಕನ್ನಡವನ್ನು ಓದಲು ಬಲ್ಲವರಿಗೆ ಅರ್ಥವಾಗುವಂತೆ ಶಾಲ್ಯವಾದ ಭಾಷಾಶೈಲಿಯಲ್ಲಿ ಬರೆದಿರುವರು ಚಿಕ್ಕಚಿಕ್ಕ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಭಿರುಚಿಯನ್ನುಂಟುಮಾಡಲು ಸಚಿತ್ರವಾದ, ಮನೋಹರವಾದ ಸುಲಭವಾದ ಕಥೆಗಳನ್ನು ಗ್ರಾಜುಯೇಟ್ಸ್ ಪ್ರೆಸ್ಸಿನವರು ಮುದ್ರಿಸಲು ಆರಂಭಿಸಿರುವುದು ಸ್ತೋತ್ರಾರ್ಹವಾದುದು.

ಸುಲ್ತಾನನ ಎಡಗಣ್ಣು.

ತುರುಕರ ದೇಶ, ಆ ದೇಶದಲ್ಲಿ ಸುಲ್ತಾನ, ವಜೀರ, ಸಾಹುಕಾರರು, ಕೋಲಕಾರರನೇಕರಿದ್ದರು. ಇವರೆಲ್ಲರೂ ಒಂದು ದೊಡ್ಡ ಪಟ್ಟಣದಲ್ಲಿದ್ದರು. ಆ

ರಲ್ಲಿ ಹೇಳಿರುವ ದೀವಿಗೆ ಅಭಿವಾನದೇವತೆಯಾದ ಒಂದಾನೊಂದು ಭೂತದ ಶಕ್ತಿಯಿಂದ ಅಲ್ಲಾವುದೀನನೆಂಬವನಿಗೆ ಸಾಧ್ಯವಾದ ಕೆಲಸಗಳು ಈ ಪುಸ್ತಕವನ್ನೋದುವವರ ಮನಸ್ಸಿಗೆ ಅತಿವಾನುಷವಾಗಿಯೂ ಅದ್ಭುತವಾಗಿಯೂ ತೋರದೇ ಇರಲಾರದು.

ಚೀನಾದೇಶದ ಒಂದು ದೊಡ್ಡಪಟ್ಟಣದಲ್ಲಿ ಮುಸ್ತಾಪನೆಂಬ ಒಬ್ಬ ದರ್ಜಿಯು ವನಿಗೆ ಅಲ್ಲಾವುದೀನನೆಂಬ ಒಬ್ಬ ಮಗನಿದ್ದನು. ಇವನು ಮೈಗಳ್ಳನಾಗಿರುವದನ್ನು ನೋಡಿ ಇವನ ತಂದೆಯು ಇನ್ನಿಲ್ಲದ ಸಾಹಸಪಟ್ಟರೂ ಇವನನ್ನು ತಿದ್ದುವದಕ್ಕಾಗದೆ ಈ ಕೊರಗಟ್ಟೆಯಲ್ಲಯೇ ಸತ್ತುಹೋದನು. ಇನ್ನು ಅಲ್ಲಾವುದೀನನಿಗೆ ತಂಗುತಡೆಯೇನೂ ಇಲ್ಲದಂತಾಯಿತು. ಇವನು ಒಂದುದಿನ ತುಂಟಹುಡುಗರೊಂದಿಗೆ ಬೀದಿಬವನವನಾಗಿ ಆಲೆಯುತ್ತಿರುವಾಗ ಆಫ್ರಿಕಾದೇಶದ ಮಂತ್ರವಾದಿಯೊಬ್ಬನು ಕಂಡು ತನ್ನ ಕೆಲಸಕ್ಕೆ ತಕ್ಕವನೆಂದು ಭಾವಿಸಿ ಅವನ ಹೆಸರು ಮೊದಲಾದ ಸಂಗತಿಗಳನ್ನೆಲ್ಲಾ ಎಲ್ಲೋ ತಿಳಿದುಕೊಂಡು ಇವನಿಗೆ ಇಲ್ಲದನಂಬಿಕೆಯನ್ನುಂಟುಮಾಡಿ ಇವನ ತಾಯಿಯನ್ನು ತನ್ನ ಬಲೆಗೆ ಬೀಳುವಂತೆ ಮಾಡಿಕೊಂಡನು. ಹೀಗಾದಮೇಲೆ ಮಂತ್ರವಾದಿಯು ಒಂದಾನೊಂದುದಿನ ಅಲ್ಲಾವುದೀನನನ್ನು ತನ್ನ ಸಂಗಡ ಬರಹೇಳಿ ಭೂಮಿಗೆ ದೂರದಲ್ಲಿರುವ ಎತ್ತರ ಗುಡ್ಡಗಳ ನಡುವೆ ಇರುವ ಬೈಲಿನಲ್ಲಿ ಒಂದು ಅದ್ಭುತವನ್ನು ತೋರಿಸುವಂತೆ ಅಲ್ಲಾವುದೀನನಿಗೆ ಹೇಳಿ ಬೆಂಕಿಯನ್ನು ಹೊತ್ತಿಸಿ ಯಾವುದೊ ಮಂತ್ರದಿಂದ ಆ ಬೆಂಕಿಯಲ್ಲಿ ಧೂಪವನ್ನು ಹಾಕಿದನು. ಕೂಡಲೆ ಭೂಮಿಯು ಇಬ್ಭಾಗವಾಗಿ ಒಂದು ಗವಿಯು ಕಾಣಬಂದಿತು. ಆ ಗವಿಯಲ್ಲಿ ಹೊಕ್ಕು ಸ್ವಲ್ಪ ದೂರದಲ್ಲಿರತಕ್ಕ ಒಂದು ದೀವಿಗೆಯನ್ನು ತರುವಂತೆ ಹೇಳಿ ಕೈಬೆರಳಿಗೆ ಒಂದು ಉಂಗುರವನ್ನಿಟ್ಟು ಈ ಉಂಗುರದ ಮಹಿಮೆಯಿಂದ ನಿನಗೇನೂ ಬಾಧೆಯಾಗುವದಿಲ್ಲವೆಂದು ಅಲ್ಲಾವುದೀನನನ್ನು ಆ ಮಂತ್ರವಾದಿಯು ಗವಿಯ ಒಳಕ್ಕೆ ಕಳಿಹಿಸಿದನು. ಅಲ್ಲಾವುದೀನನು ಅವನು ಹೇಳಿದಂತೆಯೇ ಆ ದೀವಿಗೆಯನ್ನು ತಂದು ತನ್ನನ್ನು ಮೊದಲು ಮೇಲಕ್ಕೆತ್ತಿಕೊಳ್ಳುವಂತೆ ಮಂತ್ರವಾದಿಯಸಂಗಡ ಮೊಂಡಹಿಡಿಯಲು ಮಂತ್ರವಾದಿಯು ಮಂತ್ರದ ಶಕ್ತಿಯಿಂದ ಆ ಗವಿಯ ಬಾಗಿಲನ್ನು ಮುಚ್ಚಿ ಹೊರಟುಹೋದನು. ಇತ್ತ ಅಲ್ಲಾವುದೀನನು ತನ್ನ ಕೈಬೆಟ್ಟಿಗಿಟ್ಟಿದ್ದ ಉಂಗುರದ ಮಹಿಮೆಯಿಂದ ಹೊರಕ್ಕೆ ಬಂದು ಮನೆಗೆ ಹೋಗಿ ತನ್ನ ತಾಯಿಗೆ ನಡೆದ ಸಮಾಚಾರವನ್ನೆಲ್ಲಾ ಹೇಳಿ ದೀವಿಗೆ

ಸು-ಇದರಲ್ಲಿ ಏನೋ ಇರಬಹುದು, ಒಳ್ಳೇದು, ನನ್ನ ಎಡಗಣ್ಣನ್ನು ಅಪೇಕ್ಷಿಸಿದ
ವಳನ್ನು ಇಲ್ಲಿಗೆ ಕರೆಸೋಣವೆಂದು ಯೋಚಿಸಿ, ಆ ಸಾಹುಕಾರನ ಕಡೆಗೆ ತಿರುಗಿ
ಳ್ಳೇದು ನೀನು ಈಗ ಹೋಗು ನಾಳೆ ಬೆಳಿಗ್ಗೆ, ನನ್ನ ಕಣ್ಣು ಬೇಕೆಂದು ಕೇಳಿದ
ನ್ನ ಮಗಳನ್ನು ಕರೆದುಕೊಂಡು ಇಲ್ಲಿಗೆ ಬಾ' ಎಂದು ಹೇಳಿ ಕಳುಹಿಸಿದನು. ಮರು
ನ ತಂದೆ ಮಗಳು ಇಬ್ಬರು ಬಂದು ಕಾದಿದ್ದರು. ಆಗ ಸುಲ್ತಾನನು ಬಂದು ಇವ
ನ್ನು ನೋಡಿ 'ನೀನು ನನ್ನ ಎಡಗಣ್ಣನ್ನು ಏಕೆ ಬಯಸಿದೆ?' ಎಂದು ಕೇಳಿದನು
ವಳು ಮಹಾಸ್ವಾಮಿ, ಕ್ಷಮಿಸಬೇಕು. ನಾನು ನಿಮ್ಮ ಎಡಗಣ್ಣನ್ನು ಕೇಳಿದರೆ
ವು ನನಗೆ ಹೇಳಿ ಕಳುಹಿಸುವದು ನಿಶ್ಚಯ; ಆಗ ತಮಗೆ ಒಂದು ಸಂಗತಿಯನ್ನು
ಸಲಿಕ್ಕೆ ನನಗೆ ಅನುಕೂಲವಾಗುವುದೆಂದು ತಿಳಿದು ನಾನು ಕೇಳಿದೆನು' ಎಂದಳು
ುಲ್ತಾನನು 'ಅದೇನು ವಿಷಯ?' ಎಂದನು. ಅದಕ್ಕೆ ಅವಳು 'ಸ್ವಾಮಿ! ತಮ್ಮ
ಗೆ ಒಬ್ಬ ದರಿದ್ರನು ಸ್ವಲ್ಪ ಹಣಗಾರನೊಡನೆ ಜಗಳವಾಡಿ ದೂರು ಹೇಳಲು ಬ
ಆಗ ತಾವು ಯಾವಾಗಲೂ ಹಣಗಾರನನ್ನು ವಹಿಸಿ, ನಿಮ್ಮ ಬಲದಲ್ಲಿಟ್ಟುಕೊಂಡ
ಡವನನ್ನು ನೋಡುವುದಿಲ್ಲವೆಂದು ನಾನು ಕೇಳುತ್ತೇನೆ. ಎರಡು ಕಣ್ಣಿನಿಂದಲೂ
ಬ್ಬರನ್ನೂ ಸಮನಾಗಿ ನೀವು ನೋಡುವುದಿಲ್ಲವಾದುದರಿಂದ, ನಿಮ್ಮ ಎಡದ ಕಣ್ಣು
ಉಪಯೋಗವಿಲ್ಲವು. ಆದುದರಿಂದ ನಿಮ್ಮ ಎಡಗಣ್ಣನ್ನು ಅಪೇಕ್ಷಿಸುವಂತೆ ನಾನು
ನಿಮ್ಮ ತಂದೆಗೆ ಹೇಳಿದೆನು' ಎಂದಳು. ಸುಲ್ತಾನನಿಗೆ ಬಹಳ ಕೋಪ ಬಂತು
ರೂ ಇವಳ ಧೈರ್ಯವನ್ನೂ ಬುದ್ಧಿಯನ್ನೂ ಪರೀಕ್ಷಿಸಬೇಕೆಂದು ಅನೇಕ ಪ್ರಶ್ನೆ
ನ್ನು ಸುಲ್ತಾನನು ಕೇಳಿದನು ಅವುಗಳನ್ನೆಲ್ಲಾ ಸುಲ್ತಾನನು ಆಶ್ಚರ್ಯಪಡುವಹಾ
ುತ್ತರವನ್ನು ಕೊಟ್ಟಳಲ್ಲದೆ ಸುಲ್ತಾನನು ನಡೆಸುತ್ತಿದ್ದುದು ಅನ್ಯಾಯವೆಂದೂ ಹೇ
ಳು. ಆಗ ಸುಲ್ತಾನನಿಗೆ ಕೋಪವು ಇನ್ನೂ ಹೆಚ್ಚಿ. 'ನನ್ನಲ್ಲಿರುವ ಐಶ್ವರ್ಯ
ಿಲೆಯಷ್ಟು? ಹೇಳು. ಇದಕ್ಕೆ ಸರಿಯಾದ ಉತ್ತರ ಕೂಡದಿದ್ದರೆ ನಿನ್ನನ್ನು ಕ್ಷ
ಾಣಕ್ಕೆ ಹಾಕುವೆನು' ಎಂದನು. ಆಗ ಅವಳು ಸುಲ್ತಾನರ ಕಡೆಗೆ ತಿರುಗಿ, ಮಂ
ಯನ್ನೂರಿ, ಕೈಮುಗಿದುಕೊಂಡು, ಸ್ವಾಮಿ 'ನಾನು ಹೇಳಿದಂತೆ ತಾವು ಮೂ
ನಿನಗಳ ಮಟ್ಟಿಗೆ ಕೇಳುವುದಾದರೆ ನಾನು ಉತ್ತರವನ್ನು ಕೊಡುವೆನು' ಎಂದಳ
ಅದಕ್ಕೆ ಸುಲ್ತಾನನು ಒಪ್ಪಿಕೊಳ್ಳಲು, 'ಸ್ವಾಮಿ ಮೂರು ದಿವಸಗಳ ಮಟ್ಟಿಗೆ ತಾ
ನನ್ನೂ ತಿನ್ನದೆ ಹಸಿದು ಇರಬೇಕು ಎಂದು ಹೇಳಿ—ಮೂರನೆ ದಿನ ಸುಲ್ತಾ

ಪಟ್ಟಣಕ್ಕೆ ಸ್ವಲ್ಪ ದೂರದಲ್ಲೇ ಇನ್ನೊಂದು ಊರು ಇತ್ತು. ಆ ಊರಲ್ಲಿ ಒಬ್ಬ ಸಾಹುಕಾರನಿದ್ದನು. ಆ ಸಾಹುಕಾರನಿಗೆ ಮೂರುಮಂದಿ ಹೆಣ್ಣುಮಕ್ಕಳಿದ್ದರು. ಸಾಹುಕಾರನು ಆಗಾಗ್ಗೆ ವ್ಯಾಪಾರಕ್ಕಾಗಿ ಆ ದೊಡ್ಡ ಪಟ್ಟಣಕ್ಕೆ ಹೋಗುತ್ತಿದ್ದನು. ಒಂದು ದಿನ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಪಟ್ಟಣದಲ್ಲಿ ಮಾರಲಿಕ್ಕೆ ಹೋಗಲು ನಿಂತಿದ್ದಾಗ ಅವನ ಮೂರು ಜನ ಹೆಣ್ಣುಮಕ್ಕಳೂ ಬಂದರು. ಆಗ ಆ ಹೆಣ್ಣುಮಕ್ಕಳನ್ನು ನೋಡಿ, ಅವನು, ಅಮ್ಮಾ, ನಾನು ಪಟ್ಟಣಕ್ಕೆ ಹೋಗುತ್ತೇನೆ. ನಿಮಗೆನಿಮಗೆ ಏನುಬೇಕು ಹೇಳಿ, ತಂದುಕೊಡುತ್ತೇನೆ, ಎಂದು ಕೇಳಿದನು. ಮೊದಲನೆಯವಳು, ತನಗೆ ಬೇಕಾದ ಒಂದು ತೋಡೆಯನ್ನು ಕೇಳಿದಳು, ಎರಡನೆಯವಳು ಮುತ್ತಿನ ಹಾರವನ್ನು ಕೇಳಿದಳು, ಮೂರನೆಯವಳು ಏನೂ ಕೇಳದೆ ಸುಮ್ಮನಿದ್ದಳು. ಅದೇಕಮ್ಮ—ನಿನಗೆ ಏನೂ ಬೇಡವೆ ? ಏನು ಬೇಕು ಹೇಳು, ತಂದುಕೊಡುತ್ತೇನೆ, ಎಂದನು. ಅವಳು ಬಹಳ ಬುದ್ಧಿವಂತಳಾಗಿದ್ದುದರಿಂದಲೂ, ನೋಡಲಿಕ್ಕೆ ಬಹಳ ಚೆನ್ನಾಗಿದ್ದುದರಿಂದಲೂ ಅವಳ ಮೇಲೆ ತಂದೆಗೆ ಬಹಳ ಪ್ರೀತಿ. ಆಗ ಅವಳು ಅಪ್ಪಾ ನನಗೆ ಬೇಕಾದ್ದು ತರಲು ಬಹಳ ಶ್ರಮ, ಅದುದರಿಂದ ನಾನು ಕೇಳಲಿಲ್ಲ' ಎಂದಳು ಅದಕ್ಕೆ ತಂದೆಯು ಎಷ್ಟು ಶ್ರಮವಾದರೂ ಚಿಂತೆಯಿಲ್ಲ, ಏನು ಬೆಲೆಯಾದರೂ ಕೊಡುತ್ತೇನೆ-ತನ್ನ ಪ್ರಾಣವಾದರೂ ಕೊಟ್ಟು-ನಿನಗೆ ಬೇಕಾದ್ದನ್ನು ಕೊಡಿಸುತ್ತೇನೆ' ಎಂದನು. ಹಾಗಾದರೆ—'ನಿನ್ನಲ್ಲಿ ಚೆನ್ನಾಗಿರುವ ಪದಾರ್ಥಕ್ಕೆ ಬೆಲೆ ಸುಲ್ತಾನರ ಎಡಗಣ್ಣು. ಸುಲ್ತಾನರ ಎಡಗಣ್ಣು ಕಿತ್ತುಕೊಟ್ಟರೆ ಅದನ್ನು ಕೊಡುತ್ತೇನೆಂದು ಕೇಳು' ಎಂದಳು. ತಂದೆಗೆ ಈ ಮಾತನ್ನು ಕೇಳಿ ಗಾಬರಿಯಾಯಿತು. ಆದರೂ ಮಗಳು ಬಹಳ ಬುದ್ಧಿವಂತಳೆಂದು ತಿಳಿದಿದ್ದುದಾದಕಾರಣ ಇವಳ ಮಾತಿನಲ್ಲಿ ಏನೋ ಇದೆ ಎಂದುಕೊಂಡು, ಪಟ್ಟಣಕ್ಕೆ ಹೋಗಿ, ಆ ಪದಾರ್ಥವನ್ನು ಎಲ್ಲರೂ ಕಾಣುವಂತೆ ಇಟ್ಟು ಅದರ ಬೆಲೆ ಸುಲ್ತಾನರ ಎಡಗಣ್ಣೆಂದು ಹೇಳುತ್ತಿದ್ದನು. ಇದನ್ನು ಸುಲ್ತಾನರ ಅಧಿಕಾರಿಗಳು ಕೇಳಿದೊಡನೆ ಅವನಿಗೆ ಹಿಂಗಟ್ಟುಮಾರಿ ಕಟ್ಟಿ ತೆಗೆದುಕೊಂಡು ಹೋಗಿ ಸುಲ್ತಾನರ ಮುಂದೆ ಕೆಡವಿ, ಅವನು ಕೇಳುತ್ತಿದ್ದ ಬೆಲೆಯನ್ನು ಸುಲ್ತಾನರಿಗೆ ತಿಳಿಸಿದರು. ಆಗ ಸುಲ್ತಾನರು ಇದೇನೆಂದು ಅವನನ್ನು ಕೇಳಲು, ಅವನು ಅದಕ್ಕೆ ನಾನು ನಿಜವಾಗಿ ಹೇಳುತ್ತೇನೆ—ನನಗೆ ಏನೂ ತಿಳಿಯದು-ನನ್ನ ಮಗಳು ಆ ಪದಾರ್ಥಕ್ಕೆ ಈ ಬೆಲೆಕೇಳೆಂದು ಹೇಳಿದಳು, ಅದರಿಂದ ಕೇಳಿದೆನು' ಎಂದನು. ಆಗ ಸುಲ್ತಾ

ವಿದ್ಯಾದಾಯಿನಿ.

ಭಾಗ ೭.] ಸೆಪ್ಟೆಂಬರ್ ೧೯೧೯. [ಸಂಚಿಕೆ ೯

ಎಡಿಟರವರ ನೋಟ್ಸ್.

ಮೈಸೂರು ದೇಶದಲ್ಲಿ ೧೯೧೭—೧೮ ನೆ ಇಸವಿಯಲ್ಲಿ ನಡೆದ ವಿದ್ಯಾಭ್ಯಾಸಾಭಿವೃದ್ಧಿಯ ರಿಪೋರ್ಟು ಅಚ್ಚಾಗಿದೆ. ಪೂರ್ವದಂತೆ ಈ ವರ್ಷದಲ್ಲೂ ಈ ದೇಶದಲ್ಲಿ ವಿದ್ಯಾಭ್ಯಾಸಮಾಡುವ ಬಾಲಕರ ಸಂಖ್ಯೆಯು, ವಿದ್ಯಾಭ್ಯಾಸ ಮಾಡಿಸುವ ವಿದ್ಯಾಶಾಲೆಗಳ ಸಂಖ್ಯೆಯೂ ಏಕರೀತಿಯಾಗಿ ವೃದ್ಧಿಯಾಗಿವೆ. ಈಗ ಇಸ್ಪೆಕ್ಟರ್ ಜನರಲ್ ಆಗಿರುವ ಮೆ॥ಭಾಭಾಸಾಹೇಬರವರಿಗೆ ವಿದ್ಯಾಭಿವೃದ್ಧಿಯಲ್ಲಿರತಕ್ಕ ಆದರವು ಈ ಅಭಿವೃದ್ಧಿಗೆ ಒಂದು ಮುಖ್ಯವಾದ ಕಾರಣ. ಈಗ ನಡೆಯುತ್ತಿರುವ ವರ್ಷದಲ್ಲಿ ಅಗಲೇ ಅನೇಕ ಕಡೆಗಳಲ್ಲಿ ವಿದ್ಯಾಶಾಲೆಗಳನ್ನಿಡುವುದಕ್ಕೂ, ಮತ್ತೆ ಕೆಲವೆಡೆಗಳಲ್ಲಿ ಇರುವ ಶಾಲೆಗಳಲ್ಲಿ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಗೌರ್ನಮೆಂಟಿನವರ ಅಪ್ಪಣೆಯನ್ನು ಅವರು ಪಡೆದಿದಾರೆಂದು ಕೇಳಿ ಬಹಳ ಸಂತೋಷಪಡುತ್ತೇವೆ. ಕೆಲವು ಕಡೆಗಳಲ್ಲಿ ಉಪಾಧ್ಯಾಯರ ಸಂಖ್ಯೆಯು ಬಹಳ ಕಡಮೆಯಾಗಿ ವಿದ್ಯಾಭ್ಯಾಸದ ಕೆಲಸವು ಸಂಪೂರ್ಣವಾಗಿ ನಡೆಯುವುದಕ್ಕೆ ಕುಂದಕವಾಗಿದೆ. ಅಂಥ ಕಡೆಗಳಲ್ಲಿ ಈಗಿನ ಏರ್ಪಾಡಿನಿಂದ ಕೆಲಸವು ಇನ್ನೂ ಚೆನ್ನಾಗಿ ನಡೆಯುವುದೆಂಬುದರಲ್ಲಿ ಸಂಶಯವಿಲ್ಲ.

***

ಈಗಿರುವ ನಾರ್ಮಲ್ ಸ್ಕೂಲುಗಳಲ್ಲಿ ವ್ಯಾಸಂಗಮಾಡುತ್ತಿರುವವರು ಏಕಕಾಲದಲ್ಲಿ ಲೋವರ್ ಅಥವಾ ಅಪ್ಪರ್ ಸೆಕೆಂಡರಿ ಪರೀಕ್ಷೆಗೂ, ಉಪಾಧ್ಯಾಯರಿಗೆ ಯೋಗ್ಯತಾನಿರ್ಣಯಪರೀಕ್ಷೆಗೂ ವ್ಯಾಸಂಗಮಾಡಬೇಕಾಗಿದೆ. ಇವೆರಡು ಪರೀಕ್ಷೆಗಳಿಗೂ ಆವಶ್ಯಕವಾಗಿ ಓದಬೇಕಾದ ವಿಷಯಗಳನೇಕವಾಗಿರುವ್ದರಿಂದ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸಹ ಬಹಳ ಅನಾನುಕೂಲವಾಗುತಿದೆ. ಈ ಕಾರಣದಿಂದ ಇವೆ

ಮುಂದೆ ಒಂದು ತಟ್ಟೆಯಲ್ಲಿ ಸ್ವಲ್ಪ ರೊಟ್ಟಿಯನ್ನೂ, ಒಂದು ಬಟ್ಟಲಲ್ಲಿ ನೀರನ್ನೂ ಇಟ್ಟು—ಸ್ವಾಮಿ ನಿಮ್ಮ ಐಶ್ವರ್ಯದ ಬೆಲೆಯೆಲ್ಲಾ ಈಗ ಇವಕ್ಕೆ ಸಮನಾಗಿಲ್ಲವೆ-ಹೇಳ ಬೇಕು' ಎಂದಳು. ಹಸಿದಿದ್ದ ಸುಲ್ತಾನನು ಮಾತನಾಡಲಿಕ್ಕೆ ಕೂಡ ಆಗದೆ ತಲೆ ಯನ್ನು ಹಾಕಿದನು. ಆಗ ಬೇಕಾದುದನ್ನು ಅವನಿಗೆ ತಿನ್ನ ಬಹುದೆಂದು ಹೇಳಲು, ಸುಲ್ತಾನನು ಸ್ವಲ್ಪ ತಿಂಡಿಯನ್ನು ತಿಂದು, ನೀರುಕುಡಿದು ಚೇತರಿಸಿಕೊಂಡು, ಇವಳ ಬುದ್ಧಿಗೂ, ಸೌಂದರ್ಯಕ್ಕೂ ಮೆಚ್ಚಿ, ತನ್ನ ಮಗನಿಗೆ ಅವಳನ್ನು ಮದುವೆ ಮಾಡಿ ಅವಳಿಗೆ 'ನನ್ನನ್ನು ಎಡಗಣ್ಣು ಉಪಯೋಗಿಸು ಎಂದು ಆಗಾಗ್ಗೆ ಚಾಡ್ಡಾಪಿಸುತಲಿರು' ಅಂದನು. ಅವಳು ಸುಲ್ತಾನನಿಗೂ ಅವನ ಮಗನಿಗೂ ವಿವೇಕವನ್ನು ಹೇಳುತ್ತಾ ಸುಖವಾಗಿದ್ದಳು.

ಒಗಟುಗಳು.

ಆರು ಅಕ್ಷರಗಳುಳ್ಳ ಹಿಂದೂಸ್ಥಾನದಲ್ಲಿನ ಒಂದು ಪಟ್ಟಣದ ಹೆಸರು ಇದೆ.

೧—೨—೩ = ನೇ ಅಕ್ಷರ ಲಯಾಧಿಪನ ಮಗನ ಹೆಸರು.

೨—೩—೪ = ,, ನಗರ ,,

೨—೩ = ,, ಕೊಸೆ ,,

೩ = ,, ಆಕಾಶ ,,

೫—೬ = ,, ಒರೆಗಲ್ಲು ,,

೪—೫ = ,, ವಿಜಯವಾನಿಕೆ ,,

೪—೬ = ,, ದ್ರವ್ಯ ,,

೨—೪ = ,, ಸಿಟ್ಟಿನಿಂದ ಬೈಯ್ಯುವಿಕೆ

೪—೧ = ,, ವಜ್ರಾಯುಧ

ಈ ಪಟ್ಟಣವಾವುದು ?

ಜಿ. ವೆಂಕಟೇಶಯ್ಯ,
ಮಾವತ್ತೂರು,
ತುಮಕೂರ್ ತಾಲ್ಲೂಕ್.

ಅವರು ಹೇಳುವುದು ಏನಂದರೆ :—

ಜ್ಞಾನಾರ್ಜನೆಗೆ ಮುಖ್ಯವಾದವಾರ್ಗಗಳು ಪಂಚೇಂದ್ರಿಯಗಳಾಗಿರುವವು ಸಾತಕರ ಮುಖ್ಯ ಕರ್ತವ್ಯವು ಈ ಇಂದ್ರಿಯಗಳೆಲ್ಲಾ ತಮ್ಮ ತಮ್ಮ ವ್ಯಾಪಾರಗಳನ್ನು ಸಮರ್ಪಕವಾಗಿ ಮಾಡಬೇಕಾದರೆ ದೇಹಕ್ಕೂ ಬುದ್ಧಿಗೂ ಯಾವವಿಧವಾದ ವ್ಯವಸಾಯವನ್ನುಂಟುಮಾಡಬೇಕೋ ಅದನ್ನು ತಿಳಿದುಕೊಂಡು ಅದಕ್ಕೂ ಅನುಕೂಲವಾದ ವ್ಯಾಸಂಗವನ್ನು ಕಲ್ಪಿಸುವದಾಗಿರುತ್ತದೆ. ಜನನವಾದಕೂಡಲೆ ಮಗುವು ಸುತ್ತಮುತ್ತಲೂ ಇರತಕ್ಕ ಜನರನ್ನು ನೋಡುತ್ತದೆ. ಶಬ್ದಗಳನ್ನು ಕೇಳುತ್ತದೆ. ಇದೇರೀತಿಯಲ್ಲಿ ಎಲ್ಲಾ ಇಂದ್ರಿಯಗಳು ಅವುಗಳ ವ್ಯಾಪಾರಗಳನ್ನು ನಡಿಸುತ್ತವೆ. ಮಗುವಿನ ವಿದ್ಯಾಭ್ಯಾಸವು ಜನನವಾದಕೂಡ್ಲೆ ಪ್ರಾರಂಭವಾಗುವದು. ತದಾರಭ್ಯ ಆ ಮಗುವಿನ ದೇಹದ ಮತ್ತು ಬುದ್ಧಿಯ ಸ್ಥಿತಿಗೆ ಅನುರೂಪವಾದ ವಿದ್ಯಾಭ್ಯಾಸವು ನಡಿಯಬೇಕು. ಈ ಕಾಲದಲ್ಲಿ ಮಕ್ಕಳು ವಿದ್ಯಾರ್ಜನೆಯ ವಿಷಯದಲ್ಲಿ ಬಹಳ ಆಸಕ್ತಿವುಳ್ಳವರಾಗಿರುತ್ತಾರೆ; ಯಾವ ಪದಾರ್ಥವನ್ನು ಎದುರಿಗೆ ತಂದರೂ ಅದನ್ನು ತೆಗದುಕೊಂಡು ಬಾಯಿನಲ್ಲಿಟ್ಟುಕೊಳ್ಳುತ್ತಾರೆ, ಅದನ್ನು ನೋಡುತ್ತಾರೆ, ಯಾವ ಶಬ್ದಗಳಾದರೂ ಅದನ್ನು ಮನಸ್ಸಿಟ್ಟು ಕೇಳುತ್ತಾರೆ. ಮೂಗು, ನಾಲಿಗೆ, ಕೈಗಳನ್ನು ಕೂಡಾ ಉಪಯೋಗಿಸಿ ವಾಸನೆ, ರುಚಿ, ಅವಸ್ಥಾತ್ರಯದಲ್ಲಿರತಕ್ಕ ಪದಾರ್ಥಗಳು ಇವುಗಳ ಅನುಭೋಗವನ್ನು ಉಂಟುಮಾಡಿಕೊಳ್ಳುತ್ತಾರೆ. ತಂದೆ ತಾಯಿಗಳು ಬುದ್ಧಿಶಾಲಿಗಳಾಗಿದ್ದರೆ ಮಕ್ಕಳು ಎಚ್ಚರವಾಗಿರುವಾಗಲೆಲ್ಲಾ ಬಗೆಬಗೆ ವಸ್ತುಗಳನ್ನು ತಂದು ಅವರಿಗೆ ತೋರಿಸಿ ಅವುಗಳ ಹೆಸರುಗಳನ್ನೂ ಅವುಗಳ ಗುಣದೋಷಗಳನ್ನೂ ತಿಳಿಸುವರು. ಕ್ರಮಕ್ರಮವಾಗಿ ಈ ವಿಧವಾದ ಶಿಕ್ಷೆಯಿಂದ ಮಕ್ಕಳು ಚಿಕ್ಕತನದಲ್ಲಿಯೇ ವಸ್ತುಪಾಠಗಳನ್ನೂ ಗುಣಪಾಠಗಳನ್ನೂ ಕ್ರಮಿತುಕೊಂಡು ಭಾಷೆಯ ಜೊತೆಯಲ್ಲಿ ಪದಾರ್ಥ ತತ್ವವನ್ನು ಸಂಪಾದಿಸಿಕೊಳ್ಳುವರು. ಬಹಳ ಗಹನವಾದ ಶಾಸ್ತ್ರರಹಸ್ಯಗಳೆಲ್ಲಾ ಅಕ್ಷರಾಭ್ಯಾಸ ಆಗುವದಕ್ಕೆ ಮುಂಚೆಯೇ ಬಾಲಕರಿಗೆ ತಿಳಿಯುವಂತೆ ಮಾಡಬಹುದು. ವಸ್ತುಶಾಸ್ತ್ರ, ಭೌತಿಕಶಾಸ್ತ್ರ, ಭೂಗೋಳಶಾಸ್ತ್ರ, ಖಗೋಳಶಾಸ್ತ್ರ, ಶಾರೀರಕಧರ್ಮಶಾಸ್ತ್ರ, ಆರೋಗ್ಯಶಾಸ್ತ್ರ, ಸಸ್ಯಶಾಸ್ತ್ರ ಇವೇ ಮೊದಲಾದ ಅನೇಕ ಶಾಸ್ತ್ರತತ್ವಗಳನ್ನು ವಸ್ತುಪಾಠಗಳ ಮೂಲಕವಾಗಿ ದುರ್ಬೀನು, ಭೂತಗನ್ನಡಿ ಮೊದಲಾದ ಯಂತ್ರಗಳ ಸಹಾಯದಿಂದ ಬಾಲಕ್ರೀಡೆಯಲ್ಲಿ ಮಕ್ಕಳಿಗೆ ತಿಳಿಸಬಹುದು. ಈರೀತಿ

ರಡಕ್ಕೂ ವ್ಯಾಸಂಗವಮಾಡುವುದಕ್ಕೆ ಬೇರೇ ಬೇರೇ ಕಾಲವನ್ನು ಕೊಡುವುದಾದ
ಬಹಳ ಅನುಕೂಲ. ಇದರಿಂದ ಉಪಾಧ್ಯಾಯರು ತಿಳಿಯಬೇಕಾದ ಪಾಠಕ್ರಮ
ಮುಂತಾದ ವಿಷಯಗಳಿಗೆ ಸಾಕಾಗುವಷ್ಟು ಕಾಲ ದೊರೆತು ಟ್ರೈಯ್ನಿಂಗ್ ಆದವರ ಯೋ
ಗ್ಯತೆಯು ಹೆಚ್ಚುವುದು. ಆದುದರಿಂದ ಸರ್ಕಾರದವರು ನಾರ್ಮಲ್‌ಸ್ಕೂಲಿನಲ್ಲಿ ಓದು
ವವರು ಇನ್ನೂ ಆರು ತಿಂಗಳು ಹೆಚ್ಚಾಗಿ ಅಲ್ಲೇ ವ್ಯಾಸಂಗಮಾಡುವುದಕ್ಕೆ ಅನುಕೂ
ಲಪಡಿಸಬೇಕಾದ್ದು ಅವಶ್ಯಕವೆಂದು ಮೆ॥ ಭಾಭಾಸಾಹೇಬರವರು ಈ ರಿಪೋರ್ಟಿನಲ್ಲಿ
ಬರದಿದಾರೆ. ಅದರಂತೆ ಸರ್ಕಾರದವರು ಅನುಮತಿಪಟ್ಟು ತಕ್ಕ ಏರ್ಪಾಡನ್ನು ಮಾಡು
ವರೆಂದು ನಂಬಿದೇವೆ.

***

ಈ ಸಮಯದಲ್ಲಿ ಇನ್ನೊಂದಂಶವನ್ನು ಬರೆಯಬಹುದು. ಈಗಿರುವ ಉಪಾ
ಧ್ಯಾಯಯೋಗ್ಯತಾನಿರ್ಣಯ ಪರೀಕ್ಷೆಗಳಿಗೆ ಇಂಗ್ಲೀಷ್‌ಸ್ಕೂಲಿನಲ್ಲಿರುವ ಉಪಾಧ್ಯಾ
ಯರು ಸಹ ಹೋಗಬಹುದೆಂದಿದೆ. ಆದರೆ ಯಾರೂ ಆ ಪರೀಕ್ಷೆಗಳಿಗೆ ಇದುವರೆಗೆ
ಹೋಗಿದ್ದಂತಿಲ್ಲ. ಪರೀಕ್ಷೆಗೆ ಬೇಕಾದ ಗ್ರಂಥಗಳನ್ನು ಓದಿ, ಪರೀಕ್ಷೆಯಲ್ಲಿ ತೇರ್ಗಡೆ
ಯಾದರೆ, ತಮ್ಮ ಕೆಲಸದ ಸ್ವರೂಪವನ್ನು, ಗೌರವವನ್ನು ತಿಳಿದು ಅದರಲ್ಲಿ ಪ್ರವರ್ತಿಸು
ವುದಕ್ಕೂ, ಸಮಯ ದೊರೆತಾಗ ಮೇಲಿನವರು ಕೊಡುವ ಬಡತಿಗೂ ಅರ್ಹರಾಗುವರು.
ಮತ್ತು ಪರೀಕ್ಷೆಯೆಂದಹೊರತು ಓದದವರು ತಮ್ಮ ಕೆಲಸಕ್ಕೆ ಅವಶ್ಯಕವಾಗಿ ಓದಬೇ
ಕಾದ ಕೆಲವು ಗ್ರಂಥಗಳನ್ನೂ ಓದುವಂತೆಯೂ ಆಗುವುದು.

ಪೆಸ್ಟಲಾಟ್ಸೀಯವರ ಚರಿತ್ರೆ.

ಪೆಸ್ಟಲಾಟ್ಸೀಯವರು ಸ್ವಿಟ್ಜರ್ಸ್ ಪಟ್ಟಣದಲ್ಲ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ
ಪಾಠಕ್ರಮವನ್ನು ಅದರಿಂದ ಉಂಟಾದ ಫಲವನ್ನು ಕುರಿತು ಮೆ॥ ಮಾರಿಸ್ ಸಾಹೇಬ
ರವರು ತಮ್ಮ ಅಭಿಪ್ರಾಯಗಳನ್ನು ಬರೆದು ಇದಾರೆ. ಇದರಿಂದ ಪೆಸ್ಟಲಾಟ್ಸೀಯ
ವರ ಪಾಠಕ್ರಮದ ವಿಷಯದಲ್ಲಿ ನಮಗೆ ಅನೇಕ ಸಂಗತಿಗಳು ಗೊತ್ತಾಗುತ್ತವೆ

ಅವರು ಹೇಳುವುದು ಏನಂದರೆ :—

ಜ್ಞಾನಾರ್ಜನೆಗೆ ಮುಖ್ಯವಾದಮಾರ್ಗಗಳು ಪಂಚೇಂದ್ರಿಯಗಳಾಗಿರುವವು ಸಾಧಕರ ಮುಖ್ಯ ಕರ್ತವ್ಯವು ಈ ಇಂದ್ರಿಯಗಳೆಲ್ಲಾ ತಮ್ಮ ತಮ್ಮ ವ್ಯಾಪಾರಗಳನ್ನು ಸಮರ್ಪಕವಾಗಿ ಮಾಡಬೇಕಾದರೆ ದೇಹಕ್ಕೂ ಬುದ್ಧಿಗೂ ಯಾವವಿಧವಾದ ವ್ಯವಸಾಯವನ್ನುಂಟುಮಾಡಬೇಕೋ ಅದನ್ನು ತಿಳಿದುಕೊಂಡು ಅದಕ್ಕೂ ಅನುಕೂಲವಾದ ವ್ಯಾಸಂಗವನ್ನು ಕಲ್ಪಿಸುವದಾಗಿರುತ್ತದೆ. ಜನನವಾದಕೂಡಲೆ ಮಗುವು ಸುತ್ತಮುತ್ತಲೂ ಇರತಕ್ಕ ಜನರನ್ನು ನೋಡುತ್ತದೆ. ಶಬ್ದಗಳನ್ನು ಕೇಳುತ್ತದೆ. ಇದೇರೀತಿಯಲ್ಲಿ ಎಲ್ಲಾ ಇಂದ್ರಿಯಗಳು ಅವುಗಳ ವ್ಯಾಪಾರಗಳನ್ನು ನಡಿಸುತ್ತವೆ. ಮಗುವಿನ ವಿದ್ಯಾಭ್ಯಾಸವು ಜನನವಾದಕೂಡ್ಲೆ ಪ್ರಾರಂಭವಾಗುವದು. ತದಾರಭ್ಯ ಆ ಮಗುವಿನ ದೇಹದ ಮತ್ತು ಬುದ್ಧಿಯ ಸ್ಥಿತಿಗೆ ಅನುರೂಪವಾದ ವಿದ್ಯಾಭ್ಯಾಸವು ನಡಿಯಬೇಕು. ಈ ಕಾಲದಲ್ಲಿ ಮಕ್ಕಳು ವಿದ್ಯಾರ್ಜನೆಯ ವಿಷಯದಲ್ಲಿ ಬಹಳ ಆಸಕ್ತಿವುಳ್ಳವರಾಗಿರುತ್ತಾರೆ; ಯಾವ ಪದಾರ್ಥವನ್ನು ಎದುರಿಗೆ ತಂದರೂ ಅದನ್ನು ತೆಗದುಕೊಂಡು ಬಾಯಿನಲ್ಲಿಟ್ಟುಕೊಳ್ಳುತ್ತಾರೆ, ಅದನ್ನು ನೋಡುತ್ತಾರೆ, ಯಾವ ಶಬ್ದಗಳಾದರೂ ಅದನ್ನು ಮನಸ್ಸಿಟ್ಟು ಕೇಳುತ್ತಾರೆ. ಮೂಗು, ನಾಲಿಗೆ, ಕೈಗಳನ್ನು ಕೂಡಾ ಉಪಯೋಗಿಸಿ ವಾಸನೆ, ರುಚಿ, ಅವಸ್ಥಾತ್ರಯದಲ್ಲಿರತಕ್ಕ ಪದಾರ್ಥಗಳು ಇವುಗಳ ಅನುಭೋಗವನ್ನು ಉಂಟುಮಾಡಿಕೊಳ್ಳುತ್ತಾರೆ. ತಂದೆ ತಾಯಿಗಳು ಬುದ್ಧಿಶಾಲಿಗಳಾಗಿದ್ದರೆ ಮಕ್ಕಳು ಎಚ್ಚರವಾಗಿರುವಾಗಲೆಲ್ಲಾ ಬಗೆಬಗೆ ವಸ್ತುಗಳನ್ನು ತಂದು ಅವರಿಗೆ ತೋರಿಸಿ ಅವುಗಳ ಹೆಸರುಗಳನ್ನೂ ಅವುಗಳ ಗುಣದೋಷಗಳನ್ನೂ ತಿಳಿಸುವರು. ಕ್ರಮಕ್ರಮವಾಗಿ ಈ ವಿಧವಾದ ಶಿಕ್ಷೆಯಿಂದ ಮಕ್ಕಳು ಚಿಕ್ಕತನದಲ್ಲಿಯೇ ವಸ್ತುಪಾಠಗಳನ್ನೂ ಗುಣಪಾಠಗಳನ್ನೂ ಕ್ರಮಿತುಕೊಂಡು ಭಾಷೆಯ ಜೊತೆಯಲ್ಲಿ ಪದಾರ್ಥ ತತ್ವವನ್ನು ಸಂಪಾದಿಸಿಕೊಳ್ಳುವರು. ಬಹಳ ಗಹನವಾದ ಶಾಸ್ತ್ರರಹಸ್ಯಗಳೆಲ್ಲಾ ಅಕ್ಷರಾಭ್ಯಾಸ ಆಗುವದಕ್ಕೆ ಮುಂಚೆಯೇ ಬಾಲಕರಿಗೆ ತಿಳಿಯುವಂತೆ ಮಾಡಬಹುದು. ವಸ್ತುಶಾಸ್ತ್ರ, ಭೌತಿಕಶಾಸ್ತ್ರ, ಭೂಗೋಳಶಾಸ್ತ್ರ, ಖಗೋಳಶಾಸ್ತ್ರ, ಶಾರೀರಕಧರ್ಮಶಾಸ್ತ್ರ, ಆರೋಗ್ಯಶಾಸ್ತ್ರ, ಸಸ್ಯಶಾಸ್ತ್ರ ಇವೇ ಮೊದಲಾದ ಅನೇಕ ಶಾಸ್ತ್ರತತ್ವಗಳನ್ನು ವಸ್ತುಪಾಠಗಳ ಮೂಲಕವಾಗಿ ದುರ್ಬೀನು, ಭೂತಗನ್ನಡಿ ಮೊದಲಾದ ಯಂತ್ರಗಳ ಸಹಾಯದಿಂದ ಬಾಲಕ್ರೀಡೆಯಲ್ಲಿ ಮಕ್ಕಳಿಗೆ ತಿಳಿಸಬಹುದು. ಈರೀತಿ

ರಡಕ್ಕೂ ವ್ಯಾಸಂಗವಮಾಡುವುದಕ್ಕೆ ಬೇರೇ ಬೇರೇ ಕಾಲವನ್ನು ಕೊಡುವುದಾದರೆ ಬಹಳ ಅನುಕೂಲ. ಇದರಿಂದ ಉಪಾಧ್ಯಾಯರು ತಿಳಿಯಬೇಕಾದ ಪಾಠಕ್ರಮ ಮುಂತಾದ ವಿಷಯಗಳಿಗೆ ಸಾಕಾಗುವಷ್ಟು ಕಾಲ ದೊರೆತು ಟ್ರೈಯರ್ ಆದವರ ಯೋಗ್ಯತೆಯು ಹೆಚ್ಚುವುದು. ಆದುದರಿಂದ ಸರ್ಕಾರದವರು ನಾರ್ಮಲ್‌ಸ್ಕೂಲಿನಲ್ಲಿ ಓದುವವರು ಇನ್ನೂ ಆರು ತಿಂಗಳು ಹೆಚ್ಚಾಗಿ ಅಲ್ಲೇ ವ್ಯಾಸಂಗಮಾಡುವುದಕ್ಕೆ ಅನುಕೂಲಪಡಿಸಬೇಕಾದ್ದು ಅವಶ್ಯಕವೆಂದು ಮೆ॥ ಭಾಭಾಸಾಹೇಬರವರು ಈ ರಿಪೋರ್ಟಿನಲ್ಲಿ ಬರದಿದಾರೆ. ಅದರಂತೆ ಸರ್ಕಾರದವರು ಅನುಮತಿಪಟ್ಟು ತಕ್ಕ ಏರ್ಪಾಡನ್ನು ಮಾಡುವರೆಂದು ನಂಬಿದ್ದೇವೆ.

***

ಈ ಸಮಯದಲ್ಲಿ ಇನ್ನೊಂದಂಶವನ್ನು ಬರೆಯಬಹುದು. ಈಗಿರುವ ಉಪಾಧ್ಯಾಯಯೋಗ್ಯತಾನಿರ್ಣಯ ಪರೀಕ್ಷೆಗಳಿಗೆ ಇಂಗ್ಲೀಷ್‌ಸ್ಕೂಲಿನಲ್ಲಿರುವ ಉಪಾಧ್ಯಾಯರು ಸಹ ಹೋಗಬಹುದೆಂದಿದೆ. ಆದರೆ ಯಾರೂ ಆ ಪರೀಕ್ಷೆಗಳಿಗೆ ಇದುವರೆಗೆ ಹೋಗಿದ್ದಂತಿಲ್ಲ. ಪರೀಕ್ಷೆಗೆ ಬೇಕಾದ ಗ್ರಂಥಗಳನ್ನು ಓದಿ, ಪರೀಕ್ಷೆಯಲ್ಲಿ ತೇರ್ಗಡೆಯಾದರೆ, ತಮ್ಮ ಕೆಲಸದ ಸ್ವರೂಪವನ್ನು, ಗೌರವವನ್ನು ತಿಳಿದು ಆದರಲ್ಲಿ ಪ್ರವರ್ತಿಸುವುದಕ್ಕೂ, ಸಮಯ ದೊರೆತಾಗ ಮೇಲಿನವರು ಕೊಡುವ ಬಡ್ತಿಗೂ ಅರ್ಹರಾಗುವರು. ಮತ್ತು ಪರೀಕ್ಷೆಯೆಂದಹೊರತು ಓದದವರು ತಮ್ಮ ಕೆಲಸಕ್ಕೆ ಅವಶ್ಯಕವಾಗಿ ಓದಬೇಕಾದ ಕೆಲವು ಗ್ರಂಥಗಳನ್ನೂ ಓದುವಂತೆಯೂ ಆಗುವುದು.

ಪೆಸ್ಟಲಾಟ್ಸೀಯವರ ಚರಿತ್ರ.

ಪೆಸ್ಟಲಾಟ್ಸೀಯವರು ಸ್ವಾಟ್ಸ್ ಪಟ್ಟಣದಲ್ಲಿ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದ ಪಾಠಕ್ರಮವನ್ನು ಅದರಿಂದ ಉಂಟಾದ ಫಲವನ್ನು ಕುರಿತು ಮೆ॥ ಮಾರಿಸ್ ಸಾಹೇಬರವರು ತಮ್ಮ ಅಭಿಪ್ರಾಯಗಳನ್ನು ಬರೆದು ಇದಾರೆ. ಇದರಿಂದ ಪೆಸ್ಟಲಾಟ್ಸೀಯವರ ಪಾಠಕ್ರಮದ ವಿಷಯದಲ್ಲಿ ನಮಗೆ ಅನೇಕ ಸಂಗತಿಗಳು ಗೊತ್ತಾಗುತ್ತವೆ

ರಗಳ ಗುಣದೋಷಗಳನ್ನು ಕುರಿತು ಚರ್ಚೆಮಾಡುತ್ತಲೂ ಅಂಥಾ ಚರ್ಚೆಯಿಂದ ಗೊತ್ತಾದ ವಿಷಯಗಳು ವಿನಹಾ ನಿಷ್ಕೃಷ್ಟವಾಗಿ ತಿಳಿಯದ ವಿಷಯಗಳನ್ನು ತಿಳಿಯದೆಂದು ಹೇಳುತ್ತಾ ಆಗಾಗ್ಗೆ ತಿಳಿದವರಲ್ಲಿ ಅದನ್ನು ಚರ್ಚಿಸುತ್ತಾ ಗೊತ್ತಾದರೆ ತಿರಿಗಿ ತಮ್ಮ ಮಕ್ಕಳಿಗೆ ತಂದು ಹೇಳುತ್ತಾ ಬೀಜಾರಿಲ್ಲದಂತೆ ಮಕ್ಕಳನ್ನು ವಿದ್ಯಾವಿನಯಸಂಪನ್ನೆರನ್ನಾಗಿ ಮಾಡುತ್ತಿದ್ದರು. ಮಕ್ಕಳನ್ನು ಹೊಡೆಯುವುದು, ಗದರಿಸುವದು ಇವುಗಳೆಲ್ಲಾ ಅವರನ್ನು ಶುಂಠರನ್ನಾಗಿ ಮಾಡುವದಕ್ಕೆ ಸಾಧಕವಾದ ಕೆಲಸಗಳೆಂಬುದಾಗಿ ಅವರೊಡನೆ ಮಿತ್ರಭಾವದಿಂದ ನಡೆದುಕೊಳ್ಳುತ್ತಾ ಲೀಲೆಯಿಂದ ತಿಳಿಸಬೇಕಾದ ವಿಷಯಗಳನ್ನು ತಿಳಿಸುವದೇ ಸಫಲವಾಗತಕ್ಕ ಬೋಧನೋಪಾಯವೆಂದು ಇವರು ಹೇಳುತ್ತಿದ್ದರು. ಯಾವಸಂಗತಿಯನ್ನು ತಿಳಿಸಬೇಕಾದರೂ ಸುಲಭವಾದವುಗಳನ್ನು ಪ್ರಥಮತಃ ತಿಳಿಸಿ ಅವುಗಳು ಚನ್ನಾಗಿ ಅಭ್ಯಸ್ತವಾದಕೂಡಲೇ ಸ್ವಲ್ಪ ಗಹನವಾದವುಗಳನ್ನು ಅನಂತರ ಅದಕ್ಕಿಂತಲೂ ಹೆಚ್ಚಾಗಿ ಗಹನವಾಗಿರತಕ್ಕವುಗಳನ್ನು ಕ್ರಮಕ್ರಮವಾಗಿ ಅವರ ಬುದ್ಧಿಶಕ್ತಿಗೆ ಅನುಗುಣವಾಗಿರುವಂತೆ ತಿಳಿಸುತ್ತಾ ಶುಂಠರೆಂದು ಬಾಸಲ್ಪಟ್ಟವರನ್ನೂಕೂಡ ಸಂಭಾಷಣೆಯ ಮೂಲಕವಾಗಿಯೇ ವಿದ್ಯಾವಂತರನ್ನಾಗಿ ಮಾಡುತ್ತಿದ್ದರು. ಇವರ ವಿದ್ಯಾರ್ಥಿಗಳೆಲ್ಲರೂ ಪಾಠ ಮಡೆಯತಕ್ಕವೇಳೆಗಳಲ್ಲಿ ಭಯದಿಂದ ನಡೆದುಕೊಳ್ಳುತ್ತಿರಲಿಲ್ಲ. ಸ್ನೇಹಿತರು ಸೇರಿ ಯಾವಪಾದರೂ ಒಂದು ವಿಷಯವನ್ನು ಚರ್ಚಿಸುತ್ತಿದ್ದರೆ ಹ್ಯಾಗೋಹಾಗೆ ಅವರು ಪಾಠಹೇಳುವ ತಕ್ಕಗತಿಗಳು ಇರುತ್ತಿದ್ದವು. ಇಷ್ಟು ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟಪ್ಪಾಗ್ಯೂ ಅವರು ತಮಗೆ ಅತಿ ಪರಿಚಯವೂ ಸ್ನೇಹವೂ ಇದೆ ಎಂದು ಉಚ್ಛೃಂಖಲವಾಗಿ ಪ್ರವರ್ತಿಸುತ್ತಿರಲಿಲ್ಲ. ಹಾಗೆ ಪ್ರವರ್ತಿಸದೇ ಇರುವದಕ್ಕೆ ಇವರ ಅಸಮಾಧಾನವಾದ ನೋಟವೆ ಸಾಕಾಗುತ್ತಿತ್ತು. ಇವರ ಪಾಠಕ್ರಮವು ವಿಚಿತ್ರವಾದದ್ದು. ಅನೇಕ ವಿಷಯಗಳನ್ನು ಹೇಳುವದಕ್ಕೆ ಉಪಕ್ರಮಿಸಿ ವಿದ್ಯಾರ್ಥಿಗಳಿಗೆ ದಿಗ್ಭ್ರಮೆಯನ್ನುಂಟುಮಾಡುವಾವದೂ ರೂಢಮೂಲವಾಗದೇ ಇರುವಂತೆ ಹೇಳತಕ್ಕ ಸಂಪ್ರದಾಯವು ಇವರಲ್ಲಿ. ಇವರು ಯಾವದಾದರೂ ಒಂದು ವಿಷಯವನ್ನು ತೆಗದುಕೊಂಡು ಅದನ್ನು ನೂರಾರುವಿಧವಾಗಿ ಹೇಳಿ ವಿದ್ಯಾರ್ಥಿಗಳ ಕೈಲಿ ಬರೆಸಿ ಅವರಿಗೆ ಚನ್ನಾಗಿ ತಿಳಿಯುವಂಬದಾಗಿ ಗೊತ್ತಾದಮೇಲೆ ಬೇರೆ ವಿಷಯವನ್ನು ಹೇಳುವದಕ್ಕೆ ಉಪಕ್ರಮಿಸುವರು. ಇವರ ಪಾಠದಿಂದ ವಿದ್ಯಾರ್ಥಿಗಳಿಗೆ ಬೇಗ ವಿದ್ಯಾಬರುವದಿಲ್ಲಾ ಎಂದು ಕೆ

ಯಲ್ಲಿ ಆಟದೋಪಾದಿಯಲ್ಲಿ ಶಾಸ್ತ್ರತತ್ವಗಳನ್ನು ಪರೀಕ್ಷಿಸಿ ಅನುಭವಕ್ಕೆ ತಂದುಕೊಂಡ ಬಾಲರಿಗೆ ಅಕ್ಷರಾಭ್ಯಾಸವಾದಮೇಲೆ ಈ ಶಾಸ್ತ್ರದ ವಿಶೇಷ ವಿಷಯಗಳು ಎಂದಿಗೂ ಕಷ್ಟವಾಗುವದಿಲ್ಲ. ಚಿಕ್ಕವಯಸ್ಸಿನಲ್ಲಿಯೇ ಈ ಜನರು ಸಕಲ ಶಾಸ್ತ್ರ ವಿಶಾರದರಾಗಿ ಪರಿಣಮಿಸುವಂತೆ ಈ ವಿಧವಾದ ಶಿಕ್ಷೆಯಿಂದ ಏರ್ಪಾಡು ಮಾಡುವದು ಬಹಳ ಸುಲಭ. ಆದರೆ ಇಂಥಾ ಸುಲಭವಾದ ಕೆಲಸವನ್ನು ಮಾಡುವಪಕ್ಕೆ ಎಲ್ಲರೂ ಸಮರ್ಥರಲ್ಲ. ಮಕ್ಕಳಿಗೆ ಪಾಠ ಹೇಳುವದು ಬಹು ಸುಲಭವಾದದ್ದೆಂದು ಅನೇಕರು ಭಾವಿಸುವರು. ಆದರೆ ಈ ಕೆಲಸವು ಸಕಲಶಾಸ್ತ್ರವಿಶಾರದರಾದವರಿಗೆ ವಿನಹಾ ಇತರರಿಗೆ ಸಾಧ್ಯವಲ್ಲ. ಮಕ್ಕಳ ಬುದ್ಧಿಯು ಬಹು ತೀಕ್ಷ್ಣವಾಗಿರುವದುಂಟು. ಒಬ್ಬ ಪಾಠಕನು ವಿದ್ಯಾರ್ಥಿಗಳಿಗೆ ಭೂಗೋಳವನ್ನು ಹೇಳುವಾಗ ಒಬ್ಬ ವಿದ್ಯಾರ್ಥಿಯು ಈ ಭೂಮಿಗೆ ಆಧಾರವೇನು ಎಂದು ಕೇಳಿದನು. ಆತನು ಪರ್ವತಗಳೆಂದು ಹೇಳಿದನು. ಅದಕ್ಕೆ ಆ ವಿದ್ಯಾರ್ಥಿಯು ಆ ಪರ್ವತಗಳಿಗೆ ಆಧಾರ ಯಾವದೆಂದು ಕೇಳಿದನು. ಅದಕ್ಕೆ ಆತನು ದೇವರೆಂದು ಹೇಳಿದನು. ಕೂಡಲೆ ವಿದ್ಯಾರ್ಥಿಯು ದೇವರು ಯಾವದರಮೇಲೆ ನಿಂತು ಇದಾನೆಂದು ಕೇಳಿದನು. ಅದಕ್ಕೆ ಆತನು ಸ್ವಶಕ್ತಿಯಿಂದ ಆದ್ಯಂತರಹಿತವಾದ ಆಕಾಶದ ಮಧ್ಯದಲ್ಲಿದಾನೆಂದು ಹೇಳಿದನು ಅದಕ್ಕೆ ವಿದ್ಯಾರ್ಥಿಯು ತಿಳಿಯದ ಸಂಗತಿಗಳನ್ನು ಹೇಳುವದಕ್ಕಿಂತ ಭೂಮಿಯೇ ಇಂಥಾ ಆಕಾಶದ ಮಧ್ಯದಲ್ಲಿದೆ ಎಂದು ಯಾತಕ್ಕೆ ಹೇಳಕೂಡದೆಂದು ಕೇಳಿದನು. ಅದಕ್ಕೆ ಸರಿಯಾದುತ್ತರವು ಪಾಠಕನಿಗೆ ತಿಳಿಯಲಿಲ್ಲ. ಅನೇಕ ಮಕ್ಕಳು ಅನೇಕವಿಧವಾದ ಪ್ರಶ್ನೆಗಳನ್ನು ಹಾಕುತ್ತಾರೆ. ಆ ಪ್ರಶ್ನೆಗಳಿಗೆಲ್ಲಾ ಸದುತ್ತರವನ್ನು ಕೊಡುವಷ್ಟು ಪಾಂಡಿತ್ಯವುಳ್ಳ ತಂದೆತಾಯಿಗಳೂ ಪಾಠಕರೂ ಶಿಕ್ಕುವದು ಬಹಳ ಅಪೂರ್ವ. ಅನೇಕರು ಮಕ್ಕಳ ಪ್ರಶ್ನೆಗಳಿಗೆ ಸರಿಯಾದುತ್ತರವನ್ನು ಕೊಡದೆ ಅಪಸ್ಥಗಳನ್ನು ಹೇಳಿ ವಿಥ್ಯಾಜ್ಞಾನವನ್ನುಂಟುಮಾಡುತ್ತಾರೆ. ಇನ್ನೂ ಕೆಲವರು ಸರಿಯಾದ ಉತ್ತರಗಳನ್ನು ಕೊಡುವದಕ್ಕೆ ತಿಳಿಯದೆ ಅಂಥಾ ಪ್ರಶ್ನೆಗಳನ್ನೇ ಕೇಳಿದಹಾಗೆ ಮಾಡಿಕೊಳ್ಳುತ್ತಾರೆ. ಪೆಸ್ಟಲಾಟ್ಸೀಯವರ ಬೋಧನಕ್ರಮವು ಈರೀತಿಯಾದದ್ದಲ್ಲ. ಉತ್ತರ ಕೊಡುವದಕ್ಕೆ ಕಷ್ಟವಾದ ಪ್ರಶ್ನೆಗಳನ್ನು ಮಕ್ಕಳು ಹಾಕಿದರೆ ಅವರಿಗೆ ಅದರಿಂದ ಅನಿರ್ವಚನೀಯವಾದ ಆನಂದ ಉಂಟಾಗುತಿತ್ತು. ಅಂಥಾ ಪ್ರಶ್ನೆಗಳಿಗೆ ಯಾವ ಯಾವ ಗ್ರಂಥಗಳಲ್ಲಿ ಏನು ಏನು ಉತ್ತರಗಳು ಸಿಕ್ಕುತ್ತವೆಯೋ ಅವುಗಳನ್ನು ಶೋಧಿಸಿ ಅವುಗಳನ್ನು ಮಕ್ಕಳಿಗೆ ತಿಳಿಸಿ ಅವರೊಡನೆ ಆ ಉತ್ತ

2. ಹೀಗೆ ಮೇಲಕ್ಕೆ ಗಾಳಿ ಹೋಗುವುದರಿಂದುಂಟಾದ ಅವಕಾಶಕ್ಕೆ ತಣ್ಣಗಿರುವ ಪ್ರದೇಶದಿಂದ ಗಾಳಿ ನುಗ್ಗುವುದು.

ಭೂಮಿಯು ಬಿಸಿಲಿನಿಂದ ಕಾದು ಶಖೆಯುಂಟಾಗಿರುವಾಗ ನೀರಿನ ಮೇಲಿರದ ಗಾಳಿ ಬೀಸಿ ತನುವನ್ನುಂಟುಮಾಡುವುದನ್ನು ಚರ್ಚಿಪಿಸಿ ಬಾಲಕರಿಂದಲೇ ಹೇಳಿಸುವುದು.

3. ಭೂಗೋಳದಲ್ಲಿ ಅಕ್ಷಾಂಶ ಹೆಚ್ಚಿದ ಹಾಗೆಲ್ಲ ಶಖೆಯು ಕಡಮೆಯಾಗುವುದು.

ಭೂವಲಯಗಳನ್ನು ಬಾಲಕರಿಂದ ಹೇಳಿಸಿ, ಅವುಗಳ ಹೆಸರಿನ ಸಹಾಯದಿಂದ ಈ ಅಂಶವನ್ನು ಹೇಳಿಸುವುದು.

4. ಭೂಗೋಳವು ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಿರುವುದು ಮತ್ತು ತನ್ನೊಡನೆ ವಾಯುಮಂಡಲವನ್ನೂ ಸುತ್ತಿಸುವುದು.

ಸೂರ್ಯನ ದೈನಂದಿನ ಚಲನೆಯ ಸಹಾಯದಿಂದ ಹೇಳಿಸುವುದು.

5. ವಿಷುವದ್ರೇಖೆಯಿಂದ ಉತ್ತರಕ್ಕೆ ಅಥವಾ ದಕ್ಷಿಣಕ್ಕೆ ಹೋಗುತ ಹೋಗುತ ಅಕ್ಷಾಂಶಗಳ ಸುತ್ತಳತೆಯು ಕಡಮೆಯಾಗುತ ಹೋಗುವುದು.

ಭೂಗೋಳವನ್ನು ತೋರಿಸಿ ಹೇಳಿಸಬೇಕು.

ಆದುದರಿಂದ ವಿಷುವದ್ರೇಖೆಯ ಹತ್ತರದ ಗಾಳಿಯು ಭೂಮಿಯೊಡನೆ ಸುತ್ತುವ ವೇಗಕ್ಕಿಂತಲೂ ಮೇಲುಮೇಲಿನ ಅಕ್ಷಾಂವೆದ ಹತ್ತಿರವಿರುವ ಗಾಳಿಯ ವೇಗವೂ ಕಡಶು ಕಡಮೆ.

ಜಾತ್ರೆಸಮಯದಲ್ಲಿ ದೊಡ್ಡ ಛತ್ರಿಯಂತಿರುವುದರ ಕೊನೆಯಲ್ಲಿ ಆನೆ ಕುದುರೆ ಮುಂತಾದವುಗಳನ್ನು, ಮಧ್ಯದಲ್ಲಿ ಕುರ್ಚಿಯನ್ನು ಕಟ್ಟಿ ತಿರುಗಿಸುವುದರ ನಿದರ್ಶನದಿಂದ ಈ ಅಂಶವನ್ನು ಸ್ಪಷ್ಟಪಡಿಸಬೇಕು. ಬಾಲಕರಿಗೆ ಇದು ಮುಂದಟ್ಟಾಗುವುದಕ್ಕಾಗಿ ವಿಷುವದ್ರೇಖೆಯ ಹತ್ತಿರವಿರುವ ಗಾಳಿಯೊಡನೆ ಮೇಲಿನ ಅಕ್ಷಾಂಶದ ಹತ್ತಿರವರುವ ಗಾಳಿಯನ್ನು ಜೂಜಿಗೆ ಬಿಟ್ಟರೆ ಅದು ಹಿಂದೆ ಬೀಳುವುದೆಂದು ಸಹ ತಿಳಿಸಬೇಕು.

ಪುನರಾವರ್ತನೆ ಮಾಡಿ ಈ ಅಂಶಗಳನ್ನು ಮುಂದಟ್ಟು ಮಾಡಬೇಕು. ಮುಖ್ಯವಾದ ಅಂಶಗಳನ್ನು ಹಲಿಗೆಯಮೇಲೆ ಚಿತ್ರಿಸಿರಬೇಕು.

ದೆರು ತಾತ್ಪರ್ಯಪಟ್ಟು ಇದ್ದರು. ಹೀಗೆ ತಾತ್ಪರ್ಯಪಡುವದಕ್ಕೆ ಕಾರಣವುಂಟು. ಅನೇಕ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಒಂದು ವಿಷಯವನ್ನು ಚನ್ನಾಗಿ ತಿಳಿದುಕೊಳ್ಳದೆ ಅನೇಕ ವಿಷಯಗಳನ್ನು ಸ್ವಲ್ಪಸ್ವಲ್ಪವಾಗಿ ತಿಳಿದುಕೊಂಡಿದ್ದರು. ಇದನ್ನು ನೋಡಿ ಅನೇಕರು ಇಂಥಾ ತಪ್ಪು ಅಭಿಪ್ರಾಯವನ್ನು ಪಡುತ್ತಿದ್ದರು. ಆದರೆ ಪರಿಣಾಮದಲ್ಲಿ ಇವರಲ್ಲಿ ಓದಿದ ವಿದ್ಯಾರ್ಥಿಗಳಿಗೂ ಇತರ ವಿದ್ಯಾರ್ಥಿಗಳಿಗೂ ಹೋಲಿಸಿದರೆ ಇವರುಗಳ ಪಾಂಡಿತ್ಯಗಳು ಹಸ್ತಿಮಶಕನ್ಯಾಯವಾಗಿ ಪರಿಣಮಿಸಿತು. ಇಂಥಾ ಅದ್ಭುತವಾದ ಶಕ್ತಿಯುಳ್ಳವರಾದಾಗ್ಯೂ ಜನರು ಇವರನ್ನು ಸಾಮಾನ್ಯರಾದ ಪಾಠಕರೆಂದು ಗಣಿಸುತ್ತಿದ್ದರು. ಇವರ ನಿಜವಾದ ಯೋಗ್ಯತೆಯು ಜನರಿಗೆ ತಿಳಿಯುವದಕ್ಕೆ ಬಹುಕಾಲಬೇಕಾಯಿತು. ಇವರ ವಿದ್ಯಾರ್ಥಿಗಳು ಅದ್ವಿತೀಯಪಂಡಿತರಾಗಿ ಪರಿಣಮಿಸಿ ಪ್ರವೇಶಿಸಿದ ಕಾಲಸಗಳಲ್ಲಿ ಎಲ್ಲಾ ಅವರಿಗೆ ಸಮಾನರಾದವರು ಅಪೂರ್ವವೆಂದು ಗೊತ್ತಾಗುತ್ತಲೂ ಇನೇರು ಈ ಅಸಾಧಾರಣವಾದ ಸಾಮರ್ಥ್ಯವು ಇವರ ಶಿಷ್ಯರಲ್ಲಿ ಮಾತ್ರ ಇರುವದು ನೋಡಿ ಇದಕ್ಕೆ ಅವರೇ ಕಾರಣಭೂತರೆಂದು ತಿಳಿದುಕೊಂಡು ಅವರನ್ನು ಮರ್ಯಾದೆಯಿಂದ ನೋಡುವದಕ್ಕೆ ಉಪಕ್ರಮಿಸಿದರು. ಹೀಗೆ ಯೋಗ್ಯತೆ ಇದ್ದಾಗ್ಯೂ ಪೂಜ್ಯತೆ ಬರಬೇಕಾದರೆ ಕಾಲಸಂದರ್ಭಗಳ ಸಂಯೋಜನವು ಅವಶ್ಯಕವಾದದ್ದು.

ಪಿಕಪ್ಪಣಿ.

7ನೇ ತರಗತಿ] [ಕಾಲ 50 ನಿಮಿಷ

ವಾಣಿಜ್ಯ ಸಹಾಯುವಾರುತ.

ಉದಕರಣ—ಭೂಗೋಳ.

	ವಿಷಯ.	ಬೋಧನ ಕ್ರಮ.
I	1. ಶಕೆಯಿಂದ ಕಾದ ಗಾಳಿಯು ಉನ್ನತಪ್ರದೇಶಕ್ಕೆ ಹೋಗುವುದು	ಆಕಾಶಬುಟ್ಟಿಯು ಮೇಲಕ್ಕೆ ಹತ್ತಿ ಹೋಗುವುದರ ನಿದರ್ಶನದಿಂದ ಬಾಲಕರಿಂದಲೇ ಹೇಳಿಸುವುದು.

2. ಹೀಗೆ ಮೇಲಕ್ಕೆ ಗಾಳಿ ಹೋಗುವುದರಿಂದುಂಟಾದ ಅವಕಾಶಕ್ಕೆ ತಣ್ಣಗಿರುವ ಪ್ರದೇಶದಿಂದ ಗಾಳಿ ನುಗ್ಗುವುದು.	ಭೂಮಿಯು ಬಿಸಿಲಿನಿಂದ ಕಾದು ಶಖೆಯುಂಟಾಗಿರುವಾಗ ; ನೀರಿನ ಮೇಲಿರದ ಗಾಳಿ ಬೀಸಿ ತನುವನ್ನುಂಟುಮಾಡುವುದನ್ನು ಜ್ಞಾಪಿಸಿ ಬಾಲಕರಿಂದಲೇ ಹೇಳಿಸುವುದು.
3. ಭೂಗೋಳದಲ್ಲಿ ಅಕ್ಷಾಂಶ ಹೆಚ್ಚಿದ ಹಾಗೆಲ್ಲ ಶಖೆಯು ಕಡಮೆಯಾಗುವುದು.	ಭೂವಲಯಗಳನ್ನು ಬಾಲಕರಿಂದ ಹೇಳಿಸಿ, ಅವುಗಳ ಹೆಸರಿನ ಸಹಾಯದಿಂದ ಈ ಅಂಶವನ್ನು ಹೇಳಿಸುವುದು.
4. ಭೂಗೋಳವು ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಿರುವುದು ಮತ್ತು ತನ್ನೊಡನೆ ವಾಯುಮಂಡಲವನ್ನೂ ಸುತ್ತಿಸುವುದು.	ಸೂರ್ಯನ ದೈನಂದಿನ ಚಲನೆಯ ಸಹಾಯದಿಂದ ಹೇಳಿಸುವುದು.
5. ವಿಷುವದ್ರೇಖೆಯಿಂದ ಉತ್ತರಕ್ಕೆ ಅಥವಾ ದಕ್ಷಿಣಕ್ಕೆ ಹೋಗುತ ಹೋಗುತ ಅಕ್ಷಾಂಶಗಳ ಸುತ್ತಳತೆಯು ಕಡಮೆಯಾಗುತ ಹೋಗುವುದು.	ಭೂಗೋಳವನ್ನು ತೋರಿಸಿ ಹೇಳಿಸಬೇಕು.
ಆದುದರಿಂದ ವಿಷುವದ್ರೇಖೆಯ ಹತ್ತಿರದ ಗಾಳಿಯು ಭೂಮಿಯೊಡನೆ ಸುತ್ತುವ ವೇಗಕ್ಕಿಂತಲೂ ಮೇಲುಮೇಲಿನ ಅಕ್ಷಾಂಶದ ಹತ್ತಿರವಿರುವ ಗಾಳಿಯ ವೇಗವೂ ಕಡಿಮೆ.	ಜಾತ್ರೆಸಮಯದಲ್ಲಿ ದೊಡ್ಡ ಛತ್ರಿಯಂತಿರುವುದರ ಕೊನೆಯಲ್ಲಿ ಆನೆ ಕುದುರೆ ಮುಂತಾದವುಗಳನ್ನು, ಮಧ್ಯದಲ್ಲಿ ಕುರ್ಚಿಯನ್ನು ಕಟ್ಟಿ ತಿರುಗಿಸುವುದರ ನಿದರ್ಶನದಿಂದ ಈ ಅಂಶವನ್ನು ಸ್ಪಷ್ಟಪಡಿಸಬೇಕು. ಬಾಲಕರಿಗೆ ಇದು ಮಂದಟ್ಟಾಗುವುದಕ್ಕಾಗಿ ವಿಷುವದ್ರೇಖೆಯು ಹತ್ತಿರವಿರುವ ಗಾಳಿಯೊಡನೆ ಮೇಲಿನ ಅಕ್ಷಾಂಶದ ಹತ್ತಿರವರುವ ಗಾಳಿಯನ್ನು ಜೂಜಿಗೆ ಬಿಟ್ಟರೆ ಅದು ಹಿಂದೆ ಬೀಳುವುದೆಂದು ಸಹ ತಿಳಿಸಬೇಕು. ಪುನರಾವರ್ತನೆ ಮಾಡಿ ಈ ಅಂಶಗಳನ್ನು ಮಂದಟ್ಟು ಮಾಡಬೇಕು. ಮುಖ್ಯವಾದ ಅಂಶಗಳನ್ನು ಹಲಿಗೆಯಮೇಲೆ ಬರೆದಿರಬೇಕು.

ವರು ತಾತ್ಪರ್ಯಪಟ್ಟು ಇದ್ದರು. ಹೀಗೆ ತಾತ್ಪರ್ಯಪಡುವದಕ್ಕೆ ಕಾರಣವುಂಟು. ಅನೇಕ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಒಂದು ವಿಷಯವನ್ನು ಚನ್ನಾಗಿ ತಿಳಿದುಕೊಳ್ಳದೆ ಅನೇಕ ವಿಷಯಗಳನ್ನು ಸ್ವಲ್ಪಸ್ವಲ್ಪವಾಗಿ ತಿಳಿದುಕೊಂಡಿದ್ದರು. ಇದನ್ನು ನೋಡಿ ಅನೇಕರು ಇಂಥಾ ತಪ್ಪು ಅಭಿಪ್ರಾಯವನ್ನು ಪಡುತ್ತಿದ್ದರು. ಆದರೆ ಪರಿಣಾಮದಲ್ಲಿ ಇವರಲ್ಲಿ ಓದಿದ ವಿದ್ಯಾರ್ಥಿಗಳಿಗೂ ಇತರ ವಿದ್ಯಾರ್ಥಿಗಳಿಗೂ ಹೋಲಿಸಿದರೆ ಇವರುಗಳ ಪಾಂಡಿತ್ಯಗಳು ಹಸ್ತಿಮಶಕನ್ಯಾಯವಾಗಿ ಪರಿಣಮಿಸಿತು. ಇಂಥಾ ಅದ್ಭುತವಾದ ಶಕ್ತಿಯುಳ್ಳವರಾದಾಗ್ಯೂ ಜನರು ಇವರನ್ನು ಸಾಮಾನ್ಯರಾದ ಪಾಠಕರೆಂದು ಗಣಿಸುತ್ತಿದ್ದರು. ಇವರ ನಿಜವಾದ ಯೋಗ್ಯತೆಯು ಜನರಿಗೆ ತಿಳಿಯುವದಕ್ಕೆ ಬಹುಕಾಲಬೇಕಾಯಿತು. ಇವರ ವಿದ್ಯಾರ್ಥಿಗಳು ಅದ್ವಿತೀಯಪಂಡಿತರಾಗಿ ಪರಿಣಮಿಸಿ ಪ್ರವೇಶಿಸಿದ ಕೆಲಸಗಳಲ್ಲಿ ಎಲ್ಲಾ ಅವರಿಗೆ ಸಮಾನರಾದವರು ಅಪೂರ್ವವೆಂದು ಗೊತ್ತಾಗುತ್ತಲೂ ಜನರು ಈ ಅಸಾಧಾರಣವಾದ ಸಾಮರ್ಥ್ಯವು ಇವರ ಶಿಷ್ಯರಲ್ಲಿ ಮಾತ್ರ ಇರುವದು ನೋಡಿ ಇದಕ್ಕೆ ಅವರೇ ಕಾರಣಭೂತರೆಂದು ತಿಳಿದುಕೊಂಡು ಅವರನ್ನು ಮರ್ಯಾದೆಯಿಂದ ನೋಡುವದಕ್ಕೆ ಉಪಕ್ರಮಿಸಿದರು. ಹೀಗೆ ಯೋಗ್ಯತೆ ಇದ್ದಾಗ್ಯೂ ಪೂಜ್ಯತೆ ಬರದೇಹಾದರೆ ಕಾಲಸಂದರ್ಭಗಳ ಸಂಯೋಜನವು ಅವಶ್ಯಕವಾದದ್ದು.

ಪಿಕಪ್ಪಣಿ.

Vನೇ ತರಗತಿ] [ಕಾಲ 50 ನಿಮಿಷ

ವಾಣಿಜ್ಯ ಸಹಾಯವಾರುತ.

ಉದಕರಣ—ಭೂಗೋಳ.

	ವಿಷಯ.	ಬೋಧನ ಕ್ರಮ.
I	1. ಶಕೆಯಿಂದ ಕಾದ ಗಾಳಿಯು ಉನ್ನತಪ್ರದೇಶಕ್ಕೆ ಹೋಗುವುದು	ಆಕಾಶಬುಟ್ಟಿಯು ಮೇಲಕ್ಕೆ ಹತ್ತಿ ಹೋಗುವುದರ ನಿದರ್ಶನದಿಂದ ಬಾಲಕರಿಂ

ಸಾಂಕ್ರಾಮಿಕ ರೋಗಗಳು—

ಅವುಗಳು ವ್ಯಾಪ್ತವಾದಾಗ ನಡಿಸತಕ್ಕ ವಿಧಾನವು

ರೋಗಗಳ ಉತ್ಪತ್ತಿಗೆ ಕೆಟ್ಟಗಾಳಿ, ನೀರು, ಆಹಾರ ಇವೇ ಮುಂತಾದವುಗಳ ವ್ಯತ್ಯಾಸವೇ ಕಾರಣವು. ಅಲ್ಲದೆ ಭೂಮಿಯಲ್ಲಿ ಸದಾನಡೆಯುವ ವ್ಯತ್ಯಾಸಗಳಿಂದಲೂ ರೋಗಗಳು ಉಂಟಾಗುವವು. ರೋಗಗಳನ್ನು ಸಾಮಾನ್ಯರೋಗಗಳೆಂದು ಸಾಂಕ್ರಾಮಿಕರೋಗಗಳೆಂದು ಎರಡುವಿಧವಾಗಿ ವೈದ್ಯರು ವಿಂಗಡಿಸಿದ್ದಾರೆ. ಸಾಮಾನ್ಯ ರೋಗಗಳಿಗೆ ಆಹಾರ, ನೀರು ಇವುಗಳ ವ್ಯತ್ಯಾಸಗಳೇ ಮುಖ್ಯಕಾರಣಗಳಾಗಿರುವವು. ಸಾಂಕ್ರಾಮಿಕರೋಗಗಳಾದರೋ ಅಂಟು ರೋಗಗಳು. ಒಂದು ಊರಿನಲ್ಲಿ ಒಂದು ರೋಗವು ತಲೆಹಾಕಿ ಒಬ್ಬರಿಂದ ಒಬ್ಬರಿಗೂ ಒಂದು ಬೀದಿಯಿಂದ ಮತ್ತೊಂದು ಬೀದಿಗೂ ಹರಡಿಕೊಳ್ಳುತ್ತ ಬಂದರೆ ಅಂಥವುಗಳಿಗೆ ಅಂಟು ರೋಗಗಳೆಂದು ಹೆಸರು. ಇವುಗಳ ಹರಡುವಿಕೆಯು ನಾನಾವಿಧವಾಗಿರುವವು. ಮುಖ್ಯವಾಗಿ ರೋಗದಿಂದ ಪೀಡಿತರಾಗಿರುವವರ ಸಂಪರ್ಕದಿಂದಲೂ, ಅಥವ ಅವರಿಂದ ವಿಸರ್ಜಿಸಲ್ಪಟ್ಟ ಮಲ, ಮೂತ್ರ, ವಾಂತಿ, ಶ್ಲೇಷ್ಮ ಮುಂತಾದವುಗಳು ನೀರು, ಆಹಾರದ ಮೂಲಕ ಹೊಟ್ಟೆಗೆ ಸೇರುವದರಿಂದಲೂ, ಇದು ಇತರರಿಗೂ ತಗಲುವದು. ಮತ್ತು ಅವನಿಂದ ಬಿಡಲ್ಪಟ್ಟ ಉಸಿರು ಸವಿಾಪವಲ್ಲಿರತಕ್ಕವರಿಗೂ ಜಾಡ್ಯವನ್ನುಂಟುಮಾಡುವದು. ಆ ರೋಗಿಯು ಬಿಟ್ಟ ಉಸಿರ ಸಂಪರ್ಕದಿಂದಲೂ ಆ ರೋಗವು ಇತರರಿಗೆ ವ್ಯಾಪಿಸುವದು. ಅಂಟುರೋಗಗಳು ಅತಿ ಸೂಕ್ಷ್ಮವಾದ ವಿಷಕ್ರಿಮಿಗಳಿಂದುಂಟಾಗುವವು ಈ ವಿಷಕ್ರಿಮಿಗಳು ಸದಾಕಾಲದಲ್ಲೂ ಇದ್ದರೂ ಒಂದೊಂದುಕಾಲದಲ್ಲಿ ಇವುಗಳ ವೇಗವು ಅನೇಕ ಕಾರಣಗಳಿಂದ ಹೆಚ್ಚಾಗುವದು. ಮುಖ್ಯವಾಗಿ ಅಶುಚಿಯೇ ಇವುಗಳ ಅಭಿವೃದ್ಧಿಗೆ ಕಾರಣವಾಗಿದೆ ಅಂಟುರೋಗವು ಸಾಮಾನ್ಯಶಃ ಜನಭರಿತವಾಗಿಯೂ ಮನೆಗಳು ಒತ್ತಾಗಿಯೂ ಇರುವ ಬೀದಿಗಳಲ್ಲಿ ಮೊದಲು ಪ್ರಾರಂಭವಾಗಿ ಇತರಕಡೆಗೆ ಕ್ರಮೇಣ ಹರಡುವದು. ಆದರೆ ಶುಚಿಯಾಗಿರುವ ಮನೆಗಳಲ್ಲಿ ವಾಸಮಾಡಿ ಆಹಾರ ಪಾನೀಯಾದಿ ವಿಷಯುಗಳಲ್ಲಿ ಜಾಗರೂಕರಾಗಿರುವರನ್ನು ಪ್ರಾಯಶಃ ಒಹಳವಾಗಿ ಬಾಧಿಸುವದಿಲ್ಲ.

ಸಾಂಕ್ರಾಮಿಕ ಜಾಡ್ಯಗಳಲ್ಲಿ ವಿಷಮಶೀತಜ್ವರ, ಡಬಾರ, ಶಿಡುಬು, ವಾಂಭೇದಿ, ನಾಯಿಕೆಮ್ಮು, ಪ್ಲೇಯು, ಇನ್‌ಫ್ಲುಯೆಂಜ, ಡಿಸೆಂಟ್ರಿಯರ್, ಪ್ಲೇಗ್‌ಜ್ವರ ಇವೆ

II 1 ಉಷ್ಣವಲಯದಲ್ಲಿ ಅಂದರೆ ವಿಷುವದ್ರೇಖೆಯ ಹತ್ತರ ಶಾಖ ಹೆಚ್ಚ್ಯಾಗುದರಿಂದ ಅಲ್ಲಿನ ಗಾಳಿಯು ಮೇಲಕ್ಕೆ ಹತ್ತುವುದು. ಅದರ ಸ್ಥಾನಕ್ಕೆ ಉತ್ತರದಿಂದ ಗಾಳಿಯು ನುಗ್ಗುವುದು. ಇದು ದಕ್ಷಿಣಕ್ಕೆ ಬರುವುದು. ಆದರೆ ಈ ಉತ್ತರದಿಂದ ಬರುವ ಗಾಳಿಯು ವೇಗದಲ್ಲಿ ಕಡಮೆಯಾದುದಾದ್ದರಿಂದ ಬರುತ ಹಿಂದಾಗುವುದು; ಅಂದರೆ ಭೂಮಿಯು ಪೂರ್ವಕ್ಕೆ ಸುತ್ತುತ್ತಿರುವುದರಿಂದ ಗಾಳಿಯು ಪಶ್ಚಿಮದ ಕಡೆಗೆ ಬಾಗುವುದು.

ಹಲಿಗೆಯಮೇಲೆ ಭೂಗೋಳದ ಆಕೃತಿಯನ್ನು ಬರೆದು, ಮೇಲೆ ಹೇಳಿರುವ ಅಂಶಗಳ ಸಹಾಯದಿಂದ ಇದನ್ನು ಹೇಳಿಸಬೇಕು. ಹಲಿಗೆಯಮೇಲೆ ಸೂಕ್ಷ್ಮವಾಗಿ ಈ ಅಂಶಗಳನ್ನು ಬರೆಯಬೇಕು.

ಉತ್ತರದಿಂದ ಹೊರಟು ದಕ್ಷಿಣಕ್ಕೆ ಬರುವಾಗ್ಯೆ ಪಶ್ಚಿಮಕ್ಕೆ ತಿರುಗಿದರೆ ಈಶಾನ್ಯದಿಕ್ಕಿನಿಂದ ಬೀಸುವಂತಾಗುವುದು.

ಬಾಲಕರಿಂದ ಹೇಳಿಸುವುದು.

ಪುನರಾವರ್ತನೆ ಮಾಡುವುದು.

2 ಉಷ್ಣವಲಯದ ದಕ್ಷಿಣಭಾಗದಿಂದ ಗಾಳಿಯು ಮೇಲಕ್ಕೆ ಹೋಗುತ್ತಲು ದಕ್ಷಿಣದಿಂದ ಬೀಸುವ ಗಾಳಿಯು ಆಗ್ನೇಯದಿಂದ ಬೀಸುವುದು.

ಮೇಲಿನಂತೆಯೇ ಇದನ್ನು ಹೇಳಿಸಬೇಕು.

3 ಹಡಗಿನ ವ್ಯಾಪಾರದವರಿಗೆ ಈ ಗಾಳಿಗಳು ಸಹಾಯಮಾಡುವುದರಿಂದ ಇವುಗಳಿಗೆ ವಾಣಿಜ್ಯ ಸಹಾಯ ಮಾರುತವೆಂದು ಹೆಸರು.

ಇದನ್ನು ತಿಳಿಸಿ ಹೆಸರನ್ನು ಹೇಳಿ ಹಲಿಗೆಯಮೇಲೆ ಬರೆಯಬೇಕು.

ಒಟ್ಟು ಪುನರಾವರ್ತನೆ ಮಾಡಬೇಕು.

ಪ್ರದೇಶಗಳಲ್ಲಿ ಕಟ್ಟಿ ಕೊಡುವದು ಅಸಾಧ್ಯ ಕೆಲಸ. ಆದುದರಿಂದ ಪ್ರತಿಮನುಷ್ಯನು ತನ್ನ ಮನೆಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟರೆ ಗ್ರಾಮವು ಬಹಳ ಆರೋಗ್ಯಸ್ಥಿತಿಯಲ್ಲಿರುವದು. ಸಾಂಕ್ರಾಮಿಕ ಜಾಡ್ಯಗಳೂ ಪ್ರಾರಂಭದಲ್ಲಿ ಯಾರಿಗೂ ಗೋಚರವಾಗದಹಾಗೆ ಹರಡುತ್ತವೆ. ಅವರ ವೇಗವು ಹೆಚ್ಚಾದಾಗ ಜನಗಳಿಗೆ ಗಾಬರಿ ಉಂಟಾಗಿ ಸರ್ಕಾರದ ಅಧಿಕಾರಿಗಳ ಗಮನಕ್ಕೆ ಬರುತ್ತಾರೆ. ಒಬ್ಬ ಮನುಷ್ಯನ ಅಜಾಗರೂಕತೆಯಿಂದ ಇತರರೂ ಕಷ್ಟಪಡುವದು ಬಹಳ ಅನ್ಯಾಯವಾಗಿದೆ. ಪ್ರತಿ ಮನುಷ್ಯನು ತನ್ನ ನೆರೆಹೊರೆಯವರ ಸೌಖ್ಯದಲ್ಲಿ ಕೂಡಿದಮಟ್ಟಿಗೂ ದೃಷ್ಟಿಯನ್ನಿಡಬೇಕು. ಒಂದುವೇಳೆ ತನ್ನ ಮನೆಯಲ್ಲಿ ಅಕಸ್ಮಾತ್ತಾಗಿ ಯಾವದಾದರೂ ಅಪಾಯ ಸಂಭವಿಸಿದ್ದೇಆದರೆ ನೆರೆಹೊರೆಯವರಿಗೆಲ್ಲಾ ಎಚ್ಚರವಾಗಿರುವಂತೆ ಬುದ್ಧಿವಾದವನ್ನು ಹೇಳಬೇಕು.

(೨) ಸರ್ಕಾರದವರು ಅನೇಕ ಮನೆಗಳಲ್ಲಿರತಕ್ಕ ದನಕರುಗಳ ಕೊಟ್ಟಿಗೆಗಳನ್ನು ಪದೇಪದೆ ನೋಡಿ ಅಲ್ಲಿ ಕಶ್ಮಲ ಸೇರದಹಾಗೂ ಅಲ್ಲಿನಿಂದ ಹೊರಡುವ ಗಂಜಲ ಮುಂತಾದ ವಿಸರ್ಜನ ಪದಾರ್ಥಗಳೂ ಬೀದಿ ಚರಂಡಿಗಳಲ್ಲಿ ಹರಿದು ಸಮೀಪದಲ್ಲಿರುವ ಬಾವಿ ಕೆರೆಗಳಿಗೆ ಬೀಳದಹಾಗೆ ನೋಡಿಕೊಳ್ಳಬೇಕು. ಸಾಧ್ಯವಾದರೆ ದನಕರುಗಳನ್ನು ಊರಿನಹೊರಗೆ ಬೇರೆಸ್ಥಳದಲ್ಲಿಡುವದಕ್ಕೆ ಏರ್ಪಾಡುಗಳನ್ನು ಮಾಡಬೇಕು.

(೩) ಊರಿನ ರಸ್ತೆಗಳಲ್ಲಿ ಜನರು ಕಶ್ಮಲಗಳನ್ನು ಬಿಸಾಡದಹಾಗೆ ಕಬ್ಬಿಣದ ಅಥವ ಕಲ್ಲಿನ ತೊಟ್ಟಿಗಳನ್ನು ಕಟ್ಟಿಸಿ ಪ್ರತಿವನೆಯವರೂ ಅವರವರ ಮನೆಯ ಗೊಬ್ಬರ ಮುಂತಾದ ಕಶ್ಮಲಗಳನ್ನು ಆ ತೊಟ್ಟಿಗಳಲ್ಲಿ ಹಾಕುವಹಾಗೆ ನೋಡಿಕೊಳ್ಳಬೇಕು. ಮತ್ತು ಊರಿನಲ್ಲಿರುವ ಚರಂಡಿಗಳೆಲ್ಲೆಲ್ಲಾ ನೀರು ಸರಿಯಾಗಿ ಮುಂದಕ್ಕೆ ಹೋಗುವಹಾಗೆ ಒಳ್ಳೇಸ್ಥಿತಿಯಲ್ಲಿಡಬೇಕು. ಅಂಥಾ ಬಚ್ಚಲುಗಳು ಊರಿನ ಸಮೀಪದಲ್ಲಿರುವ ಬಾವಿ ಕೆರೆಗಳಿಗೆ ಬೀಳದಹಾಗೆ ನೋಡಿಕೊಳ್ಳಬೇಕು. ಕೆಲವರು ಬೀದಿಗಳಲ್ಲೂ ಸಂದಿಗಳಲ್ಲೂ ಇರುವ ಸಾಳುಮನೆಗಳಲ್ಲಿ ದೇಹಬಾಧೆ ತೀರಿಸಿಕೊಳ್ಳುತ್ತಾರೆ. ಅದನ್ನು ತಪ್ಪಿಸಿ ಹೆಂಗಸರಿಗೂ ಗಂಡಸರಿಗೂ ಪ್ರತ್ಯೇಕಪ್ರತ್ಯೇಕವಾಗಿ ಕಕ್ಕಸುಗಳನ್ನು ಕಟ್ಟಿಸಿ ಅವುಗಳನ್ನೆಲ್ಲಾ ಶುಚಿಯಾಗಿಡಬೇಕು. ಇಂಥಾ ಸಾಳುಮನೆಗಳನ್ನು ನೆಲಸಮಾ ಮಾಡಿ ಅಲ್ಲಿರುವ ಕಶ್ಮಲಗಳನ್ನು ದೂರಾಹಾಕಿಸಬೇಕು. ಅನುಕೂಲವಾದರೆ ಜನಗಳ ಆರೋಗ್ಯಕ್ಕೂ ವಿಹಾರಕ್ಕೂ ಅನುಗುಣವಾಗಿ ಹೂವಿನತೋಟಗಳನ್ನು ಕಲ್ಪಿಸಬೇಕು.

ಮುಖ್ಯವಾದವುಗಳು. ಸಾಂಕ್ರಾಮಿಕಗಳು ಪ್ರಬಲವಾದಾಗ ಸಾಮಾನ್ಯವಾಗಿ ಜನಗಳು ಮಾಡತಕ್ಕ ಕಾರ್ಯಗಳು :—ಕಾಣಿಸಿಕೊಂಡಾಗ ಅದು ಅಭಿವೃದ್ಧಿಯಾಗದಹಾಗೆ ನೋಡಿಕೊಳ್ಳುವ ವಿಷಯದಲ್ಲಿ ರೋಗ ತಗಲಿದವರಿಗೆ ನಡಿಸಬೇಕಾಗಿರುವ ಉಪಚಾರ ಚಿಕಿತ್ಸೆಗಳವಿಷಯದಲ್ಲಿಯೂ ಸರ್ಕಾರದವರೂ ಗ್ರಾಮಸ್ಥರೂ ಒಟ್ಟಾಗಿ ಸೇರಿ ಪರಸ್ಪರ ಸಹಾಯದಿಂದಲೂ ಐಕಮತ್ಯದಿಂದಲೂ ಕೆಲಸಮಾಡುವದು ಮುಖ್ಯಕರ್ತವ್ಯವಾಗಿದೆ. ಅವುಗಳ ನಿವಾರಣಾರ್ಥವಾಗಿ ಸರ್ಕಾರದವರೂ ಆರೋಗ್ಯಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವವರನ್ನು ಗೊತ್ತುಮಾಡುವರು. ಜನಗಳು ಮೌಢ್ಯದಿಂದ ತಮ್ಮ ತಮ್ಮ ಮನೆಗಳಲ್ಲಿ ಒಬ್ಬರಿಗೆ ಸಾಂಕ್ರಾಮಿಕರೋಗವು ತಗಲಿದರೆ ಅದನ್ನು ಸರ್ಕಾರದಿಂದ ನೇಮಿಸಲ್ಪಟ್ಟ ವೈದ್ಯನಿಗಾಗಲೀ ಅಥವಾ ತಮ್ಮಲ್ಲಿರತಕ್ಕ ಬುದ್ಧಿವಂತರಾದ ವೈದ್ಯರುಗಳಿಗಾಗಲೀ ತಿಳಿಸದೆ ಮುಚ್ಚುವದರಿಂದ ರೋಗವು ಅಲ್ಲಲ್ಲಿ ಪ್ರಸರಿಸಿ ಒಬ್ಬರಿಂದ ಮತ್ತೊಬ್ಬರಿಗೆ ತಗಲುತ್ತಾ ಬರುವದು. ಇಂಥಾ ವಿಷಯಗಳನ್ನು ಸರ್ಕಾರಕ್ಕೆ ತಿಳಿಸಿದರೆ ಸರ್ಕಾರದ ವೈದ್ಯರೂ ವಿಷಾಹಾಲಕಿ ಕೊಲ್ಲುವರೆಂದು, ತಿಳಿಯದವರು ಅನ್ಯಥಾ ಯೋಚಿಸುತ್ತಾರೆ. ಇದು ಬಹಳ ತಪ್ಪಾಗಿದೆ.

ಸರ್ಕಾರದವರು ಅಂಟುರೋಗಗಳು ಪ್ರಾಪ್ತವಾದಾಗ ಮಾಡಬೇಕಾದ ಮುಖ್ಯ ಕಾರ್ಯಗಳು ಯಾವವೆಂದರೆ :—

(೧) ಪ್ರತಿಮನೆಯ ಯಜಮಾನನೂ ತನ್ನ ಮನೆಯನ್ನು ಆರೋಗ್ಯಸ್ಥಿತಿಯಲ್ಲಿಟ್ಟದ್ದಾನೆಯೋ ಇಲ್ಲವೋ ಮೊದಲು ವಿಚಾರಿಸಬೇಕು. ಆರೋಗ್ಯಸ್ಥಿತಿಯಲ್ಲಿ ಅಂದರೆ ಮನೆಯಲ್ಲಿ ಸಾಕಾದಷ್ಟು ನಿರ್ಮಲವಾದ ಗಾಳಿ ಬೇಕು. ನೀರು ಮುಂತಾದವುಗಳು ಬರುವ ವಿಷಯದಲ್ಲಿ ಜಾಗರೂಕನಾಗಿದ್ದಾನೋ ಇಲ್ಲವೋ, ಮನೆಯಲ್ಲಿ ಬಚ್ಚಲು, ಪಾಯಿಖಾನೆ ಮನೆಗಳು ಒಳ್ಳೇಸ್ಥಿತಿಯಲ್ಲಿ ಇವೆಯೋ ಇಲ್ಲವೋ ಎಂಬುವದನ್ನು ವಿಚಾರಿಸಬೇಕು. ಈ ವಿಷಯದಲ್ಲಿ ಅವನು ಅಜಾಗರೂಕನಾಗಿ ಅಂಥಾವನಿಗೆ ಇವುಗಳಿಂದ ಉಂಟಾಗತಕ್ಕ ಅಪಾಯಗಳನ್ನು ತಿಳಿಯಪಡಿಸಿ ಅವುಗಳನ್ನೆಲ್ಲಾ ಒಳ್ಳೇಸ್ಥಿತಿಯಲ್ಲಿ ಇಡುವಹಾಗೆ ಮಾಡಬೇಕು. ಮನೆಗಳು ಒತ್ತಾಗಿಯೂ ಜನಸಂಖ್ಯೆಯು ಹೆಚ್ಚಾಗಿಯೂ ಇರುವ ಬೀದಿಗಳಲ್ಲಿ ಅಂಟುರೋಗಗಳ ಜಾಗ್ರತೆಯಾಗಿ ಇರಡಿಕೊಳ್ಳುವವು. ಅವರೂ ಅದನ್ನು ಸರಿಮಾಡುವ ಕಾಲಗಳಲ್ಲಿ ಸರ್ಕಾರದವರೂ ಒಂದೇ ಪ್ರವರ್ತಿ ಅಂಥಾ ಸ್ಥಳಗಳಲ್ಲಿರತಕ್ಕ ಮನೆಗಳನ್ನೆಲ್ಲಾ ಒಡೆದು ಬೇರೆ ಮನೆಗಳನ್ನು ಆರೋಗ್ಯವಾದ

ವರಿಗೂ ಬೇರೆ ಬೇರೆ ಸ್ಥಳಗಳನ್ನು ಗೊತ್ತುಮಾಡಿ ಅಲ್ಲಿ ಸರಿಯಾದ ಚಿಕಿತ್ಸೆ ಉಪಚಾರಗಳು ನಡೆಯುವಂತೆ ಏರ್ಪಾಡುಗಳನ್ನು ಮಾಡಬೇಕು. ಪ್ರತಿ ಪೊಲೀಸ್ ಠಾಣಾದಲ್ಲೂ ಅಲ್ಲಲ್ಲಿ ವಾಸಮಾಡುವ ಗ್ರಾಮನಿವಾಸಿಗಳ ಮನೆಯಲ್ಲೂ ಆ ಜಾಡ್ಯಗಳಿಗೆ ಬೇಕಾದ ಔಷಧಿಗಳನ್ನು ಇಟ್ಟು ಅವುಗಳ ಉಪಯೋಗಗಳನ್ನು ಅವರಿಗೆ ಚೆನ್ನಾಗಿ ತಿಳಿಸಬೇಕು. ಅಂಟುರೋಗಗಳು ಪ್ರಾಪ್ತವಾದಾಗ ಇನ್ನೂ ಕೆಲವು ಹಂಗಾಮಿ ಆಸ್ಪತ್ರೆಗಳನ್ನು ಸ್ಥಾಪಿಸಬೇಕು.

(೯) ಅಂಟುರೋಗಗಳಿಂದ ಮೃತಪಟ್ಟ ಜನರನ್ನು ಆಯಾಯ ಜಾತಿ ಪದ್ಧತಿಗೆ ಅನುಸಾರವಾಗಿ ಹೂಳುವದಕ್ಕೂ, ಸುಡುವದಕ್ಕೂ ಬೇರೆ ಬೇರೆ ಸ್ಮಶಾನ ಭೂಮಿಗಳನ್ನು ದೂರವಾಗಿ ಕಲ್ಪಿಸಬೇಕು. ಶವಗಳನ್ನ ಕೆರೆಕಾಲುವೆಗಳ ಸವಿಾಪದಲ್ಲಿ ಹೂಳಕೂಡದು. ಅಲ್ಲದೆ ೫ ಅಥವ ೬ ಅಡಿ ಆಳ ಹಳ್ಳ ತೆಗೆದು ಹೂಳಬೇಕು. ಅನೇಕರು ಹೆಣಗಳನ್ನು ೧—೨ ಅಡಿ ಆಳ ಹಳ್ಳಗಳಲ್ಲಿ ಹೂಳುತ್ತಾರೆ. ಇದರಿಂದ ನಾಯಿ ನರಿಗಳು ಅವುಗಳನ್ನು ರಾತ್ರೆಕಾಲದಲ್ಲಿ ಬಗೆದು ಹೊರಗೆ ಬಿಸಾಡುವವು. ಅವು ಅಲ್ಲೇ ಕೊಳತು ವಿಷಕ್ರಿಮಿಗಳು ಇತರ ಸ್ಥಳಗಳಿಗೆ ಹರಡುವವು. ಹೆಣಗಳನ್ನು ಸುಡುವದರಿಂದ ವಿಷಕ್ರಿಮಿಗಳೆಲ್ಲಾ ನಾಶವಾಗುವವು. ಹೂಳುವದಕ್ಕಿಂತ ಸುಡುವದು ಬಹಳ ಆರೋಗ್ಯಕರವಾದದ್ದು. ಇದು ಕೆಲವು ಮತಸ್ಥರಿಗೆ ಸರಿಯಾಗಿ ತೋರುವದಿಲ್ಲ.

(೧೦) ಸಾಂಕ್ರಾವಿಕರೋಗಗಳಿಂದ ಮೃತಪಟ್ಟ ಸ್ಥಳಗಳನ್ನು ರುಚಿಯಾಗಿ ಇಡುವದಕ್ಕೆ ಬೇಕಾದ ವಿಷಾಪಹಾರಿ ದ್ರವ್ಯಗಳನ್ನು ಕೊಟ್ಟು ಅವುಗಳನ್ನು ಸರಿಯಾಗಿ ಉಪಯೋಗಿಸುವಂತೆ ಮಾಡಬೇಕು. ಅನಾಥರಿಗೆ ಬೇಕಾದ ಸಹಾಯಗಳನ್ನು ಸರ್ಕಾರದವರೂ ಗ್ರಾಮಸ್ಥರೂ ಮಾಡಬೇಕು. ಜನನ ಮರಣ ಪಟ್ಟಿಗಳನ್ನು ಇಡುವದರಿಂದ ಊರಿನಲ್ಲಿ ಸಾಧಾರಣದಿವಸಗಳಲ್ಲಿ ಆಗುವ ಮರಣದ ಸಂಖ್ಯೆ ಗೊತ್ತಾಗುವದು. ಇದ್ದರಿಂದ ಅಂಟುರೋಗಗಳಿಂದ ಮೃತಪಡತಕ್ಕವರ ಸಂಖ್ಯೆಯನ್ನು ಗೊತ್ತುಮಾಡಬಹುದು. ಮತ್ತು ಯಾವಯಾವ ಜಾತಿಯಲ್ಲಿ ಯಾವಯಾವ ಕಸಬಿನವರು, ಎಷ್ಟೆಷ್ಟು ವಯಸ್ಸಿನವರು ಎಷ್ಟುಮಂದಿ ಮೃತಪಟ್ಟವರೆಂಬುವದನ್ನು ತಿಳಿಯಬಹುದು. ಮುಖ್ಯವಾಗಿ ಇದರಿಂದ ಊರಿನ ಆರೋಗ್ಯಸ್ಥಿತಿಯನ್ನು ಚೆನ್ನಾಗಿ ಗೊತ್ತುಮಾಡಬಹುದು.

ಎನ್. ನರಸಿಂಹಾಚಾರ್,
ವೆಟರಿನೆರಿಸರ್ಜನ್.

(೪) ಚರ್ಮ ಹದಾವಾಡುವವರು, ಇಂಗಾರೆಯುವರು, ಕಟುಕರು, ಹರಳು ಬೀಯಿಸುವವರು, ಇಟ್ಟಿಗೆ ಸುಣ್ಣ ಸುಡುವವರು ಮುಂತಾದವರು ತಮ್ಮ ಕಸಬುಗಳನ್ನು ಊರಿನಮಧ್ಯೆ ನಡೆಸದೆ ದೂರವಾಗಿ ನಡೆಸುವಹಾಗೆ ಮಾಡಬೇಕು.

(೫) ಕುಡಿಯುವದಕ್ಕೆ ಉಪಯೋಗಿಸುವ ನೀರಿನಬಾವಿ, ಕೆರೆಗಳಲ್ಲಿ ಜನರು ಬಟ್ಟೆ ಒಗೆಯುವದು, ಸ್ನಾನಮಾಡುವದು, ದನಕರಗಳನ್ನು ತೊಳಿಯುವದು ಮುಂತಾದವುಗಳನ್ನು ತಪ್ಪಿಸಿ ನೀರು ನಿರ್ಮಲವಾಗಿರುವಂತೆ ನೋಡಿಕೊಳ್ಳಬೇಕು. ಅಂಥಾ ಕೆರೆಭಾವಿಗಳಿಗೆ ಮುಖ್ಯವಾಗಿ ಗ್ರಾಮದ ಬಚ್ಚಲು ಬಂದು ಸೇರದಹಾಗೆ ನೋಡಿಕೊಳ್ಳಬೇಕು. ಕಟ್ಟೆಗಳಮೇಲೆ ಬೆಳೆದಿರತಕ್ಕ ಚಿಕ್ಕ ಗಿಡಗಳನ್ನು ಕತ್ತರಿಸಬೇಕು. ನೀರು ಕೊಳೆಯುದಹಾಗೆ ನೋಡಿಕೊಳ್ಳಬೇಕು. ಸಾಧ್ಯವಾದರೆ ದೂರವಾಗಿಯೂ ನಿರ್ಮಲವಾಗಿಯೂ ಇರುವ ಕೆರೆಗಳಿಂದ ನಲ್ಲಿಗಳ ಮಾರ್ಗವಾಗಿ ಶೋಧಿಸಿದ ನೀರನ್ನು ಊರಿಗೆ ತರುವಂತೆ ಮಾಡಬೇಕು.

(೬) ಅಂಗಡಿಗಳಲ್ಲಿ ಒಳ್ಳೆ ಆಹಾರಪದಾರ್ಥಗಳನ್ನು ಮಾರುತ್ತಾರೋ ಇಲ್ಲ ವೋಯೆಂದು ಪ್ರತಿದಿನವೂ ವಿಚಾರಿಸಬೇಕು. ಮಾರ್ಕಟ್ಟುಗಳಲ್ಲಿ ಕೊಳೆತ ಕಾಯಿ ಪಲ್ಯಗಳನ್ನು ಮಾರುತ್ತಿದ್ದರೆ ಅವುಗಳನ್ನು ನಾಶಮಾಡಬೇಕು. ಸುತ್ತಾ ಇರತಕ್ಕ ಹಳ್ಳಿಗಳಲ್ಲಿ ಯಾವದಾದರೂ ಸೊಂಕು ಜಾಡ್ಯವಿದ್ದರೆ ಅಲ್ಲಿಂದ ಬರತಕ್ಕ ಪದಾರ್ಥಗಳನ್ನು ಊರಿಗೆ ಬಾರದಹಾಗೆ ಕಟ್ಟುವಮಾಡಬೇಕು.

(೭) ಯಾವದಾದರೂ ಒಂದು ಮನೆಯಲ್ಲಿ ಪ್ಲೇಗ್, ವಾಂತಿಭೇದಿ, ಸಿಡುಬು, ಇವುಗಳು ಪ್ರಾಪ್ತವಾದರೆ ಆ ಮನೆಯ ಯಜಮಾನನು ಕೂಡಲೇ ಸರಿಯಾದ ವೈದ್ಯರಿಗಾಗಲಿ ಅಥವಾ ಆಸ್ಪತ್ರೆಗಾಗಲಿ ಸಮಾಚಾರ ಕೊಡಬೇಕು. ಸರ್ಕಾರದ ವೈದ್ಯಶಾಲೆಗಳಲ್ಲಿ ಚಿಕಿತ್ಸೆ ಮಾಡಿಕೊಳ್ಳುವದಕ್ಕೆ ಅಭಿಪ್ರಾಯಪಡದಿದ್ದರೆ ರೋಗಪೀಡಿತನಾದವನನ್ನು ಪ್ರತ್ಯೇಕವಾಗಿ ನಿರ್ಮಲವಾದ ಗಾಳಿ, ಬಿಸಿಲು ಬರತಕ್ಕ ಕೊಠಡಿಯಲ್ಲಿಟ್ಟು ಅವನಿಗೆ ಸರಿಯಾದ ಉಪಚಾರಗಳನ್ನು ಮಾಡಿಸಬೇಕು. ಇತರರಿಗೆ ಆ ಜಾಡ್ಯದ ಸೊಂಕು ತಗಲದಹಾಗೆ ನೋಡಿಕೊಳ್ಳಬೇಕು.

(೮) ಸರ್ಕಾರದವರು ಹವಗಳಿಗೆ ಗಾಬರಿಯಾಗದಂತೆ ಜಾಡ್ಯದ ಸ್ವಭಾವವನ್ನು ಅದರಿಂದ ಆಗತಕ್ಕ ಅಪಾಯಗಳನ್ನು ಚೆನ್ನಾಗಿ ತಿಳಿಸಬೇಕು. ಮತ್ತು ತಕ್ಕ ವೈದ್ಯರನ್ನು ಗೊತ್ತುಮಾಡಿ ರೋಗದಿಂದ ಪೀಡಿತರಾದವರಿಗೂ ಅವರ ಸಮಿಾಪದಲ್ಲಿದ್ದ

ಭೂಗೋಳ, ಚರಿತ್ರೆ ಮುಂತಾದವುಗಳಿಗೆ ಬಹು ಸ್ವಲ್ಪ ಗಮನವನ್ನೂ ಕೊಡುವರು. ಇವರಿಂದಲೇ ಬುದ್ಧಿಸಂಸ್ಕರಣಕ್ಕೆ ಅವಕಾಶ ತಪ್ಪುವುದೆಂದು ತೋರುತ್ತದೆ. [illegible] ನೇ ಇಯತ್ತೆಯವರಿಗೆ ಚರಿತ್ರೆ, ಭೂಗೋಳ ಪಾಠಗಳೆಂದರೆ ತಲೆಯುಚ್ಚೇನೆ ಹತ್ತುವುದು. ಬೋಧಕರ ಕ್ಲೇಶವಾದರೋ ಹೇಳಲಿಕ್ಕೆ ಬಾರದು. ವಚನಕಾವ್ಯವನ್ನು ಜತ್ತೆಂಟುಸಾರಿ ಓದಿಸುವುದು, ಪದ್ಯಕಾವ್ಯದ ಪದ್ಯಗಳನ್ನು ಕಂಠಪಾಠಮಾಡಿಸಿಬಿಡುವುದು. ಇಷ್ಟರಿಂದಲೇ ಹುಡುಗರಿಗೆ ಭಾಷಾಜ್ಞಾನ ಉಂಟಾಗುವುದಿಲ್ಲ. ಶ್ರದ್ಧೆಯಿಂದ ಕಲಿಸಲಪೇಕ್ಷಿಸುವವನು ಹುಡುಗರಿಗೆ ಕಲಿಸಿದ ಪ್ರತಿ ಒಂದು ಶಬ್ದಕ್ಕೂ ತಕ್ಕ ಅರ್ಥವನ್ನು ತಿಳಿಸಿ, ಅವರ ಮನಸ್ಸಿನಲ್ಲಿ ಅದನ್ನು ಸೇರಿಸಿದರೆ ಸಾವಿರಕಂಠಪಾಠಗಳಿಗಿಂತ ಹೆಚ್ಚಾದ ಪ್ರಯೋಜನ ಲಭಿಸುವುದು. ಪ್ರತಿಒಂದು ಪಾಠವನ್ನೂ ಕಲಿಸುವುದಕ್ಕಿಂತ ಮುಂಚೆ ಬೋಧಕನು ಕಲಿಸುವ ಕ್ರಮವನ್ನು ತನ್ನ ಟಿಪ್ಪಣದ ಹೊತ್ತಗೆಯಲ್ಲಿ ಗುರುತುಮಾಡಬೇಕೆಂಬುದಕ್ಕೂ ಇದೇ ಕಾರಣ ಓದುಪ್ಪುದರ ಅಭಿಪ್ರಾಯವು ಹುಡುಗರ ಮನಸ್ಸಿನಲ್ಲಿ ನೆಡುವುದೇ ಕಂಠಪಾಠ ತದಿತರ ಪಾಠವೇ ಕುರುಡುಪಾಠ. ಇದು ಅಸ್ತಿಬಾರವಿಲ್ಲದ ಗೋಡೆಯಂತೆ ಸ್ಥಿರವಾಗಿ ನಿಲ್ಲಲಾರದು.

ಬುದ್ಧಿಯನ್ನು ವೃದ್ಧಿಗೊಳಿಸಲಿಕ್ಕೆ ಗಣಿತಾಭ್ಯಾಸದಷ್ಟು ಉತ್ತಮವಾದ ಸಾಧನವು ಇಲ್ಲ. ಈಗ ಅನೇಕಕಡೆಗಳಲ್ಲಿ ಕಲಿಸುವಂತೆ ಅಂಕಗಣಿತದ ಉದಾಹರಣೆಗಳನ್ನು ಕೊಟ್ಟು, ಘಂಟೆಗೆ ಎರಡು ಲೆಕ್ಕಗಳನ್ನು ಮಾಡಿಸಿದರೆ ಫಲ ಉಂಟೆಂದು ಹೇಳಲಾಗದು. ಜ್ಞಾನಪ್ರಕಶಕ್ತಿಯನ್ನು ಹೆಚ್ಚಿಸುವಂತೆ ಮೊದಲು ಸುಲಭವಾದ ದೃಷ್ಟಾಂತವನ್ನು ಕೊಟ್ಟು, ಅದಕ್ಕೆ ತಕ್ಕ ಸೂತ್ರವನ್ನು ಹುಡುಗರಿಂದಲೇ ಹೇಳಿಸಿ, ಅದರಂತೆ ಹತ್ತು ಲೆಕ್ಕಗಳನ್ನು ಬಾಯಿಪಾಠ (ಮಾನಸಗಣಿತ) ದಿಂದಲೇ ಹೇಳಿಸುತ್ತಾ ಬಂದರೆ ಆಂಥಾ ಮಾದರಿಯ ಲೆಕ್ಕಗಳನ್ನು ಸುಲಭವಾಗಿ ಮಾಡಬಹುದೆಂದು ಅವರಿಗೆ ಧೈರ್ಯ ಹುಟ್ಟುವುದು. ಮಾರ್ಗ ತಿಳಿದಮೇಲೆ ಘಂಟೆಗೆ ೧೦—೧೫ ಲೆಕ್ಕಗಳನ್ನಾದರೂ ಸುಲಭವಾಗಿ ಮಾಡಲು ಶಕ್ತರಾಗುವರು. ಅರ್ಥಜ್ಞಾನವಿಲ್ಲದೆ ಮನಸ್ಸಿಗೆ ಬೇಸರವನ್ನು ಹುಟ್ಟಿಸಿ ಭಿನ್ನರಾಶಿ, ಅನುಪಾತ, ಅಪವರ್ತ್ಯ, ಘನಮೂಲ ಮುಂತಾದ ಅಪರೂಪ ಶಬ್ದಗಳನ್ನೇ ಮೆದುಳಿನಲ್ಲಿ ನಡಿಸಬೇಕೆಂದರೆ ಬೋಧಕರ ಉದ್ದೇಶವು ನೆರವೇರದು.

ಚರಿತ್ರೆ ಭೂಗೋಳದ ಪಾಠಗಳು ಕಥಾರೂಪವಾಗಿ ಹುಡುಗರಿಗೆ ತಿಳಿಸಿದರೆ ಮೆರೆಯದೆ ಇರುವುದು. [illegible] ನೇ ಅಧ್ಯಾಯವನ್ನು ಗಟ್ಟಿಮಾಡಿರಿ. [illegible] ನೇ ಪುಟದಿಂದ [illegible] ನೇ ಪುಟದವರೆಗೆ ಪಾಠಮಾಡಿಕೊಂಡು ಬನ್ನಿ ಎಂದು ಆಜ್ಞೆ ಕೊಡುತ್ತಾ ಬಂದರೆ, ಚೆನ್ನಾಗಿ ಓದಲಿಕ್ಕೆ ತಿಳಿಯದ [illegible] ನೇ ಇಯತ್ತೆಯ ಹುಡುಗರು ಎಷ್ಟುವರ್ಷಗಳಿಗೆ ಕಲಿಯುವರು ? ಅವರ ಜ್ಞಾನವೃದ್ಧಿ ಎಷ್ಟು ಮಟ್ಟಿಗೆ ವೃದ್ಧಿಯಾಗುವುದು ?

ಕಂಠಪಾಠ ಮಾಡಿಸುವಿಕೆ.

ಪಾಠಶಾಲೆಗಳಲ್ಲಿ ಉಪಾಧ್ಯಾಯರು ಸಾಮಾನ್ಯವಾಗಿ ಪುಸ್ತಕದಲ್ಲಿರುವ ಬ್ದಗಳನ್ನಲ್ಲಾ ಕಂಠಪಾಠಮಾಡಿಸುವ ಅಭ್ಯಾಸವನ್ನೇ ಬಲಪಡಿಸುತ್ತಾ ಬರುವುದನ್ನು ೀಕ್ಷಿಸಿ ವಿಷಾದಿಸಬೇಕಾಗಿದೆ. ಅರ್ಥಜ್ಞಾನವಿಲ್ಲದ ಕುರುಡು ಪಾಠದಿಂದ ಯಾವ ಪ್ರಯೋಜನವೂ ಲಭಿಸುವುದಿಲ್ಲವೆಂಬುದು ಬೋಧಕರ ಮನಸ್ಸಿಗೆ ಬಂದರೆ ಈ ರೂಢಿ ುನ್ನು ತಪ್ಪಿಸಿ, ಮಕ್ಕಳಿಗೆ ಪದಾರ್ಥದ ಅಥವಾ ವಿಷಯದ ಜ್ಞಾನವನ್ನುಂಟುಮಾ ಿಸಿ ಅನಂತರ ಪಾಠಗಳನ್ನು ಪ್ರಶ್ನೋತ್ತರಾಖ್ಯಾನದಿಂದ ಹೇಳಿಸುವುದಕ್ಕೆ ಮಾತ್ರ ಈ ಅಭ್ಯಾಸವು ಉಪಯೋಗಿಸಬಹುದಾದರೂ ಅರ್ಥಜ್ಞಾನವಿಲ್ಲದೆ ಪದ್ಯಗಳನ್ನು ಕಲಿಸು ವುದೂ ವಿಫಲ. ಇತಿಹಾಸ ಭೂಗೋಳ ಪಾಠಗಳಲ್ಲಿ ಕೂಡ ತಾತ್ಪರ್ಯವರಿಯದ ಪಾಠಮಾಪಾಠವು ಕೆಲವುವೇಳೆ ತಪ್ಪಾದ ಅಭಿಪ್ರಾಯದ ಉತ್ತರಗಳನ್ನು ಹೊರಡಿಸು ವುದು. ದೃಷ್ಟಾಂತಕ್ಕಾಗಿ ಕೆಲವು ಶಬ್ದಗಳನ್ನು ತೆಗೆದುಕೊಳ್ಳೋಣ. ಸಸ್ಪೆಕ್ಷನ್ ಬ್ರಿಡ್ಜ್ (ತೂಗುಹಾಕಿದ ಸೇತುವೆ), ಕಾರವಾನ್ ವ್ಯಾಪಾರ, ಬ್ಯಾಂಕ್ಸ್ ಮತ್ತು ಲಾ ಕರ್ ಕೆಲಸದಲ್ಲಿ, ಬಿಲ್ಜಿಯಂ ಲೇಸ್ ಪ್ರಸಿದ್ಧವಾದುದು. ಯಪುಳಸದಿ, ತಲಪರಿಗೆ ಇತ್ಯಾದಿಗಳನ್ನು ಅರ್ಥಜ್ಞಾನವಿಲ್ಲದೆ ಪಾಠಮಾಡಿಸಿದರೆ ಲಾಭವೇನು? ಮಕ್ಕಳತರಗ ತಿಯಲ್ಲಿಯೇ ಈ ದುರಭ್ಯಾಸವು ಆರಂಭವಾಗುವುದರಿಂದ ಉತ್ತಮಶ್ರೇಣಿಗಳಲ್ಲಿ ಸುದಾ ುಡುಗರನ್ನು ತಿದ್ದಿಕೊಳ್ಳುವುದು ಕಷ್ಟವಾಗುವುದು. ಲೌಕಿಕಜ್ಞಾನವನ್ನುಂಟುಮಾ ಿಕೊಡುವುದೇ ವಿದ್ಯಾಭ್ಯಾಸದ ಪ್ರಥಮೋದ್ದೇಶವು. ೨—೩ ನೇ ಇಯತ್ತೆಗಳಲ್ಲಿ ನುವಹುಡುಗರು ಕೊಡುತ್ತಿರುವ ಕೆಲವು ಉತ್ತರಗಳನ್ನು ಇಲ್ಲಿ ತಿಳಿಸುವೆನು. (೧) ತಂ ತಿಯು ತಂಗಿಯನ್ನು ಏನೆಂದು ಕರೆಯುವರು? ಚಿಕ್ಕಮ್ಮ. (೨) ಅಣ್ಣನ ಹೆಂಡತಿಯು ನ್ನಾಗಲಿ, ತಮ್ಮನ ಹೆಂಡತಿಯನ್ನಾಗಲಿ ಯಾವಸಂಬಂಧದಿಂದ ಕರೆಯಬೇಕು? ಅಕ್ಕ, ಂಗಿ, ಸೊಸೆ, ಇತ್ಯಾದಿ. (೩) ಸಾಗುವಾನಿ ಮರವೆಂದರೆ ಏನು? ಮಾವಿನಮರ. ೪) ಆನೆಗೆ ಎಷ್ಟುಪಾವಲಿ? ನಾಲ್ಕು. [೫] ಮೈಸೂರಿಗೆ ರಾಜಧಾನಿ ಯಾವುದು? ೈದರಾಬಾದು. ಈರೀತಿಯಾದ ಉತ್ತರಗಳನ್ನು ಪಡೆಯುವ ಬೋಧಕರು ವಿದ್ಯಾ ರ್ಥಿಗಳನ್ನು ತಿದ್ದಿಕೊಳ್ಳುವುದು ಹೇಗೆ?

ದೇಶಭಾಷೆಯು ಪಾಠಶಾಲೆಯಲ್ಲಿ ಭಾಷೆಗೆ ಹೆಚ್ಚಾದ ಗಮನವನ್ನೂ, ಗಣಿತ,

ಕಿಂಡರ್‌ಗಾರ್ಟ್ನ್.

೨ನೆಯ ಅಭ್ಯಾಸ.

ಒಂದು ಚಂಡನ್ನು ಆ ಚಂಡಿನ ಬಣ್ಣದಂಥ ದಾರದಿಂದಲೇ ಜೋಲುಬಿಟ್ಟು ೨ದನ್ನು ಅಲ್ಲಾಡಿಸಿ ತೂಗುತ್ತದೆಂದೂ ಇದರಂತೆ ತೊಟ್ಟಲು, ಉಯ್ಯಾಲೆ ಗಡಿಯಾ ೨ದ ನಾಲಿಗೆ, ಪೆಂಡ್ಯುಲಂ ಗಿಡದಲ್ಲಿರುವ ನಿಂಬೆಹಣ್ಣು, ಮಾವಿನಕಾಯಿ ಗಿಡಕ್ಕೆ ನೇತು ಹಾಕಿರುವ ಗೀಜಗನಗೂಡು, ಇವುಗಳು ಹಿಂದಕ್ಕೂ ಮುಂದಕ್ಕೂ ತೂಗಾಡುವವೆಂ ತಲೂ, ಇವುಗಳಲ್ಲಿ ಒಂದೊಂದರ ಗುಣವನ್ನೂ ಪ್ರಯೋಜನವನ್ನೂ ತಿಳಿಸಿಕೊಡ ಬೇಕು.

ತರುವಾಯ ಚಂಡು ಮೆತ್ತಗೆಯಿರುವದೆಂದೂ, ತುಪಟ ಹತ್ತಿ ಮುಂತಾ ದವು ಮೆತ್ತಗಿರುವ ಪದಾರ್ಥಗಳೆಂದೂ ಹೇಳಿ ಒಂದು ಚಂಡನ್ನು ನೆಲದಮೇಲೆ ಹಾಕಿ ದರೆ ಪುಟಬರುವದೆಂದೂ ತೋರಿಸಬೇಕು. ತರುವಾಯ ಮನಸ್ಸಿನ ವ್ಯಾಪಾರವನ್ನು ಅಭಿವೃದ್ಧಿಗೊಳಿಸುವದಕ್ಕಾಗಿ ಪುಟವೆದ್ದುಬರುವ ಚಂಡು, ಅನ್ನದಗುಳನ್ನು ಅರಿಸಿ ಕೊಂಡು ಹಾರಿ ತನ್ನ ಗೂಡಿಗೆ ಹೋಗುವ ಪಕ್ಷಿಯಂತಿರುವ ವಿಷಯವನ್ನು ತಿಳಿಸಿ ಕೊಟ್ಟು ಹಣ್ಣು, ಕಾಯಿ, ಪಕ್ಷಿಗಳು ಮುಂತಾದ ಅಂಶಗಳಿಂದ ಗರ್ಭಿತವಾಗಿರುವ ಕಥೆಯನ್ನು ಹೇಳಿಕೊಡಬೇಕು.

ತರುವಾಯ ಸಾಲಾಗಿ ಆರುಚಂಡುಗಳನ್ನು ತೂಗುಹಾಕಿ ಎಣಿಕೆಯನ್ನು ಕಲಿಸಬೇಕು. ಚಂಡು ಮುಟ್ಟುತ್ತಲೆ ಉರುಳುವದೂ ಜೀವವಿದ್ದಂತೆ ಪುಟಬಂದು ನೆಗೆ ಯುವದೂ ಮಾಡುವುದರಿಂದ ಮಕ್ಕಳಿಗೆ ಅದರಮೇಲೆ ಬಹು ಪ್ರೀತಿಯುಂಟಾಗಿರುವದು.

೩ನೆಯ ಅಭ್ಯಾಸ.

ಪೂರ್ವದಂತೆ ಪೆಟ್ಟಿಗೆಗಳನ್ನು ಹಂಚಿ ಮುಚ್ಚಳವನ್ನು ತೆಗೆಯಿಸಿ ಪೆಟ್ಟಿಗೆ ಯನ್ನೂ ಮುಚ್ಚಳವನ್ನೂ ಸಮಾನಾಂತರದಲ್ಲಿ ಪೆಟ್ಟಿಗೆಯಮೇಲೆ ಇಡಿಸಿದ ತರುವಾಯ ಉಪಾಧ್ಯಾಯನು ಮಕ್ಕಳನ್ನು ಒಂದೊಂದು ಚಂಡನ್ನು ತೆಗೆದುಕೊಳ್ಳುವಂತೆ ಹೇಳಿ ತಾನೂ ತನ್ನ ಪೆಟ್ಟಿಗೆಯಿಂದ ಒಂದು ಚಂಡನ್ನು ತೆಗೆದುಕೊಳ್ಳಬೇಕು. ಉಪಾಧ್ಯಾ ಯನ ಕೈಲಿದ್ದ ಚಂಡು ಕೆಂಪುಬಣ್ಣದ್ದೆಂದು ಭಾವಿಸೋಣ. ಅವನು ಆ ಚಂಡನ್ನು ಮಕ್ಕಳಿಗೆ ತೋರಿ ಇದು ಕೆಂಪುಚೆಂಡೆಂದು ಮತ್ತೊಬ್ಬರ ಕೈಯಲ್ಲಿ ಇಂಥ ಚಂಡಿರುವದು? ಈ ಕೊಠಡಿಯಲ್ಲೂ ತೋಟದಲ್ಲೂ ಇರುವ ಈ ಬಣ್ಣದ ಪದಾರ್ಥಗಳನ್ನು ಯಾರಾ

ಉಪನ್ಯಾಸದಿಂದಲೇ ಸ್ಥಲವನ್ನು ಆಕ್ರಮಿಸುವುದಕ್ಕಿಂತ ಮುಡುಗರು ಕೊಟ್ಟ ಕೆಲವು ಉತ್ತರಗಳನ್ನು ಸಕಾರಣವಾಗಿ ತಿಳಿಸಿ, ಮತ್ತೊಂದುಸಾರಿ ಹೆಚ್ಚಾಗಿ ಹೇಳಲಾ ರಂಭಿಸಬಹುದೆಂದು ಶ್ರುತಪಡಿಸಿದೇನೆ

ಪ್ರಶ್ನೆಗಳು	ಹುಡುಗರ ಉತ್ತರಗಳು	ಉತ್ತರವು ತಪ್ಪಲಿಕ್ಕೆ ಕಾರಣ.
ಅಸ್ತವಾರವೆಂದರೇನು ?	ವೇಲಾಪ್ಪವಣಿ	ಇವೆರಡೂ ಒನ್ನೇ ರೀಡರಲ್ಲಿ ಒಂದೆ ಸ್ಥಳದಲ್ಲಿವೆ.
ರವಿಯುಂದರೇನು ?	ಆಕಾಶ	ರವಿಯುಾಕಾಶಕೆ ಭೂಷಣಂ
ಸ್ವರಗಳೆಷ್ಟು ವಿಧ ?	ಸ್ವರ, ವ್ಯಂಜನ	ಒಂದೇಕಡೆ ಬಂದಿವೆ.
ಬಾಬರನು ಆಳಿದ್ದು ಎಷ್ಟು ರುಷಗಳು ?	1526—30	ಪ್ರಶ್ನೆಗೆ ತಕ್ಕ ಉತ್ತರವನ ಯೋಚಿಸಿ ಹೇಳಬೇಕೆಂಬುದಿಲ್ಲ.
ಡೇರಿ ಮುರಿದುಬಿದ್ದು ಸತ್ತ ನು ಯಾರು ?	ಮಹಮ್ಮದ್ ಘೋರಿ	ಇವನು ಡೇರೆಯಲ್ಲಿದ್ದಾಗ ಗಾ ರು ಕೊಂದರೆಂದು ಜ್ಞಾಪಕಕ್ಕೆ ಬ ವುದಿಲ್ಲ.
ಜಹಾಂಘೀರನು ಯಾರ ಮಗ ?	ಮಹಜಹರ್ಜನ ಮಗ	ಜಹಂಘೀರನ ಮಗನಿವೆನೆಂ ಯೋಚನೆ ಇಲ್ಲ.
ಗಂಗೆಯು ಉಪನದಿಗಳು.	ಬ್ರಹ್ಮಪುತ್ರ, ಸಿಂಧು	ಇವೆಲ್ಲಾ ಒಂದುಸ್ಥಳದಲ್ಲಿ ಬ ವೆಂದು
ನೀಮಚ್ ಎತರಿಂದ ಪ್ರ ದಿ ?	ಇಲ್ಲಿ ಹಿಂದೂಗಳು ನೇಖಾಂಶವನ್ನು ಎಣಿಸು ತ್ತಿದ್ದರು.	ಉಜ್ಜಯಿನಿ, ನೀಮಚ್ ಇ ಒಂದೇಪಾಠದಲ್ಲಿ ಬಂದಿರುವುದರಿಂ ಭಾ ್ರಂತರಾಗುತ್ತಾರೆ.
ಎಕರೆಗೆ ಎಷ್ಟು ಆಣೆಗಳು ?	40	ಗುಂಟೆ 40 ಗುಂಟೆಗೆ 16 ಆ ಎಂದು ಯೋಚಿಸಲಿಕ್ಕೆ ವಿರಾ ಸಾಲದು.

ಇತ್ಯಾದಿಗಳು ಓದಲಿಕ್ಕೆ ಆಶ್ಚರ್ಯವಾಗಬಹುದು. ಬೋಧಕರ ಅನುಭವದಲ್ಲರು ವುದರಿಂದ ನಗಬೇಕಾಗಿಲ್ಲ.

ಬೋಧಕ.

ವನ್ನು ತೆಗೆಯಿಸಿ ಪ್ರತಿಯೊಬ್ಬನನ್ನೂ ಒಂದೊಂದು ಚಂಡು ತೆಗೆದುಕೊಳ್ಳುವಂತೆ ಹೇ
ಕ್ರಮವಾಗಿ ಕೆಂಪು, ಎಳಗೆಂಪು, ಹಳದಿ, ಹಸುರು, ನೀಲಿ, ಊದ, ಚಂಡುಗಳನ
ಬಿಲ್ಲಿನಂತೆ ಅರ್ಧವೃತ್ತಾಕಾರವಾಗಿಡುವಂತೆ ಹೇಳಬೇಕು. ಈ ಆಕಾರವು ನಾವು ಕೆಲ
ವೇಳೆಯಲ್ಲಿ ಆಕಾಶದಲ್ಲಿ ಕಾಣುವ ಕಾಮನಬಿಲ್ಲಿನಂತಿರುವವೆಂದೂ, ಕಾಮನಬಿಲ್ಲಿ
ವೇಲೆಹೇಳಿದ ಬಣ್ಣಗಳೇ ಕ್ರಮವಾಗಿರುವವೆಂತಲೂ ತಿಳಿಸಬೇಕು. ಈ ಪಾಠವನ
ಅಥವಾ ಅಭ್ಯಾಸವನ್ನು ಕಲಿಸುವಾಗ ನಾವು ಆಕಾಶದಲ್ಲಿ ಕಾಮನಬಿಲ್ಲು ಮೂಡಿರು
ದನ್ನು ಕಾಣಬಂದರೆ ಮಕ್ಕಳಿಗೆ ಚೆನ್ನಾಗಿ ತಿಳಿಸಬಹುದು. ತರುವಾಯ ಕಾಮನಬಿಲ್ಲ
ವಿಷಯವಾಗಿ ಹಾಡನ್ನು ಹೇಳಿಸಿ ಈ ಅಭ್ಯಾಸವನ್ನು ಮುಗಿಸಬೇಕು.

ಮಾನಸಗಣಿತ.

V ನೆಯ ತರಗತಿ. [ಕಾಲುಗಂಟೆ]

1. $(24+36)\div(25\times3)-(40\div8)-(40-10)$ =

2. 54, 90, 126 ಇವುಗಳ ಮ. ಸಾ. ಅ. ವನ್ನು 8, 12, 20, 40 ಇ
ಗಳ ಲ ಸಾ. ಅ. ವನ್ನು ಹೇಳು?

3. $\left(\frac{1}{2}+\frac{1}{4}+\frac{1}{8}+\frac{1}{16}\right)-\left[\frac{1}{2}-\frac{1}{4}-\frac{1}{8}-\frac{1}{16}\right]-\frac{7}{8}$

4. 3 ಪಿ 9 ಪೆನ್ನಿಯನ್ನು 15 ಷಿಲಿಂಗಿನ ದಶಮಾಂಶವಾಗಿ ಬರಿ,

5. 5, 25 + 3, 5—7, 75—ರ 5 ಎಷ್ಟು?

6. (9, 99 ÷ 37) + (99, 9 ÷ 2, 7)—7 ಎಷ್ಟು?

7. 4 ರ ವರ್ಗ + 3 ರ ವರ್ಗ — 25 ರ ವರ್ಗಮೂಲ ಎಷ್ಟು?

8. ಒಂದಕ್ಕೆ ದರ 2 ರೂ 14 ಆ 8 ಸೈ ಯಂತೆ 60 ಕ್ಕೆ ಎಷ್ಟಾಗುವುದು?

9. 16 ಷಿಲಿಂಗ್ 8 ಪೆನ್ನಿಯ 625 ಎಷ್ಟು?

ದರೂ ಹೇಳಬಹುದೆಂದು ತಿಳಿಸಿ ಅದಕ್ಕೆ ಸರಿಯಾದ ಉತ್ತರವನ್ನು ಪಡೆದು, ಮುಂಕಾಗಿಯೂ ಚಟುವಟಿಕೆಯಿಲ್ಲದೆಯೂ ಇರುವ ಒಂದು ಮಗುವನ್ನು ಕುರಿತು:—ಅದರ ಕೈಯಲ್ಲಿರುವ ಚೆಂಡನ್ನು ಎಲ್ಲರಿಗೂ ತೋರಿಸುವಂತೆ ಹೇಳಿ ಆ ಚೆಂಡಿನ ಬಣ್ಣವನ್ನೂ ತಿಳಿಸಿಕೊಟ್ಟು ಯಾರಲ್ಲಿ ಚೆಂಡು ಯಿರುವದು? ಯಾವಯಾವ ವಸ್ತುಗಳು ಹಳದೀಬಣ್ಣವಾಗಿರುವವು? ಮೊದಲಾದ ಪ್ರಶ್ನೆಗಳನ್ನು ಮಾಡಿ ಅವಕ್ಕೆ ಸರಿಯಾದ ಉತ್ತರವು ದೊರೆಯದಿದ್ದರೆ ಕೆಲವು ಪುಷ್ಪಗಳೂ, ಅರಿಸಿನ, ತೊಗರೀಬೇಳೆ, ಹಿತ್ತಾಳೆ ಮುಂತಾದವು ಹಳದೀಬಣ್ಣವಾಗಿರುವವೆಂದು ತಿಳಿಸಿ ಸಾಧ್ಯವಾದರೆ ಆ ವಸ್ತುಗಳನ್ನು ಪ್ರತ್ಯಕ್ಷವಾಗಿ ತೋರಿಸಬೇಕು.

ತರುವಾಯ ಎಣಿಕೆಮಾಡಿಸಬೇಕು. ಹ್ಯಾಗೆಂದರೆ:—ಎಷ್ಟು ಕೆಂಪುಚೆಂಡುಗಳಿವೆ? ಎಣಿಸಿ ಒಟ್ಟು ಎಷ್ಟು ಚೆಂಡುಗಳಾದವು ರಾಮನ ಬಲಗಡೆ ಇರುವವರಲ್ಲಿಎಷ್ಟು ಹಳದೀ ಚೆಂಡುಗಳಿವೆ? ಎಣಿಸಿ. ಗೋಪಾಲನ ಎಡಗಡೆ ಇರುವವರಲ್ಲಿ ಎಷ್ಟು ಕೆಂಪು ಚೆಂಡುಗಳಿರುವವು? ಹೀಗೆ ಪ್ರಶ್ನೆಗಳನ್ನು ಮಾಡಿ ಎಣಿಸುವದನ್ನು ತಿಳಿಸಿಕೊಟ್ಟು ಕೆಂಪುಚೆಂಡುಗಳನ್ನೂ ಹಳದಿಚೆಂಡುಗಳನ್ನೂ ಬೇರೆಬೇರೆಯಾಗಿ ವೃತ್ತಾಕಾರದಲ್ಲಿಡಿಸಬೇಕು. ಒಂದಕ್ಕೊಂದು ಸೋಕುವಹಾಗಿದ್ದರೆ ವೃತ್ತಾಕಾರವಾಗುವಷ್ಟು ಚೆಂಡುಗಳು ಸಾಲದೆ ಹೋಗಬಹುದಾದ್ದರಿಂದ ಒಂದಕ್ಕೊಂದರ ಮಧ್ಯದಲ್ಲಿ ಸಮವಾದ ಸ್ಥಳವನ್ನು ಬಿಟ್ಟು ಇಡಿಸುವ ಅಭ್ಯಾಸಮಾಡಬೇಕು. ತರುವಾಯ ಹಸುರುಬಣ್ಣದ ಚೆಂಡನ್ನು ತೋರುವಂತೆ ಕೇಳಿ ತೋರಿಸಿದನಂತರ ಅದರಂಥ ಬಣ್ಣಗಳುಳ್ಳ ಕೆಲವು ವಸ್ತುಗಳನ್ನು ಹೇಳಿಸಿ ಹಸೆರುಚೆಂಡುಗಳನ್ನೂ ಮತ್ತೊಂದು ವೃತ್ತಾಕಾರವಾಗಿರುವಂತೆ ಹೇಳಬೇಕು. ಆಮೇಲೆ ಒಟ್ಟು ಎಷ್ಟಾದವೆಂದು ಕೇಳಿ ಸರಿಯಾದುತ್ತರವನ್ನು ಹೊರಡಿಸಬೇಕು. ಹೀಗೆಯೇ ಉಳಿದ ಬಣ್ಣಗಳ ಚೆಂಡುಗಳ ವಿಷಯವಾಗಿ ತಿಳಿಸಿಕೊಡಬೇಕು.

ಕಿಂಡರ್‌ಗಾರ್ಟನ್ ಅಭ್ಯಾಸಗಳಲ್ಲಿ ಸ್ವಲ್ಪವೂ ಕ್ರಮತಪ್ಪಿ ಗದ್ದಲಕ್ಕೆ ಅವಕಾಶವಿರಬಾರದು. ಅಭ್ಯಾಸವು ಮುಗಿಯುತ್ತಲೇ ಈ ಬಣ್ಣಗಳನ್ನು ವಿವರಿಸುವ ಒಂದು ಹಾಡನ್ನು ಹೇಳಿಸಬೇಕು.

೮ನೆಯ ಅಭ್ಯಾಸ.

ಮೊದಲನೇ ಅಭ್ಯಾಸದಲ್ಲಿ ಹೇಳಿದಂತೆ ಪೆಟ್ಟಿಗೆಗಳನ್ನು ಹಂಚಿ ಮುಚ್ಚಳ

2 (1) ಒಳ್ಳೆತು, ಅಸಿದು, ಬಿಟ್ಟತು, ಇವಕ್ಕೆ ಕ್ರಮವಾಗಿ ಪುಂಸ್ತ್ರೀ ನಪುಂಸಕ ಲಿಂಗಗಳಲ್ಲಿ ಏಕವಚನ ವಿಭಕ್ತಿರೂಪಗಳೆಲ್ಲವನ್ನು ಬರೆವುದು, (2) ಬಾರಮ ರಾಳಿಕಾಗಮನೆ, ಸಿರಿತಾಯುಂತಂದೆ ಕಣ್ಣುಂಗತಿಯೆನಿಸಿದವಂ ಸಿಂಹಸೇನಕ್ಷಿತೀಶಂ। ತಿದಿಯೊತ್ತುವಕಮ್ಮಅಂಬೊರೊರ್ದಂಭೀಮಂ। ಏನೆಂಬೆಪೆಂಪೊಮನುವುಂ। ತಾನುಂಸಚ್ಚರಿತರ್—ಇವುಗಳಲ್ಲಿ ವಿಶೇಷವೇನು? (3) ಸಮುಚ್ಚಯಪ್ರಯೋಗದ ವಿಧಿಯೇನು?

3 (1) ಅವಿಶೇಷದಿಂದಮಂತ। ವರ್ಣಮೂದವುವುದೆವರ್ಣವೆಂದವಿದಂತೆ॥ ಕ್ಕ ವತಂತುಂಬಿಂದುವಬಿಂ। ದುವಾಗೆ ಬಹುವಚನದರುವನಕರ್ಪುದೆವರ್ಣಂ॥ ಈ ಸೂತ್ರದ ಅರ್ಥವನ್ನು ಉದಾಹರಣೆಗಳೊಡನೆ ವಿವರವಾಗಿ ಹೇಳುವುದು. (2) ತಾರಕವೆಂದರೇನು? ಇವುಗಳಲ್ಲಿ ಮೂರಕ್ಕೆ ಲಕ್ಷಣವನ್ನು ವಿವರಿಸಿ. ಆಪನ್ನು ಒಂದು ಹಳೆಗನ್ನಡ ವಾಕ್ಯದಲ್ಲಿ ಸೇರಿಸಿ ಬರೆವುದು, [೪] ದ್ವಿತೀಯಾರ್ಥದ ಚತುರ್ಥಿ, ತೃತೀಯಾರ್ಥದ ಸಪ್ತಮಿ, ಸಪ್ತಮ್ಯರ್ಥದ ಚತುರ್ಥಿ, ಕರ್ತೃರ್ಥದ ಷಷ್ಠಿ—ಇವಕ್ಕೆ ಒಂದೊಂದು ವಾಕ್ಯವನ್ನು ರಚಿಸಿ ಹೇಳುವುದು.

4 (1) ಸಮಾಸಲಕ್ಷಣವೇನು? (2) ಮನಂಗೊಳಿ, ಇಂಚರಂ, ಪೋನುಡಿವೆಂಡಿರ್, ಗೇರೋಲಗು, ಎಣ್ಣಾಸಿರಂ, ನಡುವಗಲ್, ಪಲ್ಲಿಲ್ಲಿ, ಇವು ಯಾವಸಮಾಸಗಳು? ವಿಗ್ರಹವಾಕ್ಯವು ಹೇಗೆ, ಇಲ್ಲಿ ಬಂದಿರುವ ಸಮಾಸಕಾರ್ಯಗಳೇನು? ಇವುಗಳಲ್ಲಿ ನಾಲ್ಕು ಸಮಾಸಗಳ ಲಕ್ಷಣವನ್ನು ತಿಳಿಸುವುದು? (3) ಅರಿಸಮಾಸದೋಷವೆಲ್ಲೆಲ್ಲಿ ಇಲ್ಲ? (4) ಒಂಬತ್ತಕ್ಕೆ- ಪತ್ತುಸಾಸಿರ, ಇವುಗಳನ್ನು, ಮೂರಕ್ಕೆ-ಅಡಿ, ಪುರಿ, ಇವುಗಳನ್ನು ಸೇರಿಸಿ ದ್ವಿಗುಸಮಾಸಮಾಡಿ ಬರೆವುದು.

5 (1) ಕೆಂದಳಿರ್, ಕಿತ್ತಡಿ, ಬಿಸುನೀರ್—ಇವುಗಳ ರೂಪಾಂತರಗಳಾವುವು? (2) ಅಗುರುಪದಾದಿಗೆ ದೀರ್ಘಂ। . . ನೆಗಳ್ದಂ ಸ್ವರಮಿದಿರೊಳೊಡವೆಬಹುಳತೆಯಿಂದಂ—ಇಲ್ಲಿ ಬಹುಳತೆಯಿಂದಂ, ಎಂಬುವರ ಪ್ರಯೋಜನವೇನು? (3) ದ್ವಿರುಕ್ತಿಯು ಯಾವಯಾವ ಅರ್ಥದಲ್ಲಿ ಬರುವುದು? (4) ಪಳುಕು, ಕೊಂಚೆ, ಪಾವುಗೆ, ಸಣ್ಣ, ಮೆಳಸು, ಚವ್ವಕಿಗೆ, ಸೊಬಗು ಪಸದನ, ಇವು ಯಾವಸಂಸ್ಕೃತ ಶಬ್ದಗಳ ಅಪಭ್ರಂಶಗಳು.

10. ಚದರವಾಗಿರುವ ಒಂದು ಅಂಗಳಕ್ಕೆ 2 ಅಡಿ ಅಗಲ 4 ಅಡಿ ಉದ್ದವುಳ್ಳ 172 ಕಲ್ಲುಗಳು ಸಾಕಾಗುವುದಾದರೆ ಅದರ ಒಂದು ಪಕ್ಕವೆಷ್ಟು ಅಡಿ ?

11. ಸೇಕಡ 5 ರಂತೆ 425 ರೂ. ಗಳಿಗೆ 4 ವರುಷಗಳಿಗೆ ಬಡ್ಡಿ ಎಷ್ಟು ?

12. A ಗೆ 4 ಬಂದರೆ B ಗೆ 7 ಬರುವಂತೆ 560 ರೂ ಗಳನ್ನು A, B ಗಳಲ್ಲಿ ಹಂಚು.

13. A ಯು 8 ದಿವಸದಲ್ಲಿ ಮಾಡುವ ಕೆಲಸವನ್ನು B 12 ದಿವಸದಲ್ಲಿ ಮಾಡುವನು. B 30 ದಿನದಲ್ಲಿ ಮಾಡುವದನ್ನು A ಎಷ್ಟು ದಿವಸದಲ್ಲಿ ಮಾಡುವನು ?

14. ಒಂದು ಅಂಗಡಿಯಲ್ಲಿ ಪಲ್ಲಾ 1 ಕ್ಕೆ $7\frac{1}{2}$ ರೂ ಯಂತೆ $4\frac{1}{2}$ ಪಲ್ಲಾ ಅಕ್ಕಿಯೂ, ರೂಪಾಯಿಗೆ 16 ಸೇರಿನಂತೆ 60 ಸೇರು ಹುರಳಿಯೂ, ಬೆಲ್ಲ ಮಣ 1 ಕ್ಕೆ 1 ರೂ 10 ಅ 8 ಪೈಯಂತೆ 6 ಮಣ ಬೆಲ್ಲವು ವೆಚ್ಚವಾಗಿದ್ದರೆ ಎಷ್ಟು ರೂಪಾಯಿಗಳು ಬಂದಿರಬೇಕು ?

ವಿದ್ಯಾರ್ಥಿಗಳು ಸ್ಲೇಟು ಮುಂತಾದ ಯಾವ ಸಾಧನವನ್ನೂ ಉಪಯೋಗಿಸದೆ ಲೆಕ್ಕಗಳನ್ನು ಮನಸ್ಸಿನಲ್ಲಿಯೇ ಮಾಡಿ ಉತ್ತರಗಳನ್ನು ಮಾತ್ರ ಇವುಗಳ ಪಕ್ಕದಲ್ಲಿ ಬರೆಯಬೇಕು.

ಕೆ. ರಾಮು.

ಗೌ॥ ನಾರ್ಮಲ್‌ಸ್ಕೂಲ್ ಮೈಸೂರು.

ತರಗತಿ VII.

ಕಾ॥ 31—7—99. ಕಾಲ 2—4.

ಶಬ್ದಮಣಿದರ್ಪಣ.

1 (1) ನಾಲ್ವತ್ತ್ಯೇಳಾಯ್ತುಳಿಶುದ್ಧಗೆಯುಚ್ಚ್ಯಗನ್ನಡಕ್ಕಿಂತ್ಯಕ್ರಮದಿಂ—ಇದು ಹೇಗೆ ? (2) ಇವು ಸಹಜಶಿಥಿಲವೃತ್ತಿಯನಾಳ್ಗಂ. ಅದಂತಡೆಯನಾಸವಾಸಾಂತರದೊಳಾತ್ಮಳ್ದು ಸಂಧಿಯಾವವು ? ಪದವಿಧಿಯಂ ನೆರೆತಳಿದ । ಲ್ಲದೆ ಕನ್ನಡದಲ್ಲಿ ಲಿಂಗವಾಗವು—ಇನಾವವು ? (3) ಸಂಧಿಸದು ತೃತೀಯವೃತ್ತಿಕತಪಕ್ಕೆಂದು. ಯಾವಾಗ ? ಉದಾಹರಣೆ ಏನು ?

ಕೋಲಾರಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕಬಳ್ಳಾಪುರದ ಕನ್ನಡಸ್ಕೂಲಿನಲ್ಲಿ ಇನ್ನೂರ ಐವತ್ತೆಂಟುಮಂದಿ ವಿದ್ಯಾರ್ಥಿಗಳಿರುವರು. ಸ್ಕೂಲು ಜನರಲ್ಲಿ ವಿಶ್ವಾಸವನ್ನು ಪರೀಕ್ಷೆಯಲ್ಲಿ ಜಯವನ್ನು ಪಡೆದಿರುವುದು. ಸ್ಕೂಲುಮನೆಯು ಚೆನ್ನಾಗಿಲ್ಲ. ಕೋಲಾರದ ಸ್ಕೂಲು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿರುವುದು. ಗುಡಿಬಂಡೆ, ಶ್ರೀನಿವಾಸಪುರದಸ್ಕೂಲುಗಳಲ್ಲಿ ಬಾಲಕರಿಗೆ ಚೆನ್ನಾಗಿ ವಿದ್ಯಾಭ್ಯಾಸ ಮಾಡಿಸಿರುವರು. ಲಕ್ಕೂರು, ಕಂದಾವರದ ಬ್ರಾಂಚ್‌ಸ್ಕೂಲುಗಳ ಸ್ಥಿತಿಯು ತೃಪ್ತಿಕರವಾಗಿದೆ.

ತುಮುಕೂರು ಡಿಸ್ಟ್ರಿಕ್ಟಿನ, ತುಮುಕೂರು ಕನ್ನಡ ಸ್ಕೂಲಿನಲ್ಲಿ ಮೂರು ಮಂದಿ ವಿದ್ಯಾರ್ಥಿಗಳಿರುವರು. ಸಂಸ್ಥಾನದಲ್ಲರುವ ಕನ್ನಡ ಸ್ಕೂಲುಗಳಲ್ಲೆಲ್ಲ ಇದು ಉತ್ತಮಸ್ಥಿತಿಯಲ್ಲಿದೆ. ಸ್ಕೂಲುಕಟ್ಟಡ ಹಿಂದಿಯುಪಮ್ಟ ಬಾಲಕರು ಸೇರಿದ್ದರಿಂದ ಈಚೆಗೆ ಒಂದು ಬಾಡಿಗೆ ಮನೆಯಲ್ಲಿ, ಬೇರೆಕಡೆ, ಮಕ್ಕಳ ತರಗತಿಗಳನ್ನು ಎರಡನೇ ತರಗತಿಗಳನ್ನೂ ಇಡಬೇಕಾಯಿತು ಹುಳಿಯಾರದ ತಾಲೊಲ್ಲೋಕು ಸ್ಕೂಲು ಅಭಿವೃದ್ಧಿಯನ್ನೇನೂ ತೋರಿಸಲಿಲ್ಲ ಅಮೃತ್ತೂರು ಬ್ರಾಂಚ್‌ಸ್ಕೂಲು ಉತ್ತಮಸ್ಥಿತಿಯಲ್ಲಿದೆ. ಬೆಳ್ಳಾವಿ, ನೊಣವಿನಕೆರೆ ಸ್ಕೂಲುಗಳು ಸುಮಾರಾಗಿ ಚೆನ್ನಾಗಿವೆ. ಹೊನ್ನವಳ್ಳಿ ಸ್ಕೂಲನ್ನೂ ಒಳ್ಳೇಸ್ಥಿತಿಗೆ ತರಬೇಕಾಗಿದೆ. ತುಮಕೂರು, ಕಡಮೆ ವೆಸ್ಲಿಯನ್ ಮಿಷನ್ ಸ್ಕೂಲುಗಳು ಸುಮಾರಾಗಿ ಚೆನ್ನಾಗೇ ಕೆಲಸಮಾಡುತಲಿವೆ. ಗುಬ್ಬಿ ವೆಸ್ಲಿಯನ್ ಮಿಷನ್ ಸ್ಕೂಲನ್ನು ಇನ್ನೂ ಅಭಿವೃದ್ಧಿ ಮಾಡಲು ಅಸ್ಪದವಿರುವುದು.

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲ ಚಿತ್ರದುರ್ಗದ ಕನ್ನಡಾಸ್ಕೂಲು ಸುಮಾರಾಗಿ ಅಭಿವೃದ್ಧಿಯನ್ನು ತೋರಿಸಿರುವುದು ಹೊಸದಾಗಿ ಕಟ್ಟುತಲಿರುವ ಕಟ್ಟಡವು ಸಿದ್ಧವಾದೊಡನೆ ಇಂಗ್ಲಿಷ್ ಹೈಸ್ಕೂಲ್ (ವೆಟ್ರಿಕ್ಯುಲೇಷನ್ ಪರೀಕ್ಷೆಯ ತರಗತಿಗಳುಳ್ಳ ಸ್ಕೂಲು) ಲೋವರ್ ಕ್ಲಾಸ್‌ಗಳನ್ನು, ಕನ್ನಡಾಸ್ಕೂಲಿಗೆ ಸೇರಿಸಿ, ಆಂಗ್ಲೋವರ್ನಾಕ್ಯುಲರ್ ಸ್ಕೂಲನ್ನಾಗಿ ಮಾಡಬೇಕೆಂಬ ಆಲೋಚನೆಯು ಇರುವುದು. ಹಿರಿಯೂರು ಸ್ಕೂಲು ಇರುವ ಮನೆಯು ಚೆನ್ನಾಗಿಲ್ಲ. ಸ್ಕೂಲಿನ ಸ್ಥಿತಿಯೂ ತೃಪ್ತಿಕರವಾಗಿಲ್ಲ. ಹೊಳಿಕಲ್ಲುಮುರುವಿನ ಸ್ಕೂಲು ಸುಮಾರಾಗಿರುತ್ತೆ! ರಾಮಗಿರಿ, ಬ್ರಹ್ಮಸಾಗರ, ತಾಳ್ಯದ ಬ್ರಾಂಚ್ ಸ್ಕೂಲುಗಳು ತೃಪ್ತಿಕರವಾಗಿ ಕೆಲಸಮಾಡಿವೆಯೆಂದು ಹೇಳಬಹುದಾಗಿದೆ.

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

ಕನ್ನಡ ಮಿಡಲ್‌ಸ್ಕೂಲುಗಳು.

ಕನ್ನಡ ಮಿಡಲ್‌ಸ್ಕೂಲುಗಳು ಮಾತ್ರ, ಈ ಸಂಸ್ಥಾನದಲ್ಲಿ ಒಟ್ಟು ಅರವತ್ತೊಂದು ಇವೆ. ಇವುಗಳಲ್ಲಿ ಇಪ್ಪತ್ತು ತಾಲೊಲ್ಲೀಕ್ ಸ್ಕೂಲುಗಳು, ಮುವ್ವತ್ತು ತಾಲೊಲ್ಲೀಕ್ ಬ್ರಾಂಚ್ ಸ್ಕೂಲುಗಳು, ಒಂದು ಮ್ಯುನಿಸಿಪಲ್ ಸ್ಕೂಲ್, ಹತ್ತು ಗ್ರಾಂಟ್-ಇನ್-ಎಡ್ ಸ್ಕೂಲುಗಳು. ಸಂಸ್ಥಾನದಲ್ಲಿ ಒಂಬತ್ತು ತಾಲೊಲ್ಲೀಕ್‌ಗಳಲ್ಲಿ ಮಾತ್ರ, ಸರಕಾರದಿಂದಲಾಗಲಿ, ಸರಕಾರದ ಸಹಾಯ್ಯವನ್ನು ಪಡೆಯೋಣದರಿಂದಲಾಗಲಿ ನಡೆಯಿಸುತಿರುವ ಇಂಗ್ಲಿಷ್ ಸ್ಕೂಲುಗಳು ಈಲ್ಲವು. ಮೈಸೂರು, ತುಮಕೂರು, ಕೋಲಾರದ ಕನ್ನಡ ಮಿಡಲ್‌ಸ್ಕೂಲ್‌ಗಳಲ್ಲಿ ಚೆನ್ನಾಗಿ ವಿದ್ಯಾಭ್ಯಾಸವು ನಡೆಯುತಿರುವುದು. ಬೆಂಗಳೂರು ಕನ್ನಡ ಸ್ಕೂಲುಗಳು ಇನ್ನೂ ಅಭಿವೃದ್ಧಿಯನ್ನು ತೋರಿಸಬಹುದು. ಹಾಸನ, ಕಡೂರು, ಮತ್ತು ಶಿವಮೊಗ್ಗ ಕನ್ನಡ ಸ್ಕೂಲುಗಳು ಅಭಿವೃದ್ಧಿಗೆ ಬರಬೇಕಾಗಿವೆ. ಚಿತ್ರದುರ್ಗದ ಕನ್ನಡ ಸ್ಕೂಲುಗಳು ಬಹಳ ಹಿಂದಾಗಿವೆ. ಚಿಕ್ಕಬಳ್ಳಾಪುರ, ತುಮಕೂರು, ಮೈಸೂರ, ನಂಜನಗೂಡು, ಹಾಸನ, ಚಿತ್ರದುರ್ಗ, ತಾಲೊಲ್ಲೀಕ್ ಬ್ರಾಂಚ್‌ಸ್ಕೂಲ್ ವಿುರಲೆ, ಬೆಂಗಳೂರು ಮ್ಯುನಿಸಿಪಲ್ ಕನ್ನಡಸ್ಕೂಲ್ಲು, ಮೈಸೂರು ಶಿವರಾಂಪೇಟೆ ವೆಸ್ಲ್ಯಿಯನ್ ಮಿಷನ್ ಕನ್ನಡಾಸ್ಕೂಲು ಇವುಗಳೆಲ್ಲವೂ ದೊಡ್ಡ ದೊಡ್ಡ ಕನ್ನಡ ಮಿಡಲ್‌ಸ್ಕೂಲುಗಳು. ಮೇಲೆ ಬರೆದಿರುವ ಪ್ರತಿಯೊಂದು ಸ್ಕೂಲಿನಲ್ಲಿಯೂ ಇನ್ನೂರಿಗೆ ಹೆಚ್ಚಾಗಿ ವಿದ್ಯಾರ್ಥಿಗಳ ಸಂಖ್ಯೆಯು ಇರುವುದು.

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಚನ್ನಪಟ್ಟಣದ ಕನ್ನಡ ಸ್ಕೂಲು ಚೆನ್ನಾಗಿದೆ. ಕೋಲ್ಲೀಸ್‌ಪೇಟೆ ಮತ್ತು ಅನಿಕಲ್ ಸ್ಕೂಲುಗಳು ಸುಮಾರಾಗಿ ಚೆನ್ನಾದ ಸ್ಥಿತಿಯಲ್ಲಿವೆ. ಬೆಂಗಳೂರು ಮ್ಯುನಿಸಿಪಲ್ ಸ್ಕೂಲಿನಲ್ಲಿ ಮುನ್ನೂರುಹದಿನೆಂಟು ಮಂದಿ ವಿದ್ಯಾರ್ಥಿಗಳಿರುವರು. ಸ್ಕೂಲಿನ ಸ್ಥಿತಿಯು ಅಭಿವೃದ್ಧಿಯಲ್ಲಿರುವುದು. ಬೆಂಗಳೂರು ದೊಡ್ಡಪೇಟೆಯಲ್ಲಿರುವ ವೆಸ್ಲ್ಯಿಯನ್ ಮಿಷನ್‌ಗೆ ಸೇರಿದ ಬಾಲಕರ ಪಾಠಶಾಲೆಯ ಸ್ಥಿತಿಯು ತೃಪ್ತಿಕರವಾಗಿಲ್ಲ. ವಡಗೇನಹಳ್ಳಿ ಮತ್ತು ಇವ್ಮಾರಹಳ್ಳಿ ತಾಲೊಲ್ಲೀಕ್‌ಬ್ರಾಂಚ್‌ಸ್ಕೂಲುಗಳು ಒಳ್ಳೆ ಹೆಸರನ್ನು ಪಡೆದಿರುವುವು.

ವಿದ್ಯಾದಾಯಿನಿ

ಭಾಗ ೭.] ಅಕ್ಟೋಬರ್ ೧೯೧೯. [ಸಂಚಿಕೆ ೧೦

ಎಡಿಟರವರ ನೋಟ್ಸ್.

ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್‌ರವರ ಆಫೀಸ್ ಇದುವರೆಗೂ ಮೈಸೂರಲ್ಲಿ ಇದ್ದುದು ಸರಿಯಷ್ಟೆ. ಈ ಆಫೀಸನ್ನು ಇನ್ನುಮೇಲೆ ಬೆಂಗಳೂರಲ್ಲಿ ಮಾಡಬೇಕೆಂದು ಗೌರ್ನಮೆಂಟಿನವರ ಅಪ್ಪಣೆಯಾಗಿರುವುದು. ಈ ಮಾಹೆ ೨೫ ರಲಾಗಾಯಿತು ಬೆಂಗಳೂರಲ್ಲಿ ಈ ಆಫೀಸಿನವರು ಜಾಲತಿ ಕೆಲಸವನ್ನು ನಡೆಸಲು ಮೊದಲುಮಾಡುವರು.

***

ಹೋಬಳಿಸ್ಕೂಲ್ ವ್ಯಾಸ್ಟರುಗಳು ಆಗಾಗ್ಗೆ ರಜಾಪಡೆಯದೆ ಸ್ಕೂಲ್ ಮುಚ್ಚಿ ಹೊರಟುಹೋಗುವುರೆಂದು ತಿಳಿದುಬಂದು, ಅಂಥಾ ತಪ್ಪಿತಸ್ಥರಿಗೆ ಸಾಧಾರಣ ಶಿಕ್ಷೆಯಾಗುತಿದ್ದರೂ, ಈ ಕೆಟ್ಟಪದ್ಧತಿಯು ನಿಲ್ಲಲಿಲ್ಲವಾದುದರೀದ ಸ್ಕೂಲ್‌ವ್ಯಾಸ್ಟರುಗಳೆಲ್ಲರೂ ಇತರಪರ ಜಾಗರೂಕರಾಗಿ, ಶ್ರದ್ಧೆಯಿಂದ ಕೆಲಸ ಮಾಡುವಂತೆಯೂ, ರಜಾಪಡೆಯದೆ ಕೆಲಸಕ್ಕೆ ತಪ್ಪಿಸಿಕೊಳ್ಳದಂತೆಯೂ, ಎಚ್ಚರಿಸಲಿಕ್ಕಾಗಿ, ತಿರುಮಕೂಡ್ಲುನರಶೀಪುರದ ತಾಲೆಲ್ಲೂಕ್ ಮಟ್ಟಾಳಿದ ಹೋಬಳಿ ಸ್ಕೂಲ್‌ವ್ಯಾಸ್ಟರ್ ಆಲಸಿಂಗಾಚಾರ್ಯರವರು ರಜಾಪಡೆಯದೆ ಕೆಲಸಕ್ಕೆ ತಪ್ಪಿಸಿಕೊಂಡುದರಿಂದಲೂ, ಸರಕಾರಕ್ಕೆ ಅವರ ಮೋಸನಡತೆಯು ತಿಳಿದುಬಂದುದರಿಂದಲೂ, ಅವರನ್ನು ಕೆಲಸದಿಂದ ಬರತರಫ್‌ಮಾಡಿದಾರಲ್ಲದೆ, ಮೈಸೂರು ಸರ್ಕಾರದಲ್ಲಿ ಇನ್ಯಾವ ಇಲಾಖೆಯಲ್ಲೂ ಅವರಿಗೆ ಎಂದೆಂದಿಗೂ ನೌಕರಿ ಕೊಡಕೂಡದೆಂತಲೂ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ. ಈ ವಿಷಯವನ್ನು ಸ್ಕೂಲ್‌ವ್ಯಾಸ್ಟರೆಲ್ಲರೂ ಅಗತ್ಯ ಮನಸ್ಸಿನಲ್ಲಿಡತಕ್ಕಹಾಗಿದೆ.

***

ಸೂಚನೆ ಮತ್ತು ಸಮಾಚಾರಗಳು.

ಮಾರಿಕಣಿವೆಯಲ್ಲಿ ತಿಂಗಳು ಒಂದಕ್ಕೆ ೨೦ ರೂಪಾಯಿಗಳ ಕರ್ಚು ತಗಲುವ ಒಂದು ಹೊಸಪಾಠಶಾಲೆಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯ ಸಹಾಹೋಪಾಧ್ಯಾಯನಿಯವರಾದ ಜಾನಕಮ್ಮನವರು ೧೮೯೯ ನೇ ಇಸವಿ ಜುಲೈ ೧ ರ ಲಾಗಾಯಿತು ಮಾಹೆಯಾನ ೪೦ ರೂಪಾಯಿ ತಲಬಿನಿಂದ ೫೫ ಕ್ಕೆ ಬಡತಿ ಮಾಡಲ್ಪಟ್ಟಿದಾರೆ.

ಬ್ರಾಹ್ಮಣಹಿರಾಣಿ ಬಾಲಿಕಾಪಾಠಶಾಲೆಯ ವಿದ್ಯಾರ್ಥಿನಿ ಪುಟ್ಟಸುಬ್ಬಮ್ಮನವರು ಮಾಹೆಯಾನ ೪೦ ರೂಪಾಯಿ ತಲಬಿನಮೇಲೆ ಚಿಕ್ಕಬಳ್ಳಾಪುರದ ಗೌರ್ನಮೆಂಟ್ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯರಾಗಿ ನೇಮಿಸಲ್ಪಟ್ಟಿರುತ್ತಾರೆ.

ಹಾಲಿ ೧೦ ರೂಪಾಯಿ ತಲಬಿನಲ್ಲಿ ಹೊನ್ನಾಳಿ ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಸಹಾಯೋಪಾಧ್ಯಾಯರಾಗಿರುವ ಮಾ| ತಿಮ್ಮಣ್ಣನವರನ್ನು ೧೫ ರೂಪಾಯಿ ತಲಬಿನಮೇಲೆ ಹೊಸದಾಗಿ ತೀರ್ಥಹಳ್ಳಿಯಲ್ಲಿ ಸ್ಥಾಪಿಸಿರುವ ಬಾಲಿಕಾಪಾಠಶಾಲೆಯ ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಲ್ಪಟ್ಟಿರುತ್ತಾರೆ.

ವಿದ್ಯಾಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾದ ಮೆ|| ಟಿ. ಆರ್. ವೆಂಕಟಸಾಮಿನಾಯಿಡು ಬಿ. ಎ. ಯವರಿಗೆ ೧೮೯೯ ನೇ ಇಸವಿ ಆಗಸ್ಟು ತಾ| ೨೨ರಿಂದ ೧ ತಿಂಗಳು ೧೬ ದಿನಗಳು ಪ್ರಿವಲೀಜ್ ರಜ ಕೊಡಲ್ಪಟ್ಟಿರುತ್ತೆ. ಇವರ ಗೈರ್ಹಾಜರಿನಲ್ಲಿ ಅದೇ ಇಲಾಖೆ ವ್ಯಾನೇಜರಾದ ಮಾ| ಚ. ವಾಸುದೇವಯ್ಯನವರು ತಮ್ಮ ಕೆಲಸಗಳೊಡನೆ ಅಸಿಸ್ಟೆಂಟರ ಕೆಲಸಗಳನ್ನು ನಡೆಸಿಕೊಂಡು ಹೋಗುವಂತೆ ನೇಮಿಸಲ್ಪಟ್ಟಿರುತ್ತಾರೆ.

ವೆ ಟ್ರಿಕ್ಯುಲೇಷನ್, ಎಫ್. ಎ. ಪರೀಕ್ಷೆ ಕೊಟ್ಟವರಿಗೆ ಸ್ವಲ್ಪ ವೇತನವನ್ನು ಕೊಟ್ಟು, ಮೈಸೂರು ನಾರ್ಮಲ್ ಸ್ಕೂಲನಲ್ಲೇ ತಯಾರ್ಮಾಡಲು, ಆ ಸ್ಕೂಲಿಗೆ, ಬಿ. ಎ, ಎಲ್ ಟಿ ಡಿಗ್ರಿಗಳನ್ನು ಪಡೆದ ಇನ್ನಿಬ್ಬರು ಸಹಾಯೋಪಾಧ್ಯಾಯರನ್ನು ಇಟ್ಟಲ್ಲಿ ಸುಲಭವಾಗಿ ಈ ಕೆಲಸವು ನೆರವೇರಬಹುದು. ಮೈಸೂರು ಬಾಲಕರ ವಿದ್ಯಾಭಿವೃದ್ಧಿಯಲ್ಲಿ ಕೇವಲ ಆಸಕ್ತರಾಗಿರುವ ನಮ್ಮ ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್‌ರವರು ಇದಕ್ಕೆ ಗಮನಕೊಡುವರೆಂದು ಕೋರುವೆವು.

ಪೆಸ್ಟಲಾಟ್ಸೀಯವರ ಚರಿತ್ರೆ.

ಈ ಪುಸ್ತಕದಲ್ಲಿ ಬಾಲಶಿಕ್ಷಾಭ್ಯಾಸಕ್ರಮವು ವಿಂಗಡಿಸಲ್ಪಟ್ಟಿದೆ. ಈ ಕ್ರಮವನ್ನು ಕುರಿತು ಮೆ॥ ಮಾಫ್‌ರವರು ತಿಳಿಸುವದೇನಂದರೆ :—

ಪೆಸ್ಟಲಾಜಿಯವರ ಗ್ರಂಥಗಳೆಲ್ಲೆಲ್ಲಾ ಈ ಪುಸ್ತಕವು ಬಹಳ ಶ್ಲಾಘ್ಯವಾದದ್ದು. ಪೆಸ್ಟಲಾಜಿಯವರ ವಿದ್ಯಾಭ್ಯಾಸಕ್ರಮವು ಇದರಲ್ಲಿ ವಿವರಿಸಲ್ಪಟ್ಟಿರುವಂತೆ ಇನ್ಯಾವ ಪುಸ್ತಕಗಳಲ್ಲಿಯೂ ವಿವರಿಸಲ್ಪಟ್ಟಿಲ್ಲ. ಇವರ ಅನ್ಯಾದೃಶವಾದ ಬುದ್ಧಿಯು ಈ ಗ್ರಂಥದಲ್ಲಿ ವಿಕಾಸವನ್ನು ಹೊಂದಿರುವಂತೆ ಇನ್ಯಾವಗ್ರಂಥದಲ್ಲಿಯೂ ಹೊಂದಿಯಿಲ್ಲ. ಈ ಗ್ರಂಥದ ರಚನೆಯೇ ಇವರ ಘನವಾದ ಹೃದಯವನ್ನು ತೋರಿಸುತ್ತದೆ. ಈ ಗ್ರಂಥವನ್ನು ರಚಿಸುವುದರಲ್ಲಿ ದೇವತಾಪ್ರೇರಣೆಯುಳ್ಳವರಾಗಿ ಇದ್ದರೂ ಏನೋ ಎಂಬ ಸಂಶಯಕೂಡ ತೋರುತ್ತದೆ. ಈ ಗ್ರಂಥವನ್ನು ಓದುವುದಕ್ಕುಪಕ್ರಮಿಸಿದರೆ ಅದರ ಆಕರ್ಷಣಶಕ್ತಿಯಿಂದ ಪ್ರಯತ್ನಪೂರ್ವಕವಾಗಿ ಚಿತ್ತವನ್ನು ಚಲಿಸುವಂತೆ ಮಾಡಬೇಕೆಂದು ಪ್ರಯತ್ನಿಸಿದರೂ ಆಗುವದಿಲ್ಲ. ವಿದ್ಯಾಭ್ಯಾಸಕ್ರಮವು ಪ್ರಪಂಚದಲ್ಲಿರುವವರಿಗೂ ವಿದ್ಯಾರ್ಥಿಗಳು ಸುಲಭವಾಗಿ ಅದ್ಭುತವಾದ ಪಾಂಡಿತ್ಯವನ್ನು ಹೊಂದಬೇಕಾದರೆ ಇವರು ಇದಕ್ಕೊಸ್ಕರ ಹಾಕಿರುವ ಮೇಲುಪಂಕ್ತಿಯನ್ನೇ ಅನುಸರಿಸಬೇಕಾಗುತ್ತದೆ ಈ ಮೇಲುಪಂಕ್ತಿಗಳಲ್ಲಿ ಕೆಲವನ್ನು ಪಾಠಕರ ಪ್ರಯೋಜನಾರ್ಥವಾಗಿ ನಾವು ಇಲ್ಲಿ ವಿವರಿಸುವೆವು.

ಮೈಸೂರ ಡಿಸ್ಟ್ರಿಕ್ಟಿನ ಒಂದು ಸರ್ಕಲ್‌ನಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಮಾತ್ರ ಮ್ಯಾಜಿಕ್‌ಲ್ಯಾಂಟರ್ನ್ ಪ್ರದರ್ಶನದಿಂದ ಅನೇಕ ವಿಷಯಗಳನ್ನು ಕಣ್ಣಿನಿಂದ ನೋಡಿ ತಿಳಿದುಕೊಳ್ಳಲು, ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಮಾ|| ರಾ|| ಶ್ರೀನಿವಾಸರಾಯರ ಪ್ರೋತ್ಸಾಹದಿಂದ ಪ್ರೊಫೆಸರ್ ಮಾ|| ಡಿ. ಕೃಷ್ಣಸ್ವಾಮಿ.ಐಂಗಾರ್ಯರವರು ಅಡಿಕಡಿಗೆ ಅವಕಾಶಕೊಟ್ಟರು. ಮ್ಯಾಜಿಕ್‌ಲ್ಯಾಂಟರ್ನ್ ಪ್ರದರ್ಶನದಿಂದ ವಸ್ತುಜ್ಞಾನವು ಬಾಲಕರಿಗೆ ಚೆನ್ನಾಗಿ ಉಂಟಾಗುವುದೆಂದು ಕೆಲವ್ರಮಂದಿ ಸ್ಕೂಲ್ ಮ್ಯಾಸ್ಟರುಗಳು ನಮಗೆ ಬರೆದಿರುವರು. ಭೂಗೋಳ, ವಸ್ತುಪಾಠಗಳನ್ನು ಬಾಲಕರಿಗೆ ಬೋಧಿಸುವುದಕ್ಕೆ ಇದು ಸುಲಭವಾದ ಮಾರ್ಗವು; ಮತ್ತು ಉತ್ತಮವಾದ ಮಾರ್ಗವು. ಮಾ|| ರಾ|| ಶ್ರೀನಿವಾಸರಾಯರವರು ಮಾಡಿದ ಸಲಹೆಗೆ ಮೆ|| ಎಚ್. ಜೆ. ಭಾಭಾಸಾಹೇಬರವರ್ಕ ನುಮೋದಿಸಿ, ಭೂಗೋಳ, ವಸ್ತುಪಾಠಗಳ ಚಿತ್ರಪಠಗಳನ್ನು ಮಾ|| ಡಿ. ಕೃಷ್ಣಸ್ವಾಮ್ಯಿಂಗಾರ್ಯರವರಿಗೆ ಒಗಿಸಿಕೊಟ್ಟರುವರಲ್ಲದೆ ಸಂಸ್ಥಾನದ ಬಾಲಕರೆಲ್ಲರೂ ಮ್ಯಾಜಿಕ್‌ಲ್ಯಾಂಟರ್ನ್ ಮೂಲಕ ವಸ್ತುವಿಚಾರಜ್ಞಾನವನ್ನು ಚೆನ್ನಾಗಿ ಪಡೆಯುಲು ಅನುಕೂಲಪಡಿಸುವ ಯೋಜನೆ ಮಾಡುವರೆಂದು ನಂಬಿರುತ್ತೇವೆ.

***

ಈಚೆಗೆ ಸಾಧಾರಣವಾಗಿ ಸಂಸ್ಥಾನದಲ್ಲಿರುವ ಅನೇಕ ತಾಲ್ಲೂಕ್ ಸ್ಕೂಲ್‌ಗಳಲ್ಲಿ ಕೆಲವು ಹೋಬಳಿಸ್ಕೂಲುಗಳು ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳಾಗಿ ಮಾಡಲ್ಪಟ್ಟವರಿಂದ ಹೊಸದಾಗಿ ನಿಯಮಿಸತಕ್ಕ ಉಪಾಧ್ಯಾಯರುಗಳು ಎಫ್. ಏ. ಬಿ. ಎ ಪರೀಕ್ಷೆ ಕೊಟ್ಟವರಾಗಿಯೂ, ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಹೆಡ್ಮಾಸ್ಟರುಗಳಾಗಿಯೂ ಇರವರು. ಈ ಕ್ರಮದಿಂದ ಸ್ಕೂಲುಗಳ ಸ್ಥಿತಿಯು ಅಭಿವೃದ್ಧಿಯನ್ನು ಹೊಂದುವುದೇನೋ ಸರಿ. ಆದರೆ ಮೆಟ್ರಿಕ್ಯುಲೇಷನ್, ಎಫ್ ಎ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಒಂದು ವರ್ಷಕಾಲ ಮೈಸೂರು ನಾರ್ಮಲ್ ಸ್ಕೂಲಿನಲ್ಲಿಟ್ಟು, ಪಾಠಕ್ರಮ, ಶಿಕ್ಷಾಕ್ರಮ ಮುಂತಾದ ವಿದ್ಯಾಭ್ಯಾಸಕ್ರಮಗಳನ್ನು ಬೋಧಿಸಿ, ನಂತರ ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳಿಗೆ ಅಸಿಸ್ಟೆಂಟ್ ಮಾಸ್ಟರುಗಳಾಗಿಯೂ, ಹೆಡ್ಮಾಸ್ಟರುಗಳಾಗಿಯೂ ಕಳುಹಿಸಿಕೊಟ್ಟಲ್ಲಿ, ಬಾಲವಿದ್ಯಾಭ್ಯಾಸವು ಮೈಸೂರು ಸಂಸ್ಥಾನದಲ್ಲಿ ಚೆನ್ನಾಗಿ ನಡೆಯುವುದು ಇದರಿಂದ ಬಾಲಕರ ವಿಳಿಗೆಯು ನೃಢವಡಿಸಿದಂತೆ ಆಗುವುದು

***

ಮಾಡಿ, ಯೋಚಿಸಿ ತಿಳಿದುಕೊಂಡು ಹೇಳಬೇಕು. ಅನೇಕ ಪಾಠಕರು ವಿದ್ಯಾರ್ಥಿಗ
ಳಿಗೆ ಗುಣದೋಷವಜ್ಞಾನವಿಲ್ಲವೆಂದು ತಿಳಿದುಕೊಂಡು ತತ್ವಾರ್ಥವನ್ನು ತಿಳಿದುಕೊಳ್ಳದೆ
ತೋರಿದ್ದನ್ನು ಹೇಳಿ ಅದಕ್ಕೆ ವಿರೋಧವಾದ ಪ್ರಶ್ನೆಗಳು ವಿದ್ಯಾರ್ಥಿಗಳಿಂದ ಬಂದ
ಕೋಪಿಸಿಕೊಂಡು ತಾವು ಹೇಳಿದ್ದನ್ನೇ ಸಾಧಿಸುವರು. ಇಂಥವರು ಪಾಠಕರಾಗುವ
ದಕ್ಕೆ ಅಯೋಗ್ಯರು.

೭ ಅನೇಕ ವಿದ್ಯಾರ್ಥಿಗಳಿಗೆ ಬುದ್ಧಿಯು ಬಹಳ ಸೂಕ್ಷ್ಮವಾಗಿರುವದು. ಪಾಠ
ಕರಿಗೆ ಸ್ಪುರಿಸದಿರತಕ್ಕ ವಿಷಯಗಳು ಕೆಲವುಜನ ವಿದ್ಯಾರ್ಥಿಗಳಿಗೆ ಸ್ಪುರಿಸುವದುಂಟು
ಅಂಥವರನ್ನು ಪ್ರೋತ್ಸಾಹಿಸಿ ವಿಶೇಷ ವೃದ್ಧಿಗೆ ಬರುವಂತೆ ಮಾಡಬೇಕೆ ಹೊರತು
ಉದಾಸೀನವಾಡಬಾರದು. ಹಾಗೆ ಮಾಡತಕ್ಕ ಪಾಠಕನು ತನ್ನ ಪದವಿಗಂದಿಗೂ
ಅರ್ಹನಾಗುವದೇ ಇಲ್ಲ.

೮ ಪಾಠಕರು ಬುದ್ಧಿಯನ್ನು ನಿರ್ಮಿಸಲಾರರು. ಬುದ್ಧಿಯ ಗ್ರಹಣಕ್ಕೆ ಗನ
ಸಾರವಾಗಿ ವಿಷಯಗಳನ್ನು ತಿಳಿಯಪಡಿಸಿ ಬುದ್ಧಿಶಕ್ತಿಯನ್ನು ಪ್ರಚುರಪಡಿಸುವದೇ
ಇವರ ಮುಖ್ಯಕೆಲಸವು. ಈ ಕೆಲಸವನ್ನು ಚೆನ್ನಾಗಿ ಮಾಡತಕ್ಕವರೇ ಪಾಠಕರಾಗುವ
ದಕ್ಕೆ ಅರ್ಹರು. ಆದರೆ ಅನೇಕರು ಪಾಠಕರೆಂದು ಹೆಸರಿಟ್ಟುಕೊಂಡು ವಿದ್ಯಾರ್ಥಿಗಳ
ಸುಲಭವಾಗಿ ಬುದ್ಧಿಶಾಲಿಗಳಾಗದಿರುವದಕ್ಕೆ ಕಾರಣಭೂತರಾಗುತ್ತಾರೆ. ಲೋಕದಲ್ಲಿ
ವಿದ್ಯಾಭ್ಯಾಸಮಾಡಿಸಬೇಕೆಂಬ ಅಭಿಲಾಷೆಯುಳ್ಳವರಲ್ಲಿಯೂ ಅನೇಕರು ಮೂಢರಾ
ಗಿರುವದಕ್ಕೆ ಪಾಠಕರ ಅವಜ್ಞತೆಯೇ ಮುಖ್ಯಕಾರಣವು.

೯ ಪಾಠಕರಿಗೆ ಜ್ಞಾನವೇ ಮುಖ್ಯಕಾರಣವಲ್ಲ. ತಾವು ತಿಳಿದುಕೊಂಡಿರತಕ್ಕ
ವಿಷಯಗಳನ್ನು ಸುಲಭವಾಗಿ ವಿದ್ಯಾರ್ಥಿಗಳಿಗೆ ತಿಳಿಸತಕ್ಕ ಶಕ್ತಿಯು ಪಾಠಕರಿಗತ್ಯ
ತಾವಶ್ಯಕವಾದುದು. ಈ ಶಕ್ತಿಯಿಲ್ಲದವರು ಸಕಲಕಲಾವಿಶಾರದರಾಡಾಗ್ಯೂ ಪಾಠಕ
ರಾಗಿರುವದಕ್ಕೆ ಯೋಗ್ಯರಾಗುವದಪೂರ್ವ. ಈ ಶಕ್ತಿಯುಳ್ಳವರು ಸಾಮಾನ್ಯವಾಗಿ
ಬುದ್ಧಿಶಕ್ತಿ, ಶಾಸ್ತ್ರಜ್ಞಾನಗಳನ್ನುಳ್ಳವರಾದಾಗ್ಯೂ ಮಕ್ಕಳನ್ನು ಚೆನ್ನಾಗಿ ತರಬೇತ
ಮಾಡುವರು.

೧೦ ಪಾಠಕರು ತಮಗೂ ಶಿಷ್ಯರಿಗೂ ಯಾವ ವಿಧವಾದ ಸಂಬಂಧವಿರಬೇಕೊ
ಅದನ್ನು ಚೆನ್ನಾಗಿ ಅರಿತವರಾಗಿರಬೇಕು ಗುರುವಿಗೆ ಶಿಷ್ಯರಲ್ಲಿ ಪುತ್ರನಿರ್ವಿಶೇಷವಾ
ಸ್ನೇಹವೂ, ಶಿಷ್ಯನಿಗೆ ಗುರುವಿನಲ್ಲಿ ದೇವರಲ್ಲಿರುವಂತೆ ಭಕ್ತಿಯೂ ಇರಬೇಕು.

೧ ಬುದ್ಧಿಗೆ ವಿಷಯಗಳು ಗೋಚರಗಳಾಗಬೇಕಾದರೆ ಅದಕ್ಕೆ ಇಂದ್ರಿಯಗಳೇ ದ್ವಾರಗಳು. ಇಂದ್ರಿಯಸ್ಥಾನಗಳನ್ನು ಆರೋಗ್ಯಸ್ಥಿತಿಯಲ್ಲಿಟ್ಟುಕೊಂಡಿರುವದು ಮೊದಲನೇ ಕರ್ತವ್ಯವಾಗಿರುವುವು.

೨ ಇಂದ್ರಿಯಸ್ಥಾನಗಳ ದ್ವಾರ ಗೊತ್ತಾಗುವ ವಿಷಯಗಳನ್ನು ಪರರಿಗೆ ತಿಳಿಸಬೇಕಾದರೆ ಭಾಷೆಯ ಸಹಾಯವು ಬಹಳ ಆವಶ್ಯಕವಾದದ್ದು. ಅದುದರಿಂದ ಮನಸ್ಸಿಗೆ ತೋರುವ ವಿಷಯಗಳನ್ನು ನಮಗೆ ತೋರಿದಂತೆಯೇ ಇತರರಿಗೂ ತೋರುವಂತೆ ಮಾಡುವದಕ್ಕೆ ತಕ್ಕ ಭಾಷಾಪರಿಚಯವು ಸಂಪಾದಿಸಲ್ಪಡಬೇಕು.

೩ ಕಲಿಯುವದರಲ್ಲಿ ಮೂರು ಅಂತಸ್ತುಗಳುಂಟು. ಮನಸಿಟ್ಟು ಕೇಳಿ ತಿಳಿದುಕೊಳ್ಳುವದು. ತಿಳಿದುಕೊಂಡದ್ದನ್ನು ಆವರ್ತಿಮಾಡುವುದರ ಮೂಲಕ ಅನೇಕವೇಳೆ ಚಿಂತನೆಮಾಡುವುದು. ಮತ್ತು ಅದರ ಗುಣದೋಷಗಳನ್ನು ಚರ್ಚಿಸಿ ಗೊತ್ತುಮಾಡುವುದು. ಕೇಳುವದು, ಚಿಂತಿಸುವುದು, ಚರ್ಚಿಸುವುದು ಇವೇ ಜ್ಞಾನಕ್ಕೆ ಮುಖ್ಯವಾದ ಉಪಾಯಗಳು.

೪ ಎಲ್ಲಾ ಜ್ಞಾನಾರ್ಜನೆಯ ಕ್ರಮಗಳಲ್ಲೂ ಪ್ರಥಮತಃ ಸುಲಭವಾದವುಗಳನ್ನು ತಿಳುವಳಿಕೆಯೂ ಹೆಚ್ಚಿದಹಾಗೆಲ್ಲಾ ಕ್ರಮಕ್ರಮವಾಗಿ ಗಹನವಾದ ವಿಷಯಗಳನ್ನು ಬಾಲಕರಿಗೆ ತಿಳಿಸಬೇಕು. ಬಾಲಕರ ಬುದ್ಧಿಗೂ ಗ್ರಹಣಶಕ್ತಿಗೂ ಮೀರಿದ ವಿಷಯಗಳನ್ನು ಎಂದಿಗೂ ಹೇಳಬಾರದು. ವಿದ್ಯಾರ್ಥಿಗಳ ಗ್ರಹಣಶಕ್ತಿಗೆ ಮೀರಿದ ವಿಷಯಗಳನ್ನು ಹೇಳುತ್ತಾ ಬಂದರೆ ಅವುಗಳು ವಿದ್ಯಾರ್ಥಿಗಳಿಗೆ ತಿಳಿಯುವುದಿಲ್ಲ. ಪಾಠಕರಿಗೆ ಚಿಂತನೆಯಾವಂತಾಗುತ್ತದೆ.

೫ ಪಾಠಕರು ಪಾಠವು ಮುಗಿದ ಕೂಡಲೇ ಓದಿದ್ದನ್ನು ಚಿಂತನೆಮಾಡುವುದರ ಮೂಲಕ ಸ್ವಾಧೀನಪಡಿಸಿಕೊಳ್ಳುವುದಕ್ಕೆ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಡಬೇಕು. ಅವೃತ್ತಿಯನ್ನು ಹಾಕಿ, ಚಿಂತಿಸಿ, ಚರ್ಚೆಮಾಡಿ ಓದಿದ ಸಂಗತಿಗಳನ್ನು ಸ್ವಾಧೀನಪಡಿಸಿಕೊಂಡಿರುವರೇ ? ಇಲ್ಲವೆ ? ಎಂಬದನ್ನು ಪಾಠಕರು ಆಗಾಗ್ಗೆ ಪರೀಕ್ಷಿಸುತ್ತಾ ಬರಬೇಕು.

೬ ಬೋಧೆಯು ಗ್ರಹಣಶಕ್ತಿಗೆ ಅನುಸಾರವಾಗಿರಬೇಕು. ವಿದ್ಯಾರ್ಥಿಗಳು ತಿಳಿಯುವೆ ಕಷ್ಟವಾದ ವಿಷಯಗಳಲ್ಲಿ ಪ್ರಶ್ನೆಮಾಡಿದರೆ ಅದಕ್ಕಾಗಿ ಪಾಠಕರು ಆಗ್ರಹಮಾಡಕೂಡದು. ತಿಳಿಯದ ಸಂಗತಿಗಳನ್ನು ತಿಳಿದಂತೆ ಅಭಿನಯಿಸಕೂಡದು. ವಿಚಾರ

ಸುತ್ತಾರೆ. ಆಟಪಾಟಗಳು, ಸಂಭಾಷಣೆ ಮೊದಲಾದ ಸಕಲ ಕೆಲಸಗಳೂ ತಾಯಿಯಿಂದಲೇ ಇವರು ಕಲಿಯತಕ್ಕದ್ದು. ಮಕ್ಕಳಿಗೆ ನಿಜವಾದ ಗುರುವೇ ತಾಯಿಯು:, ಈಕೆಯು ವಿದ್ಯಾವತಿಯೂಗಿಯೂ, ಬುದ್ಧಿಶಾಲಿನಿಯೂಗಿಯೂ, ವ್ಯವಹಾರಜ್ಞಳಾಗಿಯೂ, ಯುಕ್ತಾಯುಕ್ತಪರಿಜ್ಞಾನವುಳ್ಳವಳಾಗಿಯೂ ಇದ್ದರೆ ಯಾವಾಗಲೂ ತಮ್ಮನ್ನು ನೋಡಿ ತಾನು ನಡೆಯುವರೀತಿಯನ್ನು ಮೇಲ್ಪಜ್ರೆಯಂತೆ ಭಾವಿಸಿಕೊಂಡು ಮಕ್ಕಳು ನಡೆಯುವುದನ್ನು ಪರ್ಯಾಲೋಚಿಸಿ ಮಕ್ಕಳು ಬಾಲ್ಯದಿಂದಲೇ ಒಳ್ಳೇ ನಡೆನುಡಿಯುಳ್ಳವರಾಗಿಯೂ, ವಿನಯವುಳ್ಳವರಾಗಿಯೂ, ಸದ್ಗುಣಸಂಪನ್ನರಾಗಿಯೂ, ಭೂತದಯೆ ಪಶ್ಚಾತ್ತಾಪವೇ ಮೊದಲಾದ ಗುಣಾತಿಶಯವುಳ್ಳವರಾಗಿಯೂ ಪರಿಣಮಿಸಬೇಕಾದರೆ ತಾನು ಮೇಲ್ಪಜ್ರೆಯನ್ನು ಹಾಕುವುದಕ್ಕೋಸ್ಕರ ಯಾವರೀತಿಯಲ್ಲಿ ನಡೆದುಕೊಳ್ಳಬೇಕೋ ? ಅದನ್ನು ಪರ್ಯಾಲೋಚಿಸಿ ಮಕ್ಕಳ ಸಹವಾಸದಲ್ಲಿರುವಾಗ ತಾನು ನಡೆದುಕೊಳ್ಳತಕ್ಕ ಮಾರ್ಗವನ್ನು ಗೊತ್ತುಮಾಡಿಕೊಳ್ಳುವಳು ಮತ್ತು ಅದರಂತೆ ನಡೆಯುವಳು. ಇವಳ ಮೇಲ್ಪಜ್ರೆಗನುಸಾರವಾಗಿ ಇವಳ ಮಕ್ಕಳು ಕೂಡ ಸದ್ಗುಣಸಂಪನ್ನರಾಗುವರು. ಪಾಶ್ಚಾಯಕವಾಗಿ ಪುತ್ರವತಿಯರಾದ ಸ್ತ್ರೀಯರೆಲ್ಲರೂ ಈರೀತಿಯಲ್ಲಿರುವುದು ಅಪೂರ್ವ. ಎಲ್ಲಾ ಸ್ತ್ರೀಯರಿಗೂ ತಾವು ನಡೆದುಕೊಳ್ಳತಕ್ಕ ಮಾರ್ಗವು ತಿಳಿಯಲೆಂದು ಪೆಸ್ಟಲಾಟ್ಸಿಯವರು ಈ ಗ್ರಂಥವನ್ನು ಬರೆದರು ಸ್ತ್ರೀಯರನ್ನು ಅವರವರ ಮಕ್ಕಳಿಗೆ ಜನನಕಾಲ ಮೊದಲ್ಗೊಂಡು ಉಪಾಧ್ಯಾಯನಿಯರನ್ನಾಗಿ ನೇಮಿಸಬೇಕೆಂಬದೇ ಈ ಗ್ರಂಥದ ಮುಖ್ಯೋದ್ದೇಶವಾಗಿರುವುದು. ಈ ವಿಷಯದಲ್ಲಿ ಪೆಸ್ಟಲಾಟ್ಸಿಯವರು ಮಾಡಿರತಕ್ಕ ಉಪದೇಶವನ್ನು ಪುತ್ರವತಿಯರಾದ ಸ್ತ್ರೀಯರೆಲ್ಲರೂ ಆಚರಿಸುತ್ತಾ ಬಂದರೆ ನಿಜವಾದ ಕೃತಯುಗವು ಪುನಃ ಆವಿರ್ಭವಿಸುವುದರಲ್ಲಿ ಯಾವ ಸಂಶಯವೂ ಇಲ್ಲ

ಕೃಷಿಶಾಸ್ತ್ರದ ಉಪನ್ಯಾಸ.

ಕೃಷಿಯಂದರೆ — ಮಣ್ಣಿನ ಗುಣ ತಿಳಿದುಮಾಡುವುದೇ ಕೃಷಿಯೆಂಬುದರ ಅರ್ಥ. ಗಿಡಗಳಿಂದಲೂ, ಜೀವಿಗಳಿಂದಲೂ ನಮಗೆ ಹೊಂದಲಪೇಕ್ಷೆಯುಳ್ಳ

ಎನ್ನಲು ಗುಣಾತಿಶಯಗಳು ಗುರುಶಿಷ್ಯರಲ್ಲಿದ್ದ ಹಾಗೆಲ್ಲಾ ಇಬ್ಬರೂ ಕೃತಕೃತ್ಯರಾಗುತ್ತಾರೆ. ಎಂದರೆ ಗುರುವಿನ ಶಿಕ್ಷೆಯಿಂದ ಶಿಷ್ಯನಿಗೆ ವಿದ್ಯಾಲಾಭವೂ, ಅದರಿಂದ ಗುರು ಶಿಷ್ಯರಿಗೆ ಸಂತುಷ್ಟಿಯೂ ಇವೆರಡೂ ಉಂಟಾಗುವವು. ಈ ಪರಸ್ಪರ ಸಂಬಂಧಕ್ಕೆ ಲೋಪ ಬಂದರೆ ವಿದ್ಯಾವಿಷಯದಲ್ಲಿ ಈ ಇಬ್ಬರ ಪ್ರಯತ್ನವೂ ವ್ಯರ್ಥವಾಗುವದು.

೧೧ ಸಕಲ ವಿದ್ಯೆಗಳಿಗೂ ಎರಡುವಿಧವಾದ ಫಲಗಳುಂಟು. ಇದರಲ್ಲಿ ಮೊದಲನೇ ಫಲವೇ ಐಹಿಕವಾದದ್ದು, ಪ್ರಥಮತಃ ವಿದ್ಯಾರ್ಥಿಗಳೆಲ್ಲರೂ ತಾವು ಆರೋಗ್ಯ ವೃದ್ಧಕಾಯರಾಗತಕ್ಕದ್ದಕ್ಕೂ, ವಿಶೇಷ ಕ್ಲೇಶವಿಲ್ಲದೆ ಅನ್ನವಸ್ತ್ರಗಳಿಗನುಕೂಲಪಡಿಸಿಕೊಳ್ಳುವದಕ್ಕೂ ಕೂಡಿದಮಟ್ಟಿಗೂ ಪರೋಪಕಾರವಾಡುವದಕ್ಕೂ ಸಾಧಕವಾದ ವಿದ್ಯೆಯನ್ನು ಆರ್ಜಿಸಬೇಕು. ಸಾತಕರ ಪ್ರಥಮೋದ್ದೇಶವು ಈ ರೀತಿಯಲ್ಲಿಯೇ ಇರಬೇಕು. ಇದರಿಂದಲೇ ಆಮುಷ್ಮಿಕಫಲಪ್ರಾಪ್ತಿಗೆ ಸಾಧಕವಾದ ಉಪಾಯಸಾಮಗ್ರಿಗಳು ದೊರೆಯುವವು. ಆಮುಷ್ಮಿಕ ವಿದ್ಯಾಭ್ಯಾಸಕ್ಕೆ ಸೌಲಭ್ಯವನ್ನು ಈ ವಿದ್ಯೆಯೇ ಉಂಟುಮಾಡುವದು. ಹೊಟ್ಟೆಗೆ ಅನ್ನವೂ ಹೊದಿಯುವದಕ್ಕೆ ಬಟ್ಟೆಯೂ ಇಲ್ಲದೆ ಕುಟುಂಬಭರಣವನ್ನು ಮಾಡಲಾರದೆ ದುಸ್ಸಹವಾದ ಈತಿಬಾಧೆಗಳನ್ನು ಅನುಭವಿಸುತ್ತಾ ಇರುವವರಿಗೆ ಆಮುಷ್ಮಿಕ ವಿಚಾರಕ್ಕೆ ಬೇಕಾದ ಸಹಾಯಸಂಪತ್ತಿಗಳು ಹೇಗೆ ತಾನೇ ದೊರೆಯುವವು ? ಆದಾಗ್ಯೂ ಕ್ಷಣಭಂಗುರವಾದ ಐಹಿಕಸುಖಸಾಧಕಗಳಾದ ವಿದ್ಯೆಗಳಲ್ಲಿ ಮುಳುಗಿ ತೇಲುತ್ತಾ ನಿತ್ಯವಾದ ಆಮುಷ್ಮಿಕಸುಖಗಳಿಗೆ ಸಾಧನಗಳಾದ ವಿದ್ಯೆಗಳನ್ನು ಪೇಕ್ಷಿಸಬಾರದು. ಯಾವಜ್ಜೀವವೂ ಪ್ರತಿದಿನವೂ ಸ್ವಲ್ಪಹೊತ್ತಾದರೂ ಸದ್ಗತಿಗೆ ಸಾಧಕವಾದ ಆತ್ಮವಿಚಾರವನ್ನು ಮಾಡುತ್ತಾ ಬರಬೇಕು.

ಈ ಪುಸ್ತಕದಲ್ಲಿ ಅನೇಕ ವಿಷಯಗಳನ್ನು ಹೇಳಿದೆ. ಅದರಲ್ಲಿ ಈಮೇಲೆ ಹೇಳಿದ ೧೧ ವಿಷಯಗಳೂ ಪಾಠಕ ಮತ್ತು ವಿದ್ಯಾರ್ಥಿಗಳಿಗೂ ಸಾಮಾನ್ಯವಾಗಿ ಸಕಲ ಜನರಿಗೂ ಪರ್ಯಾಲೋಚನೀಯವಾಗಿಯೂ, ಅವಲಂಬನೀಯವಾಗಿಯೂ ಇರುವವು.

೧೮೦೩ನೇ ಇಸವಿಯಲ್ಲಿ ಪೆಸ್ತಲಾಟ್ಸಿಯವರು ಮಕ್ಕಳುಳ್ಳ ಸ್ತ್ರೀಯರಿಗೆ ಶಿಶೋಪದೇಶವಾಡುವದಕ್ಕೋಸ್ಕರ ಪುಸ್ತಕವೊಂದನ್ನು ಬರೆದರು. ಸಾಮಾನ್ಯವಾಗಿ ಮಕ್ಕಳು ತಾಯಿಯ ಸಹನಾಸದಲ್ಲಿ ಜನ್ಮಾವಧಿ ಕಾಲಕ್ಷೇಪಮಾಡುತ್ತಾರೆ. ಅವರು ಪ್ರಥಮತಃ ತಾಯಿಯ ನಡೆನುಡಿಗಳನ್ನು ನೋಡುತ್ತಾರೆ. ಅವುಗಳನ್ನೇ ಅನುಸರಿ

ಈ ಶಕ್ತಿಗಳ ಉಪಯೋಗಗಳೇನಂದರೆ—೧ ಗುರುತ್ವಾಕರ್ಷಣವಿಲ್ಲದಿದ್ದರೆ ವಸ್ತುವಿಗೆ ಬಾರವಿಲ್ಲ. ಎಲ್ಲವೂ ತೇಲಾಡುತ್ತಿದ್ದವು. ನಾವು ಪಕ್ಷಿಗಳಂತೆ ಎಲ್ಲಿಬೇಕಾದರಲ್ಲಿಗೆ ಮೇಲೂ ಕೆಳಗೂ ಮನಸಿಸಮೇತವಾಗಿ ಹಾರಾಡಬಹುದಾಗಿತ್ತು. ೨ ನೇದಾದ ಸ್ನೇಹಾಕರ್ಷಣವಿಲ್ಲದಿದ್ದರೆ ಪದಾರ್ಥಗಳ ರೂಪವೇ ಕಾಣುತ್ತಿರಲಿಲ್ಲ. ನಮ್ಮ ಶರೀರವೇ ಆಗುತ್ತಿರಲಿಲ್ಲ. ಯಾವ ಘನರೂಪದ ಪದಾರ್ಥವೂ ಇರುತ್ತಿರಲಿಲ್ಲ. ೩ ನೇದಾದ ರಸಾಯನಾಕರ್ಷಣವಿಲ್ಲದಿದ್ದರೆ ಇನ್ನೊಂದು ವಸ್ತು ಹಬ್ಬುತ್ತಲೇ ಇರಲಿಲ್ಲ. ಆದರೆ ದೇವರು ಈ ಗುಣಗಳನ್ನಿಟ್ಟಿದ್ದರಿಂದ ಪದಾರ್ಥಗಳುಂಟಾಗಿ ತಕ್ಕತಕ್ಕ ಸ್ಥಾನದಲ್ಲಿದ್ದು ಒಂದಕ್ಕೊಂದು ಸಹಾಯದಿಂದ ಎಷ್ಟೋ ಅಭಿವೃದ್ಧಿಸ್ಥಿತಿಯಲ್ಲಿರುವವು.

ಪ್ರಪಂಚದ ಮೂಲವಸ್ತುಗಳು ೬೪ ಇವೆ ಎಂದು ಸ್ವಾಭಾವಿಕವಾಗಿ ಶಾಸ್ತ್ರಜ್ಞರು ಹೇಳುವರು. ವಾಯುರೂಪದವುಗಳು ೧ ಆಕ್ಸಿಜನ್ ೨ ಕ್ಲೋರಿನ್ ೩ ಹೈಡ್ರೊಜನ್, ನೈಟ್ರೋಜನ್ ಇವೇ ಮೊದಲಾದವುಗಳು.

ಜಲರೂಪವಾದವುಗಳು—ಪಾದರಸ, ಪ್ರೋಮಿನ್ ಮೊದಲಾದವು. ಕಠಿಣವಾದವುಗಳು—೧ ಬೆಳ್ಳಿ, ೨ ಭಂಗಾರ, ೩ ತಾಮ್ರ, ೪ ಸತುವು, ಇವೇ ಮೊದಲಾದವುಗಳು.

ಆದರೆ ಮಣ್ಣಿನಲ್ಲಿ ಸೇರಿರುವ ಮೂಲವಸ್ತುಗಳಾವುವಂದರೆ—೧ ಪೊಟಾಸಿಯಂ, ೨ ಸಿಲಿಕ್, ೩ ಸೋಡಿಯಂ, ೪ ಕಬ್ಬಿಣ, ೫ ಪೆಟ್ಲುಪ್ಪು, ೬ ಮ್ಯಾಗ್ನೀಷಿಯಂ, ೭ ಫಾಸ್ಪರಸ್, ೮ ಕ್ಲೋರಿನ್, ೯ ಗಂಧಕ, ೧೦ ಆಕ್ಸಿಜನ್, ೧೧ ನೈಟ್ರೋಜನ್, ೧೨ ಹೈಡ್ರೋಜನ್, ೧೩ ಕಾರ್ಬನ್ ಮೊದಲಾದವುಗಳು.

ಮೇಲೆ ಹೇಳಿದ ೧೩ ವಸ್ತುಗಳಲ್ಲದೆ ಕಾರ್ಬನ್ ಸಹ ಸೇರಿ ಸಸಿಗಳುಂಟಾಗುವವು.

ನಮ್ಮ ಜಗತ್ತು ಯಾವ್ಯಾವ ವಸ್ತುಗಳಿಂದ ಮಾಡಲ್ಪಟ್ಟಿದೆ—೨ ವಸ್ತುಗಳ ಕೋರಿಕೆಯನ್ನೂ, ಇರತಕ್ಕ ಸ್ಥಳವನ್ನೂ ಭೂಮಿಯಲ್ಲಿಯಾವರೀತಿ ಬಿದ್ದಿವೆ ಎಂಬುವದನ್ನು ನಾವು ಮೊದಲು ವಿಚಾರಿಸತಕ್ಕದ್ದು. ಭೂಗರ್ಭಶಾಸ್ತ್ರಜ್ಞರು ಜಗತ್ತನ್ನು ಭೇದಿಸಿನೋಡಲು ಅಸದಳವಾದ್ದರಿಂದ ನೋಡುವುದಕ್ಕೆಷ್ಟುಸಾಧ್ಯವೋ ಅಷ್ಟನ್ನು ಭೇದಿಸಿ ಅದರ ತಳದಲ್ಲಿರತಕ್ಕ ಶಿಲೆಗಳನ್ನು ಕಂಡುಹಿಡಿದಿರುವರು. ಅವುಗಳ್ಯಾವವಂದರೆ—೧ ಕರೀಕಲ್ಲು, ೨ ಸ್ಲೇಟುಕಲ್ಲು, ೩ ಗೋಲೀಕಲ್ಲು (ವಾರ್‌ಬಲ್) ೪ ಗ್ರಾ

ವಸ್ತುಗಳನ್ನು ಉತ್ಪತ್ತಿ ಮಾಡಲಿಕ್ಕೆ ನೇನೇನುಮಾಡಬೇಕೋ ಅದೆಲ್ಲಾ ಕೃಷಿಯ ಕೆಲ ಸದಲ್ಲಿ ಸೇರುತ್ತವೆ. ನಾವು ತಿನ್ನುವ ಊಟ, ಉಡುವಬಟ್ಟೆ ಇವುಗಳೆಲ್ಲಾ ಗಿಡಗಳಿಂ ದಲೂ ಜಂತುಗಳಿಂದಲೂ ಹುಟ್ಟುತ್ತವೆ. ಹ್ಯಾಗಂದರೆ—ಭತ್ತ, ನಾರುಗಿಡಗಳಿಂದ ಲೂ, ರೇಷ್ಮೆ ತುಪಟ ಮುಂತಾದವು ಜಂತುಗಳಿಂದಲೂ ಉಂಟಾಗುವುವು. ಅದರಲ್ಲೂ ಜಂತುಗಳು ಗಿಡಗಳಮೇಲೆಯೇ ಜೀವಿಸುತ್ತವೆಯೂದ್ದರಿಂದ ಆ ಗಿಡಗಳು ಬೆಳೆಯುವು ದಕ್ಕೆ ಭೂವ್ಯವಸಾಯಮಾಡತಕ್ಕದ್ದು ಅವಶ್ಯಕವಾದದ್ದು. ಪ್ರಾಣಿಗಳಹಾಗೆಯೇ ಗಿಡಗಳಿಗೆ ಬಾಲ್ಯ, ಮಧ್ಯಪ್ರಾಯ, ಮರಣಗಳುಂಟು. ಅವು ಆಹಾರವನ್ನು ತಿನ್ನು ತ್ತವೆ. ಬೆಳೆಯುತ್ತವೆ. ಹೆಚ್ಚಾಗುತ್ತವೆ. ಆದರೆ ಸಸಿಗಳನ್ನು ಬೆಳೆಯಿಸುವುದಕ್ಕಿಂತ ಮುಂಚೆ ಪ್ರಪಂಚದಲ್ಲಿರುವ ವಸ್ತುಗಳಿಂತಾದ್ದು, ಹ್ಯಾಗಿವೆ ಅವುಗಳಿಂದಾಗತಕ್ಕಕಾರ್ಯ ಗಳೇನು, ವಸ್ತುಗಳಿಗೂ, ಸಸಿಗಳಿಗೂ ಸಂಬಂಧವೇನು? ಎಂಬುವುದನ್ನು ಮೊದಲು— ತಿಳಿಯಬೇಕು. ವಸ್ತುವೆಂದರೆ ಪಂಚೇಂದ್ರಿಯಗಳಿಂದ ತಿಳಿಯತಕ್ಕವುಗಳು. ಉದಾ ಹರಣೆ = ಗಾಳಿ. ವಸ್ತುವಿನಲ್ಲಿ ೩ ವಿಧಗಳುಂಟು. ಕಠಿಣ, ತರಳ, ವಾಯು, ಕಠಿಣ = ಕಬ್ಬಿಣ, ತರಳ = ನೀರು, ವಾಯು = ಆಕ್ಸಿಜನ್.

ಯಾವದಾದರೊಂದು ವಸ್ತುವಿನ ಅತಿ ಕೇವಲ ವಿಭಾಗಮಾಡಲಿಕ್ಕೆ ಅಶಕ್ಯ ವಾದ ಅಲ್ಪಾಂಶಕ್ಕೆ ಪರಮಾಣುವಾಯುವೆಂದು ಹೆಸರು. ಇದನ್ನು ಅತಿ ದೊಡ್ಡದಾದ ಸೂಕ್ಷ್ಮದರ್ಶಕ (ಮೈಕ್ರೋಸ್ಕೊಪ್) ಯಂತ್ರದಿಂದ ನೋಡುವುದಕ್ಕಾಗುವುದಿಲ್ಲ. ಪ್ರಪಂಚದಲ್ಲಿ ೩ ವಿಧವಾದ ಶಕ್ತಿಗಳುಂಟು.

ಭೂಮಿಯ ಆಕರ್ಷಣಶಕ್ತಿ = ಈ ಶಕ್ತಿಗೆ ಗುರುತ್ವ ವೆಂದು ಹೆಸರು. (ಗ್ರಾವಟಿ) ಕಲ್ಲನ್ನು ಮೇಲಕ್ಕೆ ಎಸೆದರೆ ಅದು ಪುನಃ ಕೆಳಕ್ಕೆ ಬರುವುದು. ಇಂತಾ ಕಾರಣದಿಂದ—

ಸ್ನೇಹಾಕರ್ಷಣೆ = ವಸ್ತುವಿನ ರೇಣುಗಳು ಒಂದ ಕ್ಕೊಂದು ಸೇರುವ ಶಕ್ತಿ, ಉದಾ = ಕಬ್ಬಿಣ, ಮರ, ಲೋಹ.

ರಸಾಯನಾಕರ್ಷಣ = (ಕೆಮಿಕಲ್ ಆಫ್‌ಸಿಟಿ) ಬೇ ರೆಬೇರೆ ವಿಧವಾದ ೨ ವಸ್ತುಗಳನ್ನುಂಟುಮಾಡುವ ಶಕ್ತಿ (ಉ= ಉಷ್ಣ)

ಆದರೆ ಪ್ರಪಂಚದಲ್ಲಿ ಅನೇಕ ಗಿಡಗಳು ಉತ್ಪತ್ತಿಯಾಗುವವು. ಅದರಲ್ಲಿ ನಮಗೆ ಮುಖ್ಯಾಹಾರಗಳನ್ನು ಕೊಡತಕ್ಕಂಥಾ ಧಾನ್ಯಾದಿಗಳನ್ನು ನಾವು ಉದ್ದೇಶ ಪೂರ್ವಕದಿಂದ ಬೆಳಸಬೇಕು. ಆದರೆ ಬೀಜಗಳನ್ನು ಸುಮ್ಮನೆ ಭೂಮಿಯಲ್ಲಿ ಚೆಲ್ಲಬಿಟ್ಟರೆ ಸಾಕಾದಷ್ಟು ತೃಪ್ತಿಕರವಾಗಿ ಬೆಳೆಯುವಾರದು. ಆದರೆ ವ್ಯವಸಾಯವನ್ನಾಡಲು ಉದ್ದೇಶವುಳ್ಳ ಅಂದರೆ (ರೈತರು) ವಿಧವಿಧವಾದ ಬೀಜಗಳಿಗೆ ಬೇರೆಬೇರೆಯಾಗಿ ಉತ್ತು ಭೂಮಿಯನ್ನು ಸಿದ್ಧವಾಡಬೇಕು. ನೆಲವು ತಂಪಾಗಿಯೂ, ಹೆಂಟೆಗಳಿಲ್ಲದೆಯೂ, ಆಳವಾಗಿಯೂ, ಸ್ವಚ್ಛವಾಗಿಯೂ, ನಾಜೂಕಾಗಿಯೂ ಇರಬೇಕು. ಭೂಮಿಯು ಬಹಳ ನೆನೆದಿರುವಾಗ ಉಳಬಾರದು. ಸ್ವಲ್ಪ ತಂಪಾದ ನಂತರ ಉಳಬೇಕು. ಕೃಷಿ ಭೂಮಿಗೆ ಮಳೆ ನೀರು ಹೊರತು ಬೇರೆ ಸಹಾಯವಿಲ್ಲ ಆದ್ದರಿಂದ ಮಳೆಯು ಬಂದದ್ದನ್ನು ನೋಡಿಕೊಂಡಿದ್ದು ಆಗಲೇ ಭೂಮಿಯನ್ನು ಉತ್ತು ಬೀಜ ಹಾಕಲಿಕ್ಕೆ ಸಿದ್ಧಪಡಿಸಿಕೊಳ್ಳಬೇಕು ಒಳ್ಳೇ ಬೆಳೆ ಬರುವುದಕ್ಕೆ ಒಳ್ಳೇ ಬೀಜಗಳು ಅವಶ್ಯಕವಾದವು ಹಾಗಾಗಬೇಕಾದರೆ—' ತಂದೆಯಂತೆ ಮಗ ' ಎಂಬ ಶಾಸ್ತ್ರಕ್ಕನುಸಾರವಾಗಿ ಎಂಥಾ ಬೀಜಗಳನ್ನು ಬಿತ್ತುತ್ತೇವೋ ಅಂಥವೇ ಹುಟ್ಟುವವು. ಬೀಜಗಳು ಬಲಿತು ಪುಷ್ಟವಾಗಿರಬೇಕು. ಹೊಸದಾಗಿ ದಷ್ಟಪುಷ್ಟವಾಗಿಯೂ ರೋಗವಿಲ್ಲದ್ದಾಗಿಯೂ ಬೇರೆ ಭೂಮಿಯಲ್ಲಿ ಬೆಳೆದದ್ದಾಗಿಯೂ ಇರಬೇಕು ಬೀಜಗಳನ್ನು ಬಿತ್ತುವವರಿಗೂ ಮೂಟೆಯಲ್ಲಿ ಕಟ್ಟಿರಬೇಕು. ಹುಳ ಹಿಡಿಯುವಂತೆ ಬೂದಿ ಸೇರಿಸಬೇಕು. ಇಲ್ಲದಿದ್ದರೆ ಕರ್ಪೂರವನ್ನು ಇಟ್ಟಿರಬೇಕು. ಹತ್ತಿ ಮೊದಲಾದ ಬೀಜಗಳು ಅಂಟಿಕೊಂಡಿರುವವಾದ್ದರಿಂದ ಹಾಮಣ್ಣಿನಿಂದ ತಿಕ್ಕಿ ಬಿತ್ತುವುದಕ್ಕೆ ಸಿದ್ಧಮಾಡಬೇಕು. ಬೀಜಗಳು ಬಹುಚಿಕ್ಕದಾಗಿದ್ದರೆ ಮರಳಿನಸಂಗಡ ಬೆರಸಿ ಬಿತ್ತಬೇಕು. ದೊಡ್ಡ ಬೀಜಗಳಾದರೆ ಅಳಲುಗಳುಕಾಗೆ ಹೆಕ್ಕಿಕೊಂಡು ತಿನ್ನುವವು. ಆದ್ದರಿಂದ ಅವಕ್ಕೆ ಕೀಲೆಣ್ಣೆಯನ್ನು ಲೇಪನವಾಗಿ ಬಿತ್ತಬೇಕು. ಬಿತ್ತುವದಕ್ಕೆ ಕೂರಿಗೆಯುಂಟು. ಇದರ ವೈಲಾಭ್ಯಗಳಲ್ಲಿರುವ ಬಟ್ಟಲಿನಲ್ಲಿ ಕಾಳುಗಳನ್ನು ಹಾಕಿದರೆ ಕೆಳಗಡೆ ಗುಳವು ಮಾಡಿರುವ ಮಣ್ಣಿನ ಗುಂಡಿಯಲ್ಲಿ ಸಾಲುಸಾಲಾಗಿ ಬೆಳೆಯುವವು. ಬೆಳೆದ ಪಸಿಗಳಿಗೆ ಹೆಚ್ಚಿಗೆ ಆಹಾರ ಸಿಕ್ಕುವಂತೆ ಗೊಬ್ಬರವನ್ನು ಹಾಕಬೇಕು. ಗೊಬ್ಬರವೆಂದರೆ ನೆಲವನ್ನು ಸಾರವತ್ತಾಗಿ ಮಾಡುವ ಪದಾರ್ಥ. ಆದರೆ ನೆಲದಲ್ಲಿ ಸಾರವಿರುವುದು. ಅದು ಪ್ರತಿವರ್ಷವೂ ಗಿಡಗಳು ತೆಗೆದುಕೊಂಡು ಕಡಮೆಯಾಗಿರುವುದು. ಗೊಬ್ಬರ ಹಾಕುವುದರಿಂದ, ಪುನಹ ಭರ್ತಿಮಾ

ಟೆ (ಕಣಶಿಲಾ ಚಿಬ್ಬಶಿಲೆ) ೪ ಮರಳುಕಲ್ಲು, ೫ ಕಲ್ಲಿದ್ದಲು, ೬ ಶೀಮೆಯುಸುಣ್ಣ, ಜೇಡಿ, ೯ ಮರಳು ಇವುಗಳು. ಇವು ಎಲ್ಲಾ ಸ್ಥಳದಲ್ಲಿಯೂ ಸಿಕ್ಕುವದಿಲ್ಲ. ಸಿಕ್ಕಿದರೂ ಒಂದೇ ಆಳ ಲ್ಲಿ ಸಿಕ್ಕಲಾರದು. ಇವುಗಳು ಒಂದರಮೇಲೊಂದು ದರಪದರವಾಗಿಯೂ ಅಸ್ತವ್ಯವಾಗಿಯೂ ಮಲಗಿಕೊಂಡಿರುತ್ತವೆ ಭೂವಿಯಲ್ಲಿ ಯವ ಕಠಿಣದರ್ಥಕ್ಕೂ ಮರಳು, ಜೇಡಿ ಮುಂತಾದವುಗಳಿಗೂ ಬಂಡೆಗಳಿಗೂ ಸಹ ಸಾಗರ್ಭಶಾಸ್ತ್ರಜ್ಞರು ಶಿಲೆಗಳೆಂಬ ಹೆಸರನ್ನು ಕೊಟ್ಟಿರುವರು. ನೀರಿನಲ್ಲಂಡೂ ಪರೂ ಮೊದಲಾದ್ದು ಪ್ರಕೃತಿಯಿಂದ ಗಟ್ಟಿಯಾಗಿದ್ದರೆ ಜಲಜಗಳೆಂದು ಹೆಸರು. ವುಗಳು ಯಾವವೆಂದರೆ :—

ಕೆವಳ, ಕಲ್ಲಿದ್ದಲು, ಶಂಖ, ಶಿಲಾಜಿತ್ ಮೊದಲಾದವು.

ಅಗ್ನಿಜಶಿಲೆಗಳು—ಜ್ವಾಲಾಮುಖಿಗಳಿಂದ ಉತ್ಪತ್ತಿಯಾಗಿರುವುವು. ಉದಾ = ಟ್ಟು, ಶಿಲಾರಸ, ಸಾಣೆಯಕಲ್ಲು ಮೊದಲಾದವುಗಳು.

ಬೆಣಚುಕಲ್ಲು—ಇದರಲ್ಲಿ ಸಿಲಿಸಿಕ್ ಆಸಿಡ್ ಇರುವುದರಿಂದ ಬಹುಗಟ್ಟಿಯಾಗಿ ರುತ್ತದೆ. ಸ್ವಚ್ಛವಾಗಿದೆ ಹರಳು ಹರಳಾಗಿರುವುದು. ಇದರಿಂದ ಮರಳು ಉತ್ಪತ್ತಿಯಾಗುತ್ತೆ ಉದಾ = ವೈಡೂರ್ಯ, ಗೋಮೇಧಿಕ, ಬೆಣಚುಕಲ್ಲು.

ಕ್ಷೇತ್ರಸ್ಫಟಿಕ—ಇದರಲ್ಲಿ ಸಿಲಿಸಿಕ್, ಅಲುಮಿನ, ಪೊಟಾಷಿಯಂ, ಸೋಡಿಯಂ, ಕ್ಯಾಲ್ಸಿಯಂ ಇರುತ್ತೆ. ಇದನ್ನು ಜೂರಿಯಿಂದ ಗೀಚಬಹುದು. ಕನ್ನಡಿಯಂತೆ ಹೊಳೆಯುತ್ತದೆ. ಇದರ ನಾಶದಿಂದ ಜೇಡು ಉತ್ಪತ್ತಿಯಾಗುತ್ತದೆ.

ಅಭ್ರಕ—ಇದರಲ್ಲಿ ಅಲೂಮಿನ, ಸಿಲಿಕ, ಪೊಟಾಷಿಯಂ, ಮ್ಯಾಗ್ನೀಷಿಯಂ, ಕಾಲ್ಸಿಯಂ, ಕಬ್ಬಿಣ ಇವೆ, ಕನ್ನಡಿಯಂತೆ ಹೊಳೆಯುವುದು ಬಹಳ ತೆಳುವಾಗಿದೆ. (ಶೃಂಗಕಾಂತ) ಇದರಲ್ಲಿ ಮ್ಯಾಗ್ನೀಷಿಯಂ, ಕಾಲ್ಸಿಯಂ, ಶಿಲಿಕ ಇರುತ್ತದೆ. ಪ್ರಪಂಚದಲ್ಲಿನ ಮಣ್ಣು ಈ ಬಂಡೆಗಳ ನಾಶದಿಂದಲೇ ಉಂಟಾಗುವುದು ೧ ಶೀತೋಷ್ಣಗಳ ವ್ಯತ್ಯಾಸ, ೨ ವಾತಾವರಣದ ವ್ಯಾಪಾರದಿಂದ, ೩ ಜಲಾಬ್ರಲಾಯಿಸುವಿಕೆ, ೪ ನದಿಗಳ ಪ್ರವಾಹ, ೫ ಗಿಡಗಳ ಬೇರುಗಳು ಈ ೫ ಕಾರಣದಿಂದಲೇ ಆಗಿವೆ. ಭೂಮಿಯಮೇಲೆ ಬೆಳೆಯುತಕ್ಕ ಸಸಿಗಳಿಗೆ ಭೂಜೀವಿಗಳೆಂತಲೂ, ನೀರಿನ ಮೇಲೆ ಬೆಳೆಯುತಕ್ಕವುಗಳಿಗೆ ಜಲಜಗಳೆಂತಲೂ, ಗಿಡಗಳಮೇಲೆ ಬೆಳೆಯತಕ್ಕದ್ದು ಪರಾವಲಂಬ್ರವೆಂತಲೂ ೩ ವಿಧಗಳು.

ದ್ವಿದಳಧಾನ್ಯಗಳು—ತೊಗರಿ, ಅವರೆ, ಉದ್ದು, ಹೆಸರು, ಹುರಳಿ, ಕಡಲೆ, ಬಟಾಣಿ, ಹಲಸಂದಿ ಮೊದಲಾದವುಗಳು. ಇವುಗಳಲ್ಲೆಲ್ಲಾ ನೈಟ್ರೊಜ್ಜ ಹೆಚ್ಚಾಗಿರುತ್ತದೆ

ಎಣ್ಣೆಯುಕಾಳುಗಳು—ಎಳ್ಳು, ಹುಚ್ಚೆಳ್ಳು, ಹರಳಿ, ಕುಸುಬಿ, ಸಾಸವೆ, ನೆಲಕಡಲೆ, ಅಗಸೆ ಮೊದಲಾದವುಗಳು. ಇವುಗಳಿಗೆಲ್ಲಾ ಫಾಸ್ಪರಸ್ ಹೆಚ್ಚಾದ ಆಹಾರವಾಗಿದೆ. ಇವುಗಳಿಗೆ ಬೇಕಾದ ಗೊಬ್ಬರವನ್ನು ಹಾಕಿ ತಕ್ಕ ಭೂಮಿಗಳಲ್ಲಿ ಬೆಳಸಬೇಕು.

ರಂಗುಪೈರುಗಳು—ಅರಶಿನ, ನೀಲಿ, ಚಾಯಿಬೇರು, ಪತಂಗದಚಕ್ಕೆ, ಗೋರಂಟಿ ಮೊದಲಾದವುಗಳು ಕರಿ ಮತ್ತು ಮರಳುಭೂಮಿಗಳಲ್ಲಿ ಬೆಳೆಯುವವು

ನಾರುಪೈರುಗಳು—ಸಣಬು, ಪುಂಡಿ, ಹತ್ತಿ, ಕಪ್ಪುಭೂಮಿಯಲ್ಲಿ ಬೆಳಸಬೇಕು. ಇವು ಫಾಸ್ಪರಸ್ಸನ್ನು ಆಹಾರವಾಗಿ ಎಳೆದುಕೊಳ್ಳುವವು. ಪುಂಡಿಯನ್ನು ಒತ್ತಾಗಿ ಬಿತ್ತಬೇಕು.

ಶಾಖಗಳು—ಈರುಳ್ಳಿ, ಬೆಳ್ಳುಳ್ಳಿ, ಕುಂಬಳ, ಬೆಂಡೆ, ಗೆಣಸು, ಕೋಸುಗಡ್ಡೆ, ಹುರಳೀಕಾಯಿ, ಇವುಗಳಲ್ಲಿ ಕೆಲವಕ್ಕೆ ಗಂಧಕವು ಹೆಚ್ಚಾಗಬೇಕು. ಸಾವಯವಸ್ಯವಾಗಿ ನೈಟ್ರೊಜ್ಜ, ಪೊಟ್ಯಾಷ್, ಫಾಸ್ಪರಸ್ ಬೇಕಾಗಿವೆ. ಕೆಬ್ಬಿಗೋಡುಭೂಮಿಗಳಲ್ಲಿ ಬೆಳಸತಕ್ಕವುಗಳು

ಚಿಲ್ಲರೆ—ಕೊತ್ತುಂಬರಿ, ಮೆಂತ್ಯ, ಯಾಲಕ್ಕಿ, ಮೆಣಸಿನಕಾಯಿ, ಮೊದಲಾದವುಗಳು. ಮೇವುಪೈರು—ಜೋಳ, ಗರಿಕೆ, ಕರಡ ಮೊದಲಾದವುಗಳು.

ಈ ಬೇಸಾಯಕ್ಕೆ ಕುಷ್ಕಿ ಎಂದು ಹೆಸರು. ಇದಲ್ಲದೆ ತರಿ, ಬಾಗಾಯತು ಎಂದು ಇನ್ನೂ ೨ ಇವೆ.

ವೀಣೆ ಬಿಹಡ್ಡಪ್ಪ,
ಅಸಿಸ್ಟೆಂಟ್ ಮ್ಯೂಸ್ಟರ್,
ಗಾ॥ ಕ॥ ಸ್ಕೂಲ್
ಚಿತ್ರದುರ್ಗ.

ವಿದೆಂತಾಗುವುದು. ಇದರಲ್ಲಿ ಜಂತು, ಸಸ್ಯ, ಎಲುಬು, ಪೆಟ್ರೊಫ್ಯೂ, ಸುಣ್ಣ, ಸವಾಹಿ ಮಾನೆಗೊಬ್ಬರ ಮೊದಲಾದವುಗಳುಂಟು, ಆಗಿಂದಾಗ್ಗೆ ಜವಿಮಾನವನ್ನು ಬಂಜರಾಗಿ ಬಿಡುವರು. ಬಿಡುವುದರಿಂದ ಭೂಸಹ ಸಾರವೆಲ್ಲಾ ಕೂಡುವುದು. ಮತ್ತು ಬೆಳೆಗಳನ್ನು ಬದಲಾಯಿಸಿದರೆ ಜವಿಮಾನಿನ ಸಾರವನ್ನು ಕಳೆಯದೆ ಕಾಪಾಡಿಕೊಂಡಂತಾಗುವುದು. ಇದಕ್ಕೆ ಪರಿವರ್ತನೆಯೆನ್ನುವರು

೩ ವರ್ಷದ ಪರಿವರ್ತನೆಯಾಗುವುದು—೩ ವರ್ಷದ ಪರಿವರ್ತನೆ, ೪ ವರ್ಷಕ್ಕೊಂದಾವರ್ತಿ, ೫ ವರ್ಷಕ್ಕೊಂದಾವರ್ತಿ ಪರಿವರ್ತನೆ ಹ್ಯಾಗಂದರೆ-ಮೊದಲು ಕಬ್ಬು, ಸಣಬು, ಬತ್ತ, ಅರಶಿನ, ಗೆಣಸು, ತೊಗರಿ, ಇವಾದನಂತರ ಮೊದಲಿನಂತೆಯೇ ಕಬ್ಬು.

ಕರೀಭೂಮಿ—ಕಬ್ಬು, ಗೋಧಿ, ಕಡಲೆ, ಜೋಳ, ಕುಸುಮೆ, ಸಜ್ಜೆ.

ಬಿಗಿಯಾದ ಜೇಡಿನಲ್ಲಿ— ಗೋಧಿ, ದ್ವಿದಳಗಳು, ಸಾಸವೆ, ಮುಲ್ಲಂಗಿ, ಕೋಸು ಮೊದಲಾದವುಗಳನ್ನು ಬಿತ್ತಬೇಕು.

ಕೆಂಪುಭೂಮಿ—ಎರ್ರಗಡ್ಡಿ, ಗೋಧಿ, ಸಜ್ಜಿ, ಕಡಲೆ, ಮೆಣಸಿನಕಾಯಿ, ಮೊದಲಾದವುಗಳ.

ಗೋಡುಭೂಮಿಯಲ್ಲಿ—ಎಲ್ಲಾ ಪೈರುಗಳು ಮುಖ್ಯವಾಗಿ ಉರ್ರಗಡ್ಡಿಯ ಶ್ರೇಷ್ಠವಾಗಿ ಬೆಳೆಯುತ್ತದೆ.

ಮರಳುಭೂಮಿ—ಮೇವುಪೈರುಗಳು, ರಾಗಿ, ಸಾಮೆ, ನವಣೆ ಮೊದಲಾದವುಗಳು.

ಸುಣ್ಣಕಲ್ಲುಭೂಮಿ—ದ್ವಿದಳಧಾನ್ಯಗಳು ಬೆಳೆಯುತ್ತವೆ.

ಕಪ್ಪುಭೂಮಿ—ಎಲ್ಲಾ ಪೈರುಗಳು ಬೆಳೆಯುವುದಲ್ಲದೆ ಹತ್ತಿ, ಜೋಳ, ಕಬ್ಬು, ಗೋಧಿ ವಿಶೇಷವಾಗಿ ಬೆಳೆಯುತ್ತದೆ.

ಧಾನ್ಯದ ಪೈರುಗಳು—ರಾಗಿ, ಬತ್ತ, ಹಾರಕ, ಗೋಧಿ, ಜೋಳ, ಸಜ್ಜೆ, ಸಾಮೆ, ನವಣೆ, ಬರಗು, ಮುಸುಗಿನಜೋಳ ಮೊದಲಾದವು. ಸಾಮಾನ್ಯವಾಗಿ ಇವುಗಳಿಗೆ ಸೋಡಿಯಂ, ಪೊಟಾಸ್, ಬೇಕಾಗುವುದು. ಕೆಲವು ನಾಟುವವು. ಕೂರಿಗೆ ಸಾಲಿನಲ್ಲಿ ಬಿತ್ತುವುದೂ ಉಂಟು. ಮೆ, ಜೂ, ಜುಲೈ, ಈ ತಿಂಗಳಲ್ಲಿ ಬಿತ್ತಿದರೆ ಸೆಪ್ಟೆಂಬರು, ಅಕ್ಟೋಬರು ಒಳಗಾಗಿಯೇ ಬರುವವು.

ಅಡಿಕೇ ಮಟ್ಟೆಯು ಒಂದೊಂದುಕಡೆ ೬೦ ರವರಿಗೂ ಗರಿಗಳು ಇರುವವು. ಮಟ್ಟೆಗಳು ಮರದ ಮೇಲ್ಗಡೆಯಲ್ಲಿ ತೆರೆದ ಛತ್ರಿಯಂತೆ ಹರಡಿಕೊಂಡಿರುವವು.

ಇವೆರಡು ಜಾತಿಗಳಲ್ಲೂ ಹೊಂಬಾಳೆಗಳು ಮೊಗಸಿನೊಡನೆ ಕೂಡಿರುವವು. ಮೊಗಸು ಒಡೆದನಂತರ ಹೊಂಬಾಳೆಗಳು ಕೆದರಿಕೊಳ್ಳುವವು. ಇವೆರಡು ಜಾತಿಗಳಲ್ಲಿರುವ ಹೂವುಗಳಿಗೆ ಅಕ್ಕಿ (ಹಿಂಗಾರ) ಗಳೆಂದು ಹೆಸರು. ತೆಂಗು ಅಡಿಕೆಗಳಲ್ಲಿ ತಳಗಡೆ ಬಿಡುವ ಗೊನೆಗಳಲ್ಲಿ ಹೆಚ್ಚಾದ ಫಲವೂ ಮೇಲೆಮೇಲಿನ ಗೊನೆಗಳಲ್ಲಿ ಕಡಮೆ ಫಲವೂ ಬಿಡುವವು. ಆದರೆ ಅಡಿಕೆ ಜಾತಿಯಲ್ಲಿ ಬಹಳ ಮೇಲಣ ಗೊನೆಯಲ್ಲಿ ಫಲವು ಬಹಳ ಕಡಮೆಯಾಗಿ ಆಗುವುದು.

ಇವೆರಡರ ಕಾಯಿಗಳ ಆಕಾರವೂ ಮೇಲಣ ಸಿಪ್ಪೆಯೂ ಒಂದೇವಿಧವಾಗಿರುವವು. ಒಳಗೆ ಗುಂಜು (ನಾರು) ಇವೆರಡಕ್ಕೂ ಇರುವುದು. ತೆಂಗಿನಗುಂಜು ಕಠಿಣವಾಗಿಯೂ ಉದ್ದವಾಗಿಯೂ ಅಡಿಕೇ ಗುಂಜು ಮೃದುವಾಗಿಯೂ ಪೊಟಕಾಗಿಯೂ ಇರುವುದು. ಅಡಿಕೇ ಗುಂಜು ಗಟ್ಟಿಯಾಗಿಲ್ಲದೆ ಇರುವುದರಿಂದ ಅದನ್ನು ಹಯೋಗಿಸುವುದಿಲ್ಲ.

ಇವೆರಡು ಜಾತೀಮರಗಳನ್ನು ಕುಯಿದರೆ ಒಳಗಡೆ ಸಿಬರು ದಿಂಡು ತುಂಬಿಕೊಂಡಿರುವವು. ಮರದ ಮೇಲುಗಡೆ ಮಟ್ಟೆಗಳು ಉದುರಿದ ಗುರುತುಗಳು ಇರುವವು.

ಇವೆರಡರ ಮಟ್ಟೆಗಳೂ ಒಂದೇಪ್ರಕಾರ ಉಪಯೋಗಕ್ಕೆ ಬರುವವು. ಆದರೆ ಅಡಿಕೇ ಮಟ್ಟೆಯನ್ನು ಹೆಣದು ಉಪಯೋಗಿಸುವುದು ಕೆಲವುಕಡೆ ರೂಢಿ ಇವೆ.

ಚೆನ್ನಾಗಿ ಫಲ ಬಿಟ್ಟ ತೆಂಗಿನಗಿಡದಲ್ಲಿ ವರುಷಕ್ಕೆ ೪೦೦ ರಿಂದ ೫೦೦ ರವರಿವಿಗೂ ಕಾಯಿಗಳು ಬಿಡುವವು. ಸಣ್ಣ ಈಡು ಕಾಯಿಗಳು ಬಿಡುವ ಮರದಲ್ಲಿ ಈರೀತಿಯಾಗಿ ಬಿಡುವವು. ಅಡಿಕೇಮರದಲ್ಲಿ ೩೦೦೦ ವರಿಗೆ ಬಿಡುತ್ತವೆ. ಸರಾಸರಿ ಅಡಿಕೆಬೆಳೆ ನಷ್ಟವಾಗದರೀತಿಯಲ್ಲಿರುವುದನ್ನು ತಿಳಿದುಕೊಳ್ಳಬೇಕಾದರೆ ಒಂದುಲಕ್ಷ ಕಾಯಿಗಳಿಗೆ ೧೬ ಮಣ ಅಡಿಕೆಯೂವರೆ ಸರಿ ಎಂಬದಾಗಿ ಗೊತ್ತುಮಾಡಿದಾರೆ. ಇದಕ್ಕಿಂತಲೂ ಹೆಚ್ಚಾಗಿ ಆಗುವುದೂ ಉಂಟು. ಒಂದು ಲಕ್ಷಕ್ಕೆ ೧೪ ಮಣ ಅಡಿಕೇವರಿಗೂ ಆಗುವದುಂಟು. ಬಹಳ ಹೊರುನಾಗಿ ಬೆಳೆದವ್ದರಲ್ಲಿ ಈಪ್ರಕಾರ ಆಗುವುದು. ಈದಾವೂಷಾಯುಪ್ರಕಾರ ೬೦೫೦ ಕಾಯಿಗಳಿಗೆ ಒಂದು ಮಣ ಅಡಿಕೆಯಾಗುವುದು.

ತೆಂಗು ಅಡಿಕೆಗಳು.

ಇವೆರಡೂ ಅನೇಕಭಾಗಗಳಲ್ಲಿ ಸಮಾನವಾದ ಹೋಲ್ವಿಕೆಯುಳ್ಳದ್ದಾಗಿರುವುದು ಒಟ್ಟು ಹಾಕುವುದಕ್ಕೆ ಬೀಜಗಳನ್ನೇರ್ಪಡಿಸಿಕೊಳ್ಳುವುದರಲ್ಲಿ ೩೦ ಅಥವಾ ೩೫ ವರ್ಷಗಳೊಳಗೆ ಇರುವ ಮರಗಳಿಂದ ಆರಿಸಿಕೊಳ್ಳಬೇಕು.

ಬೀಜಗಳು ದಪ್ಪನಾಗಿಯೂ ಉರುಟಾಗಿಯೂ ಇರುವಂಥಾದ್ದನ್ನು ಆರಿಸಿ ಕೊಳ್ಳಬೇಕು. ಉದ್ದವಾಗಿಯೂ ಸಣ್ಣದಾಗಿಯೂ ಇರುವವುಗಳನ್ನು ಬಿಟ್ಟುಬಿಡಬೇಕು

ಬೀಜಗಳನ್ನು ಒಟ್ಟುಹಾಕಿದ ೩ ತಿಂಗಳಿಗೆ ಸ್ವಲ್ಪ ಹೆಚ್ಚುಕಡಮೆಯಾಗಿ ಎಳಕೆಗಳು ಹೊರಡುವವು. ತೆಂಗಿನ ಎಳಕೆ ಹೊರಡುವುದರಲ್ಲಿ ಮೂರು ಕಣ್ಣಿನಿಂದಲೂ ಮೂರು ಎಳಕೆಗಳು ಒಟ್ಟಿಗೆ ಸೇರಿಕೊಂಡು ಹೊರಡುವವು. ಅವುಗಳಲ್ಲಿ ಒಂದು ದಪ್ಪನಾಗಿಯೂ ಉಳಿದವೆರಡು ಸಣ್ಣನಾಗಿಯೂ ಇರುವವು ತೆಂಗಿನಮರ ದೊಡ್ಡದಾದಮೇಲೂ ಇದೇರೀತಿಯಾಗಿ ಹೊರಡುತ್ತಿರುವುದು ಅಡಿಕೆ ಎಳಕೆ ಹೊರಡುವಾಗ ಒಂದು ದಪ್ಪನಾಗಿಯೂ, ಮತ್ತೊಂದು ಅದರ ಎದುರಿಗೆ ಸಣ್ಣನಾಗಿಯೂ ಅವುಗಳ ಮಧ್ಯೆ ಇನ್ನೊಂದು ಚಿಕ್ಕದಾಗಿಯೂ ಹೊರಡುವವು.

ಎರಡು ವರ್ಷಗಳಮೇಲೆ ಪದುಸಾಗಿರುವ ಇವೆರಡು ಬಾಕೀ ಸೊಸಿಗಳನ್ನು ತೋಟಗಳಲ್ಲಿ ಹಾಕುವುದಕ್ಕೆ ತಕ್ಕದ್ದಾಗಿರುವವು

ತೆಂಗು ಅಡಿಕೆಗಳಲ್ಲಿ ಮೊದಲು ಮೊಟ್ಟೆ (ಹೆಡೆ) ಯ ಉಭಯಪಾರ್ಶ್ವಗಳಲ್ಲಿರುವ ಗರಿಗಳೆಲ್ಲಾ ಒಂದಾಗಿರುವಂತೆ ಸಂಬಂಧಿಸಿಕೊಂಡಿರುವವು. ಹಾಗೆ ೧೫–೨೦ ಮಟ್ಟಿಗಳು ಉದುರುವವರಿಗೂ ಹಾಗೇ ಇರುವವು. ಅವು ಬಲಿತು ಗಾಳಿಯಿಂದ ಸ್ವಲ್ಪ ಭೇದಿಸಲ್ಪಡಬೇಕೇ ವಿನಾ ಸ್ವಭಾವವಾಗಿ ಆಗ ಗರಿಗಳು ಬೇರೆಬೇರೆಯಾಗಿರುವುದಿಲ್ಲ. ಎರಡು ಅಥವಾ ಎರಡೂವರೆ ವರುಷಗಳಮೇಲೆ ಮಟ್ಟಿಗಳು ದೊಡ್ಡದಾಗಿ ಬಿಡುವುದರಿಂದ ಗರಿಗಳು ಕೆದರಿಕೊಳ್ಳುವವು. ತೆಂಗು ಅಡಿಕೇಮರಗಳಲ್ಲಿ ಮಟ್ಟಿಗಳ ವರುಷಕ್ಕೆ ಏಳೇಳು ಉದುರುವವು. ಆ ಮಟ್ಟಿಗಳ ಉಭಯಪಾರ್ಶ್ವಗಳಲ್ಲೂ ಕತ್ತಿಯ ಹಾಗೆ ಗರಿಗಳು ಇರುವವಷ್ಟೆ. ತೆಂಗಿನಮಟ್ಟಿಯ ಒಂದೊಂದುಕಡೆ ೧೫೦ ರವರಿಗೂ

ಕವಾದವು. ಇವುಗಳವಿಷಯದಲ್ಲಿ ಜಾಗರೂಕತೆಯಿಲ್ಲದ ಬರೀ ಔಷಧಿಯನ್ನು ಕೊಟ್ಟುದರಿಂದ ಪ್ರಯೋಜನ ಕಡಮೆ.

ರೋಗಿಯನ್ನು ಬೆಳಕು, ನಿರ್ಮಲವಾದ ಗಾಳಿಯೂ ಬರುವಕಡೆ ಪ್ರತ್ಯೇಕವಾಗಿಡಬೇಕು. ಗಾಳಿ, ಬಿಸಲು ಬಹಳವಾಗಿ ಇರಕೂಡದು. ರೋಗಿಯ ಶರೀರಕ್ಕೆ ತಕ್ಕಷ್ಟು ಅನುಗುಣವಾಗಿರಬೇಕು.

ರೋಗಿಯನ್ನು ಮಂಚದಮೇಲಾಗಲೀ ಅಥವಾ ಹಲಿಗೆ ಹಾಸಿದ ನೆಲದಮೇಲಾಗಲೀ ಮಲಗಿಸಬೇಕು. ಶುಚಿಯಾಗಿ ಮೆತ್ತಗೆ ಇರುವ ಹಾಸಿಗೆಯನ್ನು ಸಾಮಾನ್ಯವಾಗಿ ಕೊಡಬೇಕು. ಹೊದಿಯುವುದಕ್ಕೆ ಶಾಖವಾದ ಬಟ್ಟೆಗಳನ್ನು ಕೊಡಬೇಕು.

ರೋಗಿಯ ಮುಗ್ಗಿಲಹಾಸಿಗೆಯನ್ನೂ, ತೊಟ್ಟಿರುವ ಅಂಗಿ ಮುಂತಾದವುಗಳನ್ನು ಪದೇಪದೆ ಬದಲಾಯಿಸಬೇಕು. ಅವುಗಳನ್ನು ಚೆನ್ನಾಗಿ ಒಗೆದು ಬಿಸಿಲಿನಲ್ಲಿ ಒಣಗಿಸಬೇಕು. ರೋಗಿಯ ಶರೀರವನ್ನೆಲ್ಲಾ ಸುಖೋಷ್ಣವಾದ ನೀರಿನಲ್ಲಿ ಸ್ಪಂಜಿನಿಂದಾಗಲೀ ಇಲ್ಲವೆ ಬಟ್ಟೆಯನ್ನು ಅದ್ದಿ ನೀರನ್ನು ಚೆನ್ನಾಗಿ ಹಿಂಡಿ ಅದರಿಂದಾಗಲೀ ಒರೆಸಬೇಕು ಕೂಡಲೇ ಶೀತವಾಗದಹಾಗೆ ಸಾಕಷ್ಟು ಬಟ್ಟೆಗಳನ್ನಾಗಲೀ ಇಲ್ಲದಿದ್ದಕ್ಷಕ್ಕೆ ಕಂಬಳಿ ಮುಂತಾದವುಗಳನ್ನು ಹೊದ್ದಿಸಬೇಕು. ರೋಗಿಯಿಂದ ವಿಸರ್ಜಿಸಲ್ಪಟ್ಟ ಎಂಜಲು, ಮಲಮೂತ್ರಗಳನ್ನು ಅವನ ಪಕ್ಕದಲ್ಲಿ ಇಡಕೂಡದು. ದೂರವಾದ ಒಂದು ಸ್ಥಳದಲ್ಲಿ ಬಿಸಾಟು ಅದಕ್ಕಾಗಿ ಉಪಯೋಗಿಸಿದ ಪಾತ್ರೆಗಳನ್ನು ಚೆನ್ನಾಗಿ ತೊಳೆಯಬೇಕು.

ರೋಗಿಗೆ ಸುಲಭವಾಗಿ ಜೀರ್ಣಿಸತಕ್ಕ ಹಾಲು, ಅರಾರೂರೂಟ್‌ಅಕ್ಕಿ, ರವೆ ಗಂಜಿಯನ್ನು ಆಗಾಗ್ಗೆ ಕೊಡಬೇಕು. ಸುಲಭವಾಗಿ ಜೀರ್ಣಿಸತಕ್ಕ ಹಣ್ಣುಗಳನ್ನು ಸ್ವಲ್ಪ ಕೊಡಬಹುದು. ನೀರನ್ನು ಚೆನ್ನಾಗಿ ಕಾಯಿಸಿ ಶೋಧಿಸಿ, ಒಂದು ಪಾತ್ರೆಯಲ್ಲಿಟ್ಟು ಬೇಕಾದಾಗ ಕುಡಿಯುವದಕ್ಕೆ ಕೊಡಬಹುದು. ರೋಗಿಗೆ ವೈದ್ಯನು ಕೊಟ್ಟ ಔಷಧಿಯನ್ನು ಕಾಲಕಾಲಕ್ಕೆ ಕೊಟ್ಟು, ರೋಗಿಯ ದೇಹಸ್ಥಿತಿಯನ್ನು ಚೆನ್ನಾಗಿ ವಿಚಾರಿಸಿ ವೈದ್ಯನಿಗೆ ತಿಳಿಸಬೇಕು ಸರ್ವವಿಧದಲ್ಲೂ ರೋಗಿಗೆ ಒಳ್ಳೇ ಮಾತುಗಳಿಂದ ಉಪಚರಿಸಬೇಕು. ರೋಗ ನಿವೃತ್ತಿಯಾದನಂತರ ಸ್ವಲ್ಪ ಪುಷ್ಟಿಕರವಾದ ಆಹಾರವನ್ನು ಕ್ರಮೇಣ ಕೊಡುತ್ತಾ ಬರಬೇಕು. ನಿರ್ಮಲವಾದ ಗಾಳಿ ಬೀಸತಕ್ಕ ಪ್ರದೇಶದಲ್ಲಿ ಶಕ್ತ್ಯನುಸಾರ ವ್ಯಾಯಾಮವನ್ನು ತೆಗೆದುಕೊಳ್ಳಬೇಕು. ರೋಗಿಯು ಬಹಳವಾಗಿ ಬಿಸಲಿಗೂ ಮಂಜಿಗೂ ಮೈ ಒಡ್ಡಕೂಡದು.

ಸರಾಸರಿ ೬೦೦೦ ಕಾಯಿಗಳಿಗೆ ಒಂದು ಮಣ ಅಡಿಕೆ ಎಂದು ತೋಟಗಾರರು ನಿಶ್ಚಯಿಸಿಕೊಂಡಿದಾರೆ. ಅಡಿಕೇಫಲ ಹಿಡಿಯುವಕಾಲಕ್ಕೆ ಆಶ್ವಿನೀ ಮಳೆಯು ಪ್ರಾಯಶಃ ಬರುವುದು. ಆ ಮಳೆಯು ಬಲವಾಗಿ ಆದರೆ ಅಡಿಕೇ ಫಲವು ಬಹಳ ಕಡಮೆಯೂಗುವುದು.

ಸಾಂಕ್ರಾಮುಕ ರೋಗಗಳು.

ಸಾಂಕ್ರಾಮಿಕರೋಗಗಳು ಊರಿನಲ್ಲಿ ತಲೆದೋರುವಾಗ ಜನರು ಆಹಾರದ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು. ಅಜೀರ್ಣ ಉಂಟುಮಾಡತಕ್ಕ ಪದಾರ್ಥಗಳನ್ನೂ, ಕೊಳೆತ ಅಥವಾ ಅಪಕ್ವವಾದ ಕಾಯಿಪಲ್ಯ ಹಣ್ಣುಗಳನ್ನು ತಿನ್ನಕೂಡದು. ನೀರನ್ನು ಚೆನ್ನಾಗಿ ಕಾಯಿಸಿ ಕುಡಿಯಬೇಕು. ನಿರ್ಮಲವಾದ ಗಾಳಿ ಬೀಸುವಹಾಗೆ ಮನೆಗಳಿಗೆ ಕಿಟಕಿಗಳಿಲ್ಲದಿದ್ದರೆ ಅವುಗಳನ್ನು ಬಿಡಬೇಕು. ನಿರ್ಮಲಗಾಳಿ ಬೀಸುವಕಡೆ ವಾಲಗಬೇಕು ಮನೆಗಳನ್ನು ಶುಚಿಯಾಗಿಡಬೇಕು. ಹೆಚ್ಚಾಗಿ ಬಿಸಿಲಿನಲ್ಲೂ ರಾತ್ರೆ ಮಂಜಿನಲ್ಲೂ ಸುತ್ತಕೂಡದು ಶರೀರದ ಶಕ್ತಿಯನ್ನು ಕುಂದಿಸತಕ್ಕ ವ್ಯಾಪಾರಗಳಿಗೆ ಅವಕಾಶಕೊಡಕೂಡದು. ಜಾಡ್ಯಕ್ಕೆ ಗಾಬರಿಪಡಕೂಡದು. ತಮ್ಮ ಪ್ರಯತ್ನದಿಂದಲೂ ಆರೋಗ್ಯವನ್ನು ಕಾಪಾಡತಕ್ಕ ಕೆಲಸಗಳನ್ನು ಮಾಡಬೇಕು.

ಅಂಟುರೋಗದಿಂದ ಪೀಡಿತನಾದವನಿಗೆ ಮಾಡಬೇಕಾದ ಉಪಚಾರಗಳು—

ರೋಗಿಗೆ ಉಪಚಾರವಿಲ್ಲದೆ ಬರೀ ಔಷಧಿಯಿಂದ ಆಗುವ ಪ್ರಯೋಜನ ಕಡಮೆ. ರೋಗಿಗೆ ಒಳ್ಳೇ ಔಷಧಿಯನ್ನು ಕೊಟ್ಟಿರುವಾಗ ಇತರ ಕಾರ್ಯಗಳಿಂದ ಆಗುವ ಪ್ರಯೋಜನವೇನೂ ಇಲ್ಲವೆಂದು ಯೋಚಿಸುವದು ದೊಡ್ಡ ತಪ್ಪಾಗಿದೆ. ಅನೇಕ ಜಾಡ್ಯಗಳು ಕ್ರಮವಾದ ಉಪಚಾರಗಳಿಂದಲೇ ವಾಸಿಯೂಗುವವು. ಔಷಧಿಯು ರೋಗದ ವೇಗವನ್ನು ಬಹಳವಾಗಿ ಕಡಮೆ ಮಾಡುವದು. ರೋಗಿಗೆ ನಿರ್ಮಲ ಗಾಳಿ, ನೀರು, ಸುಲಭವಾಗಿ ಜೀರ್ಣಿಸುವ ಆಹಾರ, ಶಾರೀರ ನೈರ್ಮಲ್ಯವೇ ಮೊದಲಾದವು ಬಹಳ ಅವ

ಗಂಧಕದ ಹೊಗೆಯನ್ನು ಹಾಕುವವಿಧಾನ :—ಒಂದು ಮಣ್ಣಿನ ಪಾತ್ರೆಯಲ್ಲಿ ಬೆಂಕಿಹಾಕಿ ಅದರಮೇಲೆ ಸ್ವಲ್ಪ ಗಂಧಕದ ಪುಡಿಯನ್ನು ಹಾಕಬೇಕು. ಕೂಡಲೆ ಹೊಗೆ ಏಳುತ್ತದೆ. ಗಂಧಕದ ಹೊಗೆಯು ಒಳಗೆಲ್ಲಾ ಚೆನ್ನಾಗಿ ವ್ಯಾಪಿಸುವತನಕ ಆ ಕೊಠಡಿಯ ಬಾಗಿಲುಗಳನ್ನು, ಕಿಟಕಿಗಳನ್ನು ಮುಚ್ಚಿಡಬೇಕು. ಅನಂತರ ಗಾಳಿ, ಬಿಸಲು ಧಾರಾಳವಾಗಿ ಬರುವಹಾಗೆ ಅವುಗಳನ್ನು ತೆಗೆಯಬೇಕು. ೧ ಭಾಗಕ್ಕೆ ಕಾರ್ಬಾಲಿಕ್‌ದ್ರಾವಕವೂ ೫೦—೬೦ ರಷ್ಟು ನೀರು ಸೇರಿಸಿ ನೆಲದಮೇಲೂ, ಗೋಡೆಗಳಮೇಲೆಯೂ ಚೆನ್ನಾಗಿ ಚಿಮಿಕಿಸಬೇಕು. ಅಲ್ಲಿರತಕ್ಕ ಬಟ್ಟೆಗಳನ್ನು ಆ ನೀರಿನಲ್ಲಿಯೇ ನೆನಸಿ ಒಣಗಿಸಬೇಕು.

ಆ ಕೊಠಡಿಯಲ್ಲಿರತಕ್ಕ ಮರದ ಸಾಮಾನುಗಳನ್ನು ಚೆನ್ನಾಗಿ ಕಾದಿರುವ ನೀರಿನಿಂದಾಗಲೀ ಅಥವಾ ಕಾರ್ಬಾಲಿಕ್ ಮಿಶ್ರವಾದ ನೀರಿನಿಂದಾಗಲೀ ಚೆನ್ನಾಗಿ ಒರೆಸಬೇಕು. ಸಾಧ್ಯವಾದರೆ ಒಂದು ಪಿಚಕಾರಿಯಿಂದ ಇವುಗಳಿಗೆಲ್ಲಾ ಬಿಸಿನೀರನ್ನಾಗಲೀ ಕಾರ್ಬಾಲಿಕ್ ದ್ರಾವಕ ಮಿಶ್ರವಾದ ನೀರನ್ನಾಗಲೀ ಚೆನ್ನಾಗಿ ಹೊಡೆಯಬೇಕು. ಆ ಕೊಠಡಿಯ ನೆಲಕ್ಕೆ ವಜ್ರಗಾರೆ ಹಾಕಿಲ್ಲದೆ ಬರೇ ಮಣ್ಣಿನ ನೆಲವಾಗಿದ್ದರೆ ೩—೪ ಅಂಗುಲ ನೆಲವನ್ನು ಅಗೆದು ಆ ವರ್ಣನ್ನು ದೂರವಾಗಿ ಬಿಸಾಡಿ ಹೊಸಮಣ್ಣನ್ನು ತಂದು ಹಾಕಿ ಚೆನ್ನಾಗಿ ದಮ್ಮಸ್ಸು ಮಾಡಬೇಕು.

ಹೀಗೆ ಮಾಡುವದರಿಂದ ಆ ಕೊಠಡಿಯಲ್ಲಿದ್ದ ವಿಷಕ್ರಿಮಿಗಳಲ್ಲಾ ಸತ್ತು ಹೋಗುವವು.

ವ್ಯಾಕರಣ ಶಾಸ್ತ್ರಂ.

ತೃತೀಯಾವಿಭಕ್ತಿ ಪ್ರಕರಣಂ.

ತೃತೀಯಾವಿಭಕ್ತಿಯೆಂಬುವುದು ಕನ್ನಡಭಾಷೆಯಲ್ಲಿ ಮೇಲೆಹೇಳಿದ ನಾಮವಾಚಕಗಳಮೇಲೆ ಏಕವಚನ ಬಹುವಚನಗಳಲ್ಲಿ ಕಾಣುವ ಇಂ, ಇಂದ, ಎಂಬುವದು. ಇದು ಸಾಮಾನ್ಯವಾಗಿ ಕರ್ತೃರ್ಥದಲ್ಲೂ, ಕರಣಾರ್ಥದಲ್ಲೂ, ಹೇತ್ವರ್ಥದಲ್ಲೂ ಬರುವುದು. ಮತ್ತು ಒಂದು ಕ್ರಿಯೆಯಿಂದ ಹುಟ್ಟುವ ಫಲವು ಸಂಪೂರ್ಣವಾಗಿ ಸ್ವಾಪ್ತ

ಅಂಟುರೋಗದಿಂದ ಪೀಡಿತನಾದವನನ್ನು ಪೋಷಿಸತಕ್ಕವರು ಇತರರ ಸಂಪರ್ಕವಿಲ್ಲದೆ ಇರಬೇಕು. ಮನೆಯವರು ಅನವಶ್ಯಕನಾಗಿ ರೋಗಿಯ ಸವಿಾಪದಲ್ಲಿರಕೂಡದು. ರೋಗಿಯ ಪೋಷಕರು ತಮ್ಮ ಬಟ್ಟೆಗಳನ್ನು ಪ್ರತಿದಿನವೂ ಒಗೆದು ಚೆನ್ನಾಗಿ ಸ್ನಾನಮಾಡಬೇಕು. ರೋಗಿಯಿಂದ ಯಾವವಿಧವಾದ ಸುಂಕ ಇತರರಿಗೆ ಅಂಟದ ಹಾಗೆ ನೋಡಿಕೊಳ್ಳಬೇಕು. ರೋಗಿಯಿಂದ ಉಪಯೋಗಿಸಲ್ಪಟ್ಟ ಪಾತ್ರೆಗಳನ್ನು ಇತರರು ಉಪಯೋಗಿಸಕೂಡದು.

ಒಂದಾನೇಳೆ ರೋಗಿಯು ಮೃತಪಟ್ಟರೆ ಅವನಿಂದ ಉಪಯೋಗಿಸಲ್ಪಟ್ಟ ಬಟ್ಟೆಗಳನ್ನು ಸುಡುವದು ಅತ್ಯುತ್ತಮ. ಅವು ಬೆಲೆಯುಳ್ಳವುಗಳಾಗಿದ್ದು ಸುಡುವದಕ್ಕೆ ಅನುಕೂಲವಿಲ್ಲದಿದ್ದರೆ ಅವುಗಳನ್ನು ಕುದಿಯುವ ನೀರಿನಲ್ಲಿ ಒಂದು ಗಳಿಗೆ ಚೆನ್ನಾಗಿ ನೆನೆಸಿ ಒಗೆದು ಉಪಯೋಗಿಸಬಹುದು. ವಿಷಾಪಹಾರಿ ದ್ರವ್ಯಗಳಿಂದ ಮಿಶ್ರವಾದ ನೀರನ್ನೂ ಒಗೆದು ಉಪಯೋಗಿಸಬಹುದು. ರೋಗಿಯಿಂದ ವಿಸರ್ಜನೆ ಮಾಡಲ್ಪಟ್ಟ ಪದಾರ್ಥಗಳನ್ನು ದೂರವಾದ ಒಂದು ಸ್ಥಳದಲ್ಲಿ ೨—೩ ಅಡಿ ಆಳ ಹಳ್ಳ ತೋಡಿ ಅದರಲ್ಲಿ ಸಾಕಷ್ಟು ಮಣ್ಣು ಚೆನ್ನಾಗಿ ಮುಚ್ಚಬೇಕು. ಇದಕ್ಕಿಂತ ಸುಡುವದು ಅತ್ಯುತ್ತಮವಾದದ್ದು. ವಿಸರ್ಜಿತ ಪದಾರ್ಥಗಳನ್ನು ಪಕ್ಕದಲ್ಲಿರುವ ಬಚ್ಚಲುಗಳಲ್ಲಿ ಬಿಸಾಡುವದರಿಂದ ಅವು ಬಾವಿ ಮುಂತಾದವುಗಳಿಗೆ ಸೇರಿ ಅನಾರೋಗ್ಯ ಉಂಟುಮಾಡುವವು. ರೋಗಿಯು ಮಲಗಿದ್ದ ಕೋಣೆಗೆ ಗಂಧಕಹೊಗೆಯನ್ನು ಹಾಕಬೇಕು. ಚೆನ್ನಾಗಿ ಸುಣ್ಣ ಕಚ್ಚಿ ಬಿಸಿಲು ಗಾಳಿ ಧಾರಾಳವಾಗಿ ಬರುವಹಾಗೆ ಬಾಗಿಲು, ಕಿಟಕಿಗಳನ್ನು ತೆಗೆದಿರಬೇಕು. ೧೦—೧೫ ದಿವಸಗಳವರೆಗೂ ಆ ಕೋಣೆಯನ್ನು ವಾಸಕ್ಕೆ ಉಪಯೋಗಿಸಕೂಡದು.

ವಿಷಾಪಹಾರಿ—ವಿಷದಬೀಜನಾಶನಿಗಳು—ಅಂಟುರೋಗಗಳು ವಿಷಕ್ರಿಮಿಗಳಿಂದ ಉಂಟಾಗುವವೆಂದು ಈ ಪ್ರಕರಣದ ಆದಿಯಲ್ಲಿ ಹೇಳಿದೆವು. ಕೆಲವು ಪದಾರ್ಥಗಳು ವಿಷಕ್ರಿಮಿಗಳ ವೇಗವನ್ನು ಕಡಮೆಮಾಡುವವು. ಇನ್ನು ಕೆಲವು ಅವುಗಳನ್ನು ನಿರ್ಮೂಲವಾಗಿ ನಾಶಮಾಡಿ ಅವುಗಳ ಹರಡುವಿಕೆಯನ್ನು ನಿಲ್ಲಿಸುವವು. ಇಂಥಾ ಪದಾರ್ಥಗಳಿಗೆ ವಿಷಾಪಹಾರಿಗಳೆಂದು ಹೆಸರು. ಇವುಗಳಲ್ಲಿ ಗಂಧಕ, ಅನ್ನಭೇದಿ, ಸುಣ್ಣ, ಇದ್ದಲು, ಕಾರ್ಬಾಲಿಕ್ ದ್ರಾವಕ—ಫೀನೈಲ್—ಮೊದಲಾದವು ಸುಲಭವಾಗಿಯೂ ಅಲ್ಪಕ್ರಯಕ್ಕೂ ಸಿಕ್ಕುವವು.

ದಿಕಾರಣಂ " ಎಂದು ಸಾಧಕತಮಸೂತ್ರಕ್ಕೆ ಹೇತು, ಅಥವಾ ಕಾರಣ, ಎಂದು ಹೇಳಲ್ಪಟ್ಟಿರುವುದು. ಆದರೆ ಹೇತುವೆಂಬುವುದಕ್ಕೆ ಕ್ರಿಯೆಯ ಸಂಬಂಧವು ಇದ್ದೇ ಇರಬೇಕೆಂಬ ನಿಯಮವಿಲ್ಲ. ಕರಣಕ್ಕೆ ಮಾತ್ರ ಈ ನಿಯಮವುಂಟು. ಆದರೂ ಒಂದು ಕ್ರಿಯೆಯಲ್ಲಿ ಅನೇಕ ಕಾರಕಗಳು ಬೇಕಾಗಿರುವುದರಿಂದ ಯಾವ ವಸ್ತುವನ್ನು ಕರಣವಾಗಿ ಹೇಳಬೇಕೋ ಅದು ತಿಳಿಯುವುದು ಕಷ್ಟ. ಆದ್ದರಿಂದ ಸಂಸ್ಕೃತದಲ್ಲಿ ವ್ಯವಹರಿಸುವ " ವಿವಕ್ಷಾತಃಕಾರಕವಿಭಕ್ತಯೋನಾನಾಭವಂತಿ " ಎಂಬ ನಿಯಮವಾನುಸಾರವಾಗಿ ಯಾವಕಾರಕಕ್ಕೆ ಕರಣತ್ವವಿವಕ್ಷೆಯಾಡುವೆನೋ ಅದು ಕರಣವಾಗುವುದು. ಇದೇವಿಷಯದಲ್ಲಿ,—

" ಕ್ರಿಯಾಯಾಃಪರಿನಿಷ್ಪತ್ತಿರ್ಯದ್ವ್ಯಾಪಾರಾದನಂತರಂ ।
ವಿವಕ್ಷ್ಯತೇಯದಾಯತ್ತ ಕರಣಂತತ್ತದಾಸ್ಮೃತಂ ॥ "

ಎಂದು ಭರ್ತೃಹರಿಯೂ ಹೇಳಿರುವನು. ಇಲ್ಲಿ ಕ್ರಿಯೆಯಿಂದುಂಟಾಗುವ ಫಲ ಯಾವ ಕಾರಕದ ವ್ಯಾಪಾರವಾದ ಅನಂತರದಲ್ಲಿ ಉಂಟಾಗುವದೋ ಆ ಕಾರಕವೇ ಕರಣವಾಗುವುದು ಎಂದು ಹೇಳಲ್ಪಟ್ಟಿದೆ. ವಸ್ತು ಯಾವಕಾರಕವನ್ನೇ ಆಗಲಿ ಪ್ರಯೋಗಮಾಡುವವರು ಸಾಧಕತಮವನ್ನಾಗಿ ಹೇಳಬೇಕೆಂದು ಅಭಿಪ್ರಾಯಪಟ್ಟರೆ ಆ ಕಾರಕವು ಕರಣವೆನ್ನಿಸಿಕೊಳ್ಳುವದು. ಆದುದರಿಂದಲೆ, " ವಿವಕ್ಷಾತಃಕಾರಕವಿಭಕ್ತಯೋನಾನಾಭವಂತಿ " ಎಂದು ಹೇಳಲ್ಪಟ್ಟಿರುವದು. ಲೋಕದಲ್ಲೂ ರಾಮನು ಅಕ್ಕಿಯನ್ನು ಬೇಯಿಸುತ್ತಾನೆ ಎಂಬುವದಕ್ಕೆ ಬದಲಾಗಿ ಇತರ ಕಾರಕವ್ಯಾಪಾರವಿವಕ್ಷೆ ಇಲ್ಲದೆ ಅಕ್ಕಿಯು ತನ್ನಷ್ಟಿಗೆತಾನೇ ಅನ್ನವಾಯಿತು. ಕಟ್ಟಿಗೆಯೇ ಅಡಿಗೆಮಾಡಿತು ಎಂದು ಹೇಳುತ್ತಾರೆ.

ಹೇತುವೆಂಬುವದು ಮೇಲೆಹೇಳಿದ ಕರಣಕ್ಕಿಂತಲೂ ಭಿನ್ನವಾದುದು. ಅದೂ ಇದೂ ಒಂದು ಕ್ರಿಯೆಯಲ್ಲಿ ಸಾಧಕವಾಗುವುದುಂಟು. ಹೇತುವಿಗೆ ಕ್ರಿಯಾಸಂಬಂಧವೇ ಇರಬೇಕೆಂಬ ನಿಯಮವೇ ಇಲ್ಲ. ಇದರಲ್ಲಿ ತೃತೀಯಾವಿಭಕ್ತಿಯನ್ನೂ ಪಂಚಮಿವಿಭಕ್ತಿಯನ್ನೂ ಕವಿಗಳು ಉಪಯೋಗಿಸುವದುಂಟು.

ಯಾವುದೋ ಒಂದು ಪ್ರಕಾರವನ್ನು ಹೊಂದಿರುವ ವಸ್ತುವು ಇತ್ಥಂಭೂತವು. ಅದು ಯಾವದರಿಂದ ತೋರುವುದೋ, ಅದೇ ಇತ್ಥಂಭೂತಲಕ್ಷಣವು. ಅಂದರೆ ಒಂದು ವಸ್ತುವಿನ ರೀತಿಯನ್ನು ಸೂಚಿಸುವುದು ಯಾವುದೋ ಅದರಮೇಲೆ ತೃತೀಯೆ ಬರುವುದೆಂದರ್ಥವಾಗುವುದು. ಇದಕ್ಕೆ ಜ್ಞಾಪಕವೆಂದು ಹೇಳುವರು.

ವಾಯಿತು, ಎಂದು ಹೇಳುವ ಸಂದರ್ಭದಲ್ಲಿ ಕಾಲಾಧ್ವಗಳಿಗೆ ದ್ರವ್ಯ, ಗುಣ, ಕ್ರಿಯೆ, ಗಳಿಂದ ನಿರಂತರವಾದ ಸಂಬಂಧವು ತೋರುತ್ತಿದ್ದರೆ ಆ ಕಾಲಾಧ್ವವಾಚಕಗಳಿಗೆ ಲೂ, ಮತ್ತು ಒಂದು ವಿಕೃತವಾದ ಅಂಗಸಂಬಂಧದಿಂದ, ಯಾವವಸ್ತುವಿಗೆ ವಿಕಾರವು ತೋರುವುದೋ ಅಂಥಾ ವಿಕೃತಾಂಗವಾಚಕದಮೇಲೂ, ಒಂದು ವಸ್ತುವಿನ ಸಾಹಿತ್ಯವು ಮತ್ತೊಂದಕ್ಕೆ ಹೇಳುವ ಸಂದರ್ಭದಲ್ಲಿ ಆ ಸಾಹಿತ್ಯವನ್ನು ಸ್ಪಷ್ಟವಾಗಿ ತೋರಿಸುವ ಶಬ್ದಪ್ರಯೋಗವಿದ್ದರೆ ಯಾವ ವಸ್ತುವಿನ ಸಾಹಿತ್ಯವನ್ನು ಹೇಳುತ್ತೆವೋ ಆ ವಸ್ತು ವಾಚಕದಮೇಲೂ, ಇತ್ಥಂ ಭೂತಲಕ್ಷಣದಲ್ಲೂ ತೃತೀಯಾವಿಭಕ್ತಿಯನ್ನೇ ಉಪಯೋಗಿಸುವರು.

ಇಲ್ಲಿ ಕರ್ತೃಪದದ ಅರ್ಥವು, ಒಂದು ಕ್ರಿಯೆಯಲ್ಲಿ ಸ್ವತಂತ್ರನಾಗಿರುವನಾವನೋ ಅವನೇ ಎಂದು, ಹಿಂದಣ ಸಂಚಿಕೆಗಳಲ್ಲಿ ವಿಚಾರಮಾಡಲ್ಪಟ್ಟಿರುವುದು. ಆ ಕರ್ತೃತ್ವ, ಪ್ರೇಷಕವೆಂತಲೂ, ಅಧ್ಯೇಷಕವೆಂತಲೂ, ಅನುಕೂಲ್ಯಭಾಕ್ಕೆಂತಲೂ, ಮೂರುತೆರನಾಗಿ ಶಾಸ್ತ್ರದಲ್ಲಿ ಮಾತ್ರ ವಿಂಗಡಿಸಲ್ಪಟ್ಟಿರುವುದು. ಇದು ಅನೇಯವಾರ್ಥದಲ್ಲಿ ಭೇದ ತೋರುತ್ತಿದ್ದರೂ, ಲೋಕವ್ಯವಹಾರದಲ್ಲಿ ವಿಶೇಷವಾಗಿ ವ್ಯವಹರಿಸಲ್ಪಡುವದಿಲ್ಲ. ಇದರಲ್ಲಿ ಯಾವನು ಸಾಕ್ಷಾತ್ತಾಗಿ ಕರ್ತೃವನ್ನು ಕ್ರಿಯೆಯಲ್ಲಿ ನಿಯೋಜನೆ ಮಾಡುತ್ತಾನೋ ಅವನೇ ಪ್ರೇಷಕನು. ಯಾವನು ಸತ್ಕಾರಪೂರ್ವಕವಾಗಿ ನಿಯೋಜಿಸುತ್ತಾನೋ ಅವನು ಅಧ್ಯೇಷಕನು. ಯಾವನು ಮೇಲೆಹೇಳಿದ ಪ್ರೇಷಣವೂ, ಅಧ್ಯೇಷಣವೂ ಇಲ್ಲದೆ ಕೇವಲ ಪರಾನುಕೂಲ್ಯಮಾತ್ರದಲ್ಲಿರುವನೋ ಅವನು ಅನುಕೂಲ್ಯಭಾಕ್ಕೆಂಬುವನು ಎಂದು ತಿಳಿಯಬೇಕು. ಇವುಗಳಿಗೆ ಲೌಕಿಕ ಪ್ರಯೋಗಗಳು ಸಿಕ್ಕುವುದು ದುರ್ಲಭವು. ದೊಡ್ಡ ದೊಡ್ಡ ಗ್ರಂಥಗಳಲ್ಲಿ ಮಾತ್ರ ಹೇರಳವಾಗಿ ಉಪಯೋಗಿಸಲ್ಪಟ್ಟಿರುವುದು.

ಕರಣವೆಂದರೆ ಸಾಮಾನ್ಯವಾಗಿ ಕ್ರಿಯೆಗೆ ಸಾಧಕವಾದ ವಸ್ತುವೆಂದರ್ಥವಾಗುವುದು. ವ್ಯಾಕರಣದಲ್ಲಿ ಮಾತ್ರ ಈ ಅರ್ಥವನ್ನು ಸ್ವೀಕರಿಸಲು, ಹೇತುವಿಗೂ ಕರಣಕ್ಕೂ ಭೇದವು ದೊರೆಯಲಾರದು. ಆದುದರಿಂದ ಒಂದು ಕ್ರಿಯೆಯಲ್ಲಿ ಅತ್ಯಂತ ಸಾಧಕವಾದುದು ಕರಣವೆಂತಲೂ, ಸಾಧಕಮಾತ್ರವು ಹೇತುವೆಂತಲೂ, ವ್ಯವಹರಿಸಲ್ಪಡುವುದು. ಆದುದರಿಂದಲೇ ಅಮರಕೋಶದಲ್ಲೂ "ಕರಣಂಸಾಧಕತಮಂ" ಎಂದು ಸಾಧಕತಮವಾದುದು ಕರಣವೆಂತಲೂ, "ಹೇತುರ್ನಿಮಿತ್ತಕಾರಣಂಬೀಜಂ ನಿದಾನಮಂತ್ಯಾ

ವ.ಹಾರರಾಜಾ ಕಾಲೇಜ್ ವಿದ್ಯಾರ್ಥಿಗಳ ಹೋಮನ್ನು ನಡೆಸುವದಕ್ಕಾಗಿ ಒಂದು ಸಂಘವು ಏರ್ಪಡಿಸಲ್ಪಟ್ಟಿದೆ. ಈ ಸಂಘಕ್ಕೆ ಮೆ॥ ಟಿ. ಡೆನ್ಹಾಂ ಎಂ.ಎ. ಯವರು ಪ್ರೆಸಿಡೆಂಟರಾಗಿಯೂ, ಮತ್ತು ಸಿವಿಲ್ ಸರ್ಜನರು, ಡಿಸ್ಟ್ರಿಕ್ಟ್ ಸೆಶನ್ ಜಡ್ಜಿಯವರು, ಎಕ್ಸಿಕ್ಯೂಟಿವ್ ಇಂಜನಿಯರವರು, ಮತ್ತು ಮೈಸೂರು ಮ್ಯೂನಿಸಿಪಾಲಿಟಿ ವೈಸ್‌ಪ್ರೆಸಿಡೆಂಟರವರು ಮೆಂಬರಾಗಿರುತ್ತಾರೆ

ಹಾಗಲವಾಡಿ ಎಮ್ಮೆ ಕಥೆ

ಅರಶೀಕೆರೆಯುಂದು ಒಂದು ಊರು. ಆ ಊರಲ್ಲಿ ಅರ್ಕೇಶ್ವರಭಟ್ಟನೆಂದು ಒಬ್ಬ ಬ್ರಾಹ್ಮಣನಿದ್ದನು. ಆ ಬ್ರಾಹ್ಮಣನ ಅತ್ತೇಮನೆ ಅದೇ ಊರಲ್ಲಿತ್ತು. ಒಂದು ದಿನ ಹೆಂಡತಿಯೊಡನೆ ಮಾತನಾಡುತಿದ್ದಾಗ, 'ಎಲೆ, ಎಲೆ' ನಮ್ಮ ಮನೆಯಲ್ಲಿ ಒಂದು ಎಮ್ಮೆ ಕಟ್ಟಬೇಕೆಂಬ ಆಶೆ ನನಗೆ ತುಂಬಾ ಇದೆ. ನಾಳೆ ಹಾಗಲವಾಡಿಸಂತೆಗೆ ಹೋಗಬೇಕೆಂದಿದ್ದೇನೆ ನಾನು ಹಾಗಲವಾಡಿಗೆ ಹೋದರೆ ಗೀದರೆ, ಹಾಗಕ್ಕೊಂದು ಎಮ್ಮೆ ತಂದರೆ ಗಿಂದರೆ, ಅದು ಒಂದು ತಪ್ಪಲೆ ಹಾಲು ಕೊಟ್ಟರೆ ಗಿಟ್ಟರೆ—ಎಲೆ, ಭದ್ರ—ನಿಮ್ಮ ತಾಯಿ ಮನೆಗೆ ಏನಾದರೂ ಮಜ್ಜಿಗೆ ಕೊಟ್ಟುಗಿಟ್ಟೀಯಾ-ತಿಳೀತೋ' ಎಂದನು. ಆಗ ಅವಳು ಚೆನ್ನಾಯಿತು, ನಮ್ಮ ಮನೇಗೂ ಸ್ವಲ್ಪ ಮಜ್ಜಿಗೆ ಕೊಡದೆ ಬಿಟ್ಟೇನೆ' ಎಂದಳು. ಈ ಭಟ್ಟನಿಗೆ ಕೋಪಬಂದು 'ಕೊಟ್ಟುಗಿಟ್ಟೀಯಾ ಎಂದರೆ ಕೊಡದೆ ಬಿಟ್ಟೇನೆ ಎನ್ನುತೀಯಾ ಹಾ' ಎಂದು ಕಪಾಳಕ್ಕೆ ಎರಡೇಟು ಕೊಟ್ಟನು. ಅವಳು ಅಳುತ್ತಾ ತಮ್ಮ ಮನೆಗೆ ಹೋಗಿ ಗಂಡ ಹೊಡದನೆಂದು ಹೇಳಿದಳು. ಅವಳು ಹೇಳಿದ ಕಥೆಯನ್ನೆಲ್ಲಾ ಕೇಳಿ ಅವಳ ಅಣ್ಣನು ಸರ್ರನೆ ಬಂದು ಆ ಭಟ್ಟನಿಗೆ ನಾಲ್ಕು ಏಟು ಬೆಳೆದನು. ಭಟ್ಟ ಕಾರಣ ತಿಳಿಯದೆ ಕಕಬಿಕಿಯಾಗಿ 'ಇದುಯಾಕೆ ನನ್ನನ್ನು ಹೊಡೀತಿ' ಎಂದು ಕೇಳಿದನು. ಅದಕ್ಕೆ ಅವನು 'ನಿಮ್ಮ ಎಮ್ಮೆ ಬಂದು ನಮ್ಮ ತುಂಬೇಹೊಲವೆಲ್ಲಾ ಮೇಯ್ದುಹೋಯ್ತಲ್ಲ' ಎಂದು ಹೇಳಿದನು. ಆಗ ಬ್ರಾಹ್ಮಣನು 'ನಾನು ಇನ್ನೂ ಎಮ್ಮೆಯನ್ನು ತಂದೇ ಇಲ್ಲವಲ್ಲ' ಎನ್ನಲು 'ನನ್ನ ತಂಗಿ

ಸೂಚನೆ ಮತ್ತು ಸಮಾಚಾರಗಳು.

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಇಂಗ್ಲಿಷ್ ಪ್ರೈವೇಟ್ ಪಾಠಶಾಲೆಗೆ ಮಾಹೆಯಾನ ೧೦ ರೂಪಾಯಿನ ಗ್ರಾಂಟನ್ನು ಮಂಜೂರ್ಮಾಡಿರುತ್ತಾರೆ.

ಟ್ರಾನ್ಸ್ಲೇಟರರವರಾದ ಮ॥ ಎಂ. ಬಿ. ಶ್ರೀನಿವಾಸ್ಐಯಂಗಾರ್ ಎಂ. ಎ. ಯವರ ತಲಬು ೨೫೦ ರೂಪಾಯಿನಿಂದ ೪೫೦ ರವರಿಗೆ ವರ್ಷಕ್ಕೆ ೨೫ ರೂಪಾಯಿಗಳ ಬಡತಿಮೇರೆ ಹೆಚ್ಚುವಹಾಗೆ ಗೊತ್ತುಮಾಡಿರುತ್ತಾರೆ.

ತುಮಕೂರು ಕನಡಾಸ್ಕೂಲ್ ಅಕ್ಟಿಂಗ್ ಮುಖ್ಯೋಪಾಧ್ಯಾಯರಾದ ಮ॥ ನಾರಾಯಣಶಾಸ್ತ್ರಿವ್. ಬಿ. ಎ ಯವರು ಹಾಸನದ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾಗಿ ೨೦೦ ರೂಪಾಯಿ ತಲಬಿನಮೇಲೆ ನೇಮಕಮಾಡಲ್ಪಟ್ಟಿರುತ್ತಾರೆ

ಚಿಕ್ಕಮಂಗಳೂರು ಸಹಾಯೋಪಾಧ್ಯಾಯರಾದ ಮ॥ ಬಿ. ತಿರುಮಲಾಚಾರ್ ವಿ. ಎಂ. ಯವರು ತಮ್ಮ ತಲಬಿನಮೇಲೆ ಗತಿಸಿದ ಮ॥ ರಾ॥ ಬಿ. ಕೃಷ್ಣರಾವ್ ವಿ. ಎ ಯವರು ಜಾಗಕ್ಕೆ ಸಿವಮೊಗ್ಗಾ ಕಾಲೇಜಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮಳವಳ್ಳಿ ಎ. ವಿ. ಪಾಠಶಾಲೆಯಲ್ಲಿ ಹೊಸದಾಗಿ ಮಂಜೂರ್ಮಾಡಲ್ಪಟ್ಟ ಏಳನೆ ಇಂಗ್ಲಿಷ್ ಸಹಾಯೋಪಾಧ್ಯಾಯರ ಕೆಲಸಕ್ಕೆ ಮ॥ ಎಂ. ವೆಂಕಟಸುಬ್ಬಯ್ಯನವರನ್ನು ೧೫ ರೂಪಾಯಿ ತಲಬಿನಮೇಲೆ ನೇಮಿಸಲ್ಪಟ್ಟಿರುತ್ತಾರೆ.

ಚಿಕ್ಕನಾಯಕನಹಳ್ಳಿಯಲ್ಲಿರುವ ಆಂಗ್ಲೋವರ್ನಾಕ್ಯುಲರ್ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಮ॥ ರಾ॥ ವೆಂಕಟರಾಮಯ್ಯನವರು ಕುಣಿಗಲ್ ಎ. ವಿ. ಪಾಠಶಾಲೆಯಲ್ಲಿ ಹೊಸದಾಗಿ ಮಂಜೂರಾಗಿರುವ ಪ್ರಥಮ ಸಹಾಯೋಪಾಧ್ಯಾಯನ್ನಾಗಿ ೨೫ ರೂಪಾಯಿ ತಲಬಿನಮೇಲೆ ನೇಮಕಮಾಡಲ್ಪಟ್ಟಿರುತ್ತಾರೆ.

ವಿದ್ಯಾದಾಯಿನಿ

ಭಾಗ ೭.] ನವಂಬರ್ ೧೯೧೯. [ಸಂಚಿಕೆ ೧೧

ಎಡಿಟರವರ ನೋಟ್ಸ್

ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಗೆ ಪ್ಲೇಗ್ ಉಪದ್ರವವು ಸ್ವಲ್ಪಮಟ್ಟಿಗೆ ಕುಂದಕವನ್ನುಂಟುಮಾಡಿರುವುದೆಂಬುದು ಸರಿಯಷ್ಟೆ. ಆದಾಗ್ಯೂ ಬೆಂಗಳೂರು ಸೆಂಟ್ರಲ್ ಕಾಲೇಜ್‌ನಲ್ಲಿ ವಿದ್ಯಾಭ್ಯಾಸಮಾಡಿ ಕಳೆದ ವರ್ಷ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ಇಬ್ಬರು ವಿದ್ಯಾರ್ಥಿಗಳು ಶಾಸ್ತ್ರದಲ್ಲೂ ಗಣಿತದಲ್ಲೂ ಉತ್ತಮವಾಗಿ ತೇರ್ಗಡೆ ಹೊಂದಿದುದರಿಂದ ಎರಡು ಭಂಗಾರದ ಬಿರುದು (ಮೆಡಲ್)ಗಳನ್ನು ಪಡೆದರು. ಇದು ಸ್ತೋತ್ರಾರ್ಹವಾದುದು.

***

ಅನ್ಯಭಾಷಾಭ್ಯಾಸದಲ್ಲಿ ಸಹಜವಾಗಿ ಪದೋಚ್ಚಾರಣೆ ಮಾಡುವುದು ಸುಲಭವಲ್ಲವೆಂಬುದು ಎಲ್ಲರಿಗೂ ತಿಳಿದಂಶವಾಗಿದೆ. ನಾವುಗಳು ಇಂಗ್ಲೀಷ್ ಭಾಷೆಯನ್ನು ಇಂಗ್ಲೀಷರಂತೆ ಉಚ್ಚರಿಸುವುದು ಸುಲಭವಲ್ಲವು. ಇಂಗ್ಲೀಷರು ನಮ್ಮ ಭಾಷೆಯನ್ನು ನಾವು ಉಚ್ಚರಿಸುವಂತೆ ಧಾರಾಳವಾಗಿ ಉಚ್ಚರಿಸುವುದು ಸುಲಭವಲ್ಲ. ಈ ಕೊರತೆಯನ್ನು ಹೋಗಲಾಡಿಸುವುದಕ್ಕೆ ಅನ್ಯಭಾಷಾಭ್ಯಾಸ ಮಾಡುವಾಗ ಫೊನೋಗ್ರಾಫ್ ಎಂಬ ಯಂತ್ರವು ಸಹಾಯಕವಾಗಿರುವುದೆಂದು ಕೆಲವರು ಅಭಿಪ್ರಾಯ ಪಡುತಿರುವರು.

***

ಹಿಂದೂಸ್ಥಾನದಲ್ಲಿ ವಿಶೇಷ ವಿದ್ಯಾಭಿವೃದ್ಧಿ ಗೋಸ್ಕರ, ನಮ್ಮ ಸಂಸ್ಥಾಪಿತ ಇ೯೧೫ ಜುಲೈ ಅಪ್‌ಎಡ್ಯುಕೇಷನ್ ಮೆ|| ಬಾಬಾಸಾಹೇಬರ ಬೀಗರು ಮೈಸೂರ್ ಇತಾಸಾಹೇಬರವರು ಮೂವತ್ತುಲಕ್ಷ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟ

ಮಜ್ಜಿಗೆ ಕೊಟ್ಟೇ ಇಲ್ಲವಲ್ಲ. ನೀನು ಏಕೆ ಅವಳನ್ನು ಹೊಡೆದೆ ? ಎಂದನು. ಆಗ ಭಟ್ಟನು ನಾಚಿಕೊಂಡು ಸುಮ್ಮನಾದನು.

ಪತ್ರವ್ಯವಹಾರ

[ದಯವಾಡಿ ಇದರಡಿ ಶ್ರುತಪಡಿಸುವ ಪ್ರಶ್ನೆಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಚುರಿಸಿದಲ್ಲಿ ವಿದ್ಯಾಭಿವಾನಿಗಳು ತಕ್ಕ ಸಮಾಧಾನವನ್ನು ಕೊಡುವರೆಂದು ನಂಬಿದೇನೆ]

ಕಾಡಪ್ಪಳ ಚನ್ನಬಸವ, ಬಂದಪ್ಪಳ ಸಿದ್ದಲಿಂಗಪ್ಪ.	ಇವುಗಳಲ್ಲಿ ಪುಲ್ಲಿಂಗ ಪ್ರತ್ಯಯಗಳಿಗೆ ಬದಲಾಗಿ ಸ್ತ್ರೀ ಪ್ರತ್ಯಯಗಳು ಸೇರಿವೆ. ಈ ಪ್ರಾಂತ ಬರಹದಲ್ಲಿಯೂ ವಾಡಿಕೆಯ ಮಾತುಗಳಲ್ಲಿಯೂ ಇಂಥ ಹಲವು ಶಬ್ದಗಳು ರೂಢಿಯಲ್ಲಿವೆ. ಇವು ಸಾಧುವೆ ? ಹೇಗೆ ?
ಅವಳು ಬಂದೊ. ಇಂಗಿ ಹೋದೊ.	ಬಂದಳು, ಹೋದಳು, ಎಂಬಿವಕ್ಕೆ ಇಲ್ಲಿ ಒಕಾರ ಬಂದಿದೆ. ಶ ಶಾ. ಗಿರ್ಸೇ ಸೂತ್ರದಂತೆ ಮಾಡಿದೊ, ಮಾಡಿದೊಳ್, ಮುಂತಾದವು ಬರಬಹುದಾಗಿ ತೋರುತ್ತೆ. ಇವುಗಳನ್ನು ಬರಹದಲ್ಲಿ ಉಪಯೋಗಿಸಬಹುದೇ ?
ಅಜ್ಜ ಬಂತು. ಮುದುಕ ಕುಳಿತದೆ. ಅಜ್ಜ ಹೇಳಿತು.	ಇವುಗಳನ್ನು ನಿತ್ಯನಪುಂಸಕಲಿಂಗವಾಗಿ ಪ್ರಯೋಗಿಸುವರು. ಇದಕ್ಕೆ ಏನಾದರೂ ಆಧಾರವಿದ್ದೆಯೆ ? ಹಾಗಿದ್ದಲ್ಲಿ ಬಳಕೆಗೆ ತರಬಹುದೋ ?
ಬೆಂಕಿ ಸುಡುತ್ತದೆ. ಅವರು ಕಟ್ಟಿಗೆಯನ್ನು ಸುಡುತ್ತಾರೆ	ಸುಡು ಎಂಬುದು ಸಕರ್ಮಕವೇ ? ಅಕರ್ಮಕವೇ ? ಉಭಯದಲ್ಲಿಯೂ ಪ್ರಯೋಗಿಸಲಿಕ್ಕೆ ಅರ್ಥಾಂತರವುಂಟೇ ?

ಮೇಲಿನ ಪ್ರಶ್ನೆಗಳಿಗೆ ಈ ಪತ್ರಿಕಾ ವಾಚಕರು ದಯವಾಡಿ ಉತ್ತರವನ್ನು ಕೊಡುವರೆಂದು ನಂಬಿದೇನೆ

ಒಬ್ಬ ಉಪಾಧ್ಯಾಯ.

ಪೆಸ್ಟಲಾಟ್ಸೀಯವರ ಚರಿತ್ರೆ

ಸ್ತ್ರೀಯರು ವಿದ್ಯಾವಿನಯಸಂಪನ್ನೆಯರಾಗಿ ಸರಿಯಾದ ನಡೆನುಡಿಯುಳ್ಳವರಾಗಿದ್ದರೆ ಅವರ ಮಕ್ಕಳೂ ಕೂಡ ಅವರಂತೆಯೇ ವಿನೀತರಾಗುವರೆಂದು ಪೆಸ್ಟಲಾಟ್ಸೀಯವರು ತಾತ್ಪರ್ಯಪಟ್ಟು ಇದ್ದರು. ಈ ಅರ್ಥವನ್ನೇ ಅವರ ಮಾತೃಶಿಕ್ಷೆ ಎಂಬ ಪುಸ್ತಕದಲ್ಲಿ ಗರ್ಭೀಕರಿಸಿ ಇದ್ದರು. ಪ್ರಾಯಿಕವಾಗಿ ಬಾಲರು ಮಾತೃಶಿಕ್ಷಾರ್ಹರೆಂಬುದಾಗಿಯೂ, ಮಾತಾಪಿತೃಗಳು ತಿಳುವಳಿಕೆಯುಳ್ಳವರೆಂಬುದಾಗಿ ಜನರು ಅಭಿಪ್ರಾಯಪಡುವುದುಂಟು. ಪ್ರಾಯಕವಾಗಿ ಅನೇಕರ ತಂದೆತಾಯಿಗಳು ತಮ್ಮ ಮಕ್ಕಳಂತೆಯೇ ಶಿಕ್ಷಯನ್ನು ಹೊಂದಬೇಕಾಗಿರುವದುಂಟು. ಇಂಥಾ ತಂದೆತಾಯಿಗಳು ಪುತ್ರವಂತರಾದರೆ ಆ ಪುತ್ರರು ನಿರಕ್ಷರಕುಕ್ಷಿಗಳಾಗುವದು ಏನುಆಶ್ಚರ್ಯ ಈ ಅನರ್ಥವನ್ನು ತಪ್ಪಿಸುವುದಕ್ಕೋಸ್ಕರ ಮಾತೃಶಿಕ್ಷೆಯೆಂಬ ಪುಸ್ತಕವೇ ಮೊದಲಾದವುಗಳನ್ನು ಬರೆದು ಪ್ರಚಾರಪಡಿಸಿದರು. ಅನೇಕ ವಿದ್ವಾಂಸರು ಇದರಲ್ಲಿ ಕಂಡ ಶಿಕ್ಷಾಕ್ರಮವನ್ನು ಶೋಧಿಸಿ ಪುತ್ರವತಿಯರಾದ ಸ್ತ್ರೀಯರೂ ಎಲ್ಲರೂ ಅದನ್ನು ಅವಲೋಕಿಸುವಂತೆ ಏರ್ಪಾಡುಮಾಡಿದರು. ಸ್ವಿಟ್ಜರ್ಲೆಂಡ್, ಜರ್ಮನಿ ಮೊದಲಾದ ಪ್ರಾಂತ್ಯಗಳಲ್ಲಿ ಸಾಮಾನ್ಯರಾದ ಕೂಲಿಯವರೂ ಕೂಡ ತಿಳುವಳಿಕೆಯ ಬಳ್ಳನವರಾಗಿರುವುದಕ್ಕೆ ಅಲ್ಲಿನ ಸ್ತ್ರೀಯರು ಇಂಥಾ ಗ್ರಂಥಾವಲೋಕನ ಮಾಡುತ್ತಿರುವದೇ ಮುಖ್ಯಕಾರಣವೆಂದು ತಿಳಿಯಬರುತ್ತದೆ.

ಪೆಸ್ಟಲಾಟ್ಸೀಯವರು ಬರಗಡಾಫ್ ಎಂಬ ಸ್ಥಳದಲ್ಲಿ ಒಂದು ಪಾಠಶಾಲೆಯನ್ನು ಏರ್ಪಡಿಸಿ ತಮ್ಮ ಸಿದ್ಧಾಂತಪ್ರಕಾರವಾಗಿ ಪಾಠಪ್ರವಚನಗಳನ್ನು ಏರ್ಪಡಿಸಿದರು. ಇವರು ಪಾಠಕ್ರಮದ ಫಲಿತಾಂಶದ ವಿಷಯದಲ್ಲಿ ರಿಪೋರ್ಟುಮಾಡಬೇಕೆಂದು ಗೌರ್ನ್ಮೆಂಟಿನವರು ೧೮೦೨ರಲ್ಲಿ ಒಂದು ಕಮಿಷನನ್ನು ಏರ್ಪಾಡುಮಾಡಿದರು. ಸದರಿ ಕಮೀಷ್ನರವರು ಇವರ ಶಿಕ್ಷಾಕ್ರಮವನ್ನು ಪರೀಕ್ಷಿಸಿ ಇದು ಸರ್ವೋತ್ಕೃಷ್ಟವಾದುದೆಂದು ಗೊತ್ತುಮಾಡಿಕೊಂಡು ಸಂಸ್ಥಾನದ ಎಲ್ಲಾ ಉಪಾಧ್ಯಾಯರುಗಳು ಈ ಪಾಠಶಾಲೆಗೆ ಪ್ರತಿತಿಂಗಳಲ್ಲಿಯೂ ೧೦ ಜನಗಳ ಪ್ರಕಾರ ಹೋಗಿ ಪಾಠಹೇಳತಕ್ಕ ಕ್ರಮವನ್ನು ತಿಳಿದುಕೊಳ್ಳಬೇಕೆಂದು ವಿಧಾಯಕಮಾಡಿದರು. ಕೆಲವು ದಿವಸಗಳಲ್ಲಿ ಇವರ ಶಿಷ್ಯರಲ್ಲಿ ಅನೇಕರು ಇವರ ಪಾಠಕ್ರಮದಲ್ಲಿ ಪಾರಂಗತರಾದರು. ಪೆಸ್ಟಲಾಟ್ಸೀಯ

ಸುವುದೆಂದು ನಾವು ಹಿಂದೆಯೆ ಸೂಚಿಸಿರುವೆವಷ್ಟೆ ಈಗ ಇಂಡಿಯಾಸರಕಾರದವರು ೨ ದ್ರವ್ಯವನ್ನು ಸ್ವೀಕರಿಸಿ ತದ್ವಿನಿಯೋಗಾರ್ಥ ತಕ್ಕ ಏರ್ಪಾಡುಗಳನ್ನು ಮಾಡಲು, ಎಂದು ವಿದ್ವನ್ಮಂಡಲಿಯನ್ನು ನಿಯಮಿಸಿ ಆ ಮಂಡಲಿಯು ಅಭಿಪ್ರಾಯವನ್ನು ತಿಳಿದು ತರವೇಲೆ ಜಾಗ್ರತೆಯುಳ್ಳಯೆ ಒಂದು ಕಲಾಶಾಲೆಯನ್ನು ಸ್ಥಾಪಿಸುವ ಯೋಚನೆ ಯುಳ್ಳರುವರು. ಈ ಕಲಾಶಾಲೆಯನ್ನು ಬೆಂಗಳೂರಲ್ಲಿ ದಾದರೂ ಬೊಂಬಾಯಿಯಲ್ಲಿ ದಿದ್ದರೂ ಸ್ಥಾಪಿಸಬೇಕೆಂದಿರುವರು. ಬೆಂಗಳೂರಲ್ಲಿ ಇದುಸ್ಥಾಪಿತವಾದರೆ ಮೈಸೂರು ಶೇಷಕ್ಕೆ ಮಿ॥ ತಾತಾ ಸಾಹೇಬರವರು ಮಹೋಪಕಾರವನ್ನು ಮಾಡಿದಂತೆ ಆಗುವುದು. ನಮ್ಮ ಸರಕಾರದವರು ಇದಕ್ಕಾಗಿ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿ ಕೊಡಲು ಅಭಿಪ್ರಾಯವುಳ್ಳವರಾಗಿರುವರು.

ಇಂಡಿಯಾ ಸರಕಾರದವರು ಬ್ರಿಟಿಷ್ ರಾಜ್ಯಗಳಲ್ಲಿ ಬಾಲವಿದ್ಯಾಭ್ಯಾಸಕ್ಕೆ ಕೊಟ್ಟಿರುವ ಪ್ರೋತ್ಸಾಹವು ಸಾಲದೆಂದು ಅಭಿಪ್ರಾಯಪಟ್ಟಿರುವರು. ಇದರಿಂದ ಈ ವಿಷಯದಲ್ಲಿ ಎಲ್ಲಾ ಸಂಸ್ಥಾನಗಳಲ್ಲೂ, ಬ್ರಿಟಿಷ್ ಅಧಿಪತ್ಯಗಳಲ್ಲೂ ಬಾಲವಿದ್ಯಾ ಭಿವೃದ್ಧಿಗೆ ತಕ್ಕ ಏರ್ಪಾಡುಮಾಡಲು ಯೋಚಿಸಬಹುದು.

***

ಅಕ್ಷರಜ್ಞಾನವಿಲ್ಲದ ಗ್ರಂಥಗಳನ್ನು ಅಭ್ಯಾಸಿಸುವದೇಅಗಲಿ, ವೃದ್ಧಿಪಡಿಸು ವುದೇ ಆಗಲಿ ಎಂದಿಗೂ ಸಾಧ್ಯವಾಗಲಾರದೆಂದು ಬಹಳ ದಿನಗಳಿಂದ ಪಾಶ್ಚಾ ತ್ಯರು ಅಭಿಪ್ರಾಯಪಡುತಿದ್ದರು. ಈ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಿಗೊಂಡ ಮೆ॥ ಮ್ಯಾಕ್ಸ್‌ಮುಲರ್ (ಇವರು ಋಗ್ವೇದವನ್ನು ಶುದ್ಧವಾಗಿ ಅಚ್ಚು ಹಾಕಿಸಿರುವರು) ರವರು ಸಂಸ್ಕೃತವಿದ್ಯಾಭ್ಯಾಸಕ್ರಮವನ್ನು ಈಗ ಇರುವ ಘನಪಾ ಠಿಗಳನ್ನು, ಬಹುಕಾಲದಿಂದ ಬಂದಿರುವ ವೇದಪಾಠಕ್ರಮವನ್ನು ಉದಾಹರಣೆಗಳಾಗಿ ತೆಗೆದುಕೊಂಡು, ಈ ಅಭಿಪ್ರಾಯವು ಶುದ್ಧತಪ್ಪೆಂದು ಪರಿಷ್ಕಾರವಾಗಿ ಬರೆದಿರುವರು.

ಜನರಿಗೆ ಪ್ರಯೋಜನವಾಗಬಹುದೆಂಬದಾಗಿಯೂ ತೋರಿದ್ದರಿಂದ ಫೆಲ್ಡೆನ್‌ಬರ್ಗ್ ವರ ಪಾಠಶಾಲೆಯಲ್ಲಿ ನಡೆಯುವೇಕಾದ ವಿದ್ಯಾಭ್ಯಾಸಕ್ಕೆ ತಕ್ಕ ಮೇಲ್ವಂಗ್ತಿಯನ್ನು ಹಾಕಿ ಕ್ರಮವಾದ ಏರ್ಪಾಡುಮಾಡಿಸಿ ಫ್ರೆಂಚುಸ್ವಿಟ್ಜರ್ಲೆಂಡಿಗೆ ಹೋದರು. ಇವರ ಶಿಷ್ಯರಲ್ಲನೇಕರು ಅವರ ಜೊತೆಯಲ್ಲಿಯೇ ಹೊರಟರು. ಜನರು ಇವರ್ಡನ್‌ಪಟ್ಟಣದಲ್ಲಿ ಬಂದು ವಿಶಾಲವಾದ ಬಂಗಲೆಯನ್ನು ಪಾಠಶಾಲಾರ್ಥವಾಗಿ ಇವರಿಗೆ ಕೊಟ್ಟರು. ನೀಡರ್ ಮತ್ತು ಸ್ಟಿಡ್ ಎಂಬ ಇಬ್ಬರು ಪಂಡಿತರು ಇವರಿಗೆ ಸಹಾಯೋಪಾಧ್ಯಾಯರಾಗಿ ನೇಮಿಸಲ್ಪಟ್ಟರು.

ಇಲ್ಲಿನ ಪಾಠಕ್ರಮಗಳು ಬಹಳ ವಿಲಕ್ಷಣವಾಗಿದ್ದವು. ಭಾಷೆಯನ್ನು ಕಲಿಸುವದರಲ್ಲಿ ಪ್ರಥಮತಃ ವಸ್ತುಜ್ಞಾನವನ್ನುಂಟುಮಾಡುವುದಕ್ಕೋಸ್ಕರ ಪದಾರ್ಥಗಳನ್ನು ತಂದು ತೋರಿಸಿ ಇತರ ಪದಾರ್ಥಗಳಿಗೂ ಅವುಗಳಿಗೂ ಆಕಾರದಲ್ಲಿಯೂ ಗುಣಗಳಲ್ಲಿಯೂ ಇರುವ ವಿಶೇಷಗಳನ್ನು ನೋಡೋಣದರಿಂದಲೂ ಪರೀಕ್ಷಿಸೋಣದರಿಂದಲೂ ವಿದ್ಯಾರ್ಥಿಗಳು ತಾವಾಗಿಯೇ ತಿಳಿದುಕೊಳ್ಳುವಂತೆ ಮಾಡುತ್ತಿದ್ದರು. ಪಾಠಗಳಲ್ಲಿ ಇರುವ ವಸ್ತುಗಳನ್ನು ಅವುಗಳ ಗುಣಗಳನ್ನು ತಿಳಿಸಿ ಅನಂತರ ಪದಗಳನ್ನು ಪದಾರ್ಥಗಳೇ ಮೊದಲಾದ ಭಾಷಾವಿಶೇಷಗಳನ್ನು ಹೇಳುತ್ತಿದ್ದರು. ಭೂಗೋಳ ಪಾಠಕ್ರಮವು ವಿಲಕ್ಷಣವಾಗಿರುತ್ತಿತ್ತು. ಪ್ರಥಮತಃ ತಾವಿರತಕ್ಕ ಕಟ್ಟಡದ ವಿವರಣೆಯನ್ನು ಆ ಕಟ್ಟಡದ ದಿಗ್ವಿವರಣೆಗಳನ್ನು, ಯಾವಯಾವ ದಿಕ್ಕುಗಳಲ್ಲಿ ಯಾವಯಾವ ಪದಾರ್ಥಗಳಿರುತ್ತವೋ ಅವನ್ನು ವಿವರಿಸಿ ಅವುಗಳನ್ನು ಬರೆಸಿ ಅನಂತರ ತಮ್ಮ ಪಟ್ಟಣವನ್ನು ನೋಡುವುದಕ್ಕಾಗಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಎಲ್ಲಾ ಬೀದಿಗಳನ್ನು ಸಂದಿಗಳನ್ನು ಕಟ್ಟಡಗಳನ್ನು ಅವುಗಳೆಲ್ಲಾ ಒಂದಕ್ಕೊಂದು ಯಾವಯಾವ ದಿಕ್ಕುಗಳಲ್ಲಿವೆಯೋ ಅವುಗಳನ್ನು ಅವರಿಂದಲೇ ಹೇಳಿಸಿ ಸವಿೂಪದ ಪರ್ವತಶಿಖರಕ್ಕೆ ಕರೆದುಕೊಂಡುಹೋಗಿ ಆ ಪಟ್ಟಣದ ಆಕೃತಿಯನ್ನು ತೋರಿಸಿ ಅವರಿಂದ ಅವರ ನಕ್ಷೆಯನ್ನು ಬರೆಸಿ ತಪ್ಪುಗಳನ್ನು ತಿದ್ದುತ್ತಾ ಅನಂತರ ಸ್ವಿಟ್ಜರ್‌ಲೆಂಡಿನ ಇತರ ಪಟ್ಟಣಗಳಲ್ಲಿಯೂ ನದಿಗಳಲ್ಲಿಯೂ ಪರ್ವತಗಳಲ್ಲಿಯೂ ಸಾಧ್ಯವಾದವುಗಳನ್ನು ಪ್ರತ್ಯಕ್ಷವಾಗಿಯೂ ಅಸಾಧ್ಯವಾದವುಗಳನ್ನು ಭೂಪಠದಲ್ಲಿಯೂ ತೋರಿಸಿ, ತಾವು ತೋರಿಸುವ ಪಟ್ಟಣಗಳು, ನದಿಗಳು, ಪರ್ವತಗಳು ಮೊದಲಾದವುಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಕಥಾರೂಪವಾಗಿ ಹೇಳಿ

ವರು ಅವರಲ್ಲಿ ಬುದ್ಧಿಶಾಲಿಗಳಾದವರಿಗೆ ಈ ಪಾಠಶಾಲೆಯು ಪ್ರಾಥಮಿಕ ಪಾಠಗಳನ್ನು ಒಪ್ಪಿಸಿ ಆ ಸಂಸ್ಥಾನದಲ್ಲಿ ಬಹಳ ದರಿದ್ರರಾಗಿಯೂ ಅನಾಥರಾಗಿಯೂ, ದುರ್ಭಾಗ್ಯರಾಗಿಯೂ ಇರಶಕ್ಯ ಹುಡುಗರನ್ನು ಉಪಾಯದಿಂದ ಕರೆದುಕೊಂಡು ಬಂದು ಅವರಿಗೆ ಅನ್ನ ವಸ್ತ್ರಗಳನ್ನು ಕೊಟ್ಟು ಉಪಚರಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಪ್ರಯತ್ನಗಳನ್ನು ಮಾಡಿದರು. ಇಷ್ಟರಲ್ಲಿಯೇ ಆ ದೇಶದ ರಾಜ್ಯಭಾರದಲ್ಲಿ ಕೆಲವು ಬದಲಾವಣೆಗಳು ನಡೆದವು. ಇವರು ವಿದ್ಯಾಭ್ಯಾಸದ ಏರ್ಪಾಡಿಗೆ ಸಹಾಯವಾಗತಕ್ಕವರು ವಿರಳರಾದರು. ಖರ್ಚಿನ ವಿಷಯದಲ್ಲಿ ನ್ಯೂನತೆಯುಂಟಾಗಿ ಪಾಠಶಾಲೆಯನ್ನು ಮುಚ್ಚತಕ್ಕ ಅವಸ್ಥೆಯು ಸನ್ನಿಹಿತವಾಯಿತು. ಆದರೆ ಪೆಸ್ತಲಾಟ್ಸ್ಸೀಯವರ ಅನ್ಯಾದೃಶವಾದ ಶಿಕ್ಷಾಕ್ರಮವು ಬಹಳ ಪ್ರಸಿದ್ಧಿಗೆ ಬಂದು ಇದ್ದದ್ದರಿಂದ ಈ ವಿಷಯದಲ್ಲಿ ಉಪೇಕ್ಷೆಯುಳ್ಳ ಅಧಿಕಾರಿಗಳೂ ಕೂಡಾ ಇವರ ಪಾಠಶಾಲೆಯನ್ನು ನಿಲ್ಲಿಸುವ ವಿಷಯದಲ್ಲಿ ಯೋಚನೆಮಾಡುತ್ತಿದ್ದರು. ಅಷ್ಟರಲ್ಲಿ ಬರ್ಗ್‌ಡಟ್ಟ್‌ಣದ ಸವಿಾಪದಲ್ಲಿದ್ದ ಮನರ್ಸಿಯಾ ಬಳಿಸಿ ಎಂಬ ಸ್ಥಳದಲ್ಲಿ ಒಂದು ಪಾಠಶಾಲೆಯನ್ನು ೧೮೦೪ನೆ ಇಸವಿಯಲ್ಲಿ ಏರ್ಪಾಡುಮಾಡಿಕೊಟ್ಟರು. ಈ ಪಟ್ಟಣವು ಇವ್ಯಾನ್ಯೆಯಲ್ ಫೆಲ್ಲೆಬರ್ಗ್ ಎಂಬುವರಿಗೆ ಸೇರಿತ್ತು. ಇವರೂ ಕೂಡಾ ಪೆಸ್ತಲಾಟ್ಸ್ಸೀಯವರಂತೆ ತಮ್ಮ ತನು ಧನ ಮನಗಳನ್ನೆಲ್ಲಾ ಅನಾಥರ ಸಂರಕ್ಷಣೆಯಲ್ಲಿ ವಿನಿಯೋಗಿಸಿ ಇದ್ದರು. ಪೆಸ್ತಲಾಟ್ಸ್ಸೀಯವರಿಗೂ ಫೆಲ್ಲೆಬರ್ಗರವರಿಗೂ ಸಮಾಗಮವಾದುದು ಅನೇಕ ಅನಾಥರ ಪುಣ್ಯೋದಯವು. ಪೆಸ್ತಲಾಟ್ಸ್ಸೀಯವರ ಉದ್ದೇಶವು ಫೆಲ್ಲೆಬರ್ಗ್‌ರ ಉದ್ದೇಶವು ಎರಡು ಪರೋಪಕಾರವಾಗಿತ್ತು. ಪೆಸ್ತಲಾಟ್ಸ್ಸೀಯವರು ಅನಾಥಸಂರಕ್ಷಣೆಗೆ ಬುದ್ಧಿಶಕ್ತಿಯುಳ್ಳವರಾಗಿದ್ದರೇ ಹೊರತು ದ್ರವ್ಯಬಲವುಳ್ಳವರಾಗಿರಲಿಲ್ಲ ಫೆಲ್ಲೆಬರ್ಗ್‌ರವರು ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಪೆಸ್ತಲಾಟ್ಸ್ಸೀಯವರಿಗೆ ಒಪ್ಪಿಸಿ ಅವರ ಕಲಾಭ್ಯಾಸವನ್ನು ಪಾಠಶಾಲಾ ಖರ್ಚುವಿಚಾರವನ್ನು ತಾವೆ ಇಟ್ಟುಕೊಂಡರು. ಕೆಲವು ಕಾಲದಲ್ಲಿ ಅನೇಕ ವಿದ್ಯಾರ್ಥಿಗಳು ವಿದ್ಯೆಯಲ್ಲಿಯು ಕಲೆಗಳಲ್ಲಿಯೂ ಬಹು ಪ್ರವೀಣರಾಗಿ ಆತ್ಮಾವಲಂಬನೆಯಿಂದ ಜೀವಿಸುವ ಶಕ್ತಿಯನ್ನು ಹೊಂದಿದರು ಅಷ್ಟರಲ್ಲಿ ಫ್ರೆಂಚ್ ಸ್ವಿಟ್ಜರ್‌ಲಂಡಿನ ಜನರು ಪೆಸ್ತಲಾಟ್ಸ್ಸೀಯರ ಮಹಿಮೆಯನ್ನು ಕೇಳಿ ತಮ್ಮ ದೇಶಕ್ಕೆ ಬಂದು ಅಲ್ಲಿನ ವಿದ್ಯಾರ್ಥಿಗಳನ್ನು ಉದ್ಧಾರವಾಡಬೇಕೆಂದು ಪ್ರಾರ್ಥಿಸಿದರು ಅಲ್ಲಿ ಹೆಚ್ಚು ಜನರಿಗೆ ಉಪಕಾರವಾಡಬಹುದೆಂಬದಾಗಿಯೂ ತಾವು ಮಾಡುವ ಮೆಹನತ್ತು ಬಹು

ಕರ್ತ್ರರ್ಥಕ್ಕೆ (ಉ)—ಕುಂಬಾರನಿಂದ ಗಡಿಗೆಯು ಮಾಡಲ್ಪಟ್ಟಿತು. ಹನುಮಂತನಿಂದ ಸೀತೆಯು ನೋಡಲ್ಪಟ್ಟಳು ಕೃಷ್ಣನಿಂದ ಕಥೆಯು ಹೇಳಲ್ಪಟ್ಟಿತು ಇತ್ಯಾದಿ. ಇಂಥಾ ಪ್ರಯೋಗಗಳಿಗೆ ಯಾವಾಗಲೂ ಸಕರ್ಮಕ ಕರ್ತೃಪ್ರಯೋಗದಂತೆ ತಾತ್ಪರ್ಯವನ್ನು ಹೇಳಬೇಕು. ಹ್ಯಾಗೆಂದರೆ:—ಕುಂಬಾರನು ಗಡಿಗೆಯನ್ನು ಮಾಡಿದನು. ಹನುಮಂತನು ಸೀತೆಯನ್ನು ಕಂಡನು ಕೃಷ್ಣನು ಕಥೆಯನ್ನು ಹೇಳಿದನು. ಇತ್ಯಾದಿ. ಮತ್ತು ಮೇಲೆ ಹೇಳಿರುವ ಕರ್ಮಣಿಪ್ರಯೋಗದಲ್ಲಿ ಯಾವಾಗಲೂ ಕರ್ಮಪದವು ಪ್ರಥಮಾಂತವಾಗಿಯೇ ಹೇಳಬೇಕು. ಅದನ್ನು ತಾತ್ಪರ್ಯದಲ್ಲಿ ದ್ವಿತೀಯಾಂತವಾಗಿ ಹೇಳಿ ಕರ್ತೃವಾಚಕವಾದ ತೃತೀಯಾಂತವನ್ನು ಪ್ರಥಮಾಂತವಾಗಿ ಮಾಡಿ ಕ್ರಿಯಾಪದವನ್ನು ಕರ್ತ್ರರ್ಥದ ಆಖ್ಯಾತಪ್ರತ್ಯಯದೊಂದಿಗೆ ಪ್ರಯೋಗ ಮಾಡಿದರೆ ಸಕರ್ಮಕಕರ್ತೃಪ್ರಯೋಗವಾಗುವುದು. ಇಂಥಾ ಪ್ರಯೋಗದಲ್ಲಿ ಸಕರ್ಮಕ ಧಾತುಗಳನ್ನೇ ಉಪಯೋಗಿಸಬೇಕು—ಆದರೆ ಸಂಸ್ಕೃತಭಾಷೆಯಲ್ಲಿ ಇಂಥಾ ಸಕರ್ಮಕಧಾತುಗಳಲ್ಲಿ ಕೆಲವಕ್ಕೆ ಪ್ರಯೋಗವಿದ್ದಾಗ ಎರಡು ಕರ್ಮಗಳು ಇರುವುದುಂಟು. ಇವಕ್ಕೆ ದ್ವಿಕರ್ಮಗಳೆಂದು ಹೆಸರು ಇವುಗಳನ್ನು ಕರ್ಮಣಿಪ್ರಯೋಗದಲ್ಲಿ ಉಪಯೋಗಿಸಬೇಕಾದರೆ ಒಂದು ಕರ್ಮವನ್ನು ಪ್ರಥಮಾಂತವಾಗಿಯೂ ಮತ್ತೊಂದನ್ನು ದ್ವಿತೀಯಾಂತವಾಗಿಯೂ ಉಪಯೋಗಿಸಬೇಕು. ಇದೂ ಅಲ್ಲದೆ ಇನ್ನೂ ಕೆಲವು ವಿಶೇಷಗಳಿರುವುವು. ಅವನ್ನು ಸಂಸ್ಕೃತ ವ್ಯಾಕರಣದಿಂದ ತಿಳಿಯಬೇಕೇ ಹೊರತು ಇಲ್ಲಿ ತಿಳಿಸಲು ಅಸಾಧ್ಯವಾಗಿರುವುದರಿಂದಲೂ, ಅಮ್ಮ ಭಾಷೆಯಲ್ಲಿ ಪ್ರಯೋಜನವಿಲ್ಲದ್ದರಿಂದಲೂ ಅದನ್ನು ಇಲ್ಲಿ ಬರೆದಿಲ್ಲ.

ಆದರೆ ದ್ವಿತೀಯಾವಿಭಕ್ತಿಪ್ರಕರಣದಲ್ಲಿ ಕೆಲವು ಧಾತುಗಳಿದ್ದಾಗ ಎಂದರೆ, ಗುರು ವ್ಯಾಕರಣಮಂ ಶಿಷ್ಯಂ ಓದಿಸಿದನು ಇದು ಮೊದಲಾದ ಕೆಲವು ಪ್ರಯೋಗಗಳಲ್ಲಿ ವಿಕಲ್ಪದಿಂದ ಎರಡು ಕರ್ಮಗಳುಂಟೆಂದು ಹೇಳಿರುವುದರಿಂದ ಭಾಷೆಯಲ್ಲೂ ದ್ವಿಕರ್ಮಕಧಾತುಗಳಿವೆ ಎಂದು ಹೇಳಬಹುದು ಆದರೂ ಈಂಥಾ ಪ್ರಯೋಗಗಳು ಕೇವಲ ಹಳೆಗನ್ನಡ ಗ್ರಂಥಗಳಲ್ಲಿ ಇವೆಯೇ ಹೊರತು ಈಗಿನ ವ್ಯವಹಾರದಲ್ಲೂ ಹೊಸಗನ್ನಡದ ಗ್ರಂಥಗಳಲ್ಲೂ ಪ್ರಯೋಗಿಸುವ ವಾಡಿಕೆ ಇಲ್ಲದ್ದರಿಂದ ಅಂಥಾ ಸಂದರ್ಭದಲ್ಲಿ ಶಿಷ್ಯನಂ, ಎಂಬ ಕರ್ಮಕ್ಕೆ ಬದಲಾಗಿ ಶಿಷ್ಯನಿಂ ಎಂದು ಕರ್ತ್ರರ್ಥಕ ತೃತೀಯಾವಿಭಕ್ತಿಯನ್ನೇ ಉಪಯೋಗಿಸುವರು. ಮತ್ತು ಭಾಷೆಯಲ್ಲಿ ದ್ವಿಕರ್ಮಕಗಳಾಗಬೇಕಾದರೆ

ಭೂಗೋಳ ಪುಸ್ತಕವಿಲ್ಲದೇಲೆ ಪ್ರತ್ಯಕ್ಷವಾಗಿ ಕೆಲವು ಪ್ರಾಂತ್ಯಗಳನ್ನು ತೋರಿಸಿ, ಉಳಿದವುಗಳನ್ನು ಭೂಪಠದಲ್ಲಿ ತೋರಿಸಿ ಕಥೆಯನ್ನು ಹೇಳಿ ವಿದ್ಯಾರ್ಥಿಗಳಿಗೆ ಭೂಗೋಳಶಾಸ್ತ್ರ ಪರಿಚಯ ಉಂಟಾಗುವಂತೆ ಮಾಡುತ್ತಿದ್ದರು. ಈ ಪಾಠಕ್ರಮವನ್ನು ಒಂದಾನವರ್ಷ ವಸ್ಸೆಲಾಟ್ಸ್ಯವರು ಭೂಗೋಳ ಶಾಸ್ತ್ರೋಪದೇಶ ಮಾಡುವದಕ್ಕೋಸ್ಕರ ಬೋರ್ಡ್‌ನದಿ ಸವಿಾಪಕ್ಕೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋದರು. ಆದರಸವಿಾಪದ ಬೆಟ್ಟವನ್ನು ಕಣಿವೆಯನ್ನು ಅವರಿಗೆ ತೋರಿಸಿ ಅವುಗಳ ಶಿಖರದವೇಲೂ, ತಪ್ಪಲ್ಲಲ್ಲೂ ಕಣಿವೆಗಳಲ್ಲೂ ಅವರನ್ನು ತಿರುಗಿಸಿ ಅವುಗಳನ್ನು ನೋಡದೇ ಇರುವವರಿಗೂ ತಿಳಿಯುವಂತೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಆಜ್ಞೆ ಮಾಡಿದರು. ಆ ವಿದ್ಯಾರ್ಥಿಗಳೆಲ್ಲರೂ ಸೇರಿ ಜೇಡುಮಣ್ಣಿನಿಂದ ಅಲ್ಲಲ್ಲ ಬೆಟ್ಟಗುಡ್ಡಗಳು, ಕಣಿವೆಗಳು, ನಿರ್ಝರಗಳ ಪಂಕ್ತಿಗಳು, ನದಿ ಮೊದಲಾದವುಗಳನ್ನು ಮಾಡಿ ವೃಕ್ಷಗಳಿಗೆ ಬದಲಾಗಿ ಗಿಡದ ಕಾಂಡಗಳನ್ನು ನೆಟ್ಟು ಆ ಪ್ರದೇಶವನ್ನು ನೋಡಿದವರಿಗೆ ಇದು ಇಂಥಾ ಸ್ಥಳವೇ ಎಂದು ಸ್ಫುರಿಸುವಂತೆ ಮಾಡಿದರು. ಈ ರೀತಿಯಲ್ಲಿ ಸ್ಥಳಗಳನ್ನು ಸಾಕ್ಷಾತ್ತಾಗಿ ತೋರಿಸಿ ವಿದ್ಯಾರ್ಥಿಗಳಿಂದಲೇ ಭೂಪಠಗಳನ್ನು ಬರೆಸುತ್ತಲೂ, ಭೂಪಠಗಳನ್ನು ತೋರಿಸಿ ಅವುಗಳ ಚರಿತ್ರೆಯನ್ನು ಬೋಧಿಸುತ್ತ ಭೂಗೋಳಶಾಸ್ತ್ರವನ್ನು ಪ್ರಕಾಶಿಸಿದ ಚರಿತ್ರೆಯುಂತೆ ಸಮಗ್ರವಾಗಿ ತಿಳಿಸುತ್ತಿದ್ದರು.

ವ್ಯಾಕರಣಶಾಸ್ತ್ರ

ಹಿಂದಿನ ಸಂಚಿಕೆಯಲ್ಲಿ ತೃತೀಯಾವಿಭಕ್ತಿಯು ಸಾಮಾನ್ಯವಾಗಿ ಕರ್ತೃಕರಣಾದ್ಯರ್ಥಗಳಲ್ಲಿ ಪ್ರಯೋಗಿಸಲ್ಪಡುವುದೆಂದು ತಿಳಿಸಲ್ಪಟ್ಟಿತು. ಇಲ್ಲಿ ಅವುಗಳಿಗೆ ಕೆಲವು ಉದಾಹರಣೆಗಳು ತೋರಿಸಲ್ಪಡುವುವು (ಕರ್ತ್ರರ್ಥದಲ್ಲಿ ತೃತೀಯೆಯನ್ನು ಹೇಳಬೇಕಾದರೆ ಯಾವಾಗಲೂ ಕರ್ಮಣಿ, ಅಥವಾ ಭಾವೇ ಪ್ರಯೋಗಗಳನ್ನು ಮಾಡಬೇಕು.)

ಟಿಪ್ಪಣಿ.

ಕರಗತಿ III] [ಕಾಲ 50 ನಿವಿ.ಪಿ.

ಭೂವಿವರಣೆ

(ಹೈದರಾಬಾದ್ ರಾಜ್ಯ)

ಉಪಕರಣಗಳು—ಇಂಡಿಯಾಮ್ಯಾಪ್, ಬೋರ್ಡಿನಮೇಲೆ ಬರೆದ ಹೈದರಾಬಾದ್ ದೇಶದ ನಕ್ಷೆ.

ವಿಷಯ.	ಬೋಧನಾಕ್ರಮ
೧ ಹೈದರಾಬಾದು ದೇಶ— ೧ ಮೇರೆಗಳು. ಉತ್ತರಕ್ಕೆ—ಮಧ್ಯಪ್ರಾಂತ್ಯಗಳ ಪೂರ್ವಕ್ಕೆ—ಮದ್ರಾಸಾಧಿಪತ್ಯ ದಕ್ಷಿಣಕ್ಕೆ—ಮದ್ರಾಸಾಧಿಪತ್ಯ ಪಶ್ಚಿಮಕ್ಕೆ—ಬೊಂಬಾಯಾಧಿಪತ್ಯ	ಮ್ಯಾಪಿನ ಸಹಾಯದಿಂದ ಹೆಸರನ್ನು ಬಾಲಕರಿಂದಲೇ ಹೇಳಿಸುವುದು. ಮ್ಯಾಪಿನ ಸಹಾಯದಿಂದ ಮೇರೆಗಳನ್ನು ಬಾಲಕರಿಂದ ಹೇಳಿಸಿ ಬೋರ್ಡಿನ ಮೇಲೆ ಬರೆದಿರುವ ನಕ್ಷೆಯಲ್ಲಿ ಆಯಾಯ ಸ್ಥಳಗಳಲ್ಲಿ ಹೆಸರನ್ನು ಬರೆಯಿಸುವುದು. ಇ—೪ ಬಾಲಕರಿಂದ ಹೇಳಿಸುವುದು.
೨ ವಿಸ್ತೀರ್ಣ-ಜನಸಂಖ್ಯೆ. ೮೫೦೦೦ ಚದರಮೈಲಿ ೧೧೫೦೦೦೦೦ ಜನಸಂಖ್ಯೆ	ಮೈಸೂರು ದೇಶದ ಚದರಮೈಲಿಯನ್ನು ಜ್ಞಾಪಿಸಿ ಇದಕ್ಕೂ ಅದಕ್ಕೂ ಹೋಲಿಸಿ ಮೈಸೂರು ದೇಶಕ್ಕಿಂತ ಸುಮಾರು ೩ ಭಾಗ ಹೆಚ್ಚಾಗಿರುತ್ತೆಂದು ತಿಳಿಸುವುದು. ಮ್ಯಾಪಿನ ಸಹಾಯದಿಂದ ಎರಡು ದೇಶವನ್ನು ಹೋಲಿಸಿ ದೃಢಪಡಿಸುವುದು. ಮೈಸೂರು ದೇಶದ ಜನಸಂಖ್ಯೆಯನ್ನು ಜ್ಞಾಪಿಸಿ ಇದಕ್ಕೂ ಅದಕ್ಕೂ ಹೋಲಿಸಿ ಮೈಸೂರು ದೇಶದಲ್ಲಿರುವ ಜನಕ್ಕಿಂತ ಸುಮಾರು ೧/೩ ಭಾಗ ಜನ ಹೆಚ್ಚಾಗಿರುತ್ತಾರೆಂದು ತಿಳಿಸುವುದು.

ತಿಸುಪ್ರತ್ಯಯವನ್ನು ಶುದ್ಧಧಾತುವಿಗೆ ಸೇರಿಸಿಕೊಳ್ಳಬೇಕಾಗಿ ಬರುವುದಿಲ್ಲ. ಅಂಥಾ ಸಂದರ್ಭದಲ್ಲಿ ಮೇಲಿಹೇಳಿದ ಪ್ರಯೋಗದಲ್ಲಿ ಶಿಷ್ಯನು ಪ್ರಯೋಜ್ಯನಾಗಿಯೂ, ಗುರು ಪ್ರಯೋಜಕನಾಗಿಯೂ ಇರುವುದರಿಂದ ಇಬ್ಬರೂ ಕರ್ತೃಗಳೇ ಆಗಿರುವುದರಿಂದ ಅಲ್ಲಿ ತೃತೀಯಾವಿಭಕ್ತಿಯೇ ಬರುವುದು.

ಹೀಗೆ ಸಂಸ್ಕೃತದಲ್ಲಿ ಭಾವೆಪ್ರಯೋಗವೆಂದು ಇರುವುದು. ಇದರಲ್ಲೂ ಭಾವಾರ್ಥದಲ್ಲಿ ಆಖ್ಯಾತಪ್ರತ್ಯಯವು ಬರಬಹುದು. ಅದರಿಂದ ಇಲ್ಲಿ ಕರ್ತೃದಲ್ಲಿ ತೃತೀಯೆ ಬರುವುದು. ಆದರೆ ಭಾಷೆಯಲ್ಲಿ ಕರ್ತೃರ್ಥದಲ್ಲೂ, ಕರ್ಮಾರ್ಥದಲ್ಲೂ ಆಖ್ಯಾತಪ್ರತ್ಯಯಗಳನ್ನು ಹೇಳಿರುವುದರಿಂದ ಭಾವಾರ್ಥದ ಆಖ್ಯಾತಪ್ರತ್ಯಯಗಳಿಲ್ಲದ್ದರಿಂದ ಭಾವೇ ಪ್ರಯೋಗವಿಲ್ಲವೆಂದು ಪೂರ್ವಿಕರಾದ ಕನ್ನಡ ವೈಯಾಕರಣರು ಹೇಳುತ್ತಾರೆ. ಈಗಿನವರು ಕೆಲವರು ಸಂಸ್ಕೃತಭಾಷೆಯ ಅಭ್ಯಾಸದ ಸಂಸ್ಕಾರದಿಂದ ಭಾಷೆಯಲ್ಲೂ ಓಣ ಎಂಬ ಒಂದು ಪ್ರತ್ಯಯವನ್ನು ಕಲ್ಪಿಸಿಕೊಂಡು ಭಾವೆ ಪ್ರಯೋಗವುಂಟೆಂದು ಹೇಳುತ್ತಾರೆ. ಇದು ವ್ಯವಹರಿಸುವುದಕ್ಕೆ ಅಷ್ಟು ಜೆನ್ನಾಗಿಲ್ಲವಾದುದರಿಂದ ಪೂರ್ವವೈಯಾಕರಣರಾರೂ ಹೇಳಲಿಲ್ಲ. ಒದ್ದರಿಂದ ಈಗಿನ ಗ್ರಂಥಕಾರರೂ ಅದನ್ನು ಪ್ರಚುರವಾಗಿ ಪ್ರಯೋಗಿಸುವುದಿಲ್ಲ.

ನೂತನಭಾಷೆಯುಲ್ಲಾದರೂ ಕರ್ಮಾರ್ಥದ ಆಖ್ಯಾತಪ್ರತ್ಯಯಗಳನ್ನು ಸಕರ್ಮಕಧಾತುಗಳಮೇಲೂ, ಭಾವಾರ್ಥದ ಆಖ್ಯಾತಪ್ರತ್ಯಯಗಳನ್ನು ಅಕರ್ಮಕಧಾತುಗಳಮೇಲೂ, ಮಾಡಬೇಕು.

ಇಂಥಾ ಪ್ರಯೋಗಗಳಲ್ಲಿ ಕರ್ತೃಸಾಮಾನ್ಯದಲ್ಲಿ ತೃತೀಯಾವಿಭಕ್ತಿಯನ್ನು ಉಪಯೋಗಿಸಬೇಕೆಂದು ಶಾಸ್ತ್ರದಲ್ಲಿ ಹೇಳಿರುವುದರಿಂದಲೂ, ಹಾಗೆಯೇ ಲೋಕವ್ಯವಹಾರದಲ್ಲೂ ಇರುವುದರಿಂದಲೂ ಇಲ್ಲಿ ಸಾಮಾನ್ಯವಾಗಿ ತೃತೀಯಾವಿಭಕ್ತಿಗೆ ಉದಾಹರಣೆಯು ಕೊಡಲ್ಪಟ್ಟಿರುವುದು.

೪ ಪಟ್ಟಣಗಳು-ಅಲ್ಲಿನ ವಿಶೇಷಗಳು—	
೧ ಹೈದರಾಬಾದು—ವಾಡಿ ಎಂಬ ಸ್ಟೇಷನಿಂದ ಸ್ಟೇಟ್‌ರೈಲ್ವೆ ಇರುತ್ತೆ.	ಈ ಪಟ್ಟಣಗಳನ್ನು ಮ್ಯಾಪಿನಲ್ಲಿ ತೋರಿಸಿದನಂತರ ಬೋರ್ಡಿನವೇಲೆ ಬರೆದಿರುವ ನಕ್ಷೆಯಲ್ಲಿ ಈ ಪಟ್ಟಣಗಳ ಗುರ್ತನ್ನು ಮಾಡಿಸುವುದು.
೨ ಸೆಕೆಂದರಾಬಾದು—ಇಂಡಿಯಾದೊಳಗೆಲ್ಲಾ ದೊಡ್ಡ ಲಕ್ಕರು ಇರುತ್ತೆ.	ಹೆಸರುಗಳನ್ನು ಬರೆಯುದಿರುವ ಈ ಗುರ್ತನ್ನು ನೋಡಿದೊಡನೆ ಆ ಪಟ್ಟಣದ ಹೆಸರು ಅಲ್ಲಿನ ವಿಶೇಷಗಳು ಜ್ಞಾಪಕಕ್ಕೆ ಬರುವಂತೆ ೩—೪ ಬಾಲಕರಿಂದ ಹೇಳಿಸಿ ವೃಢಪಡಿಸುವುದು. ಪಟ್ಟಣಗಳನ್ನೂ ಅಲ್ಲಿನ ವಿಶೇಷಗಳನ್ನೂ ಬೋರ್ಡಿನವೇಲೆ ಬರೆಯುವುದು.
೩ ಬೊಲಾರಂ—ನಿಸಾಮರ ಸೈನ್ಯವಿದೆ.	
೪ ರಾಯಿಚೂರು—ಮದ್ರಾಸು, ಬೊಂಬಾಯಿ ರೈಲ್ವೇಗಳು ಸೇರುವಸ್ಥಳ.	
೫ ಔರಂಗಾಬಾದು— ಔರಂಗಸೀಬನ ಅರಮನೆ ಇದೆ.	ಪುನರಾವರ್ತನ ಮಾಡಿಸುವುದು.
೬ ದೌಲತಾಬಾದು—ಗಟ್ಟಿಯಾದ ಕೋಟೆ ಇರುತ್ತೆ	
೭ ನಂದೇರು—ಸಿಕ್ಕರ ಯಾತ್ರಾಸ್ಥಳ.	
೮ ಓರಗಲ್—ತೆಲುಗಾಣ್ಯದೇಶದ ರಾಜಧಾನಿಯಾಗಿತ್ತು.	ಒಟ್ಟು ಪುನರಾವರ್ತನ ಮಾಡಿಸುವುದು.
೯ ಬಿದರೆ ೧೦ ಗುಲ್ಬರ್ಗ } ಮುಸಲ್ಮಾನರ ರಾಜಧಾನಿಯಾಗಿತ್ತು.	
೧೧ ಕಲ್ಯಾಣ—ಚಾಲುಕ್ಯರ ರಾಜಧಾನಿಯಾಗಿತ್ತು.	

ಜೆ. ರಾಮಯ್ಯ,

ತಲಕಾಡು ಕನ್ನಡಸ್ಕೂಲ್ ಹೆಡ್‌ಮಾಸ್ಟರ್,

ತಿರುಮಕೂಡಲ್ ನರಸೀಪುರ ತಾಲ್ಲೂಕು.

[ಜಡರವೈಲಿ, ಜನಸಂಖ್ಯೆಗಳನ್ನು ಬೋರ್ಡಿನಮೇಲೆ ಬರೆಯುವುದು]

ಪುನರಾವರ್ತನ ಮಾಡಿಸುವುದು—

೨ ನದಿಗಳು—

೧ ಗೋದಾವರಿ
೨ ಕೃಷ್ಣ
೩ ಪಾಣ್ಣಹಿಂತ
೪ ಮಂಜೀರ-

ವ್ಯಾಪಿನ ಸಹಾಯದಿಂದ ಇವುಗಳ ಹೆಸರನ್ನು ಬೊಲಕರಿಂದ ಹೇಳಿಸಿ ಬೋರ್ಡಿನಮೇಲಿರುವ ನಕ್ಷೆಯಲ್ಲಿ ಇವುಗಳ ಗುರ್ತನ್ನು ಮಾಡಿಸುವುದು. ಈ ಗುರ್ತನ್ನು ನೋಡಿದಮಾತ್ರಕ್ಕೆ ಆ ನದಿಯ ಹೆಸರು ಜ್ಞಾಪಕಕ್ಕೆ ಬರುವಂತೆ ೩—೪ ಬಾಲಕರಿಂದ ಹೇಳಿಸುವುದು.

ನದಿಗಳ ಹೆಸರನ್ನು ಬೋರ್ಡಿನಮೇಲೆ ಬರೆಯುವುದು.

೩ ರಾಜ್ಯಭಾರಕ್ರಮ—

೧ ಆಶ್ರಿತಸಂಸ್ಥಾನ—

ಇದರ ಅರ್ಥವನ್ನು ಬೋರ್ಡಿನಮೇಲೆ ಬರೆಯಿಸಿ ೪—೫ ಮಂದಿ ಬಾಲಕರಿಂದ ಹೇಳಿಸಿ ದೃಢಪಡಿಸುವುದು.

೨ ನಿಸಾಮರೆಂಬ ಮುಸಲ್ಮಾನ ರಾಜರ ಆಳ್ವಿಕೆಯಲ್ಲಿದೆ.

೩ ರಾಜಧಾನಿ—ಹೈದರಾಬಾದು—

೪ ಬ್ರಿಟಿಷ್ ರೆಸಿಡೆಂಟರವರು ಇರುತ್ತಾರೆ.

೫ ಈ ರೆಸಿಡೆಂಟರವರೇ ಬೀರಾನ ಚೀಫ್‌ಕಮಿಷನರ್ ಆಗಿರುತ್ತಾರೆ.

ಮೈಸೂರು ದೇಶದ ಮಹಾರಾಜರ ಹೆಸರನ್ನೂ ರಾಜಧಾನಿಯನ್ನೂ ರೆಸಿಡೆಂಟರವರು ಇರುವುದನ್ನೂ ಜ್ಞಾಪಿಸಿ ಆ ರಾಜ್ಯದಂತೆಯೇ ಇರುತ್ತೆಂಬವನ್ನು ತಿಳಿಸುವುದು.

ಮೈಸೂರು ದೇಶದ ರೆಸಿಡೆಂಟರವರು ಕೊಡಗಿನ ಚೀಫ್‌ಕಮಿಷನರ್ ಆಗಿರುವುದನ್ನು ಜ್ಞಾಪಿಸುವುದು.

೪ ಗದ್ವಾಲದ ಮಹಾರಾಜರು ಈ ನಾಬರಿಗೆ ೧ ಲಕ್ಷ ೧೫ ಸಾವಿರರೂಪಾಯಿ ಪೊಗದಿ ಕೊಡುತ್ತಾರೆ.

ಮೈಸೂರು ಮಹಾರಾಜರು ಬ್ರಿಟಿಷ್‌ನವರಿಗೆ ಕೊಡುವಂತೆ ಎಂಬವನ್ನು ಜ್ಞಾಪಿಸುವುದು.

ಪುನರಾವರ್ತನ ಮಾಡಿಸುವುದು.

ಇವುಗಳೆಲ್ಲಾ ಅನೇಕ ಸಾವಯವನಿರವಯವ-ಪದಾರ್ಥಗಳ ಸಂಯೋಗದಿಂದ ಆಗಿವೆ ಸಾವಯವಪದಾರ್ಥಗಳಲ್ಲಿ ಸಸಾರಜನಕ, ಮೇದಸ್ಸು, ಶರ್ಕರಪಿಷ್ಟಾದಿಗಳೇ ಮುಖ್ಯವಾದವು. ನಿರವಯವ ಪದಾರ್ಥಗಳಲ್ಲಿ ಆವ್ಲಜನಕ, ಜಲಜನಕ, ಇಂಗಾಲ ಗಂಧಕ, ಪಾಸ್‌ಪರಸ್ (ರಂಜಕ) ಸೋಡಿಯಂ, ಪೊಟಾಸಿಯಂ, ಕ್ಯಾಲ್ಸಿಯಂ, ಮ್ಯಾಗ್ನೀಷಿಯಂ, ಕಬ್ಬಿಣ, ವಾಯು, ನೀರ, ಆಮೋನಿಯಾ, ಇಂಗಾಲಾಮ್ಲ ಮೊದಲಾದವೇ ಮುಖ್ಯವಾದವು.

ರಕ್ತಪರಿಚಲನೆ.

ನಮ್ಮ ಚರ್ಮವನ್ನು ಒಂದು ಸೂಜಿಯಿಂದ ಚುಚ್ಚಿದರೆ ಕೆಂಪಾಗಿರುವ ದ್ರವವು ಹೊರಗೆ ಬರುವುದು. ಈ ದ್ರವಕ್ಕೆ ರಕ್ತವೆಂದು ಹೆಸರು. ಇದರಲ್ಲಿ ಕ್ಷಾರಸ್ವಭಾವವುಳ್ಳ ರಸವೂ ರಕ್ತಕಣಗಳೂ ಇವೆ. ಈ ಕಣಗಳಲ್ಲಿ ಕೆಲವು ಕೆಂಪಾಗಿಯೂ, ಕೆಲವು ಬಿಳುಪಾಗಿಯೂ ಇವೆ. ಆದರೆ ರಕ್ತದಲ್ಲಿ ಕೆಂಪುರಕ್ತ ಕಣಗಳೇ ಹೆಚ್ಚಾಗಿವೆ. ಇವುಗಳಿಂದಲೇ ರಕ್ತವು ಕೆಂಪಾಗಿ ಕಾಣುತ್ತದೆ. ರಕ್ತವು ದೇಹದಲ್ಲಿ ಎಲ್ಲಾ ಕಡೆಯಲ್ಲೂ ಯಾವಾಗಲೂ ಸುತ್ತುತಿರುತ್ತದೆ; ಅದು ಮೊದಲು ಹೃದಯದಿಂದ ಹೊರಟು ಶುದ್ಧರಕ್ತನಾಳಗಳ ಮಾರ್ಗವಾಗಿ ಹರಿದು ಶರೀರದಲ್ಲೆಲ್ಲಾ ಸುತ್ತಿಕೊಂಡು ಪುನಃ ರೋಮನಾಳಗಳಲ್ಲಿ ಪ್ರವಹಿಸಿ ಮಲಿನ ರಕ್ತನಾಳಗಳನ್ನು ಹೊಕ್ಕು ಹೃದಯಕ್ಕೆ ಬಂದು ಸೇರುತ್ತದೆ. ಈ ರೀತಿಯಾಗಿ ರಕ್ತ ಸುತ್ತುವುದಕ್ಕೆ ರಕ್ತಪರಿಚಲನವೆಂದು ಹೆಸರು. ಪರಿಚಲನವೆಂದರೆ ಸುತ್ತುಕೊಂಡು ಬರುವುದೆಂದು ಅರ್ಥ.

ರಕ್ತ ಪರಿಚಲನೆಗೆ ಕಾರಣವಾದ ಹೃದಯವು ಮಾಂಸಖಂಡಗಳಿಂದ ಮಾಡಲ್ಪಟ್ಟ ಪೊಳ್ಳಾದ ಅಂಗವಾಗಿದೆ. ಇದು ಎದೆಯಲ್ಲಿ ಎಡಗಡೆ ಇದೆ. ಇದರ ಎರಡು ಕಡೆಯಲ್ಲೂ ಶ್ವಾಸಕೋಶಗಳಿವೆ. ಇದರ ಕೆಳಭಾಗವು ಎಡೆಗೆ ತಿರುಗಿಕೊಂಡಿದೆ. ಇದು ಆಕೃತಿಯಲ್ಲಿ ಒಂದು ಮಾವಿನಕಾಯಿ ಪಟವಾಗಿ ಮನುಷ್ಯನ ಹಿಡಿಯಷ್ಟು ಗಾತ್ರವಾಗಿರುವುದು. ಹೃದಯದ ಒಳಗಡೆಯಲ್ಲಿ ಮೇಲಿನಿಂದ ಕೆಳಗಣವರೆಗೂ ಒಂದು ಪೊರೆ ಇದೆ ಇದು ಹೃದಯವನ್ನು ಎಡಬಲಭಾಗಗಳಾಗಿ ಭಾಗಿಸುತ್ತದೆ. ಈ ಭಾಗಗಳು ಪುನಃ ಮೇಲು ಕೆಳಭಾಗಗಳಾಗಿ ಭಾಗಿಸಲ್ಪಟ್ಟಿವೆ. ಇವುಗಳ ಮೇಲ್ಭಾಗಗಳಿಗೆ ಹೃತ್ಕರ್ಣಗಳೆಂದೂ ಕೆಳಭಾಗಗಳಿಗೆ ಹೃತ್ಕುಕ್ಷಿಗಳೆಂದೂ ಹೆಸರು. ಹೃತ್ಕರ್ಣಗಳಿಂದ ಹೃತ್ಕುಕ್ಷಿಗಳಿಗೆ ರಕ್ತವು ಬರುವಹಾಗೆ ಒಂದು ವಿಧವಾದ ಬಾಗಿಲುಗಳು

ಆರೋಗ್ಯಶಾಸ್ತ್ರ.

ಶರೀರದ ಪ್ರತ್ಯೇಕವಾಯವೂ ಅದರ ಅದರ ಕೆಲಸಗಳನ್ನು ಸರಿಯಾಗಿ ನಡೆಯಿಸಿಕೊಂಡಿರುವ ಸ್ಥಿತಿಯು ಆರೋಗ್ಯವೆನ್ನಿಸುವುದು : ಎಂದರೆ ಕ್ರಮವಾದ ಶ್ವಾಸೋಚ್ಛ್ವಾಸಗಳೂ, ರಕ್ತದ ಸಂಚಾರವೂ, ಜೀರ್ಣಶಕ್ತಿಯೂ, ಕಾಲಕಾಲಕ್ಕೆ ಮಲಮೂತ್ರಾದಿ ವಿಸರ್ಜನೆಗಳೂ ಆಗುತ್ತಿದ್ದರೆ ಸಾಮಾನ್ಯವಾಗಿ ಆರೋಗ್ಯಸ್ಥಿತಿಯೆಂದು ಹೇಳಬಹುದು. ಹಾಗಲ್ಲದೆ ಮೇಲೆಹೇಳಿದವುಗಳಲ್ಲಿ ಯಾವತೆರದ ವ್ಯತ್ಯಾಸವಿದ್ದರೂ ಅದು ಅನಾರೋಗ್ಯವೆಂದು ಎಣಿಸಬೇಕು. ನಿರ್ಮಲವಾಯು, ಪರಿಶುದ್ಧವಾದ ನೀರು, ಒಳ್ಳೇ ಆಹಾರ ಇವೇ ಮೊದಲಾದವು ಆರೋಗ್ಯಕ್ಕೆ ಕಾರಣವು. ಅನಾರೋಗ್ಯಕ್ಕೆ ಇವುಗಳ ವ್ಯತ್ಯಾಸವೇ ಕಾರಣವಾಗಿರುತ್ತದೆ. ಈ ಕಾರಣಗಳನ್ನು ತಿಳಿದು ಅವುಗಳಿಂದ ಉಂಟಾದ ದೋಷಗಳನ್ನು ತಪ್ಪಿಸುವ ಉಪಾಯವನ್ನು ಬೋಧಿಸುವ ಶಾಸ್ತ್ರಕ್ಕೆ ಆರೋಗ್ಯಶಾಸ್ತ್ರವೆಂದು ಹೆಸರು.

ಈ ಆರೋಗ್ಯಶಾಸ್ತ್ರವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಮೊದಲು ದೇಹದ ಸ್ವರೂಪವನ್ನೂ ಅವಯವಗಳ ವ್ಯಾಪಾರಗಳನ್ನೂ ಗಾಳಿ, ನೀರು, ಆಹಾರ ಮೊದಲಾದವುಗಳಿಂದ ಉಂಟಾಗುವ ಪ್ರಯೋಜನಗಳನ್ನೂ ತಿಳಿದುಕೊಳ್ಳುವುದು ಅವಶ್ಯಕವು. ಅದುದರಿಂದ ಇವುಗಳನ್ನು ಕ್ರಮವಾಗಿ ವಿವರಿಸುತ್ತೇವೆ.

ನಮ್ಮ ಶರೀರವು ರುಂಡ ಮುಂಡ ಕೈ ಕಾಲುಗಳೆಂಬ ವಿಭಾಗವುಳ್ಳುದಾಗಿದೆ. ರುಂಡದಲ್ಲಿ ಮೆದಳು ಮೆದಳುಬಳ್ಳಿ, ಕಣ್ಣುಗಳು, ಮೂಗು, ಬಾಯಿ, ಕಿವಿ ಇವೇ ಮೊದಲಾದವು ಇವೆ. ಮುಂಡವು ಎದೆ ಹೊಟ್ಟೆಯೆಂದು ಎರಡುಬಾಗವುಳ್ಳುದಾಗಿದೆ. ಎರಡುಭಾಗಗಳ ಮಧ್ಯದಲ್ಲಿ ಒಳಗಡೆ ವಪೆ ಎಂಬ ಒಂದು ತೆಳುವಾದ ಮಾಂಸದ ಪೊರೆ ಇದೆ. ಎದೆಯಲ್ಲಿ ರಕ್ತಸಂಚಾರಕ್ಕೆ ಮುಖ್ಯವೆಯುವಾದ ಹೃದಯವೂ ಅದರ ಎರಡು ಪಾರ್ಶ್ವಗಳಲ್ಲಿ ಶ್ವಾಸಕೋಶಗಳೂ, ಶ್ವಾಸನಾಳವೂ, ಅನ್ನನಾಳವೂ ಇವೆ. ಇವುಗಳಲ್ಲಿ ಅನ್ನನಾಳವು ಮೇಲೆಹೇಳಿದ ವಪೆಯನ್ನು ದಾಟಿಕೊಂಡು ಕೆಳಗೆ ಇಳಿದು ಅಲ್ಲಿ ಅನ್ನಾಶಯ ಕರುಳುಗಳು, ಎನಿಸಿಕೊಳ್ಳುತ್ತದೆ.

ಇವುಗಳಲ್ಲದೆ ನಮ್ಮ ಶರೀರದಲ್ಲಿ ತ್ವಕ್ಕು, ಮೇದಸ್ಸು, ಮಾಂಸಖಂಡ, ನರಗಳು, ರಕ್ತನಾಳಗಳು, ಅಸ್ಥಿ, ಮೃದ್ವಸ್ಥಿ ಮತ್ತು ಸಂಯೋಜಕವಸ್ತುಗಳಿವೆ.

ಸಂಕುಚಿಸುತ್ತದೆ. ಅದರ ಸಂಕೋಚನದಿಂದ ರಕ್ತವು ಮುಂದಕ್ಕೆ ನೂಕಲ್ಪ ಒಂದು ದೊಡ್ಡ ನಾಳವ ಮಾರ್ಗದಾಗಿ ಶ್ವಾಸಕೋಶಗಳಿಗೆ ಹೋಗುತ್ತದೆ. ಸಂಚರಿಸುವ ವಾಯುವಿನಿಂದ ಅಮ್ಲಜನಕವನ್ನು ತೆಗೆದುಕೊಂಡು ಅದಕ್ಕೆ ತನ್ನಲ್ಲಿರ್ದ ಕಶ್ಮಲಗಳನ್ನು ಕೊಟ್ಟು ಶುದ್ಧಿಯಾಗಿ ಅಲ್ಲಿಂದ ಹರಿದು ಹೃದಯದ ಎಡಭಾಗದ ಹೃತ್ಕರ್ಣಕ್ಕೆ ಬಂದು ಸೇರುತ್ತವೆ. ಕೂಡಲೆ ಇದು ಸಂಕುಚಿಸುತ್ತದೆ. ಆದುದರಿಂದ ಶುದ್ಧ ರಕ್ತವು ನೂಕಲ್ಪಟ್ಟು ಎಡಭಾಗದ ಹೃತ್ಕುಕ್ಷಿಗೆ ಬೀಳುತ್ತದೆ. ಇಲ್ಲಿಂದ ಪುನಃ ರಕ್ತವು ಮೇಲಾಭಾಗಕ್ಕೆ ಹೋಗದ ಹಾಗೆ ಬಾಗಿಲುಗಳು ಮುಚ್ಚಿಕೊಳ್ಳುತ್ತವೆ. ಈ ಹೃತ್ಕುಕ್ಷಿಯು ಸಂಕೋಚನದಿಂದ ನೂಕಲ್ಪಟ್ಟ ರಕ್ತವು ಅಯೋರ್ಟಾ ಎಂಬ ದೊಡ್ಡ ಶುದ್ಧನಾಳಕ್ಕೆ ಸೇರುತ್ತದೆ. ಅಲ್ಲಿಂದ ಮುಂದೆ ಇದು ಅನೇಕ ಭಾಗಗಳಾಗಿ ಒಡೆದು ಬೇರೆಬೇರೆ ನಾಳಗಳಲ್ಲಿ ತಲೆ, ತೋಳು ಜೀರ್ಣಾದಿ ಅಂಗಗಳಿಗೆ ಹೋಗುತ್ತದೆ. ಹೀಗೆ ಶರೀರದ ಎಲ್ಲಾ ಭಾಗಗಳಿಗೂ ಹರಿದು ಅವುಗಳಿಗೆ ಅವಶ್ಯಕವಾದ ಪೋಷಣಾದ್ರವ್ಯಗಳನ್ನು ಕೊಟ್ಟು ಅವುಗಳಲ್ಲಿ ಉತ್ಪತ್ತಿಯಾದ ಕಶ್ಮಲಗಳನ್ನೆಲ್ಲಾ ಹೊತ್ತು ಪುನಃ ಹೃದಯದ ಬಲಗಡೆ ಮೇಲಾಭಾಗಕ್ಕೆ ಬಂದು ಸೇರುತ್ತದೆ. ಹೀಗೆ ರಕ್ತವು ಸರ್ವದಾ ಸುತ್ತುತ್ತಿರುವುದರಿಂದ ಇದಕ್ಕೆ ರಕ್ತಪರಿಚಲನೆ ಎಂದು ಹೆಸರಾಯಿತು.

ನಾವು ಮೇಲೆ ರಕ್ತಸಂಚಾರಕ್ಕೆ ಶುದ್ಧರಕ್ತನಾಳಗಳೂ ಲೋಮನಾಳಗಳೂ ಮತ್ತು ಮಲಿನರಕ್ತವಾಹಿನಿಗಳೂ ಮುಖ್ಯ ಅವಯವಗಳೆಂದು ಹೇಳಿದೆವು. ಈ ರಕ್ತನಾಳಗಳ ಹಾಗೆಯೇ ಇನ್ನೊಂದು ವಿಧವಾದ ಸೂಕ್ಷ್ಮನಾಳಗಳಿವೆ. ಇವುಗಳು ಸೂಕ್ಷ್ಮರಕ್ತನಾಳಗಳ ಸಂಗಡಲೇ ಇವೆ. ಇವುಗಳನ್ನು ಮೇದೋವಾಹಿನಿ (ರಸಾಯಿನಿಗಳು) ಎಂದು ಕರೆಯುತ್ತಾರೆ. ಇವುಗಳಿಗೂ ರಕ್ತನಾಳಗಳಿಗೂ ಸ್ವಲ್ಪ ವ್ಯತ್ಯಾಸವುಂಟು. ದೊಡ್ಡ ರಕ್ತನಾಳಗಳು ಕವಲಾಗಿ ಒಡಿಯುವುದರಿಂದ ಸೂಕ್ಷ್ಮ ರಕ್ತನಾಳಗಳು ಉಂಟಾಗುತ್ತವೆ. ಇವುಗಳು ಹಾಗಲ್ಲ. ಇವು ಲೋಮನಾಳಗಳ ಹಾಗೆ ದೊಡ್ಡ ನಾಳಗಳಾಗಿ ಒಟ್ಟು ಸೇರುತ್ತವೆ. ಕೊನೆಯಲ್ಲಿ ಮಲಿನವಾಹಿಗಳಂತೆ ಹೃದಯದ ಬಲಗಡೆ ಮೇಲಾಭಾಗಕ್ಕೆ ಸೇರುತ್ತದೆ. ಮೇದೋವಾಹಿನಿಗಳು ಸತ್ತು ಇರುವ ಲೋಮನಾಳಗಳಿಂದ ಜೀವಿಗಳಿರುವ ಪದಾರ್ಥಗಳನ್ನು ತೆಗೆದುಕೊಂಡು ಶರೀರ ಸಾಮಗ್ರಿಗಳಿಗೆ ಕೊಟ್ಟು ಪೋಷಿಸುತ್ತವೆ. ಶರೀರದಲ್ಲಿ ಈ ಲೋಮನಾಳಗಳಿಗೆ ಸಂಬಂಧಪಟ್ಟ ಗ್ರಂಥಿಗಳು ಇವೆ. ಅಲ್ಲಿಂದ ಮೇದೋವಾಹಿನಿಗಳು ಉತ್ಪತ್ತಿಯಾಗುವವು.

ವೆ. ಇವು ಕೆಳಗಡೆಗೆ ತೆರಿಯುತ್ತವೆ. ಅವರೆ ಹೃತ್ಪುಟಿಗಳಿಂದ ಹೃತ್ಕರ್ಣಗಳಿಗೆ ರಕ್ತ ವೀರದ ಹಾಗೆ ಮುಚ್ಚಿ ಕೊಳ್ಳುತ್ತವೆ.

ಶರೀರದ ಎಲ್ಲಾ ಭಾಗಕ್ಕೂ ಶುದ್ಧ ರಕ್ತವನ್ನು ತಗದುಕೊಂಡು ಹೋಗುವ ನಾಳಗಳಿಗೆ ಶುದ್ಧ ರಕ್ತನಾಳಗಳೆಂದೂ, ಶರೀರದ ಎಲ್ಲಾ ಭಾಗಗಳಿಂದ ಕಶ್ಮಲ ಮಿಶ್ರ ವಾದ ರಕ್ತವನ್ನು ತೆಗೆದುಕೊಂಡು ಬರುವ ರಕ್ತನಾಳಗಳಿಗೆ ಮಲಿನ ರಕ್ತನಾಳಗಳೆಂದೂ ಶುದ್ಧರಕ್ತನಾಳಗಳಿಗೂ ಮಲಿನರಕ್ತನಾಳಗಳಿಗೂ ಮಧ್ಯೆ ಬಹಳ ಕವಲುಕವಲಾಗಿ ಹಬ್ಬಿರುವ ಸಣ್ಣ ನಾಳಗಳಿಗೆ ಲೋಮನಾಳಗಳೆಂದೂ ಹೆಸರು. ಈ ಲೋಮನಾಳ ಗಳು ಬಹಳ ತೆಳುವಾದ ಪೊರೆಯುಳ್ಳವುಗಳಾದುದರಿಂದ ಇವುಗಳ ಒಳಗಿರುವ ಪದಾರ್ಥಗಳು ಹೊರಗೆ ಜನುಗುತ್ತವೆ.

ಮತ್ತು ಇವುಗಳ ಸುತ್ತುಮುತ್ತಲಿನ್ದ ಭಾಗಗಳಿಂದ ಕೆಲವು ಪದಾರ್ಥಗಳು ಇವುಗಳೊಳಕ್ಕೆ ದೂರಿಕೊಂಡು ಬಂದು ಸೇರುತ್ತವೆ ಈ ಲೋಮನಾಳಗಳ ಮುಖಾಂತರವೇ ನಮ್ಮ ಶರೀರಪುಷ್ಟಿಗೆ ಬೇಕಾದ ಪೋಷಣಾದ್ರವ್ಯಗಳು ಶರೀರದ ಎಲ್ಲಾ ಭಾಗಗಳಿಗೂ ಹೋಗಿ ಸೇರುತ್ತವೆ. ಅಲ್ಲದೆ ಎಲ್ಲಾ ಭಾಗಗಳಲ್ಲಿಯೂ ಉಂಟಾಗುವ ಕಲ್ಮಷಗಳು ಹೊರಗೆ ತೆಗೆದುಹಾಕಲ್ಪಡುತ್ತವೆ ಈ ಲೋಮನಾಳಗಳೆಲ್ಲಾ ಕೂಡಿ ಕೊನ್ತೆದೊಡ್ಡ ನಾಳಗಳಾಗುತ್ತವೆ. ಇವುಗಳಲ್ಲಿ ಕಲ್ಮಷ ಮಿಶ್ರವಾದ ರಕ್ತವು ಪ್ರವಹಿಸುವುದರಿಂದ ಇವುಗಳಿಗೆ ಮಲಿನರಕ್ತನಾಳಗಳೆಂದು ಹೆಸರಾಯಿತು.

ರಕ್ತವು ನಮ್ಮ ದೇಹದಲ್ಲಿ ಸದಾ ಚಲಿಸುತ್ತದೆ. ಇದನ್ನು ನಾವು ಬಹಳ ಸುಲಭವಾಗಿ ತಿಳಿಯಬಹುದು. ಹೇಗೆಂದರೆ, ರಕ್ತಪರಿಚಲನೆ ನಿಂತ ಕೂಡಲೇ ಕೈ ಕಾಲುಗಳು ತಣ್ಣಗೆ ಆಗುವವು. ಮತ್ತು ಶರೀರದಲ್ಲಿ ನಡೆಯುತಕ್ಕ ಕೆಲಸಗಳೆಲ್ಲಾ ನಿಂತುಹೋಗುವವು. ಮಾಂಸಖಂಡಗಳು ಸ್ವಭಾವವಾಗಿ ಸಂಕೋಚನಾಶಕ್ತಿ ಉಳ್ಳ ವಾಗಿವೆ. ಹೃದಯದ ಮಾಂಸಖಂಡಗಳ ಸಂಕೋಚನದಿಂದಲೇ ರಕ್ತಸಂಚಾರವು ನಡೆಯುತ್ತದೆ. ಹೃದಯದ ಬಲಭಾಗದ ಹೃತ್ಕರ್ಣದ ಸಂಕೋಚನದಿಂದ ಅಲ್ಲಿನ ರಕ್ತವು ನೂಕಲ್ಪಟ್ಟು ಅದೇ ಭಾಗದ ಹೃತ್ಪುಕ್ಷಿಗೆ ಬಂದು ಬೀಳುತ್ತದೆ. ಈ ಹೃತ್ಪುಕ್ಷಿಯು ರಕ್ತದಿಂದ ತುಂಬಿದ ಕೂಡಲೆ ರಕ್ತವು ಮೇಲಾಭಾಗಕ್ಕೆ ಪುನಃ ಹೋಗದ ಹಾಗೆ ಇವುಗಳ ಮಧ್ಯೆ ಇರುವ ಬಾಗಿಲು ತಡೆಮಾಡುತ್ತವೆ. ಬಳಿಕ ಹೃತ್ಪುಕ್ಷಿಯು

ರಾಗ :—ಹಂಗಲ್ (ಅರಳಿದಮಲ್ಲಿಗೆ ಎಂಬಂತೆ)

ಕೊಡುವೆನು ನಿನ್ನಯ ಬಲಗೈಗಿದನಾಂ ! ತಡೆವುದುಕರುಣದಲೀ ॥ ತಡೆ
ಯದೆಕೊಡುವುದು ನಿನ್ನಯಚಂಡನು । ಪೊಡನೆಯೆ ಪೆರನಿಗೆನ್ನೀಂ ॥೧॥

ಎಡಗೈಗೆಸೆಯಿರಿ :—ಹಾಡು.

ಎಡಗೈಗೀವೀಚಂಡನು ತಡೆಯೈ । ಸಡಗರವಾನ್ತುತಲೀ ॥ ಬಿಡದೀಯ್ಯುತ
ನಿನ್ನಯಚಂಡನು । ಒಡನಾಡಿಯುಕೈಗೆ ॥೨॥

ಈರೀತಿ ಎಡಕೂ ಬಲಕೂ ಮಾಡಿಸಬೇಕು. ಇದು ಸಣ್ಣಹುಡುಗರಿಂದ ಏಕಾಯೇಕಿ ಆಗಲಾರದು. ಸಾವಧಾನದಿಂದ ಅಭ್ಯಾಸಮಾಡಿಸಬೇಕು. ಮತ್ತೊಂದೆ
ದಿನ ಹುಡುಗರನ್ನು ಎದಿರುಬದರಿಗೆ ೨ ಸಾಲಾಗಿ ನಿಲ್ಲಿಸಿ, ಒಂದು ಸಾಲಿನವರಿಗೆ ಚಂ
ಡುಗಳನ್ನು ಕೊಟ್ಟು ಎದರುಸಾಲಿನವರ ಬಲಗೈಗೆ ಎಸೆಯಿರಿ ಎಂದು ಹೇಳಿ, ಈ ಹಾಡ
ನ್ನು ಹೇಳಿಸಬೇಕು.

ಬರುವುದು ಚಂಡಿದುನೋಡಿರಿ ತರಳರೆ । ಧರವನುತಾಳುತಲೀ ॥ ಕರುಣ
ದೊಳೀಯ್ಯನು ನಿಮ್ಮಯಬಲಗೈ । ಹರುಷದಿವಂದಿಸಿವ್ರ ॥೩॥

ಎಡಗೈಗೆ ಎಸೆಯಿರಿ :—ಹಾಡು.

ಎಸೆವೆವು ಚಂಡನು ನಿಮ್ಮೆಡಗೈಗೆ ! ಶಿಸಮಬಾಲಕರೆ ॥ ಅಸವಸಗೊಳ್ಳುತ
ತಡೆವುದು ನೀವದ ; ಹಸ-ಳೆಯರೇಯೀಗ ॥೪॥

ಈರೀತಿ ಮೊದಲು ಒಬ್ಬನಾದಮೇಲೊಬ್ಬ ಆಮೇಲೆ ಇಬ್ಬರಿಬ್ಬರು ಕೊನೆಗೆ
ಯಲ್ಲಿ ಎಲ್ಲರೂ ಎಸೆವಂತೆ ಮಾಡಬೇಕು.

ಹಾಡು :—

ಓರೋರ್ವರ್ ತಾವೆಸ್ತಪೆವ್ರುವೊದಲೋ । ಳೀರೀರ್ವರುಬಳಿಕಂ ॥ ಸೇರುತ
ನಾವೆಲ್ಲರು ಕಡೆಯೋಳೆಸುವೆವೆವ್ರು ವೋದದಲೀ ॥೫॥

ಹುಡುಗರನ್ನು ನಾಲ್ಕುಸಾಲಾಗಿ ನಿಲ್ಲಿಸಿ ಮೊದಲನೇಸಾಲಿನವರ ಕೈಗೆ ಚಂ
ಡುಗಳನ್ನು ಕೊಟ್ಟು ಎರಡನೇ ಸಾಲಿನವರಿಗೂ, ಅವರು ಮೂರನೇ ಸಾಲಿನವರಿಗೂ
ಅವರು ನಾಲ್ಕನೇ ಸಾಲಿನವರಿಗೂ ಎಸೆಯುವಂತೆ ಮಾಡಬೇಕು.

ಹಾಡು :—

ಬಾಲರಕೇಳಿರಿ ಬರುವೀಚಂಡನು । ಲೀಲೆಯೊಳ್ಮೂರನೆಯ ॥ ಸಾಲಿಗೆ ಎಸೆ
ವುದು । ಪೇಳುತಲವರಿಗೆ ಮುಂದಕೆ ಕಳುಪೆನುತಂ ॥೬॥

ಈ ಗ್ರಂಥಿಗಳು, ಕಂಕುಳು, ತೊಡೆಸಂದು, ಮೊಣಕೈ, ಕತ್ತಿನ ಎಡಪಾರ್ಶ್ವಗಳು ಇವೆ ಮೊದಲಾದ ಕಡೆಗಳಲ್ಲೆಲ್ಲಾ ಇವೆ. ಕೈ ಹೆಬ್ಬೆಟ್ಟಿನ ಮೇಲೆ ಒಂದು ದೊಡ್ಡ ಗಾಯ ವಾದರೆ ಆ ಭಾಗದ ಕಂಕುಳಲ್ಲಿರುವ ಗ್ರಂಥಿಗಳು ಊದಿಕೊಳ್ಳುತ್ತವೆ. ಘಾಯವು ಮಾಗಿದ ಕೂಡಲೆ ಸ್ವಭಾವ ಸ್ಥಿತಿಗೆ ಬರುತ್ತವೆ. ಕಾಲಮೇಲೆ ಏನಾದರು ಆದರೆ ಆ ಭಾಗ ತೊಡೆಸಂದಿನಲ್ಲಿರತಕ್ಕ ವೇದೋ ಗ್ರಂಥಿಗಳು ಊದಿ ಗಡ್ಡೆ ಕಟ್ಟಿ ಬಹಳ ನೋವು ಉಂಟುಮಾಡುತ್ತದೆ.

ಶರೀರಪರಿಚಲನೆಯಿಂದ ಆಗುವ ಪ್ರಯೋಜನಗಳು.

(೧) ಶರೀರದ ಪುಷ್ಟಿಗೆ ಅತ್ಯವಶ್ಯಕವಾದ ಆಹಾರಾಂಶವನ್ನೂ ಆಮ್ಲಜನಕವನ್ನೂ ಶರೀರದ ಎಲ್ಲಾ ಭಾಗಕ್ಕೂ ಕೊಡುತ್ತದೆ. (೨) ಶರೀರದ ಎಲ್ಲಾ ಭಾಗಗಳಲ್ಲಿಯೂ ಉತ್ಪತ್ತಿಯಾಗುವ ನಿಷ್ಪ್ರಯೋಜನ ವಸ್ತುಗಳನ್ನು ಹೊರಗೆ ಬಿಸಾಡುವ ಹಾಗೆ ಮಾಡುತ್ತದೆ. (೩) ಶರೀರದ ಶಾಖವು ಒಂದೇ ಸಮಾನವಾಗಿರುವ ಹಾಗೆ ಮಾಡುತ್ತದೆ. (೪) ಶರೀರಾರೋಗ್ಯಕ್ಕೆ ಅತ್ಯವಶ್ಯಕವಾದ ಜೊಲ್ಲು, ಜಠರರಸ, ಪಿತ್ತ ಮುಂತಾದ ರಸವಿಶೇಷಗಳನ್ನು ಉತ್ಪತ್ತಿ ಮಾಡುವ ಗ್ರಂಥಿಗಳಿಗೆ ಬೇಕಾದ ಪೋಷಣಾದ್ರವ್ಯಗಳನ್ನು ಒದಗಿಸುತ್ತದೆ.

ಕಿಂಡರ್‌ಗಾರ್ಟ್ನ್.

೧ ನೇ ಕರಣದ ಶೇಷ.

ಉಪಾಧ್ಯಾಯನು ಗುಂಡಗೆ ಗೆರೆ ಗೀಚಿ ಆ ಗೆರೆಯಲ್ಲಿ ಹುಡುಗರನ್ನು ನಿಲ್ಲಿಸಿ, ಮೊದಲಿನಂತೆ ಒಬ್ಬೊಬ್ಬರ ಕೈಗೆ ಒಂದೊಂದು ಚಂಚನ್ನು ಕೊಟ್ಟು ನಿಮ್ಮ ಪಕ್ಕದಲ್ಲಿರುವವನ ಬಲಗೈಗೆಸೆಯಿರಿ ಎಂದು ಈ ಹಾಡನ್ನು ಹೇಳುತ್ತಾ ಎಸೆಯುವಂತೆ ಮಾಡಬೇಕು.

ಮಾರಾ ತಂಬುಸೆಟ್ಟರು ಪರಂಜಪೆಯವರ ವಿಷಯದಲ್ಲಿ ಹೇಳಿದ್ದು.

ಕಳೆದ ಜುಲೈತಿಂಗಳು ೩೦ನೆಯ ತಾರೀಖಿನಲ್ಲಿ ಬೆಂಗಳೂರಲ್ಲಿ ಲಂಡನ್‌ಮಿಷನ್ ಹೈಸ್ಕೂಲು ಕಟ್ಟಡದಲ್ಲಿ ಒಂದು ಸಭೆ ಸೇರಿತ್ತು. ಅದು ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಗಣಿತಶಾಸ್ತ್ರದಲ್ಲಿ ಈ ವರ್ಷ ಸೀನಿಯರರ್ಯಾಂಗಲರಯೆಂಬ ಪ್ರಥಮಸ್ಥಾನವನ್ನು ಪಡೆದು ವಿಚಿತ್ರವಾದ ಮೇಧಾಶಕ್ತಿಯೊಡನೆ ವಹಿಸಿದ ಪ್ರಗಲ್ಭತೆಯನ್ನು ತೋರಿಸಿದ ಹಿಂದೂದೇಶಸ್ಥರಾದ ಪರಂಜಪೆಯುಂಬವರಿಗೆ, ಅವರಮೃತಶಕ್ತಿ ಪ್ರದರ್ಶನದಿಂದ ಅವರ ಸ್ವದೇಶೀಯುರಿಗುಂಟಾದ ಆನಂದವನ್ನು ತಿಳಿಯುಪಡಿಸುವುದಕ್ಕಾಗಿ ಈ ಸಭೆಯಲ್ಲಿ ನಮ್ಮ ಸಂಸ್ಥಾನದ ಕೌನ್ಸಿಲರಾದ ಮಾ|| ರಾ|| ತಂಬೂಸೆಟ್ಟರು ಅಗಾಸನವನ್ನು ವಹಿಸಿ ಕಾಲೋಚಿತವಾಗಿ ಮುಂದೆ ಹೇಳುವ ಮಾತುಗಳನ್ನಾಡಿದರು.

ಮಹನೀಯರೆ, ಮತ್ತು ವಿದ್ಯಾರ್ಥಿಸಂಘದವರೇ—

ಈ ದಿವಸ ನಾವೆಲ್ಲರು ಇಲ್ಲಿ ಸೇರಿರುವ ಉದ್ದೇಶವು ನಿಮ್ಮೆಲ್ಲರಿಗೂ ತಿಳಿದೇ ಇದೆ ಗಣಿತಶಾಸ್ತ್ರದಲ್ಲಿ ಪ್ರತಿಭೆಯನ್ನು ತೋರ್ಪಡಿಸಿ ಇಂಡಿಯರ್ ಸೀನಿಯರರ್ಯಾಂಗಲರ ಸ್ಥಾನವನ್ನು ಪಡೆದ ನಮ್ಮ ದೇಶೀಯರಲ್ಲೊಬ್ಬರಿಗೆ ನಮ್ಮ ಆನಂದವನ್ನು ತಿಳಿಸುವದಕ್ಕೋಸ್ಕರ ಎಲ್ಲಾ ಕಡೆಯಲ್ಲಿಯೂ ಇವರ ಸಾಹಸವನ್ನು ನೋಡಿ ಜನರು ವಿಚ್ಚತ್ತರಾಗಿದಾರೆ ಇಂಥಾ ಸಾಹಸಿಗಳಾದ ಪರಂಜಪೆಯವರ ಹೆಸರನ್ನು ಹೇಳಿದ ಮಾತ್ರದಿಂದಲೇ ಈ ಸಭಿಕರಿಗೆ ಅವರಲ್ಲಿರುವ ಉತ್ಸಾಹವು ಗೌರವವು ತೋರ್ಪಡುವದರಲ್ಲಿ ಸಂದೇಹವಿಲ್ಲ. ಇವರು ಇನ್ನು ವಯಸ್ಸಿನಲ್ಲಿ ಚಿಕ್ಕವರಾಗಿರುವದ್ದರಿಂದ ಅದು ಇವರು ಮಾಡಿರುವ ಸಾಹಸಕಾರ್ಯಕ್ಕೆ ಹೆಚ್ಚಾಗಿ ಕಳೆಯನ್ನು ಕೊಡುತ್ತಿದೆ. ಇವರು ೧೮೭೩ನೆ ಇಸವಿಯಲ್ಲಿ ಹುಟ್ಟಿದ್ದರಿಂದ ಈಗತಾನೆ ಇವರಿಗೆ ೨೩ ವರ್ಷ ತುಂಬಿದೆ. ಈ ಕಾಲದಲ್ಲಿ ಉನ್ನತಗ್ರಂಥವ್ಯಾಸಂಗಕ್ಕೆ ಬೇಕಾದಷ್ಟು ದ್ರವ್ಯಸಂಪತ್ತಿ ಇಲ್ಲದವರಾದರೂ, ಇದ್ದುದರಲ್ಲಿ ಅನುಕೂಲಪಡಿಸಿಕೊಂಡು, ಪುಣೆಯಲ್ಲಿರುವ ಫರಗೂಸನ್ ಕಾಲೇಜನ್ನು ಸೇರಿ ೧೮೯೩ನೆ ವಯಸ್ಸಿನಲ್ಲಿ ಬೊಂಬಾಯಿ ಸೀಮೆಯ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಹಿರೇಮಣಿಯಾಗಿ ತೇರ್ಗಡೆಯಾದರು. ಮುಂದೆ ನಾಲ್ಕುವರ್ಷಗಳಲ್ಲಿ ಎಫ್. ಎ. ಮತ್ತು ಬಿ. ಎ. ಪರೀಕ್ಷೆಗಳನ್ನು ಪ್ರಥಮರೀತ್ಯಲ್ಲಿ ಕೊಟ್ಟರು. ಬಿ. ಎಸ್. ಸಿ. ಪರೀಕ್ಷೆಗಾಗಿ ಫರಗೂಸನ್ ವೇತನವು ಇವರಿಗೆ ದೊರೆಯಿತು. ೧೮೯೫ನೆ ಇಸವಿಯಲ್ಲಿ

ಇದರಂತೆ ಅನೇಕಸಲ ಮಾಡಿಸಬೇಕು. ಅವುಗಳನ್ನು ನೆಲಕ್ಕೆ ಎಸೆದು ಪುಟ ಹಿಡಿಯುವುದು

ಪೊಡೆದೀಚಂಡನು ನೋಡೆಲೆಬಾಲನೆ | ಪೊಡನೆಯೆಪುಟಿಯುವದು ॥ ಪಿಡಿ ಯಲ ಪುಟವನು ಸಡಗರದಿಂದಲೆ | ಕಡುಗೆಡಿಕನು ನೀನೆಂಬೆ ॥೬॥

ಅವುಗಳನ್ನು ಗುಡುಗಿಸುವದು. ಹಾಡು:—

ಗುಡುಗಿತುಚಂಡು ಎತಬಲಪಿಂದೆಸೆ ! ಮುಂದೆಸೆಗಳ್ಗದನಾಂ ॥ ಪಡು ವಲು ಮೂಡಲು ಬಡಗಲು ತೆಂಕಲು | ಅಡಿಮೇಗೆಂದರಿವೆಂ ॥೪॥

ಇದರಿಂದ ಅದು (ಚಂಡು) ಯಾವದಿಕ್ಕಿಗೆ ಗುಡುಗಿತ, ಯಾವದಿಕ್ಕಿಗೆ ಹಾರಿತು ಕೊಡಲಾದವುಗಳನ್ನು ಕೇಳಿ, ಎಡ, ಬಲ, ಹಿಂದೆ, ಮುಂದೆ; ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೇಲೆ, ಕೆಳಗೆ ಮೊದಲಾದ ದಿಕ್ಕುಗಳ ಜ್ಞಾನವನ್ನುಂಟುಮಾಡ ಬೇಕು.

ಮತ್ತೊಂದುದಿನ ಚಂಡುಗಳನ್ನು ಅದಕ್ಕಾಗಿ ಮಾಡಿರುವ ಕಡ್ಡಿಗೆ ತಗಲು ಹಾಕಿ ೧—೨—೩—೪—೫ ಮೊದಲಾಗಿ ೫ ರವರಿಗಿನ ಎಣಿಕೆ ಎತಡೆರಡಾಗಿ, ಮೂರುಮೂರಾಗಿಯೂ, ವಿಲೋಮವಾಗಿಯೂ ಎಣಿಸುವುದು, ಕೂಡುವುದು, ಕಳೆ ಯುವುದು, ಪಾಲುಮಾಡುವುದು ಮೊದಲಾದ ಗಣಿತಕೃತ್ಯಗಳನ್ನು ಕಲಿಸಬೇಕು.

ಇನ್ನೊಂದು ದಿನ ಚಂಡುಗಳಿಗೆ ಕಾಗದದ ಚೂರುಗಳನ್ನು ಕಟ್ಟಿ ಪಕ್ಷಿಗಳಂ ದು ಹೊಡುಗರಿಂದ ಹಾರಿಸುವುದು.

ಹಾಡು :—

ಸಾರುವದೆನ್ನಯ ಪಾರಿವಕಕ್ಕಿಯು | ತಾರೆಲೆನಿನ್ನಯಗೀಜಗನಂ ॥ ಸೇರಲಿ ರಾಮನ ಗೊರವಕಪಕ್ಕಿಯು | ತೋರುವನಂಜೆಯಭೀಮಂ ॥೯॥

ಚಂಡುಗಳನ್ನು ಮೇಜಿನಮೇಲಿಟ್ಟು ಚಂಡುಗಳು ಹೂಗಳಿಂತಲೂ, ಮೇಜು ತೋಟವೆಂತಲೂ ತಿಳಿದು ಪ್ರಶ್ನಿಸುವುದು.

ಹಾಡು :—

ಅರಿಸುತೋರುವ ಚಂಪಕಕುರವಕ ಪಾಟಲಕುಸುಮಗಳಂ ॥ ಅರಿಸುಕೇತಕಿ ವಕುಳಶೋಕವ | ನಿಹಾರಿದತೋಷದಲಿ ॥೧೦॥

(ಸಶೇಷ ;)

ತಾಧಿಕಾರಿಗಳಾದ ಇವರಿಂದ ಹೊರಟ ಈ ಅಭಿವ್ಯಾಯಗಳು ಸ್ವಭಾವಗಾರವನ್ನು ಗಳಿಸಿದು ತಿಳಿಯಬೇಕಾಗಿದೆ. ಯಾತಕ್ಕಂದರೆ, ವೈಸರಾಯರವರ ಮತಿನಿಂದ ಈ ದೇಶದ ವಿದ್ಯಾರ್ಥಿಗಳಿಗೆ, ಯೋಗ್ಯರಾದ ಗುರುಗಳ ಉಪದೇಶದಿಂದರಿತರೆ, ಅವರ ಮೇಧಾಶಕ್ತಿಯು ಪ್ರಕಾಶಕ್ಕೆ ಬರುವದನ್ನೂ, ಅವರು ವಿದ್ಯೆಯನ್ನು ಶೋಧಿಸುವದಕ್ಕೆ ಹೊಂದಿರುವ ಹೇರಳವಾದ ಶಕ್ತಿಯನ್ನೂ ಒಪ್ಪಿಕೊಂಡಂತಾಯಿತು. ಇಂಗ್ಲಂಡಿನಲ್ಲಿ ಭ್ಯಾಸವು ಪಾಜುರ್ಯವನ್ನು ಪಡೆದ ಹಾಗೆಲ್ಲ, ಈ ದೇಶದ ವಿದ್ಯಾರ್ಥಿಗಳಿಗೆ ಯೂರೋಪಿಯನ್ ದೇಶದಲ್ಲಿ ಉತ್ತಮ ವಿದ್ಯೆಯನ್ನು ಪಡೆಯುವದಕ್ಕೆ ಇರುವ ದಾರಿಯನ್ನು ಅನುಸರಿಸಬೇಕೆಂಬ ಅಭಿಲಾಷೆಯು ಕ್ರಮೇಣವುಂಟಾಗಿದೆ. ಈ ಅಭಿಲಾಷೆಯು ಸ್ವಭಾವವಾದ್ದು, ಮತ್ತು ಅದನ್ನು ಪೂರ್ತಿಮಾಡಿಕೊಳ್ಳಲಿಕ್ಕೆ ಪ್ರೋತ್ಸಾಹಪಡಿಸಿಕೊಡಬೇಕಲ್ಲದೆ ತಕ್ಕ ಸಾಧನಗಳನ್ನು ಕಲ್ಪಿಸಿಕೊಡಬೇಕಾದ್ದು ಯುಕ್ತ. ಆದ್ದರಿಂದ ಮೈಸೂರು ಗವರನನೆಂಟನವರು ದಾವೋದರದಾಸೆಟ್ಟಿಯ ಧರ್ಮವೆಂಬ ಹೆಸರಿನಿಂದ ಒಂದು ಧರ್ಮವನ್ನು ಸ್ಥಾಪಿಸಿ ಆ ಹಣದ ಉತ್ಪತ್ತಿಯಿಂದ ವೇತನಗಳನ್ನು ಕಲ್ಪಿಸಿ, ಅವುಗಳನ್ನು ಚುನಾಯಿಸಲ್ಪಟ್ಟ ಗ್ರಾಡ್ಯುಯೇಟಗಳಿಗೆ ಕೊಟ್ಟು ಅವರುಗಳು, ಇಂಡಿಯಾ ದೇಶದಲ್ಲಿಯಾಗಲಿ ಅಥವಾ ಬೇರೆ ದೇಶಗಳಲ್ಲಿಯಾಗಲಿ ಇರುವ ಯೂನಿವರ್ಸಿಟಿಗಳಿಗೆ ಸೇರಿ ಶಿಲ್ಪವಿದ್ಯೆ ಮತ್ತು ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆಯುವದಕ್ಕೆ ಅನುಕೂಲಗಳನ್ನುಂಟುಮಾಡಿಕೊಡಬೇಕೆಂದಿರುವ ಆಲೋಚನೆಯು ಕ್ಷಿಪ್ರದಲ್ಲಿಯೆ ಕೈಗೂಡುವದನ್ನು ನಾನು ಬಹಳ ಸಂತೋಷದಿಂದ ಎದುರು ನೋಡುತ್ತಿದ್ದೇನೆ. ಈ ವೇತನಗಳು ಇಂಡಿಯದೇಶದ ಯೂನಿವರ್ಸಿಟಿಗಳ ಪರಿಕ್ಷೆಯಲ್ಲಿ ಉತ್ಕೃಷ್ಟವಾದ ಮೇಧಾಶಕ್ತಿಯನ್ನು ಪ್ರಕಾಶಪಡಿಸಿರುವ ಗ್ರಾಡ್ಯುಯೇಟಗಳಿಗೆ ಕೊಡತಕ್ಕವೆಂದು ಉದ್ದೇಶಿಸಲ್ಪಟ್ಟವೆ. ಮೈಸೂರು ಸಂಸ್ಥಾನದ ಗ್ರಾಡ್ಯುಯೇಟಗಳು ಈ ವೇತನಗಳನ್ನು ಪಡೆಯಲು ಅರ್ಹರೆಂದು ತೋರ್ಪಡಿಸಿಕೊಂಡು ಅವುಗಳನ್ನು ಪಡೆಯುವರೆಂದು ನಂಬುತ್ತೇನೆ. ಕೇಂಬ್ರಿಡ್ಜನಲ್ಲಿ ಪರಂಜಪೆಯವರಿಗೆ ಬಹುಮಾನಾರ್ಥವಾಗಿ ಔತಣಮಾಡಿದಾಗ ಅವರು ಮೊಟ್ಟಮೊದಲು ಆಡಿದ ಮಾತಿನ ವಿಷಯವಾಗಿ ಕೆಲವು ಸಂಗತಿಗಳನ್ನು ತಿಳಿಸುತ್ತೇನೆ. ಆ ಸಂದರ್ಭದಲ್ಲಿ ಅವರು ಆಡಿದ ಮಾತುಗಳಿಂದ ಅವರಿಗಿರುವ ನಮ್ರತೆಯು ಅಹಂಕಾರನಿರೋಧವು ಮತ್ತು ಪ್ರಜ್ಞೆಯು ವ್ಯಕ್ತಪಡುತ್ತವೆ. ಪರಂಜಪೆಯವರು ಹೇಳಿದಂತೆ ಸಾಥಶಾಲೆಯಲ್ಲಿರುವಾಗ ವಿದ್ಯಾರ್ಥಿಗಳು ತೋರ್ಪಡಿಸುವ ಶಕ್ತಿಯು ಮುಂದೆ ಅವರ

ಪರಗೊರ್ಸ ಕಾಲೇಜಿಗೆ ನಿಯುಕ್ತಿಪಟ್ಟು, ೯೬ ನೇ ಇಸವಿಯಲ್ಲಿ ಇಂಡಿಯಾ ಗೌರ್ಮೆಂಟಿನವರಿಂದ ಕೊಡಲ್ಪಡುವ ವೇತನವು ಇವರಿಗೆ ದೊರದ್ದರಿಂದ, ಕೇಂಬ್ರಿಡ್ಜ ಯೂನಿವರ್ಸಿಟಿಯಲ್ಲಿ ಓದಿ ಮುಂದೆ ಮೂರುವರ್ಷಗಳಲ್ಲಿ ಸೀನಿಯರರ್ಯಾಂಗಲರೆಂಬ ವಿದ್ವದ್ಬಹುಮಾನವನ್ನು ಪಡೆದರು. ಯಾವ ಇಂಡಿಯಾಚಕ್ರವರ್ತಿನಿಯ ವೆರ ಆಳಿಕೆಯಲ್ಲಿ ವಿದ್ಯಾಭ್ಯಾಸಕ್ಕು, ಶಾಸ್ತ್ರ, ಶಿಲ್ಪ ಇವುಗಳಭಿವೃದ್ಧಿಗೂ ವಿಶೇಷವಾಗಿ ಅನುಕೂಲಗಳುಂಟಾಗಿವೆಯೋ, ಇಂಡಿಯನ್ ಸಿವಿಲ್‌ಸರವಿಸು ಮುಂತಾದ ಪರೀಕ್ಷೆಗಳಿಗೆ ಜಾತಿ ಮತಭೇದಗಳಿಲ್ಲದೆ, ಭೂಮಂಡಲದಲ್ಲಿ ಯಾರು ಬೇಕಾದರೂ ತಡೆಯಿಲ್ಲದೆ, ಹೋಗಬಹುದೋ ಅಂಥ ಚಕ್ರವರ್ತಿನೀಯವರ ಪ್ರತಿನಿಧಿಗಳಾದ ಲಾರ್ಡ್‌ಕರ್ಜನ್‌ಸಾಹೇಬರೆ ಪರಂಜಪೆಯವರ ಸಾಹಸಕ್ಕೆ ಮೆಚ್ಚಿದವರಲ್ಲಿ ಮುಂದಾಳಾಗಿದಾರೆ. ಶಾಸ್ತ್ರನೀಯವಾದ ದಯಾಳುತ್ವದಿಂದಲೂ ನಿಷ್ಪಾಕಪಟ್ಯದಿಂದಲೂ, ಲಾರ್ಡ್‌ಕರ್ಜನ್‌ಸಾಹೇಬರು ಪರಗೊರ್ಸಕಾಲೇಜನ್ನು ಸೇರಿ ಅಲ್ಲಿ ಓದಿ ಖ್ಯಾತಿಯನ್ನು ಪಡೆದ ಪರಂಜಪೆಯವರನ್ನು ಚಿತ್ತಾಹ್ಲಾದಕಭಾಷೆಯಲ್ಲಿ ಕೊಂಡಾಡಿದರು. ಇದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿರಬೇಕು. ಪರಂಜಪೆಯವರ ಜಯಪ್ರದವಾಯಿತಲ್ಲಿ ಮಾಕನೀಯರಾದ ವೈಸರಾಯಿಯವರ ಟಿಪ್ಪಣಿಗ್ರಾಮಿನಲ್ಲಿ ಅಡಗಿರುವ ಶ್ಲಾಘನೆಗಿಂತಲೂ ಇನ್ನೂ ಹೆಚ್ಚಾಗಿ ಮನಃಪೂರ್ವಕವಾದ ಶ್ಲಾಘನಾವಾಕ್ಯಗಳು ಸನಿಗೆ ತೋರುವದಿಲ್ಲ. ಉಪಾಧ್ಯಾಯರ ಬೋಧನೆಯು ಸತ್ಫಲಗಳು ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಪೂರ್ತಿವಹಿಸುತ್ತವೆಂದು ಹೇಳಬೇಕು. ಅದ್ದರಿಂದ ಲಾರ್ಡ್‌ಕರ್ಜನ್‌ಸಾಹೇಬರು ಪರಂಜಪೆಯವರು ಯಾವ ಪಾಠಶಾಲೆಯಲ್ಲಿ ತಮ್ಮ ಹುಟ್ಟಕ್ಕೆ ಅಸ್ತಿಭಾರವನ್ನು ಹೊಂದಿದರೋ ಆ ಪಾಠಶಾಲೆಯ ಮುಖ್ಯ ಮತ್ತು ಸಹಾಪೋಪಾಧ್ಯಾಯರುಗಳನ್ನು, ಹೀಗೆ ಪಾಠಶಾಲೆಯಲ್ಲಿ ತಾವು ಹೊಂದಿದ ಪ್ರಥಮ ಶಿಕ್ಷೆಯು ಬಲಧಿಂದಲು, ಮತ್ತು ಅವಿಚ್ಛಿನ್ನಸಾಹಸದಿಂದಲು ಮಹತ್ತಾದ ಜಯವನ್ನು ಪಡೆದದ್ದಕ್ಕಾಗಿ ಪರಂಜಪೆಯವರನ್ನು ಶ್ಲಾಘಿಸಿದ್ದು ಯುಕ್ತವೇ ಸರಿ. ಲಾರ್ಡ್‌ಕರ್ಜನ್‌ಸಾಹೇಬರು ಕೊಟ್ಟ ತಂತೀವರ್ತವಾನದ ಕೊನೆಯಲ್ಲಿ ಪರಂಜಪೆಯವರ ಜಯವು ಅವರು ಓದಿದ ಕಾಲೀಜಿಗೂ ಮತ್ತು ಉಪಾಧ್ಯಾಯರಿಗೂ ಗೌರವವನ್ನು ಕೊಡುವದಲ್ಲದೆ ಪಕ್ವಶಿಕ್ಷೆಯುವನ್ನು ಹೊಂದಿದವರಲ್ಲಿ ಹಿಂದೂ ಪೌಢಾಶಕ್ತಿಯು ಪಡೆಯುಬಹುದಾದ ಔನ್ನತ್ಯವನ್ನು ಸೂಚಿಸುತ್ತದೆಂದು ಬರೆದಿದಾರೆ. ಇಂಡಿಯ ದೇಶದಲ್ಲಿ ಅತ್ಯಂತ ಉನ್ನ

೧೯೪ ನೇ ಪ್ರಕರಣದಪ್ರಕಾರ ಪ್ರಿವಿಲೀಜ್ ರಜಾ ಅಪೇಕ್ಷಿಸತಕ್ಕವರು ಅವಶ್ಯವಾಗಿ ಹನ್ನೊಂದು ತಿಂಗಳೂ ಕೆಲಸದಮೇಲೆ ಹಾಜರಿರಬೇಕು, ಅಲ್ಲದೆ ಪ್ರಿವಿಲೀಜ್ ರಜಾ ಪಡೆದು ಆರುತಿಂಗಳಾಗಿರಬೇಕು

೧೯೧ ನೇ ಪ್ರಕರಣದಮೇರೆ ರಜಾ ಕೊಟ್ಟದ್ದುದರಿಂದ ಸರಕಾರಕ್ಕೆ ಹೆಚ್ಚು ಖರ್ಚಿಗೆ ಅವಕಾಶಕೊಡಲಾಗದ, ಮತ್ತು

೨೦೩ ನೇ ಅಧಿಕರಣವು ಕ್ಲುಪ್ತಕಾಲದ ರಜೆ (Vacations) ಅನುಭವಿಸುವವನಿಗೆ ಅತ್ಯವಶ್ಯಕವಾದ ಕಾರಣಗಳ್ಳದೆ ಅರ್ಧತಲಬಿನಮೇಲೆ ರಜಾ ದೊರೆಯುವುದಿಲ್ಲವೆಂತಲೂ, ಕ್ಲುಪ್ತಕಾಲದ ರಜದೊಡನೆ ಈ ರಜಾ ದೊರೆಯಲಾರದೆಂತಲೂ ವ್ಯಕ್ತಪಡಿಸುವುದು.

೨ ಮೈಸೂರು ಸಿವಿಲ್ ಸರ್ವಿಸ್ ರೆಗ್ಯುಲೇಷನ್ಸ್ ೨೬೧ ನೇ ಅಧಿಕರಣದ ಮೇರೆ ಪ್ರಿವಿಲೀಜ್ ರಜಾ ಏನಾ ಇತರ ರಜಾ ತಲಬು ತೆಗೆದುಕೊಂಡು ರಜಾ ಯಾವದೂ ನಿರ್ಮೂಲವಾಗಿ ಸರ್ವಿಸ್‌ಗೆ ಸೇರುವುದಿಲ್ಲ. ಆದುದರಿಂದ ಪ್ರಿವಿಲೀಜ್ ರಜಾಕ್ಕೆ ಹಕ್ಕುಳ್ಳವನಾಕರನು ಯಾವ ಸಬಬ್ಬಿನಿಂದ ರಜಾ ಅಪೇಕ್ಷಿಸಿದರೂ, ಪ್ರಿವಿಲೀಜ್ ರಜಾ ಹಕ್ಕಿದ್ದಲ್ಲಿ ಇತರವಿಧವಾದ ರಜಾ ಎನ್ನಿಸಿಕೊಳ್ಳದೆ, ಪಡೆದ ರಜವು ಪ್ರಿವಿಲೀಜ್ ರಜಾ ಎನ್ನಿಸಿಕೊಳ್ಳುವುದು. ಒಂದುಮೇಲೆ ಬರಲಿಗೆ ಪೂರಾ ತಲಬು ಸಂದಾಯವಾಗಬೇಕಾಗಿ ರಜಾ ಪಡೆಯುವವನಿಗೆ ತಲಬು ಸಿಕ್ಕದಿದ್ದರೂ, ಆ ರಜಾವನ್ನು ಪ್ರಿವಿಲೀಜ್ ರಜಾದಂತೆ ಭಾವಿಸಬೇಕಲ್ಲದೆ ೨೬೧ ನೇ ಅಧಿಕರಣದಮೇರೆ ಬಗರ್ ತಲಬು ರಜಾ ಎಂದು ಭಾವಿಸಲಾಗದು.

(ರುಜು) ಸೈ— ಹೆಚ್ ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್

ಸೂಚನೆ ಮತ್ತು ಸಮಾಚಾರಗಳು.

ಮದ್ರಾಸ್ ಕ್ರಿಶ್ಚಿಯನ್ ಕಾಲೇಜ್ ಕರ್ಣಾಟಕೋಪಾಧ್ಯಾಯರಾದ ಮಾ॥ ರಾ॥ ಬಿ. ರಾಮರಾವ್, ಬಿ. ಎ ಯವರ, ತಾವು ಕನ್ನಡಿಸಿದ, "ಸತ್ಯರಾಜಪೂರ್ವದೇಶಯಾತ್ರೆ" ಎಂಬ ಗ್ರಂಥವನ್ನು ವಿಶ್ವಾಸಪೂರ್ವಕವಾಗಿ ನಮ್ಮಲ್ಲಿ ಕಳುಹಿಸಿಕೊಟ್ಟರು ಇದಾ ಚನ್ನಾಗಿದೆ. ಇದರಲ್ಲಿ ನಮ್ಮ ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ನಿರೋಗ್ಯತೆಗೆ ನಿಶ್ಚಿಂತಚಿತ್ತಸ್ಥಿತಿಯೆಂದು ಭಾವಿಸುವದಕ್ಕಾಗುವದಿಲ್ಲ. ಆದರೂ ಪಾಂಡಿತ್ಯ ವನ್ನು ಮತ್ತು ಗುಣಾಢ್ಯತೆಯನ್ನು ಪಡೆಯುವದಕ್ಕೆ ಇಂಥಾ ಆಲೋಚನೆಗಳಿಂದ ಅಡ್ಡಿ ಯುಂಟಾಗಕೂಡದು. ಪರಂಜಪೆಯವರು ಲೌಕಿಕಪ್ರಯೋಜನಕ್ಕೆ ಆಶೆಪಡದೆ ಪುಣೆಯ ಕಾಲೇಜಿನಲ್ಲಿ ಕೆಲವ್ಯಕಾಲ ಉಪಾಧ್ಯಾಯರಾಗಿರುವದಾಗಿ ಒಪ್ಪಿಕೊಂಡು ತ್ಯಾಗಶೌರ್ಯರೆನಿಸಿಕೊಂಡಿದಾರೆ

ವಿದ್ಯಾಭ್ಯಾಸದ ಇಲಾಖೆ.

ಮೈಸೂರು.

೧೨ ನೇ ಸೆಪ್ಟಂಬರ್ ೧೮೯೯.

ಸರ್ಕ್ಯುಲರ್—೧ ನಂಬರ್ ೯. ೧೮೯೯—೧೯೦೨ ನೇ ಇಸವಿ.

ಸ್ಕೂಲ್ ಡೆಪ್ಯುಟಿ ಇನಸ್ಪೆಕ್ಟರುಗಳಿಗೆಲ್ಲಾ :—

ಸರ್ ೧೮೯೬ ನೇ ಇಸವಿ ಜುಲ್ಯೆ ೩೧ ನೇ ತಾರೀಖಿನ ಸರ್ಕ್ಯುಲರ್ ೧. ನಂಬರ್ ೪ ನೆಯ ರೂಲ್ iv ರ ಮೇಲಣ ಬದಲಾವಣೆಗಳು—ಮೈಸೂರು ಸರ್ವಿಸ್ ರಿಜ್ಯುಲೇಶನ್ ಅನುಸರಿಸಿ, ಪ್ರಿವಿಲೀಜ್ ರಜಾ ಹಕ್ಕುಳ್ಳವರಿಗೇ ಮೂರು ತಿಂಗಳುಕಾಲ ಪಾಗಲಿ, ಅದಕ್ಕೆ ಕಡಮೆಯಾದ ಕಾಲವಾಗಲಿ, ಡೆಪ್ಯುಟಿ ಇನಸ್ಪೆಕ್ಟರುಗಳು ತಮ್ಮ ತಮ್ಮ ಆಫೀಸ್ ನೌಕರವಾನೇರಿ ಆಗಲಿ, ತಮಗೆ ಸಂಬಂಧಪಟ್ಟ ಸ್ಕೂಲ್ ನೌಕರರಿಗೆ ಆಗಲಿ ಪ್ರಿವಿಲೀಜ್ ರಜಾ ಕೊಡಬಹುದು. ಈ ಕೆಳಗೆ ಸೂಚಿಸಿರುವ ಅಧಿಕರಣಗಳಿಗೆ ಮಾತ್ರ ಅಗತ್ಯವಾಗಿ ಡೆಪ್ಯುಟಿ ಇನಸ್ಪೆಕ್ಟರುಗಳು ಗಮನ ಕೊಡಬೇಕು

೪೧ ನೇ ಅಧಿಕರಣದ ಮೇರೆ ಪ್ರಿವಿಲೀಜ್ ರಜಾದಮೇಲೆ ಇರುವ ನೌಕರನ ಕೆಲಸವನ್ನು ಅದೇ ಸ್ಥಳದಲ್ಲಿರತಕ್ಕ ಇನ್ನೊಬ್ಬ ನೌಕರನು ನಿರ್ವಹಿಸಬೇಕು.

೪೨ ನೇ ಪ್ರಕರಣದ ಪ್ರಕಾರ ಹಾಗೆ ಬದಲು ನೋಡತಕ್ಕವರಿಗೆ ಮೊದಲಿನ ಮೂವತ್ತುದಿನ ಅಲೊವೆನ್ಸ್ ದೊರೆಯುವುದಿಲ್ಲ.

೪೯ ನೇ ಪ್ರಕರಣದಲ್ಲಿತಿ ಬದಲಿಯು ಸಬಬು ಪರಂಪರೆಯಾಗಿ ಪ್ರಮೋಶನ್ ಯಾ ಇಜಾಫೆ ಕೊಡಲಾಗದು.

ವಿದ್ಯಾದಾಯಿನಿ

ಭಾಗ ೭.] ಡಿಸೆಂಬರ್ ೧೯೧೯. [ಸಂಚಿಕೆ ೬

ಎಡಿಟರವರ ನೋಟ್ಸ್.

ವಿದ್ಯಾಭ್ಯಾಸದ ಇಲಾಖೆಯುಲ್ಲಿ, ಹೈಸ್ಕೂಲ್, ಕಾಲೀಜುಗಳಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಹೆಚ್ಚಾದ ಅನುಕೂಲ್ಯವನ್ನುಂಟುಮಾಡುವುದಕ್ಕಾಗಿ ನಮ್ಮ ಸರ್ಕಾರದವರು ಕೆಲವು ಏರ್ಪಾಡುಗಳನ್ನು ಮಾಡಿರುವರು. ಅನುಭವಸ್ಥರಾಗಿ, ಬಹಳ ಕಾಲ ತೃಪ್ತಿಕರವಾಗಿ ಕೆಲಸಮಾಡಿದವರಿಗೆ ಮುನ್ನೂರುರಿಂದ ನಾನೂರು ಐವತ್ತು ರೂ॥ ವರೆಗೂ ಸಂಬಳದೊರೆಯುತಕ್ಕದ್ದೆಂತಲೂ, ಈ ತರಗತಿಗೆ ಎರಡನೆಯುದಾಗಿ ಇನ್ನೂರುಹತ್ತಿರಿಂದ ಮುನ್ನೂರು ರೂ॥ ಸಲ್ಲತಕ್ಕುದೆಂತಲೂ, ಮೂರನೇ ತರಗತಿಯಲ್ಲಿರತಕ್ಕವರಿಗೆ ನೂರು ರೂ॥ ನಿಂದ ಇನ್ನೂರುಹತ್ತರವರೆಗೆ ಬಡತಿಯೆಂತಲೂ, ನಾಲ್ಕನೆಯ ತರಗತಿಯುಲ್ಲಿರತಕ್ಕವರಿಗೆ ಐವತ್ತರಿಂದ ನೂರು ರೂ॥ ವರೆಗೆ ಬಡತಿಯಾಗುವುದೆಂತಲೂ, ನಿಷ್ಕರ್ಷಿಸಿರುವರು. ನಾಲ್ಕನೆಯ ತರಗತಿಯಲ್ಲಿರತಕ್ಕವರಿಗೆ ಮಾತ್ರ ಎರಡು ವರ್ಷಕ್ಕೆ ಒಂದಾವೃತ್ತಿ ಹತ್ತು ರೂ॥ ಮೇರೆ ವೃದ್ಧಿಯಾಗಬೇಕೆಂತಲೂ, ಮೂರು, ಎರಡನೇ ತರಗತಿಗಳಲ್ಲಿರತಕ್ಕವರಿಗೆ ವರ್ಷಕ್ಕೆ ಒಂದಾವೃತ್ತಿ ಹತ್ತು, ಹದಿನೈದರಮೇರೆ ವೃದ್ಧಿಯಾಗಬೇಕೆಂತಲೂ ಗೊತ್ತುಮಾಡಿರುವರು. ಎರಡನೆಯ ತರಗತಿಯಲ್ಲಿ ಎಂಟು, ಮೂರನೆಯ ತರಗತಿಯಲ್ಲಿ ಕದಿಮೂರು, ನಾಲ್ಕನೆಯ ತರಗತಿಯಲ್ಲಿ ಇಪ್ಪತ್ತುನಾಲ್ಕು ಮಂದಿ ಇರಬೇಕೆಂತಲೂ, ಮೂರು ನಾಲ್ಕನೆ ತರಗತಿಯಲ್ಲಿ ಸದ್ಯಕ್ಕೆ ಇಂತಿಂಥವರಿರಬೇಕೆಂತಲೂ ನಿಯಮಿಸಿರುವರು.

***

ಲಿಂಗ್ವೊವರ್ನಾಕ್ಯುಲರ್ ಮತ್ತು ಕನ್ನಡ ಉಪಾಧ್ಯಾಯರಿಗೂ ಮುಂದೆ ನಿಯಮಿತವಾದ ಒಂದುರೀತಿಯುಲ್ಲಿ ಬಡತಿ ಕೊಡುವುರೆಂದು ನಂಬಿದ್ದೇವೆ.

ಮಹಾರಾಣಿಯವರ ಬಾಲಿಕಾಪಾಠಶಾಲೆಯ ಲೇಡಿ ಸೂ। ರವರಾದ ಇ. ಎಲ್ಲಿ. ಎಂ. ಲಿಡ್‌ಸ್ಡೇಲ್‌ಯವರು ಕನ್ನಡಭಾಷೆಯಲ್ಲಿ ತೃಪ್ತಿಕರವಾದ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರು.

ವಿದ್ಯಾಬ್ಯಾಸದ ಇಲಾಖೆ ಇ॥ ಜ॥ರವರ ಅಸಿಸ್ಟೆಂಟ್‌ರವರಾದ ಟಿ. ಆರ್. ವೆಂಕಟಸಾಮಿನಾಯಿಡು ಬಿ. ಎ. ಯವರಿಗೆ ಮಂಜೂರ್ಮಾಡಲ್ಪಟ್ಟಿದ್ದ ೧೦ ತಿಂಗಳು ೧೬ ದಿನಗಳ ರಜವು ಮುಂದೆ ಇನ್ನೊಂದುತಿಂಗಳು ೧೩ ದಿನಗಳ ರಜಕ್ಕೆ ಹೆಚ್ಚಿಸಲ್ಪಟ್ಟಿತು. ಅವರ ಕೆಲಸವನ್ನು ಈಗಿನಂತೆಯೆ ಸಿ. ವಾಸ.ದೇವೈಯ್ಯನವರು ನೋಡುತ್ತಾರೆ.

ಶಿವನೂಗ್ಗ ಕಾಲೇಜು ಮುಖ್ಯೋಪಾಧ್ಯಾಯರವರಾದ ಮಾ॥ ಕಂಗ್ಸಾಹೇಬರವರಿಗೆ ಅವರ ಮನೆ ತಯ್ಯಾರಾಗುವ ೬ ತಿಂಗಳವರೆವಿಗೂ ಮನೆಬಾಡಿಗೆಗಾಗಿ ೬೦ ರೂಪಾಯಿಗಳು ಕೊಡುವಂತೆ ಮಂಜೂರು ಆಗಿರುತ್ತೆ.

ಮಹಾರಾಜರವರ ಕಾಲೇಜ್ ಸ್ಟೂಡೆಂಟ್ಸ್‌ಹೋಮಿನ ಸೂ। ಮಾ॥ ಬಿ. ಶಿವಪ್ಪ ಬಿ. ಎ ಯವರು ಅಲ್ಲಿನ ನಿರ್ವಾಹಸಂಘಕ್ಕೆ ಸೆಕ್ರೆಟೆರಿಯವರಾಗಿಯು ಮತ್ತು ಹೌಸ್ ಪಿಸಿಯೊಯವರಾಗಿಯು ನೇಮಕವಾಡಲ್ಪಟ್ಟಿರುತ್ತಾರೆ.

ಕೆಳಗೆ ನಮೂದಿಸಿರುವವರಿಗೆ ಇಂಜನಿಯರ್ ಪರೀಕ್ಷೆಗೆ ಓದುವದಕ್ಕೋಸ್ಕರ ೨ ವರ್ಷಗಳ ಒಂದಕ್ಕೆ ೩೦ ರೂಪಾಯಿನ ಕಾಲಕ್ಷೇಪವು ಕೊಡುವಂತೆ ಗೊತ್ತುಮಾಡಲ್ಪಟ್ಟಿರುತ್ತೆ.

(೧) ಎಂ. ನಾಗೇಶರಾವ್, ಬಿ. ಎ.
(೨) ಎಂ. ಜಿ. ರಂಗೈಯ್ಯ, ಬಿ. ಎ.
(೩) ಆರ್. ಎ ನರಸಿಂಹೈಯ್ಯಂಗಾರ್

ಮೈಸೂರಲ್ಲಿರುವ ಮಂಡೀಪೇಟೆ ಕನಡಾಸ್ಕೂಲ್ ಸಹಾಯೋಪಾಧ್ಯಾಯನರವಾದ ರಾಮಚಂದ್ರೈಯ್ಯ ಮತ್ತು ನರಸಿಂಹೈಯ್ಯ ಇವರುಗಳು ೧—೧೧—೯೯ರಿಂದ ೬ ತಿಂಗಳುಗಳು ಕೆಲಸದಿಂದ ವಜಾಮಾಡಲ್ಪಟ್ಟಿರುತ್ತಾರೆ. ಮತ್ತು ಅದೇ ಸ್ಕೂಲು ಮುಖ್ಯೋಪಾಧ್ಯಾಯರವೇಲೆ ಸುಳ್ಳುತಪ್ಪನ್ನು ಹೊರಸಿದ್ದಕ್ಕಾಗಿಯೂ ಮತ್ತು ಇವರನ್ನು ಸುಳ್ಳುತಪ್ಪು ಹೊರಿಸಿದರೆಂದು ಚಿತ್ರವಾಣಿಮಾಡಿಸಿದ್ದಕ್ಕಾಗಿಯೂ ಅದೇ ಸ್ಕೂಲ್ ಆಳು ದಾಸಿಯು ಕೆಲಸದಿಂದ ವಜಾಮಾಡಲ್ಪಟ್ಟಿರುತ್ತಾನೆ.

ಪುಸ್ತಕವನ್ನೇ ಕೊಡುತ್ತಿರಲಿಲ್ಲ. ವಿದ್ಯಾರ್ಥಿಗಳು ಮಾಡಬೇಕಾದ ಕೆಲಸವನ್ನು ಅವರಿಗೆ ತಿಳಿಸುತ್ತಿದ್ದರು. ಮಾಡತಕ್ಕ ವಿಧಾನವನ್ನು ಉಪಾಯವಾದ ಪ್ರಶ್ನೆಗಳಿಂದ ಅವರಕೈಲೆ ಹೇಳಿಸುತ್ತಿದ್ದರು. ಗಣಿತಶಾಸ್ತ್ರವನ್ನು ತಾವು ಹೇಳಿಕೊಡದೆ ಅವರೊಡನೆ ಚರ್ಚಿಸುತ್ತಾ ಅವರಾಗಿಯೇ ಯೋಚನೆಮಾಡಿ ಮಾಡುವಂತೆ ಬೋಧಿಸುತ್ತಿದ್ದರು. ಇವರಿಂದ ವಿದ್ಯಾರ್ಥಿಗಳಿಗೆ ಸ್ವಶಕ್ತಿಯಿಂದಲೂ, ಪೂರ್ವಾಪರಗಳನ್ನು ಯೋಚಿಸುವುದರಿಂದಲೂ ತಮ್ಮ ಕೈಲಾಗದ ಕೆಲಸವೇ ಇಲ್ಲವೆಂಬ ಧೈರ್ಯವನ್ನುಂಟುಮಾಡಿದ್ದರು. ವಿದ್ಯಾರ್ಥಿಗಳು ಬಾಲ್ಯದಲ್ಲೇ ಆತ್ಮಾವಲಂಬಿಗಳಾಗುವುದನ್ನು ಕೇಳಿ ಜನರು ವಿಸ್ಮಿತರಾಗುತ್ತಾ ಬಂದರು. ಈ ವಿಷಯವು ಎಲ್ಲೆಲ್ಲಿಯೂ ಹರಡಿಕೊಂಡಿತು. ಪ್ರಷ್ಯಾದೇಶಕ್ಕೆ ಈ ವಿಷಯವು ತಿಳಿದಕೂಡಲೇ ಆ ದೇಶದ ಅಧಿಕಾರಿಗಳು ಪೆಸ್ಟಲಾಟ್ಸೀಯವರ ವಿದ್ಯಾಭ್ಯಾಸಕ್ರಮವನ್ನು ತಮ್ಮ ದೇಶದಲ್ಲಿ ಆಚರಣೆಗೆ ತರಬೇಕೆಂದು ಸಂಕಲ್ಪಮಾಡಿ ಅನೇಕ ಬೋಧಕರನ್ನು ಅವರ ಬಳಿಗೆ ಕಳುಹಿಸಿ ಅವರಲ್ಲಿ ಶಿಕ್ಷಿತರಾದವರಿಗೆ ತಮ್ಮ ದೇಶದ ಉಪಾಧ್ಯಾಯ ಪದವಿಯನ್ನು ಕೊಟ್ಟರು. ಈಗ ಪ್ರಷ್ಯಾ ದೇಶವು ಸಕಲ ವಿದ್ಯೆಗಳಿಗೂ, ಸಕಲ ಶಾಸ್ತ್ರಗಳಿಗೂ, ಕಲೆಗಳಿಗೂ ಮಾತೃಸ್ಥಾನವೆಂದು ಖ್ಯಾತಿಹೊಂದಿದೆ. ಇದಕ್ಕೆ ಪೆಸ್ಟಲಾಟ್ಸೀಯವರ ವಿದ್ಯಾಭ್ಯಾಸಕ್ರಮವೇ ಮುಖ್ಯಕಾರಣ. ಪ್ರಷ್ಯಾದೇಶದವರು ತಮ್ಮ ದೇಶದ ಪಾಠಕರನ್ನು ಪೆಸ್ಟಲಾಟ್ಸೀಯವರಿಂದ ಶಿಕ್ಷಿತರನ್ನಾಗಿ ಮಾಡುತ್ತಾ ಬರಲು ಪೆಸ್ಟಲಾಟ್ಸೀಯವರ ಕೀರ್ತಿಯು ಬಹಳವಾಗಿ ಹೆಚ್ಚಿತು. ಇತರದೇಶದ ಪಾಠಕರು ಗುರುಕುಲವಾಸಾರ್ಥವಾಗಿ ಇವರ ಬಳಿಗೆ ಬರುವುದಕ್ಕೆ ಉಪಕ್ರಮವಿಸಿದರು. ಶಿಷ್ಯಕೋಟಿಯು ಬಹಳ ವಿಸ್ತೃತವಾಯಿತು. ಇವರುಗಳಿಗೆ ಶಿಕ್ಷಾಕ್ರಮವನ್ನು ತಿಳಿಸುವುದರಲ್ಲಿ ಇವರಿಗೆ ಹಗಲೂ ರಾತ್ರಿಯೂ ಕಳೆಯುತ್ತಾ ಬಂದವು. ಕ್ರಮಕ್ರಮವಾಗಿ ಪಾಠಕ ವಿದ್ಯಾರ್ಥಿಗಳ ಜತೆಗೆ ಇವರ ಶಿಕ್ಷಾಕ್ರಮವನ್ನು ನೋಡಬೇಕೆಂದು ಅನೇಕ ದೇಶಗಳಿಂದ ಅನೇಕ ದೊಡ್ಡಮನುಷ್ಯರು ಬರುವುದಕ್ಕೆ ಉಪಕ್ರಮವಾಯಿತು ಇದರಿಂದ ಇವರು ಅಸಾಧಾರಣವಾದ ಶಿಕ್ಷಕರೆಂದು ಪ್ರತೀತಿಯಾಗುವುದಕ್ಕೆ ವಿಶೇಷ ಅವಕಾಶವುಂಟಾದಾಗ್ಯೂ, ಇವರ ಪಾಠ ಪ್ರವಚನಗಳಿಗೆ ಬಹಳ ವಿಘ್ನವಾಗುತ್ತಾ ಬಂತು. ಇದಲ್ಲದೆ ಮಕ್ಕಳ ಯೋಗಕ್ಷೇಮದಲ್ಲಿ ವಿಶೇಷ ಆಸಕ್ತಿಯುಳ್ಳ ತಂದೆ ತಾಯಿಗಳು ಇವರ ಪಾಠಶಾಲೆಗೆ ಬಂದು ಇವರ ಶಿಕ್ಷಾಕ್ರಮವನ್ನು ಪ್ರತ್ಯಕ್ಷವಾಗಿ ನೋಡಿ ತಮ್ಮ ಮಕ್ಕಳನ್ನು ಕರೆದುಕೊಂಡು ಬಂದು

ನಮ್ಮ ಬಾಲಕರಿಗೂ, ಉಪಾಧ್ಯಾಯರಿಗೂ ಚಿತ್ರ ಬರೆಯಲು ಕಲಿಸುವುದು ಅವಶ್ಯಕವೆಂದು ನಾವು ಅನೇಕಾವೃತ್ತಿ ಸೂಚಿಸಿರುವೆವು. ಪ್ರತಿಯೊಂದು ಹೈಸ್ಕೂಲಿನಲ್ಲಿಯೂ, ಕಾಲೀಜ್‌ಗೆ ಸೇರಿದ ಹೈಸ್ಕೂಲ್ ತರಗತಿಗಳಲ್ಲಿಯೂ, ಈಗ್ಗೆ ಕಲಿಸುವುದಕ್ಕೆ ಚಿತ್ರ ಬರೆಯುವುದನ್ನು ಕಲಿತ ಒಬ್ಬ ಉಪಾಧ್ಯಾಯನನ್ನು ನಿಯಮಿಸೋಣದಲ್ಲಿ ಬಹಳ ಅನುಕೂಲವಾಗಿಸಿದಂತೆ ಆಗುವುದು ಕಾಲಕ್ರಮವಾಗಿ ಪ್ರತಿಯೊಂದು ಇಂಗ್ಲೀಷ್ ನಾರ್ಮ್ಯಲರ್ ಸ್ಕೂಲಿನಲ್ಲಿಯೂ ಚಿತ್ರ ಬರೆಯುವುದನ್ನು ಬಾಲಕರಿಗೆ ಅಭ್ಯಾಸವಾಡಿಸಬಹುದು

***

ಈಚೆಗೆ ಬಾಲಕರಿಗೆ ಡ್ರಿಲ್ಲಿಂಗ್, (ಕವಾಯಿತ್) ಪ್ರತಿ ಪಾಠಶಾಲೆಯಲ್ಲಿ ಕಲಿಸುತ್ತಿರುವುದು ಸರಿಯಷ್ಟೆ. ಇದರಿಂದ ಉಂಟಾಗತಕ್ಕ ಪ್ರಯೋಜನವನ್ನು ನಾವು ಇಲ್ಲಿ ಸೂಚಿಸತಕ್ಕ ಆವಶ್ಯಕವಿಲ್ಲವು. ಈ ಪದ್ಧತಿಯನ್ನು ಆಚರಿಸೋಣದರಿಂದ, ಪಾಠಶಾಲೆಗಳಲ್ಲಿ ಬಾಲಕರಾಗಲಿ ಬಾಲಕಿಯರಾಗಲಿ ತಿದ್ದುಪಾಟಿಗೆ ಒಳಗಾಗುವರು. ಇದರಿಂದ ಮೇಸರವಾಗದೆ ಮಕ್ಕಳು ಆಟವಾಡುತ ಪಾಠವನ್ನು ಕಲಿಸುವೆ ಕಿಂಡರ್ ಗಾರ್ಟ್ನ್ ಶಿಕ್ಷಾಕ್ರಮವನ್ನೂ ಈಚೆಗೆ ಆಚರಿಸುತ್ತಿರುವರು. ಈ ಎರಡು ಶಿಕ್ಷಾಕ್ರಮವು, ಬಾಲಕ, ಬಾಲಕಿಯರ ಪಾಠಶಾಲೆಗಳಲ್ಲಿಯೂ ಆಚರಣೆಯಲ್ಲಿ ತಂದಿರುವರು ಇದನ್ನು ತಿಳಿಯದ ಕೆಲವರು, ಒಂದು ಪ್ರಸಿದ್ಧವಾದ ಬಾಲಿಕಾಪಾಠಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಕೂಣಿಯುವುದನ್ನು ಕಲಿಸುತ್ತಿರುವರೆಂಬ ವರ್ತಮಾನವನ್ನು ಪ್ರಕಟಿಸಿದರು ನಾವು ಕೇಳಿ ತುಂಬಾ ವಿಷಾದಪಟ್ಟೆವು. ಈ ವಿಷಯವನ್ನು ಜೆನ್ನಾಗಿ ವಿಚಾರಿಸುವಲ್ಲಿ, ಪರೀಕ್ಷಿಸುವ ಸ್ಕೂಲ್ ಇನ್‌ಸ್ಪೆಕ್ಟರವರೊಬ್ಬರು ನಮಗೆ ನಿಜಸ್ಥಿತಿಯನ್ನು ತಿಳಿಸಿದ್ದಕ್ಕಾಗಿ ಸಂತೋಷಿಸುವೆವು.

ಪೆಸ್ಟಲಾಟ್ಸೀಯವರ ಚರಿತ್ರೆ.

ರೇಖಾಗಣಿತವನ್ನು ಪೆಸ್ಟಲಾಟ್ಸಿಯವರು ಕಲಿಸುತ್ತಿದ್ದ ಕ್ರಮವು ಬಹಳ ಪ್ರಶ್ಯವಾದದ್ದು. ಪದಾರ್ಥಗಳಿಗೆ ಇವರು ಈ ಶಾಸ್ತ್ರವನ್ನು ಬೋಧಿಸುವುದರಲ್ಲಿ

ಲಕ್ಕೆ ಸ್ನಾನವನ್ನು, ದೇವತಾರಾಧನೆಗಳನ್ನು, ಭೋಜನಾದಿಗಳನ್ನು, ಪಾಠಪ್ರವಚನಗಳನ್ನು, ವ್ಯಾಯಾಮ ವಿಶ್ರಾಂತಿಗಳನ್ನು ತಪ್ಪದೆ ಮಾಡುತ್ತಾ, ಆರೋಗದೃಢಕಾಯರಾಗಿಯೂ, ಅನ್ಯಾದೃಶವಾದ ಬುದ್ಧಿಪಾಟವವುಳ್ಳವರಾಗಿಯೂ, ವಿದ್ಯಾವಿಷಯಸಂಪನ್ನರಾಗಿಯೂ, ಪಾಪಭೀತರಾಗಿಯೂ ಆಗುತ್ತಾ ಬಂದರು. ಪೆಸ್ಟಲಾಟ್ಸಿಯವರ ಉದ್ದೇಶವೇ ವಿದ್ಯಾರ್ಥಿಗಳು ಈರೀತಿಯುಳ್ಳ ರಾಗಬೇಕೆಂದಿತ್ತು. ಅವರ ಭಾವನೆಗೆ ತಕ್ಕ ಕೃಷಿಯೂ ಆಚರಣೆಗೆ ಬಂದಿದ್ದರಿಂದ ಅದು ಕೈಗೂಡಿತು. ಇವರು ತಮ್ಮ ವಿದ್ಯಾರ್ಥಿಗಳಿಗೆ ಬಂದೂಕ ಮೊದಲಾದ ಆಯುಧಗಳನ್ನುಪಯೋಗಿಸುವ ಶಾಸ್ತ್ರವನ್ನು ಶಿಕ್ಷಿಸಿ ವಿದ್ಯಾರ್ಥಿಗಳನ್ನು ಅಸಮಾನರಾದ ಯೋಧರನ್ನಾಗಿ ಮಾಡಿ ಪಾಶ್ಚಾತ್ಯರಲ್ಲಿ ಅಭಿನವದೊರೆಗಳೆಂಬ ಬಿರುದನ್ನು ಸಂಪಾದಿಸಿದ್ದರು. ಇಷ್ಟುಮಾತ್ರವೇ ಅಲ್ಲ. ಗಂಡಸರಿಗೆ ಯೋಗ್ಯವಾದ ಆಟಗಳನ್ನೆಲ್ಲಾ ಅವರಿಗೆ ಕಲಿಸಿದ್ದರು. ಇವರ ವಿದ್ಯಾರ್ಥಿಗಳು ಎಂಥಾ ಕಾಯಕ್ಲೇಶ ಬಂದಾಗ್ಯೂ, ಬೇಜಾರನ್ನು ಹೊಂದುತ್ತಿರಲಿಲ್ಲ. ಎಂಥಾ ಮನಃಕ್ಲೇಶ ಬಂದಾಗ್ಯೂ ಸಹಿಸಿಕೊಳ್ಳತಕ್ಕ ಜಿತೇಂದ್ರಿಯತ್ವವನ್ನು ಸಂಪಾದಿಸಿಕೊಂಡಿದ್ದರು. ಪೂರ್ಣ ಪಂಡಿತರಾಗಿದ್ದಾಗ್ಯೂ ನಿಗರ್ವಿಗಳಾಗಿಯೂ, ಕುಬೇರರಾದಾಗ್ಯೂ ಭೂತದಯೆಯುಳ್ಳವರಾಗಿಯೂ, ಸಕಲಸಂಪತ್ತುಗಳುಳ್ಳವರಾದಾಗ್ಯೂ ಆ ಸಂಪತ್ತಿಗೆ ಸಹಜವಾದ ಮದಾಹಂಕಾರರಹಿತರಾಗಿಯೂ ಇರುವುದಕ್ಕೆ ತಿಳಿಯಬೇಕಾದ ಸಕಲ ಧರ್ಮೋಪದೇಶಗಳನ್ನು ಮಾಡಿ ಅನೇಕ ಪಂಡಿತರನ್ನು ನಿರ್ಮಾಣ ಮಾಡಿದರು. ಫಲಾಕಾಂಕ್ಷೆಯಿಲ್ಲದೆ ಪರೋಪಕಾರ ಪರಾಯಣರಾದ ಅನೇಕ ಪಾಶ್ಚಾತ್ಯರಿಂದ ಅವರ ದೇಶಗಳು ಮಹೋನ್ನತಿಯನ್ನು ಹೊಂದಿದೆ. ಇದಕ್ಕೆ ಪೆಸ್ಟಲಾಟ್ಸಿಯವರು ಕೂಡ ಕಾರಣಭೂತರಾಗಿರುತ್ತಾರೆ. ಇಂಥಾ ಮಹನೀಯರಿಂದ ಅಲಂಕೃತವಾಗಿದ್ದ ದೇಶಗಳು ಚಕ್ರವರ್ತಿ ಪದವಿಯನ್ನು ಹೊಂದುವುದೇನಾಶ್ಚರ್ಯ!

ತಿದ್ದುವಿಕೆ.

ಬಾಲಕರಲ್ಲಿ ಸರಿಯಾದ ತಿದ್ದುವಿಕೆಯನ್ನು ಉಂಟುಮಾಡುವುದಕ್ಕೆ ಇರತಕ್ಕ ಅನುಕೂಲವಾದ ಗುಣಗಳು.

ತಿದ್ದುವಿಕೆಯನ್ನು ಸಣ್ಣ ಹುಡುಗರ ತರಗತಿಗಳಲ್ಲಿ ಕಾಪಾಡುವುದು ಬಹಳ ಕಠಿನವಾಗಿ ಕಾಣಬರುವುದು. ಆದರೆ ಸ್ವಲ್ಪ ವಿಚಾರಮಾಡಿದರೆ ಬಾಲಕರಲ್ಲಿ ಕೆಲವು

ಅವರಿಗೆ ಒಪ್ಪಿಸುತ್ತಿದ್ದರು. ಇದರಿಂದ ಸ್ವಲ್ಪವೂ ವಿರಾಮವಿಲ್ಲದೆ ಬಹಳ ಬೇಜಾರಾ ಗಾಗ್ಯೂ ಪೆಸ್ತಲಾಟ್ಸ್ಸಿಯವರು ತಮ್ಮ ಸಿದ್ಧಾಂತಗಳನ್ನು ಪ್ರಚುರಪಡಿಸಬೇಕೆಂದು ಬಂದ ತೊಂದರೆಯನ್ನೆಲ್ಲಾ ಸಹಿಸಿಕೊಂಡಿದ್ದರು. ಇವರ ವಿದ್ಯಾಭ್ಯಾಸಕ್ರಮವು ಬಹು ವಿಲಕ್ಷಣವಾದದ್ದು. ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಆದಾಗ್ಯೂ ಚಿಕ್ಕಮಕ್ಕಳುಗಳು ಕೂಡ ಹದ್ದುಬಿಸಾರಿ ನಡೆಯುತ್ತಿರಲಿಲ್ಲ. ದಿನಕ್ಕೆ ಹತ್ತು ಘಂಟೆಗಳು ಪಾಠಗಳು ನಡೆಯುತ್ತಿದ್ದವು. ಪ್ರಾತಃಕಾಲ ೬ ಘಂಟೆ ಯಿಂದ ಸಾಯಂಕಾಲ ೪ ಘಂಟೆ ವರಿಗೂ ಪಾಠಕಾಲವಾಗಿರುತ್ತಿತ್ತು. ಆದರೆ ಪ್ರತಿ ಒಂದು ಘಂಟೆಯಾದಮೇಲೂ ಸ್ವಲ್ಪ ವಿರಾಮವು ವಿಶ್ರಾಂತಿಗಾಗಿ ಕೊಡಲ್ಪಡುತ್ತಿತ್ತು. ಇದಲ್ಲದೆ ಇವರು ಕೇಳುತ್ತಿದ್ದ ಪಾಠಗಳು ಬರೆಯುವುದು, ಓದುವುದು ಮೊದಲಾದ ತರಗತಿಗಳಲ್ಲಿ ನಡೆಯುತಕ್ಕ ಪಾಠಗಳು ಮಾತ್ರವಲ್ಲ. ಅಂಗಸಾಧನೆ— ಅಗೆಯುವುದು— ಉಳುವುದು— ಬಿತ್ತುವುದು— ಹೊಲಿಯುವುದು— ಬಗೆ ಬಗೆ ಶಿಲ್ಪ— ಚಿತ್ರ— ಕೈಗಾರಿಕೆ ಕೆಲಸಗಳನ್ನು ಮಾಡುವುದು, ಕುದುರೆ ಸವಾರಿ- ಶಿಕಾರಿ— ಬಂದೂಕವನ್ನು ಹೊಡೆಯುವುದು ಇವೇ ಮೊದಲಾದ ಸ್ವಶಕ್ತಿಯಿಂದ ಸ್ವತಂತ್ರವಾಗಿ ಜೀವಿಸುವುದಕ್ಕೆ ಸಾಧಕವಾದ ವಿದ್ಯೆಗಳನ್ನೆಲ್ಲಾ ತಪ್ಪದೆ ಶಿಕ್ಷಿಸುತ್ತಿದ್ದರು. ಪಾಠಕವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ತೆಗೆದುಕೊಳ್ಳುತ್ತಾ, ಅವರ ಜತೆಯಲ್ಲಿ ಅವರ ಪಾಠಗಳನ್ನು ಆಟಪಾಟಗಳು, ವ್ಯಾಯಾಮ ವಿಶ್ರಾಂತಿಗಳು ಇವುಗಳನ್ನು ಹೊಂದುತ್ತಾ ಪೆಸ್ತಲಾಟ್ಸ್ಸಿಯವರ ಪಾಠಶಾಲೆಯನ್ನು ಸ್ವರ್ಗಕ್ಕೆ ಸವಾನವಾಗಿ ಮಾಡಿದ್ದರು. ಪಾಠಕ್ಕೆ ಮೂರುಸಲ ಪಾಠಕರು ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಕುರಿತು ಪೆಸ್ತಲಾಟ್ಸ್ಸಿಯವರಿಗೆ ರಿಪೋರ್ಟ್ ಮಾಡುತ್ತಿದ್ದರು. ಪೆಸ್ತಲಾಟ್ಸ್ಸಿಯವರು ಪ್ರತಿದಿನವು ಹುಡುಗರ ಕಷ್ಟ ಸುಖಗಳನ್ನು ವಿಚಾರಿಸುವುದಕ್ಕೋಸ್ಕರ ಒಂದು ಕಾಲವನ್ನು ಕಲ್ಪಿತವಾಡಿದ್ದರು ಆಗ ಯಾವ ವಿದ್ಯಾರ್ಥಿಗಳು ಬಂದಾಗ್ಯೂ ಅವರನ್ನು ಪ್ರತ್ಯೇಕವಾಗಿ ಏಕಾಂತವಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರು ಹೇಳುವುದನ್ನು ಕೇಳಿ ಯಾರಿಂದಲಾದರೂ ಏನಾದರು ನ್ಯೂನಾತಿರಿಕ್ತಗಳಿದ್ದರೆ ಅದನ್ನು ಗದ್ದಲವಿಲ್ಲದೆ ಪರಿಹಾರ ಮಾಡುತ್ತಾ, ಎಲ್ಲರಲ್ಲಿಯೂ ನಿಸರ್ಗವಾದ ಸೌಹಾರ್ದ ವಿರುವಂತೆ ಏರ್ಪಾಡು ಮಾಡುತ್ತಾ, ಹಿತೋಕ್ತಿಗಳಿಂದಲೂ, ವಿಶ್ವಾಸದಿಂದಲೂ ಸರ್ವರ ಅಕೃತ್ರಿಮವಾದ ಭಕ್ತಿಗೆ ಪಾತ್ರರಾಗಿದ್ದರು. ಇವರ ಶಿಷ್ಯರೆಲ್ಲರೂ ಕಾಲಕಾ

ಭಿನ್ನ ಕಲಸಗಳನ್ನು ಅನುಸಂಧಾನ ಮಾಡುವುದರಲ್ಲಿ ಮಕ್ಕಳಿಗೆ ವಿಶೇಷ ಆಸಕ್ತಿ ಇರುವುದು. ಆದುದರಿಂದ ತಿದ್ದುವಿಕೆಯಲ್ಲಿ ಉಪಾಧ್ಯಾಯರ ಮಾತಿಗಿಂತ ಬಹಳ ಆವಶ್ಯಕವಾದ್ದು ಸಂಸರ್ಗದ ಬಲದಿಂದ ಗುಣದೋಷಗಳು ತಾವಾಗಿ ಬರುವುದಕ್ಕೆ ಅನುಕರಣಶಕ್ತಿಯೇ ಮುಖ್ಯಕಾರಣ. ಇವನ್ನು ಉಪಾಧ್ಯಾಯರು ಚೆನ್ನಾಗಿ ತಿಳಿದು ದೋಷಗಳನ್ನು ಬಿಟ್ಟು ಗುಣಗಳನ್ನು ತಮ್ಮ ನಡತೆಯಲ್ಲಿ ತೋರಿಸುತ್ತಿದ್ದರೆ ಬಾಲಕರೂ ಆ ಗುಣಗಳನ್ನು ಕಲಿಯುತ್ತಿರರು.

(೩) ಕೌತುಕ—ಅಂದರೆ ಯಾವುದಾದರೂ ಒಂದರ ವಿಷಯವನ್ನು ತಿಳಿದುಕೊಳ್ಳಬೇಕೆಂಬ ಆಶೆ. ಇದ್ದು ಮಕ್ಕಳು ಪದೇಪದೆ ದೊಡ್ಡವರನ್ನು ಕಂಡ ವಿಷಯದಲ್ಲೆಲ್ಲಾ ಪ್ರಶ್ನೆಮಾಡುತ್ತಿರುವುದರಿಂದಲೂ, ವಿಚಿತ್ರವಾದ ಪದಾರ್ಥಗಳನ್ನು ಸಾವಧಾನವಾಗಿ ನೋಡುವುದರಲ್ಲೂ, ಕಥೆ ಮುಂತಾದವುಗಳನ್ನು ಸಾದರವಾಗಿ ಕೇಳುವುದರಲ್ಲೂ ವ್ಯಕ್ತವಾಗುವುದು. ಬಾಲಕರಲ್ಲಿ ಈ ಶಕ್ತಿ ಇರುವುದರಿಂದ ಅವರಿಗೆ ಉಲ್ಲಾಸ ಉಂಟಾಗುವಂತೆ ಬೋಧಿಸುವುದು ಸಾಧ್ಯವಾಗಿರುವುದು. ಇಲ್ಲದಿದ್ದರೆ ಪಾಠಕಾಲದಲ್ಲಿ ಬಾಲಕರ ಗಮನವನ್ನು ಸಂಪಾದಿಸುವುದೇ ಕಷ್ಟವಾಗುತಿತ್ತು. ಬಾಲಕರಲ್ಲಿರತಕ್ಕ ಈ ಕೌತುಕವನ್ನು ಕಾಪಾಡಬೇಕು. ಮತ್ತು ಸಣ್ಣ ಮಕ್ಕಳು ಕೇಳತಕ್ಕ ಪ್ರಶ್ನೆಗಳಿಗೆ ತಟ್ಟನೆ ಗದರಿಸಿಕೊಳ್ಳದೆ ಉಚಿತವಾಗಿ ಉತ್ತರ ಹೇಳಬೇಕು. ಹೀಗೆ ಕೌತುಕವನ್ನು ಸರಿಯಾಗಿಟ್ಟುಕೊಂಡಿದ್ದರೆ ವಯಸ್ಸಾಗುತ ಅದು ವಿದ್ಯಾಸಂಪಾದನೆಯ ವಿಷಯದಲ್ಲಿ ಅಭಿರುಚಿಯಂತೆ ಪರಿಣಮಿಸುವುದು

(೪) ಸ್ಪರ್ಧೆ—ಅಂದರೆ ಇತರರಿಗೆ ಸಮನಾಗಬೇಕು ಅಥವಾ ಅವರನ್ನು ಮೀರಿಸಬೇಕೆಂಬ ಆಶೆ. ಇದು ಕೆಟ್ಟ ದಾರಿಯಲ್ಲಾಗಲೀ ಒಳ್ಳೇ ದಾರಿಯಲ್ಲಾಗಲೀ ಅಭಿವೃದ್ಧಿಯಾಗಬಹುದು. ದೊಡ್ಡವರನ್ನು ನೋಡಿ ಅವರಂತೆ ಆಗಬೇಕೆಂದು ಪ್ರಯತ್ನಪಟ್ಟರೆ ಸ್ಪರ್ಧೆ ಎನಿಸಿಕೊಳ್ಳುವುದು. ಮತ್ತು ಒಳ್ಳೇದು. ಇದಕ್ಕೆ ಬದಲಾಗಿ ಅವರನ್ನು ತಮ್ಮ ಸಮಕ್ಕೆ ಇಳಿಸಬೇಕೆಂದು ಪ್ರಯತ್ನಪಡುವುದು ಅಸೂಯೆಯೆನಿಸಿಕೊಳ್ಳುವುದು ಮತ್ತು ಕೆಟ್ಟದ್ದು. ವಿದ್ಯಾಭ್ಯಾಸಮಾಡಿಸುವಾಗ್ಯೆ ಇದರಿಂದ ವಿಶೇಷವಾಗಿ ಪ್ರಯೋಜನವೂ ಅಪಾಯವೂ ಉಂಟು ಆದುದರಿಂದ ಈ ಸ್ಪರ್ಧೆಯು ಬಾಲಕರಲ್ಲಿ ಅಸೂಯೆಯಾಗಿ ಪರಿಣಮಿಸದಂತೆ ನೋಡಿಕೊಳ್ಳಬೇಕು. ಹೀಗೆ ನೋಡಿಕೊಳ್ಳುವುದರಲ್ಲಿ ಮುಖ್ಯವಾಗಿ ಉಪಾಧ್ಯಾಯರು ಯೋಗ್ಯತೆ ಇಲ್ಲದವರಿಗೆ ಹೆಚ್ಚು ಬ

ಸ್ವಾಭಾವಿಕವಾಗಿಯೇ ಇಂಥಾ ತಿದ್ದುವಿಕೆಯನ್ನುಂಟುಮಾಡುವುದಕ್ಕೆ ಅನುಕೂಲವಾದ ಗುಣಗಳಿರುವುವು. ಅವು ಅವರಲ್ಲಿ ಇಲ್ಲದಿದ್ದರೆ ತಿದ್ದುವಿಕೆಯನ್ನು ಕಾಪಾಡುವುದೇನೋ ಕಷ್ಟವಾಗುತಿತ್ತು. ಆದುದರಿಂದ ಅವರಲ್ಲಿರುವ ಸ್ವಭಾವಗಳನ್ನು ಸರಿಯಾಗಿ ತಿಳಿದು ಅವುಗಳಿಗನುಸಾರವಾಗಿ ನಡೆದು ಉಪಾಧ್ಯಾಯರು ತರಗತಿಯಲ್ಲಿ ಒಳ್ಳೇ ತಿದ್ದುವಿಕೆಯನ್ನುಂಟುಮಾಡಬೇಕು. ಉಪಾಧ್ಯಾಯರಿಗೆ ಬಾಲಕರ ಸ್ವಭಾವವು ಚೆನ್ನಾಗಿ ತಿಳಿಯಬೇಕೆಂಬುದಕ್ಕೆ ಇದು ಒಂದು ದೃಷ್ಟಾಂತ. ಹಾಗೆ ತಿದ್ದುವಿಕೆಗೆ ಸಹಾಯವುಮಾಡುವ ಬಾಲಕರಿಗೆ ಸ್ವಾಭಾವಿಕವಾದ ಗುಣಗಳು ಯಾವುವೆಂದರೆ—

(೧) ಚಟುವಟಿಕೆ—ಬಾಲಕರಲ್ಲಿ ಚಟುವಟಿಕೆಯು ಬಹಳ ವಿಶೇಷವಾಗಿರುವುದು. ಮತ್ತು ಇದು ಬಹಳವಾಗಿ ಹೊರಪಡಿಸಿಕೊಳ್ಳುವುದು. ಬಾಲಕರು ಚಟುವಟಿಕೆಯಾಗಿಲ್ಲದಿದ್ದರೆ ಆರೋಗ್ಯವಿಲ್ಲವೆಂದು ಸಾಮಾನ್ಯವಾಗಿ ನಿಶ್ಚಯಿಸಬಹುದು. ಅಳದೇಯಿದ್ದರೆ ಸಣ್ಣ ಮಗುವು ಏನೋ ಖಾಯಿಲೆಯಿಂದ ಕಷ್ಟಪಡುತ್ತಿರಬಹುದೆಂಬ ಅನುಮಾನವು ಲೋಕಪ್ರಸಿದ್ಧವಾಗಿದೆ ಈ ಚಟುವಟಿಕೆಯು ಬಾಲಕರಲ್ಲಿ ವಿಶೇಷವಾಗಿದ್ದು ಹೊರಪಡಿಸಿಕೊಳ್ಳುವುದರಿಂದ ನಾವು ಅದನ್ನರಿತು ಅದಕ್ಕೆ ತಕ್ಕಂತೆ ಮಾಡುವುದಕ್ಕೆ ಕೆಲಸ ಕೊಡುತ್ತಿರಬೇಕು ಇಲ್ಲದಿದ್ದರೆ ಆ ಚಟುವಟಿಕೆಯು ಸ್ವಚ್ಛಂದವಾಗಿ ಹೊರಟುಬಿಟ್ಟ ಚೇಷ್ಟೆ ಎನ್ನಿಸಿಕೊಳ್ಳುವುದು. ಮತ್ತು ತರಗತಿಯು ತಿದ್ದುವಿಕೆಯನ್ನು ಹಾಳುಮಾಡುವುದು. ತರಗತಿಯಲ್ಲಿರುವ ಬಾಲಕರಿಗೆಲ್ಲಾ ಪಾಠಕಾಲದಲ್ಲಿ ಸರಿಯಾಗಿ ಕೆಲಸವನ್ನು ಮಾಡುವುದಕ್ಕೆ ಕೊಟ್ಟಿರಬೇಕು. ಯಾರೂ ಒಂದೆರಡು ನಿಮಿಷಗಳಿಗೆ ಹೆಚ್ಚಾಗಿ ಮಾಡುವುದಕ್ಕೆ ಕೆಲಸವಿಲ್ಲದೇ ಇರುವುದಕ್ಕೆ ಅವಕಾಶ ಕೊಡಕೂಡದು. ಕಷ್ಟರವೇಲಾ ಚಿಕ್ಕ ತರಗತಿಗಳಲ್ಲಿ ಚಟುವಟಿಕೆಯು ವಿಶೇಷವಾಗಿ ಹೊರಪಟ್ಟರೆ ಎಂಥಾ ಸಮಯಗಳಲ್ಲಿ ಸ್ವಲ್ಪಹೊತ್ತು ಡ್ರಿಲ್ ಮಾಡಿಸಬೇಕು ಗದ್ದಲವಾಗುತ್ತಿರುವ ಮಕ್ಕಳ ತರಗತಿಗಳಲ್ಲಿ ಥಟ್ಟನೆ ಡ್ರಿಲ್ ಮಾಡಿಸುವುದಕ್ಕೆ ಆರಂಭಿಸಿದರೆ ನಿಶ್ಯಬ್ದವಾಗುವುದು ಎಲ್ಲರಿಗೂ ತಿಳಿದಿದೆ. ಈ ಚಟುವಟಿಕೆಯನ್ನು ಬಾಲಕರಲ್ಲಿ ನೋಡಿಯೇ ಫ್ರೀಬೆಲ್ ಎಂಬಾತನು ಕಿಂಡರ್‌ಗಾರ್ಟನ್ ಪದ್ಧತಿಯನ್ನು ರಚಿಸಿದ್ದು.

(೨) ಅನುಕರಣಶಕ್ತಿ—ಅಂದರೆ ಇತರರನ್ನು ನೋಡಿ, ಅವರು ಮಾಡಿದಂತೆ ಮಾಡುವಂತಕ್ಕಿರುವ ಶಕ್ತಿ. ಇದು ಚಿಕ್ಕತನದಲ್ಲಿ ವಿಶೇಷವಾಗಿರುವುದು. ಮತ್ತು ಮಕ್ಕಳು ಆಡತಕ್ಕ ಆಟಗಳಲ್ಲಿ ಸುವ್ಯಕ್ತವಾಗುವುದು. ತನಗಿಂತಲೂ ದೊಡ್ಡವರಾ

ವಾಗಿ ಈ ಅಂಶದಲ್ಲಿ ಒಂದನ್ನು ವಾಕ್ಯ ಜ್ಞಾಪಕವಿಟ್ಟುಕೊಳ್ಳಬೇಕು. ಅದೇನೆಂದರೆ- ವಿಶೇಷವಾಗಿ ಭುಜವನ್ನುಂಟುಮಾಡಿ ಬಾಲಕರಲ್ಲಿ ನಡುಕ ಉಂಟುಮಾಡಕೂಡದು. ಮತ್ತು ವಿಷಾದಾಗತ ಭಯವನ್ನು ಕಡಿಮೆ ಮಾಡುತ ಬಂದು ಗುರುಹಿರಿಯರಿಗೆ ಸಂಕಟ ಉಂಟಾದೀತೆಂಬ ಶಂಕೆಯಿಂದಲೇ (ಇದು ಸೂಕ್ಷ್ಮವಾದ) ನಿಯಮಕ್ಕೆ ಒಳಪಟ್ಟಿರುವಂತೆ ಮಾಡಿಕೊಳ್ಳಬೇಕು.

ವ್ಯಾಕರಣಶಾಸ್ತ್ರ.

ತೃತೀಯಾ ವಿಭಕ್ತಿ ಪ್ರಕರಣಂ.

ತೃತೀಯಾ ವಿಭಕ್ತಿಯು ಸಾಮಾನ್ಯವಾಗಿ ಕರ್ತೃರ್ಥದಲ್ಲಿ ಸಕರ್ಮಕಧಾತುಗಳಮೇಲೆ ಕರ್ಮಾರ್ಥಕಾಖ್ಯಾತ ಪ್ರತ್ಯಯಗಳನ್ನು ಮಾಡಿದಾಗ ಬರುವುದು. ಭಾವಾರ್ಥಕಾಖ್ಯಾತಪ್ರತ್ಯಯಗಳು ಅಕರ್ಮಕ ಧಾತುಗಳ ಮೇಲೆ ಸಂಸ್ಕೃತ ಭಾಷೆಯಲ್ಲಿ ವಿಧಿಸಲ್ಪಟ್ಟಿದ್ದರೂ ಪ್ರಚೀನ ಕರ್ಣಾಟಕ ವ್ಯಾಕರಣಗಳಲ್ಲಿ ಅವನ್ನು ಹೇಳಿಲ್ಲವಾದುದರಿಂದ ಭಾಷೆಯಲ್ಲಿ ಭಾವೆಪ್ರಯೋಗವಿಲ್ಲವೆಂದು ತೋರುವುದು. ಆದರೂ ಈಗಿನ ಹೊಸಗನ್ನಡ ಗ್ರಂಥಗಳನ್ನು ಬರೆಯುವ ಕೆಲವು ಪಂಡಿತರು ಅವನಿಂದಿರೋಣ ಮೊದಲಾದ ಕೆಲವು ವಾಕ್ಯಗಳನ್ನು ಭಾವೆಪ್ರಯೋಗಕ್ಕೆ ಉದಾಹರಣೆಯನ್ನು ಕೊಡುವುದರಿಂದ ಭಾಷೆಯಲ್ಲೂ ಭಾವೆಪ್ರಯೋಗವುಂಟೆಂದು ತಿಳಿಯಬಹುದು. ಆದರೆ ಇದು ಪ್ರಯೋಗಕ್ಕೆ ಅಷ್ಟು ಚನ್ನಾಗಿ ತೋರುವದಿಲ್ಲವಾದುದರಿಂದಲೂ, ಪ್ರಚುರವಾಗಿ ಪ್ರಯೋಗವಿಲ್ಲವಾದುದರಿಂದಲ್ಲೂ, ಭಾವೆಪ್ರಯೋಗವಿಲ್ಲವೆಂದೇ ಹೇಳಬೇಕಾಗುತ್ತದೆ. ಮತ್ತು ಕರ್ಮಣಿಪ್ರಯೋಗದಲ್ಲಿ ಸಕರ್ಮಕ ಕರ್ತರಿ ಪ್ರಯೋಗದ ತಾತ್ಪರ್ಯವನ್ನು ಹೇಳುವಂತೆ ಭಾವೆಪ್ರಯೋಗಕ್ಕೆ ಬದಲಾಗಿ ಅಕರ್ಮಕ ಕರ್ತರಿ ಪ್ರಯೋಗವನ್ನು ಮಾಡುವುದು ಉತ್ತಮವಾಗಿ ತೋರುತ್ತದೆ.

ಆದರೆ ಸಂಸ್ಕೃತದಲ್ಲೂ ಇದರಂತೆ ಕರ್ತರಿ ಪ್ರಯೋಗವನ್ನು ಮಾತ್ರ ಮಾಡಿ ಕರ್ಮಣಿಪ್ರಯೋಗದಲ್ಲೂ ಸಕರ್ಮಕ ಕರ್ತರಿಪ್ರಯೋಗವನ್ನು ಮಾಡಿ ಕರ್ಮಣಿ ಭಾವೇ ಪ್ರಯೋಗಗಳನ್ನೇ ತ್ಯಾಗಮಾಡಬಹುದೆಂದು ಕೆಲವರು ಶಂಕಿಸಬಹುದು. ಆದು

ಬಹುವಾನ ಎಂದಿಗೂ ಕೊಡದೆ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು. ಮತ್ತು ಬಾಲಕರು ಸ್ಪರ್ಧೆ ಇಟ್ಟು ಕೆಲಸಮಾಡುವುದರಲ್ಲಿ ದುರಭಿಪ್ರಾಯಗಳಿಲ್ಲದಂತೆ ನೋಡಿ ಕೊಳ್ಳಬೇಕು

(೫) ಅನುತಾಪ—ಅಂದರೆ ಇತರರ ದುಃಖಗಳನ್ನು ಅನುಭವಿಸುವುದನ್ನು ನೋಡಿ ಅದಕ್ಕಾಗಿ ದುಃಖಪಡತಕ್ಕದ್ದು. ಇದು ಬಾಲಕರಲ್ಲಿರುವುದು ಎಲ್ಲರಿಗೂ ಗೊತ್ತೇ ಇದೆ ಇದು ಸ್ಕೂಲಿನಲ್ಲಿ ಮುಖ್ಯವಾಗಿ ತಮ್ಮ ಜೊತೆಗಾರರ ಒಟ್ಟು ಅಭಿಪ್ರಾಯವನ್ನು ಸುಸ ಮಿಸಿ ಅದರಂತೆ ತಾನೂ ಒಪ್ಪಿಕೊಳ್ಳುವುದಕ್ಕೆ ಸಹಾಯವಾಡುವುದು. ಇದರಿಂದ ಒಟ್ಟಾ ಸ್ಕೂಲಿನ ಕೆಲಸವು ಏಕರೀತಿಯಾಗಿ ನಡೆಯುವುದರಲ್ಲಿ ಸಹಾಯವಾಗುವುದು. ಉಪಾಧ್ಯಾಯರಿಗೂ ಬಾಲಕರಿಗೂ ಪರಸ್ಪರ ಪ್ರೀತಿಯುಂಟಾಗುವುದರಲ್ಲೂ ಬಾಲ ಕರಲ್ಲೇ ಪರಸ್ಪರವಾಗಿ ಪ್ರೀತಿಯುಂಟಾಗುವುದರಲ್ಲೂ ಒಬ್ಬರಿಗೊಬ್ಬರು ಕೆಟ್ಟದ್ದನ್ನು ನೋಚಿಸದಿರುವದರಲ್ಲೂ, ಉಪಯೋಗಿಸುವುದು. ಇವರ ಸಹಾಯದಿಂದ ಸ್ವಕಾರ್ಯ ರತೆ, ಅಸೂಯೆ, ನಿರ್ದಯ, ಮುಂತಾದ ದುರ್ಗುಣಗಳನ್ನು ಕಲ್ಪಿಸಬಹುದು.

(೬) ಪ್ರಯೋಜನಾಭಿಲಾಷೆ—ಬಾಲಕರು, ಸ್ವಾಭಾವಿಕವಾಗಿ ಚಟುವಟಿಕೆಯಿ ರುವುದರಿಂದ ಕೆಲಸಮಾಡುವುದಲ್ಲದೆ, ಪ್ರಯೋಜನಾಭಿಲಾಷೆಯಿಂದ ಕೆಲಸಮಾಡು ವುದೂ ಉಂಟು. ಆದುದರಿಂದ ಸ್ಕೂಲಿನಲ್ಲಿ ಮಾಡತಕ್ಕ ಕೆಲಸಗಳ ಉದ್ದೇಶವನ್ನು ಕಮ್ಮಟ್ಟಿಸಿ ಆ ಪ್ರಯೋಜನಗಳಿಗಾಗಿ ಅವರು ಕೆಲಸಮಾಡುವಂತೆ ಮಾಡಿಕೊಳ್ಳ ಬೇಕು.

(೭) ತನ್ನಲ್ಲಿ ಕೆಲಸಮಾಡುವುದಕ್ಕೆ ಶಕ್ತಿ ಇದೆಯೆಂಬ ನಂಬಿಕೆ— ಬಾಲಕರು ತಾವು ಕೆಲಸ ಮಾಡುತ ಈ ನಂಬಿಕೆಯು ಹೆಚ್ಚುವುದು. ಈ ನಂಬಿಕೆಯು ಹೆಚ್ಚುತ ಹೆಚ್ಚಾಗಿ ಕೆಲಸಮಾಡುವುದಕ್ಕೆ ಉತ್ಸಾಹವು ಬರುವುದು. ಅದುದರಿಂದ ಹುಡುಗರಲ್ಲಿ ಈ ಶಕ್ತಿ ಇರುವುದು. ಕೆಲಸಮಾಡುತ್ತಿರುವ ಶೀಲವನ್ನು ಅವರಲ್ಲಿ ಉಂಟುಮಾಡುವ ದಕ್ಕೆ ಅನುಕೂಲವಾಗುವುದು. ಅದರೆ ಈ ನಂಬಿಕೆಯು ಬಾಲಕರಲ್ಲಿ ಹೆಚ್ಚಿ ಅಹಂ ಕಾರರೂಪದಲ್ಲಿ ಪರಿಣಮಿಸದಂತೆ ನೋಡಿಕೊಳ್ಳಬೇಕು. ಹಾಗೆ ಪರಿಣಮಿಸುವದಾ ದರೆ ತಪ್ಪನೆ ಅದನ್ನು ತಪ್ಪಿಸಬೇಕು.

(೮) ಭಯ—ಅಂದರೆ ತನಗೆ ಕೆಟ್ಟದಾದ್ದಾದೀತೆಂಬ ಶಂಕೆ. ಇದರಿಂದ ನಾವು ಬಾಲಕರು ಸರಿಯಾದ ತಿದ್ದುವಿಕೆಯಲ್ಲಿ ಇರುವಂತೆ ಮಾಡಿಕೊಳ್ಳಬಹುದು. ಮುಖ್ಯ

ಗಳ ಪ್ರಯೋಗವಿದ್ದಾಗ ಕರ್ತೃ, ಕರ್ಮಗಳೆರಡೂ ಪ್ರಯೋಗಿಸಬೇಕಾದ ಸಂದರ್ಭದಲ್ಲಿ ಕರ್ಮಾರ್ಥದಲ್ಲಿ ಷಷ್ಠಿಯನ್ನೂ, ಕರ್ತೃರ್ಥದಲ್ಲಿ ತೃತೀಯೆಯನ್ನೂ ಪ್ರಯೋಗಿಸಬೇಕು ಎಂದು ಹೇಳಲ್ಪಟ್ಟಿರುವುದು

ಹೀಗೆ ಭಾಷೆಯಲ್ಲಿ ಕೃತ್ಪ್ರತ್ಯಯಗಳು ಮೂರರ್ಥದಲ್ಲೂ ಬರುವುವು. ಅವುಗಳಲ್ಲಿ ಕರ್ತೃರ್ಥಕ ಕೃತ್ತುಗಳಿದ್ದಾಗ ಪ್ರಥಮಾ ವಿಭಕ್ತಿಯೊಂದೇ ಬರುವುದು ಕರ್ಮಾರ್ಥಕ ಕೃತ್ತುಗಳಿದ್ದಾಗ ಮಾತ್ರ ಕರ್ತೃರ್ಥದಲ್ಲಿ ತೃತೀಯಾ ವಿಭಕ್ತಿಯನ್ನೂ ಮಾಡಬಹುದು. ಭಾವಾರ್ಥಕ ಕೃತ್ತುಗಳಿದ್ದಾಗಲಾದರೋ ಷಷ್ಠಿಯೊಂದನ್ನೇ ಉಪಯೋಗಿಸುವರು. ಇವಕ್ಕೆ ಕ್ರಮವಾಗಿ ಉದಾಹರಣೆಗಳು—

ಕರ್ತೃರ್ಥಕಕೃತ್ತಿಗೆ, ಗಡಿಗೆಯನ್ನು ಮಾಡುವ ಕುಂಬಾರನು

ಕರ್ಮಾರ್ಥಕ್ಕೆ—ಬಡಗಿಯಿಂದ ಕೆತ್ತಲ್ಪಟ್ಟ ಮರವು.

ಭಾವಾರ್ಥಕ್ಕೆ— ಕೃಷ್ಣನ ಇರವು ಮೊದಲಾದ ಪ್ರಯೋಗಗಳನ್ನು ಊಹಿಸಿಕೊಳ್ಳಬೇಕು.

(ಸಶೇಷ)

ಕುರಿ.

೧. ಇದರ ಜಾತಿ ಭೇದಗಳು.

(೧) ಮದರಾಸ್. (೨) ಮೈಸೂರು. (೩) ನೆಲ್ಲೂರು.

೨. ನೇದರಲ್ಲಿ ಮದರಾಸ್ ಕೋಯಮತ್ತೂರು ಎಂದು ಎರಡು ವಿಧಗಳು. ಇವೆರಡೂ ಒಳ್ಳೇ ಜಾತಿಯವು, ತುಪ್ಪಟ ಹಸನಾಗಿರುವುದು. ಕೋಯಮತ್ತೂರ ಜಾತಿ ಸುಮಾರು ೩½ ಅಡಿಗಳ ಎತ್ತರವಿರುವುದು. ಸಾಮಾನ್ಯವಾಗಿ ಬಿಳುಪು ಬಣ್ಣ ತಲೆಮಾತ್ರ ಕಪ್ಪು ತುಪ್ಪಟವು ನಾಲ್ಕು ಅಂಗುಲಕ್ಕೆ ಕಮ್ಮಿ ಇಲ್ಲದಂತೆ ಬೆಳೆಯುವುದು. (೨) ಇದರಲ್ಲಿ ಕುರುಬರಾಡು ಗೊಲ್ಲರಾಡು ಎಲಗ ಎಂದು ಮೂರು ಭೇದಗಳು ಕುರುಬರಾಡಿನ ಜಾತಿಯ ಕುರಿಯ ಮಾಂಸವೂ ತುಪ್ಪಟವೂ ಅತ್ಯುತ್ತಮವಾದದ್ದು ಗೊಲ್ಲರಾಡು ಕುರುಬರಾಡಿಗಿಂತಲೂ ಔನ್ನತ್ಯದಲ್ಲಿ ವಿಸ್ತಾರದ್ದು. ತುಪ್ಪಟವು ಒರಟಾದ್ದರಿಂದ ಅನುಪಯುಕ್ತವು, ಎಲಗ ಎಲ್ಲಾ ಕುರಿಗಳಿಗಿಂತಲೂ ಎತ್ತರ. ಸುಮಾರು

ಸರಿಯಾಗಿ ತೋರುವದಿಲ್ಲ. ಏತಕ್ಕಂದರೆ:—ಸಂಸ್ಕೃತ ಭಾಷೆಯಲ್ಲಿ ಬಹುಕಾಲದಿ
ರೂಢಿಯಲ್ಲಿ ಬಂದಿರುವದನ್ನು ನೋಡಿ, ಆ ಭಾಷೆಗೆ ವ್ಯಾಕರಣವನ್ನು ಬರೆದ ಪ
ತಯು ತಕ್ಕಂತೆ ಪ್ರಕೃತಿ ಪ್ರತ್ಯಯಗಳನ್ನು ಕಲ್ಪಿಸಿರುವದರಿಂದ ಅದನ್ನನುಸ
ಪ್ರಯೋಗಿಸಬೇಕೇ ಹೊರ್ತು ರೂಢಿಯಲ್ಲಿರುವದನ್ನು ಬಿಡುವದಕ್ಕಾಗುವದಿಲ್ಲ. ಒಂ
ವೇಳೆ ಸಂಸ್ಕೃತಭಾಷೆಯೂ ಇತರ ಭಾಷೆಗಳಂತೆ ಲೋಕವ್ಯವಹಾರದಲ್ಲಿರುತ್ತಿದ್ದ
ಅಲ್ಲಿಯೂ ಜನಗಳು ತಮ್ಮತಮ್ಮ ಸೌಕರ್ಯಕ್ಕಾಗಿ ಅಂಥಾ ಪ್ರಯೋಗಗಳನ್ನು ಬದಲ
ಯಿಸುತ್ತಿದ್ದರು. ಅದಕ್ಕೆ ಅವಕಾಶವಿಲ್ಲವಾದುದರಿಂದ ಅಂಥಾ ಪ್ರಯೋಗಗ
ಗ್ರಂಥಗಳಲ್ಲಿ ಮಾತ್ರ ನಿಂತಿವೆ. ಅದಕ್ಕೆ ತಕ್ಕಂತೆ ಪಾಣಿನಿ ಮೊದಲಾದವರೂ ವ್ಯಾ
ಕರಣವನ್ನು ಬರೆದಿರುವರು.

ದೇಶಭಾಷೆಗಳಲ್ಲಿ ಮಾತ್ರ ಇಂಥಾ ಪ್ರಯೋಗಗಳು ಪ್ರಾಚೀನ ಗ್ರಂಥಗ
ಳ್ಲಿಲ್ಲಾ ದೊರಿಯುದೆ ಇದ್ದುದರಿಂದ ಭಾಷಾ ವ್ಯಾಕರಣಕಾರರು ಭಾವಾರ್ಥಕಾಖ್ಯಾ
ಪ್ರತ್ಯಯಗಳನ್ನು ಬಿಟ್ಟು, ಕರ್ಮಾರ್ಥಕಾಖ್ಯಾತ ಪ್ರತ್ಯಯಗಳನ್ನು ಮಾತ್ರ ಹೇಳಿದರ
ಜತೆಗೆ ಕೆಲವು ಸಂಸ್ಕೃತ ಗ್ರಂಥಗಳನ್ನು ಹೆಚ್ಚಾಗಿ ಓದಿ, ಆ ಸಂಸ್ಕಾರದಿಂ
ಒದೆಂದು ಕಡೆ, ಅಂಥಾ ಪ್ರಯೋಗವು ಅತಿ ಸುಂದರವೆನ್ನದಿದ್ದರೂ ಪ್ರಯೋಗಿಸುತ
ತಿದುದರಿಂದ ಭಾಷಾ ವ್ಯಾಕರಣದಲ್ಲಿ ಅದಕ್ಕೆ ತಕ್ಕ ನಿಯಮಗಳನ್ನು ಹೇಳಬೇಕಾ
ಯಿತು. ಆದುದರಿಂದಲೆ ಹೊಸಗನ್ನಡ ವ್ಯಾಕರಣಗಳಲ್ಲಿ ಇಂಥಾ ಭಾವೀ ಪ್ರಯೋ
ಗಕ್ಕೆ ಉದಾಹರಣೆಗಳನ್ನು ಕೆಲವರು ಕೊಡುವುದು ಆದರೆ ಇದನ್ನು ಈಗಿನ ಭಾಷಾ
ಗ್ರಂಥವನ್ನು ಬರೆಯುವವರಾರೂ ಪ್ರಾಯಶಃ ಉಪಯೋಗಿಸಿಲ್ಲ ಮತ್ತು ಅಂಥಾ
ಪ್ರಯೋಗವನ್ನು ಅಕರ್ಮಕಪ್ರಯೋಗವೆಂದು ಹೇಳಿದರೂ ಬಾಧಕವಿಲ್ಲ. ಇದಕ್ಕಾಗಿ
ಹೊಸ ಪ್ರಕರಣವನ್ನು ಕಲ್ಪಿಸಿ ವ್ಯಾಕರಣದಲ್ಲಿ ಸೇರಿಸಬೇಕಾದ ಅವಶ್ಯಕವೂ ತೋರುವುದಿಲ್ಲ

ಸಂಸ್ಕೃತದಲ್ಲಿ ಅಖ್ಯಾತಪ್ರತ್ಯಯಗಳನ್ನು ಹೇಳಿರುವಂತೆ ಕೃತ್ಪ್ರತ್ಯಯಗಳನ್ನೂ
ಕರ್ತೃ, ಕರ್ಮ, ಭಾವಾರ್ಥಗಳಲ್ಲಿ ಬರುವವೆಂದು ಹೇಳಿವೆ ಅವುಗಳಲ್ಲಿ ಕೆಲವು ಕರ್ತೃ
ರ್ಥಕ ಕೃತ್ಪ್ರತ್ಯಯಗಳಿದ್ದಾಗ ಕರ್ತೃರ್ಥದಲ್ಲಿ ಷಷ್ಠೀವಿಭಕ್ತಿಯೂ, ಕೆಲವು ಕೃತ್ಪ್ರ
ತ್ಯಯಗಳಲ್ಲಿ ಪ್ರಥಮಿಯೂ ಬರುವುದು. ಹೀಗೆ ಕೆಲವು ಕರ್ಮಾರ್ಥಕ ಕೃತ್ಪ್ರತ್ಯಯಗಳಿರ
ುವಾಗ ಕರ್ತೃರ್ಥದಲ್ಲಿ ತೃತೀಯೆಯೂ, ಕೆಲವೆಡೆಗಳಲ್ಲಿ ಷಷ್ಠಿಯೂ, ಬರುವದುಂಟು
ಇವಕೃತ್ಪ್ರತ್ಯಯಗಳಲ್ಲಾದರೂ ಸಕರ್ಮಕ ಧಾತುಗಳಿಂದ ನಿಷ್ಪನ್ನವಾದ ಕೃದಂತ

ದಲ್ಲಿಯೂ ಮನುಷ್ಯನಿಗೆ ಸಮಾನನಾದ್ದರಿಂದ ಮನುಷ್ಯರ ಕೆಲವು ಗಾಯಗಳಾದ ಅಂಗಗಳಿಗೆ ಇದರ ಮಾಂಸವನ್ನು ಶೇಖರಿಸಿ ಹೊಲಿಯುವುದುಂಟು ಇದರ ಹಾಲಿನಿಂದ ಕೆಲವು ಕಡೆ ವೈಸರು ಬಿಣ್ಣಗಳನ್ನು ಮಾಡುತ್ತಾರೆ. ಇದರ ಮಲ ಮೂತ್ರಗಳು ಉತ್ತಮನಾದ ಗೊಬ್ಬರವಾಗುವುದು. ವಿನೋದಕ್ಕಾಗಿ ಗಂಡು ಕುರಿಗಳಿಗೆ ಅಟವಾಡುವುದನ್ನು ಕಲಿಸಿ ಕಾಳಗವನ್ನಾಡಿಸುತ್ತಾರೆ. ಇದರ ಚರ್ಮದಿಂದ ವೇಜು ಮೊದಲಾದ ಸಯುವಾದ ಸಾಮಾನುಗಳನ್ನು ಮಾಡುತ್ತಾರೆ

ಕೃಷ್ಣಶಾಸ್ತ್ರಿ
ಹೊಸಕೆರೆ ಸ್ಕೂಲ್ ಮಾಸ್ಟರ್.

[೨೬೪ನೇ ಪುಟದಶೇಷ

ಕಿಂಡರ್‌ಗಾರ್ಟ್ನ್.

ಚಂಡುಗಳಿಗೆ ಹುರಿಕಟ್ಟಿ ಹಿಂದೆಮುಂದೆ ತೂಗಾಡಿಸುವಂತೆ ಹೇಳಿ ಗಡಿಯಾರದ ಪೆಂಡಿಲಮನ್ನು ಹೋಲಿಸುವುದು

ಹಾಡು :—ಟಿಕ್ಕೆನ್ನುವನೀಂಗಡಿಯಾರಪೆಂಡಿಲ | ತಕ್ಕುಗಾರನಲ್ಲೆ ॥ ಟಿಕ್ಕು ಟಿಕ್ಕುಟಿಕ್ಕೆನುತಲಿಕಾಲವ | ಘಕ್ಕನೆಕಳೆಯುವೆಯಾ ॥೧೧॥

ಚಂಡುಗಳನ್ನು ದಾರಹಿಡಿದುಕೊಂಡು ಗುಂಡಗೆ ತಿರುಗಿಸುವದು. ಬೀಸುವ ಕೆಲ್ಲನ್ನು ಹೋಲಿಸುವದು. ಹಾಡು:—

ತಿರುಗೆಲೆಬೀಸುಕಲ್ಲೆನೀಂ | ಸರಸರನೇಯಿಾಗ ॥ ತಿರುಗದಿರಲ್ನೀನದರಿಂದಿನ್ನಾ ಗಿಯು | ತರಿಬೀಳುವದಲ್ತೆ ॥೧೨॥

ಇನ್ನು ಗುಂಟೆಯಂತೆ ಬಳಿಸುವದು, ಹಣ್ಣುಗಳೆಂದು ಮೊರುವದು ಮೊದಲಾದ ಅನೇಕ ಆಟಗಳನ್ನು ಆಡಿಸಬಹುದು. ಯಾವ ಆಟಗಳನ್ನು ಆಡಲಿ ಕೆಲವು ಪ್ರಶ್ನೆಗಳನ್ನು ಕೇಳಿ ತಕ್ಕುದ ಉತ್ತರಗಳನ್ನು ಪಡೆಯಬೇಕು.

ಕಡೆಗೆ ಹುಡುಗರನ್ನು ಬೆಂಚಿನಮೇಲೆ ಸಾಲಾಗಿ ಕೂಡಿಸಿ ಅಥವಾ ಸಾಲ್ಗಾಗಿ ನಿಲ್ಲಿಸಿ ಚಂಡುಗಳ ಬಣ್ಣವನ್ನು ಹೇಳಿಸಿ. ಅವುಗಳಲ್ಲಿ ಶುದ್ಧ ಮತ್ತು ವಿಶ್ರಬಣ್ಣಗಳನ್ನು ತಿಳಿಸಬೇಕು.

ಶುದ್ಧಬಣ್ಣಗಳು :—೧ ಕೆಂಪು, ೨ ಹಳದಿ, ೩ ನೀಲಿ

೫೫ ಅಡಿಗಳ ವರಿವಿಗೂ ಬೆಳೆಯುವುದು. ಅತಿ ಕಠಿನವಾದ ರೋಮಗಳುಳ್ಳದ್ದು.
(೩) ಸುವಾರು ೩೫ ಅಡಿಗಳ ವರಿಗಿನ ಎತ್ತರ ವುಳ್ಳದ್ದು. ಅತಿ ಭಾರವಾದ ಅಂದರೆ ೫೦೦ ಸ್ಪೌಂಡಿನ ವರಿವಿಗೂ ತೂಕ ವುಳ್ಳದ್ದು. ಅತಿ ಕರ್ಕಶಾಸ್ಥಿಯುಕ್ತವಾದ ಅವಯವಗಳುಳ್ಳದ್ದು. ಕೆಂಪುಛಾಯೆಯುಳ್ಳ ವಾಸಲು ಬಿಳುಪು ಬಣ್ಣದ ಕುಚ್ಚುಟ್ಟ ವುಳ್ಳದ್ದು.

೨. ಶರೀರರಚನೆಯು.

ಯಾವಾಗಲೂ ಬಗ್ಗಿರುವ ಶಿರಸ್ಸುಳ್ಳದ್ದು. ಗಂಡಿಗೆ ಕೊಂಬುಗಳು ಪಕ್ಕಗಳಲ್ಲಿ ಜಡೆಗಳಂತೆ ಜಾಗಿರುತ್ತವೆ. ಕಣ್ಣಿನಕೆಯು ವಿಶೇಷ ತೇಜಸ್ಸುಳ್ಳವಾದ್ದಲ್ಲ. ಅತಿ ಸೂಕ್ಷ್ಮ ತ್ವಚದ್ವಯವುಳ್ಳ ಊಧಸ್ಸನ್ನೂ ಛಳಿಯಿಂದ ದೇಹವನ್ನು ಕಾಪಾಡಿಕೊಳ್ಳಲನುಕೂಲವಾದ ಉಣ್ಣೆಯನ್ನೂ ಶತ್ರುಬಾಧೆಯಿಂದ ತಪ್ಪಿಸಿಕೊಳ್ಳಲನುಕೂಲವಾಗಿ ಪುಟ್ಟಿಯಾದ ಬಾಲವನ್ನು ಹೊಂದಿರುತ್ತದೆ.

೩. ಸ್ವಭಾವವು.

ಹೆಣ್ಣು ಕುರಿಯು ಸಾಮಾನ್ಯತಃ ಶಾಂತ ಸ್ವಭಾವ ವುಳ್ಳದ್ದು; ಸದಾ ಹಿಂದಾಗಿರುವುದಕ್ಕೆ ಅಪೇಕ್ಷಿಸುತ್ತದೆ. ಗಂಡಿನ ಸ್ವಭಾವವನ್ನು ನಂಬುವುದಕ್ಕಾಗುವದಿಲ್ಲ. ಎಲ್ಲಾ ವಲಸುಗಳಲ್ಲಿಯೂ ವಾಸವಮಾಡಬಲ್ಲದು. ಹೆಣ್ಣು ಮರಿಗಳನ್ನು ಬಹಳವಾಗಿ ಪ್ರೀತಿಸುತ್ತದೆ.

೪. ಆಹಾರ.

ಇದು ಹುಲ್ಲನ್ನೂ ಎಲ್ಲಾ ವಿಧವಾದ ಪೈರುಗಳನ್ನೂ ಕೆಲವು ಸೊಪ್ಪುಗಳನ್ನೂ ಆಹಾರವಾಗಿ ಉಪಯೋಗಿಸುತ್ತದೆ. ಇದಕ್ಕೆ ಎಲ್ಲಾ ಮೇವುಗಳಿಗಿಂತಲೂ ಕುರುಳಿಯು ಕೊಟ್ಟರೆ ಅತ್ಯಂತ ಪುಷ್ಟಿಕರವು.

೫. ಉಪಯೋಗವು.

ಇದರ ಉಣ್ಣೆಯಿಂದ ಶಾಲುಗಳೂ ಕಂಬಳಿಗಳೂ ಜಂಪಾನಿಗಳೂ ರತ್ನಗಂಬಳಿಗಳೂ ಜಾಲು ಟೋಪಿಗಳೂ ಮೆತ್ತೆಗಳೂ ಆಗುವುದಲ್ಲದೆ ದೇಹದ ಕೆಲವು ನೋವುಗಳಿಗೆ ಇದರ ಚರ್ಮವನ್ನು ಕಟ್ಟುತ್ತಾರೆ. ಕೆಲವರು ಇದರ ಮಾಂಸವನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಇದರ ಶರೀರದಲ್ಲಿ ಅಡಗಿರುವ ಕೆಲವು ನಾಡಿ ವಿಶೇಷಗಳಲ್ಲಿಯೂ ಮಾಂಸ

೪ ಓಡಿ ತ್ರಿಜ್ಯವುಳ್ಳ ಒಂದು ಚಕ್ರವು ಓವ್ಯಲ್‌ದೂರ ಹೋಗ-ವಾಗ್ಗ ಎಷ್ಟು ಸುತ್ತು ಸುತ್ತುತದೆ.

ಜಿ ಹನುಮಂತರಾವ್
ಅ॥ ವಪ್ಪಾ ಮುಂಡಿಕಲ್.

ಮಾತೃಭಕ್ತಿಗೆ ಪುರಸ್ಕಾರ

ಯೂರೋಪ್‌ದೇಶದಲ್ಲಿ ರಾಜರೂ ಮತ್ತು ಭಾಗ್ಯವಂತರೂ ಇವರ ಪದ್ಧತಿಯೂ ಏನೆಂದರೆ :—ಅವರು ವಾಸವಾಗಿರುವ ಮನೆಯಲ್ಲಿ ಹೊರಗಡೆ ಅಲ್ಪವಯಸ್ಕರಾದ ಭೃತ್ಯರು ಕುಳಿತಿರುವರು. ಅವಶ್ಯಕವಾದರೆ ಮನೆಯವರು ಘಂಟೆಯನ್ನು ಹೊಡೆಯುವರು. ಘಂಟೆಯ ಶಬ್ದವನ್ನು ಕೇಳಿ, ಭೃತ್ಯರು ಬಂದು ನಿಲ್ಲುವರು. ಈ ಸಂಪ್ರದಾಯವು ಈಗ ನಮ್ಮ ದೇಶದಲ್ಲಿಯೂ ಪ್ರಚಾರಗೊಂಡಿದೆ.

ಒಂದುದಿನ ಪ್ರೆಷ್ಯಾದೇಶದ ಅಧೀಶ್ವರನಾದ ಫ್ರೆಡರಿಕನು ಘಂಟೆಯನ್ನು ಹೊಡೆದನು. ಆದರೆ ಭೃತ್ಯನಾವನೂ ಬರಲಿಲ್ಲ. ಆಗವನು ಸ್ವಂತವಾಗಿ ಮನೆಯ ಹೊರಗೆ ಬಂದನು. ಬಂದು ನೋಡಲಾಗಿ ಅಲ್ಲಿದ್ದ ಭೃತ್ಯನಾದ ಹುಡುಗನೊಬ್ಬನೇ ಇದ್ದನು. ಅವನೂ ಮಲಗಿ ನಿದ್ರೆ ಹೋಗುತಲಿದ್ದನು. ಅವನನ್ನು ಎಬ್ಬಿಸುವುದಕ್ಕೆ ಹೋಗಲಾಗಿ ಆ ಹುಡುಗ ಕವಚದ ಜೇಬಿನಲ್ಲಿದ್ದ ಒಂದು ಕಾಗದದ ತುದಿಯು ಕಾಣಿಸುತಲಿತ್ತು. ರಾಜನು ಕುತೂಹಲವುಳ್ಳವನಾಗಿ ಆ ಕಾಗದವನ್ನು ತೆಗದುಕೊಂಡು ಓದಿನೋಡಿದನು ಕಾಗದವನ್ನು ಹುಡುಗನ ತಾಯಿಯು ಬರೆದಿದ್ದಳು ಹುಡುಗನು ತನಗೆ ಬಂದಿದ್ದ ಸಂಬಳವನ್ನೆಲ್ಲಾ ತಾಯಿಯ ವೆಚ್ಚಕ್ಕೆ ಕಳುಹಿಸಿದ್ದನು. ತಾಯಿಯು ಹಣವು ಬಂದು ತಲ್ಪಿದಮೇಲೆ ಹುಡುಗನಿಗೆ ಬರೆದ ಕಾಗದವಾಗಿತ್ತು. ಕಾಗದದಲ್ಲಿ, ವತ್ಸ ! ನೀನು ಕಳುಹಿಸಿದ್ದು ಬಂದು ತಲ್ಪಿ ಬಹಳ ಸಂತೋಷವಾಯ್ತು. ನೀನು ಯಥಾರ್ಥವಾದ ಮಾತೃಭಕ್ತನು. ದೇವರು ನಿನಗೆ ಮಂಗಳವನ್ನುಂಟುಮಾಡಲೆಂದು ಅಶೀರ್ವಾದ ಮಾಡುತ್ತೇನೆ, ಎಂದು ಬರೆದಿತ್ತು.

ಫ್ರೆಡರಿಕನು ಕಾಗದವನ್ನೋದಿ, ಅತಿಶಯವಾಗಿ ಸಂತೋಷಪಟ್ಟನು. ಆ ಹುಡುಗನನ್ನು ಮಾತೃಭಕ್ತನಾದ ಹುಡುಗನನ್ನು ಬಹಳ ಕೊಂಡಾಡುತ್ತ ಮನೆಯೊಳಕ್ಕೆ ಹಿಂದಿರಿಗಿ

ವಿಶ್ರಬಣ್ಣಗಳು :—೧ ಹಸುರು, ೨ ಕಾವಿ, ೩ ಉಗ,
ವಿಶ್ರಬಣ್ಣಗಳಲ್ಲಿ :—೧ ಹಳದಿ ಮತ್ತು ನೀಲಿ ಸೇರಿದರೆ ಹಸುರು ಬಣ್ಣ ನಾಗುವದು. ೨ ಕೆಂಪು ಮತ್ತು ಹಳದಿ ಸೇರಿದರೆ ಕಾವಿಬಣ್ಣ ನಾಗುವದು. ೩ ಕೆಂಪು ಮತ್ತು ನೀಲಿ ಸೇರಿದರೆ ಉದಬಣ್ಣ ನಾಗುವದು. ಇವುಗಳನ್ನು ಚೆಂಡು ತೋರಿಸುವದರ ಮೂಲಕ ತಿಳಿಸಿ ಮುಂದಿನ ಪಾಠವನ್ನು ಪ್ರಾರಂಭಿಸಬೇಕು

ಎಂದೆರಡನೆಯ ತಿಳಿಸಿದರೆ ಸಾಲದು. ಅನೇಕಸಾರಿ ವಿಧವಿಧವಾದ ಪ್ರಶ್ನೆಗಳಿಂದಲೂ ಉತ್ತರಗಳಿಂದಲೂ ಕೋಪತಾಪಗಳಿಗೆ ಅವಕಾಶಗೊಡದೆ ಶಾಂತಚಿತ್ತರಾಗಿ ತಿಳಿಸಬೇಕು.

ಯಂ. ಸುಬ್ಬರಾವ್,
ಹೆಡ್ಮಾಸ್ಟರ್,
ಗರ್ಲ್ಸ್‌ಸ್ಕೂಲ್ ಕೋಲಾರ.

ಕ್ಷೇತ್ರಗಣಿತ.

೬೪ ಗಜ ಎತ್ತರವುಳ್ಳ ಒಂದು ತೆಂಗಿನಮರವು ಸುಂಟರಗಾಳಿಯಿಂದ ಮುರಿದು ಬುಡಕ್ಕೆ ೧೯ ಅಡಿಗಳ ದೂರದಲ್ಲಿ ಭೂಮಿಯಲ್ಲಿ ನೆಟ್ಟುಕೊಂಡಿತು. ಆಗಿದ್ದು ಎಷ್ಟಕ್ಕೆ ಮುರಿದಿರಬಹುದು.

೨ ಒಂದು ಬಹು ಉದ್ದವಾದ ನಿಚ್ಚಣಿಗೆಯು ೧೫ ಅಡಿ ಎತ್ತರವುಳ್ಳ ಗೋಡೆಗೆ ಸಿಟ್ಟಾಗಿ ನಿಂತಿದೆ. ನಿಚ್ಚಣಿಗೆಯ ಕಾಲುಗಳು ಗೋಡೆಯಬುಡದಿಂದ ೯ ಅಡಿ ದೂರ ಸರಿದಿವೆ. ನಿಚ್ಚಣಿಗೆಯು ಮೊದಲು ಗೋಡೆಗೆ ಹೊಂದಿದ್ದ ಸ್ಥಳದಿಂದ ಎಷ್ಟು ಕೆಳಕ್ಕೆ ಜಾರಿರುತ್ತದೆ.

೩ ಒಂದು ಟೊಳ್ಳುಗೋಳದ ಒಳಗಿನ ವ್ಯಾಸ ೪॥ ಅಡಿ, ಹೊರಗಿನ ವ್ಯಾಸ ೫ ಅಡಿ ಇದರಲ್ಲಿ ಎಷ್ಟು ಘನಅಡಿ ಲೋಹವುಂಟು

೪ ೩॥ ಅಡಿ ಅಗಲವೂ ೬ ಅಡಿ ಉದ್ದವೂ ಉಳ್ಳ ೧ ತಗಡಿನಿಂದ ಅಗಲದಕಡೆಯಿಂದಲೂ ಉದ್ದದ ಕಡೆಯಿಂದಲೂ ಬಗ್ಗಿಸಿ ಪಾತ್ರೆಯನ್ನು ಮಾಡಬಹುದಷ್ಟೆ? ಆ ಪ್ರತಿಯೊಂದು ಪಾತ್ರೆಯು ಎಷ್ಟು ಗ್ಯಾಲನ್ನೀರು ಹಿಡಿಯುತ್ತದೆ.

ಜೀವನಲ್ಲಿ ಈ ಚೀಲವನ್ನು ಇಟ್ಟಿದ್ದಾರೆಂದು ಯೋಚಿಸಿ ಭಯಪಡಬೇಕಾದ ಅವಶ್ಯಕತೆ ಇಲ್ಲ. ದಯಾಮಯನಾದ ಜಗದೀಶ್ವರನು ನಮ್ಮ ಹಿತಕ್ಕೋಸ್ಕರವೇ ಅನೇಕ ಒಳ್ಳೇ ಕಾರ್ಯಗಳನ್ನು ಮಾಡುತ್ತಾನೆ. ಅವನ ಇಷ್ಟಾನುಗ್ರಹಗಳಿಂದಲೇ ಈ ರೂಪಾಯಿನ ಚೀಲವು ನಿನ್ನ ಜೀವಿಗೆ ಬಂದಿರಬೇಕು. ನೀನು ಆ ದಯಾಮಯನಾದ ದೇವರನ್ನು ಧ್ಯಾನಮಾಡಿ ಅವನಿಗೆ ವಂದಿಸು. ಯಾರೋ ದುಷ್ಟರಾವರು ದುಷ್ಟವಾದ ಅಭಿಪ್ರಾಯದಿಂದ ಹೀಗೆ ಮಾಡಿದ್ದಾರೆಂದು ಯೋಚಿಸಿ ಭಯದಿಂದ ಸ್ವಲ್ಪವೂ ಕುಂದು ಬೇಡ. ಇದು ನಿನ್ನ ಮಾತೃಭಕ್ತಿಗೆ ಸ್ವಲ್ಪಮಟ್ಟಿಗೆ ಪುರಸ್ಕಾರವಾಗಿ ತಿಳಿ. ಅದಕ್ಕೆ ತಕ್ಕ ಪುರಸ್ಕಾರವನ್ನು ಮುಂದೆ ದೇವರು ದಯ ಪಾಲಿಸುವನೆಂದು ಹೇಳಿದನು.

ಹೀಗೆಂದು ಹೇಳಿ ರಂಜನು ಆ ಭಯದಿಂದ ಚಿದರಿದ ಮನಸ್ಸುಳ್ಳ ಹುಡುಗನಿಗೆ ಅಭಯವನ್ನು ಕೊಟ್ಟು, ಈ ರೂಪಾಯಿಗಳನ್ನು ನಿನ್ನ ತಾಯಿಯ ಒಳಿಗೆ ಕಳುಹಿಸು ಮತ್ತು ಅವಳಿಗೆ ನನ್ನ ನಮಸ್ಕಾರವನ್ನು ತಿಳಿಸಿ ಈದಿನ ಮೊದಲ್ಗೊಂಡು ನಾನು ಅವಳ ಮತ್ತು ನಿನ್ನ ಸಂರಕ್ಷಣೆ ಮಾಡುವ ಭಾರವನ್ನು ವಹಿಸಿದ್ದೇನೆಂದು ಬರೆಯೆಂದು ಹೇಳಿದನು.

ಬಿ. ವೆಂಕಟಾಚಾರ್ಯ.

ಮೈಸೂರು.



ಬಂದು ಒಂದು ಚೀಲದ ತುಂಬ ರೂಪಾಯಿಗಳನ್ನು ತುಂಬಿ ಚೀಲವನ್ನೂ ತಾನು ಓದಿದ ಕಾಗದವನ್ನೂ ತೆಗೆದುಕೊಂಡು ಪುನಃ ಹುಡುಗನ ಹತ್ತಿರ ಬಂದು ಅವುಗಳನ್ನು ಆ ಹುಡುಗನ ಜೇಬಿನಲ್ಲಿ ಇಟ್ಟು ಬಿಟ್ಟು ಒಳಕ್ಕೆ ಹೋಗಿ ಘಂಟೆಯನ್ನು ಹೊಡಿಯುತ್ತ ಕುಳಿತಿದ್ದನು. ಹುಡುಗನಿಗೆ ಎಚ್ಚರವಾಯಿತು. ಆಗಲೂ ಘಂಟೆಯ ಶಬ್ದವು ಆಗುತಲಿತ್ತು. ಅದನ್ನು ಕೇಳಿ ಹುಡುಗನು ಕೂಡ್ಲೆ ರಾಜಸನ್ನಿಧಾನಕ್ಕೆ ಓಡಿಹೋದನು. ರಾಜನು, ನಿನಗೆ ಬಹು ಹೊನ್ನಾಗಿ ನಿದ್ರೆ ಬಂದಿತ್ತೆಂದು ಹೇಳಿದನು. ಹುಡುಗನು ಹೆದರಿ ಏನೊಂದುತ್ತರವನ್ನೂ ಹೇಳಲಾರದವನಾಗಿದ್ದನು. ಇಷ್ಟರೊಳಗೆ ಹುಡುಗನು ಕೈಯ್ಯನ್ನು ಅವನ ಜೇಬಿನಲ್ಲಿಟ್ಟುಕೊಂಡನು. ಅದರೊಳಗೆ ರೂಪಾಯಿನ ಚೀಲವಿರುವದನ್ನು ಕಂಡು ಬಹಳ ಬೇಗಾಗಿ ಕಾತರನಯನಗಳಿಂದ ರಾಜನನ್ನು ನೋಡುತ ನಿಂತುಕೊಂಡನು. ಅವನ ಕಣ್ಣುಗಳಿಂದ ಪ್ರಬಲವಾದ ವೇಗದಿಂದ ಕಣ್ಣೀರು ಸುರಿಯಲಾರಂಭವಾಯಿತು. ಭಯದಿಂದಲೂ ತುಂಬಿದವನಾಗಿ ಒಂದು ಮಾತನ್ನು ಹೇಳುವದಕ್ಕೂ ಸಮರ್ಥನಾಗಲಿಲ್ಲ.

ಅವನ ಇಂತಹ ಅವಸ್ಥೆಯನ್ನು ನೋಡಿ ರಾಜನು, ಎಲೇ ಅಣುಗ! ಏತಕ್ಕೆ ಇಷ್ಟು ಕಾತರನಾಗಿ ಅಳುತ್ತೀಯೆ? ಹೇಳೆಂದನು. ಆಗ ಹುಡುಗನು ನೆಲದಮೇಲೆ ಹೊರಳಾಡಲಾರಿ ನಿಂತು ಕೈಮುಗಿದುಕೊಂಡು ಕಣ್ಣೀರು ತುಂಬಿದವನಾಗಿ ಗದ್ಗದಸ್ವರದಿಂದ, ಮಹಾರಾಜನೆ! ಈ ಹಣ್ಣಚೀಲವು ನನ್ನ ಜೇಬಿಗೆ ಹೇಗೆ ಬಂತೋ ನಾನದನ್ನು ನಿಮೆನು. ಯಾವನೋ ನನಗೆ ಆಗದವನು ನನ್ನನ್ನು ಹಾಳುಮಾಡುವದಕ್ಕೋಸ್ಕರ ಪ್ರಯತ್ನಪಟ್ಟಿದ್ದಾನೆ. ಅದಕ್ಕೆ ಅನುಮಾನವಿಲ್ಲ. ಅವನು ನಾನು ನಿದ್ರೆಹೋಗುತ್ತಿರುವಾಗ ಈ ರೂಪಾಯಿನ ಚೀಲವನ್ನು ನನ್ನ ಜೇಬಿನಲ್ಲಿಟ್ಟು ಹೋಗಿದ್ದಾನೆ. ಕಡೆಗೆ ನನ್ನ ಮೇಲೆ ಕಳವು ತಪ್ಪನ್ನು ಹೊರಿಸಬೇಕೆಂದು ಮಾಡಿದ್ದಾನೆಂದು ಹೇಳುತ್ತಿದ್ದಾಗ ಹುಡುಗನ ವ್ಯೆಯೆಲ್ಲಾ ನಡುಗಲಾರಂಭಿಸಿತು.

ಮೊದಲು ಹುಡುಗನ ಪ್ರಾಮಾಣಿಕತೆಯನ್ನು ತಿಳಿದವನಾಗಿ ರಾಜನು ಅತ್ಯಂತ ಹರ್ಷಪುಳಕಿತನಾಗಿದ್ದನು. ಈಗ ಹುಡುಗನ ಈ ಭಾವವನ್ನು ಕಂಡು ಮೊದಲಿಗಿಂತಲೂ ಹೆಚ್ಚು ಹರ್ಷಪುಳಕಿತನಾದನು. ಮತ್ತು ಹುಡುಗನಮೇಲೆ ಹೆಚ್ಚು ಪ್ರಸನ್ನನಾಗಿ ಎಲೇ ಬಾಲಕ! ನಿನ್ನ ಜೇಬಿನಲ್ಲಿ ರೂಪಾಯಿನ ಚೀಲವನ್ನು ಕಂಡು ಇಷ್ಟು ವ್ಯಸನಪಡಲೇಕೆ? ಯಾರೋ ದುಷ್ಟರಾದವರು ನಿನ್ನನ್ನು ಹಾಳುಮಾಡುವದಕ್ಕೋಸ್ಕರ ನಿನ್ನ

೩ ಹಲಗೆಗಳ್ಳವೇಲೆ ಲಿಕ್ಷರಗಳ ಆಕೃತಿಗಳನ್ನು ಬರೆಯಿಸಿ ಹುಣಸೆಯಬಿತ್ತ
ಗಳನ್ನಾಗಲಿ, ಕಾಳುಗಳನ್ನಾಗಲಿ ಅವುಗಳ ರೇಖೆಗಳಮೇಲೆ ಇಡಿಸಿರಿ.

೪ ಸೌಕ್ಯವಾಕೆಮಟ್ಟಿಗೆ ಶಬ್ದಗಳ ಅರ್ಥಗಳನ್ನು ತಿಳಿಸಕೂಡಿದು.

ಅಭ್ಯಾಸೆ—ಈ ರೀತಿಯಾಗಿ ಇದರಲ್ಲಿ ನಡುವೆ ಇರುವ ಅಕ್ಷರಗಳನ್ನು ಕಲಿಸುವುದು
ಹೇಗೆಯು, ಇಲ್ಲಿ ಏನು ತೆಗೆದರೆ ಹಯ ಆಗುವುದು (ಸಶೇಷ)

ಇದರಿಂದ ಸ್ಕೂಲ್ಸ್ ಮತ್ತು ಇಂಡಸ್ಟ್ರಿಯಲ್ ಪಾಠಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ತಿಳಿಸುವದೇನಂದರೆ—

ಏನೇ ತರಗತಿಯ ಉಪಯೋಗಕ್ಕೋಸ್ಕರವಾಗಿ ತಲಜೇರಿಯಲ್ಲಿರುವ ಬ್ರೆನಲ್ ಕಾಲೇಜ್ ನಕ್ಷೆ ಕಲಿಸುವ ಉಪಾಧ್ಯಾಯರಾದ ಮ॥ ಎ. ಸುಬ್ರಾಯಲುನಾಯಿಡುಯವರಿಂದ ಮಾಡಲ್ಪಟ್ಟಿರುವ ಮದ್ರಾಸ್ ನಕ್ಷೆ ಪುಸ್ತಕಗಳ ಸೀರೀಸ್ (Series) ನಲ್ಲಿ ೧, ೨, ೩ ನೇ ನಂಬರಿನ ಪುಸ್ತಕಗಳು ಕೊತ್ತುಮಾಡಲ್ಪಟ್ಟಿರುತ್ತದೆ. ಈ ಏದನೇ ತರಗತಿಯಲ್ಲಿ ವಾರ ಒಂದಕ್ಕೆ ನಕ್ಷೆ ಬರೆಯುವದಕ್ಕೋಸ್ಕರ ಮೂರುಘಂಟೆಗಳ ಕಾಲ ಕೊತ್ತುಮಾಡಲ್ಪಟ್ಟಿರುತ್ತೆ. ಮತ್ತು ಈ ಮೂರುಪುಸ್ತಕಗಳು ಒಂದು ವರ್ಷಕಾಲದಲ್ಲಿ ಮುಗಿಸಲ್ಪಡತಕ್ಕದ್ದು.

೨ ಒಂದು ವಾರಕ್ಕೆ ನಕ್ಷೆ ಬರೆಯುವುದಕ್ಕಾಗಿ ಎರಡು ಘಂಟೆಗಳಕಾಲ ಕೊತ್ತುಮಾಡಲ್ಪಟ್ಟಿರುವ VI ಮತ್ತು VII ನೇ ತರಗತಿಗಳಲ್ಲಿ ಇದನ್ನು ಪ್ರಾರಂಭಿಸತಕ್ಕವರಿಗೆ ಈ ಮೂರು ಪುಸ್ತಕಗಳೇ ಉಪಯೋಗಿಸಲ್ಪಡತಕ್ಕದ್ದು. ಆದರೆ ಈ ಮೂರು ಪುಸ್ತಕಗಳನ್ನು ಪೂರೈಸಿರತಕ್ಕವರ ವಿಷಯದಲ್ಲಿ ವೈಸೂರು ಇಂಡಸ್ಟ್ರಿಯಲ್ ಪಾಠಶಾಲೆಯು ಸೂಪರ್‌ಟಿಂಡೆಂಟರವರ ಅನುಮತಿಯಿಂದ ಕಾಯಂಟರವರಿಂದ ರಚಿಸಲ್ಪಟ್ಟಿರವ ನಕ್ಷೆ ಪುಸ್ತಕಗಳು ಉಪಯೋಗಿಸಲ್ಪಡತಕ್ಕದ್ದು.

೩ ಮ॥ ಸುಬ್ರಾಯಲು ನಾಯಿಡುಯುವರ ಮತ್ತು ಕಾಯಿಂಟರ್‌ರವರ ನಕ್ಷೆ ಪುಸ್ತಕಗಳು ಇಂಡಸ್ಟ್ರಿಯಲ್ ಪಾಠಶಾಲೆಗಳಿಗೂಕೂಡ ಇಡಲ್ಪಟ್ಟಿರುತ್ತವೆ.

ರುಜು—

ಎಚ್. ಜೆ ಭಾಭಾ,
ಇನ್‌ಸ್ಪೆಕ್ಟರ್ ಜನರಲ್.

ಸಚಿತ್ರ ಪಾಠಗಳು

ರಕ್ಕೆ.

ಕರಹರಕೆಯುಗ

ಈಗ ಹರಹರಿಯು

ಗಯುರಂಗಹರ ಈಚಲುಗಿಡ

ಈರಂಗ ಹರಿಯು.

ಬೋಧಕರಿಗೆ ಸೂಚನೆ :—ಸಾಧನಗಳು—ಕರಿಯಹಲಿಗೆ, ಸೀಮೆಯಸುಣ್ಣ, ಚಿತ್ರ

ಹಲಗೆಯಮೇಲೆ ಕೆಲವು ಸೊನ್ನೆಗಳನ್ನು ಬರೆಯಿರಿ. ಅವುಗಳಮೇಲೆ ಬೇರೆ ಬೇರೆ ಗುರುತುಗಳನ್ನು ಸೇರಿಸುವುದರಿಂದ ಅಕ್ಷರಗಳಾಗುವುದೆಂದು ತಿಳಿಸಿರಿ. ಉದಾ— ○ ಇದು ಸೊನ್ನೆ. ಇದರಮೇಲೆ ' ಈ ಗುರುತನಿಟ್ಟರೆ ರ ಆಗುವುದು. ಚಿತ್ರದಲ್ಲಿ ನೋಡಿ. ಮೊದಲಕ್ಷರ ರ ಚಿತ್ರವುರಕ್ಕೆ ರ ಎಂಬುದರ ಮಗ್ಗುಲಲ್ಲಿ ಮತ್ತೊಂದು ಸೊನ್ನೆ ಸೇರಿಸಿದರೆ ರ ಚಿತ್ರದಲ್ಲಿ ತೋರಿಸು. ರರ ಇವೆ ರಡನ್ನೂ ಸೇರಿಸಿ ಓದು. ಇದು ಈಶ್ವರನ ಹೆಸರಾಯಿತು. ರ ಎಂಬುದರ ಒಳಗೆ ಒಂದು ಚುಕ್ಕೆಯನಿಡು. ರ ಇದರ ಹಿಂದೆ ಹ ಬರೆ. ಹರ ಆಯಿತು.

ಈ ಮೊದಲಿಯಿಂದ ಕೊಟ್ಟಿರುವ ಅಕ್ಷರಗಳನ್ನು ತಿಳಿಸಿ, ಅವುಗಳನ್ನು ಸೇರಿಸಿ ಆಗುವ ಶಬ್ದಗಳನ್ನು ಒದಿಸಿರಿ.

೨ ಕೊಟ್ಟಿರುವ ನಾಲ್ಕು ಚಿತ್ರಗಳನ್ನು ಹೇಳಿಸಿ, ಇವುಗಳ ಮೊದಲಕ್ಷರಗಳು ಈದಿನ ಕಲಿತವುಗಳಲ್ಲಿ ಯಾವುದೆಂದು ತೋರಿಸಿಕೊಟ್ಟು, ಹುಡುಗರಿಂದಲೇ ಬರೆಯಿಸಿರಿ.

ಸೂಚನೆ ಮತ್ತು ಸಮಾಚಾರಗಳು

ಕೋಲಾರದ ನಾರ್ಮಲ್‌ಸ್ಕೂಲ್ ಮುಖ್ಯೋಪಾಧ್ಯಾಯರಾದ ಮೆ॥ ಸಿ
ಶೃಷ್ಣಪ್ಪನವರು ಬೌರಿಂಗ್‌ಪೇಟೆ ಎ. ವಿ. ಪಾಠಶಾಲೆಗೆ ೪೦ ರೂಪಾಯಿ ಸಂ
ಬಳವುಳ್ಳ ೪ ರೂ॥ ಆಲೋರ್ಯಸ್‌ವೇಲಿ ಮುಖ್ಯೋಪಾಧ್ಯಾಯರಾಗಿ ನೇಮಕ
ವಮಡಲ್ಪಟ್ಟಿದಾರೆ.

ಶಿವಮೊಗ್ಗೆ ನಾರ್ಮಲ್‌ಸ್ಕೂಲ್ ಮುಖ್ಯೋಪಾಧ್ಯಾಯರಾದ ಮೆ॥ ಗ
ರಿನಾರಾಯ್ಯಂಗಾರ್ರವರು ಕೋಲಾರದ ನಾರ್ಮಲ್‌ಸ್ಕೂಲಿಗೆ ಮುಖ್ಯೋಪ
ಧ್ಯಾಯರಾಗಿಯೂ, ಬೌರಿಂಗ್‌ಪೇಟೆ ಎ. ವಿ. ಪಾಠಶಾಲೆಯ ಮುಖ್ಯೋಪ
ಧ್ಯಾಯರಾದ ಮೆ॥ ಚನ್ನಕೇಶವಯ್ಯ ಬಿ. ಎ. ಯವರು ಶಿವಮೊಗ್ಗೆಯ ನಾರ್ಮಲ್
ಸ್ಕೂಲಿಗೆ ಮುಖ್ಯೋಪಾಧ್ಯಾಯರಾಗಿಯೂ ನೇಮಕವಮಡಲ್ಪಟ್ಟಿರುತ್ತಾ ರೆ.

ಬೆಂಗಳೂರು ಹಿಂದುಸ್ಥಾನಿ ಪಾಠಶಾಲೆಯ ಸಹಾಯೋಪಾಧ್ಯಾಯರಾ
ದ ಮೆ॥ ಅಬ್ದುಲ್‌ಹುಸೇನ್ ಸಾಹೇಬರು ೨೦ ರೂ॥ ತಲಬಿನಮೇಲೆ ಹೊಸದಾಗಿ ನೇ
ಮಕ ಮಾಡಲ್ಪಟ್ಟಿರವ ಕೋಲಾರದ ಆಂಗ್ಲೋ ಹಿಂದುಸ್ಥಾನಿ ಪಾಠಶಾಲೆ ಇ
ಗ್ಲೀಷ್ ಸಹಾಯೋಪಾಧ್ಯಾಯರ ಕೆಲಸಕ್ಕೆ ನೇಮಕವಮಡಲ್ಪಟ್ಟಿರುತ್ತಾರೆ.

ಶೀರ್ಯದ ಹಿಂದುಸ್ತಾನಿ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಮೆ
ಸೈಯದ್ ದಾಸ್ತಗೀರ್ ಸಾಹೇಬರು ೧೫ ರೂ॥ ಇಂದ ೨೦ ಕ್ಕೆ ಬಡತಿ ಮಾಡಲ್ಪಟ್ಟಿ
ರುತ್ತಾ.

ಬೆಂಗಳೂರು ಸವಾರಲೈನಿನಲ್ಲಿರುವ ಹಿಂದೂಸ್ತಾನೀ ಪಾಠಶಾಲೆಯ ಪ
ಧ್ಯೋಪಾಧ್ಯಾಯರಾದ ಮೆ॥ ಖಾದರ್‌ಮೊಹದ್ದಿ ಸಾಹೇಬರವರು ೧೪ ರೂ॥ ಇಂ
೧೫ ಕ್ಕೆ ಬಡತಿ ಮಾಡಲ್ಪಟ್ಟಿರುತ್ತಾರೆ.

ಚನ್ನಪಟ್ಟಣದ ಆಂಗ್ಲೋ ಹಿಂದುಸ್ತಾನಿ ಪಾಠಶಾಲೆಯ ಸಹಾಯೋಪಾ
ಧ್ಯಾಯರಾದ ಮೆ॥ ಸೈಯದ್ ಮುಸಫೀ ವಿದ್ವಾರ್ಯ್ಯ ಸಾಹೇಬರವರು ೧೦ ರೂ॥ ಇಂ
೧೪ ಕ್ಕೆ ಬಡತಿ ಕೊಡಲ್ಪಟ್ಟಿರುತ್ತಾರೆ.

ಮೇಲಿನ ಪಾಠಶಾಲೆಯ ಸಹಾಯೋಪಾಧ್ಯಾಯರಾದ ಮೆ॥ ಅಬ್ದುಲ್
ತಾರ್ ಸಾಹೇಬರವರು ೭ ರೂಪಾಯಿನಿಂದ ೧೦ ಕ್ಕೆ ಬಡತಿ ಮಾಡಲ್ಪಟ್ಟಿರುತ್ತಾ

ಸೂಚನೆ ಮತ್ತು ಸಮಾಚಾರಗಳು

ಕೋಲಾರದ ನಾರ್ಮಲ್‌ಸ್ಕೂಲ್ ಮುಖ್ಯೋಪಾಧ್ಯಾಯರಾದ ಮೆ॥ ಪಿ. ಕೃಷ್ಣಪ್ಪನವರು ಬೌರಿಂಗ್‌ಪೇಟೆ ಎ. ವಿ. ಪಾಠಶಾಲೆಗೆ ೪೦ ರೂಪಾಯಿ ತಲ ಪು ಹಾಕಿ ೫೫ ರೂ॥ ಆಲೋರ್ಯನ್‌ಸ್ವೀಲೆ ಮುಖ್ಯೋಪಾಧ್ಯಾಯರಾಗಿ ನೇಮಕ ಮಡಲ್ಪಟ್ಟಿದಾರೆ.

ಶಿವಮೊಗ್ಗೆ ನಾರ್ಮಲ್‌ಸ್ಕೂಲ್ ಮುಖ್ಯೋಪಾಧ್ಯಾಯರಾದ ಮೆ॥ ಕೆ. ತರುನಾರಣಯ್ಯಂಗಾರ್ರವರು ಕೋಲಾರದ ನಾರ್ಮಲ್‌ಸ್ಕೂಲಿಗೆ ಮುಖ್ಯೋಪಾ ಧ್ಯಾಯರಾಗಿಯೂ, ಬೌರಿಂಗ್‌ಪೇಟೆ ಎ. ವಿ. ಪಾಠಶಾಲೆಯು ಮುಖ್ಯೋಪಾ ಧ್ಯಾಯರಾದ ಮೆ॥ ಚನ್ನಕೇಶವಯ್ಯ ಬಿ ಎ. ಯವರು ಶಿವಮೊಗ್ಗೆಯ ನಾರ್ಮಲ್ ಸ್ಕೂಲಿಗೆ ಮುಖ್ಯೋಪಾಧ್ಯಾಯರಾಗಿಯೂ ನೇಮಕವಾಡಲ್ಪಟ್ಟಿರುತ್ತಾರೆ.

ಹೊಸಪೇಟೆ ಹಿಂದುಸ್ಥಾನಿ ಪಾಠಶಾಲೆಯ ಸಹಾಯೋಪಾಧ್ಯಾಯರಾದ ಮೆ॥ ಅಬ್ದುಲ್‌ಹುಸ್ಸೇ ಸಾಹೇಬರು ೨೦ ರೂ॥ ತಲಬಿನಮೇಲೆ ಹೊಸದಾಗಿ ಮಂ ಜೂರು ಮಾಡಲ್ಪಟ್ಟಿರವ ಕೋಲಾರದ ಅಂಗ್ಲೋ ಹಿಂದುಸ್ಥಾನಿ ಪಾಠಶಾಲೆ ಇಂ ಗ್ಲೀಷ್ ಸಹಾಯೋಪಾಧ್ಯಾಯರ ಕೆಲಸಕ್ಕೆ ನೇಮಕವಾಡಲ್ಪಟ್ಟಿರುತ್ತಾರೆ.

ಶೀರ್ಯದ ಹಿಂದುಸ್ಥಾನಿ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಮೆ॥ ಸೈಯದ್ ಧಾಸ್ತಗೀರ್ ಸಾಹೇಬರು ೧೫ ರೂ॥ ಇಂದ ೨೦ ಕ್ಕೆ ಬಡತಿ ಮಾಡಲ್ಪಟ್ಟಿರುತ್ತಾರೆ.

ಬೆಂಗಳೂರು ಪವಾರಲೈನಿನಲ್ಲಿರುವ ಹಿಂದೂಸ್ಥಾನೀ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಮೆ॥ ಖಾದರ್‌ಮೊಹದ್ದಿ ಸಾಹೇಬರವರು ೧೪ ರೂ॥ ಇಂದ ೧೫ ಕ್ಕೆ ಬಡತಿ ಮಾಡಲ್ಪಟ್ಟಿರುತ್ತಾರೆ.

ಚನ್ನಪಟ್ಟಣದ ಅಂಗ್ಲೋ ಹಿಂದುಸ್ಥಾನಿ ಪಾಠಶಾಲೆಯು ಸಹಾಯೋಪಾ ಧ್ಯಾಯರಾದ ಮೆ॥ ಸೈಯದ್ ವುಸಫೀ ವಿಸಾರ್ಯ್ ಸಾಹೇಬರವರು ೧೦ ರೂ॥ ಇಂದ ೧೪ ಕ್ಕೆ ಬಡತಿ ಕೊಡಲ್ಪಟ್ಟಿರುತ್ತಾರೆ.

ಚೀಲಿನ ಪಾಠಶಾಲೆಯ ಸಹಾಯೋಪಾಧ್ಯಾಯರಾದ ಮೆ॥ ಅಬ್ದುಲ್‌ಸತ್ತಾರ್ ಸಾಹೇಬರವರು ೭ ರೂಪಾಯಿನಿಂದ ೧೦ ಕ್ಕೆ ಬಡತಿ ಮಾಡಲ್ಪಟ್ಟಿರುತ್ತಾರೆ.

ಚಮತ್ಕಾರವಾದರೂ ಕಲ್ಪಿತಕಥೆಯಾಗಿರುವುದು. ಇತ್ತೀಚೆಗೆ ಸತ್ಯರಾಜಾಚಾರ್ಯರೆಂಬ ಪ್ರಸಿದ್ಧ ಶುದ್ಧವೈದಿಕಶಿರೋಮಣಿಯು ಪೂರ್ವದೇಶಯಾತ್ರೆಗಳಲ್ಲಿ ಸಿಕ್ಕಾಪಟ್ಟೆಯಾಳದ ಚರಿತ್ರೆಯನ್ನೊಳಗೊಂಡಿರುವುದು. ಇದನ್ನು ಓದುವದರಿಂದ ಹಿಂದುಗಳು ತಮ್ಮ ಶ್ರದ್ಧೆ ಮನಸ್ಸು ಬಂದಂತೆ ವೇದಶಾಸ್ತ್ರಗಳನ್ನು ಕಲ್ಪಿಸಿಕೊಂಡು ನ್ಯಾಯವರಿಯದೆ ಇತರರನ್ನು ನಿಂದಿಸುತ್ತಾ ಕಾಲಹರಣಮಾಡುತ್ತಿರುವರು. ಆದ್ದರಿಂದ ಕಾಲಾನುಸಾರವಾಗಿ ಪೂರ್ವದ ಶಾಸ್ತ್ರಗಳನ್ನೆಲ್ಲಾ ಬದಲಾಯಿಸಿ ನ್ಯಾಯವರಿತು ಸದಾಚಾರಗಳನ್ನು ಪ್ರಚುರಗೊಳಿಸಬೇಕಲ್ಲದೆ, ಶ್ರದ್ಧಾಜಾಡ್ಯದಿಂದ ಪ್ರಾಚೀನರು ಮಾಡಿರುವ ಕೆಲವು ವಿರುದ್ಧವಾದಕಟ್ಟುಗಳಿಗೆ ತಾವೂ ಒಳಪಟ್ಟು ಇತರರನ್ನೂ ನಿರ್ಬಂಧದಿಂದ ಒಳಪಡಿಸುವದು ಉಚಿತವಲ್ಲವೆಂದು ತೋರುವದು.

ಈ ಗ್ರಂಥದ ಬೆಲೆಯು ಅರ್ಧರೂಪಾಯಿ, ಅಂಚೇಖರ್ಚಾಸಲ್ಲ. ಬೇರೆ— ಆಪೇಕ್ಷಿಸುವವು ಗ್ರಂಥಕರ್ತರಿಂದಲೂ, ಮೈಸೂರು ಗಾರ್ಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇರ್ಷನ್‌ನಿಂದಲೂ ಬರೆದು ತರಿಸಿಕೊಳ್ಳಬಹುದು

ದೇವೀಚೌಧುರಾಣಿ

ಪ್ರಸಿದ್ಧರಾದ ಶ್ರೀ ಬಂಕಿಂಚಂದ್ರಚಟ್ಟೋಪಾಧ್ಯಾಯರವರಿಂದ ಬಂಗಾಳಿ ಭಾಷೆಯಲ್ಲಿ ರಚಿತವಾಗಿರುವ 'ದೇವೀಚೌಧುರಾಣಿ' ಯೆಂಬ ಈ ಗ್ರಂಥವನ್ನು ಮಾ॥ ರಾ॥ ಶ್ರೀ॥ ಬಿ ವೆಂಕಟಾಚಾರ್ಯರವರು ಕನ್ನಡಿಸಿ, ಆದರದಿಂದ ನಮ್ಮೆಲ್ಲರಿಗೆ ಕಳುಹಿಸಿದರು. ನಾವು ಈ ಗ್ರಂಥವನ್ನು ಜೆನ್ನಾಗಿ ಓದಿ ಸಂತೋಷಪಟ್ಟೆವು. ಈ ತೆರನಾದ ಗ್ರಂಥಗಳು ಹಿಂದೂಸಾಮಾನ್ಯಕ್ಕೆ ಹೊಸದಾಗಿರುವುದು. ಚರಿತ್ರೆಯನ್ನೊಳಗೊಂಡು, ಕಾಲಸ್ಥಿತಿಯನ್ನು, ದೇಶದನಡವಳಿಕೆಗಳನ್ನು, ಜನರ ಆಚಾರಣೆಯನ್ನು ವಿವರಿಸುವುದು ಶ್ಲಾಘ್ಯವಾದವು ದೇವೀಚೌಧುರಾಣಿಯನ್ನು ಅಮೂಲಾಗ್ರ ಓದೋಣದರಿಂದ ಸುಮಾರುನೂರು, ನೂರುಇಪ್ಪತ್ತುವರ್ಷಗಳ ಕೆಳಗೆ ಬಂಗಾಳೆಯು ಯಾವಸ್ಥಿತಿಯಲ್ಲಿತ್ತೆಂಬುದು ವ್ಯಕ್ತವಾಗುವುದು ಅಲ್ಲದೆ ದೇಶೊನ್ನತಿಗಾಗಿಯೂ ಸಾಮಾನ್ಯಜನನಿಗ್ರಹಾರ್ಥವಾಗಿಯೂ ದೇಶಾಭಿಮಾನಿಗಳಿಗೆ ಇದ್ದ ಬಾಧ್ಯತೆಯು ತೋರಿಬರುವುದು ದೇವಿಚೌಧುರಾಣಿಯು ಧೈರ್ಯವೂ, ಸಾಹಸವೂ, ತಾಳ್ಮೆಯೂ ಪತಿಭಕ್ತಿಯೂ ಅತ್ಯಾಶ್ಚರ್ಯವನ್ನುಂಟುಮಾಡುವುದು. ವಿದ್ಯಾಭ್ಯಾಸಮಾಡಿದ್ದುದರಿಂದ ದೇವಿಯು ಯಾವರೀತಿಯಲ್ಲಿ ತನ್ನ ಕಾರ್ಯಗೌರವವನ್ನು ಹೇಗೆ ನಿರ್ವಹಿಸಿದಳು, ವಿದ್ಯಾಭ್ಯಾಸವು ಸ್ತ್ರೀಜನರಿಗೆ ಯಾವಫಲವನ್ನು ಕೊಡುವುದೆಂಬುದಕ್ಕೆ ವಿದ್ಯಾವತಿಯಾದ ದೇವಿಯು ಚರಿತ್ರೆಯೆ ಸಾಕ್ಷಿಯಾಗಿರುವುದು.

ಯುವಾದ ಧರ್ಮ, ಅರ್ಥ, ಕಾಮಗಳ ವಿಷಯವು ತಿಳಿಯುವಂತೆ ಕ್ರಮವಾಗಿ ಮೂರು ಪ್ರಕರಣಗಳನ್ನು ಹೇಳಿ ಪರಮಪ್ರಯೋಜನಾರ್ಥವಾದ ವೈರಾಗ್ಯವು ಅವಶ್ಯಸಾಧನೀಯವಾದ್ದರಿಂದ ಅದಕ್ಕೆ ವಿರೋಧಬಾರದಂತೆ ಕಾಲವನ್ನು ವಿನಿಯೋಗಮಾಡತಕ್ಕ ರೀತಿಯನ್ನು ಬೋಧಿಸಲು ಕಾಲಕ್ರಮೇಣ ಪ್ರಕರಣವನ್ನು ಬರೆದು, ಮೋಕ್ಷಪ್ರಕರಣದಲ್ಲಿ ಮುಖ್ಯವಾಗಿ ಸಾಧನೀಯವಾದ ಮೋಕ್ಷವನ್ನು ಸಾಧಿಸುವದಕ್ಕೆ ಯೋಗಬಲದಿಂದ ಮನಃಶಾಂತಿಯನ್ನು ಸಂಪಾದಿಸಿ ಭಗವಂತನಲ್ಲಿ ಭಕ್ತಿಯುಕ್ತನಾಗಿರಬೇಕೆಂಬ ವಿಚಾರವನ್ನೂ ಕರ್ತವ್ಯತಾಪ್ರಕರಣದಲ್ಲಿ ಪ್ರಪಂಚದಲ್ಲಿ ತನಗೆ ಕೀರ್ತಿದೊರೆಯುವಂತೆ ಪುರುಷನೂ ಸ್ತ್ರೀಯೂ ಮಾಡಬೇಕಾದ ಕಾರ್ಯಗಳನ್ನು ಪುರಾಣವೊದಲಾದವುಗಳಲ್ಲಿರುವಕ್ಕ ಕಥೆಗಳನ್ನೆತ್ತಿ ದೃಷ್ಟಾಂತವಾಗಿ ಮಾಡಿಕೊಂಡು ವಿವರಿಸಿ, ವಿಶೇಷಿಕಪ್ರಕರಣದಲ್ಲಿ ಮನುಷ್ಯನು ಪ್ರಪಂಚದಲ್ಲಿ ಯಾವ ರೀತಿಯಲ್ಲಿರಬೇಕೋ ಆ ರೀತಿಯಲ್ಲಿರದೆ ಬೇರೆ ವಿಧವಾಗಿದ್ದರಿಂದ ಉಂಟಾಗತಕ್ಕ ಕಷ್ಟವನ್ನು ದೃಷ್ಟಾಂತಪೂರ್ವಕವಾಗಿ ಹೇಳಿ, ಪೂಜ್ಯಾಪೂಜ್ಯರೊದಲಾದವರಲ್ಲಿ ಮನುಷ್ಯನು ನಡೆಸತಕ್ಕ ರೀತಿಯನ್ನೆಲ್ಲ ಹೇಳಿರುವದು. ಇದರಲ್ಲಿ ಹೇಳಿರತಕ್ಕ ನೀತಿಯೆಲ್ಲವೂ ರಾಜನಿಗೆ ಹೇಳಿದಂತೆ ರಾಜನನ್ನು ಸಂಬೋಧಿಸಿ ಹೇಳಿರುವದಾದರೂ ಎಲ್ಲರಿಗೂ ಗ್ರಾಹ್ಯವಾಗುವದಿಲ್ಲವೆಂದು ಹೇಳಲಾಗುವದಿಲ್ಲ. ಈ ಗ್ರಂಥದಲ್ಲಿ ಅಲ್ಲಲ್ಲಿ ದೃಷ್ಟಾಂತಕ್ಕೆ ಹಿಂದೂದೇಶದ ಚರಿತ್ರೆಯಲ್ಲಿ ಕಂಡುಬರತಕ್ಕಂಶವನ್ನು ತೆಗೆದುಕೊಂಡಿರುವ ವಾಕ್ಯಸರಣಿಯು ಸಾಮಾನ್ಯವಾಗಿ ಅರ್ಥವಾಗುವಂತಿರುವದು. ಮತ್ತು ಎಲ್ಲರಿಗೂ ಮುಖ್ಯವಾಗಿ ಬಾಲಿಕಾಜನಕ್ಕೆ ಸುಲಭವಾಗಿ ತಿಳಿಯುವಂತೆ ಲೋಕರೂಢಿಯಾದ ಕನ್ನಡದಲ್ಲಿ ಬರೆದಿರುವದರಿಂದ ಅಲ್ಲಲ್ಲಿ ಕಂಡುಬರುವ ಕೆಲವು ವ್ಯಾಕರಣವಿರೋಧಗಳು ವಿನಾ ಹೆಚ್ಚಾಗಿ ಎಲ್ಲೂ ಕಾಣಬರಲಿಲ್ಲ

ಈ ಗ್ರಂಥದಲ್ಲಿ ಹಿಂದೂದೇಶದಚರಿತ್ರೆ ಮೊದಲಾದವುಗಳಲ್ಲಿರುವಂಶಗಳನ್ನು ದೃಷ್ಟಾಂತಕ್ಕೆ ತೆಗೆದುಕೊಂಡು ಮುಖ್ಯವಾಗಿ ನೀತಿಯನ್ನು ಬೋಧಿಸುವದರಿಂದಲೂ, ಓದುವಾಗ ಮನಸ್ಸಿಗೆ ಸಂತೋಷವನ್ನುಂಟುಮಾಡತಕ್ಕ ವರ್ಣನೆಮೊದಲಾದವುಗಳಿಲ್ಲದಿರುವದರಿಂದಲೂ ಬಾಲಿಕಾಜನಕ್ಕೂ ಬಾಲಕಜನಕ್ಕೂ ಗ್ರಾಹ್ಯವಾಗಿರುವದೆಂದು ಹೇಳಬಹುದು. ಈ ಗ್ರಂಥದಲ್ಲಿ ಹೇಳಿರತಕ್ಕ ವಿಷಯಗಳನ್ನು ನೋಡಿದರೆ ಈ ಗ್ರಂಥಕಾರರು ಅನೇಕ ವಿಷಯಗಳನ್ನು ಪ್ರಯತ್ನಪಟ್ಟು ಪರಿಶೀಲಿಸಿ ಬರೆದಿರುವಂತೆ ತೋರುವದಲ್ಲದೆ ಇಷ್ಟರವಟ್ಟಿಗೆ ಲೋಕಾನುಭವವನ್ನು ಪಡೆದು ಕನ್ನಡದಲ್ಲಿ ಕವಿತ್ವವನ್ನು ಬರೆಯತಕ್ಕವರು ಈ ಕಾಲದ ಸ್ತ್ರೀಜನರಲ್ಲಿ ಸಿಕ್ಕುವದು ಕಷ್ಟವೆಂದು ಹೇಳಬಹುದು.

k 1841
1041
5955

ವಿದ್ಯಾದಾಯಿನಿ.

೪ನೇ ಭಾಗ.



೧೯೦೧
1900

ಮೈಸೂರು
ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಲಿಮಿಟೆಡ್

k 1841
1041
5955

ವಿದ್ಯಾದಾಯಿನಿ.

೪ನೇ ಭಾಗ.

೧೯೦೧
1900

ಮೈಸೂರು
ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಲಿಮಿಟೆಡ್

ಮೈಸೂರು ದೇಶೀಯ ಪರೀಕ್ಷೆ.

೧೯೦೦ ನೇ ಇಸವಿ ಲೋವರ್‌ಸೆಕಂಡರಿಗೆ ಇಟ್ಟಿರುವ ಗ್ರಂಥಗಳು.

ಕನ್ನಡ. ವಚನಕಾವ್ಯ, ಹಿಂದೂದೇಶದ ನಾಗರೀಕ, ಕೊನೇ ೬ ಅಧ್ಯಾಯಗಳು.
ಪದ್ಯಕಾವ್ಯ— [೧] ಶನಂದರಾಮಾಯಣ ೧೦೦ ಪದ್ಯಗಳು.
[೨] ಅಜನೃಪಚರಿತ್ರೆ. ಮೆ॥ ಎಸ್. ಜಿ. ನರಸಿಂಹಾ
೧೦೦ ಪದ್ಯಗಳು. [ಚಾರ್ಯ ಕೃತ.

ತೆಲುಗು. ವಚನಕಾವ್ಯ—೧೯೦೦ ನೇ ಇಸವಿಯಲ್ಲಿ ಇಟ್ಟಿರುವುದೆ.
ಪದ್ಯಕಾವ್ಯ— ಡಿಟೋ

ತಮಿಳು. ವಚನಕಾವ್ಯ— ,,
ಪದ್ಯಕಾವ್ಯ— ,,

ಸಂಸ್ಕೃತ ಮೊದಲನೇಭಾಷೆ—
ಚಂಪೂಕಾವ್ಯ— ವಿಶ್ವಗುಣಾದರ್ಶ ಬೊಂಬಾಯಿ ಛಾಪಾ, ೨೫೦ ರಿಂದ ೩೦೦ ರ ವರೆಗೆ.

ಪದ್ಯಕಾವ್ಯ— ವಿಷ್ಣುಪುರಾಣ ೪ನೇ ಅಂಶ ೧೨,೧೩,೧೪,ಅಧ್ಯಾಯಗಳು
,, ಎರಡನೆಯಭಾಷೆ—ವಿಕ್ರಮಾರ್ಕಚರಿತ್ರೆ. ಗೌರ್ನಮೆಂಟ್ ಛಾಪಾ, ೧೯೯೩ ನೇ ಇಸವಿಯಲ್ಲಿದ್ದಂತೆ ಕಥೆಗಳು. ೯ ರಿಂದ ೧೦ ರ ವರೆಗೆ. ೧೩ ರಿಂದ ೧೪ ರ ವರೆಗೆ.

ಲಾಟಿನ್—ಸೀಜರ್‌ಡಿಬೆಲ್ಲೊ ಗ್ಯಾಲಿಕೊ, ಬುಕ್ಕು V.

ಪರಿಷ್ಕೃತ—ಪ್ರಥಮಭಾಷೆ—
ವಚನಕಾವ್ಯ—ನಿಗಾರಿದಾನಿಷ್ ೪ ನೇ ಅಧ್ಯಾಯದ ವರೆಗೆ.
ನಾವಲ್ ಕಿಸೋರಿ ಛಾಪಾ, ಲಕ್ನೊ.
ಪದ್ಯಕಾವ್ಯ— ದಿವಾನಿಮರ್ಝಾರ್ ರಡಿಸೆಡಾಲ್ ರ ವರೆಗೆ.
,, ಎರಡನೆಯ ಭಾಷೆ—ವಚನ—ನಿಗಾರೀದಾನಿಷ್ ಪೀಠಿಕಾಪ್ರಕರಣ ಬಿಟ್ಟು ೧, ೨, ೩, ಅಧ್ಯಾಯಗಳು.
ಪದ್ಯ— ದಿವಾನಿ ಮರ್ಝಾರ್, ರದೀಫ್‌ತೆ, ಕೊನೆವರೆಗೆ

ಉರ್ದು—ವಚನ—ತಾಲಿಮುಲ್ ಇಂತಾಜಾಂ.
ಮೌಲ್ವಿಜಾಕ್ಷುಲ್ಲಾ ರವರಿಂದ, ಷಂಸುಲ್‌ಮತಾಬಿ ಛಾಪಾ, [ದೇಹಲಿ.
ಪದ್ಯ—ಮಜ್ಮುಯಿನಿನಾಜ್ಮಿಹಾಲಿ, ಎಂ. ಎ. ಓ, ಕಾಲಿಜ್, ಅಲಿಘರ್.

ವಿಷಯಸೂಚನೆ

ವಿದ್ಯಾದಾಯಿನಿಯು ಎಂಟನೆಯ ಬಾಗ ೯೦೦ ನೆಯ ಇಸವಿ

	ವಿಷಯಗಳು..	ಪುಟ
I	ಎಡಿಟರವರ ನೋಟ್ಸ್.	೧, ೭೫, ೪೯, ೬೩, ೯೭, ೧೨೨, ೧೪೫, ೧೫೯, ೧೭೯, ೨೧೩, ೨೪೧, ೨೪೯, ೨೬೦
II	ಪ್ರಸಿದ್ಧಪುರುಷರ..	
	1. ಪೆಸ್ಟಲಾಟ್ಟಿಯವರ ಚರಿತ್ರೆ.	೩, ೨೨.
	2. ಆರ್ನಲ್ಡರವರ ಚರಿತ್ರೆ.	೯೪, ೧೪೩, ೧೬೧, ೨೨೨, ೨೪೩, ೨೬೯.
III	1. ಕಿಂಡರ್‌ಗಾರ್ಟನ್	೧೦, ೪೩, ೬೩, ೧೫೯.
	2. ಕಥೆಗಳು.	೪೪, ೭೧, ೧೨೦, ೧೩೯, ೧೬೩, ೧೪೪, ೨೧೬, ೨೩೭, ೨೬೩.
	3. ಹಾಡು.	೬೯, ೨೪೭.
IV	1. ವ್ಯಾಕರಣಶಾಸ್ತ್ರ.	೬, ೩೫, ೬೫, ೪೨, ೧೦೪, ೧೫೧, ೧೭೫, ೨೦೫, ೨೨೫, ೨೪೫, ೨೬೫
	2. ಅಕ್ಷರಸಂಯೋಜನೆ.	೧೪, ೪೪, ೬೦.
V	ಆರೋಗ್ಯಶಾಸ್ತ್ರ.	೫೫, ೪೫, ೧೦೪, ೧೬೩, ೧೫೫.
VI	ವನಸ್ಪತಿಶಾಸ್ತ್ರ.	
	1. ತಂಗಡಿ ಗಿಡ.	೩೪.
	2. ನೂವಿನಮರ.	೧೪೧.
	3. ಸಾಸಿವೆ.	೨೦೭.
VII	ಗಣಿತಶಾಸ್ತ್ರ.	೪೯, ೧೧೩, ೧೭೩, ೨೦೪, ೨೩೨, ೨೫೬.
VIII	ಭೂಗೋಳಶಾಸ್ತ್ರ.	೩೯, ೫೪, ೧೧೧, ೧೫೪, ೧೭೩, ೨೧೧, ೨೩೩, ೨೪೭, ೨೬೭.

ಅಪ್ಪರ ಸಿಂಡಿಕೇಟ್ ಪರೀಕ್ಷೆಗೆ.

ಕನ್ನಡ—ಒಂದೇ ಭಾಷೆ, ಪದ್ಯಕಾವ್ಯ [೧] ನೀತಿಮಂಜರಿ ಮಾ॥ ರಾ॥ ಆಡಿ.. ನವ ೧೦೦ ಪದ್ಯಗಳು. ಸಿಂಹಾಚಾರ್ಯ ಎಂ. ಎ. ಯವರಿಂದ.

[೨] ಜಯನೃಪಕಾವ್ಯ. ಸಂಧಿ ೧. ೨.
[೩] ಗಿರಿಜಾಕಲ್ಯಾಣ. ಆಶ್ವಾಸ ೧, ೨.

ವಚನ—[೧] ಹರ್ಷಚರಿತ್ರೆ. ಪಂಡಿತ ಕುಂಡಲಗಿರ್ಯಾಚಾರ್ಯರಿಂದ. ೧ ರಿಂದ ೪ ಆಶ್ವಾಸ.

[೨] ಚಂಡಕೌಶಿಕನಾಟಕ. ಪಂಡಿತ ಬಸಪ್ಪ ಶಾಸ್ತ್ರಿಗಳಿಂದ.

ಹಿಂದೂಸ್ತಾನಿ—ಒನ್ನೇ ಭಾಷೆ, ವಚನ—ಉರ್ದುಕೋರ್ಸ್, ಮೌಲ್ವಿ ಗುಲ್ಜಾಜಾಕ್ಖ್ ಲಷ್ಕರವರಿಂದ.

ಪದ್ಯ—ದಿವಾನಿ ನಾಜ್ಮಿ ದೇಹಲ್ವಿ ವಿನಹಲ್ ಕಿತೋರಿ ಭಾಷಾ ಲಕ್ನೊ.

ಸಂಸ್ಕೃತ—೨ನೇ ಭಾಷೆ—(೧) ರಘುವಂಶ, ೭, ೧೦, ಸರ್ಗಗಳು.
[೨] ಪಂಚತಂತ್ರ ೨ನೇ ಭಾಗ, ಬೊಂಬಾಯಿ ಭಾಷಾ ೧ರಿಂದ ೪೫ ಪುಟಗಳವರೆಗೆ.

ಪಾರ್ಸಿ—ಎರಡನೇ ಭಾಷೆ— ಪಂಜಾಬ್ ಯೂನಿವರ್ಸಿಟಿಯ ' ಇಂಟರ್ ವಿ.ಡಿಯ.ಟ್ ಕೋರ್ಸ್‌ಪಾರ್ಸಿ ಮಷಿಲಿಂ ಭಾಷಾ, ಲಾಹೋರ್.

ಹೆಚ್. ಜೆ. ಭಾಭಾ,
ಪ್ರಸಿಡೆಂಟ್.

ವಿಷಯಸೂಚನೆ.

ವಿದ್ಯಾದಾಯಿನಿಯು ಎಂಟನೆಯು ಭಾಗ ೯೯೦ನೆಯು ಇಸವಿ,

	ವಿಷಯಗಳು.	ಪುಟ.
I	ಎಡಿಟರವರ ನೋಟ್ಸ್.	೧, ೭೫, ೪೯, ೬೩, ೯೭, ೧೨೧, ೧೪೫, ೧೬೯, ೧೭೯, ೧೯೫, ೨೦೭, ೨೪೧, ೨೪೯, ೨೬೫
II	ಪ್ರಸಿದ್ಧಪುರುಷರ.	
	1. ಪೆಸ್ಟಲಾಟ್ಟಿಯವರ ಚರಿತ್ರೆ.	೩, ೨೩.
	2. ಆರ್ನಲ್ಡರವರ ಚರಿತ್ರೆ.	೯೪, ೧೪೩, ೧೩೧, ೨೨೨, ೨೪೩, ೨೬೯.
III	1. ಕಿಂಡರ್‌ಗಾರ್ಟನ್	೧೯, ೪೩, ೬೩, ೧೨೯.
	2. ಕಥೆಗಳು.	೪೪, ೭೧, ೧೨೦, ೧೩೯, ೧೬೩, ೧೮೬, ೨೧೬, ೨೩೩, ೨೬೩.
	3. ಹಾಡು.	೬೯, ೨೪೩.
IV	1. ವ್ಯಾಕರಣಶಾಸ್ತ್ರ.	೬, ೩೫, ೬೫, ೪೨, ೧೦೪, ೧೫೧, ೧೭೫, ೨೦೫, ೨೨೫, ೨೪೫, ೨೬೫, ೨೭೫
	2. ಅಕ್ಷರಸಂಯೋಜನೆ.	೧೪, ೪೪, ೬೦.
V	ಆರೋಗ್ಯಶಾಸ್ತ್ರ.	೪೫, ೪೫, ೧೦೪, ೧೨೩, ೧೫೩.
VI	ವನಸ್ಪತಿಶಾಸ್ತ್ರ.	
	1. ತಂಗಡಿ ಗಿಡ.	೩೪.
	2. ನಾವಿನಮರ.	೧೪೧.
	3. ಸಾಸಿವೆ.	೨೦೨.
VII	ಗಣಿತಶಾಸ್ತ್ರ.	೪೯, ೧೧೩, ೧೩೩, ೧೭೪, ೧೩೨ ೨೪೬.
VIII	ಭೂಗೋಳಶಾಸ್ತ್ರ.	೩೯, ೪೪, ೧೧೧, ೧೪೪, ೧೭೩ ೨೧೧, ೨೩೩, ೨೪೨, ೨೬೩.

ಅಪ್ಪರ್ ಸೆಕಂಡರೀ ಪರೀಕ್ಷೆಗೆ.

ಕನ್ನಡ—ಒನೇ ಭಾಷೆ, ಪದ್ಯಕಾವ್ಯ [೧] ನೀತಿಸಂಜೀ ೧೦೦ ಪದ್ಯಗಳು. ಮು॥ ರಾ॥ ಆರ್. ನರಸಿಂಹಾಚಾರ್ಯ ಎಂ. ಎ. ರವರಿಂದ.

[೨] ಜಯನೃಪಕಾವ್ಯ. ಸಂಧಿ ೧ ೨.
[೩] ಗಿರಿಜಾಕಲ್ಯಾಣ. ಆಶ್ವಾಸ ೧, ೨.

ವಚನ—[೧] ಹರ್ಮಚರಿತ್ರೆ. ಪಂಡಿತ ಕುಂಡಲಗಿರ್ಯಾಚಾರ್ಯರಿಂದ. ೧ ರಿಂದ ೪ ಆಶ್ವಾಸ.

[೨] ಚಂಡಕೌಶಿಕನಾಟಕ. ಪಂಡಿತ ಬಸಪ್ಪ ಶಾಸ್ತ್ರಿಗಳಿಂದ.

ಹಿಂದೂಸ್ತಾನಿ—ಒನೇ ಭಾಷೆ, ವಚನ—ಉರ್ದೂಕೋರ್ಸ್, ಮುನ್ಸುಲ್ ಉಲ್ಮಾಜಾಕ್ಕುಲ್ಲಾರವರಿಂದ.

ಪದ್ಯ—ದಿವಾನಿ ನಾಜ್ಮಿ ದೇಹಲ್ವಿ ವಿನಯಲ್ ಕಿಶೋರಿ ಭಾಷಾ ಲಕ್ಕೊ.

ಸಂಸ್ಕೃತ—ಒನೇ ಭಾಷೆ—(೧) ರಘುವಂಶ, ೭, ೧೦, ಸರ್ಗಗಳು.

[೨] ಪಂಚತಂತ್ರ ಒನೇ ಭಾಗ, ಬೊಂಬಾಯಿ ಭಾಷಾ ೧ರಿಂದ ೪೫ ಪುಟಗಳವರೆಗೆ.

ಪಾರ್ಸಿ—ಎರಡನೇ ಭಾಷೆ— ಪಂಜಾಬ್ ಯೂನಿವರ್ಸಿಟಿಯ 'ಇಂಟರ್ ವಿ.ಡಿಯ.ಟ್' ಕೋರ್ಸ್ ಪಾರ್ಸಿ ಮಖಿಲಿಂ ಭಾಷಾ, ಲಾಹೋರ್.

ಹೆಚ್. ಜೆ. ಭಾಭಾ,
ಪ್ರಸಿಡೆಂಟ್.

ವಿಷಯಗಳನ್ನು ಬರೆದವರ ಹೆಸರು.

ಮು॥ ರಾ॥ ಶ್ರೀ॥

1. ಎಡಿಟರ್.
2. ಎಂ. ವೆಂಕಟಕೃಷ್ಣಯ್ಯನವರು.
3. ಕುಂಡಲಗಿರಾ ್ಯಚಾರ್ಯರವರು, ಪಂಡಿತರು.
4. ಎ. ಹಿರಿಯಣ್ಣ, ಬಿ. ಎ. ಎಲ್. ಟಿ.
5. ಡಿ. ವೆಂಕಟರಂಗಮಯ್ಯ, ಬಿ. ಎ. ಎಲ್. ಟಿ.
6. ನರಸಿಂಹಾಚಾರ್, ವೆಟರ್ನರಿ ಸರ್ಜ್.
7. ಕೆ. ನರಸಿಂಹೈಂಗಾರ್, ಅಗ್ರಿಕಲ್ಚರಲ್ ಲೆಕ್ಚರರ್.
8. ಎಸ್. ರಾಮರಾವ್, ಬಿ. ಎ.
9. ಕೆ. ಸಂಜೀವಸೆಟ್ಟರು, ಬಿ. ಎ.
10. ಎಂ. ವೆಂಕಟೇಶಯ್ಯ, ಬಿ. ಎ.
11. ಅಹೋಬಲಭಾರತಿ, ಅ॥ ಮಾ॥ ಮಹಾರಾಣಿ ಗರ್ಲ್ಸ್ ಕಾಲೇಜ್.
12. ಬಿ. ವೆಂಕಟಾಚಾರ್ಯರು, ಮುನಸೀಫ್.
13. ಶ್ರೀನಿವಾಸರಾಘವಾಚಾರ್, ಶಿವಮೊಗ್ಗ ಕಾಲೇಜ್ ಪಂಡಿತರು.
14. ಕೆ. ರಾಮಸ್ವಾಮೈಂಗಾರ್, ಹೆ॥ ಮಾಸ್ಟರ್.
15. ಜಿ. ಭೀಮರಾವ್, ಬಿ. ಎ.
16. ಕೆ. ನರಸಿಂಹಮೂರ್ತಿರಾವ್, ಸ್ಕೂಲ್ ಮಾಸ್ಟರ್.
17. ಚೆಲ್ಲಮ್ಮನವರು.

ಮುಂತಾದವರು.

IX ವ್ಯವಸಾಯಶಾಸ್ತ್ರ. ೧೩೪, ೨೨೪, ೨೩೪.

X ಶಾಸ್ತ್ರ.

ಬೆಳಕು. ೨೪೯, ೩೪೨.

ಜಲಜನಕವಾಯುವಿನ ಜ್ವಾಲೆ. ೨೫೩.

ಮಳೆಯು ಆಳತೆ. ೨೦೭

ಮೇಘಗಳು. ೧೧೦.

XI 1. ಸಾಹಕ್ರಮ. ೫೧, ೫೪, ೬೦.

2. ಶಿದ್ದುವಿಕೆ. ೩೧

3. ವಸ್ತುಸಾಹ. ೬೩.

4. ಟಿಪ್ಪಣಿ. ೩೯–೪೫, ೧೦೩, ೧೨೬, ೧೪೧.

XII ವಿದ್ಯಾಭ್ಯಾಸದ ಇಲಾಖೆಯು ೪೫, ೧೧೬, ೧೪೩, ೧೬೦, ೧೬೬, ಸರ್ಕ್ಯುಲರ್‌ಗಳು ಸೂಚನೆಗಳು ೨೧೪, ೨೪೧, ೨೫೪, ೨೬೧. ಮತ್ತು ಸವಲಾಚಾರಗಳು.

XIII ಪ್ರಶ್ನೆಪತ್ರಿಕೆ. ೧೧೪–೧೪೫.

XIV ವಿಶೇಷ ವಿಷಯಗಳು–ಉಪನ್ಯಾಸವೇ ಮುಂತಾದುವು.

೧. ವಿದ್ಯಾಭ್ಯಾಸದ ಕಾಲ. ೨೪.

೨. ಔರೋಡಾ ಸಂಸ್ಥಾನದ ವಿದ್ಯಾಭ್ಯಾಸ. ೨೪.

೩. ವಚನಕಾವ್ಯ. ೧೪೧.

೪. ವಿದ್ಯಾರ್ಥಿಗಳಿಗೆ ಬುದ್ಧಿವಾದ. ೧೯೫.

೫. ವಿದ್ಯಾಭ್ಯಾಸ, ಬಾಲ್ಯವಿವಾಹ. ೨೦೫.

೬. ಮತಧರ್ಮ. ೨೩೩.

೭. ಪಾಶ್ಚಾತ್ಯರ ವಿದ್ಯಾಪ್ರಚಾರ. ೨೪೫.

೮. ಕಂದಿಕೆರೆ ಸ್ಕೂಲ್ ರಿಪೋರ್ಟು. ೪೨.

೯. ಗ್ರಂಥವಿಮರ್ಶೆ. ೧೧೪.

೧೦. ಕೂಚ್‌ಬೀಹಾರ್ ರಾಜ್ಯ. ೧೩೫.

MYSORE GOVERNMENT ORIENTAL LIBRARY

ವಿದ್ಯಾದಾಯಿನಿ.

ಭಾಗ ೪.] ಜನವರಿ ೧೯೦೦. [ಸಂಚಿಕೆ ೧೦.

ಎಡಿಟರವರ ನೋಟ್ಸ್.

ಬಾಲವಿದ್ಯಾಭ್ಯಾಸದಲ್ಲಿ ಉಪಾಧ್ಯಾಯರುಈಜೆಗೆ ವಿಶೇಷವಾಗಿ ಪುಸ್ತಕ ಪಾಠವೂ ಡಿಸುವವರಲ್ಲಿಗವನಕೊಡುವದೇ ಹೊರತು ಸಾಮಾನ್ಯವಾಗಿ ಇಂದ್ರಿಯಪಾಟವವನ್ನು ಅಭಿವೃದ್ಧಿಗೊಳಿಸಲು ಯತ್ನಿಸುವುದಿಲ್ಲವೆಂದು ಅನೇಕರು ಹೇಳುತಿರುವರು. ಕೆಲವು ದಿವಸದ ಕೆಳಗೆ ತಿರುವಾಂಕೂರು ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟ್‌ರಾದ ಮೆ॥ ಜಿ. ಟಿ ವೆಂಕೆಂಜಿ ಸಾಹೇಬರವರು ಒಂದು ಸಭೆಯಲ್ಲಿ, ಮೇಲೆಹೇಳಿದ ವಿಷಯವಾಗಿ ತಮ್ಮ ಅನುಭವವನ್ನು ತಿಳಿಸಿದರು; ಅದೇನೆಂದರೆ:—'ನಾನು ಹಿಂದೂಸ್ಥಾನಕ್ಕೆ ಬಂದೊಡನೆ ಮದ್ರಾಸಿಗೆ ಉತ್ತರದಲ್ಲಿರುವ ನೆಲ್ಲೂರು ಡಿಸ್ಟ್ರಿಕ್ಟಿಗೆ ನನ್ನನ್ನು ಕಳುಹಿಸಿದರು. ನಾನು ಅಲ್ಲಿಗೆ ಸೇರಿದ ಮೂರುದಿನಗಳಲ್ಲಿ ಸ್ಕೂಲ್ ಇನ್‌ಸ್ಪೆಕ್ಟರವರು ಅಲ್ಲಿನ ಸ್ಕೂಲ್‌ಪರೀಕ್ಷೆಗಾಗಿ ಬಂದರು. ಒಂದುದಿನ ದೆಳಿಗ್ಗೆ ಅಲ್ಲಿನ ವಿದ್ಯಮಾನ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿಂದ, ಆ ಇನ್‌ಸ್ಪೆಕ್ಟರೊಡನೆ ನಾನೂ ಸ್ಕೂಲಿಗೆ ಹೋದೆನು. ಇನ್‌ಸ್ಪೆಕ್ಟರವರು ಪಾಠಪುಸ್ತಕಗಳಲ್ಲಿ ಬಾಲಕರನ್ನು ಪರೀಕ್ಷಿಸಿದರು. ಬಾಲಕರು ಪುಸ್ತಕದಲ್ಲಿ ಕೊಟ್ಟಿರುವುದನ್ನು ತಕ್ಕಮಟ್ಟಿಗೆ ತೃಪ್ತಿಕರವಾಗಿಯೇ ಹೇಳಿದರು. ನಂತರ, ಇನ್‌ಸ್ಪೆಕ್ಟರವರು ಪುಸ್ತಕವನ್ನು ಮುಚ್ಚಿ ನೆಲ್ಲೂರಿಂದ ಮದ್ರಾಸಿಗೆ ಎಷ್ಟುದೂರವಿರುವುದು? ಎಂದು ಪ್ರಶ್ನೆಮಾಡಿದರು. ಆಗ ನಾನು ಇದೇನು! ೧೦೦ನೆಯ ಮೈಲಿಕಲ್ಲು ಕಣ್ಣಿದಿರಾಗಿ ದೊಡ್ಡದಾಗಿ ಬಾಗಿಲಹೊರಗೇನೆ ನಿಂತಿರುವುದೆ! ಎಂದೆನು. ಅದಕ್ಕೆ ಅವರು 'ಆಕಾರಣದಿಂದಲೆ ನಾನು ಕೇಳುವುದು' ಎಂದರು. ಆ ತರಗತಿಯಲ್ಲಿದ್ದ ಬಾಲಕರಲ್ಲಿ ಒಬ್ಬರಾದರೂ ಹೇಳಲಿಲ್ಲ. ಆ ಪಾಠಶಾಲೆಯು ಬಾಗಿಲಲ್ಲೇ, ದಾರಿಯಲ್ಲಿ ದೊಡ್ಡದಾದ ಮೈಲಿಕಲ್ಲು ನಿಂತಿತ್ತು. ಈ ಪ್ರಶ್ನೆಗೆ ಉತ್ತರಕೊಡದೆ ಇದ್ದುದನ್ನು ನೋಡಿ ನನಗೆ

ಪೆಸ್ಟಲಾಟ್ಸಿಯವರ ಚರಿತ್ರೆ

ಒಳ್ಳೇಪ್ರಯತ್ನಗಳಲ್ಲಿ ಅನೇಕ ವಿಘ್ನಗಳು ಬರುವವು. ೧೮೦೦ನೆ ಇಸವಿಯ ಜನವರಿ ಗುರ್ಲೆತಾರೀಖಿನಲ್ಲಿ ಎಲ್ಲಾ ಉಪಾಧ್ಯಾಯರುಗಳನ್ನು ಸೇರಿಸಿ ಯಾವಾಗಿನಂತೆ ಒಂದು ಸಭೆಯನ್ನು ಮಾಡಿ ತಾವು ಮಾಡುವ ಕಾರ್ಯಗೌರವವನ್ನು ತಮ್ಮ ಕೆಲಸಗಳು ಫಲಕಾರಿಗಳಾಗಬೇಕಾದರೆ ಎಲ್ಲರು ಹೇಗೆ ಶ್ರದ್ಧೆಯಿಂದ ಕೆಲಸ ಮಾಡಬೇಕೊ ಅದನ್ನು ಉಪನ್ಯಾಸಪೂರ್ವಕ ಎಲ್ಲರಿಗೂ ಹೇಳಿದರು. ಲೋಕದಲ್ಲಿ ಸಂಬಳಕ್ಕೆ ತಕ್ಕ ಕೆಲಸವನ್ನು ಮಾತ್ರ ಮಾಡುತ್ತೇನೆ ಎನ್ನುವವರೆ ದೇಶಾಭಿಮಾನಿಗಳು. ಸಂಬಳತೆಗೆದುಕೊಂಡು ತಮ್ಮ ಕೆಲಸವನ್ನು ಮಾಡದೆ ಮೈಗಳ್ಳತನಮಾಡುವ ಮಹಾನು ಭಾವರು ಬೇಕಾದಷ್ಟಾಗಿರುತ್ತಾರೆ. ಸಂಬಳಬರಲಿ ಬರದೇಇರಲಿ ಅದಕ್ಕೆ ಗಮನವನ್ನು ಕೊಡದೆ ಹಿಡಿದ ಕೆಲಸವನ್ನು ಚೆನ್ನಾಗಿ ಮಾಡಿ ಜನಕ್ಕೆ ಉಪಕಾರವನ್ನು ಮಾಡಿ ಯಶೋವಂತರಾಗಬೇಕೆಂಬ ಜನರು ಕೋಟಿಗೊಬ್ಬರು ಸಿಕ್ಕುವರೊ ಇಲ್ಲವೋ ತಿಳಿಯದು. ಪೆಸ್ಟಲಾಟ್ಸಿಯವರ ಸಹಾಯೋಪಾಧ್ಯಾಯರು ತಮ್ಮ ಕೆಲಸಗಳಲ್ಲಿ ಉತ್ಸಾಹಶಾಲಿಗಳಾಗಲಿಲ್ಲ. ಪೆಸ್ಟಲಾಟ್ಸಿಯವರು ಎಲ್ಲರ ನ್ಯೂನಾತಿರಿಕ್ತಗಳನ್ನು ಪ್ರತ್ಯಕ್ಷನೋಡಿ ಸರಿಮಾಡಿಕೊಳ್ಳುತ್ತಾ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಇವರ ಪಾಠಕ್ರಮವು ಬಹಳ ವಿಲಕ್ಷಣವಾಗಿತ್ತು. ಇವರಪ್ರಕಾರ ಪ್ರತಿ ಒಬ್ಬ ವಿದ್ಯಾರ್ಥಿಗೂ ಅವರ ಗಮನವಿರಬೇಳುತ್ತಿತ್ತು. ವಿದ್ಯಾರ್ಥಿಗಳು ಅನೇಕರಾದರು. ಅವರ ವಯಸ್ಸು ಗ್ರಹಣಶಕ್ತಿ ಮೊದಲಾದವುಗಳು ಭಿನ್ನಭಿನ್ನವಾಗಿದ್ದವು. ವಿದ್ಯಾಭ್ಯಾಸವನ್ನು ನೋಡಿ ಕೊಳ್ಳುವದಲ್ಲದೆ ವಿದ್ಯಾರ್ಥಿಗಳ ಶೀಲಸ್ವಭಾವದ ವಿಚಾರಣೆಯೂ ಇವರಿಗೆ ಸೇರಿತ್ತು. ಇದಲ್ಲದೆ ವಿದ್ಯಾರ್ಥಿಗಳಲ್ಲಿ ಅನೇಕರು ಬೇರೆಬೇರೆ ದೇಶದವರಾಗಿಯೂ ಬೇರೆಬೇರೆ ಭಾಷೆಯವರಾಗಿಯೂ ಇದ್ದರು. ಎಲ್ಲಾ ಸಹಾಯೋಪಾಧ್ಯಾಯರು ಇವರ ಹಾಗೆ ಶ್ರದ್ಧೆಯಿಂದ ಕೆಲಸಮಾಡಿದ್ದರೆ ಎಲ್ಲಾ ವಿದ್ಯಾರ್ಥಿಗಳನ್ನು ವಿದ್ಯಾವಿನಯಸಂಪನ್ನರನ್ನಾಗಿ ಮಾಡಬಹುದಾಗಿತ್ತು. ಅವರ ಅಶ್ರದ್ಧೆಯಿಂದ ಇದಕ್ಕವಕಾಶವಾಗಲಿಲ್ಲ. ಇದರಿಂದ ಸ್ವಲ್ಪ ಗಲಾಟೆಯಾಗುತ್ತಿತ್ತು. ಕ್ರಮಕ್ರಮವಾಗಿ ಇವರ ಸಹಾಯೋಪಾಧ್ಯಾಯರಲ್ಲಿ ಪರಸ್ಪರ ಕಲಹವುಂಟಾಯಿತು. ಲಿದಾಗ್ಯೂ ಅವರಿಗೆ ಹಿತೋಪದೇಶಗಳನ್ನು ಮಾಡುತ್ತಾ ಅವರಿಗೆ ಪ್ರೀತಿಯನ್ನು ತೋರಿಸಿಕೊಂಡು ಕೊಡಿದಷ್ಟಾಗಲೂ ಸೌಮ್ಯಪ್ರಕಾರವಾಗಿ ಇದ್ದ

ತಾಂಡವ ಆಶ್ಚರ್ಯವಾಯಿತು. ಠಂಡೂಸ್ಥಾನದಲ್ಲಿ ಬಾಲಕರು ಪುಸ್ತಕಪಾಠವನ್ನು ಚೆನ್ನಾಗಿ ಕಂಠಪಾಠಮಾಡಬಲ್ಲರು. ಅನೇಕ ಸೂತ್ರಗಳನ್ನು ಗಟ್ಟಿಮಾಡಿಕೊಂಡು ಜ್ಞಾಪಕದಲ್ಲಿಡಲು ಶಕ್ತಿಯುಳ್ಳವರು. ಆದರೆ ವಿಚಕ್ಷಣೆಯು ಬಹಳಮಟ್ಟಿಗೆ ಕಡಮೆ ಪುಸ್ತಕದಲ್ಲಿ ಇಲ್ಲದಿರುವುದನ್ನು ಸ್ವಬುದ್ಧಿಯಿಂದ ವಿಷಯಗಳನ್ನು ತಿಳಿಯಲೇ ಆಗಲಿ, ಆಲೋಚಿಸಲೆ ಆಗಲಿ ಯತ್ನಿಸುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿದರು. ಬುದ್ಧಿಯನ್ನುಪಯೋಗಿಸಿ ವಿಷಯಗಳನ್ನು ಗ್ರಹಿಸುವವರು ಅನೇಕಕಡೆ ಸಿಕ್ಕಿದಾಗ್ಯೂ ಮೆ॥ ಮೆಕೆಂಜಿಸಾ॥ರನವು ಸೂಚಿಸಿರುವ ವಿಷಯಕ್ಕೆ ಅಗತ್ಯವಾಗಿ ಉಪಾಧ್ಯಾಯರು, ತಂದೆ ತಾಯಿಗಳು ಗಮನಕೊಡಬೇಕು. ಬಾಲಕರು ತಮ್ಮ ಇಂದ್ರಿಯ ಶಕ್ತಿಯನ್ನು ಬಾಹ್ಯ ಪದಾರ್ಥಗಳಲ್ಲಿ ಉಪಯೋಗಿಸುವಂತೆ ಮಾಡಿಸಲು ಉಪಾಧ್ಯಾಯರು ಪ್ರಯತ್ನ ಪಡಬೇಕು.

***

ಬರೋಡಸಂಸ್ಥಾನಕ್ಕೆ ಯುವರಾಜರಾದ ಶ್ರೀಮಂತ ಫತೆಸಿಂಗರಾಯರವರು ಬೊಂಬಾಯಿ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ವಿದ್ಯೆಯು ಬಡವರಿಗೆ ಆಗಲಿ, ಐಶ್ವರ್ಯವಂತರಿಗೆ ಆಗಲಿ ಶ್ರಮಸಾಧ್ಯವೇಸರಿ.

***

ಈವರ್ಷ ಜನವರಿ ಗಿಳಿರಲ್ಲಿ ಬೆಂಗಳೂರಲ್ಲಿ ಟಿಕ್ಸ್‌ಟ್ ಬುಕ್ ಕಮಿಟಿ ವೀಟಿಂಗ್ ನಡೆಯಿತು. ಆ ವಿಾಟಿಂಗಿನಲ್ಲಿ ಪದ್ಯಸಾರವನ್ನು ಎರಡುಭಾಗಗಳಾಗಿ ಮುದ್ರಿಸಬೇಕೆಂತಲೂ ಅವುಗಳಲ್ಲಿ ಪುರಾತನ ಕಾವ್ಯಗಳಿಂದ ಉತ್ತಮವಾದುದನ್ನು ಆರಿಸಿ ತೆಗೆದು ಕಾಲಕ್ರಮವಾಗಿ ಮುದ್ರಿಸಬೇಕೆಂತಲೂ, ಈ ಕೆಲಸವನ್ನು ನೆರವೇರಿಸುವ ಭಾರವು ಸದ್ಯಃ ಮೆ॥ ಶ್ರೀ॥ ಎಂ. ಬಿ. ಶ್ರೀನಿವಾಸಐಂಗಾರ್, ಮೆ॥ ಆರ್ ನರಸಿಂಹಾಚಾರ್, ಮೆ॥ ಆರ್. ರಘುನಾಥರಾವ್, ಮೆ॥ ಎಸ್. ಜಿ. ನರಸಿಂಹಾಚಾರ್, ಮೆ॥ ಬಿ. ಮಲ್ಲಪ್ಪನವರು, ಇವರಿಗೆ ಸೇರಿರುವುದೆಂದೂ ನಿಷ್ಕರ್ಷೆಯಾಯಿತು. ಈ ಪದ್ಯಸಾರವು ಲೋ॥ ॥ ಅಪ್ಪರ್ ಸೆಕಂಡರಿ, ಇಂಗ್ಲಿಷ್ ನಾಲ್ಕು ಐದನೆಕ್ಲಾಸ್‌ಗಳು ಮತ್ತು ಪಂಡಿತ ತರಗತಿಯಲ್ಲಿ ಉಪಯೋಗಿಸುವುದಕ್ಕೆ ಅರ್ಹವಾಗಿರಬೇಕು.

ತಮ್ಮ ವಿದ್ಯೆಯು ಪ್ರಪಂಚಕ್ಕೆ ಪ್ರಯೋಜನವಿಲ್ಲದೆ ಹೋದೀತೆಂಬ ಭಯದಿಂದ ಸದ್ವಿದ್ಯಾಭ್ಯಾಸದ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನೆಲ್ಲಾ ಸೇರಿಸಿ "ಹಂಸಪಕ್ಷಿಯ ಗಾನ" ಎಂಬ ಅಭಿಧಾನದಿಂದ ಒಂದು ಪುಸ್ತಕವನ್ನು ಬರೆದರು. ಈ ಗ್ರಂಥದಲ್ಲಿ ವಿದ್ಯಾಭ್ಯಾಸಕ್ರಮವನ್ನು ವಿವರವಾಗಿ ಉಪದೇಶಿಸಿ ಈ ಕ್ರಮವನ್ನು ಆಚರಣೆಗೆ ತರುವುದರಲ್ಲಿ ತಾವು ಮಾಡಿದ ತಪ್ಪುಗಳನ್ನು ಅದರಿಂದ ಆದ ಹಾನಿಯನ್ನು ಪುನಃ ಪ್ರಾಪ್ತಿಗೆ ಸಾಧಕವಾದ ಉಪಾಯಗಳನ್ನು ವಿವರಿಸಿದ್ದಾರೆ. ಈ ಗ್ರಂಥವನ್ನು ಪೂರೈಸಿದ ಕೂಡಲೆ "ನನ್ನ ಅದೃಷ್ಟ" ಎಂದು ಒಂದು ಪುಸ್ತಕವನ್ನು ಬರೆದರು. ಇದರಲ್ಲಿ ಬರ್ಗ್‌ಡಾರ್ ಮತ್ತು ಇವರ್ಡ್ಡನ್ ಪಾಠಶಾಲೆಗಳಲ್ಲಿ ತಾವು ಮಾಡಿದ ಕೆಲಸಗಳನ್ನು ವಿವರಿಸಿದ್ದಾರೆ. ಈ ಪಾಠಶಾಲೆಗಳಲ್ಲಿ ಪೆಸ್ಟಲಾಟ್ಸಿಯವರು ಕೆಲವು ಶಿಕ್ಷಾಕ್ರಮಗಳನ್ನು ಆಚರಣೆಗೆ ತಂದಿದ್ದರು. ಈಚಿಗೆ ಅವುಗಳಲ್ಲಿ ಕೆಲವು ತಿದ್ದುವಾಟುಗಳನ್ನು ಮಾಡಿದ್ದರು. ಇವುಗಳನ್ನು ಇತರ ಶಿಷ್ಯರು ಯೂರೋಪ್‌ಖಂಡದಲ್ಲೆಲ್ಲಾ ಪ್ರಚಾರಮಾಡಿದರು. ಈಗ ಜರ್ಮನಿ ದೇಶದ ಪ್ರೌಢವಿದ್ಯಾಭ್ಯಾಸದ ಪಾಠಶಾಲೆಗಳಲ್ಲಿ ಈ ಶಿಕ್ಷಾಕ್ರಮವು ಆಚರಣೆಯಲ್ಲಿರುವುದು. ಈ ಗ್ರಂಥವು ಪೂರೈಸಿದಮೇಲೆ "ಲಿನಿಹರ್ಡ್ ಮತ್ತು ಜರ್ಟ್ರೂಡ್" ಎಂಬ ಗ್ರಂಥದ ಐದನೇ ಭಾಗವನ್ನು ಬರೆದರು. ಇದರಲ್ಲಿ ಶಿಶುಗಳಿಗೆ ತಾಯಿಯು ಲೀಲೆಯಿಂದ ಬೇಕಾದ ಭಾಷೆಗಳನ್ನೆಲ್ಲಾ ಸುಲಭವಾಗಿ ಕಲಿಸತಕ್ಕ ಕ್ರಮವನ್ನು ಹೇಳಿದೆ. ಹೀಗೆ ಗ್ರಂಥಗಳನ್ನು ಬರೆಯುತ್ತಿರುವಾಗ್ಗೆ ಅಲ್ಲಲ್ಲಿ ಚಿಕ್ಕಮಕ್ಕಳ ಪಾಠಶಾಲೆಗಳಿಗೆ ಹೋಗಿ ಪಾಠಗಳನ್ನು ಹೇಳುತ್ತಲೂ ಪ್ರಾಯಸ್ಥರಿಗೆಲ್ಲಾ ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸುವ ವಿಷಯದಲ್ಲಿ ಹಿತೋಪದೇಶಗಳನ್ನು ಮಾಡಿಸುತ್ತಲೂ ಇದ್ದರು. ಈ ಉಪದೇಶವು ಫಲಕಾರಿಯಾಯಿತು. ಹೊಸದಾಗಿ ನ್ಯೂಹಾಫ್ ಪಟ್ಟಣದಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸುವುದಕ್ಕೆ ದ್ರವ್ಯಸಹಾಯವುಂಟಾಯಿತು. ಕಟ್ಟಡವು ಪೂರೈಸಿತು ಪುನಃ ಸ್ವತಂತ್ರನಾಗಿ ಪಾಠಪ್ರವಚನಗಳನ್ನು ಸ್ವಂತಪಾಠಶಾಲೆಯಲ್ಲಿ ಹೇಳುವುದಕ್ಕೆ ಉಪಕ್ರಮಮಾಡಿದರು. ೮೦ ವಯಸ್ಸಾಗಿದ್ದಾಗ್ಯೂ ಇವರು ಬೆಳಗಿನಿಂದ ರಾತ್ರೆ ಮಲಗುವವರೆಗೂ ವಿದ್ಯಾರ್ಥಿಗಳ ಯೋಗಕ್ಷೇಮ ಚಿಂತೆಯುಳ್ಳ ಸದಾ ಉತ್ಸಾಹಶಾಲಿಗಳಾಗಿದ್ದದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ನ್ಯೂಹಾಫ್‌ಗ್ರಾಮವು ಬಹಳ ಚಳಿಯುಳ್ಳ ಪ್ರಾಂತ್ಯವಾಗಿತ್ತು. ಅಲ್ಲಿನ ಜನರೆಲ್ಲರೂ ಬಹಳ ಬಡವರಾಗಿದ್ದರು. ಪ್ರಾಯಕವಾಗಿ ಎಲ್ಲ ಮನೆಗಳ ನೆಲವು ಶೀತ

ತರುಣರು ಪಾಠಶಾಲೆಯನ್ನು ತಮ್ಮ ಪ್ರತಿಷ್ಠೆಗೆ ನ್ಯೂನತೆಬಾರದಂತೆ ನೋಡಿಕೊಂಡರು, ಅಷ್ಟರಲ್ಲಿ ಇವರಿಗೆ ದೇಹಶಕ್ತಿ ಕಡಮೆಯಾಗಿ ರೋಗವೂ ಪ್ರಾಪ್ತವಾಯಿತು. ಈ ಕಾಯಿಲೆಯು ದೀರ್ಘವಾಗಿರುವಂತೆ ಕಾಣಬಂತು. ಇವರ ಸಹಾಯೋಪಾಧ್ಯಾಯರ ಕೆಲಸವು ಇವರಿಗೆ ಸಮರ್ಪಕವಾಗಲಿಲ್ಲ. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಕಡಮೆಯಾಗತೊಡಗಿದರು. ಉಪಾಧ್ಯಾಯರುಗಳು ಒಬ್ಬೊಬ್ಬರಾಗಿ ಕಡಮೆಯಾದರು. ೧೮೧೫ರಲ್ಲಿ ಪೆಸ್ತಲಾಟ್ಸ್ಸಿಯವರಿಗೆ ಪಕ್ಷವಿಯೋಗವಾಯಿತು. ಅವರು ಪಾಠಶಾಲೆಯ ವಿದ್ಯಾರ್ಥಿಗಳನ್ನೆಲ್ಲಾ ತಮಗಿಂತಲೂ ಹೆಚ್ಚಾಗಿ ಆದರಿಸುತ್ತಿದ್ದರು. ಇವರ ಮರಣವು ಇವರ ಮನೋರಥಗಳಿಗೆಲ್ಲಾ ಭಂಗವನ್ನುಂಟು ಮಾಡಿತು. ಆದಾಗ್ಯೂ ಅದ್ಭುತವಾದ ಪ್ರಯತ್ನವನ್ನು ಮಾಡಿ ಅನೇಕರ ಸಹಾಯವನ್ನು ತೆಗೆದುಕೊಂಡು ೧೮೨೫ರ ವರೆಗೆ ತಮ್ಮ ಪಾಠಶಾಲೆಯನ್ನು ಸಮರ್ಪಕವಾಗಿ ನಡೆಸಿದರು. ಆಗ್ಗೆ ವಾರ್ಧಕ್ಯವು ಪ್ರಬಲವಾಯಿತು. ಅನಂತರ ಕೆಲವು ಫರ್ಡಾಡೆನ್ನೆಲ್ಲ ಮಾರಿ ಉಳಿದದ್ದನ್ನೆಲ್ಲಾ ಕಳಿಸಿಬಿಟ್ಟು ಅನಾಥರಾದ ಕೆಲವು ವಿದ್ಯಾರ್ಥಿಗಳನ್ನು ಮತ್ತು ವಿದ್ಯಾರ್ಥಿನಿಯರನ್ನು ಮಾತ್ರ ಪಾಠಶಾಲೆಯಲ್ಲಿಟ್ಟುಕೊಂಡು ಶಿಕ್ಷಿಸುತ್ತಾ ಬಂದರು. ಕೆಲವು ದಿವಸಗಳಲ್ಲಿ ಈ ಅನಾಥರ ಸಂಖ್ಯೆಯು ಹೆಚ್ಚಿತು. ಹನ್ನೆರಡರಿಂದ ಅನಾಥರ ಸಂಖ್ಯೆಯು ೩೦ರವರೆಗೆ ಬಂತು. ಇವರ ಸಹಾಯೋಪಾಧ್ಯಾಯರಲ್ಲಿ ಸ್ಕ್ಯಿಡ್ ರಿಂಬವಾಗಿ ಒಬ್ಬರಿದ್ದರು. ಇವರು ಪೆಸ್ತಲಾಟ್ಸ್ಸಿಯವರ ಶಿಕ್ಷಾವಿಧಾನವನ್ನು ಬಹಳ ಚೆನ್ನಾಗಿ ತಿಳಿದುಕೊಂಡು ಅವನ್ನು ಆಚರಣೆಗೆ ತರುತ್ತಿದ್ದರು. ಪೆಸ್ತಲಾಟ್ಸ್ಸಿಯವರು ಕೊನೆಕೊನೆಗೆ ಇವರಲ್ಲಿ ಬಹಳ ನಂಬಿಕೆಯನ್ನಿಟ್ಟು ಪಾಠಶಾಲೆಯ ಕೆಲಸಗಳನ್ನೆಲ್ಲಾ ಇವರಿಗೆ ಒಪ್ಪಿಸಿದರು. ಆದರೆ ಇವರಿಗೆ ವಿದ್ಯೆಗೆ ಲಕ್ಷಣವಾದ ವಿನಯಾದಿ ಸದ್ಗುಣಗಳು ಕಡಮೆಯಾಗಿದ್ದವು.

ಈ ಪಾಠಶಾಲೆಯು ಪೋಷಕರಿಗೂ ಇವರಿಗೂ ವಿರೋಧವುಂಟಾಯಿತು. ಇವನ್ನು ಈ ಪೋಷಕರು ಕೆಲಸದಿಂದ ನಿವರ್ತಿಸಮಾಡಿದರು. ಅದರಮೇಲೆ ಪೆಸ್ತಲಾಟ್ಸ್ಸಿಯವರಿಗೆ ಕೋಪಬಂದು ಅವರು ಈ ಪಾಠಶಾಲೆಯ ಸಂಬಂಧವನ್ನು ಬಿಟ್ಟುಬಿಟ್ಟರು. ಕ್ರಮಕ್ರಮವಾಗಿ ಈ ಪಾಠಶಾಲೆಯು ಹೀನಸ್ಥಿತಿಗೆ ಬಂದು ಕೊನೆಗೆ ಮುಚ್ಚಲ್ಪಟ್ಟಿತು. ಈ ಪಾಠಶಾಲಾ ಸಂಬಂಧವನ್ನು ಪೆಸ್ತಲಾಟ್ಸ್ಸಿಯವರು ಬಿಡುವಾಗ್ಗೆ ಅವರಿಗೆ ೭೦ ವರುಷ ವಯಸ್ಸಾಗಿತ್ತು. ಪಾಠಶಾಲೆಯನ್ನು ಬಿಟ್ಟುಕೊಡಲೆ

ಅವುಗಳಾವುವೆಂದರೆ— ಸಂಧಿ ಪ್ರಕರಣದಲ್ಲಿ

(ಎ) "ವರ್ಣಂಗಳ ಪಾಠಕ್ರಮ" (ಸೂ. ೪) ಇದು ಕನ್ನಡ ವ್ಯಾಕರಣವಾದ್ದರಿಂದ ಅಕ್ಷರ ಸಮಾಮ್ನಾಯದಲ್ಲಿ ದೇಶೀಯಾಕ್ಷರಗಳಾದ ಎ. ಒ. ರಳ ಕುಳ ಇವುಗಳನ್ನೇಕೆ ಸೇರಿಸಲಿಲ್ಲ? ಸಂಸ್ಕೃತವರ್ಣಮಾಲೆಯನ್ನು ಹೇಳಲು ಕಾರಣವೇನು? ಇದು ಕನ್ನಡ ವರ್ಣಮಾಲೆಯು ಅಂದರೆ, "ಸಂಸ್ಕೃತದೊಳಾಲಕಾರಕ್ಕೆ ಸೇಲ್ದಿನದರಿಂ ಕ್ಷಳಸಂ" (ಸೂ. ೫) ಇದರಿಂದ ಈವು ಸಂಸ್ಕೃತ ವರ್ಣಮಾಲೆಯೆಂಬುದು ಸ್ಪಷ್ಟವಾಗುವುದು. ಮತ್ತು ಅ, ಈ, ಊ, ಋೂ, ೠ. ಇವುಗಳು ಅವಶ್ಯಕವಿಲ್ಲ.

(ಬಿ) "ತರದಿನಕಾರಂ" (ಸೂ. ೬) "ಕ್ರಮದಿಂ ಹ್ರಸ್ವಕ್ಕಂ" (ಸೂ. ೭) "ವಿದಿತಸವರ್ಣನಂಗಳ" (ಸೂ. ೯) "ಕ್ರಮದೆಗುರಿದೀರ್ಘ್ಯ" (ಸೂ. ೧೦) "ಸ್ವರವರದೊಳಿರ್ದ" (ಸೂ. ೧೭) ಸೂ. ೬-೭ ರಲ್ಲಿ ಸವರ್ಣ ಸಂಜ್ಞೆಯೂ, ೯-೧೦ ರಲ್ಲಿ ಹ್ರಸ್ವ ದೀರ್ಘ ಪ್ಲುತ ಸಂಜ್ಞೆಗಳೂ ೧೭ ರಲ್ಲಿ ಬಿಂದು ವಿಸರ್ಗಗಳ ಸ್ವರಾಂಗ ವ್ಯಂಜನಾಂಗ ವ್ಯವಸ್ಥೆಯೂ ಇತ್ಯಾದಿ ಇರುವಷ್ಟು. ಈ ಕೇಶಿರಾಜನ ಅಭಿಪ್ರಾಯವನ್ನು ಯೋಚಿಸಿದರೆ, "ಕೊರಲುಂಜಿಹ್ವಾಮೂಲಮುಂ" (ಸೂ. ೩೦) ಎಂದು ವರ್ಣೋತ್ಪತ್ತಿ ಸ್ಥಾನವನ್ನು ಹೇಳಿದ್ದರೂ, ಆಯಾ ಸ್ಥಾನಗಳಲ್ಲಿ ಹುಟ್ಟುವ ಅಕ್ಷರಗಳನ್ನು ಸ್ಪಷ್ಟಪಡಿಸದಿರುವುದು, ಸಂಸ್ಕೃತ ಸಹಾಯದಿಂದ ಇವುಗಳನ್ನೆಲ್ಲಾ ತಿಳಿದುಕೊಳ್ಳಬೇಕೆಂದು ತೋರುವುದು. ಹಾಗಲ್ಲದೆ ಕನ್ನಡಿಗರಿಗೆ ಸುಲಭವಾಗಿ ತಿಳಿಸುವುದಕ್ಕಾಗಿ ಈ ಸಂಜ್ಞೆಗಳನ್ನು ಹೇಳಿದ್ದಲ್ಲಿ ಆಯಾ ಸ್ಥಾನಗಳಲ್ಲಿ ಉತ್ಪನ್ನವಾಗುವ ಅಕ್ಷರಗಳನ್ನು ಏಕೆ ಹೇಳಲಿಲ್ಲ? ವರ್ಣೋತ್ಪತ್ತಿಯ ಸ್ಥಾನವನ್ನು ಕನ್ನಡಿಗರು ಹೇಗೆ ತಿಳಿದುಕೊಳ್ಳಬೇಕು? ಇದರಿಂದ ಇವನ ಪ್ರಯತ್ನವು ಭಂಗವಾಯಿತಲ್ಲವೆ? ಹಾಗಿಲ್ಲದಿದ್ದರೆ ಸೂ. ೬-೭, ೧೦, ೧೭ ರಲ್ಲಿ ವಿಶದಪಡಿಸಿದ್ದಕ್ಕೂ, ಸೂತ್ರ ೧೭ರಲ್ಲಿ ವಿಶದ ಮಾಡದಿರುವುದಕ್ಕೂ ಕಾರಣವೇನು?

(ಸಿ) "ಕ್ರಮದಿಂದ ಸಂಧಿ" (ಪೀಠಿಕಾ ಸೂ. ೮) ಇವನ ಪ್ರತಿಜ್ಞೆಯನ್ನು ನೋಡಿದರೆ ತಾನು ಸಂಜ್ಞಾಪ್ರಕರಣವನ್ನೇ ಹೇಳುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ೧-೪೧ ಸೂತ್ರಗಳು ಅವನು ಹೇಳಿದ ೮ ಸಂಧಿಗಳಲ್ಲಿ ಯಾವುದಕ್ಕೆ ಸೇರಿತು? ಇದು ಸಂಜ್ಞಾಪ್ರಕರಣವೆಂದೇ ಹೇಳೋಣ. ಏಕೆಂದರೆ "ಇದು

ಆಗಿದ್ದವು. ಇದರಿಂದ ಜನಗಳು ರೋಗಿಗಳಾಗಿಯೂ ದುರ್ಬಲರಾಗಿಯೂ ಇದ್ದರು. ಸಾಮಾನ್ಯವಾಗಿ ಆ ದೇಶದಲ್ಲಿ ಯಾವಾಗ್ಯೂ ಜನರು ಕಾಸಿಕೊಳ್ಳುವದಕ್ಕೆ ಬೆಂಕಿಯನ್ನು ಉರಿಸುತ್ತಿದ್ದರು. ಆಗ ಸೌದೆಯು ಬಹಳ ಪ್ರಿಯವಾಯಿತು. ಪೆಸ್ಟಲಾಟ್ಸಿಯವರು ಈ ಕೃತ್ಯದಿಂದಲೂ, ಸೌದೆಯ ಅಭಾವದಿಂದಲೂ ಜನರಿಗೆ ಒಟ್ಟಾಗುತ್ತಲಿದ್ದ ತೊಂದರೆಯನ್ನು ತಪ್ಪಿಸಬೇಕೆಂದು ಬಹಳ ಯೋಚಿಸಿ ಜಲ್ಲಿಕಲ್ಲುಗಳನ್ನು ತಂದು ಒಂದೆರೆಡು ಅಂಗುಲಗಳ ಮಟ್ಟಕ್ಕೆ ಹರವಿ ಅದರಮೇಲೆ ಬಣಗಿದ ಹುಲ್ಲನ್ನು ಹರವಿ ಅದರಮೇಲೆ ಕಾವೆಗಳನ್ನೆ ಕಾಸಿದರೆ ಶೈತ್ಯದಿಂದ ಉಂಟಾಗುವ ರೋಗಾದಿಗಳು ಪರಿಹಾರವಾಗುವದೆಂದು ಗೊತ್ತುಮಾಡಿ ಪ್ರಥಮತಃ ತಮ್ಮ ಮನೆಗೆ ಆರೀತಿಮಾಡಿ ತೋರಿಸಿದರು. ಅಲ್ಲಿನ ಜನಗಳೆಲ್ಲರು ತಮ್ಮತಮ್ಮ ಮನೆಗೆ ಆ ರೀತಿಯಲ್ಲಿ ಮಾಡಿದರು. ಕೆಲವು ದಿವಸಗಳಲ್ಲಿ ಎಲ್ಲಾ ಮನೆಗಳಲ್ಲಿಯೂ ರೋಗಿದ್ದವರಿಗೆಲ್ಲಾ ಲಗುವಾಗಿ ಎಲ್ಲರೂ ಆರೋಗ್ಯವಂತರಾಗಿದ್ದರು. ಪೆಸ್ಟಲಾಟ್ಸಿಯವರಲ್ಲಿ ಜನರಿಗೆ ಇದರಿಂದ ವಿಶೇಷವಾದ ಪ್ರೀತಿಯು ಅಭಿಮಾನವು ಹುಟ್ಟಿತು. ಸಾಮಾನ್ಯವಾಗಿ ಸರ್ವರು ಇವರನ್ನು ಭಕ್ತಿಯಿಂದ ಕಾಣುತ್ತಲೂ ಎಲ್ಲಾ ವಿಷಯಗಳಲ್ಲೂ ತಾವು ಹೇಗೆ ನಡೆದುಕೊಳ್ಳಬೇಕೆಂದು ಕೇಳುವುದಕ್ಕೋಸ್ಕರ ಅವರಲ್ಲಿಗೆ ಹೋಗಿ ಬರುತ್ತಲೂ ಇದ್ದರು. ಆ ಪಟ್ಟಣದ ಅಬಾಲವೃದ್ಧರು ಇವನನ್ನು ತಮ್ಮತಮ್ಮ ಮನೆದೇವರಂತೆ ಕಾಣುತ್ತಿದ್ದರು

ಕನ್ನಡ ವ್ಯಾಕರಣ ವಿಚಾರ.

ಕೇಶಿರಾಜನು ಕನ್ನಡ ಭಾಷೆಯಲ್ಲಿ ಲಕ್ಷಣಗಳಾವುದೂ ಸರಿಯಿಲ್ಲವಾಗಿ, ಲಕ್ಷ್ಮಣಾಚಾರ್ಯರ ಅನುಮತಿಯಿಂದ ಈ ಶಬ್ದಮಣಿದರ್ಪಣವೆಂಬ ವ್ಯಾಕರಣವನ್ನು ಬರೆದಿರುವನಷ್ಟೆ. ಇದರಲ್ಲಿಯೂ ಕೆಲವು ನ್ಯೂನತೆಗಳು ನನಗೆ ತೋರಿಬಂದಿರುವದರಿಂದ ಮಹನೀಯರು ಈ ಸಂದೇಹವನ್ನು ಪರಿಹಾರಮಾಡಿಸಿಕೊಡಬೇಕೆಂದು ಅರಿಕೆ ಮಾಡಿಕೊಂಡಿದ್ದೇನೆ.

ಈ ಅಲ್ಪ ಮತಿಯು ಮಹನೀಯನಾದ ಕೇಶಿರಾಜನಲ್ಲಿ ದೋಷಗಳನ್ನಾರೋಪಿಸಿದನೆಂದು ಯಾರೂ ನಂಬಬಾರದು. ಈ ಕೊರತೆಗಳನ್ನ ಪರಿಹಾರಮಾಡಿಸಿಕೊಳ್ಳಬೇಕೆಂಬುದೇ ನನ್ನ ಉದ್ದೇಶ್ಯನಾಗಿರುವದು.

ಪೆಸ್ಟಲಾಟ್ಸಿಯವರ ಚರಿತ್ರೆ.

ಒಳ್ಳೇಪ್ರಯತ್ನಗಳಿಗೆ ಅನೇಕ ವಿಘ್ನಗಳು ಬರುವವು. ೧೮೦೧ನೆ ಇಪ್ಪತ್ತೊಂದನೆಯ ಜನವರಿ ಗುರ್ಲೆತಾರೀಖಿನಲ್ಲಿ ಎಲ್ಲಾ ಉಪಾಧ್ಯಾಯರುಗಳನ್ನು ಸೇರಿಸಿ ಯಾವಾಗಿನಂತೆ ಒಂದು ಸಭೆಯನ್ನು ಮಾಡಿ ತಾವು ಮಾಡುವ ಕಾರ್ಯಗೌರವವನ್ನು ತಮ್ಮ ಕೆಲಸಗಳು ಫಲಕಾರಿಗಳಾಗಬೇಕಾದರೆ ಎಲ್ಲರು ಹೇಗೆ ಶ್ರದ್ಧೆಯಿಂದ ಕೆಲಸ ಮಾಡಬೇಕೊ ಅದನ್ನು ಉಪನ್ಯಾಸಪೂರ್ವಕ ಎಲ್ಲರಿಗೂ ಹೇಳಿದರು. ಲೋಕದಲ್ಲಿ ಸಂಬಳಕ್ಕೆ ತಕ್ಕ ಕೆಲಸವನ್ನು ಮಾತ್ರ ಮಾಡುತ್ತೇನೆ ಎನ್ನುವವರೆ ದೇಶಾಭಿವೃದ್ಧಿಗಳು, ಸಂಬಳತೆಗೆದುಕೊಂಡು ತಮ್ಮ ಕೆಲಸವನ್ನು ಮಾಡದೆ ಮೈಗಳ್ಳತನಮಾಡುವ ಮಹಾತ್ಮರು ಭಾವರು. ಬೇತಾಳಪ್ರಾಯರಾಗಿರುತ್ತಾರೆ. ಸಂಬಳಬರಲಿ ಬರದೇಇರಲಿ ಅದಕ್ಕೆ ಗಮನವನ್ನು ಕೊಡದೆ ಹಿಡಿದ ಕೆಲಸವನ್ನು ಚೆನ್ನಾಗಿ ಮಾಡಿ ಜನರಿಗೆ ಉಪಕಾರವನ್ನು ಮಾಡಿ ಯಶೋವಂತರಾಗಬೇಕೆಂಬ ಜನರು ಕೋಟಿಗೊಬ್ಬರು ಸಿಕ್ಕುವರೊ ಇಲ್ಲವೋ ತಿಳಿಯದು. ಪೆಸ್ಟಲಾಟ್ಸಿಯವರ ಸಹಾಯೋಪಾಧ್ಯಾಯರು ತಮ್ಮ ಕೆಲಸಗಳಲ್ಲಿ ಉತ್ಸಾಹಶಾಲಿಗಳಾಗಲಿಲ್ಲ. ಪೆಸ್ಟಲಾಟ್ಸಿಯವರು ಎಲ್ಲರ ನ್ಯೂನಾತಿರಿಕ್ತಗಳನ್ನು ಪ್ರತ್ಯಕ್ಷನೋಡಿ ಸುನಿಮಾಡಿಕೊಳ್ಳುತ್ತಾ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಇವರ ಪ್ರಾಥಕ್ರಮವು ಬಹಳ ವಿಲಕ್ಷಣವಾಗಿತ್ತು. ಇವರ ಪ್ರಕಾರ ಪ್ರತಿ ಒಬ್ಬ ವಿದ್ಯಾರ್ಥಿಗೂ ಅವರ ಗಮನವಿರುತ್ತಿತ್ತು. ವಿದ್ಯಾರ್ಥಿಗಳು ಅನೇಕರಾದರು. ಅವರ ವಯಸ್ಸು ಗ್ರಹಣಶಕ್ತಿ ಮೊದಲಾದವುಗಳು ಭಿನ್ನಭಿನ್ನವಾಗಿದ್ದವು. ವಿದ್ಯಾಭ್ಯಾಸವನ್ನು ನೋಡಿ ಕೊಳ್ಳುವದಲ್ಲದೆ ವಿದ್ಯಾರ್ಥಿಗಳ ಶೀಲಸ್ವಭಾವದ ವಿಚಾರಣೆಯೂ ಇವರಿಗೆ ಸೇರಿತ್ತು. ಇದಲ್ಲದೆ ವಿದ್ಯಾರ್ಥಿಗಳಲ್ಲಿ ಅನೇಕರು ಬೇರೆಬೇರೆ ದೇಶದವರಾಗಿಯೂ ಬೇರೆಬೇರೆ ಭಾಷೆಯವರಾಗಿಯೂ ಇದ್ದರು. ಎಲ್ಲಾ ಸಹಾಯೋಪಾಧ್ಯಾಯರು ಇವರ ಹಾಗೆ ಶ್ರದ್ಧೆಯಿಂದ ಕೆಲಸಮಾಡಿದ್ದರೆ ಎಲ್ಲಾ ವಿದ್ಯಾರ್ಥಿಗಳನ್ನು ವಿದ್ಯಾವಿನಯಸಂಪನ್ನರನ್ನಾಗಿ ಮಾಡಬಹುದಾಗಿತ್ತು. ಅವರ ಅಶ್ರದ್ಧೆಯಿಂದ ಇದಕ್ಕವಕಾಶವಾಗಲಿಲ್ಲ. ಇದರಿಂದ ಸ್ವಲ್ಪ ಗಲಾಟೆಯಾಯಿತು. ಕ್ರಮಕ್ರಮವಾಗಿ ಇವರ ಸಹಾಯೋಪಾಧ್ಯಾಯರಲ್ಲಿ ಪರಸ್ಪರ ಕಲಹವುಂಟಾಯಿತು. ಆದಾಗ್ಯೂ ಅವರಿಗೆ ಹಿತೋಪದೇಶಗಳನ್ನು ಮಾಡುತ್ತಾ ಅವರಿಗೆ ದ್ವೇಷವನ್ನು ಪಡಿಸಿಕೊಂಡಿದ್ದರೂ ಸಹ ನಿರ್ಭಯವಾಗಿ ಇದ್ದ

ತುಂಬಾ ಆಶ್ಚರ್ಯವಾಯಿತು. ಹಿಂದೂಸ್ಥಾನದಲ್ಲಿ ಬಾಲಕರು ಪುಸ್ತಕಪಾಠವನ್ನು ಜೆನ್ನಾಗಿ ಕಂಠಪಾಠಮಾಡಬಲ್ಲರು. ಅನೇಕ ಸೂತ್ರಗಳನ್ನು ಗಟ್ಟಿಮಾಡಿಕೊಂಡು ಜ್ಞಾಪಕದಲ್ಲಿಡಲು ಶಕ್ತಿಯುಳ್ಳವರು. ಆದರೆ ವಿಚಕ್ಷಣೆಯು ಬಹಳಮಟ್ಟಿಗೆ ಕಡಮೆ ಪುಸ್ತಕದಲ್ಲಿ ಇಲ್ಲದಿರುವುದನ್ನು ಸ್ವಬುದ್ಧಿಯಿಂದ ವಿಷಯಗಳನ್ನು ತಿಳಿಯಲೇ ಆಗಲಿ, ಆಲೋಚಿಸಲೆ ಆಗಲಿ ಯತ್ನಿಸುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿದರು. ಬುದ್ಧಿಯನ್ನುಪಯೋಗಿಸಿ ವಿಷಯಗಳನ್ನು ಗ್ರಹಿಸುವವನು ಅನೇಕಕಡೆ ಸಿಕ್ಕಿದಾಗ್ಯೂ ಮೈ॥ ಮೆಕೆಂಜಿಸಾ॥ರನು ಸೂಚಿಸಿರುವ ವಿಷಯಕ್ಕೆ ಅಗತ್ಯವಾಗಿ ಉಪಾಧ್ಯಾಯರು, ತಂದೆ ತಾಯಿಗಳು ಗಮನಕೊಡಬೇಕು. ಬಾಲಕರು ತಮ್ಮ ಇಂದ್ರಿಯ ಶಕ್ತಿಯನ್ನು ಬಾಹ್ಯ ಪದಾರ್ಥಗಳಲ್ಲಿ ಉಪಯೋಗಿಸುವಂತೆ ಮಾಡಿಸಲು ಉಪಾಧ್ಯಾಯರು ಪ್ರಯತ್ನ ಪಡಬೇಕು.

ಬರೋಡಸಂಸ್ಥಾನಕ್ಕೆ ಯುವರಾಜರಾದ ಶ್ರೀಮಂತ ಫತೆಸಿಂಗರಾಯರವರು ಬೊಂಬಾಯಿ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಎಷ್ಟೋ ಬಡವರಿಗೆ ಆಗಲಿ, ಐಶ್ವರ್ಯವಂತರಿಗೆ ಆಗಲಿ ಶ್ರಮಸಾಧ್ಯವೇನು.

***

ಈವರ್ಷ ಜನವರಿ ೧೫ರಲ್ಲಿ ಬೆಂಗಳೂರಲ್ಲಿ ಟೆಕ್ಸ್‌ಟ್‌ಬುಕ್ ಕಮಿಟಿ ಮೀಟಿಂಗ್ ಸಡೆಯಿತು. ಆ ವಿಷಯಕ್ಕಿನಲ್ಲಿ ಪದ್ಯಸಾರವನ್ನು ಎರಡುಭಾಗಗಳಾಗಿ ಮುದ್ರಿಸಬೇಕೆಂತಲೂ ಅವುಗಳಲ್ಲಿ ಪುರಾತನ ಕಾವ್ಯಗಳಿಂದ ಉತ್ತಮವಾದುದನ್ನು ಆರಿಸಿ ತೆಗೆದು ಕಾಲಕ್ರಮವಾಗಿ ಮುದ್ರಿಸಬೇಕೆಂತಲೂ, ಈ ಕೆಲಸವನ್ನು ನೆರವೇರಿಸುವ ಭಾರವು ಸದ್ಯಃ ಮೈ॥ ಶ್ರೀ॥ ಎಂ. ಬಿ. ಶ್ರೀನಿವಾಸಐಂಗಾರ್, ಮೈ॥ ಆರ್. ನರಸಿಂಹಾಚಾರ್, ಮೈ॥ ಶ್ರೀ. ರಘುನಾಥರಾವ್, ಮೈ॥ ಎಸ್. ಜಿ. ನರಸಿಂಹಾಚಾರ್, ಮೈ॥ ಬಿ. ಮಲ್ಲಪ್ಪನವರು, ಇವರಿಗೆ ಸೇರಿರುವುದೆಂದೂ ನಿಶ್ಚಯವಾಯಿತು. ಈ ಪದ್ಯಸಾರವು ಲೋ॥ ಪೈ॥ ಅಪ್ಪರ್ ಸೆಕಂಡರಿ, ಇಂಗ್ಲಿಷ್ ನಾಲ್ಕು ಐದನೆಕ್ಲಾಸ್‌ಗಳು ಮತ್ತು ಸಂಸ್ಕೃತ ತರಗತಿಯಲ್ಲಿ ಉಪಯೋಗಿಸುವುದಕ್ಕೆ ಅರ್ಹವಾಗಿರಬೇಕು.

ತಮ್ಮ ವಿದ್ಯೆಯು ಪ್ರಪಂಚಕ್ಕೆ ಪ್ರಯೋಜನವಿಲ್ಲದೆ ಹೋದೀತೆಂಬ ಭಯದಿಂದ ಗನ್ವಿ
ದ್ಯಾಭ್ಯಾಸದ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನೆಲ್ಲಾ ಸೇರಿಸಿ "ಹೊಸದೃಷ್ಟಿಯು
ಗಾಗಿ" ಎಂಬ ಅಭಿಧಾನದಿಂದ ಬಂದು ಪುಸ್ತಕವನ್ನು ಬರೆದರು. ಈ ಗ್ರಂಥದಲ್ಲಿ
ವಿದ್ಯಾಭ್ಯಾಸಕ್ರಮವನ್ನು ವಿವರವಾಗಿ ಉಪದೇಶಿಸಿ ಈ ಕ್ರಮವನ್ನು ಆಚರಣೆಗೆ ತರು
ವಲ್ಲಿ ತಾವು ಮಾಡಿದ ತಪ್ಪುಗಳನ್ನು ಆದರಿಂದ ಆದ ಫಲಾಫಲಗಳನ್ನು ಪುನಾರಾ
ವೃತ್ತಿಗೆ ಸಾಧಕವಾದ ಉಪಾಯಗಳನ್ನು ವಿವರಿಸಿದ್ದಾರೆ. ಈ ಗ್ರಂಥವನ್ನು ಪೂರೈಸಿದ
ಕೂಡಲೆ "ನನ್ನ ಅದೃಷ್ಟ" ಎಂದು ಒಂದು ಪುಸ್ತಕವನ್ನು ಬರೆದರು. ಇದರಲ್ಲಿ
ಬರ್ಗ್‌ಡಾರ್ ಮತ್ತು ಇವರ್ಡ್ಡನ್ ಪಾಠಶಾಲೆಗಳಲ್ಲಿ ತಾವು ಮಾಡಿದ ಕೆಲಸಗಳನ್ನು
ವಿವರಿಸಿದ್ದಾರೆ. ಈ ಪಾಠಶಾಲೆಗಳಲ್ಲಿ ಪೆಸ್ಟಲಾಟ್ಸಿಯವರು ಕೆಲವು ಶಿಕ್ಷಾಕ್ರಮ
ಗಳನ್ನು ಆಚರಣೆಗೆ ತಂದಿದ್ದರು. ಈಚಿಗೆ ಅವುಗಳಲ್ಲಿ ಕೆಲವು ತಿದ್ದುಪಾಟುಗಳನ್ನು
ಮಾಡಿದರು. ಇವುಗಳನ್ನು ಇತರ ಶಿಷ್ಯರು ಯಾವರೋಪ್‌ಖಂಡದಲ್ಲೆಲ್ಲಾ ಪ್ರಚಾರ
ಮಾಡಿದರು. ಈಗ ಜರ್ಮನಿ ದೇಶದ ಪ್ರೌಢವಿದ್ಯಾಭ್ಯಾಸದ ಪಾಠಶಾಲೆಗ
ಳಲ್ಲಿ ಈ ಶಿಕ್ಷಾಕ್ರಮವು ಆಚರಣೆಯಲ್ಲಿರುವುದು. ಈ ಗ್ರಂಥವು ಪೂರೈಸಿದಮೇಲೆ "ಲಿನೆ
ರ್ಡ್ ಮತ್ತು ಜರ್‌ಟ್ರೂಡ್" ಎಂಬ ಗ್ರಂಥದ ಐದನೇ ಭಾಗವನ್ನು ಬರೆದರು.
ಇದರಲ್ಲಿ ಶಿಶುಗಳಿಗೆ ತಾಯಿಯು ಲೀಲೆಯಿಂದ ಬೇಕಾದ ಭಾಷೆಗಳನ್ನೆಲ್ಲಾ ಸುಲಭ
ವಾಗಿ ಕಲಿಸತಕ್ಕ ಕ್ರಮವನ್ನು ಹೇಳಿದೆ. ಹೀಗೆ ಗ್ರಂಥಗಳನ್ನು ಬರೆಯುತ್ತಿರುವಾಗ್ಗೆ
ಅಲ್ಲಲ್ಲಿ ಚಿಕ್ಕಮಕ್ಕಳ ಪಾಠಶಾಲೆಗಳಿಗೆ ಹೋಗಿ ಪಾಠಗಳನ್ನು ಹೇಳುತ್ತಲೂ ಪ್ರಾಯ
ಸ್ಥರಿಗೆಲ್ಲಾ ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸುವ ವಿಷಯದಲ್ಲಿ ಹಿತೋಪದೇಶಗಳನ್ನು
ಮಾಡಿಸುತ್ತಲೂ ಇದ್ದರು. ಈ ಉಪದೇಶವು ಫಲಕಾರಿಯಾಯಿತು. ಹೊಸದಾಗಿ
ನ್ಯೂಹಾಫ್ ಪಟ್ಟಣದಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸುವುದಕ್ಕೆ ದ್ರವ್ಯಸಹಾಯವಾ
ಯಿತು. ಕಟ್ಟಡವು ಪೂರೈಸಿತು ಪುನಃ ಸ್ವತಂತ್ರವಾಗಿ ಪಾಠಪ್ರವಚನಗಳನ್ನು
ಸ್ವಂತಪಾಠಶಾಲೆಯಲ್ಲಿ ಹೇಳುವುದಕ್ಕೆ ಉಪಕ್ರಮಮಾಡಿದರು. ೪೦ ವಯಸ್ಸಾಗಿದ್ದಾ
ಗ್ಯೂ ಇವರು ಬೆಳಗಿನಿಂದ ರಾತ್ರೆ ಮಲಗುವನರೆಗೂ ವಿದ್ಯಾರ್ಥಿಗಳ ಯೋಗಕ್ಷೇಮ
ಚಿಂತೆಯಲ್ಲಿ ಸದಾ ಉತ್ಸಾಹಶಾಲಿಗಳಾಗಿದ್ದದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ

ನ್ಯೂಹಾಫ್‌ಗ್ರಾಮವು ಬಹಳ ಚಳಿಯುಳ್ಳ ಪ್ರಾಂತ್ಯವಾಗಿತ್ತು. ಅಲ್ಲಿನ
ಜನರೆಲ್ಲರೂ ಬಹಳ ಬಡವರಾಗಿದ್ದರು. ಪ್ರಾಯಕವಾಗಿ ಎಲ್ಲ ಮನೆಗಳ ನೆಲವು ಶೀ

ಹರುಷಗಳು ಪಾಠಶಾಲೆಯನ್ನು ತಮ್ಮ ಪ್ರತಿಷ್ಠೆಗೆ ನ್ಯೂನತೆಬಾರದಂತೆ ನೋಡಿಕೊಂಡ ರು, ಅಪಂತರ ಇವರಿಗೆ ದೇಹಶಕ್ತಿ ಕಡಮೆಯಾಗಿ ರೋಗವೂ ಪ್ರಾಪ್ತವಾಯಿತು. ಈ ಕಾಯಲೆಯು ದೀರ್ಘವಾಗಿರುವಂತೆ ಕಾಣಬಂತು. ಇವರ ಸಹಾಯೋಪಾಧ್ಯಾಯರ ಕೆಲಸವು ಇವರಿಗೆ ಸಮರ್ಪಕವಾಗಲಿಲ್ಲ. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಕಡಮೆಯಾಗ ತೊ ಉಪಾಧ್ಯಾಯರುಗಳು ಒಬ್ಬೊಬ್ಬರಾಗಿ ಕಡಮೆಯಾದರು. ೧೯೧೫ನೇ ಇಸ್ವಿಯಲ್ಲಿ ಪೆಸ್ಟಲಾ ಟ್ಸ್ಸಿಯವರಿಗೆ ಪತ್ನಿವಿಯೋಗವಾಯಿತು. ಅವರು ಪಾಠಶಾಲೆಯ ವಿದ್ಯಾರ್ಥಿಗಳನ್ನೆಲ್ಲಾ ತಾಯಿಗಿಂತಲೂ ಹೆಚ್ಚಾಗಿ ಆದರಿಸುತ್ತಿದ್ದರು. ಇವರ ಮರಣವು ಇವರ ಮನೋರಥಗ ಳಿಗೆಲ್ಲಾ ಭಂಗವನ್ನುಂಟು ಮಾಡಿತು. ಆದಾಗ್ಯೂ ಅದ್ಭುತವಾದ ಪ್ರಯತ್ನವನ್ನು ಮಾಡಿ ಅನೇಕರ ಸಹಾಯವನ್ನು ತೆಗೆದುಕೊಂಡು ೧೯೮೫ನೇ ವರೆಗೆ ತಮ್ಮ ಪಾಠಶಾಲೆಯನ್ನು ಸಮರ್ಪಕವಾಗಿ ನಡೆಸಿದರು. ಆಗ್ಗೆ ವಾರ್ಧಕ್ಯವು ಪ್ರಬಲವಾಯಿತು. ಅನಂತರ ಕೆಲವು ವರ್ಷಗಳನ್ನೆಲ್ಲ ವೆಚ್ಚಮಾಡಿ ಉಪಪನ್ನರನ್ನೆಲ್ಲಾ ಕಳಿಸಿಬಿಟ್ಟು ಅನಾಥರಾದ ಕೆಲವುಜನ ವಿದ್ಯಾರ್ಥಿಗಳನ್ನು ಮತ್ತು ವಿದ್ಯಾರ್ಥಿನಿಯರನ್ನು ಮಾತ್ರ ಪಾಠಶಾಲೆಯಲ್ಲಿಟ್ಟುಕೊಂಡು ಶಿಕ್ಷಣಕಾಡುತ್ತಾ ಬಂದರು. ಕೆಲವು ದಿವಸಗಳಲ್ಲಿ ಈ ಅನಾಥರ ಸಂಖ್ಯೆಯು ಹೆಚ್ಚಿತು, ಹನ್ನೆರಡರಿಂದ ಅನಾಥರ ಸಂಖ್ಯೆಯು ೭೦ವರೆಗೆ ಬಂತು. ಇವರ ಸಹಾಯೋಪಾಧ್ಯಾ ಯರಲ್ಲಿ ಸ್ಕ್ಟಡ್ ರೆಂಬವರು ಒಬ್ಬರಿದ್ದರು. ಇವರು ಪೆಸ್ಟಲಾಟ್ಸಿಯವರ ಶಿಕ್ಷಾವಿಧಾನ ವನ್ನು ಬಹಳ ಚೆನ್ನಾಗಿ ತಿಳಿದುಕೊಂಡು ಅವನ್ನು ಆಚರಣೆಗೆ ತರುತ್ತಿದ್ದರು. ಪೆಸ್ಟಲಾ ಟ್ಸಿಯವರು ಕೊನೆಕೊನೆಗೆ ಇವರಲ್ಲಿ ಬಹಳ ನಂಬಿಕೆಯನ್ನಿಟ್ಟು ಪಾಠಶಾಲೆಯ ಕೆಲಸಗ ಳನ್ನೆಲ್ಲಾ ಇವರಿಗೆ ಒಪ್ಪಿಸಿದರು. ಆದರೆ ಇವರಿಗೆ ವಿದ್ಯೆಗೆ ಲಕ್ಷಣವಾದ ವಿನಯಾದಿ ಗುಣಗಳು ಕಡಮೆಯಾಗಿದ್ದವು.

ಈ ಪಾಠಶಾಲೆಯು ಪೋಷಕರಿಗೂ ಇವರಿಗೂ ವಿರೋಧವುಂಟಾಯಿತು. ಇವರನ್ನು ಈ ಪೋಷಕರು ಕೆಲಸದಿಂದ ನಿರ್ಗಮಮಾಡಿದರು. ಅದರಮೇಲೆ ಪೆಸ್ಟಲಾ ಟ್ಸಿಯವರಿಗೆ ಕೋಪಬಂದು ಅವರು ಈ ಪಾಠಶಾಲೆಯ ಸಂಬಂಧವನ್ನು ಬಿಟ್ಟು ಬಿಟ್ಟರು. ಕ್ರಮಕ್ರಮವಾಗಿ ಈ ಪಾಠಶಾಲೆಯು ಹೀನಸ್ಥಿತಿಗೆ ಬಂದು ಕೊನೆಗೆ ಮುಚ್ಚಲ್ಪಟ್ಟಿತು. ಈ ಪಾಠಶಾಲಾ ಸಂಬಂಧವನ್ನು ಪೆಸ್ಟಲಾಟ್ಸಿಯವರು ಬಿಡು ವಾಗ ಅವರಿಗೆ ೬೦ ವರುಷ ವಯಸ್ಸಾಗಿತ್ತು. ಪಾಠಶಾಲೆಯನ್ನು ಬಿಟ್ಟಕೂಡಲೆ

ಅವುಗಳಾವುವೆಂದರೆ— ಸಂಧಿ ಪ್ರಕರಣದಲ್ಲಿ.

೧. (ಎ) "ವರ್ಣಂಗಳ ಪಾಠಕ್ರಮ" (ಸೂ. ೪) ಇದು ಕನ್ನಡ ವ್ಯಾಕರಣವಾದ್ದರಿಂದ ಅಕ್ಷರ ಸಮಾಮ್ನಾಯದಲ್ಲಿ ದೇಶೀಯಾಕ್ಷರಗಳಾದ ಎ. ಒ. ರಳ ಕುಳ ಇವುಗಳನ್ನೇಕೆ ಸೇರಿಸಲಿಲ್ಲ? ಸಂಸ್ಕೃತವರ್ಣಮಾಲೆಯನ್ನು ಹೇಳಲು ಕಾರಣವೇನು? ಇದು ಕನ್ನಡ ವರ್ಣಮಾಲೆಯು ಅಂದರೆ, "ಸಂಸ್ಕೃತದೊಳಾಲಕಾರಕ್ಕೆ ಸೇರ್ದ್ದಿನದರಿಂ ಕ್ಷಳಸಂ" (ಸೂ. ೫) ಇದರಿಂದ ಈವು ಸಂಸ್ಕೃತ ವರ್ಣಮಾಲೆಯೆಂಬುದು ಸ್ಪಷ್ಟವಾಗುವುದು. ಮತ್ತು ಅ, ಈ, ಊ, ಋೂ, ೠ, ಇವುಗಳು ಅವಶ್ಯಕವಿಲ್ಲ.

(ಬಿ) "ತರದಿನಕಾರಂ" (ಸೂ. ೬) "ಕ್ರಮದಿಂ ಹ್ರಸ್ವಕ್ಕಂ" (ಸೂ. ೭) "ವಿದಿತಸಮಾನಂಗಳ" (ಸೂ. ೯) "ಕ್ರಮದಿಗುರಿದೀರ್ಘಂ" (ಸೂ. ೧೦.) "ಸ್ವರಪರದೊಳಿರ್ವ" (ಸೂ. ೧೭) ಸೂ. ೬-೭ ರಲ್ಲಿ ಸವರ್ಣ ಸಂಜ್ಞೆಯೂ, ೯-೧೦ ರಲ್ಲಿ ಹ್ರಸ್ವ ದೀರ್ಘ ಪ್ಲುತ ಸಂಜ್ಞೆಗಳೂ ೧೭ ರಲ್ಲಿ ಬಿಂದು ವಿಸರ್ಗಗಳ ಸ್ವರಾಂಗ ವ್ಯಂಜನಾಂಗ ವ್ಯವಸ್ಥೆಯೂ ಇತ್ಯಾದಿ ಇರುವಷ್ಟು. ಈ ಕೇಶಿರಾಜನ ಅಭಿಪ್ರಾಯವನ್ನು ಯೋಚಿಸಿದರೆ, "ಕೊರಲುಂಜಿಹ್ವಾಮೂಲಮುಂ" (ಸೂ. ೩೦) ಎಂದು ವರ್ಣೋತ್ಪತ್ತಿ ಸ್ಥಾನವನ್ನು ಹೇಳಿದ್ದರೂ, ಆಯಾ ಸ್ಥಾನಗಳಲ್ಲಿ ಹುಟ್ಟುವ ಅಕ್ಷರಗಳನ್ನು ಸ್ಪಷ್ಟಪಡಿಸದಿರುವುದು, ಸಂಸ್ಕೃತ ಸಹಾಯವಿಂದ ಇವುಗಳನ್ನೆಲ್ಲಾ ತಿಳಿದುಕೊಳ್ಳಬೇಕೆಂದು ತೋರುವುದು. ಹಾಗಲ್ಲದೆ ಕನ್ನಡಿಗರಿಗೆ ಸುಲಭವಾಗಿ ತಿಳಿಸುವುದಕ್ಕಾಗಿ ಈ ಸಂಜ್ಞೆಗಳನ್ನು ಹೇಳಿದ್ದಲ್ಲಿ ಆಯಾ ಸ್ಥಾನಗಳಲ್ಲಿ ಉತ್ಪನ್ನವಾಗುವ ಅಕ್ಷರಗಳನ್ನು ಏಕೆ ಹೇಳಲಿಲ್ಲ? ವರ್ಣೋತ್ಪತ್ತಿಯ ಸ್ಥಾನವನ್ನು ಕನ್ನಡಿಗರು ಹೇಗೆ ತಿಳಿದುಕೊಳ್ಳಬೇಕು? ಇದರಿಂದ ಇವನ ಪ್ರಯತ್ನವು ಭಂಗವಾಯಿತಲ್ಲವೆ? ಕಾಗಿಲ್ಲದಿದ್ದರೆ ಸೂ ೬-೭, ೧೦, ೧೭ ರಲ್ಲಿ ವಿಶದಪಡಿಸದ್ದಕ್ಕೂ, ಸೂತ್ರ ೧೬ರಲ್ಲಿ ವಿಶದ ಮಾಡದಿರುವುದಕ್ಕೂ ಕಾರಣವೇನು?

(ಸಿ) "ಕ್ರಮದಿಂದ ಸಂಧಿ" (ಪೀಠಿಕಾ ಸೂ. ೮) ಇವನ ಪ್ರತಿಜ್ಞೆಯನ್ನು ನೋಡಿದರೆ ತಾನು ಸಂಜ್ಞಾಪ್ರಕರಣವನ್ನೇ ಹೇಳುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ೧-೪೧ ಸೂತ್ರಗಳು ಅವನು ಹೇಳಿದ ೮ ಸಂಧಿಗಳಲ್ಲಿ ಯಾವುದಕ್ಕೆ ಸೇರಿತು? ಇದು ಸಂಜ್ಞಾಪ್ರಕರಣವೆಂದೇ ಹೇಳೋಣ. ಏಕೆಂದರೆ "ಇದು

ವಾಗಿದ್ದವು. ಇದರಿಂದ ಜನಗಳು ರೋಗಿಗಳಾಗಿಯೂ ದುರ್ಬಲರಾಗಿಯೂ ಇದ್ದರು. ಸಾವಮಾನ್ಯವಾಗಿ ಆ ದೇಶದಲ್ಲಿ ಯಾವಾಗ್ಯು ಜನರು ಕಾಸಿಕೊಳ್ಳುವದಕ್ಕೆ ಬೆಂಕಿಯನ್ನು ಉರಿಸುತ್ತಿದ್ದರು. ಆಗ ಸೌದೆಯು ಬಹಳ ಪ್ರಿಯವಾಯಿತು. ಪೆಸ್ಟಲಾಟ್ಸಿಯವರು ಈ ಕೈತ್ಯದಿಂದಲೂ, ಸೌದೆಯ ಅಭಾವದಿಂದಲೂ ಜನರಿಗೆ ಬರುತ್ತಲಿದ್ದ ತೊಂದರೆಯನ್ನು ತಪ್ಪಿಸಬೇಕೆಂದು ಬಹಳ ಯೋಚಿಸಿ ಚಿಲ್ಲಕಲ್ಲುಗಳನ್ನು ತಂದು ಒಂದೆರಡು ಅಂಗುಲಗಳ ಮಟ್ಟಕ್ಕೆ ಹರವಿ ಅದರಮೇಲೆ ಬಣಗಿನ ಹುಲ್ಲನ್ನು ಹರವಿ ಅದರಮೇಲೆ ಕಾಪೆಗಳನ್ನು ಹಾಸಿದರೆ ಕೈತ್ಯದಿಂದ ಉಂಟಾಗುವ ರೋಗಾದಿಗಳು ಪರಿಹರವಾಗುವದೆಂದು ಗೊತ್ತುಮಾಡಿ ಪ್ರಥಮತಃ ತನ್ನ ಮನೆಗೆ ಆರೀತಿಮಾಡಿ ತೋರಿಸಿದರು. ಅಲ್ಲಿನ ಜನಗಳೆಲ್ಲರು ತಮ್ಮ ತಮ್ಮ ಮನೆಗೆ ಆ ರೀತಿಯಲ್ಲಿ ಮಾಡಿದರು. ಕೆಲವು ದಿವಸಗಳಲ್ಲಿ ಎಲ್ಲಾ ಮನೆಗಳಲ್ಲಿಯೂ ರೋಗಿಷ್ಟರಿಗೆಲ್ಲಾ ಲಗುವಾಗಿ ಎಲ್ಲರೂ ಆರೋಗ್ಯ ದೃಢಕಾಯರಾದರು. ಪೆಸ್ಟಲಾಟ್ಸಿಯವರಲ್ಲಿ ಜನರಿಗೆ ಇದರಿಂದ ವಿಶೇಷವಾದ ಪ್ರೀತಿಯು ಅಭಿಮಾನವು ಹುಟ್ಟಿತು. ಸಾಮಾನ್ಯವಾಗಿ ಸರ್ವರು ಇವರನ್ನು ಭಕ್ತಿಯಿಂದ ಕಾಣುತ್ತಲೂ ಎಲ್ಲಾ ವಿಷಯಗಳಲ್ಲೂ ತಾವು ಹೇಗೆ ನಡೆದುಕೊಳ್ಳಬೇಕೆಂದು ಕೇಳುವುದಕ್ಕೋಸ್ಕರ ಅವರಲ್ಲಿಗೆ ಹೋಗಿ ಬರುತ್ತಲೂ ಇದ್ದರು. ಆ ಪಟ್ಟಣದ ಅಬಾಲವೃದ್ಧರು ಇವರನ್ನು ತಮ್ಮ ತಮ್ಮ ಮನೆದೇವರಂತೆ ಕಾಣುತ್ತಿದ್ದರು.

ಕನ್ನಡ ವ್ಯಾಕರಣ ವಿಚಾರ.

ಕೇಶಿರಾಜನು ಕನ್ನಡ ಭಾಷೆಯಲ್ಲಿ ಲಕ್ಷಣಗಳಾವುದೂ ಸಿಲುಕುವಂತಾಗ, ಲಕ್ಷ್ಮಣಾಚಾರ್ಯರ ಅನುಮತಿಯಿಂದ ಈ ಶಬ್ದಮಣಿದರ್ಪಣವೆಂಬ ವ್ಯಾಕರಣವನ್ನು ಬರೆದಿರುವನಷ್ಟೆ. ಇದರಲ್ಲಿಯೂ ಕೆಲವು ನ್ಯೂನತೆಗಳು ನನಗೆ ತೋರಿಬಂದಿರುವದರಿಂದ ವಿದ್ವನ್ಮಣಿಯರು ಈ ಸಂದೇಹವನ್ನು ಪರಿಹಾರಮಾಡಿಸಿಕೊಡಬೇಕೆಂದು ಅರಿಕೆ ಮಾಡಿಕೊಂಡಿದ್ದೇನೆ.

ಈ ಅಲ್ಪ ಮತಿಯು ಮಹನೀಯನಾದ ಕೇಶಿರಾಜನಲ್ಲಿ ದೋಷಗಳನ್ನಾರೋಪಿಸಿವನೆಂದು ಯಾರೂ ನಂಬಬಾರದು. ಈ ಕೊರತೆಗಳನ್ನು ಪರಿಹಾರಮಾಡಿಸಿಕೊಳ್ಳಬೇಕೆಂಬುದೇ ನನ್ನ ಉದ್ದೇಶ್ಯನಾಗಿರುವುದು.

(ಜಿ) ಬೆರಲೆರಲ್ (ಸೂ. ೦೯) ಗ್ರಾಮ್ಯರರಿಯುದುಚ್ಚರಿಸುವದನ್ನು ಏಕೆ ಖಂಡಿಸಬೇಕು? ಹಾಗಾದರೆ ಗ್ರಾಮ್ಯರ ತಪ್ಪುಗಳು ಇಷ್ಟೆಯೇ? ಉಳಿದ ಗ್ರಾಮ್ಯ ಭಾಷೆಯು ತಪ್ಪುಗಳನ್ನು ಏಕೆ ಖಂಡಿಸಬಾರದಾಗಿತ್ತು? ಗ್ರಂಥಸ್ಥಭಾಷೆ ಲಕ್ಷ್ಯವಾಗಿರುವಾಗ ಗ್ರಾಮ್ಯಭಾಷೆ ಲಕ್ಷ್ಯವು ಏತಕೆ? ಇವನು ಖಂಡಿಸಿದರೂ "ಬೆರಳು" ಮೊದಲಾದ ಶಬ್ದಗಳು ಸಾಯಲಿಲ್ಲವಲ್ಲಾ!! ಆದ್ದರಿಂದ ಇವನ ಖಂಡನವು ನಿಷ್ಪ್ರಯೋಜನವೇ ಸರಿ ಎಂದು ಊಹಿಸಬೇಕಾಯಿತಲ್ಲ!!

ಸಂಧಿ ಪ್ರಕರಣ.

೨. (ಎ) ಆತನ + ಇಂದ್ರಂ, ಅನೆಯೊ + ಅದ್ರಿಯೊ, ಇತ್ಯಾದಿಗಳಲ್ಲಿ ಪ್ರಕೃತಿಭಾವಸಿದ್ಧಿಗೋಸ್ಕರವೇ (ಸೂ. ೫೬ ರಲ್ಲಿ "ಅವಧಾರಣೆಕಳ್ತ ವಿಶಂಕೆಗಳ್" ಎಂದಿರುವುದು ಸರಿಯಷ್ಟೆ. ಅದೇ ಸೂತ್ರದಲ್ಲಿ "ಅವಿಕೃತಿಗಳಿವರ್ಣವೊವರ್ಣವಂತ್ಯ ವಿನಿಸವನಿಪಾತಂ" ಎಂದಿರುವುದರಿಂದ ಮೇಲಿನ ಲಕ್ಷ್ಯಗಳ ಎ, ಒ ಗಳು ವ್ಯಪದೇಶಿವದಾಶ್ರವದಿಂದ (ಒಬ್ಬನೇ ಮಗನಲ್ಲಿಯೇ ಜ್ಯೇಷ್ಠತ್ವ ಮಧ್ಯಮತ್ವ ಕನಿಷ್ಠತ್ವಗಳ ಹಾರವಂತೆ) ಎ, ಒ ಅಂತ್ಯಗಳಾದ ನಿಪಾತಗಳಾಗಿ ಪ್ರಕೃತಿಭಾವವು ಸಿದ್ಧಿಸುವುದು. ಹೀಗೆಯೇ ಸೂತ್ರ ೫೩ ರಲ್ಲಿ ಉದಹರಿಸಿದ ಏನೇನೋ + ಓದಿದೆ, ಮುತ್ತಿದನೊ + ಇಂದೆ ಇತ್ಯಾದಿಗಳೂ ಸಿದ್ಧವಾಗುವುವು. ಹೀಗಿದ್ದರೂ ವಿಶೇಷ ಸೂತ್ರನ್ಯಾಸದಿಂದ ಪ್ರಯೋಜನವೇನು? ಅಲ್ಲದೆ + ಇಲ್ಲ. ಇಲ್ಲಿ ಪ್ರಕೃತಿಭಾವ ಬರಬಹುದಾದರೂ, ಟಾಧಿಕ ಸೂ. ೬೮ ರಿಂದ ಸಂಧಿ ಸಿದ್ಧಿಸುವುದು.

(ಬಿ) ಧರೆ + ಅರೆಯು ಇಲ್ಲಿ ಸೂ. ೫೩ ರಿಂದ "ಯ್" ಆಗಮವು ನಿರಾಕ್ಷೇಪನಾಗಿ ಬರುತ್ತಿದ್ದರೂ "ಅರೆವಸ್ತುವಿನರ್ಥವನುಸಿರುತ್ತಿರೆ" ಸೂ. ೬೪ ಏಕೆ ಹೇಳಬೇಕು? ವಸ್ತುವಿನರ್ಥವನ್ನು ಹೇಳದಿದ್ದರೆ ಸಂಧಿ ಬರುವುದಿಲ್ಲವೇ? ಹಾಗೆ ಬರುವುದಿಲ್ಲವೆನಲು ಯಾವುದೂ ಸಾಧಕವಿಲ್ಲವು. ಅದರೆ ಈ ಸೂತ್ರದಿಂದಲೇ ಸಂಧಿ ಬರುವುದಿಲ್ಲವೆಂದು ಊಹಿಸಬಹುದು. ಹಾಗೆ ಊಹಿಸಿ ಪ್ರಯೋಜನವೇನು? ನಿಷೇಧೋದಾಹರಣೆಯನ್ನು ಕೊಡಬಹುದಾಗಿತ್ತಲ್ಲಾ!

ನಾಮ ಪ್ರಕರಣವು.

೩. (ಎ) "ವಿವಿಕ್ಷೆವೆನಿಪ್ಪವ್ಯಯಮುಂ" (ಸೂ. ೮೧) "ಏಕದ್ವಿತಿಬ್ಯಾದಿ" (ಸೂ. ೮೨) ಅವ್ಯಯ, ತದ್ಧಿತ ಕೃತಗಳೊ, ಸಂಖ್ಯಾವಾಚಿಗಳೂ ಸಮಾಸ

ಪೂರ್ವ-ಪ್ರಕರಣಂ'' (ಸೂ. ೪೧) ರಲ್ಲಿ ಇದು ಸಂಜ್ಞಾಪ್ರಕರಣವೆಂದು ಸ್ಪಷ್ಟವಾಗುತ್ತೆ. ಈಗ ಪ್ರತಿಜ್ಞಾ ಭಂಗವಾಯಿತು. ಇದು ಹೀಗಿರಲಿ. ೪೧ ನೇ ಸೂತ್ರದ ಪ್ರಕಾರ ಇದನ್ನು ಸಂಜ್ಞಾಪ್ರಕರಣವೆಂದು ಅಂಗೀಕರಿಸಿದರೆ ಸೂತ್ರ ೪೨–೪೪ ಇವುಗಳು ಆವ ಸಂಜ್ಞೆಗಳು? ಇವು ವಿಧಿ ಸೂತ್ರಗಳಲ್ಲವೇ? ಹೀಗೆ ಸಂಜ್ಞಾಪ್ರಕರಣದಲ್ಲಿ ವಿಧಿಯನ್ನು ಹೇಳಬಹುದೇ?

(ಜ) ಸೂ. ೪೪ ರಿಂದಲೆ ಮಗುಳ್ದಂ, ಅಗುಳ್ದಂ, ಇತ್ಯಾದಿಗಳಲ್ಲಿ ಶೈಥಿಲ್ಯವೂ, ಪಿರಿದೂ ಎಂಬ ಅನುವೃತ್ತಿಯಿಂದ ತಗುಳ್ದಂ, ಪೊರಳ್ದಂ, ಇತ್ಯಾದಿಗಳಲ್ಲಿ ವಿಕಲ್ಪವೂ ಸಿದ್ಧಿಸುವಾಗ, (ಸೂ. ೩೬) ರಲ್ಲಿ '' ಕೆಲವಾಶಿಥಿಲದ್ವಿತ್ವಂ ಕೆಲವುಭಯಮುಂ'' ಏಕೆ ಹೇಳಬೇಕು? ವಿಧಿ ಸೂತ್ರಗಳಿಂದ ಸಿದ್ಧವಾದರೂ ಪುನಃ ಕೆಲವು ಶಬ್ದಗಳು ಹೀಗಿರುವುವೆಂದು ಸಂಜ್ಞಾಪ್ರಕರಣದಲ್ಲಿ ಹೇಳಬೇಕೆ? ಹಾಗಾದರೆ '' ಕರಿಯುವು, ಪಿರಿಯುವು'' ಇತ್ಯಾದಿಗಳು ಬಹುವಚನದಲ್ಲಿ ಈ ರೂಪವನ್ನು ಹೊಂದುವುದೆಂದು ವಿಧಿ ಸೂತ್ರವಲ್ಲದೆ ಸೂ. ೪೬ ರ ಹಾಗೆ ಬೇರೆ ಏಕೆ ಬರೆಯಲಿಲ್ಲ? ಇದು ಹೀಗಿರಲಿ. ಈ ಪ್ರಕರಣವನ್ನು ಸಂಧಿಪ್ರಕರಣವೆಂದೇ ಹೇಳಿ. 'ಆ ಯಾವ ಪ್ರಕರಣದಲ್ಲಿ ಅವುಗಳಿಗೆ ಬೇಕಾದ ಸಂಜ್ಞೆಯನ್ನು ಹೇಳಿರುವೆನು'' ಅದ್ದರಿಂದ ಈ ಪ್ರಕರಣದಲ್ಲಿ ಹೇಳಿದ ಸಂಧಿಗಳೆಲ್ಲಾ ಸಂಧಿಪ್ರಕರಣಕ್ಕೇ ಉಪಯೋಗವಾದುವು ಎಂದು ಯೋಚಿಸದೆ, ಸಂಧಿಸ್ವರೂಪಕಥನ ಮಾಡುವುದಕ್ಕೆ ಪೂರ್ವದಲ್ಲಿಯೇ ಸೂ. ೪೬–೪೯ ಇತ್ಯಾದಿಗಳಲ್ಲಿ ಲೋಪಾದೇಶಗಳನ್ನು ವಿಧಿಸಿರುವನು. ಇದು ಹೇಗೆ?

(ಇ) '' ತಿಳಿದೇಶೀಯಮುಂ'' (ಸೂ. ೩೩) ಮು, ೧ ವರ್ಣ ಶಷವಿಸರ್ಗ ಜಿಹ್ವಾಮೂಲೀಯೋಪಧ್ಮಾನೀಯ ಪ್ಲುತಗಳು ಕನ್ನಡದಲ್ಲಿಲ್ಲವೆಂದು ಹೇಳಿರುವಲ್ಲಿ, '' ಮಣಿಗೊಪ್ಪುವೋಲ್'' (ಸೂ. ೧೧) ರಲ್ಲಿ ವಿಸರ್ಗ ಸ್ವರೂಪಕಥನವೂ, 'ಸಮಸಂದಿರ್ಮ'' ಸೂ. ೧೩ ರಲ್ಲಿ ಜಿಹ್ವಾಮೂಲೀಯೋಪಧ್ಮಾನೀಯಗಳ ಸ್ವರೂಪಕಥನವೂ ಏತಕ್ಕೆ?

(ಎಫ್) ಸೂ. ೧೦ ರಲ್ಲಿ ನೆವಮಿಸಂಜ್ಞಾ ಪ್ರಯೋಜನವೇನು? ಈ ಸಂಜ್ಞೆಯನ್ನು ಹೇಳದಿದ್ದರೆ ಬರುವ ಕುಂದಕವೇನು? ಇದು ನಿರರ್ಥಕವಾಗಿ ತೋರುವುದು. 'ಪ್ರಯೋಜನವನುದ್ದಿಶ್ಯವಂದೋಪಪ್ರವರ್ತತೆ'' ಅಲ್ಲವೆ?

ಡು ಕೃತಾರ್ಥನಾಗುವೆನು, ಏನೇ ಪ್ರಲಾಪವಾಡಿರುವನೆಂದು ಉಡಾಸೀನರಾ
ಬಾರದೆಂದು ಕೃತಾಂಜಲಿಪ್ರಬಂಧನಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಕೂಡ್ಲಿ ಸುಬ್ರಹ್ಮಣ್ಯಶಾಸ್ತ್ರಿ ಮಾಸ್ಟರ್
ನಾರ್ಮಲ್ ಸ್ಕೂಲ್ ವಿದ್ಯಾರ್ಥಿ
ಸಿರಸಂಬಿ

ಕಿಂಡರ್‌ಗಾರ್ಟ್ನ್.

ಏನೇ ಕರಣ—

ಸಾಮಾನುಗಳ —ಇದರಲ್ಲಿ ಒಂದುಗೋಳ, ಒಂದುಸಲಂದರ್, ಎರಡು ಪಾಸ
ಗಳು ಇರುವವು. ಅವುಗಳಲ್ಲಿ ಒಂದು ಪುಟ್ಟಕ್ಕೆ ಕೆಲವು ಕೋಲುಗಳು ಇರುವೆವು.

ಕಲಿಸುವವಿವರ—ಉಪಾಧ್ಯಾಯನು ಇವುಗಳನ್ನು ಏನೇಕರಣದ ಮಂಡಿಗೆ
ಕೊಡನೆ ಮೇಜಿನಮೇಲೆ ಇಟ್ಟು ಹುಡುಗರನ್ನು ಸಾಲಾಗಿ ನಿಲ್ಲಿಸಿ ಈ ಪುಟ್ಟರಲ್ಲಿ ಎಷ್ಟೂ
ದು ಚಂಡಿನಂತೆ ಇದೆ? ಎಂದು ಕೇಳಲು ಹುಡುಗರು ಅದರ ಹೆಸರು ಹೇಳಬೇಕು
ಳವನ್ನು ತೋರಿಸುವರು. ಇದು ಯಾತರಿಂದ ಮಾಡಿದೆ? ಎಂದು ಉರುಳಿಸಿ
ಥವಾ ಒಬ್ಬನ ಕೈಯಲ್ಲಿ ಕೊಟ್ಟು ಕೇಳಬೇಕು. ಮರದಿಂದ ಎಂದು ಉತ್ತರ ಬರು
ದು; ಆದ್ದರಿಂದ ಇದನ್ನು ಯಾವ ಚಂಡೆಂದು ಕರೆಯಬಹುದು. ಮರದಚೆಂಡೆಂದು.
ಳ್ಳೋದು ಇದಕ್ಕೆ ಇನ್ನೊಂದು ಹೆಸರನ್ನು ಕೊಡೋಣ, ಅದೇನೆಂದರೆ— ಗೋಳ—

ಅನಂತರ ಚಂಡಿಗೂ ಗೋಳಕ್ಕೂ ಇರುವ ವ್ಯತ್ಯಾಸಗಳನ್ನೂ ಹೋಲಿಕೆ
ಳನ್ನೂ ಕೇಳಬೇಕು.

ಹೋಲಿಕೆಗಳು—ಎರಡೂ ಗುಂಡಗೆ ಇವೆ, ಎರಡು ಗುಡುಗುಕ್ಕವಿ. ಎರಡು
ಜಿನವೀಲೆ ಸರಿಯಾಗಿ ಕೂಡಲಾರವು.

ಕ್ಷ ಪೂರ್ವಪದವಾಗಿರದೇಕ್ಕೇ ಉತ್ತರಪದನಾಗಿರಬೇಕೇ ಎಂದು ವ್ಯವಸ್ಥೆಯಿಲ್ಲ. ಉದಾ ಹರಣೆಗಳಲ್ಲಾದರೆ ಲಂಕರ್ಮುಖ, ತದ್ವಚನ, ಕ್ವಣತ್ಕಂಕಣ, ಏಕಾಂಗ, ಇತ್ಯಾದಿ. ಪೂರ್ವಪದಗಳಾಗಿರುವುವು. ಆದರೆ ಪರವ.ಶಾ.ಬ್ಜ ಸೌ + ಸಜ, = ಪರಮಸಃ, ಪ್ರಿಯಃ + ಪಂಚ, ಯಸ್ಯಸಃ = ಪ್ರಿಯಪಂಚಾ ಇವುಗಳು ಕನ್ನಡದಲ್ಲಿ ಲಿಂಗವಾಗುವುದೆ? ಲಿಂಗಗಳಾಗದಿರಲು ಪ್ರಮಾಣವೇನು?

(ಬ) ದಿವ, ಸ್ರಜ, ಮುರುತ ಇತ್ಯಾದಿಗಳು: ಸೂ. ೪೭ ರ ಪ್ರಕಾರ ಸಂಸ್ಕೃತ ಪ್ರಥಮಾ ವಿಭಕ್ತಿಯ ವಿಸರ್ಗವನ್ನು ಲೋಪ ಮಾಡಿದರೇ ಸಿದ್ಧವಾಗುವಾಗ ಸೂ. ೪೬ ಕ್ಕೆ ಏಕೆ ಲಕ್ಷ್ಯಂಗಳಾದುವು? ಲಿಹ್ ಎಂಬ ಶಬ್ದವನ್ನು ಕನ್ನಡಕ್ಕೆ ಲಿಂಗ ಮಾಡಬೇಕಾದರೆ ಯಾವ ಸೂತ್ರ ಪ್ರಕಾರ ಮಾಡಬೇಕು? ಸೂ. ೪೬, ೪೭ ಯಾವುದಕ್ಕಾದರೂ ಲಕ್ಷ್ಯವಾಗುವ ಪಕ್ಷದಲ್ಲಿ ಯಾವುದಾದರೂ ಒಂದೇ ಸೂತ್ರವೇ ಸಾಕಾಗುವುದು. ಮತ್ತು ಲಿಹ್ ಶಬ್ದಕ್ಕೆ ಅಕಾರವನ್ನು ಸೇರಿಸಿ ಲಿಂಗ ಮಾಡುವಾಗ ಕ್ಕು ಬಹುವಚನದ ವಿಸರ್ಗ ಲೋಪ ಮಾಡಿ ಲಿಂಗ ಮಾಡುವದಕ್ಕು ವ್ಯತ್ಯಾಸವೇನು? ಆದ್ದರಿಂದ ೪೬ ನೇ ಸೂತ್ರದಲ್ಲಿ ವಿಧಿಸಿದ ಅತ್ವವು ಬೇಕಾಗಿಲ್ಲ.

(ಸಿ) ಸೂ. ೪೭ ಇದು ಸ್ವರಾಂತ ಶಬ್ದಗಳ ವಿಷಯದಲ್ಲಿಯೇ ವ್ಯಂಜನಾಂತ ಶಬ್ದಗಳ ವಿಷಯವಲ್ಲಿಯೇ? ಸ್ವರಾಂತ ವಿಷಯಕಗಳಾಗಿದ್ದರೆ, ಶ್ವಾನೆಯುವಾಸ ಇತ್ಯಾದಿಗಳು ಅಲಕ್ಷ್ಯಂಗಳು. ವ್ಯಂಜನಾಂತ ವಿಷಯಕನಾಗಿದ್ದರೆ, ಸಖಾಯು ಇದು ಲಕ್ಷ್ಯವಲ್ಲವು.

(ಡಿ) ೪೪ ನೇ ಸೂ. ದಲ್ಲಿ ಪುಂಸ್ತ್ರೀಲಿಂಗಕ್ಕೆ ಇವರ್ ಪುರುಷರ್ ಇವು ತೋರಿದ್ದಲ್ಲಾದುವು ಉದಾಹರಣೆಗಳಾಗಿರುವುವು. ಇವುಗಳಲ್ಲಿ ಪುಂಸ್ತ್ರೀ ಲಿಂಗಶಬ್ದಗಳಿಲ್ಲ. ಏಕೆಂದರೆ ಇವರು ಎಂಬುದು ಸರ್ವನಾಮವಾದ್ದರಿಂದ ತ್ರಿಲಿಂಗದಲ್ಲಿಯೂ ಇರುವುದು. ಆದ್ದರಿಂದ ಈ ಉದಾಹರಣೆಗಳು ಹೇಗೆ ಸಮನ್ವಯವಾಗುವುದು?

ಇದೇ ಸೂತ್ರದಲ್ಲಿಯೇ ತ್ರಿಲಿಂಗಕ್ಕೆ ನೀನರಸಿ. ನೀನೆದಸಂ, ನೀಂಗುರು ಇತ್ಯಾದಿ ಉದಾಹರಿಸಿರುವುದು. ೪೧ ನೇ ಸೂತ್ರದಲ್ಲಿ ನೀನ್ ಅನ್ ತಾನ್ ಎಂಬುವುಗಳು ವಾಚ್ಯಲಿಂಗಗಳೆಂದು ಹೇಳಿರುವುದು. ಇದು ಹೇಗೆ ಸಮನ್ವಯವಾಗುವುದು.

ಆರ್ಯ ಕನ್ನಡ ವಿದ್ವಜ್ಜರೇ ಈ ನನ್ನ ಸಂದೇಹಗಳಿಗೆಲ್ಲಾ ಇದೇ ಪತ್ರಿಕೆಯಲ್ಲಿ ಸಮುತ್ತರವನ್ನಿತ್ತರೆ ಕೃತಜ್ಞನಾಗಿ ಈ ಸಂದೇಹಗಳನ್ನು ನಿವಾರಿಸಿಕೊಂ

ದು, ಬಲ್ಲಿರಾ, ಸಿಲಿಂದರವೆಂದು ಹೆಸರು ಎಂಬದಾಗಿ ಉಪಾಧ್ಯಾಯನು ಹೇಳಬೇಕು.

ಬೇರೊಂದುದಿನ ಘನ ಮತ್ತು ಸಿಲಿಂದರ ಈ ಎರಡನೂ, ಮೇಜಿನಮೇಲಿಟ್ಟು ಇವುಗಳಲ್ಲಿನ ಸಾಮ್ಯ ವೈಷಮ್ಯಗಳನ್ನು ಹೇಳಬೇಕು:

ಸಾಮ್ಯಗಳು—ಎರಡೂ ಮರದ್ದು, ಎರಡು ಒಂದೇ ಬಣ್ಣ, ಎರಡೂ ನುಣು ವಾಗಿವೆ, ಎರಡೂ ಬಾರವಾಗಿವೆ, ಮೇಜಿನಮೇಲೆ ಹೊಡೆದರೆ ಎರಡೂ ಗಟ್ಟಿಯಾಗಿ ಶಬ್ದವಾಗುತ್ತೆ. ನೆಲಕ್ಕೆ ಹೊಡೆದರೆ ಎರಡೂ ಪುಡಿಯಾಗುವದಿಲ್ಲ.

ವ್ಯತ್ಯಾಸಗಳು—ಘನಕ್ಕೆ ೬ ಪಕ್ಕಗಳಿವೆ. ಸಿಲಿಂದರಕ್ಕೆ ಎರಡೇ ಪಕ್ಕಗಳು, ಸಿಲಿಂದರವು ಗುಡುಗಬಲ್ಲದು, ಘನವು ಗುಡುಗಲಾರದು, ಘನಕ್ಕೆ ಮೂಲೆಗಳಿವೆ. ಸಿಲಿಂದರಕ್ಕೆ ಮೂಲೆಗಳಿಲ್ಲ.

ಸಿಲಿಂದರದ ಹೆಸರು ಬಾಲಕರಿಗೆ ತಿಳಿದಿರುವದರಿಂದ ಘನದ ಹೆಸರನ್ನು ತಿ ದುಕೊಳ್ಳಬೇಕೆಂದು ಹುಡುಗರು ಹವಣಿಸುತ್ತಿರುವರು, ಇದರ ಹೆಸರು ಘನವೆಂದು ಉಪಾಧ್ಯಾಯನು ಹೇಳಿಕೊಡಬೇಕು. ಈ ರೀತಿ ಚಂಡಿಗೂ ಗೋಳಕ್ಕೂ, ಗೋಳ ಕ್ಕೂ ಸಿಲಿಂದರಕ್ಕೂ, ಸಿಲಿಂದರಕ್ಕೂ ಘನಕ್ಕೂ, ಇರುವ ಸಾಮ್ಯ ವೈಷಮ್ಯಗಳನ್ನು ಅವುಗಳ ಹೆಸರುಗಳನ್ನೂ ತಿಳಿಸಿ ಅನಂತರ ಅವುಗಳನ್ನು ಚನ್ನಾಗಿ ದೃಢಪಡಿಸುವದ ಕ್ಕಾಗಿ ಈ ಮೂರನ್ನು ಮೇಜಿನಮೇಲಿಟ್ಟು ಪ್ರತಿಒಂದಕ್ಕೂ ಇರುವ ಸಾಮ್ಯ ವೈಷ ಮ್ಯಗಳನ್ನು ಪ್ರಶ್ನೆಗಳಿಂದ ಹೊರಡಿಸಬೇಕು. [ಸಶೇಷ]

ಎಚ್. ಸೂರಪ್ಪ ಹೆಡ್‌ಮಾಸ್ಟರ್,
ಗೌ॥ ಗರಲ್ಸ್ ಸ್ಕೂಲ್
ಧಾರವಾಡ.

ಗೋಳ ಚೆಂಡಿನ ವ್ಯತ್ಯಾಸಗಳು—ಚೆಂಡು ಪ್ಯಾದು, ಗೋಳ ಕಠಿಣ, ಚೆಂಡು ಹಗುರ, ಗೋಳ ಭಾರ, ಚೆಂಡು ಕಸೂತಿದಾರದ್ದು, ಗೋಳ ಮರದ್ದು, ಚೆಂಡು ಬೇರೆಬೇರೆ ಬಣ್ಣವಾಗಿದೆ. ಗೋಳ ಬಿಳುಪಾಗಿದೆ. ಗೋಳವನ್ನು ಮೇಜಿನಮೇಲೆ ಹಾಕಿದರೆ ಚೆಂಡಿಗಿಂತ ಹೆಚ್ಚು ಶಬ್ದ ವಾಗುತ್ತದೆ. ಚೆಂಡನ್ನು ನೆಲಕ್ಕೆ ಹೊಡೆದರೆ ಪುಟ ಏಳುತ್ತದೆ. ಗೋಳ ಪುಟ ಏಳುವದಿಲ್ಲ. ಈ ಉತ್ತರಗಳನ್ನು ಪ್ರತಿಒಬ್ಬ ನಿಂದಲೂ ಹೇಳಿಸಬೇಕು. ಇದು ಚೆನ್ನಾಗಿ ಹೊಂದಿದ್ದು ಆದಮೇಲೆ ಹುಡುಗರನ್ನು ಗುಂಡಾಗಿ ನಿಲ್ಲಿಸಿ, ಉಪಾಧ್ಯಾಯನು ಗೋಳ ವನ್ನು ಗುಡುಗಿಸಿ, ಅದನ್ನು ನಿಲ್ಲಿಸು ಎಂದು ಒಬ್ಬನಿಗೆ ಹೇಳಬೇಕು. ಅವನು ಅದನ್ನು ನಿಲ್ಲಿಸಲು ಕೇಂದ್ರಸ್ಥಾನಕ್ಕೆ ಬರುವನು. ಅನಂತರ ಇನ್ನೊಂದನ್ನು ಉರುಳಿಸಿ ಮತ್ತೊ ಬ್ಬನಿಗೆ ಹೇಳುವನು. ಈ ರೀತಿಯಲ್ಲಿ ಎಲ್ಲರಿಗೂ ಹೇಳಲು ಎಲ್ಲರೂ ಕೇಂದ್ರಸ್ಥಾನಕ್ಕೆ ಬರುವರು.

ಇನ್ನೊಂದುದಿನ ಹುಡುಗರನ್ನು ಇದಿರುಬದರಾಗಿ ಎರಡು ಸಾಲಾಗಿ ನಿಲ್ಲಿಸಿ ಅವರಲ್ಲಿ ಮೊದಲನೇಯವನಿಗೆ ಗೋಳ ಅಥವಾ ಚೆಂಡುಕೊಟ್ಟು ಒಬ್ಬನೊಬ್ಬನು ಅಡ್ಡಡ್ಡವಾಗಿ ಗುಡುಗಿಸುತ್ತಾ ಹೋಗಬೇಕು. ಇದೇರೀತಿ ಮೊದಲಿನಿಂದ ಕೊನೆ ಗೂ ಕೊನೆಯಲ್ಲಿರುವವನಿಗೂ ಮುಟ್ಟಿಸುತ್ತಾ ಬರಬೇಕು. ಚೆಂಡನ್ನು ಸ್ವಲ್ಪದೂರ ದಲ್ಲಿಟ್ಟು ಅದನ್ನು ಗೋಳದಿಂದ ಹೊಡೆಯಲು ಪ್ರತಿಒಬ್ಬನೂ ಪ್ರಯತ್ನಿಸಬೇಕು.

ಗಮನಿಸಬೇಕಾಂದುದಿನ ಗೋಳ ಮತ್ತು ಸಿಲಿಂದರಗಳನ್ನು ಮೇಜಿನಮೇಲಿಟ್ಟು ಈಗ ಹಿಡಿಯಲಕ್ಕೆ ಇರುವ ಸಾಮ್ಯವೈಷಮ್ಯಗಳನ್ನು ಕಾಣಿಸೋಣವೆಂದು ಹೇಳಬೇಕು.

ಸಾಮ್ಯಗಳು—ಎರಡೂ ಮರದ್ದು, ಎರಡೂ ನುಣುಪಾಗಿವೆ. ಎರಡಕ್ಕೂ ಬಣ್ಣವಿಲ್ಲ. ಎರಡೂ ಬಾರವಾಗಿವೆ. ಮೇಜಿನಮೇಲೆ ಹಾಕಿದರೆ ಎರಡೂ ಗಟ್ಟಿಯಾಗಿ ಶಬ್ದವಾಡುತ್ತವೆ. ನೆಲಕ್ಕೆ ಹೊಡೆದರೆ ಎರಡೂ ಮೇಲಕ್ಕೆ ಪುಟ ಏಳುವದಿಲ್ಲ.

ವೈತ್ಯಾಸಗಳು—ಸಿಲಿಂದರಕ್ಕೆ ಎರಡು ಸಮನಾದ ಪಕ್ಕಗಳಿವೆ. ಗೋಳಕ್ಕೆ ಪಕ್ಕಗಳು ಇಲ್ಲ. ಸಿಲಿಂದರವು ಮೇಜಿನಮೇಲೆ ಕೂಡುತ್ತದೆ. ಗೋಳವು ಕೂಡಲಾ ರದು. ಕಾರಣ:—ಪಕ್ಕಗಳಿಲ್ಲ. ಒಂದು ಸಿಲಿಂದರಮೇಲೆ ಮತ್ತೊಂದನ್ನು ಇಡಬಹು ದು. ಆದರೆ ಒಂದು ಗೋಳದಮೇಲೆ ಮತ್ತೊಂದು ಗೋಳವನ್ನು ಇಡಲು ಆಗುವದಿಲ್ಲ. ಗೋಳವು ಎಲ್ಲಾ ದಿಕ್ಕಿನಲ್ಲಿಯೂ ಉರುಳುತ್ತದೆ ಸಿಲಿಂದರವು ಎರಡುದಿಕ್ಕುಗಳಲ್ಲಿ ಅಂದರೆ ಹಿಂದೆಮುಂದೆ ಮಾತ್ರ ಉರಳುತ್ತದೆ. ಇದಕ್ಕೆ ಏನೆಂದು ಹೆಸರು ಕೊಡಬಹು

ಒಂಟೆ ಉ ಬಿ ಲ ಕೌ ಒಲೆ

ಬಿ ಬ ಜ ಪಿ ಔ ಖ

ಬರ್ ನರ್ ಜಯ ಖಯ

ಹಡೆ ಗ್ಜ ಜನ್ ಬಲ್ ಜ್ಞ ನಜೀ

ಬರ್ಹ್ ನಗ್ರ್

ಸೂ—೧. ಇದು ಬ ಚಿತ್ರವಲ್ಲಿ ತೋರಿಸು. ಇದನ್ನು ಸ್ವಲ್ಪ ಮೇಲಕ್ಕೆ ಎಳೆದರೆ ಬ ಚಿತ್ರದಲ್ಲಿ ನೋಡು. ಇದನ್ನೇ ಭ ಮಾಡುವೆನು. ಬ ಇದಕ್ಕೆ ೨ ಸೇರಿದರೆ ಜ. ಈ ರೀತಿಯಲ್ಲಿ ಪಾಠದಲ್ಲಿನ ಅಕ್ಷರಗಳನ್ನು ತೋರಿಸಿ ಚಿತ್ರದ ಅಧ್ಯಕ್ಷರಗಳನ್ನು ಹೇಳಿ.

೨. ಬಿತ್ತುಗಳಲ್ಲಿಯಾಗಲಿ, ಚಿತ್ರಿಸಿದ ಕಾಗದಗಳಲ್ಲಿಯಾಗಲಿ ಬರೆದ ಅಕ್ಷರಗಳನ್ನು ಹೇಳಿಸಿ ಇವುಗಳಲ್ಲಿ ಯಾವ ವ್ಯತ್ಯಾಸಗಳನ್ನು ಮಾಡಿದರೆ ಯಾವ ಅಕ್ಷರಗಳಾಗುವುವೆಂಬುದನ್ನು ತಿಳಿಸಿಕೊಡಿರಿ.

ಅಭ್ಯಾಸ—೧ ಲ ಇದನ್ನು ಲಿ ಮಾಡು ಅದರ ಮುಂದೆ ೧ ಬರೆ. ಇದಕ್ಕೆ ಲೀಕಟ್ಟು ಕೊಡು. ಈಗ ಏನಾಯಿತು? ಲಿಗೆ.

೨ ನಗರ, ಇಲ್ಲಿ ತುದಿಯಕ್ಷರವನ್ನು ಮುಚ್ಚಿ ಓದು (ನೆಗ) ಮಧ್ಯಾಕ್ಷರವನ್ನು ಸೇರಿಸಿ ಓದು. ನರ. ಇದನ್ನು ರಂಗ ಮಾಡಬೇಕಾದರೆ ಯಾವುದನ್ನು ತೆಗೆಯಬೇಕು? ಯಾವ ಅಕ್ಷರಗಳನ್ನು ಬರೆಯಬೇಕು?

೩ ಂ, ಲ, ಈ ಗುರುತುಗಳಿಂದ ಜೇರೆ ಜೇರೆ ನಾಲ್ಕು ಅಕ್ಷರಗಳನ್ನು ಮಾಡಿ.

೪ ಯ, ರ ಇವುಗಳ ಹಾಗೆ ಒಂದೊಂದು ಅಕ್ಷರವನ್ನು ಬರೆದು ಒಂದೊಂದಾಗಿ ಪದವಾಗಿ ಮಾಡಿ ಓದು.

ಸ್ವರಾಕ್ಷರ } ಅ ಆ ಈ ಉ ಊ ಬ ಓ ಔ, ೦ ಃ,
ವ್ಯಂಜನಾಕ್ಷರ } ಜ ಬ ಛ ನ ಗ ಥ ಯ ರ ಳ ಡ.

(೧೩ ನೇ ಪುಟದ ಶೇಷ)

ಅಂಬು ೨ ಲ ವ ೧ ನಿ

ಲ ಉ ಅ ಊ ಆ ನ

ಆಲ ಆಗ ನಗ

ಪದಿಲು ನಯನ ಉರಗ ಲವಂಗ

ಆಲಯ ಅಗಲ

೬೫. ಹಿಂದಿನ ಸೂಚನೆಯಂತೆ ಲ ಎಂಬ ನಾಲ್ಕಾರು ಗುರುತುಗಳನ್ನು ಪಲಕೆಯ ಮೇಲೆ ಬರೆಯಿರಿ. ಲ ಇದು ಲ ಚಿತ್ರವಲ್ಲಿ ತೋರಿಸು. (ಲವಂಗ) ಇದಕ್ಕೆ ೨ ಈ ಗುರುತನ್ನು ಸೇರಿಸಿ ಉ ಆಗುವುದು. ಇದಕ್ಕೆ ವ ಈ ಗುರುತನ್ನು ಸೇರಿಸಿ ಊ ಆಗುವುದು. ೧ ಇದಕ್ಕೆ ವ ಸೇರಿದರೆ ನ ಆಯಿತು. ಚಿತ್ರದಲ್ಲಿ ತೋರಿಸಿ. ಇದರಿಂದ ಆರಂಭಿಸುವ ನರಿ, ನಗರ, ನಂಜು ಮುಂತಾದವುಗಳನ್ನು ಬರೆಯಿರಿ. ಮೊದಲಕ್ಷರಗಳೆಲ್ಲಾ ಒಂದೇ ಎಂದು ತಿಳಿಸಿರಿ.

೬೬. ಕಠಿಣಶಬ್ದಾರ್ಥಗಳು.—೧ ಬಿಟ್ಟ, ೨ ಕಣ್ಣು, ೩ ಹಾವು, ೪ ಮನೆ.

ಅಭ್ಯಾಸ—೧ ಅ ಇದನ್ನು ಲ ಮಾಡು. ಉ ಮಾಡು. ಯ ಇದನ್ನು ಹ ಮಾಡು

ಆಲಯ, ಇಲ್ಲಿ ನಡುವಣ ಅಕ್ಷರವನ್ನು ತೊಡೆದು ಓದು. ಆಯ, ನಯನ, ಇಲ್ಲಿ ಕಡೆ ಅಕ್ಷರವನ್ನು ಅಳಿಸಿ ಓದು. ನಯ, ಲ ಇದರ ಹಿಂದೆ ಒಂದು ಅಕ್ಷರವನ್ನು ಬರೆದರೆ ಒಂದು ಮಾರವ ಹೆಸರಾಗುವುದು. ಆ ಅಕ್ಷರವು ಯಾವುದು? ಇತ್ಯಾದಿಗಳು.

೩. ಊ ಈ ಅಕ್ಷರವನ್ನು ಬಿತ್ತುಗಳಿಂದ ಜೋಡಿಸು. ಉ ಮಾಡಬೇಕಾದರೆ ಎಷ್ಟರವುಟ್ಟಿಗೆ ತೆಗೆಯುವೆ? ಇದನ್ನೇ ಲ ಮಾಡು. ಇದರಮೇಲೆ ಆ ಚಿತ್ರಿಸು.

ಕಲಿಸಿದ ಅಕ್ಷರಗಳು ೧೩ } ಅ ಆ ಈ ಉ ಊ ನ ಗ ಥ
ಯ ರ ಲ ಹ ಂ

ವಿದ್ಯಾದಾಯಿನಿ.

ಭಾಗ V.] ಫೆಬ್ರುವರಿ ೧೯೦೦. [ಸಂಚಿಕೆ ೨.

ಎಡಿಟರವರ ನೋಟ್ಸ್.

ನಮ್ಮ ಮೈಸೂರು ಸೀಮೆಯಲ್ಲಿ ಸ್ತ್ರೀವಿದ್ಯಾಭ್ಯಾಸವನ್ನು ಪ್ರಚಾರಗೊಳಿಸಿರುವ ಪಾಠಶಾಲೆಗಳಲ್ಲೆಲ್ಲ ಮಹಾರಾಣೀಬಾಲಿಕಾಪಾಠಶಾಲೆಯು ಅತ್ಯುಚ್ಚ ಮುಖ್ಯವಾದ್ದು. ಅಲ್ಲಿ ಇತರ ಬಾಲಿಕಾ ಪಾಠಶಾಲೆಗಳಂತೆ ಬಾಲವಿದ್ಯಾಭ್ಯಾಸವು ನಡೆಯುವುದು ಮಾತ್ರವಲ್ಲದೆ ಸ್ತ್ರೀಯರಿಗೆ ಪ್ರೌಢವಿದ್ಯಾಭ್ಯಾಸವು ನಡೆಯುತಲಿದೆ. ಇದು ಎಷ್ಟನಟ್ಟಿಗೆ ವೃದ್ಧಿಯಾಗಿದೆಯೆಂಬುದು ಕಳೆದವರ್ಷದ ಯೂನಿವರ್ಸಿಟಿ ಪರೀಕ್ಷೆಗಳ ಫಲಿತಾಂಶದಿಂದ ಸುವ್ಯಕ್ತವಾಗುವುದು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಇಬ್ಬರೂ, ಎಫ್. ಎ. ಪರೀಕ್ಷೆಯಲ್ಲಿ ಒಬ್ಬರೂ ಈ ಪಾಠಶಾಲೆಯಲ್ಲಿ ಓದಿ ತೇರ್ಗಡೆಯಾಗಿದಾರೆ. ಈ ಮೂವ್ವರೂ ಪರೀಕ್ಷೆಯಲ್ಲಿ ಜಯಶಾಲಿಗಳಾಗಿರುವುದು ಆ ಪಾಠಶಾಲೆಗೆ ಮಾತ್ರವಲ್ಲದೆ ನಮ್ಮ ದೇಶಕ್ಕೆಲ್ಲ ಗೌರವೋತ್ಪಾದಕವೆಂಬುದರಲ್ಲಿ ಸಂಶಯ ಲೇಶವೂ ಇಲ್ಲ. ಬ್ರಾಹ್ಮಣ ಸ್ತ್ರೀಯರು ಹೀಗೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಇಂಡಿಯಾದೇಶದ ಈ ಭಾಗದಲ್ಲಿ ಬಹಳ ಅಪೂರ್ವ. ಎಫ್. ಎ, ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು ಕಾಲಕ್ರಮವಾಗಿ ಬಿ ಎ. ಪರೀಕ್ಷೆಯಲ್ಲೂ ಗೆದ್ದು ಮಹಾರಾಣೀ ಬಾಲಿಕಾಪಾಠಶಾಲೆಯ ಪ್ರಧಾನೋಪಾಧ್ಯಾಯರಲ್ಲಿ ಒಬ್ಬರಾಗುವೆರೆಂದು ಕೋರುತ್ತೇವೆ.

* * *

ಹೀಗೆ ಪ್ರೌಢವಿದ್ಯಾಭ್ಯಾಸದಲ್ಲಿ ಆ ಪಾಠಶಾಲೆಯು ಉದ್ಯುಕ್ತವಾಗಿರುವುದೇನೊ ನಮ್ಮ ದೇಶಕ್ಕೆ ಗೌರವಾಸ್ಪದವೇ ಸರಿ. ಇಂಥ ಪಾಠಶಾಲೆಯು ದೇಶಕ್ಕೆ ಒಂದಾದರೂ ಇರುವುದು ಸಹ ಆವಶ್ಯಕ. ಆದರೆ ನಮ್ಮ ದೇಶದ ಈಗಿನ ಸ್ಥಿತಿಯಲ್ಲೂ, ಸ್ತ್ರೀಯರ ಸ್ವಭಾವವನ್ನು ಕಿಂಚಿತು ಪರ್ಯಾಲೋಚಿಸಿದರೂ ಸ್ತ್ರೀಯರಿಗಾಗಿರುವ ಪಾಠ

ಅಮ್ಮ	ಎ ವ	ಮ ಹ	ಫ ಘ	ಮಂಗ
	ವರ	ಮರ	ಮಾ	
	ಹರ	ಘನ	ವನ	
ಹುಟಿ	ಜಹ	ಯಮ	ಫಲ	ಪಂಜರ
	ವರಹ	ಅಮರ	ಪಂಜರೆ	

ಪ್ರಶ್ನೆ ೧. ಎ ಇದು ಒಂದು ಅಕ್ಷರ. ಈ ಚಿತ್ರವಲ್ಲಿ ನೋಡು. ಇದಕ್ಕೆ ತಲೆಕಟ್ಟು ಕೊಡುವೆನು. ವ ಅಯಿತು. ಇದಕ್ಕೆ ಕೊಂಬು ಕೊಡುವೆನು. ಮು ಚಿತ್ರದಲ್ಲಿ ನೋಡು. ಈ ರೀತಿಗೆ ಇಲ್ಲಿನ ಅಕ್ಷರಗಳ ಸ್ವರೂಪವನ್ನು ತಿಳಿಸಿರಿ.

ಪ್ರ. ೨. ಮ. ಇದರಲ್ಲಿ ಕೋಬನೆಳಿಸು. ಏನಾಯಿತು? ಇದರ ಪಕ್ಕದಲ್ಲಿ ಒಂದು ಸೊನ್ನೆ ಬರಿ. ಇದಕ್ಕೆ ತಲೆಕಟ್ಟು ಕೊಟ್ಟ ಓದು. ವರ ಇದರ ಪಕ್ಕದಲ್ಲಿ ಹ ಬರಿ (ವರಹ)

ಪಂಜರ ಇಲ್ಲಿ ಯಾವ ಅಕ್ಷರಗಳಿವೆ? ವರ ಆಗಲಿಕ್ಕೆ ಯಾವ ಬದಲಾವಣೆ ಮಾಡುವೆ. ಮರ ಇದಕೆ. ಎಲ ಯೋನು ಸೇರಿಸಿದಾಗ ಏನು ಆಗುವುದು?

೨. ಮಲಯ, ಉಭಯ, ಅಭಯ, ಇವುಗಳನ್ನು ಬರಿ.

೩. ಮಂಗ, ಅಂಗಜ, ಜಂಗಮ, ಇವುಗಳನ್ನು ಓದಿರಿ.

೪. ಆಯ, ಬಲ ಇವುಗಳನ್ನು ಒತ್ತುಗಳಿಂದ ಜೋಡಿಸಿ ಬ

ಅಕ್ಷರಗಳು ಎಣಿ } ಅ ಆ ಈ ಉ ಊ ಎ ಒ ಓ ಔ ಂ ಗ ಘ ನ
ಜ ಪ ಫ ಬ ಭ ಮ ಯ ರ ಲ ವ ಹ ಳ .

ಪೆಸ್ಟಲಾಟ್ಸಿಯವರ ಚರಿತೆ

ಪೆಸ್ಟಲಾಟ್ಸಿಯವರು ಬಾಲ್ಯದಾರಭ್ಯ ಪರೋಪಕಾರಾರ್ಥವಾಗಿ ತಮ್ಮ ಸರ್ವ ಸ್ವವನ್ನೂ ಒಪ್ಪಿಸಿದ್ದಲ್ಲದೆ ಅಹೋರಾತ್ರಿಗಳಲ್ಲಿಯೂ ಪರಹಿತಾರ್ಥವಾಗಿಯೇ ಶ್ರಮವಹಿಸಿದರು. ೧೯೦೦ರಲ್ಲಿ ಕೆಲಸಮಾಡತಕ್ಕ ಶಕ್ತಿಯು ಮುಪ್ಪಿನಿಂದ ಬಹಳವಾಗಿ ಕಡಿಮೆಯಾಯಿತು. ಆದಾಗ್ಯೂ ತಮ್ಮ ಕೆಲಸದಲ್ಲಿ ನಿಷ್ಠೆಯುಳ್ಳವರಾಗಿದ್ದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಲೂ, ಬಡುಕರಿಗೆ ಮಾರ್ಗವನ್ನು ಉಪದೇಶಮಾಡುತ್ತಲೂ, ಸದಾ ಅವರ ಕ್ಷೇಮಚಿಂತೆಯಲ್ಲಿಯೇ ಇದ್ದರು. ಹೀಗೆಯೇ ಅನೇಕವರುಷಗಳಿದ್ದು ಪರಿಪಕ್ವವಾದ ವಾರ್ಧಕದಿಂದ ೧೯೨೭ನೆ ಇಸವಿಯಲ್ಲಿ ದೇಹವನ್ನು ಬಿಟ್ಟರು. ಇವರು ಮಾಡಿಸಿದ ವಿದ್ಯಾಭ್ಯಾಸದಿಂದ ಯೂರೋಪ್‌ಖಂಡದ ಅನೇಕಭಾಗಗಳಲ್ಲಿ ಒಳ್ಳೆ ಪಾಂಡಿತ್ಯವನ್ನೂ, ಸಂಪತ್ತನ್ನೂ, ಪದವಿಯನ್ನೂ, ಸಂಪಾದಿಸಿಕೊಂಡು ಲಕ್ಷಾಂತರ ಜನಗಳು ಇರುತ್ತಿದ್ದರು. ಇವರ ಮರಣಸಮಾಚಾರವನ್ನು ಕೇಳಿ ಈ ಜನರೆಲ್ಲರೂ ಅತ್ಯಾದರಾಗಿ ಮಾತಾಪಿತೃವಿಯೋಗವನ್ನು ಹೊಂದಿದಂತೆ ಬಹಳ ಸಂಕಟಪಟ್ಟರು. ಪ್ರಪಂಚದಲ್ಲಿ ಜನಿಸಿದವನು ಯಾವಾಗಲಾದರೂ ಕಳೇಬರವನ್ನು ಬಿಡಬೇಕು. ಪ್ರತಿನಿತ್ಯದಲ್ಲಿಯೂ ಪ್ರಪಂಚದಲ್ಲಿ ಲಕ್ಷಾಂತರ ಜನಗಳು ಹುಟ್ಟುತ್ತಾರೆ. ಲಕ್ಷಾಂತರ ಜನಗಳು ದೇಹತ್ಯಾಗವನ್ನು ಮಾಡುತ್ತಾರೆ ಯಾವ ಮನುಷ್ಯನು ಬದುಕಿರುವ ಕಾಲದಲ್ಲಿ ಧರ್ಮಪ್ರವರ್ತಕನಾಗಿ ಪ್ರಪಂಚಕ್ಕೆ ಉಪಕಾರಿಯಾಗಿರುತ್ತಾನೋ ಅವನು ಸತ್ತರೂ ಸತ್ಕೀರ್ತಿಯುಳ್ಳ. ಅವನು ದೇಹವನ್ನ ಬಿಟ್ಟಾಗ್ಯೂ ಅವನ ಯಶಸ್ಸು, ಕಾರ್ಯಗಳು, ವಾಕ್ಯಗಳು, ಧರ್ಮಪ್ರವರ್ತನೆಯು, ಅಚಂದ್ರಾರ್ಕವಾಗಿ ಪ್ರಪಂಚದ ಉದಾತ್ತಾರ್ಥವಾಗಿ ವೇಲ್ಪಬ್ಬಿಗಳಂತೆ ಅಚರಿಸುತ್ತಿರುವವು. ಈ ಪ್ರಪಂಚವು ಸೃಷ್ಟಿಯಾದಾರಭ್ಯ ಕೋಟ್ಯಂತರ ಜನಗಳು ಈ ಪ್ರಪಂಚದಲ್ಲಿ ಅವತರಿಸಿ, ಅವತಾರಪೂರ್ತಿಯನ್ನು ಮಾಡಿ ಕೊಂಡಿರುತ್ತಾರೆ. ಆದಾಗ್ಯೂ ಎಲ್ಲಾ ಯುಗಗಳಲ್ಲಿಯೂ ಅಲಂಕಾರಪಾತ್ರಯರಾಗಿದ್ದ ಹರಿಶ್ಚಂದ್ರಾದಿಮಹಾನುಭಾವರುಗಳ ಚರಿತ್ರೆಗಳು ಈಗಲೂ ಲೋಕಹಿತಾರ್ಥವಾಗಿ ಪಠಿಸಲ್ಪಡುತ್ತಲಿಲ್ಲವೆ? ಇದೇ ರೀತಿಯಲ್ಲಿ ಪಾಶ್ಚಾತ್ಯ ಮಹಾನುಭಾವರುಗಳಲ್ಲಿ ಪೆಸ್ಟಲಾಟ್ಸಿಯವರ ಚರಿತ್ರೆಯು ಬಹು ನಿರ್ದುಷ್ಟವಾದದ್ದು. ಇವರು ಪ್ರಭುಪದವಿಯನ್ನು ಅಲಂಕರಿಸಿದವರಲ್ಲ. ಪ್ರಭುಪದವಿಯಲ್ಲಿರತಕ್ಕವರು ದುಷ್ಟನಿಗ್ರಹ ಶಿಷ್ಟಪರಿ

ಶಾಲೆಗಳಲ್ಲಿ ಮುಖ್ಯವಾಗಿ ಬಾಲವಿದ್ಯಾಭ್ಯಾಸವನ್ನೇ ಜೆನ್ನಾಗಿ ಮಾಡಿಸಬೇಕೆಂದು ಗೊತ್ತಾಗುವುದು. ಹೀಗೆ ಬಾಲವಿದ್ಯಾಭ್ಯಾಸವನ್ನು ಮಾಡಿಸಿ, ದೇಶಭಾಷೆಯಲ್ಲಿ ಅವರಿಗೆ ಜ್ಞಾನವನ್ನುಂಟುಮಾಡುವುದು ಮೊದಲನೇ ಕೆಲಸ. ಇದು ನಿರೂಪಿದಮೇಲೆ ಈ ಕಥವರಲ್ಲಿ ಉಪಾಧ್ಯಾಯಿನೀಯರಾಗುವದರಲ್ಲಿ ಅಭಿನಿವೇಶವುಳ್ಳವರಿಗೆ ಪಾಠಕ್ರಮ ಮುಂತಾದ ವಿಷಯಗಳನ್ನು ತಿಳಿಸಿ 'ಟ್ರೈನ್' ಮಾಡಿ ಬಾಲಿಕಾಪಾಠಶಾಲೆಗಳಿಗೆ ಉಪಾಧ್ಯಾಯಿನೀಯರನ್ನಾಗಿ ಕಳುಹಿಸುವುದರಿಂದ ಸ್ತ್ರೀವಿದ್ಯಾಭಿವೃದ್ಧಿಗೆ ಬಹಳ ಸಹಾಯವಾಗುವುದು. ಮಕ್ಕಳಿಗೆ ಪಾಠಹೇಳುವ ವಿಷಯದಲ್ಲಿ ಪುರುಷರಿಗಿಂತಲೂ ಸ್ತ್ರೀಯರಿಗೆ ಯೋಗ್ಯತೆಯು ಸ್ವಾಭಾವಿಕವಾಗಿಯೇ ಹೆಚ್ಚಾಗಿರುವುದು. ಅವರಲ್ಲಿ ತಾಳ್ಮೆ ಮುಂತಾದ, ಮಕ್ಕಳನ್ನು ನೋಡಿಕೊಳ್ಳುವವರಿಗೆ ಅವಶ್ಯಕವಾದ ಗುಣಗಳು ಅನೇಕವಾಗಿವೆ.

ಕಿಂಡರ್‌ಗಾರ್ಟ್ನ್ ಪಾಠವು ಬಾಲಕರ ತರಗತಿಯಲ್ಲಿ ನಡೆಯಬೇಕೆಂದು ಸರಕಾರದವರು ಈಚಿಗೆ ಕೆಲವು ವರ್ಷಗಳ ಹಿಂದೆ ನಿಶ್ಚಯಿಸಿದರು. ಆದರೆ ಉಪಾಧ್ಯಾಯರಲ್ಲಿ ಅನೇಕರಿಗೆ ಈ ವಿಷಯದಲ್ಲಿ ಪರಿಚಯ ಸಾಲದಿರುವುದರಿಂದಲೂ ಸರಿಯಾದ ಉಪಕರಣಗಳಿಲ್ಲದಿರುವುದರಿಂದಲೂ ಅನೇಕ ಪಾಠಶಾಲೆಗಳಲ್ಲಿ ಇದು ಸರಿಯಾಗಿ ನಡೆಯುತ್ತಿದ್ದಲಾರದು. ಪ್ರತಿವರ್ಷವೂ ನಾರ್ಮಲ್‌ಸ್ಕೂಲುಗಳಲ್ಲಿ ಶಿಕ್ಷಿತರಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಕಿಂಡರ್‌ಗಾರ್ಟ್ನ್ ಪರಿಚಯವುಳ್ಳ ಉಪಾಧ್ಯಾಯರು ಹೆಚ್ಚಾಗುತ್ತಿದ್ದಾರೆ. ಈಚೀಚೆಗೆ ಉಪಕರಣಗಳನ್ನು ಸಹ ಅನೇಕವಾಗಿ ಪಾಠಶಾಲೆಗಳಿಗೆ ಸರ್ಕಾರದವರು ಒದಗಿಸಿಕೊಡುತ್ತಿದ್ದಾರೆ. ಆದರೂ ಕಿಂಡರ್‌ಗಾರ್ಟ್ನ್ ಪಾಠವನ್ನು ಸರಿಯಾಗಿ ನಡೆಯಿಸುವುದಕ್ಕೆ ಬೇಕಾದಷ್ಟು ಉಪಕರಣಗಳಿರಲಾರವು. ಹೀಗೆ ಬೋಧಿಸುವುದಕ್ಕೆ ತರಗತಿಯುಲ್ಲಿರುವ ಬಾಲಕರಲ್ಲಿ ಪ್ರತಿಯೊಬ್ಬರಿಗೂ ಆಯಾದಿನದ ಪಾಠಕ್ಕೆ ಬೇಕಾದ ಉಪಕರಣಗಳನ್ನು ಕೊಡಬೇಕು. ಇದಕ್ಕೆ ಅನುಕೂಲವಿಲ್ಲವೆಂದು ಕಿಂಡರ್‌ಗಾರ್ಟ್ನ್ ಬೋಧಿಸುವದೆ ಸಾಧ್ಯವಲ್ಲವೆಂದು ಆ ಪಾಠವನ್ನೆ ಬಿಡಬಾರದು ಇರತಕ್ಕ ಉಪಕರಣಗಳಲ್ಲೆ ಪಾಠಗಳನ್ನು ನಡೆಯಿಸಬಹುದು. ತರಗತಿಯುಲ್ಲಿರುವ ಬಾಲಕರನ್ನು ಮೂರು ನಾಲ್ಕು ಪಂಗಡವನ್ನಾಗಿ ಮಾಡಿ ಒಂದೊಂದು ಪಂಗಡದವರಿಂದ ಒಂದೊಂದು ಕರಣವನ್ನು ಮಾಡಿಸುತ್ತ ಬರಬೇಕು. ಹೀಗೆ ಮಾಡುವುದರಿಂದ ಉಪಕರಣಗಳು ಅಷ್ಟು ಹೆಚ್ಚಾಗಿ ಬೇಕಾಗುವುದಿಲ್ಲ.

ಸಹವಾಸದಲ್ಲಿಯೂ ಇಟ್ಟು ಅದನ್ನು ಪೋಷಿಸಿ, ಸರಿಯಾದಕಾಲದಲ್ಲಿ ವಿದ್ಯಾಭ್ಯಾಸ
ವನ್ನು ಮಾಡಿಸಿದರೆ ಆ ಮಗುವು ತನ್ನ ಸಹವಾಸದಲ್ಲಿರತಕ್ಕ ಮಹನೀಯರ ಗುಣಾತಿಶ
ಯಗಳನ್ನೂ ಬುದ್ಧಿಯನ್ನೂ ವಿವೇಕವನ್ನೂ ಕಲಿತುಕೊಳ್ಳುವುದು. ಧರ್ಮನಿಧಿಗಳಿಂದ
ಜನರ ವಂಶದಲ್ಲಿ ಹುಟ್ಟಿದ ಮಗುವನ್ನು ಕಿರಾತಕುಲದಲ್ಲಿಟ್ಟು ಬೆಳಸಿದರೆ ಕಿರಾತರಿಗೆ ಸಹ
ಜವಾದ ಗುಣಾತಿಶಯಗಳೇ ಆ ಮಗುವಿನಲ್ಲಿಯೂ ಉಂಟಾಗುವವು. ಪ್ರಾಯಿಕವಾಗಿ
ಮಕ್ಕಳ ಗುಣಾತಿಶಯಗಳೆಲ್ಲಾ ಸಹವಾಸಾನುಸಾರವಾಗಿಯೂ ಪಾಠಕರ ಇಷ್ಟಾನು
ಸಾರವಾಗಿಯೂ ಇರುವದು. ಅದುದರಿಂದ ದೇಶವನ್ನು ಉನ್ನತ ಸ್ಥಿತಿಗೆ ತರಬೇಕೆಂಬ ಸಂ
ಕಲ್ಪವನ್ನು ಪಾಠಕರು ಮಾಡಿದ ಪಕ್ಷದಲ್ಲಿ ಈ ಉದ್ದೇಶವು ನಿರವೇರುವುದರಲ್ಲಿ ಯಾವ ಪ್ರತಿ
ಬಂಧಕವೂ ಉಂಟಾಗಲಾರದು. ಸಾಮಾನ್ಯವಾಗಿ ಸರ್ವರೂ ಕಾರ್ಯಾಂತರಗಳಲ್ಲಿ
ಮಗ್ನರಾಗಿ ಮಕ್ಕಳ ವಿದ್ಯಾಭ್ಯಾಸವನ್ನು ಪಾಠಕರಿಗೆ ಅಧೀನವನ್ನಾಗಿ ಮಾಡುತ್ತಾರೆ
ಪಾಠಕರು ದೇಶಾಭಿಮಾನಿಗಳಾದರೆ ಎಷ್ಟೋ ಜನಗಳನ್ನು ವಿದ್ಯಾವಂತರನ್ನಾಗಿಯೂ
ಧರ್ಮಜ್ಞರನ್ನಾಗಿಯೂ, ಸಕಲ ಸದ್ಗುಣಸಂಪನ್ನರನ್ನಾಗಿಯೂ, ಸಾಹಭೀತರನ್ನಾ
ಗಿಯೂ, ದೇಶಾಭಿಮಾನಿಗಳನ್ನಾಗಿಯೂ, ಆತ್ಮಾವಲಂಬಿಗಳನ್ನಾಗಿಯೂ ಮಾಡಬ
ಹುದು. ಪ್ರತಿಫಲವೇಲೆ ದೃಷ್ಟಿಯಿಡದೆ ವಿದ್ಯಾರ್ಥಿಗಳು ವಿದ್ಯಾವಂತರಾಗಿಯೂ,
ಗುಣಾಢ್ಯರಾಗಿಯೂ ಆಗುವುದೇ ನಮ್ಮ ಶ್ರಮಕ್ಕೆ ಪ್ರತಿಫಲವೆಂದು ತಿಳಿದುಕೊಂಡು
ಪಾಠಕನಾಗಿರುವವನೇ ಪಾಠಕನು. ಅವನು ದರಿದ್ರನಾಗಿದ್ದಾಗ್ಯೂ ಅವನ ಸಂಪತ್ತೇ
ನಿಸರ್ಗವಾದ ಸಂಪತ್ತು. ಅವನ ಜನ್ಮವೇ ಸಾರ್ಥಕವಾದದ್ದು. ಪ್ರಪಂಚದ ಏಳ
ಗೆಗೆ ನಿಜವಾದ ಕಾರಣಭೂತನಾದವನೇ ಅವನು. ಇಂಥಾ ಪಾಠಕರು ಯಾವದೇಶದಲ್ಲಿ
ವಿಶೇಷವಾಗಿರುವರೋ ಆ ದೇಶವು ಉನ್ನತಿಗೆ ಎಂದಿಗೂ ಯಾವನ್ಯೂನತೆಯೂ ಉಂ
ಟಾಗಲಾರದು.

ಈ ಅಭಿಪ್ರಾಯಗಳಿಂದ ಪೆಸ್ಟಲಾಟ್ಸಿಯವರು ಕೆಲಸಮಾಡಿದರು. ಪಾಠ
ಕರ ಪದವಿಗಿಂತಲೂ ಚಕ್ರವರ್ತಿಗಳ ಪದವಿಯೂಕೂಡ ಕಡಿಮೆಯಾದದ್ದೆಂದು ಇವರು
ಭಾವಿಸಿದ್ದರು. ಒಬ್ಬ ವಿದ್ಯಾರ್ಥಿಯನ್ನು ವಿದ್ಯಾವಂತನನ್ನಾಗಿಯೂ, ಧರ್ಮಜ್ಞನ
ನ್ನಾಗಿಯೂ, ಗುಣಾಢ್ಯನನ್ನಾಗಿಯೂ ಮಾಡುವುದು. ಒಂದು ದೇಶದ ದೌಲತ್ತು ಮಾ
ಡುವುದಕ್ಕಿಂತಲೂ ಅತ್ಯಂತ ಹೆಚ್ಚಾದದ್ದೆಂದು ಇವರು ಭಾವಿಸಿದ್ದರು. ಇಂಥಾ ಭಾ
ವನೆಯು ಇದ್ದದ್ದರಿಂದಲೇ ಪಾಶ್ಚಾತ್ಯಪಾಠಕರಲ್ಲಿ ಅಗ್ರಗಣ್ಯರೆಂಬ ಬಿರುದು ಇವರಿಗೆ
ಉಂಟಾಯಿತು. ಇಂಥಾ ಪಾಠಕರಿದ್ದದ್ದರಿಂದಲೇ ೩೦ ಕೋಟಿ ಪ್ರಜೆಗಳುಳ್ಳ ಯೂ

ಪಾಲನೆಯನ್ನು ಮಾಡಬೇಕು. ಈ ಪದವಿಯಲ್ಲಿ ಧರ್ಮಗಳಿಗೆ ಲೋಪಬಂದ
ಪಾಪಸಂಘಟನೆಯೂಗುವದುಂಟು. ಅಂಥಾ ಪದವಿಯಲ್ಲಿ ಇವರಿಶರಿಲ್ಲವಾದುದರಿಂದ
ಅಂಥಾ ಪಾಪಸಂಘಟನೆಗೂ ಇವರಿಗೆ ಅವಕಾಶವಿರಲಿಲ್ಲ. ಆದರೆ ಇವರು ಪ್ರಭುಗಳ್ಳ
ವಿದ್ವಾಗ್ಯೂ ಪ್ರಭುಶಕ್ತಿಯು ಇವರಲ್ಲಿ ಸಂಪೂರ್ಣವಾಗಿತ್ತು. ನಿಜವಾದ ಪ್ರಭುಶಕ್ತಿ
ಯು ಧರ್ಮಾಧರ್ಮ ವಿಚಕ್ಷಣೆಯುಳ್ಳವೆ? ಇಂಥಾ ಶಕ್ತಿಯನ್ನು ಪ್ರಪಂಚದಲ್ಲುಂಟು
ಮಾಡುವುದಕ್ಕೆ ತಕ್ಕ ಯೋಗ್ಯತೆಯುಳ್ಳವರು ಪಾತಕರಲ್ಲವೇ? ಪ್ರಭುಗಳು ಪರೀಕ್ಷಿ
ನೋಡಿದರೆ ಆಜ್ಞೆಯನ್ನು ಜಾರಿಗೆ ತರತಕ್ಕವರು. ಅವರು ಜಾರಿಗೆ ತರಬೇಕಾದ ಆಜ್ಞೆ
ಗಳನ್ನು ವಿಧಾಯಕವಾಡತಕ್ಕವರು ಸಕಲ ಧರ್ಮವಿಶಾರದರಾದ ವಿದ್ವಾಂಸರು. ಅಂಥಾ
ವಿದ್ವಾಂಸರು ಪ್ರಪಂಚದಲ್ಲಿ ವಿಶೇಷವಾಗಿರುವಂತೆ ಮಾಡಲ್ಪಟ್ಟು ಏರ್ಪಾಡುಗಳಿ
ಪಾಶ್ಚಾತ್ಯರಲ್ಲಿ ಕಾರಣಭೂತರಾದವರಲ್ಲಿ ಪೆಸ್ಟಲಾಟ್ಸಿಯವರು ಬಹಳ ದೊಡ್ಡವರು
ಇವರ ಪಾಂಡಿತ್ಯವು ಅದ್ಭುತವಾದದ್ದು. ಸಮಸ್ತರೂ ಸಕಲವಿದ್ಯಾವಿಶಾರದರಾಗಿಯೂ
ಗುಣಾಢ್ಯರಾಗಿಯೂ ಇರುವಹಾಗೆ ಮಾಡಬೇಕೆಂದು ಸಂಕಲ್ಪವಾಡಿ ಈ ಸಂಕಲ್ಪ
ವನ್ನು ನಿರವೇರಿಸುವುದಕ್ಕೋಸ್ಕರ ದೇಹವನ್ನು ಬಿಡುವ ಪರ್ಯಂತವು ಇವರು ಮಾಡಿ
ಕೃಷಿಯು ಅತ್ಯದ್ಭುತವಾದದ್ದು. ಮನುಷ್ಯನ ವಿಷಯವಾಗಿ ಪೆಸ್ಟಲಾಟ್ಸಿಯವ
ಸಿದ್ಧಾಂತವು ಬಹಳ ವಿಸ್ಮಯವನ್ನುಂಟುಮಾಡುತ್ತದೆ. ಈ ಸಿದ್ಧಾಂತಗಳ ಪೈ
ಒಂದೆರಡನ್ನು ಇಲ್ಲಿ ಉದಹರಿಸುವುದು ಆವಶ್ಯಕವೆಂದು ತೋರುತ್ತದೆ. ಮನುಷ್ಯ
ವಿಷಯದಲ್ಲಿ ಅವರು ಹೇಳಿರುವುದೇನೆಂದರೆ:—ಜನರ ಮೆದಲುಗಳು ಒಳ್ಳೇ ಮಣ್ಣ
ಗೊಬ್ಬರ ಮೊದಲಾದ ಪದಾರ್ಥಗಳುಳ್ಳ ಪಾತಿಗಳಂತೆ ಆಚರಿಸುತ್ತವೆ. ಈ ಪಾತಿ
ಳಲ್ಲಿ ಯಾವ ಬೀಜಗಳನ್ನು ಹಾಕಿದರೂ ಅವು ಮೊಳೆದು ವೃಕ್ಷಗಳಾಗಿ ಅನುರೂ
ವಾದ ಫಲ ಪುಷ್ಪಗಳನ್ನು ಬಿಡುವವು. ಸಕಲಜನಗಳ ಮೆದಲುಗಳು ಈ ಪಾತಿಗಳಂ
ಇರುವದ್ದರಿಂದಲೂ ಅಂಥಾ ಜನಗಳ ಪೋಷಕರು ಸಹವಾಸಿಗಳು ಪಾಠಕರು ಬೀಜ
ವಾಪನವನ್ನು ಮಾಡತಕ್ಕವರಾಗಿ ಪರಿಣಮಿಸುವುದರಿಂದಲೂ ಬಾಲ್ಯದಾರಭ್ಯ ಇವ
ಮೆದಲುಗಳೆಂಬ ಪಲವಾಲಗಳಲ್ಲಿ ಯಾವವಿಧನಾದ ಬೀಜಾವಾಪವಾಗುತ್ತದೋ ಅ
ಕ್ಕಮರೂಪವಾದ ಫಲೋತ್ಪತ್ತಿಯಾಗುವದೆಂಬದಾಗಿ ಹೇಳಿದಾರೆ. ಇದು ಅನುಭ
ಸಿದ್ಧವಾದವೂತು. ಚಂಡಾಲ ವಂಶೋತ್ಪನ್ನನಾದ ಮಗುವನ್ನು ತಂದೆ ತಾಯಿಗ
ವಶವನ್ನು ತಪ್ಪಿಸಿ ಸಕಲ ಸದ್ಗುಣನಿಧಿಗಳಾದ ಸ್ತ್ರೀಪುರುಷರ ಪೋಷಣೆಯಲ್ಲಿಯ

ಮಹರ್ಷಿಗಳ ಪಾಠಪ್ರವಚನಗಳ ಏರ್ಪಾಡು ನಾವೂಹಿಸಲೇಕಾಗಿತ್ತು. ಪಾಶಾತ್ಯಮಹಾತ್ಮರಾದ ಪೆಸ್ಟಲಾಟ್ಸಿ ಮೊದಲಾದ ಮಹಾತ್ಮರ ಏರ್ಪಾಡುಗಳು ಆಡಳಿತಕ್ಕೆ ಬರಲಿಲ್ಲ. ಸರ್ವವಿಷಯದಲ್ಲೂ ಸರ್ವರಲ್ಲಿರತಕ್ಕ ನ್ಯೂನಾತಿರಿಕ್ತಗಳನ್ನು ನಮ್ಮಲ್ಲಿ ನೆಲಗೊಂಡಿತೇಹೊರ್ತು ಎಲ್ಲಾ ದೇಶಗಳಲ್ಲಿರತಕ್ಕ ಗುಣಾತಿಶಯಗಳು ಮಾತ್ರ ನಮಗೆ ಪ್ರಾಪ್ತವಾಗಲಿಲ್ಲ. ಇಂಥಾ ಸಂದರ್ಭದಲ್ಲಿ ನಮ್ಮ ಹೀನಸ್ಥಿತಿಯನ್ನು ಕುರಿತು ನಾವು ಯಾತಕ್ಕೆ ವ್ಯಸನಪಡಬೇಕು. ನಮ್ಮ ಹೀನಸ್ಥಿತಿಗೆ ನಾವೇ ಕಾರಣಭೂತರು. ನಮ್ಮ ಪಾತಕರು, ದೇಶಾಭಿವಾನಿಗಳಾದ ಹೊರ್ತು ನಮ್ಮ ದೇಶಕ್ಕೆ ಕ್ಷೇಮವಂಟಾಗುವದಿಲ್ಲ.

ತಿದ್ದುವಿಕೆ.

ದಂಡನೆ.

ದಂಡನೆಯುಂದರೆ ಯಾವವಿಧದಿಂದಲಾಗಲೀ ಬಾಲಕರ ಮನಸ್ಸಿಗೆ ಅಥವಾ ದೇಹಕ್ಕೆ ವ್ಯಥೆಯನ್ನುಂಟುಮಾಡುವುದು. ಇದರಿಂದ ಬಾಲಕರು ಮುಂದಕ್ಕೆ ಅಂಥಾ ನೋವಿಗೆ ಅವಕಾಶಕೊಡದಂತೆ ನಡೆದುಕೊಳ್ಳುವರು.

ದಂಡನೆಯಲ್ಲಿ ಎರಡು ಉದ್ದೇಶ್ಯವಿರಬಹುದು. ತಪ್ಪಿತಸ್ಥನನ್ನು ದಂಡಿಸುವುದರಿಂದ ಅವನು ಮುಂದಕ್ಕೆ ಆ ತಪ್ಪನ್ನು ಬಿಡುವಂತೆ ಮಾಡುವುದು. ಇದೇ ಸ್ಕೂಲಿನಲ್ಲಿ ಮಾಡತಕ್ಕ ದಂಡನೆಯ ಮುಖ್ಯೋದ್ದೇಶ. ತಪ್ಪಿತಸ್ಥನನ್ನು ದಂಡಿಸುವುದರಿಂದ ಅದನ್ನು ನೋಡಿದ ಇತರರು ಆ ತಪ್ಪನ್ನು ಮಾಡದಿರುವುದು ಮತ್ತೊಂದು ಉದ್ದೇಶ. ಇದು ರಾಜ್ಯದಲ್ಲಿ ದೋರೆಯು ಮಾಡತಕ್ಕ ದಂಡನೆಯು ಮುಖ್ಯವಾದ ಉದ್ದೇಶ. ರಾಜ್ಯದಲ್ಲೂ ಸ್ಕೂಲಿನಲ್ಲೂ ಎರಡು ಉದ್ದೇಶಗಳಿಗೂ ಅವಕಾಶವುಂಟು. ಆದರೆ ಒಂದೊಂದುಕಡೆ ಒಂದೊಂದಕ್ಕೆ ಪ್ರಾಧಾನ್ಯ.

ದಂಡನೆಯಿಂದ ಭಯುಹುಟ್ಟಿ ಭಯದಿಂದ ತಪ್ಪು ಕಡಿಮೆಯಾಗುವುದು. ಆದರೆ ದಂಡನೆಯನ್ನೇ ಮುಖ್ಯವಾದ ಸಹಾಯವನ್ನಾಗಿ ಮಾಡಿಕೊಂಡು ಸಂಪಾದಿಸಿದ ತಿದ್ದು

ಕೋಪುಖಂಡವು ಈ ಪ್ರಪಂಚದ ಎಲ್ಲಾ ಖಂಡಗಳಿಗಿಂತಲೂ ಶ್ರೇಷ್ಠವಾದ ಪದವಿಯನ್ನು ಹೊಂದಿ ಎಲ್ಲಾ ಖಂಡಗಳಮೇಲೂ ಅಧಿಕಾರವುಳ್ಳದ್ದಾಗಿರುತ್ತದೆ. ಪೆಸ್ಟ್ ಲಾಟ್ಸ್ಸಿಯವರು ನಮ್ಮ ಪೂರ್ವದ ಮಹರ್ಷಿಗಳಂತೆ ತಮ್ಮ ವೆಚ್ಚದಿಂದ ಪಾಠಶಾಲೆಗಳನ್ನಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಹಾಕಿ ಮಾತಾಪಿತೃಗಳಿಗಿಂತಲೂ ಹೆಚ್ಚಾಗಿ ಅವರನ್ನು ಸಾಕಿ ಧರ್ಮಜ್ಞರನ್ನಾಗಿಯೂ, ಶಾಸ್ತ್ರಜ್ಞರನ್ನಾಗಿಯೂ ಮಾಡಿ ಅವರು ಪಂಡಿತರಾಗಿ ಯಶೋವಂತರಾಗಿ ಬದುಕುವುದೇ ಅವರ ಗುರುದಕ್ಷಿಣೆಯೆಂದು ತಿಳಿದುಕೊಂಡು ಹಾಗೆ ತಿಳಿದುಕೊಂಡು ತಮ್ಮಂತೆ ನಿಸ್ಪೃಹರಾಗಿ ಕೆಲಸವಾಡತಕ್ಕೆ ಅನೇಕರನ್ನು ಕಲ್ಪಿಸಿ ತಮ್ಮ ದೇಶವನ್ನೇ ಮಹೋನ್ನತಿಗೆ ತಂದರು. ನಮ್ಮ ಅಭಿನವ ಪಾಠಕರನ್ನು ನಮ್ಮ ಪೂರ್ವದ ಮಹರ್ಷಿಗಳೊಡನೆಯಾಗಲಿ ಅಥವಾ ಪಾಶ್ಚಾತ್ಯರ ಏಳಿಗೆಗೆ ಕಾರಣಭೂತರಾದ ಪೆಸ್ಟಲಾಟ್ಸ್ಸಿಯೊದಲಾದವರೊಡನೆಯೇ ಆಗಲಿ ಹೋಲಿಸಿನೋಡಿದರೆ ನಮಗೆ ಬಹಳ ದುಃಖವುಂಟಾಗುತ್ತದೆ. ಈಗಿನ ಉಪಾಧ್ಯಾಯರಲ್ಲಿ ಅನೇಕರು ಪಾಠಕರಾಗಿರುವುದಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿರುವುದಿಲ್ಲ. ಇದ್ದಯೋಗ್ಯತೆಯನ್ನು ಪರಿಯಾಗಿ ಉಪಯೋಗಿಸುವುದಿಲ್ಲ. ಇತರ ಕೆಲಸಗಳಲ್ಲಿ ಜೀವಾರನ್ನು ಹೊಂದಿ ಪಾಠಶಾಲೆಗಳನ್ನು ವಿಶ್ರಾಂತಿಗೆ ಆಲಯವೆಂದು ಭಾವಿಸುತ್ತಾರೆ. ಅನೇಕರು ಪಾಠಶಾಲೆಗಳಲ್ಲಿ ತೂಕಳಿಸುವದುಂಟು. ಪೂರ್ವಭಾವಿಯಾಗಿ ಹೇಳತಕ್ಕ ಪಾಠಗಳನ್ನು ನೋಡಿಕೊಂಡುಹೋಗುವವರೇ ಅಪೂರ್ವ. ಸರ್ವಜ್ಞತ್ವ ವಾದರೋ ಅನೇಕರಲ್ಲಿ ರೂಢಮೂಲವಾಗಿರುತ್ತದೆ. ಈ ಸಂಬಳಕ್ಕೆ ಇಷ್ಟು ಪಾಠ ಸಾಲದೋ ಎಂದು ತಿಂದುಕೊಳ್ಳತಕ್ಕವರನೇಕರಿರುತ್ತಾರೆ. ಕಾಲಕಾಲಕ್ಕೆ ಪಾಠಶಾಲೆಗಳಿಗೆ ಹೋಗತಕ್ಕ ಪಾಠಕರೇ ಅಪೂರ್ವ. ಕಾಲ ವಿಚಾರಿಹೋಗಿ ಸರಿಯಾನಕಾಲದಲ್ಲಿ ಬಂದಂತೆ ಅರ್ಟ್ರೆಡೆಸ್ ರಿಜಿಸ್ಟರಿನಲ್ಲಿ ಸರಿಯಾದ ಕಾಲಕ್ಕೆ ಬಂದಂತೆ ರುಜು ಮಾಡತಕ್ಕ ಮಹಾನುಭಾವರುಗಳು ಅನೇಕರಿರುತ್ತಾರೆ. ಜೀವನಾಂತರಗಳು ಸಿಕ್ಕಿದರೆ ಕೊಡಲಿ ಪಾಠಶಾಲೆಗಳನ್ನು ಬಿಡತಕ್ಕವರು ಎಷ್ಟೋಮಂದಿಗಳಿರುವರು. ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿಯೂ ಗುಣಾಢ್ಯರನ್ನಾಗಿಯೂ ಮಾಡುವ ಉಪಾಯಗಳನ್ನು ಯೋಚಿಸದೆ ಸುಳ್ಳರ್ಜಿ ಮೊದಲಾದವುಗಳನ್ನು ಬರೆದುಕೊಟ್ಟು ನಾವೇ ಅಭಿನವ ನಾರದರೆಂದು ತಿಳಿದುಕೊಂಡು ಸಂತೋಷಪಡುತ್ತಾ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಉಪೇಕ್ಷೆ ಮಾಡತಕ್ಕವರು ಅಸಂಖ್ಯಾಕರಾಗಿರುತ್ತಾರೆ. ನಮ್ಮ ಪೂರ್ವದ

ಕ್ಷೌಕ್ರಮಗಳು.

(೧) ನಂಬರ್‌ಕಳೆಯುವದು—ಅವಧಾನವಿಲ್ಲದಿರುವದು, ಆಲೋಚಿಸದೆ ಉತ್ತರಹೇಳುವದು. ಜೆನ್ನಾಗಿ ಪಾಠಗಟ್ಟುವಾಡದೇ ಬರುವದು. ಮುಂತಾದವುಗಳಿಗೆ ನಂಬರನ್ನು ಕಳೆಯುಬಹುದು. ಆದರೆ ಬಾಲಕರಿಗೆ ನಂಬರ್‌ಹೋಗುವದರಲ್ಲಿ ಪ್ರೀತಿಪಡಿಸುವದೆಂಬುವದನ್ನು ಮಾತ್ರ ನಿಶ್ಚಯಿಸಿಕೊಳ್ಳಬೇಕು.

(೨) ಪಾಠಕ್ಕೆ ಸೇರಿಸದಿರುವದು—ಬಾಲಕರಿಗೆ ಪಾಠದಲ್ಲಿ ಬೆರೆಸಿದ್ದರೆ ಹೀಗೆ ಮಾಡುವದು ಸರಿ. ಇಲ್ಲದಿದ್ದರೆ ಪ್ರಯೋಜನವಿಲ್ಲ. ತರಗತಿಯಿಂದ ಹೊರಗೆ ಕಳುಹಿಸಿದಾಗ ಅವನು ಮಾಡುವದಕ್ಕೆ ಬೇರೇ ಕೆಲಸವನ್ನು ನಿಯಮಿಸಬಹುದು. ಅಥವಾ ಸುಮ್ಮನಿರುವಂತೆ ಹೇಳಬಹುದು. ಸ್ಕೂಲನ್ನು ಬಿಟ್ಟುಹೋಗುವದಕ್ಕೆ ಬಿಡಬಾರದು.

(೩) ನಿಂದೆ—ಇದು ಅನೇಕವಿಧವಾಗಿರಬಹುದು. ಉಪಾಧ್ಯಾಯರ ಯೋಗ್ಯತೆಯುಮೇಲೆ ಅದರಬೆಲೆಯು ಹೆಚ್ಚುಕಡಿಮೆಯಾಗುವದು. ಪದೇಪದೇ ನಿಂದಿಸುತ್ತಿದ್ದರೆ ನಿಂದೆಯುಬೆಲೆಯೇ ಕಡಿಮೆಯಾಗುವದು. ಬಾಲಕರ ಸ್ವಭಾವಾನುಗುಣವಾಗಿ ನಿಂದೆಯನ್ನು ಹೆಚ್ಚುಕಡಿಮೆಮಾಡಬೇಕು.

(೪) ಅವಮಾನಾಸ್ಪದವಾಗುವಂತೆ ನಿಲ್ಲಿಸುವದು ಕೂಡಿಸುವದು, ಬಾಲಕರು ಮಾನಿಷ್ಠರಾದರೆ ಇದರಿಂದ ಪ್ರಯೋಜನ.

[೫] ಇಂಪೋಜಿಷನ್—ಇದೆನ್ನು ಕೆಲವರು ಒಪ್ಪುವದೇ ಇಲ್ಲ. ಯಾಕೆಂದರೆ, ಪಾಠವೇಲೆ ವಿನೋದವುಂಟಾಗುವದೆಂದ, ಅದರ ಅನುಭವದಲ್ಲಿ ಇಂಪೋಜಿಷನ್ನಿನಿಂದ ಪ್ರಯೋಜನ ಉಂಟೆಂದು ತೋರುತ್ತೆ. ಆದರೆ ಸ್ವಲ್ಪ ವಿವೇಚನೆಮಾಡಿ ಇಂಪೋಜಿಷನ್ ಕೊಡಬೇಕು. ಇದರಲ್ಲಿ ೨ ವಿಧ, ಯಾವ ಪಾಠವನ್ನು ಗಟ್ಟಿಮಾಡಿಕೊಂಡು ಬರಲಿಲ್ಲವೋ ಅದೇಪಾಠವನ್ನು ಇಂಪೋಜಿಷನ್ನಾಗಿ ಕೊಡತಕ್ಕದ್ದು ಒಂದು, ಇನ್ನೊಂದು ಬೇರೇ ವಿಷಯವನ್ನು ಇಂಪೋಜಿಷನ್ನಿಗೆ ಕೊಡತಕ್ಕದ್ದು. ಅಂತೂ ಇಂಪೋಜಿಷನ್ ಕೊಡುವದರಲ್ಲಿ ಇವನ್ನುಜ್ಞಾಪಕವಿಟ್ಟುರಬೇಕು.

[೧] ಪಾಠದ ಕಾಲನಾದಮೇಲೆ ಮಾಡುವಂಥಾದ್ದಾಗಿರಬೇಕು.

[೨] ಹುಡುಗರ ಶಕ್ತಿಗೆ ಮೀರಿದ್ದಾಗಿರಬಾರದು.

[೩] ಬುದ್ಧಿಶಕ್ತಿಯನ್ನು ವಿಶೇಷವಾಗಿ ಅಪೇಕ್ಷಿಸಬಾರದ್ದಾಗಿರಬೇಕು.

ವಿಕೆಯು ಶ್ಲಾಘ್ಯವಾದದ್ದಲ್ಲ. ಕೊಡಿದವುಟ್ಟಿಗೂ ದಂಡನೆಯನ್ನು ಕಡಿಮೆಮಾಡಿರುವುದೇ ಒಳ್ಳೇ ಉಪಾಧ್ಯಾಯರ ಲಕ್ಷಣ. ಹೀಗೆ ದಂಡನೆಯನ್ನು ಕಡಿಮೆ ಮಾಡುವುದಕ್ಕೆ ಬೇಕಾದ ಸಂಗತಿಗಳು.

೧ ಒಳ್ಳೇ ಸಂವಿಧಾನ, ೨ ಒಳ್ಳೇ ಬೋಧನೆ. ೩ ಉಪಾಧ್ಯಾಯರುಗಳಲ್ಲಿ ಜಾಗರೂಕತೆ, ಪಶಿತ್ವ, ಅಲೋಚನಾಪರತೆ, ನ್ಯಾಯ. ೪ ಹುಡುಗರಿಗೂ ಉಪಾಧ್ಯಾಯರಿಗೂ ಪರಸ್ಪರ ಪ್ರೀತಿ ಮತ್ತು ಅನುತಾಪ.

ದಂಡನೆ ಮಾಡುವುದರಲ್ಲಿ ಮುಖ್ಯವಾಗಿ ದಂಡನೆಯು ನ್ಯಾಯವಾದ್ದು ಮತ್ತು ತನಗೆ ಸಲ್ಲತಕ್ಕದ್ದು ಎಂಬ ಅಭಿಪ್ರಾಯವು ಬಾಲಕನಿಗೆ ಬರಬೇಕು. ಮತ್ತು ಬಾಲಕನು ಅದನ್ನು ಅವಮಾನವಾಗಿ ಎಣಿಸುವಂತಿರಬೇಕು. ಮಾಡಿದ ದಂಡನೆಯು ಬಾಲಕನಿಗೆ ಜ್ಞಾಪಕವಿದ್ದು ಮುಂದೆ ಆ ಕೆಲಸವನ್ನು ಮಾಡದಂತಿರಬೇಕು.

[ದಂಡನೆಯಲ್ಲಿ ಎರಡುವಿಧಗಳಿರುವವು]

೧ ನಾಚಿಕೆಯನ್ನೂ ಯಾತನೆಯನ್ನೂ ಸಹಾ ಉಂಟುಮಾಡತಕ್ಕವುಗಳು

[ಪಾಠಶಾಲೆಯಲ್ಲಿ ಸಾಮಾನ್ಯವಾಗಿರುವ ದಂಡನೆಗಳು]

೧ ನಂಬರ್ ಕಳೆಯುವುದು, ೨ ಪಾಠಕ್ಕೆ ಸೇರಿಸದೇ ಇರುವುದು, ೩ ನಿಂದೆ, ೪ ಅವಮಾನಾಸ್ಪದವಾಗುವಂತೆ ನಿಲ್ಲಿಸುವುದು, ಅಥವಾ ಕೂಡಿಸುವುದು, ೫ ಇಂಪೋಜಿಷನ್, ೬ ದೇಹದಂಡನೆ, ೭ ಡಿಸ್ಮಿಸ್ ಮಾಡುವುದು,

ಈಸಮಯದಲ್ಲಿ ಪಾಠಶಾಲೆಗಳಲ್ಲಿ ನಡಿಯುತ್ತಿರುವ ಅನುಚಿತವಾದ ಕೆಲವು ದಂಡನೆಯು ಕ್ರಮಗಳನ್ನು ತಿಳಿಸಬೇಕು. ಒಳ್ಳೇ ಉಪಾಧ್ಯಾಯರು ಅವುಗಳನ್ನು ಸುತರಾಂ ಬಿಟ್ಟುಬಿಡಬೇಕು.

[೧] ಬಾಲಕರ ದೇಹವನ್ನು ಅಗ್ರಹದಿಂದ ನೋಯಿಸುವುದು. ೨. ದಾಹರಣೆ ಕಿವಿ ಹಿಡಿದು ಎಳೆಯುವುದು, ಜಿಗಟುವುದು ಮುಂತಾದ್ದು.

[೨] ವಿಶೇಷವಾದಹಿಂಸೆ—ಬಿಸಿಲಿನಲ್ಲಿ ನಿಲ್ಲಿಸುವುದು, ಒಂಟಿಕಾಲಲ್ಲಿ ನಿಲ್ಲಿಸುವುದು, ಕೋಣಂಡ.

[೩] ಬಾಲಕರಿಗೆ ಅಧೀನವೆಲ್ಲವ ಸಂದರ್ಭಗಳೆನ್ನು ಎತ್ತಿ ಅನ್ನುವುದು. ಉದಾಹರಣೆ ಅಡ್ಡಹೆಸರಿಡುವುದು, ಮುಂತಾದ್ದು.

ಕೆಡಿಸುವದೊ ಅಂಥಾ ಕ್ರಮದಲ್ಲಿಯೇ ಡಸ್ಮಿಸ್ ಮಾಡಬೇಕು.

ಸಾಮಾನ್ಯವಾಗಿ ದಂಡನೆಮಾಡುವಾಗ ಜ್ಞಾಪಕವಿಡಬೇಕಾದ ಅಂಶಗಳು.

೧ ನಿಶ್ಚಯವಾಗಿಯೂ ತಪ್ಪಾದಹೊರತು ದಂಡಿಸಬಾರದು.

೨ ಮಾಡಿದ ತಪ್ಪಿಗೆ ಅನುಕೂಲವಾಗಿಯೂ, ಆಯಾ ಬಾಲಕನ ಸ್ವಭಾವಕ್ಕನುಗುಣವಾಗಿಯೂ ದಂಡಿಸಬೇಕ

೩ ಉಪಾಧ್ಯಾಯರು ಅಗ್ರಹಪೂರ್ವಕವಾಗಿ ದಂಡಿಸಲೇಕೂಡದು.

೪ ದಂಡನೆಯು ನಿಶ್ಚಯವಾದ್ದಾಗಿರಬೇಕು. ಅಂದರೆ ತಪ್ಪುಮಾಡಿದರ ದಂಡನೆಯಾಗಲೇ ಆಗುವದೆಂಬ ಅಭಿಪ್ರಾಯವು ಬಾಲಕರಿಗೆ ಬರಬೇಕು.

೫ ಮಯಸ್ಸಾಗುತ ಆಗುತ ದಂಡನೆಯು ಕಡಿಮೆಯಾಗುತ ಬರಬೇಕು.

೬ ಬಹಳ ಜನವನ್ನು ಒಂದೇಸಲ ದಂಡಿಸಬಾರದು.

ವ್ಯಾಕರಣ ಶಾಸ್ತ್ರಂ.

ಚತುರ್ಥೀವಿಭಕ್ತಿ ಪ್ರಕರಣಂ.

ಕನ್ನಡಭಾಷೆಯಲ್ಲಿ, ಗೆ ಎಂಬಪ್ರತ್ಯಯವನ್ನು ಚತುರ್ಥೀ ವಿಭಕ್ತ್ಯಂದು ಸಾಮಾನ್ಯವಾಗಿ ಹೇಳುತ್ತಾರೆ. ಇದು ಕೆಲವು ಶಬ್ದಗಳಿಗೆ ಸೇರಿಸುವಾಗ, [ಎಂದರೆ ಲಿಂಗದಲ್ಲಿ ಅಕಾರಾಂತವಾದ ತದ್ಭವತತ್ಸಮದೇಶ್ಯಗಳೆಂಬ ಭೇದವುಳ್ಳ ಮೂರು ವಿಧವಾದ ಶಬ್ದಗಳಿಗೆ ಸೇರಿಸುವಾಗ] ಕೆ, ಅಥವಾ, ಕ್ಕೆ, ಎಂದು ಆಗುವದುಂಟು. ಇದಕ್ಕೆ ಉದಾಹರಣೆಗಳು,—ಗೆ, ಎಂಬುವದಕ್ಕೆ,—ಬಸದಿಗೆ, ಮೂಲೆಗೆ, ಯತಿಗೆ ರಾಮನಿಗೆ, ತಂದೆಗೆ, ತಾಯ್ಗೆ ಇತ್ಯಾದಿ, ಕೆ, ಕ್ಕೆ, ಎಂಬಿವುಗಳಿಗೆ,— ನೆಲಕೆ, ನೆಲಕ್ಕೆ, ಹೊಲಕೆ, ಹೊಲಕ್ಕೆ, ಫಲಕೆ ಫಲಕ್ಕೆ ಪುಷ್ಪಕೆ, ಪುಷ್ಪಕ್ಕೆ ಇತ್ಯಾದಿ. ಗೆ ಎಂಬುವುದನ್ನು ಸಂಸ್ಕೃತಾಕಾರಾಂತದಮೇಲೆ ಪ್ರಯೋಗಿಸುವಾಗ ಹಳೆಗನ್ನಡದಲ್ಲಿ ಮಾತ್ರ ಪ್ರಕೃತಿಗೂ ಪ್ರತ್ಯಯಕ್ಕೂ ಮಧ್ಯದಲ್ಲಿ ಅನುಸ್ವಾರವನ್ನು ಸೇರಿಸಿ, ರಾಮಂಗೆ, ಬ್ರಾಹ್ಮಣಂಗೆ, ಇತ್ಯಾದಿಗಳನ್ನು ಪ್ರಯೋಗಿಸುತ್ತಾರೆ. ಆದರೆ ಈಗಿನ ನಾಡಿಕೆಯಲ್ಲಿ ಅಂಥಾ ಸಂದರ್ಭ ಬಂದಾಗ, ರಾಮನಿಗೆ ಬ್ರಾಹ್ಮಣನಿಗೆ, ಮೊದಲಾಗಿ ನಿಗೆ ಎಂಬುವುದನ್ನು ಪ್ರಯೋಗಿಸುತ್ತಾರೆ, ಇದೂ ಅಲ್ಲದೆ ಕೆಲವರು, ನಿಗೆ, ಗೆ, ಕೆ, ಕ್ಕೆ ಎಂಬ್ಯ

[೪] ಸರಿನೋಡುವದರಲ್ಲಿ ಉಪಾಧ್ಯಾಯರಿಗೆ ತುಂಬಾ ಶ್ರಮವಾಗದಂತಿರ ಬೇಕು.

[೫] ಬಾಲಕರು ಶಿಕ್ಷೆಯೊಂದು ಭಾವಿಸುವದಕ್ಕಾಗಿ ವಿಷಯಕ್ಕಿಂತಲೂ ಅವ್ಯವಸ್ಥೆ ಹೆಚ್ಚಾಗಿರಬೇಕು. ಅಂದರೆ ಒಂದು ಪಾಠವನ್ನು ಪೂರ್ತಿಯಾಗಿ ಬರೆದುಕೊಂಡು ಬಾ ಎಂದು ಹೇಳುವದಕ್ಕೆ ಬದಲಾಗಿ ೪–೬ ಪಙ್ತಿಗಳನ್ನು ೧೦–೧೫ಸಲ ಬರಿಯೆಂದು ಹೇಳುವದು ಒಳ್ಳೆಯದು. ಇಂಪೋಜಿಶನ್ ನೋಡುವದಕ್ಕೆ ಅಂದವಾಗಿರಬೇಕು. ಕಾಟಕ್ಕೆ ಬರೆದ್ದನ್ನು ಒಪ್ಪಿಕೊಡದು.

ಇಂಪೋಜಿಶನ್ ಕೊಡಬಹುದಾದ ತಪ್ಪುಗಳು

೧ ಪಾಠವಿದದೇ ಇರುವದು. ೨ ಹೋಂವರ್ಕ್‌ತರದೇ ಇರುವದು. ೩ ಪಾಠಕ್ಕೆ ತಪ್ಪಿಸಿಕೊಳ್ಳುವದು

[೪] ದೇಹದಂಡನೆ—ಕೆಲವರ ಮತದಲ್ಲಿ ಇದು ಕೂಡದು. ಆದರೆ ಇದರ ಸಹಾಯವಿಲ್ಲದೇನೇ ವಿದ್ಯಾಭ್ಯಾಸನಡಿಸುವದಕ್ಕೆ ಬಹಳ ಶಕ್ತಿಬೇಕು. ಆದರೆ ದೇಹದಂಡನೆಯನ್ನು ಕಡೇಪಕ್ಷವನ್ನಾಗಿ ಇಟ್ಟುಕೊಳ್ಳಬೇಕು. ಮತ್ತು ನಡತೆಯುಲ್ಲಿ ಕಂಡುಬಂದ ದೋಷ [ಕೆಟ್ಟತನ] ಅಂದರೆ ಸುಳ್ಳು, ಕಳ್ಳತನ, ಬೇಕೆಂದು ಅವಿಧೇಯತೆ, ಎದುರುಬೀಳುವದು ಇಂಥಾ ವಿಷಯಗಳಿಗೆ ಮಾತ್ರ ಉಪಯೋಗಿಸಬೇಕು.

ದೇಹದಂಡನೆಮಾಡುವದರಲ್ಲಿ ಜ್ಞಾಪಕವಿಡಬೇಕಾದ್ದು.

[೧] ಬುದ್ಧಿಯಲ್ಲಿ ಕಂಡುಬಂದ ತಪ್ಪುಗಳಿಗೆ ವಿಧಿಸಬಾರದು.

[೨] ಅಗ್ರಹವಿದ್ದಾಗ ವಿಧಿಸಬಾರದು.

[೩] ಹೆಡ್‌ಮಾಸ್ಟರೇ ವಿಧಿಸಬೇಕು.

[೪] ಬೆತ್ತ ಮೊದಲಾದ್ದನ್ನು ಹತ್ತಿರ ಇಟ್ಟುಕೊಂಡಿರಬಾರದು.

[೫] ಸಿಕ್ಕಿದ್ದರಿಂದ ಸಿಕ್ಕಿದಕಡೆ ಹೊಡೆಯಬಾರದು.

ದೇಹದಂಡನೆಯು ರಿಜಸ್ಟರನ್ನಿಡುವದು ಬಹಳ ಉತ್ತಮ.

(೭) ಡಿಸ್ಮಿಸ್‌ಮಾಡುವದು—ಇದು ಬಹಳ ದೊಡ್ಡಶಿಕ್ಷೆ.

ಇದಕ್ಕೆ ಅರ್ಹರಾದ ಹುಡುಗರು ಬಹಳ ಅಪರೂಪ. ತಾವು ತಿದ್ದುವುದಕ್ಕೆ ಆಗುವದೇ ಇಲ್ಲವೆಂದು ನಿಶ್ಚೈಸಿದ ಹೊರ್ತು ಡಿಸ್ಮಿಸ್‌ಮಾಡಕೂಡದು. ಯಾವಹುಡುಗನ ತಿದ್ದುವಿಕೆಯು ಯಾವಕ್ರಮದಲ್ಲೂ ಸಾಧ್ಯವಾಗದೆ ಒಟ್ಟು ಸ್ಕೂಲಿನ ಕ್ರಮವನ್ನು

ಅಂಗೀಕರಿಸಿದರೂ, ವೇಲೆಹೇಳಿದಂತೆ ವಿಭಕ್ತ್ಯರ್ಥಕಾವ್ಯಯವೆಂದು ಸ್ವೀಕರಿಸಿದರೂ ಬಾಧಕವೇನೂ ತೋರ ವ್ವದಿಲ್ಲ ಅದಾಗ್ಯೂ ಓಸ್ಕರವೆಂಬುವುದನ್ನು ಎಲ್ಲರೂ ಎಲ್ಲ ಕಡೆಯಲ್ಲೂ, ಗೆ, ಪ್ರತ್ಯಯದವೇಲೆಯೇ ಸೇರಿಸಿ ಪ್ರಯೋಗಿಸುತ್ತಿರುವರು. ಆದ್ದುದರಿಂದ ಗೆ ಯೆಂಬುವುದರಿಂವಲೆ ಅರ್ಥವಾಗುತ್ತಿರಲು, ಅಲ್ಲಿ ಓಸ್ಕರವೆಂಬುವುದು ವ್ಯರ್ಥವಾಗಿ ತೋರುವುದು. ಆದರೂ ಬಹುಜನರು ಉಪಯೋಗಿಸುವುದರಿಂದ ಇದು ಸ್ವಾರ್ಥಪ್ರತ್ಯಯವೆಂದು ಹೇಳಿದರೂ ಹೇಳಬಹುದು. ಪಂಚವಿಯಲ್ಲಿ ವಾಶ್ರ ದೆಸೆಯಿಂದ ಎಂದು ಹೇಳಿರುವದರಿಂದ, ಇದು ಸಂಸ್ಕೃತದಿಶಾಶಬ್ದದ ತದ್ಭವವಾದ ದೆಸೆಯೆಂಬ ಶಬ್ದದಮೇಲೆ ಇಂದ, ಎಂಬ ತೃತೀಯೆಯನ್ನು ಸೇರಿಸಿ ಹೇಳಬಹುದಾದುದರಿಂದ ಇದನ್ನು ವಿಭಕ್ತ್ಯಯೆಂದು ಹೇಳುವುದಕ್ಕಾಗುವದಿಲ್ಲ. ಮತ್ತು ಇದನ್ನು ಯಾವಾಗಲೂ, ಮರದದೆಸೆಯಿಂದ, ಎಂದು ಷಷ್ಠ್ಯೀವಿಭಕ್ತ್ಯಯ ಮುಂದೆಯೇ ಉಪಯೋಗಿಸುತ್ತಾರೆ ಹೀಗೆಯೇ ಹಳೆಗನ್ನಡದಲ್ಲಿ, ಅತ್ತಣಿಂ, ಎಂಬುವುದನ್ನು ಪಂಚವಿಭಾವಿಭಕ್ತ್ಯಯೆಂದು ಹೇಳುತ್ತಾರೆ. ಇದು ಅಲ್ಲಿ ಷಷ್ಠ್ಯಂತದಮೇಲೇ ಸೇರುವುದಾಗಿ ಕಾಣುತ್ತದೆ, ಆದುದರಿಂದ ಪಾರ್ಶ್ವಶಃ ಕನ್ನಡಭಾಷೆಯಲ್ಲಿ ಪಂಚವಿಭಾವಿಭಕ್ತ್ಯಿಯಿಲ್ಲವೆಂತಲೂ, ಸಂಸ್ಕೃತವಾಸನೆಯಿಂದ ಈ ಭಾಷೆಯಲ್ಲೂ ಈ ವ್ಯವಸ್ಥೆಯನ್ನು ಅಂಗೀಕರಿಸಿರುವಂತೆಯೂ ತೋರುವುದು. ಹೀಗೆಯೇ ಸಪ್ತವಿಭಾವಿಭಕ್ತ್ಯಿಯೆಂಬ ಅಲ್ಲಿ, ಇಲ್ಲಿ, ಎಂಬವನ್ನು ಅವ್ಯಯಗಳೆಂದು ಸ್ವೀಕರಿಸಿ, ಷಷ್ಠ್ಯೀವಿಭಕ್ತ್ಯಯವೇ ಲೆ ಸೇರಿಸಿ, ಮನೆಯಲ್ಲಿ, ವನದಲ್ಲಿ, ಎಂದು ಹೇಳಬಹುದು. ಆದುದರಿಂದ ಈ ಭಾಷೆಯಲ್ಲಿ ಸಪ್ತವಿಭಾವಿಭಕ್ತ್ಯಿಯೂ ಇಲ್ಲವೆಂದು ತೋರ ತ್ತದೆ.

ಹೀಗೆ ಸಂಪ್ರದಾನವಿಭಕ್ತ್ಯಿಯನ್ನು ಹೇಳಬೇಕಾದ ಸಂದರ್ಭದಲ್ಲಿ ಯಾವಾಗಲೂ ದಾನಾರ್ಥಕಧಾತುವಿಗೆ ಪ್ರಯೋಗವಿದ್ದು ಆ ದಾನಕ್ಕೆ ಕರ್ಮವಾದುದನ್ನೂ ಪ್ರಯೋಗಿಸಿ, ಕೊಡಬೇಕಾದ ವಸ್ತುವಿನ ಸಂಬಂಧವನ್ನು ಯಾರಿಗೆ ಉಂಟಾಗಬೇಕೆಂದು ದಾನಕೊಡುವನು ಅಪೇಕ್ಷಿಸುತ್ತಾನೋ ಆವಸ್ತುವಾಚಕವಾದ ಶಬ್ದವನ್ನೂ ಪ್ರಯೋಗಿಸಬೇಕು.

ಇಲ್ಲಿ ಕೆಲವು ಪಂಡಿತರು ದಾನವೆಂದರೆ ಕೊಡತಕ್ಕ ವಸ್ತುವಿಗೆ ತಮ್ಮ ಸಂಬಂಧವನ್ನೆ ತಪ್ಪಿಸಿ ಸ್ವನಃ ತಾವು ಸ್ವೀಕರಿಸದೆ ಇತರರ ಸಂಬಂಧವನ್ನುಂಟು ಮಾಡುವುದೆಂದು ಹೇಳಿ, ಬ್ರಾಹ್ಮಣನಿಗೆ ಗೋವನ್ನು ಕೊಟ್ಟನು ಯತಿಗೆ ಭಿಕ್ಷೆಯನ್ನಿಕ್ಕಿದನು, ಎಂದು ಉದಾಹರಣೆಯನ್ನು ಕೊಡುತ್ತಾರೆ. ಇಲ್ಲಿ ಗೋವನ್ನು ಭಿಕ್ಷೆಯನ್ನು, ಕೊಟ್ಟವ

ವುಗಳ್ಗಿ, ಓಸುಗ, ಅಥವಾ, ಓಸ್ಕರ, ಎಂಬುವುಗಳನ್ನು ಸೇರಿಸಿ, ರಾಮುನಿಗೋ ಸ್ಕರ, ಎಂದು ವೊದಲಾಗಿ ಪ್ರಯೋಗಿಸುತ್ತಾರೆ. ಇದೆಲ್ಲಾ ಈಗಿನ ಪಂಡಿತರು ಬರೆಯುವ ಪುಸ್ತಕಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಇವುಗಳಲ್ಲಿ ಈಗಿನವರು ರೂಢಿಯಾಗಿ ಉಪಯೋಗಿಸುತ್ತಿದ್ದರೂ ಓಸುಗ, ಓಸ್ಕರ, ಎಂಬುವು, ಅಷ್ಟು ಪ್ರಯೋಜನಕರಗಳೆಂದು ತೋರುವದಿಲ್ಲ. ಮತ್ತು ಯಾವ ವ್ಯಾಕರಣದಲ್ಲೂ ಇಷ್ಟು ದೊಡ್ಡದಾಗಿ ಪ್ರತ್ಯಯಗಳನ್ನು ಅಂಗೀಕರಿಸುವ ಸಂಪ್ರದಾಯವಿಲ್ಲ. ಇಲ್ಲಿ ಓಸುಗ, ಓಸ್ಕರ ಎಂಬಿವು ಪ್ರತ್ಯಯಗಳಿಗಿಂತಲೂ, ಬೇರೆಯಾಗಿ ವಿಭಕ್ತ್ಯರ್ಥಕಾವ್ಯಯಗಳೆಂದು ಅಂಗೀಕರಿಸಲ್ಪಡಬಹುದು.

ಇಂಥಾ ಚತುರ್ಥೀವಿಭಕ್ತಿಯು ಸಾಮಾನ್ಯವಾಗಿ ದಾನಾರ್ಥಕಧಾತುಗಳಿಗೆ ಪ್ರಯೋಗವಿದ್ದರೆ ಅಲ್ಲಿ ಯಾರನ್ನುದ್ದೇಶಿಸಿ ದಾನವಾಡುತ್ತಾರೊ, ಆಯುದ್ದೇಶವಾಚಕ ಶಬ್ದದಮೇಲೆ ಬರುವುದು ಎಂದು ತಿಳಿಯಬೇಕು. ಈ ಯುದ್ದೇಶಕ್ಕೆ ಸಂಸ್ಕೃತದಲ್ಲಿ ಸಂಪ್ರದಾನವೆಂದು ಹೆಸರಿಟ್ಟಿರುವರು. ಆದ್ದರಿಂದ ಇದಕ್ಕೆ ಸಂಪ್ರದಾನವಿಭಕ್ತಿಯೆಂತಲೂ, ಸಂಪ್ರದಾನಕಾರಕವೆಂತಲೂ ಹೇಳುತ್ತಾರೆ. ಆದುದರಿಂದಲೆ ಈಗಿನ ಕೆಲವು ಬೋಧಕರು, ವಿಭಕ್ತ್ಯರ್ಥವನ್ನು ಹೇಳಿಕೊಡುವಾಗ ಬಾಲಕರಿಗೆ ಕರ್ತರಿಪ್ರಥಮಾ, ಕರ್ಮಣಿ ದ್ವಿತೀಯಾ, ಕರ್ತೃಕರಣಯೋಸ್ತೃತೀಯಾ, ಸಂಪ್ರದಾನೆ ಚತುರ್ಥೀ, ಅಪಾದಾನೆ ಪಂಚಮಿಾ, ಸಂಬಂಧಸಾಮಾನ್ಯೆ ಷಷ್ಠೀ, ಅಧಿಕರಣೆಸಪ್ತಮಿಾ, ಎಂದು ಹೇಳಿಕೊಡುತ್ತಿರುವರು. ಇದರಂತೆ ಕೆಲವರು ಹೊಸಕನ್ನಡದಲ್ಲಿ ಹುಡುಗರಿಗೆ ವಿಭಕ್ತ್ಯರ್ಥವನ್ನೂ ವಿಭಕ್ತಿಪ್ರತ್ಯಯರೂಪವನ್ನೂ ತಿಳಿಸುವದಕ್ಕೆ ಬದಲಾಗಿ,—ಉ, ಪ್ರಥಮಾ, ಅನ್ನು, ದ್ವಿತೀಯಾ, ಇಂದ, ತೃತೀಯಾ, ಓಸ್ಕರ, ಚತುರ್ಥೀ, ದೆಸೆಯಿಂದ, ಪಂಚಮಿಾ, ಅದಕ್ಕೆ ಅದರ ಷಷ್ಠೀ, ಅಲ್ಲಿ, ಇಲ್ಲಿ, ಸಪ್ತಮಿಾ, ಎಂದು ಹೇಳುತ್ತಾರೆ. ಇವುಗಳನ್ನು ಒಂದು ಮೇಳೆ ಹೊಸಗನ್ನಡ ಪ್ರತ್ಯಯಗಳೆಂದರೂ ಎನ್ನಬಹುದು. ಇವುಗಳಿಂದ ವಿಭಕ್ತ್ಯರ್ಥಮಾತ್ರ ಸ್ಪಷ್ಟವಾಗುವದಿಲ್ಲ. ಇದರ ಜತೆಯಲ್ಲಿ ಕರ್ತೃ, ಕರ್ಮ, ಕರಣ, ಮೊದಲಾದ ಪದಗಳನ್ನೂ ಹೇಳಿ ಅದರರ್ಥವನ್ನು ಜೋಡಿ ವಾಕ್ಯದಿಂದ ವಿಶದಪಡಿಸಿ ಇಂಥಿಂಥಾ ಅರ್ಥಗಳಲ್ಲಿ ಇಂಥಿಂಥ ವಿಭಕ್ತಿಗಳು ಬರುವುವೆಂದು ತಿಳಿಸಿದರೆ ವಿಭಕ್ತಿಯೂ, ಅದರ ಅರ್ಥವೂ ಸ್ಪಷ್ಟವಾಗುವದು. ಆದರೆ ಮೇಲೆಹೇಳಿರುವ ವಿಭಕ್ತಿಗಳ ಪಟ್ಟಿಯಲ್ಲಿ, ಓಸ್ಕರ, ದೆಸೆಯಿಂದ, ಎಂಬ ಎರಡನ್ನು ಸೇರಿಸಿದೆ. ಇದರಲ್ಲಿ ಓಸ್ಕರವೆಂಬುದು ಪ್ರತ್ಯಯವನ್ನಾಗಿ

ಬೆರಸಿ ಹೊಟ್ಟೆನೋವಿಗೆ ಕೊಡುವರು. ಈ ಕುಡಿಬುಳುಪುಸಿಯು ಶಿವಮೊಗ್ಗಾ ಪಶ್ಚಿಮ ಘಟ್ಟದ ಪ್ರಾಂತದಲ್ಲಿ ತೊಲ ತೂಕಕ್ಕೆ ಈಗಲೂ ಎಂಟಾಣೆಕ್ರಯವಿದೆ. ಗಿಡದತೊಗಟೆಯು ಚರ್ಮವನ್ನು ಮೆದುಮಾಡುವುದಕ್ಕೆ ಬಹಳವಾಗಿ ಉಪಯೋಗವಾಗಿದೆ. ತೊಗಟೆ ಕಳಚಲ್ಪಟ್ಟ ಕಡ್ಡಿ ಒಲೆಗೆ ಆಗುವುದು. ಈ ಗಿಡವು ಸಂಕಾರದವರ ವಶದಲ್ಲಲ್ಲದೆ, ಸರಕಾರದವರ ಅಪ್ಪಣೆ ಯಿಲ್ಲದೆ ಇದನ್ನು ಯಾರೂ ಕಡಿಯಕೂಡದೆಂದು ವಿವಾಯಕವಾಗಿದೆ. ಇದರಿಂದ ಸರಕಾರಕ್ಕೆ ಬಹಳ ಉತ್ಪತ್ತಿ ಇದೆ.

ಕೆ. ಸಂಗನ ಬಸವಯ್ಯ
ಅಸಗೋಡ, ಸ್ಕೂಲ್ಮಾಸ್ಟರು.

———:o:———

ಭೂವಿವರಣೆ.

[ತರಗತಿ ೧ನೇ ಬಿ.] [ಕಾಲ ೪೦ ನಿಮಿಷಗಳು]

[ಉಪಕರಣಗಳು—ಮೈಸೂರುದೇಶದ ಪಠ. ಮತ್ತು ಇಂಡಿಯಾಪಠ. ಹಲಿಗೆಯು ಮೈಸೂರುದೇಶದ ನಕ್ಷೆ ಇವುಗಳನ್ನು ಮತ್ತು ಗೋಳವನ್ನೂ ಸಹ ತಂದಿರಬೇಕು.]

ವಿಷಯ.	ಬೋಧನಾಕ್ರಮ
೧ ಸಾಮಾನ್ಯವಿಷಯಗಳು. ದಿಕ್ಕುಗಳು ನಾಲ್ಕು. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ.	ಬಾಲಕರನ್ನು ಮೊದಲು ಈ ವಿಷಯವಾಗಿ ಪ್ರಶ್ನೆಯನ್ನು ಮಾಡಿ, ಉತ್ತರಗಳನ್ನು ಅವರಿಂದಲೇ ಹೊರಡಿಸಬೇಕು.
[ಗುರುತುಗಳನ್ನು ತಿಳಿಸುವುದು] ೨ ಭೂಪಠದಲ್ಲಿ ಬಣ್ಣಗಳು ಇಲ್ಲದ ಭಾಗವು ಜಲಭಾಗವು.	ಬೋಧಕರ, ತಾವು ಪ್ರಶ್ನೆಗಳನ್ನು ಕೇಳುತ್ತಾ ಬಾಲಕರಿಂದಲೇ ಸಾಧ್ಯವಾದಮಟ್ಟಿಗೂ ಉತ್ತರಗಳನ್ನು ಹೊರಡಿಸಲು ಪ್ರಯತ್ನಪಟ್ಟು ನಂತರ ಉದಹರಿಸಿರುವ

ನು ಅವನ್ನು ಪುನಃ ತಾನು ತೆಗೆದುಕೊಳ್ಳದಿದ್ದರೂ, ಅಗಸನಿಗೆ ಬಟ್ಟೆಯನ್ನು ಕೊಟ್ಟ ನು ಎಂಬ ವಾಕ್ಯದಲ್ಲಿ ಬಟ್ಟೆಯ ನ್ನು ಪುನಃ ತೆಗೆದುಕೊಳ್ಳುತ್ತಾನಾದ್ದರಿಂದ ಇಲ್ಲಿ ದಾನಾರ್ಥವು ತೋರದೆ ಚತುರ್ಥೀವಿಭಕ್ತಿಯು ಬಾರದೆ ಇರಬೇಕಾಯಿತು. ಆದ್ದರಿಂದ ಪುನಃ ತಾನು ಸ್ವೀಕರಿಸದೆ ಎಂಬ ವಿಶೇಷಣವನ್ನು ಬಿಟ್ಟುಕೊಡತಕ್ಕ ವಸ್ತುವಿಗೆ ತಮ್ಮ ಸಂಬಂಧವನ್ನು ತಪ್ಪಿಸಿ ಇತರ ಸಂಬಂಧವನ್ನುಂಟುಮಾಡುವುದು ದಾನವೆಂದು ಹೇಳಿ ಅಲ್ಲಿ ಚತುರ್ಥಿಯನ್ನು ಹೇಳಬೇಕೆಂದು ಹೇಳಬೇಕು. ಇದರಿಂದ ಅಗಸನಿಗೆ ಬಟ್ಟೆಯನ್ನು ಕೊಟ್ಟನು, ಮೊದಲಾದ ಉದಾಹರಣೆಗಳಲ್ಲಿ ಚತುರ್ಥಿಯು ಸಿದ್ಧಿಸುವುದು.

ಇದು ಸಾಮಾನ್ಯವಾಗಿ ಚತುರ್ಥಿಯು ಉಪಯೋಗಿಸುವ ರೀತಿಯೆಂದು ತಿಳಿಯಬೇಕು. ಇನ್ನು ವಿಶೇಷಾರ್ಥಗಳೆಲ್ಲವೂ ಪ್ರಾಚೀನಗ್ರಂಥಗಳಲ್ಲಿ ಉಪಯೋಗಿಸರುತ್ತಾರೆ. ಅಲ್ಲಿ ಬಾಲಕರಿಗೆ ಅಯುಕ್ತವಿಶೇಷಗಳು ಸ್ಪಷ್ಟವಾಗಿ ಸ್ಫುರಿಸದಿದ್ದರೂ, ಪಂಡಿತರಿಗೆ ಆ ಭೇದಗಳು ತೋರುವದರಿಂದ ಪ್ರಾಚೀನವ್ಯಾಕರಣರು ಅವುಗಳಿಗೆ ಭೇದಸೂತ್ರಗಳನ್ನು ಮಾಡಿರುತ್ತಾರೆ. ಅವುಗಳಲ್ಲಿ ಬಾಲಕರಿಗೆ ಉಪಯುಕ್ತವಾಗುವಷ್ಟು ಮುಂದಿನ ಸಂಚಿಕೆಯಲ್ಲಿ ವಿವರಿಸುವೆವು.

ತಂಗಡಿ ಗಿಡ.

ಇದು ಮೈಸೂರುದೇಶದಲ್ಲಿ ವ್ಯವಸಾಯವಿಲ್ಲದೇನೇ ಪ್ರಾಯಶಃ ಎಲ್ಲೆಲ್ಲಿಯೂ ಬೆಳೆಯುವುದು. ದಿನ್ನೆನೆಲದಲ್ಲಿ ಬೆಳೆಯುವುದು ಹೆಚ್ಚು. ಈ ಗಿಡವು ಅನೇಕ ಕಾಂಡಗಳುಳ್ಳದು. ಇದರ ಎಲೆಗಳು ಒತ್ತಾಗಿ ಹಸುರಾಗಿರುವವು. ಸುವಾರು ಟೀ ಎಲೆಯಷ್ಟು ಇರುವವು. ಕೆಂಪುಮಣ್ಣು ಕಲ್ಲುಜರುಗು ಇರುವ ನೆಲದಲ್ಲಿ ಇದು ಪುರುಷಪ್ರಮಾಣದೆತ್ತರಕ್ಕೆ ಬೆಳೆಯುವುದು, ಬಹಳ ದಿವಸದ ಗಿಡವಾದರೆ ಬುಡವು ರಟ್ಟೆಗಾತ್ರವಾಗುವುದು. ಹೂ ಹಳದಿ; ಪಲ್ಯಕ್ಕೆ ಬರುವುದು. ಕಾಯಿ ಕತ್ತಿಯಂತೆ ||| ಅಂಗುಲ ಅಗಲವೂ ಗೇಣುದ್ದವೂ ೪—೧೦ ಬೀಜಂಗಳನ್ನುಳ್ಳದಾಗಿರುವುದು. ಪ್ರಾಯಶಃ ಬೀಜಬಿತ್ತಿದರೆ ಹುಟ್ಟುವುದಿಲ್ಲ. ಬಿತ್ತುವ ರೂಢಿಯಿಲ್ಲ. ಕತ್ತರಿಸಲ್ಪಟ್ಟ ಗಿಡದಬುಡವೆ ಅನೇಕ ಸೆಳೆಗಳಿಂದ ದಲ್ಲವಿಸುವುದು. ಆಗ ಅದು ನೋಡುವುದಕ್ಕೆ ಬಹು ರಮಣೀಯವಾಗಿರುವುದು. ಕೆಲವು ದಕ್ಷಿಜಾತಿಗಳೂ ಇರುವೆಗಳೂ ಗೊಬ್ಬಗಳೂ ಕೆಲವು ಒಂದುಬಗೆಯ ಮಿಡಿತೆಗಳೂ ಈ ಗಿಡವನ್ನಾಶ್ರಯಿಸುತ್ತಿರುವವು. ಗಿಡದ ಎಳೆಕುಡಿಯನ್ನು ತಂದು ಅರೆದು ಮೊಸರಿನಲ್ಲಿ

ನಿಬ್ಬಗುಡ್ಡಗಳಲ್ಲಿ ಬಂಡೆಯಿಂದ ಕೊನೆಯವರೆಗೂ ಒಂದೇ ಬಂಡೆಯಿಂದ ಕೂಡಿ ಮೇಲೆ ಕೋಟೆಯಿದ್ದರೆ ಅವಕ್ಕೆ ದುರ್ಗವೆಂದೂ ಹೆಸರಿರುವದು. ಇದಲ್ಲದೆ ಕಣಿವೆ ಮುಂತಾದ ಸಾಮಗಳೂ ಇರುವವೆಂದು ತಿಳಿಸುವದು.

ಉದಾ—ಶಿವನ ಮುಳಿಯುನೆಗಿರಿ, ಕಲ್ಲುಬೆಟ್ಟಗಿರಿ.

ದುರ್ಗ—ನಂದೀದುರ್ಗ, ದೇವರಾಯದುರ್ಗ.

ಕಣಿವೆ—ಮೊರಿಕಣಿವೆ, ಜಾಗರ್ ಕಣಿವೆ.

ಹಲಿಗೆಯುಮೇಲೆ ಬಾಲಕರನ್ನು ಪ್ರಶ್ನೆಮಾಡುತ್ತಾ ಬರೆಯಬೇಕು. ಪುನರುಕ್ತಿಯನ್ನು ಮಾಡಬೇಕು. [೨—೩ ಮಂದಿ ಬಾಲಕರಿಂದ]

೪ [೧] ವ್ಯಾಪಿನಲ್ಲಿ ಡೊಂಕುಡೊಂಕಾಗಿ ಬರೆದಿರುವ ಗೆರೆಗಳೆಲ್ಲಾ ನದಿಗಳು

ಉದಾ—ಗಂಗಾ, ಕಾವೇರಿ, ಸಿಂಧು

[೨] ಡೊಂಕುಡೊಂಕಾಗಿ ಇದ್ದು ಕೊಂಡು ಎಡಬಲಗಳಿಂದ ಬಂದು ನದಿಗಳಿಗೆ ಬೀಳುವವೆಲ್ಲಾ ಉಪನದಿಗಳು.

ಉದಾ—ಗಂಡಕಿ, ಹೇಮಾವತಿ, ಪೆರಿಯಾರ್ ಮುಂತಾದವು.

ನದಿಯ ಆಕಾರವನ್ನು ವ್ಯಾಪಿನಲ್ಲಿ ಬಾಲಕರೇ ತೋರಿಸುವಂತೆ ಮಾಡಬೇಕು. ನಂತರ ಗಂಗಾ, ಕಾವೇರಿ, ಸಿಂಧೂನದಿಗಳನ್ನು ಅವರೇ ತೋರಿಸುವಂತೆ ಮಾಡಬೇಕು.

ಮತ್ತು ಉಪನದಿಗಳ ಆಕಾರವನ್ನೂ ಅವರೇ ವ್ಯಾಪಿನ ಸಹಾಯದಿಂದ ತಿಳಿದು ಕೊಳ್ಳುವಂತೆ ಮಾಡಿ ಹಲಿಗೆಯಮೇಲೂ ತೋರ್ಪಡಿಸಬೇಕು.

(೩) ನೀರಿನ ಮಧ್ಯದಲ್ಲಿ ಬಣ್ಣದಿಂದ ಬರೆದಿರುವ ಸ್ಥಳವು ದ್ವೀಪವು,

ಉದಾ:—ಶ್ರೀರಂಗಪಟ್ಟಣ. ಸಿಂಹಳದ್ವೀಪ.

ಈ ವಿಷಯವನ್ನು ಬಾಲಕರಿಂದ ಹೇಳಿಸಲು ಬೋಧಕರು ಪ್ರಯತ್ನಪಡಬೇಕು.

(೪) ಆಕಾಶದ ಬಣ್ಣದಿಂದ ತೋರ್ಪಡಿಸಿರುವವು ಸರೋವರಗಳು.

ಉ—ಕೋಲೇರ್. ಪುಲಿಕಾಟ್.

ಬಾಲಕರಿಗೆ ಈ ವಿಷಯವನ್ನು ವ್ಯಾಪಿನಲ್ಲಿ ತೋರ್ಪಡಿಸಿ ನಮ್ಮ ದೇಶದಲ್ಲಿ (ಮೈಸೂರುದೇಶದಲ್ಲಿ) ಸರೋವರಗಳಿಲ್ಲದಿದ್ದಾಗ್ಯೂ ಕಣಿವೆಗಳು ಕೆರೆಯನ್ನೂ ಮತ್ತು ಸೂಳೆ ಕೆರೆಯನ್ನೂ ತೋರಿಸಿ ಇವುಗಳನ್ನು ಸಾಮಾನ್ಯವಾಗಿ ಸರೋವರಗಳೆಂದು ಹೇಳ

ಉದಾಹರಣೆ—ಶವನಸಮುದ್ರ, ಬಂಗಳೂರಿಕೊಳ್ಳ, ಅರಬ್ಬೀ ಸಮುದ್ರ ಮುಂತಾದವು

೩ ನಾನಾ ಬಣ್ಣಗಳಿಂದ ಕೂಡಿರುವ ಸ್ಥಳವು ಭೂಭಾಗವು.

ಉದಾ—ಮೈಸೂರು, ಇಂಡಿಯಾ, ಏಷ್ಯಾಗಳು

೪ [೧] ವ್ಯಾಪ್ತಿಗಳಲ್ಲಿ ಕಂಬಳಿಹುಳಗಳಹಾಗೆ ಮಲಗಿರುವಂತೆ ತೋರಿಸಲ್ಪಟ್ಟಿರುವವುಗಳು ಪರ್ವತಗಳು. ಉದಾ—ಹಿಮಾಲಯ, ವಿಂಧ್ಯ.

[೨] ಇದೇ ಹಾಳುವಿನ ಆಕಾರದಲ್ಲಿ ಚಿಕ್ಕ ಚಿಕ್ಕದಾಗಿ ಬಿಟ್ಟು, ಗುಡ್ಡವೆಂದು ಇರುವವು

ಉದಾ— ಬೆಟ್ಟ = ಚಾಮುಂಡಿಬೆಟ್ಟ, ಗೋಪಾಲಸ್ವಾಮಿಬೆಟ್ಟ, ಗುಡ್ಡ = ತೋಗವ್ವನಗುಡ್ಡ, ಕರಿಯಕಲ್ಲು [ಕಡೆಕೈ] ಗುಡ್ಡ

[೩] ಪರ್ವತ ಬೆಟ್ಟ ಗುಡ್ಡಗಳಲ್ಲಿ ಎತ್ತರವಾದವುಗಕ್ಕೆ ಶಿಖರವೆಂದೂ,

ಸ್ಥಳಗಳನ್ನು ವ್ಯಾಪಿನಲ್ಲಿ ತೋರಿಸುವಂತೆ ಮಾಡಬೇಕು. ತಾವು ಹಲಿಗೆಯಮೇಲೆ, ಶಿಕ್ಷಕಸ್ಥಳದಲ್ಲಿ ಬರೆಯುವುದು.

ತಾವು ತಿಂದಿರುವ ವ್ಯಾಪಾಗಳಲ್ಲಿ ಈ ವಿಷಯವನ್ನು ದೃಷ್ಟಾಂತಪಡಿಸಿ, ಉದಾಹರಣೆಯಾಗಿ ಹೇಳಲ್ಪಟ್ಟಿರುವ ಪ್ರದೇಶಗಳನ್ನು ಬಾಲಕರೇ ತೋರಿಸುವಂತೆ ಮಾಡಿ ಇದು ಅವರ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವುದು. ಹಲಿಗೆಯ ಮೇಲೆ ಬರೆಯಬೇಕು.

ವ್ಯಾಪಿನೆಲ್ಲಾ ಈ ಸ್ಥಳವನ್ನು ಬಾಲಕರಿಗೆ ತೋರಿಸಿ ನಂತರ ಗೋಳದಲ್ಲಿಯೂ ತೋರಿಸಬೇಕು, ನಮ್ಮ ದೇಶದಲ್ಲಿ ಅಂಥಾ ಪರ್ವತಗಳಿಲ್ಲವೆಂದು ತಿಳಿಸಿ ಉದಾಹರಣೆಯಲ್ಲಿ ಕೊಟ್ಟಿರುವ ಸ್ಥಳಗಳನ್ನು ತೋರಿಸಬೇಕು.

ಈ ವಿಷಯವನ್ನೂ ತಿಳಿಸಿ ತಾವು ಹಲಿಗೆಯ ಮೇಲೆ ಇವುಗಳ ಆಕಾರವನ್ನು ಬರೆದು ಯಾವುಯಾವಸ್ಥಳದಲ್ಲಿ ಯಾವಯಾವದು ಇರಬೇಕೋ ಅದಕ್ಕನುಸಾರವಾಗಿ ಬರೆದು ಇಬ್ಬರು ಮೂವರಿಂದ ಬಾಲಕರಿಂದ ಪುನರುಕ್ತಿಯನ್ನು ಮಾಡಿಸಬೇಕು.

ಶಿಕ್ಷಕರು ಈ ವಿಷಯಗಳನ್ನೆಲ್ಲಾ ವ್ಯಕ್ತಪಡಿಸಿ ನಂತರ ಈ ಸ್ಥಳಗಳಿಗೆಲ್ಲಾ ವ್ಯಾಪುಗಳಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಿ ಒಂದೇ ತರಹವಾದ ಆಕಾರವಿರುವುದೆಂದು ತಿಳಿಸಪಡಿಸಿ ಉದಾಹರಣೆಯನ್ನು ಬಾಲಕರಿಂದಲೇ ತಿಳಿಸಿ ಆ ಸ್ಥಳಗಳನ್ನು ವ್ಯಾಪಿನಲ್ಲಿ ಬಾಲಕರೇ ತೋರಿಸುವಂತೆ ಮಾಡಿ

[ಪರಾ = ಅವಶ್ಯಕವಿದ್ದರೆ ಉದಾಹರಣೆಯನ್ನು ಬೋಧಕರು ಹೇಳಬಹುದು]

ಎಚ್. ಸೂರ್ಯನಾರಣಪ್ಪ, ಎಂ. ಎ. ಮಾಸ್ತರರು
ಆದರ್ಶ ಬಾಲಿಕಾ ಪಾಠಶಾಲೆ,
ಬೆಂಗಳೂರು.

ಕಿಂಡರ್‌ಗಾರ್ಟನ್.

೫ನೇ ಅಭ್ಯಾಸ.—

ಈ ಅಭ್ಯಾಸವನ್ನು ಮಾಡಿಸುವಾಗ, ಕಾಮನಬಿಲ್ಲಿನ ಬಣ್ಣಗಳನ್ನು ಕ್ರಮವಾಗಿ ಬಾಲಕರು ಹೇಳುತ್ತ ಸಾಲಾಗಿ ಬಿಲ್ಲಿನಂತೆ ನಿಲ್ಲುವ ಅಭ್ಯಾಸವನ್ನು ಮಾಡಿಸಬೇಕು. ಸಾಗೆ ನಿಲ್ಲುವ ಹುಡುಗರ ಕೈಯಲ್ಲಿ ಅವರು ಹೇಳುತ್ತಿರುವ ಬಣ್ಣಗಳ ಚಂಡು ಇರುವದೋ ಇಲ್ಲವೋ ಎಂಬ ಅಂಶವನ್ನು ಉಪಾಧ್ಯಾಯನು ಪರೀಕ್ಷಿಸುತ್ತಿರಬೇಕು. ಹೀಗೆ ಕಾಮನಬಿಲ್ಲಿನ ಕ್ರಮವಾದ ಬಣ್ಣಗಳನ್ನು ಹೇಳುತ್ತ ಅದೇಬಣ್ಣದ ಚಂಡುಗಳುಳ್ಳ ಬೇರೆಬೇರೆ ಹುಡುಗರು ಬೇರೆಬೇರೆಯಾಗಿ ಸಾಲನ್ನು ಕಟ್ಟಿಕೊಂಡು ಅರ್ಧವೃತ್ತಾಕಾರವಾಗಿ ನಿಲ್ಲುವದುಮಕ್ಕಳ ಜ್ಞಾಪಕಶಕ್ತಿಯನ್ನು ಬೆಳೆಯಿಸುವದು

೬ನೇ ಅಭ್ಯಾಸ.—

ಈ ಅಭ್ಯಾಸದಲ್ಲಿ ಬಾಲಕರು ಎದುರುಬದುರಿಗೆ ಎರಡುಸಾಲಾಗಿ ನಿಲ್ಲಬೇಕು. ಹೆಚ್ಚು ಮುಖಸ್ತರಾಗಿರುವವರಿಗೆ ಅಂತರವು ಸ್ವಲ್ಪ ಹೆಚ್ಚಿರಬೇಕು. [ಬಾಲಕರ ಮುಂಭಾಗದಲ್ಲಿ ಬೆಂಚುಗಳಿರಕೂಡದು.] ಹೀಗೆ ನಿಲ್ಲಿಸಿದನಂತರ ಒಂದು ಸಾಲಿನವರಿಗೆ ಮಾತ್ರ ಕ್ರಮಪ್ರಕಾರ ಚಂಡುಗಳನ್ನು ಹಂಚಬೇಕು ಒಂದುಸಾಲಿನಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಚಂಡು ಬಂದನಂತರ ಉಪಾಧ್ಯಾಯನು ಎರಡುಸಾಲಿನವರನ್ನೂ ಮೊಳಕಾಲೂರಿ ಕೂಡುವದಕ್ಕೆ ಅಪ್ಪಣೆಕೊಟ್ಟು ಪ್ರತಿಯೊಬ್ಬನೂ ತನ್ನ ಎದುರಿಗಿರುವವನ ಕಡೆಗೆ ಚಂಡನ್ನು ಉರುಳಿಸಬೇಕು. ಎದುರುಸಾಲಿನವರು ಹಾಗೇ ಚಂಡನ್ನು ಉರುಳಿಸಬೇಕು. ಚಂಡುಗಳನ್ನು ಎಸೆಯಬಾರದು. ಈಪ್ರಕಾರ ಬಲಗೈಯಿಂದ ಅಭ್ಯಾಸ ಮಾಡಿಸಿದನಂತರ ಎಡಗೈಯಿಂದಲೂ ಮಾಡಿಸಬೇಕು. [ಸಶೇಷ

ಬಹುದೆಂದು ತಿಳಿಸಬೇಕು. ಬೇರೆಯಾಗಿ ಬರೆದಿರುವ ವ್ಯಾಪಿನಲ್ಲಿ ಈ ಕೆರೆಗಳಿರುವ ಸ್ಥಳವನ್ನು ಪರಿಯೂದ ಆಕಾರದಲ್ಲಿ ಗುರ್ತಿ ಮಾಡಬೇಕು.

ಸಣ್ಣ ಸಣ್ಣ ಗೀರುಗಳಿಂದ ಕೊಡಿ ರುವಂತಾ ರೈಲು ಮಾರ್ಗಗಳು.

ಉ-ಮೈಸೂರು, ಬೆಂಗಳೂರು ತಿಪಟೂರು.

ರೈಲುಮಾರ್ಗದ ಆಕಾರವನ್ನು ಬಾಲಕರೇ ತೋರಿಸುವಂತೆ ಮಾಡಿ. ರೈಲು ಹೋಗಿರುವ ಕೆಲವು ಸ್ಥಳಗಳ ಹೆಸರುಗಳನ್ನು ಅವರಿಂದಲೇ ಹೇಳಿಸಬೇಕು. ಪುನರುಕ್ತಿಯನ್ನು ಮಾಡಬೇಕು. ಬೇರೆ ಬರೆಯಾತಂದಿರುವ ವ್ಯಾಪಿನಲ್ಲಿ ಇದರ ಆಕಾರವನ್ನು ಬರೆದು ತೋರಿಸಬೇಕು. ಮತ್ತು ಚಿಕ್ಕ ಚಿಕ್ಕ ಸ್ಥಳಗಳಿಗೆ ರಸ್ತೆಗಳಿರುವದನ್ನೂ ತಿಳಿಸಬೇಕು.

(೧) ಚೌಕನಾದ ಗುರ್ತಿನ ವೃತ್ತಗಳು ರಾಜಧಾನಿಯು—ಮತ್ತು ಮುಖ್ಯ ಪಟ್ಟಣ.

ಉ-ಮೈಸೂರು, ಬೆಂಗಳೂರು, ಹಾಸನ.

(೨) ಗುಂಡಾದ ಚುಕ್ಕಿಗಳು ಇತರ ಮುಖ್ಯ ಸ್ಥಳಗಳನ್ನು ತೋರಿಸುವವು.

ಉ-ಚನ್ನರಾಯಪಟ್ಟಣ, ಶ್ರವಣಬೆಳಗುಳ, ಅರಸೀಕೆರೆ, ಹಳೇಬೀಡು, ಬೇಲೂರು ಮುಂತಾದವುಗಳು.

ಸ್ವದೇಶಪಠದಲ್ಲಿ ದೊಡ್ಡ ಸ್ಥಳಗಳಿಗೂ ಇತರ ಮುಖ್ಯ ಸ್ಥಳಗಳಿಗೂ ಇರತಕ್ಕ ವ್ಯತ್ಯಾಸವನ್ನು ತೋರ್ಪಡಿಸಬೇಕು. ಇಬ್ಬರು ಮೂವರು ಬಾಲಕರಿಂದ ಹೇಳಿಸಬೇಕು. ಹರಿಗೆಯಮೇಲೆ ಕೆಲವು ಸ್ಥಳಗಳನ್ನು ಅವುಗಳಿಗೆ ಕೊಟ್ಟಿರುವ ಗುರ್ತಿನೊಡನೆ ಸೂಚಿಸಬೇಕು. ಬಾಲಕರಿಂದ ಮತ್ತೆ ಕೆಲವು ಸ್ಥಳಗಳಿಗೆ ಗುರ್ತುಗಳನ್ನು ಹಾಕಿಸಬೇಕು.

[ವಿಶೇಷ ವಿಷಯ]

ಮೈಸೂರು ದೇಶದ ವ್ಯಾಪಿನೇ ಮಾತ್ರ ದೊಡ್ಡ ಸ್ಥಳಗಳಿಗೆ ಚೌಕನಾ ಗುರ್ತುಗಳನ್ನೂ ಇತರ ಸ್ಥಳಗಳಿಗೆ ದೊಡ್ಡ ಮತ್ತು ಚಿಕ್ಕ ಚುಕ್ಕಿಗಳನ್ನೂ ಹಾಕಿರುತ್ತೆ. ತಲೂ ಇತರ ವ್ಯಾಪುಗಳಲ್ಲಿ ಮುಖ್ಯಸ್ಥಗಳಿಗೂ ಇತರ ಸ್ಥಳಗಳಿಗೂ ದೊಡ್ಡದಾದ ಮತ್ತು ಚಿಕ್ಕದಾದ ಚುಕ್ಕಿಗಳನ್ನು ಮಾತ್ರವೇ ಹಾಕಿರುವದೆಂತಲೂ ತಿಳಿಯಪಡಿಬೇಕು.

ಒಟ್ಟು ಪುನರಾವರ್ತನೆಯನ್ನು ಮಾಡಬೇಕು.

ಸೂಚನೆ ಮತ್ತು ಸಮಾಚಾರಗಳು

ಮದ್ದಗಿರಿ ತಾಲ್ಲೂಕು ಎ. ವಿ ಸ್ಕೂಲ್ ಹೆಡ್‌ಮಾಸ್ಟರು ಮೆ॥ ಬಿ. ರಂಗರಾಯರೆಂಬುವರಿಗೆ ಪ್ಲೀಡರು ಪ್ರಾಕ್ಟೀಸಿಗಾಗಿ ಒಂದು ವರುಷದ ಪೂರಾ ತಲಬಿನ ಬಿಡ್ಲಿ ರಜಾ ಕೊಟ್ಟಿರುತ್ತೆ. ಮತ್ತು ಈ ಕೆಳಗಿನ ಟ್ರಾನ್ಸ್‌ಫರ್ ಏರ್ಪಾಡುಗಳನ್ನು ಮಾಡಿರುತ್ತೆ.

[೧] ಸರಗೂರು ಹೆಡ್‌ಮಾಸ್ಟರ್ ಮೆ॥ ಎ. ವೆಂಕಟರಾಯ್ಯರಿಗೆ ೬೦ ರೂಪಾಯಿನಿಂದ ಮದ್ದಗಿರಿ ತಾಲ್ಲೂಕು ಎ. ವಿ ಸ್ಕೂಲ್ ಹೆಡ್‌ಮಾಸ್ಟರಾಗಿ ೬೫ ರೂಪಾಯಿನ ತಲಬಿನವರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

[೨] ಶ್ರೀರಂಗಪಟ್ಟಣದ ಎ ವಿ. ಸ್ಕೂಲು ಅ॥ ಮಾ॥ ಎಚ್. ಬಿ ಶೇಷಗಿರಿರಾಯ್ರಿಗೆ ಹ್ಯಾಲಿ ಸಲ್ಲುತ್ತಿರುವ ೬೦ ರೂಪಾಯಿನಮೇಲೆಯೇ ಸರಗೂರು ಎ. ವಿ. ಸ್ಕೂಲು ಹೆ॥ ಮಾಸ್ಟರಾಗಿ ವೊಕರೂರು ಮಾಡಲ್ಪಟ್ಟಿರುತ್ತಾರೆ.

[೩] ಹೆಗ್ಗಡದೇವನಕೋಟೆ ಎ. ವಿ. ಸ್ಕೂಲು ಹೆ॥ಮಾಸ್ಟರಾಗಿರುವ ಆರ್. ಕೃಷ್ಣಯ್ಯಂಗಾರ್ರಿಗೆ ಹ್ಯಾಲಿ ಸಲ್ಲುತ್ತಿರುವ ೬೫ ರೂಪಾಯಿನ ತಲಬಿನಮೇಲೆಯೇ ಶ್ರೀರಂಗಪಟ್ಟಣದ ಎ ವಿ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರಾಗಿ ವೊಕ್ಕರೂರು ಮಾಡಲ್ಪಟ್ಟಿರುತ್ತಾರೆ.

ಮೈಸೂರು ಕನ್ನಡಾಸ್ಕೂಲು ಅಸಿಸ್ಟೆಂಟ್ ಮಾ॥ ಎಸ್. ಕೃಷ್ಣರಾಯರಿಗೆ ಹ್ಯಾಲಿ ಸಲ್ಲುತ್ತಿರುವ ೮೦ ರೂಪಾಯಿ ತಲಬಿನಿಂದ ಹೆಗ್ಗಡದೇವನಕೋಟೆ ಎ. ವಿ ಸ್ಕೂಲ್ ಹೆಡ್‌ಮಾಸ್ಟರಾಗಿ ೬೦ರೂಪಾಯಿ ತಲಬಿನವರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ

ಬೌರಿಂಗ್‌ಪೇಟೆ ಎ. ವಿ. ಸ್ಕೂಲು ಅ॥ ಮಾಸ್ಟರ್ ಮೆ॥ ಸಿ. ಸುಬ್ಬಪ್ಪನವರಿಗೆ ಪ್ಲೀಡರ್ ಪ್ರಾಕ್ಟೀಸಿಗಾಗಿ ಒಂದು ವರುಷಗಳ ಪೂರ್ತಿ ತಲಬಿನ ಬಿಡ್ಲಿ ರಜಾ ಕೊಟ್ಟಿರುತ್ತೆ. ಮತ್ತು ಈ ಕೆಳಗಿನ ಟ್ರಾನ್ಸ್‌ಫರ್ ಏರ್ಪಾಡುಗಳು ಮಾಡಲ್ಪಟ್ಟಿರುತ್ತೆ

[೧] ಶ್ರೀರಂಗಪಟ್ಟಣದ ಎ ವಿ ಸ್ಕೂಲ್ ಹೆಡ್‌ಮಾ॥ ಮೆ॥ ಎಂ. ಆರ್ ಶೇಷಗಿರಿರಾಯರಿಗೆ ೫೫ ರೂಪಾಯಿತಲಬಿನಿಂದ ೪೦ ರೂಪಾಯಿನ ತಲಬೂ ಮತ್ತು ೬ ರೂಪಾಯಿನ ಅಲೋವೆನ್ಸ್‌ನಿಂದ ಬೌರಿಂಗ್‌ಪೇಟೆ ಎ. ವಿ ಸ್ಕೂಲು ಹೆಡ್‌ಮಾಸ್ಟರಾಗಿ ವೊಕರೂರು ಮಾಡಲ್ಪಟ್ಟಿರುತ್ತಾರೆ.

ದೊಡ್ಡಬಳ್ಳಾಪುರದ ಎ ವಿ. ಸ್ಕೂಲ್ ಹೆಡ್‌ಮಾಸ್ಟರು ಮೆ॥ ಡಿ. ಕೊಂಗಾಡಿಯಪ್ಪನವರಿಗೆ ೩೦ ರೂಪಾಯಿ ತಲಬಿನಿಂದ ೩೫ ರೂಪಾಯಿಗೆ ಪ್ರಮೋಷನ್ ಮಾಡಿರುತ್ತೆ.

ಹೊಳೆನರಸೀಪುರದ ಎ ವಿ ಸ್ಕೂಲ್ ಹೆಡ್‌ಮಾಸ್ಟರ್ ವೆ॥ ಎಂ. ಸಂಗತ್ತೈಯ್ಯಂಗಾರ್ರಿಗೆ ೬೫ ರೂಪಾಯಿನ ತಲಬಿನಿಂದ ೩೦ ರೂಪಾಯಿ ಪ್ರಮೋಷನ್ ಮಾಡಿರುತ್ತೆ.

	ಅಆ	ಣಈ	ಉಳ	ಹದ್ದು.
	ಅಹ	ಉಲೂ	ಕಖ	
	ಗಘ	ಚಛ	ಜರ್ಝ	
	ಟಠ	ಡಢ	ಣನ	
ಹಸು.	ತಥ	ದಧ	ಪಫ	ತಕ್ಕಡಿ.
	ಬಭ	ಜಝ	ಮಯಮೂ	
	ಶಷಸ	ಎಏಐ	ಒಓಔ	

ಸೂ. ೧. ಈ ಪಾಠದಲ್ಲಿ ಕೊಟ್ಟಿರುವ ಅಕ್ಷರಗಳ ಉಚ್ಚಾರಣೆಯನ್ನೂ, ಅವುಗಳಿಂದ ತೋರುವ ಭೇದಗಳನ್ನೂ ಬೋಧಕರು ತಿಳಿಸಿಕೊಟ್ಟು ಉದಾಹರಣೆಗಳನ್ನು ಹೇಳಿಸಬೇಕು. ಇವುಗಳ ಭೇದವು ಗೊತ್ತಾದರೆ ವಾ

ದನ ಧನ ಮಳೆ ಬರ ಹಂಗ

ಡ, ಜಣ, ಬಳೆ ಇವುಗಳನ್ನು ತಪ್ಪಿಲ್ಲದೆ ಬರೆಯಿರಿ.

ಕತ್ತ, ಜನ, ಬಲ.

೨. ತ ದ ಮ ಜ ವ ಳ ಇವುಗಳಲ್ಲಿ ಪ್ರತಿಯೊಂದೂ ಬೇರೆಬೇರೆ ಬರೆದು ಅವರ ಜತೆಯಲ್ಲಿ ನ ಬರೆದು ಓದು. ತನ, ದನ, ಮನ, ಹೀಗೆಯೇ

೩. ಗ ಇದನ್ನು ರ ಥರ ಮಾಡು. ಇದರಪಕ್ಕದಲ್ಲಿ ೯ ಸೊನ್ನೆ ಬರಿ. ಏನಾಯಿತು?

೪. ದನನ, ನಕಲ, ಗರಳ, ಜತನ ಇವುಗಳನ್ನು ಓದಿರಿ.

೫. ಕವನ, ಬಹಳ, ಹಳಬ, ನರಸ ಇವುಗಳನ್ನು ಬರೆಯಿರಿ.

ಮೈಸೂರು ಗೌರ್ನಮೆಂಟು ಟ್ರೇಯಿಂಗ್ ಲೈಬ್ರರಿಯಲ್ಲಿ ಈ ಕೆಳಗೆ ಕಂಡ ಕೆಲಸವನ್ನೂ, ಮತ್ತು ಪ್ರಮೋಷ್‌ಗಳನ್ನೂ ಕೂಡ ಗೌರ್ನಮೆಂಟಿನವರು ಸ್ವಾಂ ಕ್ಷನ್ ಮಾಡಿರುತ್ತಾರೆ.

[೧] ಟ್ರಾವಲಿಂಗ್ ಪಂಡಿತರು ಮ|| ಪಂಡಿತರತ್ನಂ ಕಸ್ತೂರಿರಂಗಾಚಾರ್ಯರಿಗೆ ೬೦—೧೦೦ ರವರೆಗೆ.

[೨] ಅಸಿಸ್ಟೆಂಟ್ ಪಂಡಿತರು ಮ|| ಅರ್. ಶೇಷಶಾಸ್ತ್ರಿ ಬಿ. ಎ. ಯವರಿಗೆ ೬೦—೧೦೦

[೩] ಲೆಬರಿಯರ್ ಮ|| ಎಸ್. ಜಿ. ನರಸಿಂಹಾಚಾರ್ಯರಿಗೆ ೬೦—೧೦೦.

ಚಿಕ್ಕನಾಯಕನಹಳ್ಳಿ ತಾ|| ಕಂದಿಕೆರೆ ಸ್ಕೂಲ್.

ಈ ಗ್ರಾಮದಲ್ಲಿ ಸ್ಕೂಲ್ ಸ್ಥಾಪಿತವಾದ ೬೫ ವರುಷಗಳ ಲಾಗಾಯಿತು ಆ ಬಿಲ್ಡಿಂಗೂ ಸ್ಕೂಲಿಗೆ ಸರಿಯಾದ ಕಟ್ಟಡವಿಲ್ಲದೆ ಸ್ಕೂಲೇ ಮನೆಯಿಂದ ಮನೆಗೆ ಅಲೆಯುತ್ತಿತ್ತು. ಹೀಗಿದ್ದಾಗ್ಯೂ ಸ್ಕೂಲಿನ ೪ ಭಾಗ ವಿದ್ಯಾಭಿವೃದ್ಧಿಯು ವೃದ್ಧಿಯನ್ನು ಹೊಂದುತ್ತಾ ಈಗ ೪ ವರ್ಷಗಳಿಂದಲೂ, ಲೋವರ್‌ಸೆಕಂಡರಿ ಪರೀಕ್ಷೆಯಲ್ಲಿ ಹುಡುಗರು ತೇರ್ಗಡೆಯವಾಗುತ್ತಾ ಖ್ಯಾತಿಯನ್ನು ಪಡೆಯುತ್ತಿದೆ.

ಈ ಗ್ರಾಮದವರಲ್ಲರ ವ ಮ|| ರಾ|| ಬೆಳ್ಳಾರದ ಶಾನುಭೋಗ ಭೈರಪ್ಪನವರು ಈ ದುರ್ದಶೆಯನ್ನು ಹೋಗಲಾಡಿಸಬೇಕೆಂದು ಯೋಚಿಸಿ, ಗ್ರಾಮದ ಮಧ್ಯದಲ್ಲಿ ಬೈಲಾದ ಸ್ಥಳವನ್ನು ಕ್ರಯಕ್ಕೆ ತೆಗೆದುಕೊಂಡು ಸ್ವಂತವಾಗಿ ಮುನ್ನೂರು ರೂಪಾಯಿವರೆಗೂ ಖರ್ಚಿಟ್ಟು ಲಾಯಖಾದ ಒಂದು ಕಟ್ಟಡವನ್ನ ಕಟ್ಟಿಸಿ ಸ್ಕೂಲಿಗೆ ಧರ್ಮಾರ್ಥವಾಗಿ ಕೊಡುವದಾಗಿ ಇಲಾಖಾಧ್ಯಕ್ಷರ ಅಪ್ಪಣೆಯನ್ನು ಪಡೆದು ಒಪ್ಪಿಸಿದರು.

ಈ ಹೊಸಕಟ್ಟಡದಲ್ಲಿ ಕಳೆದ ನವೆಂಬರ್ ತಾರೀಖು ೭೩ ನೇ ಸೋಮವಾರ ಮಧ್ಯಾಹ್ನ ಈ ತಾಲ್ಲೂಕ್ ಅವಲ್ದಾರ್ ಮ|| ರಾ|| ಶ್ರೀ ಟಿ. ಜೊಕ್ಕಯ್ಯಂಗಾರ್, ಬಿ. ಎ. ಯವರು ದಯಮಾಡಿಸಿ ಸಭಾಧ್ಯಕ್ಷರಾಗಿ ಮ|| ರಾ|| ಬೈರಪ್ಪನವರಿಂದ ಒಪ್ಪಿಸಲ್ಪಟ್ಟ ಹೊಸಕಟ್ಟಡದಲ್ಲಿ ಸ್ಕೂಲನ್ನು ಸ್ಥಾಪಿಸಿದರು.

ಈ ಸಭೆಯಲ್ಲಿ ಮ|| ರಾ|| ಬೈರಪ್ಪನವರು ಮನೆಯಲ್ಲಿ ಸ್ಕೂಲನ್ನು ಮಾಡುವದಕ್ಕೆ ಸರ್ಕಾರಕ್ಕೆ ಒಪ್ಪಿಸಿರುವದಾಗಿ ಲೆಕ್ಚರ್ ಹೇಳಿದನಂತರ ಸ್ಕೂಲ್ ಹೆಡ್ಮಾಸ್ಟರ್ ಹೆಚ್. ರಾಮಣ್ಣನವರು ಮೂರು ಲಾ|| ಉಳ್ಳ ಸ್ಕೂಲಿನ ರಿಪೋರ್ಟನ್ನು ಓದಿದರು.

ಅನಂತರದಲ್ಲಿ ಹೊಸಕಟ್ಟಡ ಪರವಾಗಿಯೂ, ಸಭಾಧ್ಯಕ್ಷರ ಪರವಾಗಿಯೂ ಶಾ|| ಭೈರಪ್ಪನವರ ಧರ್ಮಗುಣಪರವಾಗಿಯೂ ಹೆಡ್ಮಾಸ್ಟರು ರಚಿಸಿದ್ದ ವೃತ್ತ, ಕಂದ, ಹಾಡುಗಳನ್ನು ಹಾಡಿದರು. ನಂತರ ಮ|| ರಾ|| ಶ್ರೀ ಡಿ|| ಇ|| ಯವರಿಂದ ವಿದ್ಯಾ

ವೆ॥ ಬಿ. ವೆಂಕಟರಾವ್ ಬಿ. ಎ. ಯವರು ೨೫ ರೂಪಾಯಿನ ತಲಬಿನ ೨೯೮ ಶ್ರೀರಂಗಪಟ್ಟಣದ ಎ ವಿ. ಸ್ಕೂಲ್ ಹೆಡ್‌ಮಾಸ್ಟರಾಗಿ ವೊಕರೂರು ಮಾಡಲ್ಪಟ್ಟರುತ್ತಾರೆ.

ಸೌ॥ ಎಂ. ಲಕ್ಷ್ಮಿದೇವಮ್ಮನವರು ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯರಾಗಿ ೧೦೦ ರೂಪಾಯಿನ ತಲಬಿನಮೇಲೆ ಪ್ರೊಬೇಷನರಿಯರಾಗಿ ವೊಕರೂರು ಮಾಡಲ್ಪಟ್ಟರುತ್ತಾರೆ.

ಈ ಕೆಳಿಗೆ ಕಾಣಿಸುವ ಕೆಲಸಗಳನ್ನೂ ಮತ್ತು ಬಡತಿಗಳನ್ನೂ ಮಹಾರಾಣೀ ಗರ್ಲ್‌ಸ್ಕೂಲ್ ಮಾಸ್ಟರುಗಳಿಗೆ ತಾ॥ ೧ ಅ. ೧೯೦೦ ರ ಲಾಗಾಯಿತು ವೊಕರೂರು ಮಾಡಲ್ಪಟ್ಟಿರುತ್ತೆ.

[೧] ಮು॥ ರಾ॥ ಹೆಡ್. ಕೃಷ್ಣಾಚಾರ್ ಬಿ. ಎ. ೩೮ ರೂ. ಇಂದ ೪೦ ವರಿಗೆ.
[೨] ಅಸಿಸ್ಟೆಂಟ್ ಮಾಸ್ಟರ್ ಮು॥ ಕೃಷ್ಣಯ್ಯಂಗಾರಿಗೆ ೩೦ ರೂ. ಇಂದ ೩೫ ರೂ. ವರಿಗೆ ಬಡತಿ ಮಾಡಲ್ಪಟ್ಟಿರುತ್ತೆ.

[೩]	ಸೌ॥ ಚಲ್ಲಮ್ಮನವರಿಗೆ	೩೦—೪೦
[೪]	ಡಿಜಿ-ಮೆ॥ ಜನಾರ್ದನರಾಯರಿಗೆ	೨೫—೩೦
[೫]	ಮು॥ ಎಸ್. ಜೀವಣ್ಣರಾಯರಿಗೆ	೨೨—೨೩
[೬]	ಮು॥ ಟಿ. ವೇದಾಂತಯ್ಯರಿಗೆ	೨೧—೨೫
[೭]	ಮು॥ ಬಿ. ಲಕ್ಷ್ಮೀನಾರಾಯಣಶಾಸ್ತ್ರಿಗಳಿಗೆ	೧೯—೨೧
[೮]	ಮು॥ ವೆಂಕಟನಾರಾಯಣಶಾಸ್ತ್ರಿಗಳಿಗೆ	೧೫—೧೭
[೯]	ಅಸಿಸ್ಟೆಂಟ್‌ಮಾಸ್ಟರ್ ಮು॥ ಕೆ. ನರಸಿಂಹಾಚಾರಿಗೆ	೧೫—೧೭
[೧೦]	ಮು॥ ಸುಂದರಶಾಸ್ತ್ರಿಗಳಿಗೆ	೧೫—೧೪
[೧೧]	ಮು॥ ಎ. ಬಾಲಾಜಿರಾಯರಿಗೆ	೪೫—೫೦

[೧೨] ಮು॥ ಕೆ. ಪರಮೇಶ್ವರಯ್ಯರಿಗೆ ತಲಬು ೩೫ ರೂಪಾಯಿ ೧೫ ರೂ ಪಾಯಿ ಅಲೋವೆನ್ಸಿನಿಂದ ೫೫ ರೂ. ತಲಬು, ೨೫ ರೂಪಾಯಿ ಅಲೋವೆನ್ಸ್ ವೊಕರೂರು ಮಾಡಲ್ಪಟ್ಟಿರುತ್ತೆ.

ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆ ಸಹಾಯೋಪಾಧ್ಯಾಯಿನಿ ಸೌ॥ ಡಿ. ಸೀತಮ್ಮನವರು ಹಾಲಿ ಅವರ ತಲಬಿನ ಅರ್ಥ ೧೦ ರೂಪಾಯಿಗಳಮೇಲೆ ಮಹಾರಾಣಿ ಗರ್ಲ್‌ಸ್ಕೂಲಿನಲ್ಲಿ ಎಲ್. ಎಸ್. ಟ್ರೇನಿಂಗ್‌ಕ್ಲಾಸಿನಲ್ಲಿ ಅವರು ತರಪೇತು ಆಗುವವರಿಗೂ ಹೋಗಿ ಓದಲು ಅಪ್ಪಣೆ ಕೊಡಲ್ಪಟ್ಟಿರುತ್ತೆ. ಮತ್ತು ಅವರು ಓದುತ್ತಾ ಇರುವ ಕಾಲವನ್ನೆಲ್ಲಾ ಪೆರ್ಮೆ ಲೀಪ್ಟಿಗೆ ಸೇರಲು ಅನುಕೂಲಿಸುವಂತೆ ಅವರ ಸರ್ವಿಸನ್ನು ಎಣಿಸಲ್ಪಡುತ್ತೆ.

ವಿದ್ಯಾದಾಯಿನಿ

ಭಾಗ V.] ಮಾರ್ಚಿ ೧೯೦೦. [ಸಂಚಿಕೆ ೩.

ಎಡಿಟರವರ ನೋಟ್ಸ್.

ಬೊಂಬಾಯಿಪಟ್ಟಣದಲ್ಲಿರುವ ಪ್ರಸಿದ್ಧರಾದ ಮೆ॥ ತಾತಾಸಾಹೇಬರು ಹಿಂದೂದೇಶದಲ್ಲಿ ಪಾಶ್ಚಾತ್ಯವಿದ್ಯಾಭ್ಯಾಸಕ್ಕೆ ವಿಶೇಷವಾದ ಅನುಕೂಲವಾಗುವುದಕ್ಕಾಗಿ ಒಂದು ವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಮೂವತ್ತುಲಕ್ಷ ರೂಪಾಯಿಯನ್ನು ಕೊಟ್ಟಿರುವುದಾಗಿ ಈ ಪತ್ರಿಕೆಯ ಹಿಂದಿನ ಸಂಚಿಕೆಗಳಲ್ಲೊಂದರಲ್ಲಿ ತಿಳಿಸಿದ್ದೇವೆ. ಈ ವಿದ್ಯಾಲಯವನ್ನು ಎಲ್ಲಿ ಸ್ಥಾಪಿಸಬೇಕೆಂಬ ವಿಷಯದಲ್ಲಿ ಚರ್ಚೆಯು ನಡೆಯುತ್ತಿತ್ತು. ಈಚೆಗೆ ಬೆಂಗಳೂರಿನಲ್ಲೇ ಇದನ್ನು ಸ್ಥಾಪಿಸುವಹಾಗೂ ಅದಕ್ಕಾಗಿ ಮೈಸೂರು ಸರ್ಕಾರವರು ಮುನ್ನೂರು ಎಕರೆ ನಿವೇಶನವನ್ನು, ಐದು ಆರುಲಕ್ಷರೂಪಾಯಿಗಳನ್ನೂ ಕೊಡುವ ಹಾಗೂ ನಿಶ್ಚಯಿಸಿರುವಂತೆ ಕೇಳುತ್ತೇವೆ. ಇದು ನಮ್ಮ ಮೈಸೂರು ಸಂಸ್ಥಾನದವರು ವಿಶೇಷವಾಗಿ ಸಂತೋಷಪಡತಕ್ಕ ವಿಷಯ. ಮೈಸೂರು ದೇಶದಲ್ಲಿನ ಪಾಶ್ಚಾತ್ಯವಿದ್ಯಾರ್ಥಿಗಳ ವ್ಯಾಸಂಗಕ್ಕೆ ಇದು ಅತ್ಯಂತ ಅನುಕೂಲವನ್ನುಂಟುಮಾಡುವುದು. ಇದರಿಂದ ಈ ದೇಶದ ಪುರೋಭಿವೃದ್ಧಿಗೆ ದೊಡ್ಡ ಸಹಾಯವಾಗುವುದು. ಹವಾಮುಂತಾದ ಗುಣಗಳು ಸರಿಯಾಗಿರುವುದರಿಂದ ಮೆ॥ತಾತಾಸಾಹೇಬರ ವಿದ್ಯಾಲಯಕ್ಕೆ ಉಚಿತವಾದ ಸ್ಥಳವೂ ದೊರಕಿದಂತಾಯಿತು.

***

ಈಗ ಹತ್ತಾರುವರ್ಷಗಳ ಹಿಂದೆ ಸ್ತ್ರೀವಿದ್ಯಾಭ್ಯಾಸವು ಇಷ್ಟು ಬೇಗ ಉನ್ನತಸ್ಥಿತಿಗೆ ಬರುವುದೆಂದು ಯಾರಿಗೂ ನಂಬುವುದಕ್ಕಾಗುತ್ತಿರಲಿಲ್ಲ. ಆದರೂ ಈಗ ಹಿಂದೂದೇಶದಲ್ಲಿ ನಡೆಯುತ್ತಿರುವ ಸ್ತ್ರೀವಿದ್ಯಾಭ್ಯಾಸವನ್ನು ಕುರಿತು ಪರ್ಯಾಲೋಚಿಸಿದರೆ ಕ್ರಮವಾಗಿ ಶ್ರದ್ಧೆಯಿಂದ ಕೆಲಸಮಾಡುವವರಿಗೆ ಸ್ವಲ್ಪಕಾಲದಲ್ಲೇ ವಿಶೇಷವಾದ

ರ್ಥಿಗಳಿಗೆ ಕಳುಹಿಸಲ್ಪಟ್ಟಿದ್ದ ಪ್ರೈಜ್ ಪುಸ್ತಕಗಳನ್ನು ಸಭಾಧ್ಯಕ್ಷರು ಹಂಚಿ ಶಾ॥ ಭೈರಪ್ಪನವರ ಧರ್ಮಗುಣವನ್ನೂ, ಕಟ್ಟಡವನ್ನೂ ಶ್ಲಾಘಿಸಿ ಗ್ರಾಮಸ್ಥರಿಗೂ ವಿದ್ಯಾರ್ಥಿಗಳಿಗೂ ಬುದ್ಧಿಪ್ರೇರಣೆಯುಳ್ಳ ಲೆಕ್ಚರ್ ಹೇಳಿದರು.

ಈ ಇಲಾಖಾಧ್ಯಕ್ಷರೂ ಸಭಾಧ್ಯಕ್ಷರೂ ಭೈರಪ್ಪನವರ ವಿದ್ಯಾಪಕ್ಷಪಾತದ ಧರ್ಮಗುಣಕ್ಕೆ ಕೃತಜ್ಞರಾಗಿ ಬಹಳ ಸಂತೋಷಪಡುತ್ತಾರೆ ಇವರಿಗೆ ಸಂಪತ್ಸಮೃದ್ಧಿಯು ವೃದ್ಧಿಯಾಗಿ ವೃದ್ಧಿಹೊಂದಲೆಂದು ಸರ್ವರೂ ಹಾರೈಸುತ್ತೇವೆ. ನಂತರ ಗಂಧ, ಪುಷ್ಪ, ತಾಂಬೂಲ, ಸಕ್ಕರೆ ಹಂಚಿ ಸಭೆಯು ಬರಖಾಸ್ತಾಯಿತು.

ಕಥೆ

ಒಬ್ಬ ಸರದಾರನು ತನ್ನ ಬಂಗಲೆಯಲ್ಲಿ ನಾಯಿ, ನರಿ, ಬೆಕ್ಕು ಇವು ಮೂರನ್ನೂ ಸಾಕುತಿದ್ದನು. ಸಾಕಿದ ನರಿಯಾಗಿದ್ದರಿಂದ ನಾಯಿಯೊಡನೆ ಸ್ನೇಹ ಬೆಳಸಿಕೊಂಡಿತ್ತು. ನರಿಯು ಎಷ್ಟೆಷ್ಟು ಉಪಾಯವನ್ಮಾಡಿದಾಗ್ಯೂ, ಬೆಕ್ಕು ಮಾತ್ರ ಅದರ ಹತ್ತಿರ ಸೇರದು. ಬೆಕ್ಕಿಗೆ ನರಿಯ ವಾಸನೆಯನ್ನು ಕಂಡರೆ ಆಗುತ್ತಿರಲಿಲ್ಲ. ಅದು ವಾಸಿಸುತ್ತಿದ್ದಕಡೆಯಲ್ಲಿ ಇದು ಸುಳಿಯುತ್ತಿದ್ದಿಲ್ಲ ಅದು ಯಾವದನ್ನಾದರೂ ಮುಟ್ಟಿದ್ದರೆ ಸಾಕು—ಇದು ನರಿಯ ವಾಸನೆಯೆಂದು ಗೊತ್ತುಮಾಡಬಲ್ಲದು. ನರಿಯು ನಾಯಿಯೊಡನೆ ಸೇರಿಕೊಂಡು ಬೆಕ್ಕನ್ನು ಅಟವಾಡಲಿಕ್ಕೆ ಕರೆದಾಗ, ಬೆಕ್ಕು ಹೋಗುತಿರಲಿಲ್ಲ. ನರಿಗೆ ಇದಕ್ಕಾಗಿ ಕೋಪಬಂದು, ಬೆಕ್ಕಿಗೆ ಹಿಂಸೆಮಾಡಬೇಕೆಂದು ಎಣಿಸಿ, ಬೆಕ್ಕು ಕುಡಿಯುವುದಕ್ಕಾಗಿ ಹಾಲು ಇಟ್ಟಿದ್ದರೆ ನರಿಯು ಬೇಗಹೋಗಿ ಆ ಹಾಲಿನಪಾತ್ರೆಗೆ ಬಾಯಿಹಾಕಿಬಿಟ್ಟು ಬರುವುದು; ಅದು ಮಲಗಿಕೊಳ್ಳುವ ಸ್ಥಳಕ್ಕೆ ಹೋಗಿ ಅದಿಲ್ಲದೆ ಇರುವಾಗ ತಾನು ಒಂದು ಗಳಿಗೆ ಬಿದ್ದಿದ್ದು ಓಡಿಬರುವುದು. ಹೀಗೆ ಮಾಡುವದಕ್ಕೆ ಪೂರ್ತಿಯಾಗಿಡಿತ. ಬೆಕ್ಕು ಹಾಲು ಮುಟ್ಟುತಲೇ ಇರಲಿಲ್ಲ. ಆ ಹಾಲನ್ನು ನಾಯಿಯೂ ಈ ನರಿಯೂ ಹಂಚಿಕೊಳ್ಳುತಿತ್ತು. ಕೊನೆಗೆ ಬೆಕ್ಕು ಹಾಲು ಮುಟ್ಟದೆ ಇರುವುದಕ್ಕೆ ಕಾರಣವನ್ನು ತಿಳಿದು, ಹಾಲಿನ ಪಾತ್ರೆಯನ್ನು ನರಿಗೆ ಸಿಕ್ಕದಹಾಗೆ ಕಾವಲುಗಾರರು ಮೇಲುಗಡೆ ಇಡುತಿದ್ದರು. ಇದನ್ನು ಕಂಡುಕೊಂಡು ನರಿಯು, ಆ ಹಾಲು ಹಾಕುವವನು ಹೋಗುತಲಿದ್ದಾಗ ಅವನನ್ನು ಮುಟ್ಟಿಕೊಂಡು ಹೋಗಲಿಕ್ಕೆ ಆರಂಭಿಸಿತು. ಈ ನರಿಯ ವಾಸನೆಬಂದರೆ ಸಾಕು, ಬೆಕ್ಕು ಮುಟ್ಟುತಿರಲಿಲ್ಲ. ನರಿಯು ಉಪಾಯವನ್ನು ನೋಡಿ ಕಾವಲುಗಾರರು ಆ ಹಾಲನ್ನು ನರಿಗೆ ಕೊಡದೆ ನರಿಯು ಎದುರಿಗೆ ಬೀದಿಯಲ್ಲಿ ಹೋಗುವ ಇನ್ನೊಂದು ನಾಯಿಯನ್ನು ಹಿಡಿದುಕೊಂಡು ಬಂದು, ಕುಡಿಸುತಿದ್ದರು. ನರಿಯು ಸಂಕಟಪಟ್ಟುಕೊಂಡು, ತನಗೆ ಇಲ್ಲದವದಾರ್ಥ ಯಾರಿಗಾದರೆ ಏನು? ಎಂದುಕೊಂಡು, ಬೆಕ್ಕು ಕುಡಿಯುತಿದ್ದ ಹಾಲಿನ ಗೋಜಿಗೆ ಹೋಗದೆ ಸುಮ್ಮನಾಯಿತು.

ಮಕ್ಕಳಿಗೆ ಪಾಠಹೇಳುವ ಕ್ರಮ

ಮಕ್ಕಳಿಗೆ ಪಾಠಹೇಳುವದಕ್ಕೆ ಎಲ್ಲರೂ ಸಮರ್ಥರಲ್ಲ. ಬರೀ ಪಾಂಡಿತ್ಯದಿಂದ ಈ ಶಕ್ತಿಯು ಬರುವದಿಲ್ಲ. ಮಕ್ಕಳಬುದ್ಧಿ ಶಕ್ತಿಯನ್ನು ಪರೀಕ್ಷಿಸಿ ಪಾಠ ಹೇಳಬೇಕಾಗುತ್ತದೆ. ನಾವು ಹೇಳತಕ್ಕದ್ದು ಅವರ ಗ್ರಹಣಶಕ್ತಿಗೆ ಅನುಸಾರವಾಗಿರಬೇಕು. ಹೆಚ್ಚಾಗಿ ಹೇಳಿದ ವಿಷಯಗಳು ಅವರಿಂದ ಗ್ರಹಿಸಲ್ಪಡುವದಿಲ್ಲ. ಮಕ್ಕಳಿಗೆ ಹೇಳತಕ್ಕ ಪಾಠ ಪ್ರವಚನೆಗಳು ಸುಲಭವಾಗಿರಬೇಕು. ಪ್ರಶ್ನೆಗಳನ್ನು ಹಾಕಿ ಅವರ ಸ್ವಬುದ್ಧಿಯಿಂದ ಉತ್ತರಗಳು ಬರುವಂತೆ ಮಾಡಬೇಕು. ಪುಸ್ತಕಗಳನ್ನು ಕೊಟ್ಟು ಗಟ್ಟಿಮಾಡಿಸತಕ್ಕದ್ದು ಪ್ರಯೋಜನಕಾರಿಯಾವದಲ್ಲ. ವಿದಾಭ್ಯಾಸ ಮಾಡಿಸುವದೆಂದರೆ ಮಕ್ಕಳು ತಾವಾಗಿ ಯೋಚಿಸಿ ಉತ್ತರ ಕೊಡುವಂತೆ ಮಾಡುವದೆಂದು ಪಾಠಕರು ಯಾವಾಗ್ಯೂ ತಿಳಿದುಕೆ ೦ಡಿರಬೇಕ.. ಭಾಷೆಯನ್ನು ಕಲಿಸುವದರಲ್ಲಿಯೂ ಸುಲಭವಾದ ಮಾರ್ಗ ಉಂಟು. ಪುಸ್ತಕಗಳನ್ನು ಕೊಟ್ಟು ಪಾಠಗಳನ್ನು ಗಟ್ಟಿ ಮಾಡಿಸಿದರೆ ಭಾಷೆಯು ಎಷ್ಟುಬೇಗ ಸಾಧ್ಯವಾಗುವದೊಶಬ್ದ ಗಳನ್ನು ಕೊಟ್ಟು ಅವುಗಳಿಂದ ವಾಕ್ಯಗಳನ್ನು ಮಾಡಿಸುವ ಪ್ರಯತ್ನವನ್ನು ಮಾಡಿ ಪ್ರಶ್ನೋತ್ತರಗಳ ಮೂಲಕ ಭಾಷೆಯನ್ನು ಕಲಿಸುವದು ಸುಲಭ. ಭಾಷೆಯನ್ನು ಕಲಿಸುವದರಲ್ಲಿಯೂ ಕೂಡ ಪಾಠಕರು ವಿದ್ಯಾರ್ಥಿಯ ಸ್ವಭಾಷೆಗೂ ಅವನು ಕಲಿಯುವದಕ್ಕುಪಕ್ರಮಿಸಿರತಕ್ಕ ಅನ್ಯಭಾಷೆಗೂ ಇರತಕ್ಕ ವೈಲಕ್ಷಣ್ಯಗಳನ್ನು ಉದಾಹರಣೆಗಳ ಮೂಲಕ ಪ್ರತ್ಯಕ್ಷವಾಗಿ ತೋರಿಸಿ ವಿದ್ಯಾರ್ಥಿಗೆ ತಿಳಿದ ಭಾಷೆಯಲ್ಲಿ ಶಬ್ದಗಳನ್ನು ವಾಕ್ಯಗಳನ್ನೂ ಹೇಳಿ ಅವನು ಅಭ್ಯಾಸ ಮಾಡತಕ್ಕ ಇತರಭಾಷೆಯಲ್ಲಿ ಈ ಶಬ್ದಗಳಿಗೆ ಪ್ರತಿಪದಗಳನ್ನು ಹೇಳಿಕೊಟ್ಟು ಆ ಭಾಷೆಯು ಸಂಕೇತಕ್ಕನುಸಾರವಾಗಿ ವಾಕ್ಯಗಳನ್ನು ಮಾಡಿಸುತ್ತಾ ಬರಬೇಕು ಈ ರೀತಿಯಲ್ಲಿ ಭಾಷಾಂತರ ಮಾಡಿಸುವದು ಅನ್ಯಭಾಷಾಜ್ಞಾನಕ್ಕೆ ಮುಖ್ಯ ಸಾಧಕ ವಾದದ್ದು. ತಿಳಿದ ಭಾಷೆಯಿಂದ ಅಭ್ಯಾಸ ಮಾಡುವ ಭಾಷೆಗೂ ಆ ಭಾಷೆಯಿಂದ ಸ್ವಭಾಷೆಗೂ ಪರಿವರ್ತನವನ್ನು ಮಾಡುತ್ತಾ ಇರುವದೇ ಭಾಷಾಜ್ಞಾನಕ್ಕೆ ಮುಖ್ಯಸಾಧನವು. ಈ ಪರಿವರ್ತನವು ಮೊದಲಿನಲ್ಲಿ ಬಹಳ ಅಸಮರ್ಪಕವಾಗಿರುವದು. ಇದರಲ್ಲಿ ಪ್ರತಿಬಂದು ಶಬ್ದವನ್ನೂ ವಾಕ್ಯವನ್ನೂ ತೆಗೆದುಕೊಂಡು ಪ್ರಶ್ನೆಗಳನ್ನು ಹಾಕಿ ತಪ್ಪುಗಳನ್ನೂ ಮಕ್ಕಳ ಕೈಯ್ಯಲ್ಲಿಯೇ ತಿದ್ದಿ

ಫಲವು ದೊರೆಯುವುದೆಂದು ಚೆನ್ನಾಗಿ ತಿಳಿಯುಬರುವುದು. ಮೈಸೂರು ಪಟ್ಟಣದಲ್ಲಿ
ರುವ ಮಹಾರಾಣೀ ಬಾಲಿಕಾ ಪಾಠಶಾಲೆಯಲ್ಲಿ ನಡೆಯುತಿರುವ ವಿದ್ಯಾಭ್ಯಾಸದ ವಿಷ
ಯವಾಗಿ ನಾವು ಈ ಪತ್ರಿಕೆಯಲ್ಲಿ ಪದೇಪದೇ ಬರೆಯುತಿದ್ದೇವೆ. ಹೀಗೆಯೇ ಹಿಂದೂ
ದೇಶದ ಇತರ ಭಾಗಗಳಲ್ಲೂ ಸ್ತ್ರೀವಿದ್ಯಾಭ್ಯಾಸವು ವೃದ್ಧಿಯಾಗುತಿದೆ ಕಳೆದ ಜನ
ವರಿ ತಿಂಗಳಲ್ಲಿ ಬರೋಡಾ ಸಂಸ್ಥಾನದ ಮಹಾರಾಣಿಯವರು ಸ್ತ್ರೀವಿದ್ಯಾಭ್ಯಾಸವ
ನ್ನು ಕುರಿತು ಅಲ್ಲಿನ ಬಾಲಕಿಯರಿಗೆ ಒಂದು ಉಪನ್ಯಾಸವಮಾಡಿದರು. ಸಾವಿರದೈನೂ
ರುಮಂದಿಗಿಂತಲೂ ಹೆಚ್ಚಾಗಿ ಬಾಲಕಿಯರು. ದೊಡ್ಡ ಹೆಂಗಸರೂ ಸೇರಿದ್ದರಂತೆ
ಬರೋಡಾ ಮಹಾರಾಣಿಯವರು ಇದುವರೆಗೆ ನಡೆದಿರುವ ಸ್ತ್ರೀವಿದ್ಯಾಭ್ಯಾಸಾಭಿವೃ
ದ್ಧಿಯನ್ನು, ಸ್ತ್ರೀವಿದ್ಯಾಭ್ಯಾಸವನ್ನುಡಿಸುವವರಿಗಿರಬೇಕಾದ ಉದ್ದೇಶವನ್ನು ಕುರಿತು
ಉಪನ್ಯಾಸವಮಾಡಿದರು. ಸರಿಯಾಗಿ ಮಾತ್ರ ವಿದ್ಯಾಭ್ಯಾಸ ನಡೆದರೆ ನಮ್ಮ ದೇಶದ
ಸ್ತ್ರೀಯರು ಎಷ್ಟುಮಟ್ಟಿಗೆ ಬುದ್ಧಿವಂತರಾಗುವರು ಮತ್ತು ಅವರಿಂದ ದೇಶದ ಸುಸ್ಥಿ
ತಿಗೂ ಪುರೋಭಿವೃದ್ಧಿಗೂ ಎಷ್ಟು ಸಹಾಯವೆಂಬುದಕ್ಕೆ ಬರೋಡಾ ಮಹಾರಾಣಿಯ
ವರೇ ದೊಡ್ಡ ನಿದರ್ಶನ.

***

ಈಚೆಗೆ ಬಾಲವಿದ್ಯಾಭ್ಯಾಸವಮಾಡಿಸುವ ಪಾಠಶಾಲೆಗಳಲ್ಲಿ ಚಿತ್ರ ಬರೆಯುವ
ದನ್ನು ಅವಶ್ಯವಾಗಿ ಬೋಧಿಸಲೇ ಬೇಕೆಂದು ಇಂಗ್ಲೆಂಡ್ ಮುಂತಾದ ಯೂರೋ
ಪ್ಯಖಂಡ ದೇಶಗಳಲ್ಲಿ ಗೊತ್ತಾಗಿದೆ. ಇದರಂತೆ ಮದರಾಸು ಮುಂತಾದ ಭಾಗಗಳಲ್ಲೂ
ಬಾಲಕರಿಗೆ ಅನೇಕ ಪಾಠಶಾಲೆಗಳಲ್ಲಿ ಚಿತ್ರ ಬರೆಯುವುದನ್ನು ಹೇಳಿಕೊಡುತಿದಾರೆ
ಮೈಸೂರು ದೇಶದಲ್ಲಿ ಮಾತ್ರ ನಾರ್ಮಲ್ ಸ್ಕೂಲುಗಳಲ್ಲಿ ವಿನಾ ಇನ್ನೆಲ್ಲೂ ಈ ಪಾಠ
ವು ನಡೆಯುತಿಲ್ಲ. ಈಚೆಗೆ ಬೆಂಗಳೂರು ಸೆಂಟ್ರಲ್ ಕಾಲೇಜಿ ಅಧ್ಯಕ್ಷರಾದ ಮಿ ||
ಕುಕ್ ಸಾಹೇಬರು ಹೈಸ್ಕೂಲುಗಳಲ್ಲಿ ಚಿತ್ರ ಬರೆಯುವುದನ್ನು ಹೇಳಿಕೊಡುವುದು ಅವ
ಶ್ಯಕವೆಂದು ಸರ್ಕಾರದವರಿಗೆ ತಿಳಿಸಿರುವ ಹಾಗೆ ಕೇಳುತ್ತೇವೆ. ಇದರಂತೆ ಸರ್ಕಾರದವರು
ಒಪ್ಪಿ ಚಿತ್ರಪಾಠವು ಸ್ಕೂಲುಗಳಲ್ಲಿ ನಡೆಯುತ ಬಂದರೆ ಬಹಳ ಒಳ್ಳೇದು. ಚಿತ್ರ
ಬರೆಯುವುದರಿಂದ ತ್ವಗಿಂದ್ರಿಯ ಮತ್ತು ನೇತ್ರೇಂದ್ರಿಯ ಇವುಗಳ ಪಾಟವವು ಹೆಚ್ಚು ಆ
ಗುವುದು ಮಾತ್ರವಲ್ಲದೆ ಬಾಲಕರಿಗೆ ಮಾಡುವ ಕೆಲಸವನ್ನು ಅಂದವಾಗಿ ಮಾಡುವುದು,
ನಿಷ್ಕೃಷ್ಟವಾಗಿ ಮಾಡುವುದೂ ಅಭ್ಯಾಸವಾಗುವುದು.

ಗ ಣಾಢ್ಯರಾಗಿಯೂ ವಿದ್ಯಾವಿನಯಸಂಪನ್ನರಾಗಿಯೂ ಆಗಬೇಕಾದರೆ ನಿರ್ದುಷ್ಟವಾದ ವಿದ್ಯಾವಿನಯಸಂಪತ್ತುಗಳುಳ್ಳ ಪಾಠಕರನ್ನು ನೇಮಿಸಿಕೊಳ್ಳುವದು ಅತ್ಯಾವಶ್ಯಕವು. ಮದ್ರಾಸ್ ಕ್ರಿಶ್ಚನ್ ಕಾಲೇಜಿನಲ್ಲಿ ಡಾಕ್ಟರ್ ವಿಲ್ಲರ್ ಸಾಹೇಬರವರು ಬಾಲ ಪಾಠಗಳನ್ನು ಹೇಳುವದಕ್ಕೋಸ್ಕರ ಮಕ್ಕಳ ತರಗತಿಗಳಿಗೆ ಹೋಗುವದುಂಟು. ಬಹಳ ಪ್ರಸಿದ್ಧಿಗೆ ಬಂದಿರತಕ್ಕ ಅನೇಕ ಪಾಠಶಾಲಾಧ್ಯಕ್ಷರು ಈ ರೀತಿಯಲ್ಲಿಯೇ ಮಾಡುತ್ತಾರೆ. ಅಂಥಾ ಪಾಠಶಾಲೆಗಳಲ್ಲಿ ಅಸ್ತಿಭಾರವು ಸರಿಯಾಗಿ ಬೀಳುವದು, ವಿದ್ಯಾಭ್ಯಾಸದ ಅಸ್ತಿಭಾರವೂ ಚನ್ನಾಗಿ ಬೀಳುವದು. ಪಾಠಕರು ತಾವು ಹೇಳುವ ಪಾಠವು ಬಾಲಪಾಠವಾಗಲೀ ಪ್ರೌಢಪಾಠವಾಗಲೀ ಪೂರ್ವಭಾವಿಯಾಗಿ ನೋಡ್ಕಿಕೊಂಡು ಮಕ್ಕಳಿಗೆ ನಿಷ್ಕೃಷ್ಟವಾಗಿ ತಿಳಿಸುವ ಉಪಾಯಗಳನ್ನು ಗುರುತುಮಾಡಿಕೊಂಡು ಪ್ರಶ್ನೋತ್ತರಗಳಿಂದ ಮಕ್ಕಳಿಂದ ಹೇಳಿಸತಕ್ಕ ಸಂಗತಿಗಳನ್ನು ನೋಟು ಬುಕ್ಕಿನಲ್ಲಿ ಬರೆದುಕೊಂಡು ತಾವು ಹೇಳತಕ್ಕ ಪಾಠದಲ್ಲಿ ವ್ಯಾಖ್ಯಾನರೂಪವಾಗಿ ಹೇಳಬಹುದಾದ ಹೆಚ್ಚು ವಿಷಯಗಳನ್ನು ಗರ್ತುಮಾಡಿಕೊಂಡು ತರಗತಿಯನ್ನು ಪ್ರವೇಶಿಸಬೇಕು. ಅನೇಕ ಪಾಠಕರು ಈರೀತಿಯಲ್ಲಿ ಮಾಡುವದಿಲ್ಲ. ತಿಳಿದ ವಿಷಯದಲ್ಲಿ ಯೋಚನೆಮಾಡುವದು ನೋಟುಮಾಡಿಕೊಳ್ಳುವದು ಏನಿರುವದೆಂದು ಉದಾಸೀನಮಾಡುವರು. ಇಂಥಾ ಪಾಠಕರಿಗೋಸ್ಕರ ಒಂದು ಸಂಗತಿಯನ್ನು ವಿಜ್ಞಾಪನೆಮಾಡುವೆವು. ನಮ್ಮ ಲೇಟ್ ಶ್ರೀಮದ್ಮಹಾರಾಜರವರಿಗೆ ಪಾಠಕರಾಗಿ ಮೇ|| ಪೋರ್ಟರವರು ನೇಮಿಸಲ್ಪಟ್ಟಿದ್ದರಷ್ಟೆ. ಇವರು ಸಕಲ ಶಾಸ್ತ್ರ ವಿಶಾರದರೆಂಬದಾಗಿ ಇಂಡಿಯೂದೇಶದಲ್ಲಿರತಕ್ಕ ವಿದ್ವಾಂಸರಲ್ಲೆಲ್ಲ ದೊಡ್ಡ ಯಶಸ್ಸನ್ನು ಪಡೆದಿದ್ದರು. ಬಿ ಎ, ಎಂಎ, ಪರೀಕ್ಷೆಗಳಿಗೆ ಪಾಠವನ್ನು ಹೇಳಿತ್ತಿದ್ದರು. ಅವರು ಈ ಊರಿಗೆ ದಯಮಾಡಿಸಿದ ಮೇಲೆ ಶಾಸ್ತ್ರದಲ್ಲಿ ಬಾಲಪಾಠವನ್ನು ಹೇಳಬೇಕಾಯಿತು ಒಂದು ದಿನ ಶಾಸ್ತ್ರದ ಬಾಲಬೋಧೆಯನ್ನು ಇವರು ಓದುತ್ತಾ ಇದ್ದರು. ಆಗ ನಮ್ಮ ಮಿತ್ರರೊಬ್ಬರು ಇವರನ್ನು ನೋಡುವದಕ್ಕೆ ಹೋಗಿ ಅವರ ಬಾಲಬೋಧೆಯ ವ್ಯಾಸಂಗವನ್ನು ನೋಡಿ ಆಶ್ಚರ್ಯಪಟ್ಟು ಇದೇನು ತಮಾಷೆ ತಿನ್ನುಂಥಾ ಪಂಡಿತರು ಇದನ್ನು ವ್ಯಾಸಂಗಮಾಡಬೇಕೇ ಎಂದು ಕೇಳಿದರು. ಅದಕ್ಕೆ ಮೆ|| ಪೋರ್ಟರವರು ತಾವು ವಿದ್ಯಾರ್ಥಿಗಳಿಗೆ ನಿಷ್ಕೃಷ್ಟವಾದ ಶಾಸ್ತ್ರವನ್ನು ತಿಳಿಸುವದಕ್ಕೋಸ್ಕರ ಗುರ್ತುಹಾಕಿದ್ದ ಅಂಶಗಳನ್ನು ಪ್ರತ್ಯಕ್ಷಪ್ರಮಾಣಗಳಿಂದ ಶಾಸ್ತ್ರತತ್ವವನ್ನು ಗೊತ್ತುಮಾಡಿಕೊಡುವದಕ್ಕೋಸ್ಕರ ಏರ್ಪಡಿಸಿದ್ದ ಯಂತ್ರ

ಸುತ್ತ ಎರಬೇಕು. ಇದರಿಂದಮಕ್ಕಳಿಗೆ ವಿಶೇಷ ಕ್ಲೇಶವಿಲ್ಲದೆ ಕರ್ತೃಕರ್ಮಜ್ಞಾನವು ವಾಕ್ಯರಚನಾಶಕ್ತಿಯೂ ಬರುವವು. ಅನೇಕ ಪಾಠಶಾಲೆಗಳಲ್ಲಿ ಬಹಳ ವಿದ್ಯಾವಂತರಾದ ಅಧ್ಯಕ್ಷರೇ ಮೊದಲಾದವರು ಮಕ್ಕಳು ಓದತಕ್ಕ ತರಗತಿಗಳಿಗೆ ಪಾಠವನ್ನು ಹೇಳುತ್ತಾರೆ. ಸ್ವಲ್ಪನ್ಯಾಸಂಗವಾಡಿ ಬುದ್ಧಿವಂತರಾದವರಿಗೆ ಪಾಠಹೇಳುವವರು ವಿಶೇಷ ಪಂಡಿತರಲ್ಲದೆ ಇದ್ದಾಗ್ಯೂ ಅದರಿಂದ ತುಂಬ ಬಾಧಕ ಉಂಟಾಗುವದಿಲ್ಲ. ಮಕ್ಕಳಿಗೆ ಪಾಠಹೇಳುವದಕ್ಕೆ ಸರಿಯಾದ ಅಸ್ತಿಭಾರವನ್ನು ಹಾಕತಕ್ಕವರು ಸಿಕ್ಕದೇ ಇದ್ದರೆ ವಿದ್ಯಾಭ್ಯಾಸದ ಅಸ್ತಿಭಾರವು ಕೆಟ್ಟುಹೋಗುವದು ಇದರಿಂದ ಅಂಥಾಮಕ್ಕಳ ಮುಂದಿನ ವಿದ್ಯಾಭಿವೃದ್ಧಿಯು ಸಮರ್ಪಕವಾಗುವದು ಕಷ್ಟ. ಫ್ರಾನ್ಸ್ ದೇಶದಲ್ಲಿ ಚಕ್ರವರ್ತಿಗಳು ದವಲತ್ತು ಮಾಡತ್ತಿದ್ದಾಗ ಅಲ್ಲಿನ ಚಕ್ರವರ್ತಿಗಳಾದ ಲೂಯಿರವರು ತಮ್ಮ ಮಹಾವಿದ್ವಾಂಸರಾಗಿದ್ದ ಪೆನಿರ್ಲ್ರವರನ್ನು ಕರೆಸಿ ಅವರಿಗೆ ವರ್ಷಕ್ಕೆ ಹತ್ತು ಸಾವಿರ ಪೌನ್ಗಳನ್ನು ಗೊತ್ತುಮಾಡಿ ಯುವರಾಜಪದವಿಯನ್ನಲಂಕರಿಸುತ್ತಿದ್ದ ತಮ್ಮ ಹಿರೀ ಮಕ್ಕಳಿಗೆ ಪಾಠಹೇಳಬೇಕೆಂದು ಅಪ್ಪಣೆಕೊಡಿಸಿದರು ಅದಕ್ಕೆ ಪೆನಿರ್ಲ್ರವರು ಈ ಕೆಲಸವನ್ನು ಒಪ್ಪಿ ಕೊಳ್ಳುವದಕ್ಕೆ ಮುಂಚೆಯೇ ಯುವರಾಜರನ್ನು ನೋಡಿ ಅವರೊಡನೆ ಒಂದೆರಡು ಘಂಟೆಗಳು ಸಂಭಾಷಣೆ ಮಾಡಬೇಕೆಂದಪೇಕ್ಷಿಸಿದರು. ಆರೀತಿಯಲ್ಲಿ ಮಾಡಬಹುದೆಂದು ಚಕ್ರವರ್ತಿಗಳು ಅನುಜ್ಞೆಯನ್ನು ಕೊಟ್ಟು ಯುವರಾಜರಲ್ಲಿಗೆ ಕಳುಹಿಸಿದರು. ಪೆನಿರ್ಲ್ರವರು ಅವರ ಸಂಗಡ ಎರಡು ಘಂಟೆಗಳ ಪರ್ಯಂತನಾಡಿಕೊಂಡು ಬಂದುಚಕ್ರವರ್ತಿಗಳನ್ನು ಕಂಡು ತಾವು ಗೊತ್ತುಮಾಡಿರತಕ್ಕ ಸಂಬಳವು ಸಾಲದು ಅದಕ್ಕೆ ಮೂರರಷ್ಟು ಕೊಟ್ಟರೆ ನಾನು ಪಾಠಕನಾಗುತ್ತೇನೆ ಎಂದು ಹೇಳಿದರು. ಇದಕ್ಕೆ ಚಕ್ರವರ್ತಿಗಳು ಆಶ್ಚರ್ಯಪಟ್ಟು ಇಷ್ಟುಹೆಚ್ಚು ಸಂಬಳವನ್ನು ಅಪೇಕ್ಷಿಸುವದಕ್ಕೆ ಕಾರಣವೇನೆಂದು ಕೇಳಿದರು, ಅದಕ್ಕೆ ಪೆನಿರ್ಲ್ರವರು ತಾವು ಕೊಡತಕ್ಕ ಸಂಬಳವು ಪಾಠಹೆಳುವದಕ್ಕಾಯಿತು. ಇದುವರಿಗೂ ತಮ್ಮ ಮಗನು ಅಶಿಕ್ಷಿತನಾಗಿ ಕಲಿತು ಕೊಂಡಿರತಕ್ಕ ದುರ್ವರ್ತನೆಗಳನ್ನು ಹೋಗ ಲಾಡಿಸಿ ವಿದ್ಯೆಯು ಜೊತೆಗೆ ವಿನಯಾದಿ ಸದ್ಗುಣಗಳುಳ್ಳವನಾಗಿ ಮಾಡುವದು ಬಹಳಕಷ್ಟ. ಇದಕ್ಕೋಸ್ಕರ ಹೆಚ್ಚು ಸಂಬಳವನ್ನು ಕೆಳಿದೇನೆ ಎಂದು ಹೇಳಿದನು. ಚಕ್ರವರ್ತಿಯು ಸಂತೋಷಪಟ್ಟು ಅತನು ಕೇಳಿದಂತೆ ಮೂರರಷ್ಟು ಸಂಬಳವನ್ನು ಗೊತ್ತುಮಾಡಿ ತನ್ನ ಮಗನ ವಿದ್ಯಾಭ್ಯಾಸವನ್ನು ಅವನಿಗೆ ಒಪ್ಪಿಸಿದನು. ಮಕ್ಕಳು

ಅವರ ಪದವಿಗೆ ಸಾತಕಾವ ಶಕ್ತಿಯುಳ್ಳವರಾಗಿಲ್ಲ. ಅಂಥಾ ಶಕ್ತಿಯುಳ್ಳವರು ಸಿಕ್ಕಬೇಕಾದರೆ ಅವರ ಯೋಗ್ಯತೆಗೆ ತಕ್ಕ ಸಂಬಳಗಳು ದೊರೆಯಬೇಕು. ಈ ವಿಷಯವು ಎಲ್ಲಾ ವಿದ್ಯಾಭ್ಯಾಸದ ಇಲಾಖೆಗಳಿಗೂ ಗೊತ್ತೇಇದೆ. ಸಾಧ್ಯವಾದಮಟ್ಟಿಗೂ ಈ ಪಾಠಕರ ಸ್ಥಿತಿಯನ್ನು ಉತ್ತಮ ವಾಗಿ ಮಾಡಬೇಕೆಂದು ಸರಕಾದವರು ಪ್ರಯತ್ನಿಸುತ್ತಿರುವರು. ಅದು ಹ್ಯಾಗಾದರೂ ಇರಲಿ, ಪಾಠಕರು ತಮ್ಮ ಕರ್ತವ್ಯವನ್ನು ಗೊತ್ತುಮಾಡಿಕೊಂಡು ತಾವು ಮಾಡತಕ್ಕ ವ್ಯಾಪಾರವನ್ನೂ ಸರಿಯಾಗಿ ಮಾಡಿ ತಮ್ಮ ಮನಸ್ಸಾಕ್ಷಿಯು ಮೆಚ್ಚುವಂತೆ ತಮ್ಮ ಕೆಲಸಗಳನ್ನು ಮಾಡುತಾ ಬಂದರೆ ವಿದ್ಯಾರ್ಥಿಗಳು ವೃದ್ಧಿಗೆ ಬರುವದಲ್ಲದೆ ಇವರ ಮೆಹನತ್ತಿಗೆ ತಕ್ಕ ಫಲವೂ ಕೂಡ ಕೂಡಿದಮಟ್ಟಿಗೆ ಅಪಾರ್ಥಿತವಾಗಿಯೇ ಬರುವುದು.

ನಿಶ್ವಾಸೋಚ್ಛ್ವಾಸಗಳು.

ನಿಶ್ವಾಸೋಚ್ಛ್ವಾಸಗಳಿಗೆ ಸಂಬಂಧಪಟ್ಟ ಮುಖ್ಯ ಅವಯವಗಳು ಯಾವುವೆಂದರೆ—(ಎ) ಗಂಟಲು ಮತ್ತು ಇದರ ಉದ್ದಕ್ಕೂ ಇರುವ ದೊಡ್ಡ ಶ್ವಾಸನಾಳಗಳು (ಬಿ) ಶ್ವಾಸನಾಳಗಳು (ಸಿ) ಶ್ವಾಸಕೋಶಗಳು.

ಹೊರಗಿನ ವಾಯುವು ಬಾಯಿ ಮೂಗುಗಳಿಂದ ಹೊಕ್ಕು ಗಂಟಲಲ್ಲಿ ಮುಖ್ಯ ಶ್ವಾಸನಾಳಕ್ಕೆ ಹೋಗುತ್ತವೆ. ಈ ನಾಳವು ಮೃದ್ವಸ್ಥಿಯ ಉಂಗುರಗಳಿಂದ ಮಾಡಲ್ಪಟ್ಟಿದೆ. ಇದು ಗಂಟಲಿನಲ್ಲಿ ಪ್ರಾರಂಭವಾಗಿ ಎದೆಯೊಳಗೆ ಇಳಿಯುವ ವರಿಯಂತವೂ ಒಂದೇ ನಾಳವಾಗಿದ್ದು ಅನಂತರ ಎಡಬಲಭಾಗಗಳಿಗೆ ಕವಲು ಒಡೆಯುತ್ತದೆ.

ಶ್ವಾಸನಾಳಗಳು.

ಮೇಲೆ ಹೇಳಿದ ಎರಡು ನಾಳಗಳು ಇನ್ನು ಅನೇಕ ಸಣ್ಣಸಣ್ಣ ನಾಳಗಳಾಗಿ ಕವಲೊಡೆದು ಕೊನೆಯಲ್ಲಿ ಬಹಳ ಸಣ್ಣ ಗೂಡುಗಳಾಗಿ ಎರಡು ಶ್ವಾಸಕೋಶಗಳಲ್ಲೂ ಪರಿಣಮಿಸುವುವು.

ಸಂವಿಧಾನಗಳನ್ನೂ ಸಮಗ್ರವಾಗಿ ತೋರಿಸಿ ಪೂರ್ವಭಾವಿಯೊಗಿಯೇ ಇಷ್ಟು ವಾ
ಸಂಗಪೂಡದಿದ್ದರೆ ನನ್ನ ಕೆಲಪದನ್ನು ಇಷ್ಟು ಸಮರ್ಪಕವಾಗಿ ಮೂಡುವುದಕ್ಕೆ ಅವಕಾ
ಶವು ಹ್ಯಾಗೆತಾನೇ ಉಂಟಾದೀತು. ಹುಡುಗರಿಗೆ ನನ್ನ ಪಾಠಗಳಿಂದ ಪ್ರಯೋಜನ
ತಾನೇ ಹ್ಯಾಗಾಗುವದು, ಎಂದಪ್ಪಣೇ ಕೊಡಿಸಿದರು. ಬಾಲಪಾಠ ಮೊದಲುಗೊಂ
ಡು ಪೌಢಪಾಠಗಳನ್ನು ಹೇಳುವವರಿಗೂ ಎಲ್ಲಾ ಪಾಠಕರೂ ತಾವು ಹೇಳತಕ್ಕ
ಪಾಠದ ವಿಷಯದಲ್ಲಿ ಅನೇಕ ಗ್ರಂಥಗಳನ್ನು ವ್ಯಾಸಂಗಮೂಡತಕ್ಕದ್ದು ಆವಶ್ಯಕವಾ
ದದ್ದು. ಇದಲ್ಲದೆ ಪಾಠಕರು ಪ್ರತಿದಿನವೂ ತಾವು ಹೇಳಬೇಕಾದ ಪಾಠಭಾಗವನ್ನು
ಮೊದಲೇ ನೋಡಿಕೊಂಡು ಅಭಾಗದ ವಿಷಯದಲ್ಲಿ ಅದೇ ವಿಷಯವಾದ ಇತರ ಪುಸ್ತ
ಕಗಳಲ್ಲಿ ಏನೇನು ಹೇಳಿದೆಯೋ ಅವನ್ನೆಲ್ಲಾ ಗುರುತು ಹಾಕಿಕೊಂಡು ಅವುಗಳನ್ನು
ವಿದ್ಯಾರ್ಥಿಗಳಿಗೆ ತಿಳಿಸಿ ಕೂಡಲೇ ಅವುಗಳ ವಿಷಯದಲ್ಲಿ ಪ್ರಶ್ನೆಹಾಕಿ ವಿದ್ಯಾರ್ಥಿಗಳು
ಪರ್ಯಾಲೋಚಿಸಿ ಉತ್ತರಗಳನ್ನು ಕೊಡುವಂತೆ ಮೂಡುವದು ಅತ್ಯಾವಶ್ಯಕವು. ಯೋ
ಚನೆಯಿಲ್ಲದೇ ಮನಸ್ವಿ ಉತ್ತರಗಳನ್ನು ಕೊಡತಕ್ಕ ದುರಭ್ಯಾಸವನ್ನು ವಿದ್ಯಾರ್ಥಿಗಳಿಗೆ
ತಪ್ಪಿಸುವದೇ ಪ್ರಥಮಕರ್ತವ್ಯವು. ಈ ಅಭ್ಯಾಸವು ರೂಢಮೂಲವಾದರೆ ಶಾಸಾ
ಭ್ಯಾಸದಲ್ಲಿ ಹ್ಯಾಗೋ ಹಾಗೆ ಭಾಷಾಭ್ಯಾಸದಲ್ಲಿಯೂ ಅದು ಪ್ರಯೋಜನಕಾರಿಯೂಗು
ವದು. ಸ್ವಭಾಷೆಯನ್ನು ಅಭ್ಯಾಸಮೂಡತಕ್ಕವರೂ ಕೂಡ ಯೋಚನೆಯಿಲ್ಲದೆ ಕಥಾ
ಸಂದರ್ಭದ ಮೇಲೆ ಮಾತ್ರ ಮನಸ್ಸಿಟ್ಟು ಎಷ್ಟು ಓದಿಕೊಂಡು ಹೋದಾಗ್ಯೂ ಭಾಷೆ
ಯಲ್ಲಿ ಸರಿಯೂದ ಜ್ಞಾನವು ಬರುವದಿಲ್ಲ. ಶಬ್ದಗಳನ್ನೂ ಶಬ್ದಾರ್ಥಗಳನ್ನೂ ಶಬ್ದ
ಗಳ ರೂಪನಿಷ್ಪತ್ತಿಯೇ ಮೊದಲಾದವುಗಳನ್ನೂ ಚಿತ್ರವಿಚಿತ್ರವಾಗಿ ವಾಕ್ಯರಚನೆ
ಗಳನ್ನೂ ಇವುಗಳಿಗೆ ಸಂಬಂಧಪಟ್ಟ ವ್ಯಾಕರಣನಿಬಂಧನೆಗಳನ್ನೂ ಪರ್ಯಾಲೋಚಿಸಿ
ಈ ನಿಬಂಧನೆಗಳಿಗನುಸಾರವಾಗಿ ಒಂದೆರಡು ಪುಸ್ತಕಗಳನ್ನು ಚನ್ನಾಗಿ ಓದಿದಾಗ್ಯೂ
ನಿಷ್ಕೃಷ್ಟವಾದ ಭಾಷಾಪರಿಚಯು ಉಂಟಾಗುವುದು. ಹೀಗೆ ಭಾಷಾಪರಿಚಯವ
ನ್ನುಂಟುಮೂಡಿಕೊಂಡು ಆದರಲ್ಲಿ ಅವಿಚ್ಛಿನ್ನವಾಗಿ ಆಲೋಡನೆಯನ್ನಿಟ್ಟುಕೊಂಡರೆ
ಭಾಷಾಪಾಂಡಿತ್ಯವು ಮುಂದೆ ಬರುವದು. ವಿದ್ಯೆಯೂ ಅಭ್ಯಾಸಾನುಸಾರವಾಗಿರುವ
ದೆಂದು ವಿದ್ವಾಂಸರು ಹೇಳುತ್ತಾರೆ. ಆದಾಗ್ಯೂ ಒಳ್ಳೆ ಪಂಡಿತರ ಶಿಕ್ಷೆಯುಲ್ಲಿ ಮೂಡ
ಲ್ಪಡತಕ್ಕ ವಿದ್ಯಾಭ್ಯಾಸವು ಸಾಮಾನ್ಯ ಜನರಲ್ಲಿ ಮೂಡತಕ್ಕ ವಿದ್ಯೆಗಿಂತ ವಿಶೇಷ ಫಲ
ಕಾರಿದೊಗುವದು. ಈಗ ಬಾಲಶಿಕ್ಷೆಯನ್ನು ಮೂಡಿಸತಕ್ಕ ಪಾಠಕರಲ್ಲಿ ಅನೇಕರು

ವಪೆಯು ಹೊಟ್ಟೆಕಡೆಗೆ ಬಗ್ಗಿರುವ ಬಿಲ್ಲಿನಹಾಗಿದೆ. ಇದು ನಾವು ಶ್ವಾಸಕೋಶಗಳಿಗೆ ಗಾಳಿಯನ್ನು ತೆಗೆದುಕೊಂಡಾಗ ಬಹಳವಾಗಿ ಬಗ್ಗಿರುವುದಿಲ್ಲ. ನಮ್ಮ ಶ್ವಾಸಕೋಶಗಳಿಂದ ಗಾಳಿಯನ್ನು ಹೊರಗೆ ಬಿಡುವಾಗ ಇದು ಸ್ವಭಾವವಾಗಿ ಬಗ್ಗಿರುವ ಸ್ಥಿತಿಯಲ್ಲಿ ಇರುವುದು. ಹೀಗಾಗುವುದರಿಂದ ಎದೆಯಲ್ಲಿ ಬೇಕಾದಹಾಗೆ ಸ್ಥಳ ಹೆಚ್ಚುಕಡಿಮೆಯಾಗುವುದು. ಶ್ವಾಸಕೋಶಗಳಿಗೆ ಸ್ವಭಾವವಾಗಿ ದೊಡ್ಡದಾಗುವ ಮತ್ತು ಚಿಕ್ಕದಾಗುವ ಶಕ್ತಿಯುಂಟು. ಪಕ್ಕೆಲಬುಗಳ ಮಧ್ಯೆ ಇರುವ ಮಾಂಸಖಂಡಗಳಿಗೂ ಸಂಕೋಚಶಕ್ತಿ ಇರುವದರಿಂದಲೂ ವಪೆಯು ಕುಂಬುವದರಿಂದ ಎದೆಯ ಒಳಪ್ರದೇಶವು ಅಗಲವಾಗಿಯೂ ಆಳವಾಗಿಯೂ ಆಗುತ್ತದೆ. ಹೀಗೆ ದೊಡ್ಡದಾದ ಹಾಗೆಲ್ಲಾ ಶ್ವಾಸಕೋಶಗಳು ದೊಡ್ಡವಾಗುವವು. ಮತ್ತು ಹೊರಗಿನ ಗಾಳಿಯನ್ನು ಹೆಚ್ಚಾಗಿ ತೆಗೆದುಕೊಳ್ಳುವವು. ಹೀಗೆ ತೆಗೆದುಕೊಳ್ಳುವದಕ್ಕೆ ಉಚ್ಛ್ವಾಸವೆಂದು ಹೆಸರು.

ನಿಶ್ವಾಸ:—ಶ್ವಾಸಕೋಶಗಳು ಸ್ವಭಾವವಾಗಿ ಸಂಕೋಚನಶಕ್ತಿಯುಳ್ಳವೆಂದು ಹಿಂದೆ ಹೇಳಿದೆವು. ಮತ್ತು ಪಕ್ಕೆಲಬುಗಳ ಮಧ್ಯೆ ಇರುವ ಮಾಂಸಖಂಡಗಳ ಸಂಕೋಚದಿಂದಲೂ ವಪೆ ಉಬ್ಬುವುದರಿಂದಲೂ ಎದೆಯ ಒಳಭಾಗವು ಚಿಕ್ಕದಾಗಿಯೂ ಆಳವಿಲ್ಲದ್ದಾಗಿಯೂ ಆಗುವುದು. ಈ ಕಾರಣಗಳಿಂದ ಮೊದಲು ನಾವು ತೆಗೆದುಕೊಂಡ ಗಾಳಿಯು ಹೊರಗೆ ಬರುವದು. ಇದಕ್ಕೆ ನಿಶ್ವಾಸವೆಂದು ಹೆಸರು. ಇವುಗಳು ನಮ್ಮ ಯತ್ನವಿಲ್ಲದೆ ನಡೆಯುವ ಕಾರ್ಯಗಳಾಗಿವೆ.

ಉಚ್ಛ್ವಾಸದ ಗಾಳಿಗೂ ನಿಶ್ವಾಸದ ಗಾಳಿಗೂ ಇರುವ ಮುಖ್ಯ ವ್ಯತ್ಯಾಸಗಳು :—

೧. ನಾವು ಉಚ್ಛ್ವಾಸಿಸಿದಕ್ಕೆ ಹೊರಗಿನ ವಾಯುವಿನಲ್ಲಿ ೧೦೦ ಭಾಗಕ್ಕೆ ೭೯.೦ ಭಾಗ ಸಾರಜನಕ; ೨೦.೯ಭಾಗ ಆಮ್ಲಜನಕ; .೦೪ಭಾಗ ಇಂಗಾಲಾಮ್ಲ; ಸ್ವಲ್ಪ ನೀರಿನ ಆವಿ ಇದೆ.

೨. ನಿಶ್ವಾಸದ ಗಾಳಿಯಲ್ಲಿ ೧೦೦ಭಾಗಕ್ಕೆ ೭೯ಭಾಗ ಸಾರಜನಕ, ೧೬ಭಾಗ ಆಮ್ಲಜನಕ, ೪ಭಾಗ ಇಂಗಾಲಾಮ್ಲವಿದೆ.

ಆದುದರಿಂದ ನಿಶ್ವಾಸಗಾಳಿಯಲ್ಲಿ ಕಂಡಹಾಗೆ ೧೦೦ಕ್ಕೆ ೪-೫ಭಾಗ ಆಮ್ಲಜನಕವು ಕಡಿಮೆಯಾಗಿಯೂ ೧೦೦ಕ್ಕೆ ೪ಭಾಗ ಇಂಗಾಲಾಮ್ಲ ಹೆಚ್ಚಾಗಿ ಇರುವದು.

೩. ಹೊರಗಿನ ಗಾಳಿಯಲ್ಲಿ ಶಾಖವು ಕಾಲಾವಸ್ಥಾನುಸಾರವಾಗಿ ಹೆಚ್ಚುಕಡಿಮೆಯಾಗಿರುವದು. ನಿಶ್ವಾಸದ ಗಾಳಿಯು ಸಾಧಾರಣವಾಗಿ ನಮ್ಮ ಶರೀರದ ಶಾಖದಷ್ಟೇ (೯೮°) ಇರುವುದು.

ಶ್ವಾಸಕೋಶಗಳು.

ಇವು ಎದೆಗೂಡಿನಲ್ಲಿ ಹೃದಯದ ಎಡಬಲಭಾಗಗಳಲ್ಲಿವೆ. ಈ ಶ್ವಾಸಕೋಶಗಳಮೇಲೆ ಬಹಳ ತೆಳುವಾದ ಒಂದು ಪೊರೆ ಇದೆ. ಶ್ವಾಸಕೋಶಗಳಮೇಲಿರುವ ಪೊರೆಗೂ ಎದೆಗೂಡಿನ ಒಳಭಾಗದಲ್ಲಿರುವ ಪೊರೆಗೂ ನಡುವೆ ಶ್ವಾಸಕೋಶಗಳು ವಿಸ್ತಾರವಾಗುವುದಕ್ಕೆ ಅವಕಾಶವಾಗುವಂತೆ ಸ್ವಲ್ಪ ಸ್ಥಳಬಿಟ್ಟಿದೆ. ಈ ಶ್ವಾಸಕೋಶಗಳು ಅನೇಕ ಸೂಕ್ಷ್ಮವಾದ ಗೂಡುಗಳಿಂದ ಮಾಡಲ್ಪಟ್ಟಿವೆ. ಈ ಗೂಡುಗಳಲ್ಲಿ ನಾವು ತೆಗೆದುಕೊಳ್ಳುವ ಗಾಳಿಯು ತುಂಬಿರುತ್ತದೆ. ಇವುಗಳು ಬಹಳ ತೆಳುವಾದ ಪೊರೆಯಿಂದ ಮಾಡಲ್ಪಟ್ಟಿವೆ. ಇವುಗಳನ್ನು ಎಡಬಿಡದ ಹಾಗೆ ಅನೇಕ ಲೋಮನಾಳಗಳಿವೆ. ರಕ್ತವು ಶರೀರದ ಎಲ್ಲಾ ಭಾಗಗಳನ್ನು ಸುತ್ತಿಕೊಂಡು ಅವುಗಳಿಗೆ ಅತ್ಯವಶ್ಯಕವಾದ ಪೋಷಣಾದ್ರವ್ಯಗಳನ್ನು ಕೊಟ್ಟು ಅವುಗಳಲ್ಲಿ ಉತ್ಪತ್ತಿಯಾದ ಇಂಗಾಲಾಮ್ಲವೇ ಮೊದಲಾದ ಕಲ್ಮಷಗಳನ್ನು ತೆಗೆದುಕೊಂಡು ಬಂದು ಶ್ವಾಸಕೋಶಗಳಲ್ಲಿ ಪ್ರವಹಿಸುವ ಅನೇಕ ಲೋಮನಾಳಗಳಲ್ಲಿ ಬರುವಾಗ ಈ ಸಣ್ಣ ಸಣ್ಣ ಗೂಡುಗಳಲ್ಲಿರುವ ನಿರ್ಮಲವಾಯುವಿನಿಂದ ಅವ್ಲಜನಕವನ್ನು ತೆಗೆದುಕೊಂಡು ಅವುಗಳಿಗೆ ತಮ್ಮಲ್ಲಿದ್ದ ಇಂಗಾಲಾದಿ ಕಲ್ಮಷಗಳನ್ನು ಕೊಟ್ಟು ಶುದ್ಧವಾಗಿ ಹೃದಯದ ಎಡಪಾರ್ಶ್ವದಮೇಲು [illegible] ಬೀಳುತ್ತದೆ. ಈ ರೀತಿಯಲ್ಲಿ ರಕ್ತವನ್ನು ಶುದ್ಧಮಾಡತಕ್ಕದ್ದೆ ಶ್ವಾಸಕೋಶಗಳ ಮುಖ್ಯ ಕರ್ತವ್ಯವಾಗಿದೆ.

ಉಚ್ಛ್ವಾಸನಿಶ್ವಾಸಗಳು.

ಉಚ್ಛ್ವಾಸ:—ಹೊರಗಿನ ಗಾಳಿಯನ್ನು ಮೂಗುಬಾಯಿಗಳ ಮೂಲಕವಾಗಿ ನಮ್ಮ ಶ್ವಾಸಕೋಶಗಳಿಗೆ ತೆಗೆದುಕೊಳ್ಳುವುದಕ್ಕೆ ಉಚ್ಛ್ವಾಸವೆಂದೂ ನಮ್ಮ ಶ್ವಾಸಕೋಶಗಳಿಂದ ಹೊರಗೆ ಬಿಡುವ ಗಾಳಿಗೆ ನಿಶ್ವಾಸವೆಂದೂ ಹೆಸರು. ಇವುಗಳು ನಡೆಯುವ ಬಗೆ ಹೇಗೆಂದರೆ—ನಮ್ಮ ಶ್ವಾಸಕೋಶಗಳು ಎದೆ ಪಂಜರದಲ್ಲಿವೆ. ಈ ಪಂಜರದಲ್ಲಿ ಎಡಬಲಭಾಗಗಳಲ್ಲಿ ೨೪ ಪಕ್ಕೆಲುಬುಗಳಿವೆ. ಈ ಪಕ್ಕೆಲುಬುಗಳು ಹಿಂದೆ ಬೆನ್ನುಮೂಳೆಗೆ ತಗಲಿಕೊಂಡಿವೆ. ಮುಂದುಗಡೆ ಎದೆಯೊಳಗೆ ಮೃದ್ವಸ್ಥಿಗಳ ಸಹಾಯದಿಂದ ಅಂಟಿಕೊಂಡಿವೆ. ಈ ಪಕ್ಕೆಲುಬುಗಳ ಪ್ರತಿ ಎರಡರ ಮಧ್ಯದಲ್ಲಿಯೂ ತೆಳುವಾದ ಮಾಂಸಖಂಡಗಳಿವೆ. ಇವುಗಳು ಇತರ ಮಾಂಸಖಂಡಗಳ ಹಾಗೆ ಸಂಕೋಚಶಕ್ತಿಯುಳ್ಳವುಗಳಾಗಿವೆ. ಶ್ವಾಸಕೋಶಗಳು ಪಪೆಮೇಲೆ ಕೂತಿರುವಹಾಗೆ ತಗಲಿವೆ ಈ

ಸ್ತ್ರೀಮಿಶ್ರಪ್ರದೇಶಗಳಲ್ಲಿಯೂ ಕಲಕಲಕಡ ಮಾತ್ರ ಹೇರಳವಾಗಿ ಜನರು ಏಕ ಸೇರುವರು– ಎಂದರೆ ದೊಡ್ಡದೊಡ್ಡ ಪಟ್ಟಣಗಳು ಭಾರಿಭಾರಿ ಮಹರುಗಳು ಈಗ ಇರತಕ್ಕ ಸ್ಥಳಗಳಲ್ಲಿ ಇರಲು ಕಾರಣವೇನು? ಅಂಥಾ ಪಟ್ಟಣಪ್ರದೇಶಗಳು ಇರುವ ಸ್ಥಾನವಿಶೇಷಾನುಸಾರ ವಾಣಿಮುಖ್ಯತೆಗೆ ಬರಲು ಕಾರಣವೇನು?

ಈ ಅಭಿಪ್ರಾಯಗಳನ್ನು ಬಾಲಕರಿಗೆ ಆದಿಯಲ್ಲೆ ತಿಳಿಸಬೇಕೆಂಬುದು ಎಂದಿಗೂ ನನ್ನಭಿಪ್ರಾಯವಲ್ಲ. ಇವುಗಳನ್ನು ತಿಳಿಸಲು ಯತ್ನಿಸುವುದು ಮೌಢ್ಯವೇಸರಿ. ಜನಾಂಗಗಳ ವಿನಿಯೋಗವೇ ಭೂವಿವರಣೆಯಲ್ಲಿ ಬಾಲಕರಿಗೆ ಮುಖ್ಯವಾಗಿ ಬೋಧಿಸ ತಕ್ಕ ಅಂಶವೆಂಬುವುದನ್ನು ಉಪಾಧ್ಯಾಯನು ಚೆನ್ನಾಗಿ ತಿಳಿದಿರಬೇಕು.

ಭೂವಿವರಣೆಯನ್ನು ಬೋಧಿಸುವುದರಲ್ಲಿ ಮೇಲೆ ಹೇಳಿದುದೇ ಮುಖ್ಯವಿಷಯವಾಗಿರಲು ಭೂವಿವರಣೆ ಪಾಠವೆಂದರೆ ಅನೇಕ ಅಂಕಿತನಾಮಗಳನ್ನು ಬಾಯಿಪಾಠ ಮಾಡಿಸುವುದಲ್ಲವೆಂಬುದು ಸ್ಪಷ್ಟವಾಗುವುದು. ಇತರ ಶಾಸ್ತ್ರಭಾಗಗಳಂತೆಯೇ ಭೂವಿವರಣೆಯಲ್ಲಿಯೂ ಮುಖ್ಯವಾದವುಗಳು ಶಬ್ದ ಅಥವಾ ಹೆಸರುಗಳಲ್ಲವು. ಶಬ್ದಗಳು ನಾವು ವಿಚಾರಿಸುವ ವಿಷಯಗಳನ್ನು ಗ್ರಹಿಸಲು ಸಹಕಾರಿಗಳು, ಶಬ್ದಗಳು ಅರ್ಥ ಸೂಚಕವಾದವು, ಹೀಗಿರುವಾಗ ಚಿಕ್ಕಚಿಕ್ಕ ಮಕ್ಕಳುಗಳಿಗೆ ಆದಿಯಲ್ಲೆ ಜನಾಂಗಗಳು ಮಾಡಿಕೊಂಡಿರುವ ದೇಶಗಳು ಅವಕ್ಕೆ ಕಾರಣಗಳು ಅವುಗಳ ನಾಗರಿಕತೆ ಮುಂತಾದ ವಿಶೇಷ ವಿಷಯಗಳನ್ನು ತಿಳಿಸುವುದು ಹೇಗೆ ಸಾಧ್ಯವು?

ಎಂಬ ಈ ಪ್ರಶ್ನೆಗೆ ಒಂದೇಮಾರ್ಗವು ಸಾಧ್ಯವಾದುದೆಂದು ತೋರುವುದು. ಅದು ಯಾವುದೆಂದರೆ ಜರ್ಮನ್ನರು ಆಚರಿಸುತ್ತಿರುವ, ಲಂಡನ್‌ಬೋರ್ಡ್‌ಸ್ಕೂಲುಗಳಲ್ಲೆಲ್ಲ ಲಬ್ಧ ಪ್ರಚಾರಕ್ಕೆ ಬಂದಿರುವ ಶ್ರೇಷ್ಠವಾದ ಪದ್ಧತಿಯು. ಮಕ್ಕಳ ಅನುಭವದಲ್ಲಿರುವ ತನ್ನ ಮನೆ, ತದ್ವಿಷಯಕವಾದ ಜ್ಞಾನ ಇದೆ ಮೊದಲನೆಯಮೆಟ್ಟಲು. ಇದರಿಂದ ಜನಾಂಗವಿಷಯವಾದ ವಿಶೇಷಜ್ಞಾನವನ್ನು ಕ್ರಮವಾಗಿ ಸುಲಭವಾಗಿ ತಿಳಿಸಬಹುದು. ಮನೆಯಲ್ಲಿಯೆ ತಕ್ಕಮಟ್ಟಿಗೆ ಬಾಲಕರಿಗೆ ವಸ್ತುಜ್ಞಾನ ಉಂಟಾಗಿರುವುದು. ಸಮೀಪಾದರಸ್ತೆಗೂ, ಇಳಿಜಾರಾದ ರಸ್ತೆಗೂ (ಎಂದರೆ ಚಡಾವ್–ಉತಾರ್) ಇರತಕ್ಕ ಭೇದವನ್ನು ಗೊತ್ತುಮಾಡಿಕೊಳ್ಳುವುದು, ಭಳಿಗಾಲ, ಬೇಸಿಗೆಗಾಲ, ಹನಿಗೂಡಿದಭಳಿಗಾಳಿ ಬೇಸಿಗೆಯ ಬಿಸಿಗಾಳಿ, ಮೊದಲಾದ ಕಾಲವಿಪರೀತದಿಂದ ಉಂಟಾಗುವ ವ್ಯತ್ಯಾಸಗಳನ್ನು ಎಂದರೆ ಋತುಧರ್ಮಗಳನ್ನು ಆಯಾಯ ಕಾಲದಲ್ಲಿ ಬೆಳೆಯುವ ಪೈರುಗಳನ್ನೂ ಸಾಧ್ಯವಾದ ಮಟ್ಟಿಗೆ ತಿಳಿಸಿರಬಹುದು. ಒಂದು ದೊಡ್ಡ ಅಂಗಡಿ (ಷಾಪ್‌ನಲ್ಲಿ) ಯಲ್ಲಿರತಕ್ಕ ಸಾಮಾನುಗಳಲ್ಲಿ ಅನೇಕ ಸಾಮಾನುಗಳು ಇತರ ದೇಶಗಳಲ್ಲಿ ತಯಾರಾಗಿ ಬಂದವೆಂತಲೂ, ಬಾಲಕನು ಪಟ್ಟಣವಾಸಿಯಾಗಿದ್ದರೆ ಹಾಲು, ಮೊಸರು, ಬೆಣ್ಣೆ, ಹುಲ್ಲು, ಕಡ್ಡಿ, ಕಟ್ಟಿಗೆ ಮುಂತಾದವ್ಯಗಳು ಸುತ್ತಮುತ್ತಲಿರುವ ಹಳ್ಳಿಗಳಿಂದ ಬರುವ ನೆಂತಲೂ, ಅನುಭವವಾಡಿಕೊಳ್ಳಬಹುದು.

ಸಶೇಷ.

೪. ನಿಶ್ವಾಸದಗಾಳಿಯಾವಾಗಲು ಹೆಚ್ಚುಕಡಿಮೆ ನೀರಿನ ಆವಿ ವಿಶ್ರವಾಗಿರುವದು.
೫. ನಿಶ್ವಾಸದ ಗಾಳಿಯಲ್ಲಿ ಸ್ವಲ್ಪ ಸಾವಯವಸಂಬಂಧವಸ್ತುಗಳಿವೆ.
೬. ಸಾರಜನಕವು ನಿಶ್ವಾಸದ ಗಾಳಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿರುವದು.
ಉಚ್ಛ್ವಾಸ ಗಾಳಿಯಲ್ಲಿ ಒಂದೆ ಆಗಿರುವದು.

ನಿಶ್ವಾಸೋಚ್ಛ್ವಾಸಗಳಿಂದ ಉಂಟಾಗುವ ಪ್ರಯೋಜನಗಳು.

ನಮ್ಮ ಶರೀರದಲ್ಲಿ ಉತ್ಪತ್ತಿಯಾದ ಇಂಗಾಲಾವಮ್ಲಾದಿಗಳನ್ನು ಹೊರಕ್ಕೆ ತೆಗೆದುಹಾಕಿ ನಮ್ಮ ಪ್ರಾಣಸಂರಕ್ಷಣೆಗೆ ಅತ್ಯವಶ್ಯಕವಾದ ಆಮ್ಲಜನಕವನ್ನು ತೆಗೆದು ಕೊಂಡು ಅನೇಕ ಕಾರಣಗಳಿಂದ ಶರೀರದಲ್ಲಿ ಮಲಿನವಾದ ರಕ್ತವನ್ನು ಶುದ್ಧಿಮಾಡಿ ಶರೀರದಲ್ಲಿ ಸಂಚರಿಸುವುದಕ್ಕೆ ಯೋಗ್ಯವಾಗಿ ಮಾಡುವುದು. ಶ್ವಾಸಕೋಶಗಳು ಶರೀರದಲ್ಲಿ ಒಂದು ಮುಖ್ಯವಾದ ಶೋಧಕಾವಯವವಾಗಿವೆ.

ಭೂವಿವರಣೆಯನ್ನು ಬೋಧಿಸತಕ್ಕ ವಿಧಾನ.

:o:

ಲಂಡನ್‌ಸ್ಕೂಲ್ ಬೋರ್ಡಿನಲ್ಲಿ ಮೆ॥ ಜಾರ್ಜ್, ಜಿ. ಚಿಸ್ಹೊಲ್ಮ್, ಎಂ. ಎ., ಬಿ. ಯಸ್. ಸಿ. ಯವರು ಭೂವಿವರಣೆಯನ್ನು ಬೋಧಿಸುವ ವಿಧಾನದ ವಿಚಾರಪ್ರಸಂಗಿಸಿರುವುದನ್ನು ನಮ್ಮ ದೇಶದ ಉಪಾಧ್ಯಾಯರ ಉಪಯೋಗಾರ್ಥ ಇಲ್ಲಿ ಸಂಕ್ಷೇಪವಾಗಿ ಕನ್ನಡಿಸಿರುವೆವು.)

ಜನರಿಗೆ ನಾಸಸಾದನವಾದ ಪೃಥ್ವಿಯ ಶಾಸ್ತ್ರೀಯವರ್ಣನೆಗೆ ಭೂವಿವರಣೆಯೆಂದು ಹೇಳುವರು, ಪಾಠಶಾಲೆಗಳಲ್ಲಿ ಬಾಲಕರಿಗೆ ಕೇವಲ ಪೃಥ್ವಿಯ ಶಾಸ್ತ್ರೀಯ ವರ್ಣನೆಯನ್ನು ಬೋಧಿಸುವುದಕ್ಕಿಂತ ಜನಾಂಗಗಳು ಮಾಡಿಕೊಂಡಿರುವ ದೇಶಗಳು ಅವುಗಳ ನಾಗರಿಕತೆ ರಾಜ್ಯಭಾರಕ್ರಮ ಮುಂತಾದವುಗಳನ್ನು ಬೋಧಿಸುವುದು ಪ್ರಯೋಜನಕಾರಿಯು. ಈಚೆಗೆ ಬಾಲಕರ ಉಪಯೋಗಾರ್ಥವಾಗಿ ಬರೆದಿರತಕ್ಕ ಭೂವಿವರಣೆ ಪುಸ್ತಕಗಳಲ್ಲಿ "ನಾನಾ ಜನಾಂಗಗಳು ಇರುವ ಭೂಪ್ರದೇಶಗಳು, ಜನಾಂಗಗಳ ನಾಗರಿಕತೆ, ಜನಾಂಗಗಳು ಸೇರತಕ್ಕ ಮತ್ತು ಚಲಿಸತಕ್ಕ ಕ್ರಮಗಳನ್ನು ಬೋಧಿಸತಕ್ಕುದಕ್ಕೆ ಭೂವಿವರಣೆ" ಎಂದು ವಿವರಿಸಿರುವರು.

ಈ ರೀತಿಯಲ್ಲಿ ಭೂವಿವರಣೆಯನ್ನು ಅಭ್ಯಾಸಿಸುವದು ಸುಲಭವೆಲ್ಲವು. ಜನಾಂಗಗಳ ವಿಷಯವಾಗಿ ಅನೇಕ ಸಂಗತಿಗಳನ್ನು ವಿಚಾರಿಸಬೇಕಾಗಿ ಬರುವುದು. ವಿಶೇಷ ವಿಷಯಗಳನ್ನು ಚರ್ಚಿಸಲು ಯತ್ನಿಸದೆ ಮುಖ್ಯವಾದ ಈ ವಿಷಯಗಳಿಗೆ ಮಾತ್ರ ಗಮನಕೊಡಬೇಕು. ಅವು ಯಾವವೆಂದರೆ :—

ಇತರ ಪ್ರದೇಶಗಳಿಗಿಂತ ಕೆಲವು ಪ್ರದೇಶಗಳಲ್ಲಿ ಮಾತ್ರ ಜನಸ್ತೋಮವಿರುವ ಕಾರಣವೇನು? ಜನಾಭಿವೃದ್ಧಿಯಾಗಲು ಯಾವ ಅನುಕೂಲಗಳಿರಬೇಕು? ಜನ

ಬಲ ಜಯ ಹಣ ಈಗ

ಬರ ಭಯ ದನ ಊಟ

ಮಲ ಗಜ ಹದ ಓಟ

ರಸ ಜಲ ಆಟ ಅಂದ

ಜಗಳ ಚಂಚಲ ಸದನ

ಕದನ ಸಂಬಳ ಗಂಧಕ

ಮಂಗಳ ಅಂಗಳ ಹಸರ

ಜನಕ ಉಭಯ ಬಸವ

ಆಡಂಬರ ಪರಧನ

ಭರವಸ ನರವರ

ಸಮಬಲ ಉಪವನ

ಕಮಲನಯನ

ಜಯಮಂಗಳ.

---

೧ ೨ ೩ ೪ ೫ ೬ ೭ ೮ ೯ ೧೦

1 2 3 4 5 6 7 8 9 10

ವರ್ಣಮಾಲೆ.

ಅ ಆ ಇ ಈ ಉ ಊ ಋ ೠ

ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ ಚ ಛ ಜ ಝ ಞ

ಟ ಠ ಡ ಢ ಣ ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ

ಸೂ. ೧. ಸಂಪೂರ್ಣವಾದ ವರ್ಣಮಾಲೆಯನ್ನು ಈ ಪಾಠದಲ್ಲಿ ಕೊಟ್ಟಿದೆ. ಇವುಗಳಲ್ಲಿ ಯಾವ ಅಕ್ಷರವನ್ನಾಗಲಿ, ಓದುವುದೂ, ಬರೆಯುವುದೂ ಹುಡುಗರಿಗೆ ಬಂತೆಂಬುದನ್ನು ಜೆನ್ನಾಗಿ ಪರೀಕ್ಷಿಸಿ ನೋಡಬೇಕು.

. ಚಿತ್ರದಲ್ಲಿ ಅಕ್ಷರಗಳ ಭೇದಗಳನ್ನು ಒಂದು ಮರದಂತೆಯೂ ಕವಲುಗಳಂತೆಯೂ ತೋರಿಸಿಕೊಡತಕ್ಕದ್ದು.

ಅ. ೧. ಪ ಫ ಷ, ಬಿ ಜ ಜ್ಞ, ಇವು ಯಾವ ಅಕ್ಷರಗಳು?

೨. ಯಾವ ಅಕ್ಷರಗಳಿಗೆ ಕೆಳಗಡೆ ನಿಡುಗೆರೆಗಳು ಬರುವವು. ಧ ಛ ಝ, ಮುಂತಾದುವು.

೩. ತ್ರ, ನ ಇವುಗಳ ನಡುವೆ ಬರುವ ಅಕ್ಷರಗಳನ್ನು (ಥ ದ ಧ) ಹೇಳು

೪. ಲಕ್ಷ್ಮಿ; ತಂಗಿ, ಅಣ್ಣ, ಬಲರಾಮ, ಇವುಗಳಲ್ಲಿ ಮೊದಲಕ್ಷರಗಳನ್ನು ಮಾತ್ರ ಬರೆದು ತೋರಿಸಿರಿ.

೫. ಾ ಿ ೀ ು ೂ ೃ ೆ ೇ ೈ ೊ ೋ ೌ ್

ಈಗ ದ ವ ನ ಬಹಳ, ಎಂದು ಬರೆಯಲು ಮೇಲಣ ಆಕೃತಿಗಳಿಗೆ ಏನೇನು ಸೇರಿಸುವಿರಿ? ಚಿತ್ರಿಸಿರಿ.

ವಸ್ತುಪಾಠ.

ಇನ್‌ಫೆಂಟ್ಸ್ ಎ. ಬಿ. ಕ್ಲಾಸಿಗೆ—ಬೇಕಾದ ವಸ್ತು;—ಮುಸುಕಿನಜೋಳ

ಮಾದರಿ:—ಹಳದಿ, ಕೆಂಪು, ವಿಶ್ರ

ಪೀಠಿಕೆ.	ಪಾಠಕ್ರಮ.
೧ ಹೆಸರು:—ಮುಸಕಿನಜೋಳ.	ಪ್ರಥಮಪಾಠದಲ್ಲಿ ಬಾಲಕರಿಗೆ ವಸ್ತುವನ್ನು ತೋರಿಸದೆ ಪ್ರಶ್ನೆಗಳ ಮುಖಾಂತರ ಹೇಳಿಸಬೇಕು. ಹಾಗಿಲ್ಲದೆ ಹೋದರೆ ವಸ್ತುವನ್ನು ತೋರಿಸಿ ಹೇಳಿಸುವುದು ಮತ್ತೂ ಹೆಸರನ್ನು ಕಪ್ಪುಹಲಿಗೆಯ ಮೇಲೆ ಬರಿಸುವುದು.
೨ ವಿಧಗಳು = ಬಣ್ಣ ೧ ಹಳದಿ ೨ ಕೆಂಪು ೩ ವಿಶ್ರ	ಬಾಲಕರಿಂದಲೆ ಮೂರು ವಿಧವೆಂದು ಹೇಳಿಸುವುದು. ಮತ್ತು ವಸ್ತುಮುಖಾಂತರ ಬಾಲಕರಿಂದ ಪ್ರಶ್ನೆಗಳ ಮೂಲಕ ವಿಧಗಳನ್ನು ತಿಳಿಸುವುದು.
೩ ಬೆಳೆಯುತಕ್ಕ ಸ್ಥಳ. ೧ ಇಂಡಿಯಾ ೨ ಅಮೆರಿಕಾ ೩ (ಉ) ಹಿಂದೂಸ್ತಾನ.	ಬಾಲಕರಿಂದಲೇ ಇಂಡಿಯಾ; ಅಮೆರಿಕಾ, (ಉ) ಹಿಂದೂಸ್ತಾನ ಮೊದಲಾದ ಕೆಲವು ಸ್ಥಳಗಳಲ್ಲಿ ಬೆಳೆಯುತ್ತೆಂದು ಹೇಳಿಸುವುದು. ಇವುಗಳನ್ನು ಮ್ಯಾಪಿನಲ್ಲಿ ತೋರಿಸುವುದು.
೪ ಉತ್ಪತ್ತಿ.	ಇದನ್ನು ಮುಖ್ಯ ಬೆಳೆ ತೆಗೆಯುವ ರೀತಿಯಲ್ಲಿ ಬೆಳೆಯನ್ನು ತೆಗಿಯುತ್ತಾರೆಂದು ಹೇಳಿಸುವುದು. ಕೆಲವು ಸ್ಥಳಗಳಲ್ಲಿ ಬತ್ತ, ರಾಗಿ, ಗೋಧಿ ಇವುಗಳ ಹಾಗೆಯೇ ಬೆಳೆಯುತ್ತಾರೆ. ಮತ್ತು ಭಾವಿ, ಕಾಲುವೆ ಇವುಗಳ ಅಧಾರದಿಂದಲೂ ಬೆಳೆಯುತ್ತಾರೆ.

ಪರೀಕ್ಷೆ.

೧. ೦೦೦ ಈ ಮೂರು ಸೊನ್ನೆಗಳ ಆಕೃತಿಯಿಂದ ಜೋಡಿಸಿರುವದರಲ್ಲಿ ಬಿತ್ತುಗಳನ್ನು ಬದಲಾಯಿಸಿ ರಂಗ ಎಂಬ ಹೆಸರನ್ನು ಮಾಡು.

೨. ರಾಮು, ಈಶ್ವರ, ಸಾವಿತ್ರಿ ಈ ಶಬ್ದಗಳ ಮೊದಲಕ್ಷರಗಳನ್ನು ಬರೆ.

೩. ನ. ರ ಇವುಗಳ ನಡುವೆ ೧ ಅಕ್ಷರವನ್ನು (ಒಂದು ಊರಿನ ಹೆಸರಾಗುವಂತೆ) ಬರೆದು ಓದು. ನಗರ.

೪. ಕರಟು, ನಗರ, ಕವಚ ಇವುಗಳ ಅಂತ್ಯಾಕ್ಷರಗಳನ್ನು ಮಾತ್ರ ಬರೆದು ಓದು. = ಟರಚ

೫. ಜನವ, ತವರ, ಇರಿ ಇವುಗಳಲ್ಲಿನ ಕೊನೆಯ ಅಕ್ಷರಗಳನ್ನು ಮಾತ್ರ ಬರೆದು ಓದು. = ವರಹ.

೬. ಗಂ ಗ, ದಂ ಡ, ವನ ಜ ಈ ಗುರುತುಗಳಿವೆ. ಇವುಗಳನ್ನು ಗಂಗ, ದಂಡ, ವನಜ ಮಾಡಿ ಓದು.

೭. ಗಜನದನ, ಪಂಚನು, ನವುರಥ ಇವುಗಳನ್ನು ಬರೆದು ಓದು.

೮. ಈ ಚಿತ್ರಗಳನ್ನು ಓದಿ ಪೂರ್ಣವಾಗಿ ಕಾಳುಗಳ ನಿಡು.

(ಅಂಗ) ..... (ಕಂಕಣ)

೯. ಒ, ಎ, ಇಂಥವುಗಳ ಆಧಾರದಮೇಲೆ ನಾಲ್ಕೈದು ಅಕ್ಷರಗಳನ್ನು ಮಾಡಿ ಅವುಗಳ ಹೆಸರುಗಳನ್ನು ಹೇಳು.

೧೦. ಅ ೧ ಲ, ಸ ೧ ರ, ಸಂ ೧ ನು. ಇಲ್ಲಿ ೧ ಇರುವುವುಗಳಿಗೆ ತಲೆ ಕಟ್ಟು ಕೊಟ್ಟು ಓದು.

ವ್ಯಾಕರಣ ಶಾಸ್ತ್ರಂ

ಚತುರ್ಥೀವಿಭಕ್ತಿ ಸಾಮಾನ್ಯವಾಗಿ ಸಂಪ್ರದಾನಾರ್ಥದಲ್ಲಿ ಬರುವುದು, ಎಂದು ಹಿಂದೆ ಹೇಳಲ್ಪಟ್ಟಿತು. ಇದು ಕೆಲವು ಶಬ್ದವಿಶೇಷಗಳ ಯೋಗವಿದ್ದಾಗಲು, ಕೆಲವು ಅರ್ಥವಿಶೇಷಗಳು ತೋರುತಿದ್ದಾಗಲು, ಬರುವುದುಂಟು. ಈ ವಿಷಯವನ್ನು ಶಬ್ದಾನುಶಾಸನದಲ್ಲಿ, — " ಶಕ್ತಿರುಚೀಷ್ಯಾರ್ಥ್ಯಸೂಯಾದ್ರೋಹ ಕ್ರೋಧ ಮತ್ಸರ ಭೀತ್ಯುನ್ನತಿ ಸ್ವಭಾವಾವನತೀಷ್ಟಾನಿಷ್ಟ ಸಾದೃಶ್ಯಪ್ರತಿನಿಧ್ಯರ್ಥೈಃ ॥ ೨೧೪ ॥ ಆಶಿಷ್ಯೇದ್ವೇಶ್ಯೆ ॥ ೨೧೫ ॥ ಸ್ವಾಹಾಸ್ವಧಾವಷಡ್ಯೋಗೇ ॥ ೨೧೬ ॥ ತಾದ್ಯರ್ಥೇ ॥ ೨೧೭ ॥ ಉತ್ಪಾತೇನ ಜ್ಞಾಪ್ಯೇ ॥ ೨೧೮ ॥ ಬಗೆತಃಕರ್ಮಣಿವಾಯತೋವಹ್ನಾ ॥ ೨೧೯ ॥ " ಎಂದು, ಬೇರೆ ಬೇರೆ ಅರ್ಥಗಳಲ್ಲಿ ಬರುವುದಕ್ಕಾಗಿ ಆರು ಸೂತ್ರಗಳು ಮಾಡಲ್ಪಟ್ಟಿರುವವು. ಶಬ್ದಮಣಿದರ್ಪಣಕಾರನಾದರೊ, ಇವೆಲ್ಲವನ್ನೂ ಸಂಗ್ರಹಿಸುವಂತೆ,

ಸೂ ॥ " ನುತಸಂಪ್ರದಾನರೂಢಂ । ಚತುರ್ಥಿಯದುರುಚಿಯೊಳೀರ್ಷ್ಯೆಯೊಳ್ಕಚ್ಚರದೊಳ್ ॥ ಹಿತದೊಳ್ಸಂಖ್ಯೀತಿಯೊಳುಂ । ನತಿಯೊಳ್ಸ್ವಸಾತ್ಯಾದಿಯೊಳ್ಸ್ವಭಾವಸ್ಥಿತಿಯೊಳ್ ॥ ೧೨೯ ॥

ಪ್ರವಿದಿತಹೇತುವಿನೊಳ್ಸಂ । ದವನತೆಯೊಳಾಪ್ರಾಣ್ಯನಾದರಸ್ಮರಣದೊಳು ॥ ದ್ಭವಿಸಿದನೀಪ್ಸಿತದೊಳ್ಸಸೃ । ಶವೃತ್ತಿಯೊಳ್ಪ್ರತಿ ನಿಧಾನದೊಳವಿಷ್ಟದೊಳಂ ॥ ೨೩೦ ॥ "

ಎಂಬ ಸೂತ್ರಗಳನ್ನು ಹೇಳಿರುವನು.

ಇದರಲ್ಲಿ ಶಕ್ತಿಯೆಂದರೆ ಸಾಮರ್ಥ್ಯವು, (ಬಲ) ರುಚಿಯೆಂದರೆ ಪ್ರೀತಿಯು, ಇರ್ಷ್ಯೆಯೆಂದರೆ ಅಸಹನೆಯು, ಅಸೂಯೆಯೆಂದರೆ ಗುಣಗಳೆಲ್ಲೂ ದೋಷವನ್ನಾರೋಪಿಸುವುದು, ದ್ರೋಹವೆಂದರೆ ಅಪಕಾರವು, ಕ್ರೋಧವೆಂದರೆ ಕೋಪವು, ಮತ್ಸರವೆಂದರೆ ಅನ್ಯರ ಏಳಿಗೆಯಲ್ಲಿ ದ್ವೇಷವು, ಭೀತಿಯೆಂದರೆ ಭಯವು, ಉನ್ನತಿಯೆಂದರೆ ಆಧಿಕ್ಯವು, ಸ್ವಭಾವವೆಂದರೆ ಸಹಜವಾದ ಗುಣವು, ಅವನತಿಯೆಂದರೆ ನಮಸ್ಕಾರವು, ಸಾದೃಶ್ಯವೆಂದರೆ ಒಂದಕ್ಕೊಂದನ್ನು ಹೋಲಿಸುವುದಕ್ಕೆ ಬೇಕಾದ ಗುಣವು, (ಇದಕ್ಕೆ ಉಪಮಾನವೆಂದುಹೇಳುತ್ತಾರೆ) ಪ್ರತಿನಿಧಿಯೆಂದರೆ ಪ್ರತಿಕಲ್ಪವು (ಒಂದಕ್ಕೆ ಬದಲಾಗಿರುವ ಮತ್ತೊಂದುವಸ್ತು), ಈಯರ್ಥಗಳನ್ನು ಬೋಧಿಸುವ ಶಬ್ದಗಳ ಯೋಗವಿದ್ದರೂ, ಆಶೀರಾರ್ಥ

೫ ವರ್ಣನೆ.

೧ ಉದ್ದ

೨ ದಪ್ಪ

೩ ವರಟು

ಇದು ಯಾವಾಗ್ಯೂ ಘನಾಕೃತಿಯಲ್ಲಿಯೇ ಇರ.ವುದೆಂದೂ ವರಟು ಮತ್ತು ಉದ್ದವಾಗಿರುವುದೆಂದೂ ಬಾಲಕರಿಂದಲೇ ಹೇಳಿಸುವುದು. ಚೆನ್ನಾಗಿ ಬೆಳೆದ ಪೈರು ೬. ೭ ಅಡಿಗಳವರಿಗೂ ಮತ್ತು ಂಒಂದ ಸೈರಿಗೆ ೫ ೬ ತೆನೆಗಳವರಿಗೂ ಬಿಡುತ್ತೆಂಕಲೂ, ಒಂದು ತೆನೆಗೆ ೬೦೦, ೭೦೦ಕಾಳುಗಳು ಇರುವದೆಂದೂ ಬಾಲಕರಿಂದಲೇ ಹೇಳಿಸುವುದು.

೬ ಉಪಯೋಗ.

ಇದನ್ನು ಒಣಗಿಸಿ ಕಾಳನ್ನು ಬೀಸಿ ಹಿಟ್ಟನ್ನು ಮಾಡಿ ಅದರಿಂದ ರೊಟ್ಟಿ ಮೊದಲಾದ ಭೋಜನಸಾಮಗ್ರಿಯನ್ನು ಮಾಡುತ್ತಾರೆ. ಇದರ ಕಡ್ಡಿ ಹಸೀದಾಗಿದ್ದಾಗ ದನಗಳಿಗೆ ಸಣ್ಣಗೆ ಕತ್ತರಿಸಿ ಆಹಾರಕ್ಕಾಗಿ ಉಪಯೋಗಿಸುತ್ತಾರೆ.

ಇದನ್ನೆಲ್ಲಾ ಒಣಗಿಸಿ ಮನೆಯಹೊದಿಕೆಗಳಿಗೆ ಉಪಯೋಗಿಸುತ್ತಾರೆ. ಉತ್ತರ ಹಿಂದೂಸ್ತಾನದಲ್ಲಿ ಇದರ ಕಾಳಿನಮೆಲಿನ ಮುಸುಕನ್ನು ಚನ್ನಾಗಿ ತೆಗೆದುಹಾಕಿ ಬೀಸಿ ಸಣ್ಣ ಹಬ್ಬಿಗಳಿಗೆ ತುಂಬಿ ಅನೇಕ ದೇಶಗಳಿಗೆ ವಾರಾಟಕ್ಕಾಗಿ ಕಳುಹಿಸುತ್ತಾರೆ. ಮತ್ತು ತೆನೆಗಳು ಎಳೆಯದಾಗಿರುವಾಗ ಬೇಯಿಸಿಯಾದುರೂ ಸುಟ್ಟಾದರೂ ಜನಗಳು ತಿನ್ನುತ್ತಾರೆಂದು ಬಾಲಕರಿಂದ ಹೇಳಿಸುವುದು.

ಇದನ್ನೆಲ್ಲಾ ಬಾಲಕರಿಂದಲೇ ಹೇಳಿಸಿ ಕಪ್ಪುಹಲಿಗೆಯಮೇಲೆ ಬರೆಸಿತೋರಿಸಬೇಕು.

ಬಿ. ವೆಂಕಟೇಶಯ್ಯ
ಟೀಚರ್ ಪೇಸಂದ್ರದ ಹೊ॥ ಸ್ಕೂಲ್

ಶಾಸನದಲ್ಲಿ ಕೊಟ್ಟಿರುವ, ಮಲ್ಲನಿಗೆ ಮಲ್ಲನು ಶಕ್ತನು, ಎಂಬ ವಾಕ್ಯಕ್ಕೆ ಒಬ್ಬ ಮಲ್ಲನಿಗಿಂತಲೂ, ಮತ್ತೊಬ್ಬ ಮಲ್ಲನು ಅಧಿಕಶಕ್ತನೆಂದರ್ಥವಲ್ಲ, ಹಾಗೆ ಅಧಿಕಾರ್ಥಕ್ಕೆ ಉದಾಹರಣೆಯಾಗಿರುವ ಪಕ್ಷದಲ್ಲಿ ಮುಂದೆ ಅಧಿಕಾರ್ಥಕ್ಕೆ ಬೇರೆ ಉದಾಹರಣೆ ಕೊಟ್ಟಿರುವದು ಅಸಂಗತವಾಗುವದು. ಆದುದರಿಂದ, ಈ ವಾಕ್ಯಕ್ಕೆ ಮಲ್ಲನಿಗೆ ಮಲ್ಲನು ಸಮಬಲನು, ಎಂದು ತಾತ್ಪರ್ಯವನ್ನೇ ಹೇಳಬೇಕು. ಇಲ್ಲಿ ಸಾದೃಶ್ಯಪೂರ್ವಕವಾಗಿಯೇ ಶಕ್ತಿ ತೋರುವದರಿಂದ ಸಾದೃಶ್ಯದಲ್ಲಿ ಅಂತರ್ಭಾವವನ್ನು ಹೇಳಬಹುದು.

(ಸಶೇಷ:)

(೧೯ ನೇ ಪುಟದ ಶೇಷ)

ಮೇಲಿನ ಅಭ್ಯಾಸಗಳನ್ನು ಮಾದರಿಗಾಗಿ ಕೊಟ್ಟಿರುತ್ತೇವೆ. ಮಕ್ಕಳ ಅಭಿವೃದ್ಧಿಯಲ್ಲಿಯೂ, ಅವರಲ್ಲಿಯೂ ಯಥಾರ್ಥ ವಿಶ್ವಾಸವುಳ್ಳ ಉಪಾಧ್ಯಾಯನು ಅನೇಕ ಅಭ್ಯಾಸಗಳನ್ನು ಕಲ್ಪನೆ ಮಾಡಿ ಸಾಧನೆ ಮಾಡಿಸಬಹುದು. ಆದರೆ ಅತನು ಕೆಳಗಣ ಅಂಶಗಳನ್ನು ಮಾತ್ರ ಬಾಲಕರಿಗೆ ಅಭ್ಯಾಸಮಾಡಿಸುವಾಗೆಲ್ಲ ನೆನಪಿಗೆ ತಂದುಕೊಳ್ಳಬೇಕು.

(೧) ಹೆಚ್ಚು ಆಯಾಸವಾಗದೆ ಮಕ್ಕಳ ದೇಹದ ಎಲ್ಲಾ ಭಾಗಗಳಿಗೂ ಸಾಧನೆಯಾಗಬೇಕು. (೨) ಅದೇರೀತಿಯಲ್ಲಿ ಅವರ ಮನಸ್ಸಿನ ಎಲ್ಲಾ ಶಕ್ತಿಗಳೂ ವೃದ್ಧಿಹೊಂದಬೇಕು. (೩) ಹೆಚ್ಚು ಚಟುವಟಿಕೆಯನ್ನು ದುರ್ಬಾರ್ಗದಲ್ಲಿ ಉಪಯೋಗಿಸುತ್ತಿರುವವರನ್ನು ಅಡ್ಡಿ ಮಾಡಿ ಆ ಚಟುವಟಿಕೆಯನ್ನು ಸರಿಯಾದ ಮಾರ್ಗದಲ್ಲಿ ಉಪಯೋಗಿಸುವುದಕ್ಕೆ ಹಚ್ಚಬೇಕು. (೪) ಬುದ್ಧಿ ಇಲ್ಲದಂತೆ ಮಂಕಾಗಿರುವ ಮಕ್ಕಳಿಗೆ ಉತ್ತೇಜನ ಕೊಟ್ಟು ಅವರನ್ನು ಕೆಲಸಕ್ಕೆ ಕೈ ಹಾಕುವಂತೆ ಮಾಡಬೇಕು- ಇಂಥ ಕಾರ್ಯಗಳಿಂದ ವರ್ಗದ ಉಲ್ಲಾಸವೂ ಕೆಡದೆ ಬಾಲಕರ ಶಕ್ತಿಯು ವಿಹಾರದೆ ಒಂದೇಸಮನಾಗಿರುವಂತೆ ಕಾಯ್ದುಕೊಳ್ಳಬೇಕು.

ಈ ಅಭ್ಯಾಸಗಳು ಮಾಡಿಸಿದ ತರುವಾಯ ಗಿಡ, ಮರ, ಬಳ್ಳಿ, ಮೃಗ, ಪಕ್ಷಿಗಳನ್ನು ಸೃಷ್ಟಿಮಾಡಿ ನಮ್ಮನ್ನೆಲ್ಲಾ ಕಾಪಾಡಿಕೊಂಡು ಬರುವಂಥ ಭಗವಂತನಿರುವನೆಂದು ತಿಳಿಸಿ ಆ ಭಗವಂತನ ಸ್ತೋತ್ರರೂಪವಾದ ಹಾಡನ್ನು ಹೇಳಿಸಬೇಕು.

ತೋರುವಾಗ ಉದ್ದೇಶ್ಯವಾಚಕವಾದ ಶಬ್ದದಮೇಲೂ, ಸ್ವಾಹಾ, ಸ್ವಧಾ, ವಷಟ್, ಶಬ್ದಗಳ ಯೋಗವಿದ್ದಾಗಲೂ, ತಾದರ್ಥ್ಯ ತೋರುವಾಗಲೂ, ಉತ್ಪಾತದಿಂದ ಜ್ಞಾಪಿಸಲ್ಪಟ್ಟ ವಸ್ತುವಾಚಕ ಶಬ್ದದಮೇಲೂ, ಬಗೆ ಧಾತುವಿನ ಪ್ರಯೋಗವಿದ್ದು, ಆ ಧಾತುವಿನ ಕರ್ಮವಾಗಿಯೂ, ನಿಂದಾಜ್ಞಾಪಕವಾಗಿಯೂ ಇರುವ ಶಬ್ದಗಳಮೇಲೂ, ಚತುರ್ಥಿ ಬರುವುದೆಂದು ಹೇಳಲ್ಪಟ್ಟಿದೆ. ಶಬ್ದಮಣಿದರ್ಪಣದ ಸೂತ್ರಗಳಲ್ಲಿಯೂ ಇದೇ ಅರ್ಥವು ವಿವರಿಸಲ್ಪಟ್ಟಿದೆ

ಆದರ ಶಬ್ದಾನುಶಾಸನದಲ್ಲಿ ಚತುರ್ಥಿಯು ಸಂಪ್ರದಾನಾರ್ಥದಲ್ಲಿ ಸಾಮಾನ್ಯವಾಗಿ ಬರುವುದಲ್ಲದೆ ಶಕ್ತಿ ಮೊದಲಾದ ಇಪ್ಪತ್ತೆರಡು ವಿಷಯಭೇದಗಳನ್ನು ಕಲ್ಪಿಸಿಕೊಂಡು ಚತುರ್ಥೀ ವಿಭಕ್ತಿಯು ವಿಧಿಸಲ್ಪಟ್ಟಿದೆ. ದರ್ಪಣಕಾರನು, ಹದಿನಾರು ವಿಷಯಗಳನ್ನು ಕಲ್ಪಿಸಿ ಹೇಳಿರುವನು. ಸಂಸ್ಕೃತ ವ್ಯಾಕರಣಗಳೆಲ್ಲೂ, ಮೇಲೆ ಹೇಳಿರುವ ವಿಷಯಗಳನ್ನೂ ಹೇಳಿ ಇನ್ನೂ ಕೆಲವು ಸಂದರ್ಭಗಳಲ್ಲಿ ಬರುವುದೆಂದು ಹೇಳುತಾರೆ. ಅದನ್ನು ಆ ವ್ಯಾಕರಣಗಳಿಂದಲೇ ತಿಳಿದುಕೊಳ್ಳಬೇಕು. ಅದು ಸಂಸ್ಕೃತ ಭಾಷಾಶೈಲಿಗೆ ಮಾತ್ರ ಅನುಕೂಲವಾಗಿರುವುದರಿಂದ ಭಾಷಾವ್ಯಾಕರಣಜ್ಞರಾರೂ ಅವನ್ನು ವಿವರಿಸಲಿಲ್ಲ. ಪ್ರಕೃತದಲ್ಲಿ ಶಬ್ದಮಣಿದರ್ಪಣಕ್ಕೂ ಶಬ್ದಾನುಶಾಸನಕ್ಕೂ ವ್ಯತ್ಯಾಸ ತೋರುತ್ತಿಲ್ಲ. ಆದರೂ ಇದು ಪರಸ್ಪರ ವಿರುದ್ಧವಾದುದೇನೂ ಅಲ್ಲ. ಅರ್ಥವಿಶೇಷದಲ್ಲಿ ಸಾಮಾನ್ಯಾಧಿಕ ಭಾವ ತೋರುವುದರಿಂದ ವಿಷಯ ಸಂಖ್ಯೆಗಳು ಹೆಚ್ಚು ಕಡಮೆಯಾಗಿದ್ದಾಗ್ಯೂ ನ್ಯೂನತೆಯೂ ಇಲ್ಲ. ಹ್ಯಾಗೆಂದರೆ ಶಬ್ದಾನುಶಾಸನದಲ್ಲಿ ಶಕ್ತ್ಯರ್ಥಕ ಶಬ್ದ ಪ್ರಯೋಗವಿದ್ದರೆ ಚತುರ್ಥೀ ಬರುವುದೆಂದು ಹೇಳಿ ಮಲ್ಲನಿಗೆ ಮಲ್ಲನು ಶಕ್ತನು, ಅತನಿಗೆ ಈತನು ಸಮರ್ಥನು. ಎಂದು ಉದಾಹರಣೆಯು ಕೊಡಲ್ಪಟ್ಟಿದೆ. ಇದು ಶಬ್ದಮಣಿದರ್ಪಣದಲ್ಲಿ ಕೊಟ್ಟಿಲ್ಲ. ಆದರೂ ಸಾದೃಶ್ಯಾರ್ಥಕ ಶಬ್ದಪ್ರಯೋಗವಿದ್ದರೆ ಚತುರ್ಥಿಯನ್ನು ಹೇಳಬೇಕೆಂದು ಹೇಳಿ, ಆತಂಗೀತಂತಕ್ಕಂ, ಐರಾವತಕ್ಕೆ ಸುಪ್ರತೀಕ ತೋರಗೆ, ಎಂದು ಉದಾಹರಣೆಯು ಕೊಡಲ್ಪಟ್ಟಿದೆ. ಇಲ್ಲಿ ತಕ್ಕಂ, ಒರಗೆ, ಎಂಬೀ ಪದಗಳಿಂದ ಶಕ್ತ್ಯರ್ಥವು ಸ್ಪಷ್ಟವಾಗಿ ತೋರದಿದ್ದರೂ ಸಾದೃಶ್ಯಧರ್ಮಗಳು ಅನೇಕವಿರುವದರಿಂದಲೂ, ಸಾಮಾನ್ಯ ಧರ್ಮದಲ್ಲಿ ವಿಶೇಷ ಧರ್ಮವು ಸೇರಿಯೇ ಇರುವದರಿಂದಲೂ, ಪ್ರಕೃತದಲ್ಲಿ ಶಕ್ತಿಯಿಂದಲೆ ಸಾಮ್ಯವನ್ನು ಹೇಳಬಹುದಾದುದರಿಂದ ಶಕ್ತ್ಯರ್ಥವು ಇದರಲ್ಲೇ ಅಂತರ್ಭೂತನಾಗಿದೆಯೆಂದು ಹೇಳಬಹುದು. ಆದರೆ ಶಬ್ದಾನು

ಗಳನ್ನು ಉಪಯೋಗಿಸುವ ಜನರನ್ನೂ ಅವರ ಕಸಬನ್ನೂ ತಿಳಿಸಬೇಕು. ನಂತರ ಮೃದುವಾದ ಚಂಡು ಪುಟ ಕೊಡುವದೆಂತಲೂ, ಮರದ ಚಂಡು ನೆಲಕ್ಕೆ ಹೊಡೆದರೆ ಪುಟ ಬಾರದೆ ಇರುವದಲ್ಲದೆ ಓಡೆದುಹೋಗುವುದಾದಕಾರಣ ಮರದ ಚಂಡನ್ನು ಉರು ಳಾಡಿಸಬಹುದು, ಅಂಥ ಚಂಡನ್ನು ಎಸೆಯಬಾರದು ಎಂದು ಹೇಳಬೇಕು. ಇಷ್ಟೆ ಲ್ಲಾ ಮುಂದಟ್ಟಾದ ಬಳಿಕ ಘನವನ್ನು ತೆಗೆದು ತೋರಿಸಿ ಎಲ್ಲರನ್ನೂ ತೆಗೆದುಕೊಳ್ಳು ವಂತೆ ಹೇಳಿ. ಇದಕ್ಕೆ ಘನವೆಂದು ಕರೆಯುವರೆಂಬದಾಗಿ ಹೇಳಿಕೊಟ್ಟು ಇದಕ್ಕೂ ಮರದ ಚಂಡಿಗೂ ಇರುವ ವ್ಯತ್ಯಾಸವನ್ನು ಹೇಳಬೇಕು. ಚಂಡು ಮುಟ್ಟುತ್ತಲೆ ಉರು ಳಾಡುವದೆಂದೂ, ಘನವು ನಿಂತುಕೊಳ್ಳುವದೆಂದೂ ನಿದರ್ಶನದಿಂದ ತೋರಿಸಬೇಕು.

(ಸಶೇಷ)

ಗೆರಸೊಪ್ಪು ಜೋಗು.

ಶಂಕರಾಭರಣ (ನೋಟ್)

ಕೃಷ್ಣಮಹೀಶಕೃಪಾವಿತ ಜಗದೊಳಗದ್ಭುತಮಾಗಿಹು ಜೋಗು ॥—॥

॥೧॥ ಜೋಗಿನಸೊಗಸನು ನೋಡಲದು । ಯೋಗಿಗಳಿಗು ಮನಸಾಗುವು ದು । ಯೋಗಿಗಳರಸ ಕೃಪಾಕರ ಶುಭಕರ ಶಂಕರನೊಲಿವಂತಿರುತಿಹುದು ॥

॥೨॥ ರಾಜಿಪ ಮೈಸೂರ್‌ದೇಶದಲಿ । ರಾಜಿಸುತಿರುವುದು ತೀರ್ಥಳ್ಳಿ । ಸೋ ಜಿಗದಿಂ ತೀರ್ಥಳ್ಳಿ ಸವಿಾಪದಿ ರಾಜಿಸುತಿಹುದಂಬುತೀರ್ಥಮೆದು ॥

॥೩॥ ಅಂಬುತೀರ್ಥಮೆದು ರಾಘುವನ । ಅಂಬುವಿನಿಂದುದ್ಭವಿಸಿದುದು । ಅಂಬುರುಹಾಕ್ಷನ ಕರುಣದಿ ಪುಟ್ಟಲದಂಬುತೀರ್ಥಮೆಂದು ಕರೆಯುವಹ ॥

॥೪॥ ಶರಾವತೀ ನದಿಯುದರಲ್ಲಿ । ಸುರಾಳಿನುತ ಪುಟ್ಟಿಹುದಲ್ಲಿ । ಧರಾಸುತಾಪ ತಿಯಂಬುವಿನೊಳಗಿದು ಪುಟ್ಟದಶರದವೊಲ್ ಬರುತಿಹುದು ॥

॥೫॥ ನೆಟ್ಟನೆವರಹರಿದಾ್ರವತಿಯು । ಪಟ್ಟುಗುಸ್ಪೆಯೋಳ್ ಸೇರುತಲಿ । ಸ್ಫುಟತರವಾಗುತ ಭಾರಂಗಿಯೊಳೆಸೆಹೊಳೆಯಂಬುದನಂ ಸೇರುವುದು ॥

॥೬॥ ಎರಡುನದಿಯು ತಾನೊಡಗೊಂಡು । ಬರುತಬರುತ ವೇಗದೊಳಂದು । ಭರದಿಪಾತತಾಳವಿದೆಂಬಂತಿರುತಿಹ ಜೋಗಿನಗುಂಡಿಯೊಳ್ ಧುಮುಕುವುದು ॥

॥೭॥ ಆಚೆಗೆ ಬೊಂಬೈಶೀಮೆಯದು । ಈಚೆಗೆ ಮೈಸೂರ್ ದೇಶವಿದು । ಆಚೀಚೆಯೊಳನುಕೂಲಗಳಾಗಿಹ ಬಂಗಲೆಗಳು ರಾಜಿಸುತಿಹವು ॥

ಸೂಚನೆ:—ಮೇಲ್ಕಂಡ ಬಣ್ಣಗಳ ಚಂಡುಗಳನ್ನು ಮಾಡುವದಕ್ಕೆ ಹೆಚ್ಚು ಹೇಳತಗಲುವದಿಲ್ಲ. ಅಂಥ ಉಣ್ಣೆಯ ದಾರವನ್ನು ಅಂಗಡಿಯಲ್ಲಿ ತಂದು ಬೆಂಡು (ಕಾರ್ಕ್) ನ್ನಿಟ್ಟು ಅದರಮೇಲೆ ಸಾಧಾರಣವಾದ ಲಿಂಬೇಕಾಯಿಯ ಗಾತ್ರಕ್ಕೆ ಸುತ್ತಿ ಗಂಟುಹಾಕಿದರೆ ಸಾಕು.

೩ನೇ ಅಧ್ಯಾಯ.

ಎರಡನೇ ಕರಣ.

ಕಿಂಡರ್‌ಗಾರ್ಟನ್ ಕರಣಗಳಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿರುವದರಿಂದ ಮೊದಲನೆಯ ಕರಣದಲ್ಲಿ ಉಪಯೋಗಿಸಿದ ಚೆಂಡಿಗೂ ಎರಡನೆಯ ಕರಣದಲ್ಲಿ ಉಪಯೋಗಿಸುವ ವಸ್ತುಗಳಿಗೂ ಸಂಬಂಧವಿದ್ದೇ ಇರುವದು.

ಉಪಕರಣ:—ಈ ಕರಣದ ೬ ಎಂದು ಮೇಲೆ ಗುರ್ತುಮಾಡಿರುವ ಪೆಟ್ಟಿಗೆಯಲ್ಲಿ ಒಂದು ಮರದ ಚಂಡು, ಘನ, ಸಿಲಿಂದರ ಈ ಮೂರು ವಸ್ತುಗಳಿರುವವು. ಪೂರ್ವದಂತೆ ಮಕ್ಕಳಿಗೆ ಕ್ರಮವಾಗಿ ೬ ಎಂದು ಗುರ್ತು ಮಾಡಿರುವ ಪೆಟ್ಟಿಗೆಗಳನ್ನು ಹಂಚಿಕೊಟ್ಟು ಉಪಾಧ್ಯಾಯನು ತಾನೂ ಒಂದು ಪೆಟ್ಟಿಗೆಯನ್ನಿಟ್ಟುಕೊಳ್ಳಬೇಕು. ಕ್ರಮಪ್ರಕಾರ ಪೆಟ್ಟಿಗೆಗಳನ್ನು ತೆಗೆಯಿಸಿ, ಬೆಂಚಿನಮೇಲೆ ಮುಚ್ಚಳವನ್ನೂ ಪೆಟ್ಟಿಗೆಯನ್ನೂ ಸಾಲಾಗಿ ಇಡಿಸಬೇಕು. ಓರೆಯಾಗಿಯೂ ಮುಟ್ಟುತ್ತಲೆ ಕೆಳಕ್ಕೆ ಬೀಳುವಂತೆ ಇಡಕೂಡದು.

ತರುವಾಯ ಪೆಟ್ಟಿಗೆಯಲ್ಲಿರುವ ಚಂಡನ್ನು ತೆಗೆದುಕೊಳ್ಳುವಂತೆ ಮಕ್ಕಳಿಗೆ ಹೇಳಬೇಕು. ಮಕ್ಕಳು ಅದನ್ನು ತೆಗೆದುಕೊಂಡು ಪರೀಕ್ಷಿಸಿ ಅದರ ಹೆಸರನ್ನು ಹೇಳಿ ಮೃದುವಾಗಿ ಇದ್ದ ಉಣ್ಣೆಯ ಚಂಡಿಗೂ ಈ ಚಂಡಿಗೂ ಇರುವ ಸಾಮ್ಯ ವೈಷಮ್ಯಗಳನ್ನು ಮಕ್ಕಳ ಬಾಯಿಂದಲೇ ಹೊರಡಿಸಬೇಕು. ಈ ವಿಧವಾಗಿ ಮರದ ಮತ್ತು ಉಣ್ಣೆಯ ಚಂಡುಗಳನ್ನು ಹೋಲಿಸುವದರಿಂದ ಮಕ್ಕಳು ಮೃದು, ಕಠಿಣ, ವರಟು, ನಯ, ಭಾರ, ಹಗುರ, ಶಬ್ದ, ನಿಶ್ಶಬ್ದ ಮುಂತಾದ ಪದಗಳನ್ನೂ ಆ ಪದಗಳ ಸರಿಯಾದ ಅರ್ಥವನ್ನೂ ನಿದರ್ಶನದಿಂದ ಕಲಿಯುವರು. ತರುವಾಯ ಮತ್ತೊಂದಾವರ್ತಿ ಚೆಂಡನ್ನು ಬೆಂಚಿನಮೇಲೆ ಹಾಕಿದರೆ ಆಗುವ ಶಬ್ದವು ಕೊಡತಿ, ಸುತ್ತಿಗೆ ಮೊದಲಾದ ಆಯುಧಗಳ ಸದ್ದಿನಂತೆ ಇರುವದೆಂಬ ಊಹೆಯು ಬರುವದು. ಅಂಥ ಆಯುಧ

॥೨೦॥ ಹನಿಹನಿಯಾಗಿ ತಾಗರ್ತದಲಿ । ಘನತರಶಬ್ದದಿ ಬಿಳುತಿರಲು । ಘನತರಗುಣಮಣಿಹಾರಿಗಳಿಲ್ಲರು ರಾಕೆಟ್ಟನ್ನುತ ಕರೆಯುವರು ॥

॥೨೧॥ ಫೇನಸಮೂಹವ ನೊಡಗೊಂಡು । ತಾನತಿಶಾಂತದಿ ಭೋರಿಡದೆ । ನ್ಮೌನದಿಬಿಳುತಿರೆ ಡೇಂ ಬ್ಲಾಂಯೆಂಬೆನ್ನುತ । ಕರೆದರು ಪೆಣ್ಮಣಿಭಾವದಲಿ ॥

॥೨೩॥ ಲಹರಿಗಳ್ ಬಿಳುತಿಹ ಸೊಬಗನ್ನು । ಸಹಸನವದನರು ಮಿರುತಿನ್ನು । ಬಹುವಿಸ್ಮಯಪರವಶರಾಗುತ ಜನ । ಚಿತ್ತದೊಳಚ್ಚರಿಪಡುತಿರಲು ॥

॥೨೪॥ ಪಾರವಿಲ್ಲದೆ ಬರುತಿಹವು । ಪಾರವಾಳದಹಕ್ಕಿಗಳು । ಹಾರುಹಾರುತ ರೆಕ್ಕೆಯನೊದರುತ । ಲೆಕ್ಕಿಸಲರಿಯರು ನೋಟಕರು ॥

॥೨೫॥ ಸಹಸ್ರ ಕಿರಣತಾನಿಳಿಯುತಿರೆ । ಸಹಸ್ರವರ್ಣದಿ ರಾಜಿಸುವ । ಮಹಾತ್ಮರೆಲ್ಲ ವಿಚಿತ್ರವಿದೇನುತಿಹ । ಮಹೇಂದ್ರ ಚಾಪಗಳ್ ಶೋಭಿಪುವು ॥

॥೨೬॥ ಧಾರೆಯ ಮೇಲಣ ಚಾಪಗಳು । ಧಾರೆಯು ನಳಿಯುವಂತಿರುತಿಹುವು । ವಾರಿಯು ಕಾಂತಿಯು ಚಾಪದ ಕಾಂತಿಯು । ಮಿಶ್ರವಾಗಿ ಶೋಭಿಸುತಿಹುವು ॥

॥೨೭॥ ಕಾರ್ತೀಕದ ಕೃಷ್ಣ ಪಾಡ್ಯದೊಳು । ಕೀರ್ತಿತವಾದ ವಿಳಂಬಿಯೊಳ್ । ಅರ್ತಿಯಿಂದ ಶ್ರೀಕೃಷ್ಣ ಮಹೀಂದ್ರನು । ನೋಡಿದನೀಜೋಗಿನ ಸೊಬಗಂ ।

॥೨೮॥ ಪರಿವಾರದಿ ತಾನೊಡಗೂಡಿ । ವರ ಕೃಷ್ಣೇಂದ್ರನು ಗಯವಾಡಿ । ಪರಿಮಿತವಿಲ್ಲದ ತೋಷವನಿತ್ತು । ತೆರಳಿದ ಮೈಸೂರ್ ಪುರಿಗಾಗಿ

॥೨೯॥ ಜಯಜಯ ನರಪತಿ ಕೃಷ್ಣೇಂದ್ರ । ಜಯ ಯದುಕುಲ ವಾರಿಧಿಚಂದ್ರ । ಜಯಜಯ ಶುಭಗುಣಸಾಂದ್ರ ನು । ಹೀಂದ್ರನೆ ಪಾಲಿಸು ಪೃಥ್ವಿಯನನವರತಂ ॥

॥೩೦॥ ಕರಿಗಿರಿನಿಲಯ ಶ್ರೀನರಹರಿಯು । ಕರುಣಾನೀರಧಿ ಪೃಥ್ವಿಯಲಿ । ನರಪತಿ ಕೃಷ್ಣೇಂದ್ರನಿಗಾರೋಗ್ಯವ । ಕರುಣದಳಿತ್ತು ಸಂರಕ್ಷಿಸಲಿ ॥

ಜಿ. ಗುಂಡಯ್ಯಂಗಾರ್ ಬಿ. ವೆಂಕಟಾಚಾರ್ಯ

ಕಡಬಿನ ಕಥೆ.

ಮದ್ರಾಸ್ ಪಟ್ಟಣದಂಥ ಒಂದು ದೊಡ್ಡಪಟ್ಟಣ. ಆ ಪಟ್ಟಣದಲ್ಲಿ ರಾಮೆಶಾಸ್ತ್ರಿಗಳೆಂದು ಒಬ್ಬರಿದ್ದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಇಬ್ಬರು ಹೆಣ್ಣು

॥೪॥ ದೂರೆಗಳು ದಯವಾಡುವರೆಲ್ಲ । ಕುರಿಯನು ಜೋಗ್‌ಫಾಲ್ಸ್‌ಯಂ
ತೆಲ್ಲ । ಕುರಮದುವಾಲ್ಕು ವಿಭಾಗದಿ ರಾಜಿಸಿಬಿಳುತಲಿಹದು ಬಲುಚಲುವಿಂದ ॥

॥೬॥ ವೆರೆಯುವ ಕಾನನಗಳಸೊಬಗು । ಹರಿಯುವ ನಿರ್ಝರಗಳವಿರು
ವ । ಸರಸರ ನೋಟಕೆ ಬಲ್‌ಬಲ್ ಹರುಷವಬೀರುತ ವೆರೆಯುತಲಿರುಹುದು ॥

॥೧೦॥ ಸುತ್ತಲು ತರುನಿಕುರುಂಬಗಳು । ವತ್ತಿಬೆಳದು ಬಲ್‌ಸೊಬಗಿನೊಳು ।
ಶತ್ತಲು ವಿಶ್ವಲು ಮೆತ್ತಲುಕಾನನಸಂಪತ್ತದುತಾಮೆರೆಯುವದು ॥

॥೧೧॥ ವರ್ಷಾಕಾಲದೊಳೀ ಝರಗಳ್ । ನೀರದಗಳು ಬಂದು ಮುತ್ತುತಿ
ರಲ್ । ಭೀಕರತರಭಯುವೆನು ಶಿಖರವೊಲೊಮ್ಮರೆಯುತ । ಹಾರುತಹಾರುತ ಬಿಳುತಿಹವು ॥

॥೧೨॥ ಹಿಮಂತಋತುವದು ಬರುತಿರಲು । ಶ್ರೀಮಂತರುದಯವಾಡುವರು ।
ಭೀಮಂತರು ತಾವನುರಾಗದಿಬಲು । ಬಲುಮೆಯಿಂದಲುಗದೆ ನೋಡುವರು ॥

॥೧೩॥ ಸಾರುತ ಬರುತಿಹ ನರದಾರು । ವಿಸ್ತಾರಿದ ಸಾಹಸವಂತರಿವರು ।
ಶರಿಗುವರ್ಣಿಸಲಸದಳವೆನ್ನುತ । ಮರುಗಿ ಮನದಿ ಸಂತೋಷಿಪರು ॥

॥೧೪॥ ಗುಂಡಿಯುವೇಲ್‌ಭಾಗದೊಳೆಂದು । ಭಂಡೆಯೊಂದಿಹುದು ಬೊಂಬೈ
ಕಡೆಯೊಳ್ । ತಂಡವಾಗಿ ಬಲ್‌ದೊಡ್ಡವರೆಲ್ಲರು । ಬರುತಲದನೆ ಸಾರಿಬರುತಿಹರು ॥

॥೧೫॥ ಕೊಲ್ಲಿಯುವೇಲ್‌ಭಾಗದ ಶಿಲೆಯೋಳ್ । ಮೆಲ್ಲನೆಮಲಗುತ ಸಂತಸ
ದೋಳ್ । ಸುಲಲಿತಗಳಾಗಿಹ ಧಾರೆಗಳವು । ಸುರಿಯುವ ಸೊಬಗನೆ ನೋಡುವರು ॥

॥೧೬॥ ಪಾತಾಳದೊಳವು ಬಿಳುತಿರಲು । ಭೂತಾತ್ಮನ ಶಕ್ತಿಯನ್ನುವರು ।
ಭೀತಾತ್ಮರು ತಾವಾಗುತ ಚಿತ್ರವಿಚಿತ್ರವನೋಡುತಲೇಳುವರು ॥

॥೧೭॥ ರಾಜಾಳಿಗಳೆಲ್ಲಸೇರುತಲಿ । ಸೋಜಿಗದಿಂ ತಲೆದೂಗುತಲಿ । ರಾಜಿಪರಾ
ಜಾ, ರೋರರ್, ರಾಕೆಟ್, ಡೇಂಬ್ಲ್ಯಾಂ । ಜೆನ್ನುತಕರೆಯುವರು ॥

॥೧೮॥ ಝರಮದುವೊಂದೇಧಾರೆಯುಲಿ । ಜಾರಿಬೀಳುತಲಿರೆ ಕೊಲ್ಲಿಯಲಿ ।
ವೀರರು ಧೀರರು ಶೂರರುಮಿಲ್ಲರು । ರಾಜಾಯನ್ನುತ ಕರೆಯುವರು ।

॥೧೯॥ ಬಟ್ಟಲಂತೆ ಬಲ್‌ದುಂಡಾಗಿ । ದಿಟ್ಟತನದಿತಾಮಧ್ಯದಲಿ । ಘಟ್ಟ
ಯಾಗಿ ಭೋರ್ಮ್ಮರೆಯುತರೋರರ್ । ರಾಜಮಿತ್ರನಂಸೇರುವರು ॥

॥೨೦॥ ಕೂಡುತರಾಜನರೋರರ್ ತಾ । ನಾಡುತಭರದಿಂಬಿಳುತಿಹಲು । ನೋ
ಡುವರೆಲ್ಲರು ನೋಡುತಪಾಡಿ । ಕೊಂಡಾಡುತ ಮನದೊಳು ಹಿಗ್ಗುವರು ॥

ವಿದ್ಯಾದಾಯಿನಿ

ಭಾಗ ೪.] ಏಪ್ರಿಲ್ ೧೯೦೦. [ಸಂಚಿಕೆ ೪.

ಎಡಿಟರವರ ನೋಟ್ಸ್.

ಯಾವನಸ್ಥರು ಈಚೀಚೆಗೆ ಕನ್ನಡಕಗಳನ್ನು ಉಪಯೋಗಿಸುವುದು ಹೆಚ್ಚಾಗುತಿದೆಯೆಂದು ಪಟ್ಟಣಗಳಲ್ಲಿ ವಾಸಮಾಡುತಿರುವ ಹಿರಿಯರನೇಕರಿಗೆ ತೋರುತಿರಬಹುದು. ಇದಕ್ಕೆ ಚಿಕ್ಕವಯಸ್ಸಿನವರ ನೇತ್ರೇಂದ್ರಿಯದ ಪಾಟವವು ಬರುತ ಬರುತ ಕಡಮೆಯಾಗುತಿದೆಯೆಂಬುದು ಒಂದೇ ಕಾರಣವಲ್ಲ. ಪೂರ್ವದಲ್ಲಿ ಜನಗಳಿಗೆ ದೃಷ್ಟಿ ಕಡಮೆಯಾದರೂ ಅದರ ಪರಿಹಾರಕ್ಕೆ ತಕ್ಕ ಉಪಾಯವು ತಿಳಿಯದಿದ್ದರಿಂದ ಹಾಗೆಯೇ ಇರುತಿದ್ದರು. ಈಗಲಾದರೋ ಅಂಥ ಸಂದರ್ಭಗಳಲ್ಲಿ ತಕ್ಕ ಉಪಾಯಗಳು ಸುಲಭಸಾಧ್ಯವಾಗಿರುವುದರಿಂದ ಜನಗಳು ಅವನ್ನು ಪಡೆದು ತಮಗಿರುವ ಕೊರತೆಯನ್ನು ಕಡಮೆಮಾಡಿಕೊಳ್ಳುತಿರುವರು. ಈ ಕಾರಣದಿಂದ ಈಚಿನವರು ಕನ್ನಡಕಗಳನ್ನು ವಿಶೇಷವಾಗಿ ಉಪಯೋಗಿಸುವಂತೆ ನೋಡುವವರಿಗೆ ಕಾಣಬಹುದು. ಆದರೂ ಈಗ ನಡೆಯುತಿರುವ ವಿದ್ಯಾಭ್ಯಾಸ ಸಾಧನಗಳಲ್ಲಿರುವ ಕೊರತೆಗಳಿಂದ ವಿದ್ಯಾಭ್ಯಾಸಮಾಡಿದವರ ದೃಷ್ಟಿಪಾಟವವೂ ಕೊಂಚಮಟ್ಟಿಗಾದರೂ ಕುಂದುತಿರುವುದೆಂಬುದರಲ್ಲಿ ಸಂಶಯವಿಲ್ಲ. ತುಂಬ ಸಣ್ಣ ಅಕ್ಷರಗಳಲ್ಲಿ ಅಚ್ಚುಹಾಕಿರುವ ಪುಸ್ತಕಗಳನ್ನು ವಿಶೇಷವಾಗಿ ಓದುವುದರಿಂದಲು, ಪಾಠಶಾಲೆಗಳಲ್ಲಿ ಬೇಕಾದಷ್ಟು ಬೆಳಕು ಬರದೆ ಕೆಲವುಕಡೆ ಅನುಕೂಲವಿಲ್ಲದಿರುವುದರಿಂದಲು, ರಾತ್ರಿಕಾಲದಲ್ಲಿ ಸರಿಯಾದ ಬೆಳಕಿಲ್ಲದೆ ಮೊಬ್ಬಾಗಿರುವ ಕಡೆಗಳಲ್ಲೇ ವ್ಯಾಸಂಗಮಾಡುವುದರಿಂದಲೂ ಬಾಲಕರಿಗೆ ದೃಷ್ಟಿಪಾಟವವು ಕೆಡುವುದು. ಮನುಷ್ಯನಿಗಿರುವ ಇಂದ್ರಿಯಗಳೆಲ್ಲೆಲ್ಲ ನೇತ್ರೇಂದ್ರಿಯವು ಪ್ರಧಾನವಾದುದರಿಂದ ಇಂಥ ಕೊರತೆಗಳಿಗೆ ಅವಕಾಶಕೊಡದಂತೆ ನೋಡಿಕೊಳ್ಳುವು ಬಾಲಕರ ತಾಯಿತಂದೆಗಳ ಮತ್ತು ಉಪಾಧ್ಯಾಯರ ಮುಖ್ಯಕರ್ತವ್ಯ

ಮುಕ್ಕಳಿಗೂ ಶಾಸ್ತ್ರಿಗಳು ಜಿನ್ನಾಗಿ ವಿದ್ಯೆಯನ್ನು ಕಲಿಸಿದ್ದರು. ಅವರಲ್ಲಿ ಹಿರೇಮಗಳನ್ನು ತಮ್ಮ ಸೋದರಕಡೆಯ ಒಬ್ಬ ಹುಡುಗನಿಗೆ ಕೊಟ್ಟು ಲಗ್ನ ಮಾಡಿಕೊಟ್ಟಿದ್ದರು. ಆ ಹುಡುಗನು ಒಂದು ಹಳ್ಳಿಯಲ್ಲಿಯೇ ವಾಸವಾಗಿದ್ದನು. ಕೆಲವು ವರ್ಷಗಳಲ್ಲಿ ಆ ಹುಡುಗನ ತಾಯಿತಂದೆಗಳು ತೀರಿಹೋಗಲು, ಆ ಹುಡುಗನು ಮಾವನ ಮನೆಗೆ ಹೋಗಿ ಕೆಲವು ದಿನಗಳಿದ್ದು ತನ್ನ ಹೆಂಡತಿಯೊಡನೆ ಹಳ್ಳಿಗೆ ಹೋಗಬೇಕೆಂದು ಹೊರಟನು. ಅಳಿಯನಿಗೂ ಮಗಳಿಗೂ ಒಳ್ಳೇ ಔತಣ ಮಾಡಿಸಬೇಕೆಂದು, ಕಡಬು, ಕಜ್ಜಾಯ, ಚಿಕ್ಕಿಬೇಕಾದ್ದೆಲ್ಲಾ ಮಾಡಿದ್ದರು. ಅಳಿಯನಿಗೆ ಕಡಬು ಬಹು ರುಚಿಯಾಗಿತ್ತು. ಊಟವಾದಮೇಲೆ ಉಡುಗೆರೆಗಳನ್ನು ತೆಗೆದುಕೊಂಡು ಒಂದು ಭಂಡಿಯಲ್ಲಿ ಕೂತುಕೊಂಡು ತನ್ನ ಹಳ್ಳಿಯ ಮಾರ್ಗವಾಗಿ ಹೊರಟನು. ದಾರಿಯಲ್ಲಿ ಹೆಂಡತಿಗೆ 'ಎಲೆ, ಎಲೆ ಊರಿಗೆ ಹೋದೊಡನೆ ನನಗೆ ಅದು ಮಾಡಿಹಾಕು, ಅದು ಬಹಳ ರುಚಿಯಾಗಿತ್ತು. ಅದು ಮಾಡಲಿಕ್ಕೆ ಏನು ಬೇಕಾದರೂ ತಂದುಕೊಡುತ್ತೇನೆ' ಎಂದು ಹೇಳುತ್ತಾ ಬಂದನು. ಹೆಂಡತಿಗೆ 'ಅದು' ಎಂದರೆ ಯಾವದೊ ತಿಳಿಯದೆ, ಚಿರೋಟಿಯೆ? ಲಾಡುವೆ? ಹಪ್ಪಳವೆ? ಎಂದು ಒಂದೊಂದಾಗಿ ಪೇರ್ಸಿಸಿ, ರುಚಿಹೇಳಿ ಕೇಳಿದರೂ 'ಒಂದುಅಲ್ಲ' ಎನ್ನುತಿದ್ದನು. ಅವಳಿಗೆ ಕಡಬು ಜ್ಞಾಪಕಕ್ಕೆ ಬರಲಿಲ್ಲ. ಹೀಗೆ ಮಾತನಾಡುತಾ ಹೋಗುತಿದ್ದಹಾಗೆ ಹಳ್ಳಿಯು ಸಿಕ್ಕಿತು. ದಿನಾಗಲೂ ಊಟಮಾಡುವಾಗೆಲ್ಲಾ 'ಎಲೆ ಅದುವೆಂದು ಹಾಕುತ್ತೀಯೋ ಇಲ್ಲವೊ' ಎಂದು ಕೇಳುತಿದ್ದನು. ಒಂದುದಿನ 'ಅದು' ಹೇಳಿದಲ್ಲದೆ ನಾನು ಊಟಮಾಡುವುದಿಲ್ಲವೆಂದು ಹಠ ಹಿಡಿದನು. ಆಗ ಅವಳು ಎಷ್ಟು ಹೇಳಿದರೂ ಏಳಲಿಲ್ಲವಾದ್ದರಿಂದ, ಹತ್ತಿರ ನಿಂತು "ಹೀಗೆ ಕೋಪಿಸಿಕೊಂಡರೆ ಏನು ಮಾಡಲಿ" ಎನ್ನಲು, ಗಂಡನಿಗೆ ಸಿಟ್ಟುಬಂದು, ಎದ್ದು ಒಂದು ಏಟು ಕೊಟ್ಟನು. ಅಷ್ಟರಲ್ಲಿ ಮಗ್ಗಿಲಮನೆಯವರು ಯಾರೋ ನೀರಿಗೆಬಂದು ಇವಳನ್ನು ನೋಡಿ 'ಇದೇ ನಮ್ಮ, ಕಡಬು ಊದಿಕೊಂಡಹಾಗೆ ನಿಮ್ಮ ಗಲ್ಲ ಊದಿಕೊಂಡಿದೆಯಲ್ಲಾ' ಎಂದರು. ಆಗ ಮಲಗಿದ್ದವನು ಸರಸರನೆ ಎದ್ದು ಅಗೋ ಅದು, ಆ ಕಡಬು, ಕಡಬು, ಕಡಬು ಮಾಡಿಹಾಕು ಎಂದನು. ಹೆಂಡತಿಯು ನಗುತಾ, ಅಗತ್ಯನಾಗಿ ನಾಳೆ ಮಾಡಿಹಾಕ್ತೀನಿ ಈಗ ಊಟಕ್ಕೆ ಏಳಿ' ಎನ್ನಲು ಆ ಬ್ರಾಹ್ಮಣನು ಎದ್ದು ಊಟ ಮಾಡಿದನ. ಕಡಬಿಗೆ ದವಡೆ ಮೂಲವಾಯಿತು.

ನ್ನು ಏಕಾಗ್ರಚಿತ್ತದಿಂದ ಮಾಡುವುದಕ್ಕಾಗುವುದಿಲ್ಲ. ಯಾಕಂದರೆ ನಮ್ಮ ಬುದ್ಧಿಯು ನಮ್ಮ ಪಂಚೇಂದ್ರಿಯುಗಳಿಗೆ ವಿಷಯಗಳಾದ ಅನೇಕ ಪದಾರ್ಥಗಳಿಂದ ಆಕರ್ಷಿಸಲ್ಪಡುವುದು. ಅದಕ್ಕೆ ಲಗಾಮನ್ನು ಹಾಕಿ ನಾವು ವ್ಯಾಸಂಗ ಮಾಡುವ ಪಾಠಗಳಲ್ಲಿ ನಿಲ್ಲಿಸುವುದು ಕಷ್ಟ. ಆದುದರಿಂದಲೇ ವಿದ್ಯಾಭ್ಯಾಸವನ್ನು ಜನರು ಚಿಕ್ಕವರಾಗಿಯೂ ಪರತಂತ್ರರಾಗಿಯೂ, ತಾಪತ್ರಯುಗಳಿಗೆ ಗುರಿಯಾಗದವರಾಗಿಯೂ ಇರುವಾಗ ಮಾಡಬೇಕು. ಹೀಗೆ ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಮಾಡದೇ ಉದಾಸೀನ ಮಾಡಿದರೆ ಅಂಥಾ ಜನರು ಯವ್ವನ ಬಂದಮೇಲೆ ಚನ್ನಾಗಿ ವಿದ್ಯಾಭ್ಯಾಸ ಮಾಡುವುದಕ್ಕಾಗುವದಿಲ್ಲ. ಪೂರ್ವಕಾಲದಲ್ಲಿ ಈಗಿನಹಾಗೆ ಪಾಠಶಾಲೆಗಳು ಕಾಲೇಜುಗಳು ಯೂನಿವರ್ಸಿಟಿಗಳು ಇರಲಿಲ್ಲ ವಿದ್ಯಾರ್ಥಿಗಳು ಗುರುಸೇವೆಯನ್ನು ಮಾಡಿಕೊಂಡು ಗುರುಕುಲವಾಸ ಮಾಡುತ್ತಾ ಅವರಲ್ಲಿ ವ್ಯಾಸಂಗವನ್ನು ಮಾಡುತ್ತಿದ್ದರು. ಆ ಕಾಲಕ್ಕಿಂತಲೂ ಈಗ ವಿದ್ಯಾಭ್ಯಾಸಕ್ಕೆ ಬಹಳತುಂಬಾ ಪ್ರೋತ್ಸಾಹವೂ ಸಹಾಯಸಂಪತ್ತಿಗಳೂ ಇರುವುವು. ಚನ್ನಾಗಿ ವ್ಯಾಸಂಗ ಮಾಡುವವರಿಗೆ ವೇತನಗಳು ದೊರೆಯುತ್ತವೆ. ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಯೋಗ್ಯತಾ ಪತ್ರಿಕೆಗಳು ಬಿರುದು ಬಿಲ್ಲೆಗಳು ಡಿಗ್ರಿಗಳು ಸಿಕ್ಕುವುವು. ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳಿಗೆ ಅನುಕೂಲವಾದ ಭೋಜನ ವಾಸಯೋಗ್ಯವಾದ ಸೂಟ್ಡೆಂಟ್ಸ್ ಹೋಮುಗಳು ಏರ್ಪಾಡಾಗಿರುವುವು. ಇವುಗಳಲ್ಲಿ ವಿದ್ಯಾರ್ಥಿಗಳಿಗೆ ಚಾಪಲ್ಯವು ಬರದಂತೆಯೂ ಸ್ಪರ್ಧೆಯಿಂದ ವ್ಯಾಸಂಗವು ನಡೆಯುವಂತೆಯೂ ಬೇಕಾದ ಏರ್ಪಾಡುಗಳೆಲ್ಲಾ ಮಾಡಲ್ಪಟ್ಟಿರುವುವು. ಈಗಿನ ಸ್ಕೂಲ್ ಮತ್ತು ಕಾಲೇಜ್ ಏರ್ಪಾಡುಗಳು ವಿದ್ಯಾರ್ಥಿಗಳ ಅಭಿವೃದ್ಧಿಗೆ ಬೇಕಾದ ಸಲಕರಣೆಗಳನ್ನೆಲ್ಲಾ ಹೊಂದಿವೆ. ಬಹಳ ವಿದ್ಯಾವಂತರಾಗಿ ಒಳ್ಳೇ ಪದವಿಯಲ್ಲಿರುವ ದೊಡ್ಡಮನುಷ್ಯರೆಲ್ಲರೂ ತಾವು ವಿದ್ಯಾರ್ಥಿಗಳಾಗಿದ್ದ ಕಾಲವನ್ನು ಸ್ಮರಿಸಿಕೊಂಡು ಅದೆ ತಾವು ನಿಜವಾಗಿ ಸುಖವಾಗಿದ್ದ ಕಾಲವೆಂದು ಭಾವಿಸುತ್ತಾರೆ. ವಿದ್ಯಾರ್ಥಿಗಳಾಗಿರುವ ಕಾಲವು ಜನರು ಮುಂದೆ ತಾವು ಯಾವ ಅಂತಸ್ಥಿನಲ್ಲಿ ಬದುಕಬೇಕೋ ಅದಕ್ಕೆ ಅಸ್ಥಿಭಾರವನ್ನು ಹಾಕತಕ್ಕ ಕಾಲವಾಗಿರುವುದು. ಬಾಲ್ಯದಲ್ಲಿ ನಾವು ಮಾಡುವ ಕೃಷಿಗೆ ಅಪರೂಪವಾದ ಸೆಲವನ್ನು ನಾವು ದೊಡ್ಡವರಾದಮೇಲೆ ಅನುಭವಿಸುವೆವು. ಇದು ಅನುಭವಸಿದ್ಧವಾಗಿರುವುದು. ಅನೇಕ ವಿದ್ಯಾರ್ಥಿಗಳು ಬಾಲ್ಯದಲ್ಲಿ ಕೆಟ್ಟ ಸಹವಾಸವನ್ನು ಮಾಡದೇ ದೇಹಶಕ್ತಿಗೂ, ಬೆಳವಳಿಗೆಗೂ, ಬುದ್ಧಿಕೌಶಲ್ಯಕ್ಕೂ, ಆರೋಗ್ಯ

ಈ ವಿಷಯದಲ್ಲಿ ಮೈಸೂರು ಸರ್ಕಾರದವರು ಈಚೆಗೆ ಹೆಚ್ಚಾಗಿ ಲಕ್ಷ್ಯಕೊಡುತಿದಾರೆ. ಇನ್ಸ್‌ಪೆಕ್ಟರ್ ಜನರಲ್‌ರಾದ ಮೆ॥ ಭಾಭಾಸಾಹೇಬರು, ಬೆಂಗಳೂರು ಸೆಂಟ್ರಲ್ ಕಾಲೇಜ್ ಅಧ್ಯಕ್ಷರಾದ ಮೆ॥ ಕುಕ್‌ಸಾಹೇಬರು ಸಹ ಈ ವಿಷಯದಲ್ಲಿ ಸರ್ಕಾರವರಿಗೆ ಬರೆದಿದ್ದರು. ಮೇಲಿನವರು ಅವನ್ನು ಪರ್ಯಾಲೋಚಿಸಿ ಆ ವಿಷಯವಾಗಿ ತಾವು ಅವಶ್ಯಕವಾಗಿ ಲಕ್ಷ್ಯಕೊಡಬೇಕಾಗಿದೆಯಂತಲೂ, ಏನುಮಾಡಬೇಕೆಂಬುದನ್ನು ನಿರ್ದಿಷ್ಟವಾಗಿ ತಿಳಿಯುಲು ಮೊದಲು ಯಾವುದಾದರೊಂದು ದೊಡ್ಡ ಸಾಠಶಾಲೆಯ ಬಾಲಕರನ್ನೆಲ್ಲಾ ಪರೀಕ್ಷಿಸಿ ಅವರ ನೇತ್ರೇಂದ್ರಿಯದ ಸ್ಥಿತಿಯನ್ನು ತಿಳಿಯಬೇಕೆಂತಲೂ ನಿಶ್ಚಯಿಸಿದಾರೆ. ಇದಕ್ಕಾಗಿ ಬೆಂಗಳೂರಲ್ಲಿರುವ ಸೆಂಟ್ರಲ್‌ಕಾಲೇಜಿನಲ್ಲಿ ಓದುವವರನ್ನೆಲ್ಲ ಪರೀಕ್ಷಿಸಬೇಕೆಂದು ಗೊತ್ತುಮಾಡಿದಾರೆ. ಅದಕ್ಕಾಗಿ ನೇತ್ರೇಂದ್ರಿಯ ವಿಷಯದಲ್ಲಿ ವಿಶೇಷ ಪರಿಶ್ರಮವುಳ್ಳ ವೈದ್ಯರನ್ನು ನಿಯಮಿಸಿದಾರೆ.

ಈ ಪರೀಕ್ಷೆಯಿಂದ ವಿದ್ಯಾಭ್ಯಾಸಮಾಡುವ ಬಾಲಕರಿಗೆ ಸಾಮಾನ್ಯವಾಗಿ ಉಂಟಾಗುವ ದೃಷ್ಟಿದೋಷಗಳು ವ್ಯಕ್ತವಾಗುತಲೂ ಅವುಗಳಿಗೆ ತಕ್ಕ ಪ್ರತೀಕಾರವನ್ನು ಕುರಿತು ಆಲೋಚಿಸುವರು.

***

ಈಸಂದರ್ಭದಲ್ಲಿ ನಮ್ಮ ನಾಚಕರಲ್ಲಿ ಕೆಲವರಿಗೆ ತಿಳಿಯದೆ ಇರಬಹುದಾದ ಒಂದು ಅಂಶವನ್ನು ಇಲ್ಲಿ ಹೇಳಬಹುದು. ಇತರ ರೋಗಗಳಲ್ಲನೇಕದಂತೆ ಕಣ್ಣಿಗೆ ಬರುವ ಜಾಡ್ಯಗಳಲ್ಲೂ ಕೆಲವು ಸಾಂಕ್ರಾಮಿಕವಾಗಿರುವುವು. ಒಬ್ಬ ಬಾಲಕನಲ್ಲಿ ಅಂಥ ರೋಗವಿದ್ದರೆ ಅವನೊಡನೆ ಇರುವ ಬಾಲಕರಿಗೆಲ್ಲ ಅದೇ ರೋಗವು ಕೆಲವುಕಾಲದಲ್ಲಿ ಬರುವುದು. ಇಂಥ ಜಾಡ್ಯವುಳ್ಳ ಹುಡುಗರು ಅನೇಕಮಂದಿ ಬಾಲಕರೊಡನೆ ಸೇರದಂತೆ ತಕ್ಕವರು ನೋಡಿಕೊಳ್ಳಬೇಕು. ಈ ವಿಷಯದಲ್ಲೂ ಮೈಸೂರು ಸರ್ಕಾರವರು ಬಾಲಕರ ಹಿತಕ್ಕೆ ತಕ್ಕ ಏರ್ಪಾಡನ್ನು ಶೀಘ್ರವಾಗಿಯೇ ಮಾಡುವಂತಿದೆ.

ವಿದ್ಯಾಭ್ಯಾಸದ ಕಾಲ.

ಬಾಲ್ಯವು ವಿದ್ಯಾಭ್ಯಾಸಕ್ಕೆ ತಕ್ಕಕಾಲವು. ವಯಸ್ಸಾದಮೇಲೆ ನಮ್ಮ ಬುದ್ಧಿಗೆ ಅನೇಕ ವಿಘ್ನವಾದ ವ್ಯಾಪಾರಗಳು ಉಂಟಾಗುವುವು. ನಾವು ವಿದ್ಯಾರ್ಜನೆಯು

ಳು ತಮ್ಮ ಇಷ್ಟಾರ್ಥ ಪ್ರಾಪ್ತಿಗಾಗಿ ಮಾಡಬೇಕಾದ ಇನ್ನೂ ಕೆಲವು ಕಾರ್ಯಗಳನ್ನೆ ಕುರಿತು ಮದ್ರಾಸು ಹೈಕೋರ್ಟು ಜಡ್ಜಿಗಳಾಗಿಯೂ ನಮ್ಮ ದೇಶೀಯರಲ್ಲಿ ಅದ್ವಿತೀಯ ಪಂಡಿತರೆಂಬದಾಗಿಯೂ ಯಶಸ್ಸನ್ನು ಪಡೆದ ಮೈ॥ ಸರ್. ಟಿ. ಮುತ್ತುಸಾಮಿಯ್ಯರವರ ಕೆಲವು ಹಿತೋಪದೇಶಗಳನ್ನು ಮಾಡಿದಾರೆ. ಅವರು ಹೇಳುವದೇನಂದರ :—

ವಿದ್ಯಾರ್ಥಿಗಳು ಬೆಳಿಗ್ಗೆ ೫ ಘಂಟೆಗೆ ಸರಿಯಾಗಿ ಏಳಬೇಕು. ಪಾಠಗಳು ಘಟ್ಟಿಮಾಡುವುದಕ್ಕೆ ಬೆಳಗಿನಹೊತ್ತು ಬಹಳ ಅನುಕೂಲವಾದದ್ದು. ನಿದ್ರೆಯಿಂದ ದೇಹಕ್ಕೂ ಬುದ್ಧಿಗೂ ವಿಶ್ರಾಂತಿಯು ಆಗಿರುತ್ತದೆ. ಪಾಠವು ಆಗ ಬಹಳ ಸುಲಭವಾಗಿ ಬರುವುದು. ವೃದ್ಧಿಗೆ ಬರಬೇಕೆಂಬ ವಿದ್ಯಾರ್ಥಿಗಳು ಬೆಳಿಗಿನಹೊತ್ತಿನಲ್ಲಿ ಒಂದುನಿಮಿಷವನ್ನೂ ವ್ಯರ್ಥವಾಗಿ ಕಳೆಯಕೂಡದು. ಬೆಳಿಗ್ಗೆ ೫ ಘಂಟೆಗೆ ಏಳಬೇಕಾದರೆ ಹಿಂದಿನರಾತ್ರಿ ೧೦ ಘಂಟೆಯೊಳಗಾಗಿ ನಿದ್ರೆಯನ್ನು ಮಾಡುತ್ತಿರಬೇಕು. ಅನೇಕರು ರಾತ್ರಿ ಬಹಳಹೊತ್ತು ವ್ಯಾಸಂಗಮಾಡುವರು. ಇದು ತಪ್ಪು. ಹಗಲೆಲ್ಲಾ ಬುದ್ಧಿಗೂ ಕಣ್ಣಿಗೂ ಬಹಳ ಕೆಲಸವಿರುವುದು. ಈ ಕೆಲಸದಿಂದ ಅವುಗಳಿಗೆ ಬಹಳ ಬೇಜಾರಾಗಿರುವುವು. ಅವುಗಳಿಗೆ ವಿಶ್ರಾಂತಿಯು ಬಹಳ ಅವಶ್ಯಕ. ಬಲಾತ್ಕಾರದಿಂದ ಅವುಗಳಿಗೆ ಕೆಲಸವನ್ನು ಕೊಟ್ಟರೆ ಕೆಲಸವನ್ನು ಅವುಗಳು ಚನ್ನಾಗಿ ಮಾಡುವುದಿಲ್ಲ. ಅಂದರೆ, ಬೇಜಾರಾದಾಗ ಓದಿದ್ದು ಮನಸ್ಸಿಗೆ ಹತ್ತುವುದಿಲ್ಲ. ಅಂಥಾ ಕಾಲದಲ್ಲಿ ಮಾಡಿದ ವ್ಯಾಸಂಗಗಳು ವ್ಯರ್ಥವಾಗುವುದು. ಆದುದರಿಂದ ೧೦ ಘಂಟೆಯೊಳಗಾಗಿ ಮಲಗಿಕೊಂಡು ೫ ಘಂಟೆಗೆ ಎದ್ದು ಓದುವುದೇ ಲಾಭಕರವಾದದ್ದು. ಯಾವಾಗಲೂ ಬೇಜಾರಾದಮೇಲೆ ಓದಕೂಡದು. ಪಾಠಶಾಲೆಯಲ್ಲಿ ಆರೋಗ್ಯ ಮೊದಲಾದ ಕಾರಣಗಳಿಂದ ಬೇಜಾರಾದಾಗ್ಯೂ, ಸ್ವಲ್ಪ ವಿಶ್ರಮಿಸಿಕೊಂಡು ಓದುವುದು ಉತ್ತಮ.

ಆಹಾರವಿಹಾರ ವ್ಯಾಸಂಗಾದಿಗಳಿಗೆ ಕಾಲಕ್ಲುಪ್ತವನ್ನು ಮಾಡಿ ಅದರಂತೆ ನಡೆಯುವುದು ಒಳ್ಳೇದು. ಅಭ್ಯಾಸಕ್ಕನುಸಾರವಾದ ಪ್ರಯತ್ನವಿಲ್ಲದೆ ಆಯಾಯ ಕೆಲಸವಾಡುವ ರೂಢಿಯೂ ಉಂಟಾಗುವುದು. ಅಂಥಾ ಅಭ್ಯಾಸವನ್ನು ಮಾಡಿಕೊಳ್ಳುವುದು ಬಹಳ ಲಾಭಕರವಾದದ್ದು.

ಯಾರು ಯಾವಾಗಲೂ ಓದುತ್ತಿರುವರೊ ಅವರಿಗೆ ಆರೋಗ್ಯವು ತಪ್ಪು

ಕ್ಕೆ ಮುಖ್ಯಕಾರಣನಾದ ದುರ್ವ್ಯಾಪಾರಗಳಿಗೆ ಬೀಳದೆ ಅಂಗಸಾಧನೆಗಳನ್ನು ರಿಯಾಗಿ ಮಾಡುತ್ತಾ ಆರೋಗ್ಯಭಾಗ್ಯವನ್ನು ಚನ್ನಾಗಿಟ್ಟುಕೊಂಡು ಏಕಾಗ್ರ್ಯ ಂದ ವಾಸಮಾಡಿ ಪರೀಕ್ಷೆಗಳನ್ನು ಕೊಟ್ಟು ಡಿಗ್ರಿಗಳನ್ನು ತೆಗೆದುಕೊಂಡು ಳ್ಳೀ ಪಂಡಿತರೆಂಬದಾಗಿ ಹೆಸರನ್ನು ಪಡೆದಿರುವರು ಅವರ ಮೆಹನತ್ತಿಗೆ ಅನು ಸಪವಾದ ಅಧಿಕಾರವನ್ನು ಸಂಪತ್ತನ್ನು ಪಡೆಯುವರು. ಹಾಗಿಲ್ಲದೆ ಪಾಠಶಾಲೆ ಳಿಗೂ ಕಾಲೇಜುಗಳಿಗೂ ಸೇರಿ ದುರ್ವರ್ತಿಗರ ಸಹವಾಸವನ್ನು ಮಾಡಿ ೀಹಕ್ಕೂ ಬುದ್ಧಿಗೂ ದೌರ್ಬಲ್ಯನುಮಾಡಿಕೊಂಡು ವ್ಯಾಸಂಗದಲ್ಲಿ ಶ್ರದ್ಧೆ ಇಲ್ಲದವ ಾಗಿ ಪರೀಕ್ಷೆಗಳಿಗೆ ಎಷ್ಟಾವರ್ತಿಗಾದರೂ ತೇರ್ಗಡೆಯಾಗದೆ ಭಗ್ನಮನೋರಥರಾಗಿ ೀವನಕ್ಕಿಲ್ಲದೆ ಜುಜುಬೀ ನೌಕರಿಗಳಲ್ಲಿ ಸೇರಿ ಅದರಿಂದ ಜೀವನವನ್ನು ಮಾಡಿಕೊ ುವುದಕ್ಕೂ ಆಗದೆ ಬಹಳ ಶ್ರಮಪಡುವರು. ಇದರಿಂದಲೇ ಸಕಲಫಲಗಳೂ ಕರ್ಮಾ ುಸಾರವಾಗಿರುವುದೆಂದು ಸ್ಪಷ್ಟವಾಗಿ ಗೊತ್ತಾಗುವುದು.

ವೃದ್ಧಿಗೆ ಬರುವುದಕ್ಕೆ ವಿದ್ಯೆ ಒಂದೇ ಕಾರಣವಲ್ಲ. ವಿದ್ಯಾವಂತರಾದವರ ೀಕರು ಕಷ್ಟದಶೆಯಲ್ಲಿರುವುದು ಎಲ್ಲರಿಗೂ ಗೊತ್ತೇಇದೆ. ವಿದ್ಯೆಯು ಜೆಂತೆಗೆ ವಿನ ಯಸೌಶೀಲ್ಯಾದಿಗಳೂ ಇರಬೇಕು. ಈ ಗುಣಾತಿಶಯಗಳೊಡನೆ ಸೇರಿದ ವಿದ್ಯೆಯು ಶೋಭಿಸುವುದು. ಭಾಗ್ಯವಂತರಾಗಿಯೂ ಯಶೋವಂತರಾಗಿಯೂ ಬದುಕುವುದಕ್ಕೆ ವಿದ್ಯಾವಿನಯಾದಿಗಳು ಅವಶ್ಯಕವೆಂಬುದು ಸಿದ್ಧವಾಯಿತು. ಪ್ರಾಯಕವಾಗಿ ಬಹುಜನಗಳು ಪಾಠಶಾಲೆಗಳಿಗೆ ಹೋಗುವರು. ಅವರಲ್ಲಿ ಕೆಲವರುಮಾತ್ರ ಮುಂದಕ್ಕೆ ಬರುವರು. ಅನೇಕರು ಬಹುದ್ರವ್ಯ ವ್ಯಯವನ್ನು ಪಡಿ ಲೇಶಫಲವನ್ನು ಹೊಂದದೇಹೋಗು ವರು. ಇದಕ್ಕೆ ಕಾರಣಗಳನ್ನು ಪರಿಶೀಲಿಸಿ ನೋಡೋಣ. ಬದುಕತಕ್ಕ ವಿದ್ಯಾರ್ಥಿ ಗಳು ದೇಹವನ್ನು ಕೆಡಿಸಿಕೊಳ್ಳುವುದಿಲ್ಲ. ಅದರಿಂದ ಅವರ ದೇಹಶಕ್ತಿಯೂ ಬುದ್ಧಿ ಶಕ್ತಿಯೂ, ಇಂದ್ರಿಯಪಾಟವವು ಸರಿಯಾಗಿರುವುವು. ಇವರ ಮನಸ್ಸು ಪಾಠಗ ಳಮೇಲೆ ಏಕಾಗ್ರವಾಗಿ ನಿಲ್ಲುವುದು. ಇವರ ಬುದ್ಧಿಯು ಇತರ ವಿಷಯಾದಿ ಸಂಬಂ ಧವನ್ನು ಹೊಂದುವುದಿಲ್ಲ. ಇವರ ಕಾಲವು ವಿಷಯಾಂತರಗಳಿಗೆ ಕೊಡಲ್ಪಡುವುದಿಲ್ಲ. ಇವರು ಉತ್ತರೋತ್ತರ ತಾವು ಹೊಂದಬೇಕಾದ ಸಂಪತ್ತುಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಅವುಗಳ ಪ್ರಾಪ್ತಿಯನ್ನೇ ಎದುರುನೋಡುತ್ತಿರುವರು. ಇಂಥಾ ವಿದ್ಯಾ ರ್ಥಿಗಳಿಗೆ ಇಷ್ಟಾರ್ಥ ಪ್ರಾಪ್ತಿಯೂ ದಿನೇದಿನೇ ಸವಿಾಪವಾಗುವುದು. ವಿದ್ಯಾರ್ಥಿಗ

ಳು ತಮ್ಮ ಇಷ್ಟಾರ್ಥ ಪ್ರಾಪ್ತಿಗಾಗಿ ಮಾಡಬೇಕಾದ ಇನ್ನೂ ಕೆಲವು ಕಾರ್ಯಗಳನ್ನು ಕುರಿತು ಮದ್ರಾಸು ಹೈಕೋರ್ಟು ಜಡ್ಜ್ರಿಗಳಾಗಿಯೂ ನಮ್ಮ ದೇಶೀಯರಲ್ಲಿ ಅದ್ವಿತೀಯ ಪಂಡಿತರೆಂಬದಾಗಿಯೂ ಯಶಸ್ಸನ್ನು ಪಡೆದ ಮಿ॥ ಸರ್. ಟಿ. ಮುತ್ತುಸಾಮಿಯ್ಯರವರ ಕೆಲವು ಹಿತೋಪದೇಶಗಳನ್ನು ಮಾಡಿದಾರೆ. ಅವರು ಹೇಳುವದೇನೆಂದರೆ

ವಿದ್ಯಾರ್ಥಿಗಳು ಬೆಳಿಗ್ಗೆ ೫ ಘಂಟೆಗೆ ಸರಿಯಾಗಿ ಏಳಬೇಕು. ಪಾಠಗಳು ಘಟ್ಟಿಮಾಡುವುದಕ್ಕೆ ಬೆಳಗಿನಹೊತ್ತು ಬಹಳ ಅನುಕೂಲವಾದದ್ದು. ನಿದ್ರೆಯಿಂದ ದೇಹಕ್ಕೂ ಬುದ್ಧಿಗೂ ವಿಶ್ರಾಂತಿಯು ಆಗಿರುತ್ತದೆ. ಪಾಠವು ಆಗ ಬಹಳ ಸುಲಭವಾಗಿ ಬರುವುದು. ವೃದ್ಧಿಗೆ ಬರಬೇಕೆಂಬ ವಿದ್ಯಾರ್ಥಿಗಳು ಬೆಳಗಿನಹೊತ್ತಿನಲ್ಲಿ ಒಂದುನಿಮಿಷವನ್ನೂ ವ್ಯರ್ಥವಾಗಿ ಕಳೆಯುಕೂಡದು. ಬೆಳಿಗ್ಗೆ ೫ ಘಂಟೆಗೆ ಏಳಬೇಕಾದರೆ ಹಿಂದಿನರಾತ್ರಿ ೧೦ ಘಂಟೆಯೊಳಗಾಗಿ ನಿದ್ರೆಯನ್ನು ಮಾಡುತ್ತಿರಬೇಕು. ಅನೇಕರು ರಾತ್ರಿ ಬಹಳಹೊತ್ತು ವ್ಯಾಸಂಗಮಾಡುವರು. ಇದು ತಪ್ಪು. ಹಗಲೆಲ್ಲಾ ಬುದ್ಧಿಗೂ ಕಣ್ಣಿಗೂ ಬಹಳ ಕೆಲಸವಿರುವುದು. ಈ ಕೆಲಸದಿಂದ ಅವುಗಳಿಗೆ ಬಹಳ ಬೇಜಾರಾಗಿರುವುವು. ಅವುಗಳಿಗೆ ವಿಶ್ರಾಂತಿಯು ಬಹಳ ಅವಶ್ಯಕ. ಬಲಾತ್ಕಾರದಿಂದ ಅವುಗಳಿಗೆ ಕೆಲಸವನ್ನು ಕೊಟ್ಟರೆ ಕೆಲಸವನ್ನು ಅವುಗಳು ಚನ್ನಾಗಿ ಮಾಡುವುದಿಲ್ಲ. ಅಂದದೆ, ಬೇಜಾರಾದಾಗ ಓದಿದ್ದು ಮನಸ್ಸಿಗೆ ಹತ್ತುವುದಿಲ್ಲ. ಅಂಥಾ ಕಾಲದಲ್ಲಿ ಮಾಡಿದ ವ್ಯಾಸಂಗಗಳು ವ್ಯರ್ಥವಾಗುವುದು. ಆದುದರಿಂದ ೧೦ ಘಂಟೆಯೊಳಗಾಗಿ ಮಲಗಿಕೊಂಡು ೫ ಘಂಟೆಗೆ ಎದ್ದು ಓದುವುದೇ ಲಾಭಕರವಾದದ್ದು. ಯಾವಾಗಲೂ ಬೇಜಾರಾದಮೇಲೆ ಓದಕೂಡದು. ಪ್ರಾತಃಕಾಲದಲ್ಲಿ ಆರೋಗ್ಯ ಮೊದಲಾದ ಕಾರಣಗಳಿಂದ ಬೇಜಾರಾದಾಗ್ಯೂ, ಸ್ವಲ್ಪ ವಿಶ್ರಮಿಸಿಕೊಂಡು ಓದುವುದು ಉತ್ತಮ.

ಆಹಾರವಿಹಾರ ವ್ಯಾಸಂಗಾದಿಗಳಿಗೆ ಕಾಲಕ್ಲುಪ್ತವನ್ನು ಮಾಡಿ ಅದರಂತೆ ನಡೆಯುವುದು ಒಳ್ಳೇದು. ಅಭ್ಯಾಸಕ್ಕನುಸಾರವಾದ ಪ್ರಯತ್ನವಿಲ್ಲದೆ ಅಯಾಯ ಕೆಲಸವಾಡುವ ರೂಢಿಯೂ ಉಂಟಾಗುವುದು. ಅಂಥಾ ಅಭ್ಯಾಸವನ್ನು ಮಾಡಿಕೊಳ್ಳುವುದು ಬಹಳ ಲಾಭಕರವಾದದ್ದು.

ಯಾರು ಯಾವಾಗ್ಯೂ ಓದುತ್ತಲಿರುವರೊ ಅವರಿಗೆ ಆರೋಗ್ಯವು ತಪ್ಪು

ಕ್ಕೂ ಮುಖ್ಯಕಾರಣವಾದ ದುರ್ವ್ಯಾಪಾರಗಳಿಗೆ ಬೀಳದೆ ಅಂಗಸಾಧನೆಗಳನ್ನು ಸರಿಯಾಗಿ ಮಾಡುತ್ತಾ ಆರೋಗ್ಯಭಾಗ್ಯವನ್ನು ಚನ್ನಾಗಿಟ್ಟುಕೊಂಡು ಏಕಾಗ್ರ್ಯದಿಂದ ವಾಸಮಾಡಿ ಪರೀಕ್ಷೆಗಳನ್ನು ಕೊಟ್ಟು ಡಿಗ್ರಿಗಳನ್ನು ತೆಗೆದುಕೊಂಡು ಒಳ್ಳೇ ಪಂಡಿತರೆಂಬದಾಗಿ ಹೆಸರನ್ನು ಪಡೆದಿರುವರು ಅವರ ಮೆಹನತ್ತಿಗೆ ಅನುರೂಪವಾದ ಅಧಿಕಾರವನ್ನು ಸಂಪತ್ತನ್ನು ಪಡೆಯುವರು. ಹಾಗಿಲ್ಲದೆ ಪಾಠಶಾಲೆಗಳಿಗೂ ಕಾಲೇಜುಗಳಿಗೂ ಸೇರಿ ದುರ್ಮಾರ್ಗರ ಸಹವಾಸವನ್ನು ಮಾಡಿ ದೇಹಕ್ಕೂ ಬುದ್ಧಿಗೂ ದೌರ್ಬಲ್ಯನುಮಾಡಿಕೊಂಡು ವ್ಯಾಪಂಗದಲ್ಲಿ ಶ್ರದ್ಧೆ ಇಲ್ಲದವರಾಗಿ ಪರೀಕ್ಷೆಗಳಿಗೆ ಎಷ್ಟಾವರ್ತಿಗಾದರೂ ತೇರ್ಗಡೆಯಾಗದೆ ಭಗ್ನಮನೋರಥರಾಗಿ ಜೀವನಕ್ಕಿಲ್ಲದೆ ಜುಜುಬೀ ನೌಕರಿಗಳಲ್ಲಿ ಸೇರಿ ಅದರಿಂದ ಜೀವನವನ್ನು ಮಾಡಿಕೊಳ್ಳುವುದಕ್ಕೂ ಆಗದೆ ಬಹಳ ಶ್ರಮಪಡುವರು. ಇದರಿಂದಲೇ ಸಕಲಫಲಗಳೂ ಕರ್ಮಾನುಸಾರವಾಗಿರುವುದೆಂದು ಸ್ಪಷ್ಟವಾಗಿ ಗೊತ್ತಾಗುವುದು.

ವೃದ್ಧಿಗೆ ಬರುವುದಕ್ಕೆ ವಿದ್ಯೆ ಒಂದೇ ಕಾರಣವಲ್ಲ. ವಿದ್ಯಾವಂತರಾದವರ ಸೇಕರು ಕಷ್ಟದಶೆಯಲ್ಲಿರುವುದು ಎಲ್ಲರಿಗೂ ಗೊತ್ತೇಇದೆ. ವಿದ್ಯೆಯು ಜೊತೆಗೆ ವಿನಯಸೌಶೀಲ್ಯಾದಿಗಳೂ ಇರಬೇಕು. ಈ ಗುಣಾತಿಶಯಗಳೊಡನೆ ಸೇರಿದ ವಿದ್ಯೆಯು ಶೋಭಿಸುವುದು. ಭಾಗ್ಯವಂತರಾಗಿಯೂ ಯಶೋವಂತರಾಗಿಯೂ ಬದುಕುವುದಕ್ಕೆ ವಿದ್ಯಾವಿನಯಾದಿಗಳು ಅವಶ್ಯಕವೆಂದು ಸಿದ್ಧವಾಯಿತು. ಪ್ರಾಯಕವಾಗಿ ಬಹುಜನಗಳು ಪಾಠಶಾಲೆಗಳಿಗೆ ಹೋಗುವರು. ಅವರಲ್ಲಿ ಕೆಲವರುಮಾತ್ರ ಮುಂದಕ್ಕೆ ಬರುವರು. ಅನೇಕರು ಬಹುದ್ರವ್ಯ ವ್ಯಯವನ್ನು ಪಡಿ ಲೇಶಫಲವನ್ನು ಹೊಂದದೇಹೋಗುವರು. ಇದಕ್ಕೆ ಕಾರಣಗಳನ್ನು ಪರಿಶೀಲಿಸಿ ನೋಡೋಣ. ಬಹುಕತಕ್ಕ ವಿದ್ಯಾರ್ಥಿಗಳು ದೇಹವನ್ನು ಕೆಡಸಿಕೊಳ್ಳುವುದಿಲ್ಲ. ಅದರಿಂದ ಅವರ ದೇಹಶಕ್ತಿಯೂ ಬುದ್ಧಿಶಕ್ತಿಯೂ, ಇಂದ್ರಿಯಪಾಟವವು ಸರಿಯಾಗಿರುವುವು. ಇವರ ಮನಸ್ಸು ಪಾಠಗಳಮೇಲೆ ಏಕಾಗ್ರವಾಗಿ ನಿಲ್ಲುವುದು. ಇವರ ಬುದ್ಧಿಯು ಇತರ ವಿಷಯಾದಿ ಸಂಬಂಧವನ್ನು ಹೊಂದುವುದಿಲ್ಲ. ಇವರ ಕಾಲವು ವಿಷಯಾಂತರಗಳಿಗೆ ಕೊಡಲ್ಪಡುವುದಿಲ್ಲ. ಇವರು ಉತ್ತರೋತ್ತರ ತಾವು ಹೊಂದಬೇಕಾದ ಸಂಪತ್ತುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವುಗಳ ಪ್ರಾಪ್ತಿಯನ್ನೇ ಎದುರುನೋಡುತ್ತಿರುವರು. ಇಂಥಾ ವಿದ್ಯಾರ್ಥಿಗಳಿಗೆ ಇಷ್ಟಾರ್ಥ ಪ್ರಾಪ್ತಿಯೂ ದಿನೇದಿನೇ ಸವಿಾಪವಾಗುವುದು. ವಿದ್ಯಾರ್ಥಿಗ

ಮುಖ್ಯ ನಿವಾಸಿಗಳಾದ ಮರಾಟಿ, ಗುಜರಾತಿ, ಮಹಮ್ಮದಿಯ ಸ್ತ್ರೀಜನರು, ಬಾಲ
ಕಿಯರು, ಒಟ್ಟು ಸುಮಾರು ೧೫೦೦ ವಂದಿಯರು ಅಲ್ಲಿ ಕಂಗೊಳಿಸುತ್ತಿದ್ದರು. ಈ
ಸಭೆಯು ಅಗಾಧ್ರಾಸವನ್ನು ಬರೋಡ ಸಂಸ್ಥಾನದ ಮಹಾರಾಣಿ ಹಿ॥ ಕು॥ ಶೋಭಿತರಾದ
ತಿನ್ಮಾರ್ಬಾಯಿ ಸಾಹೇಬ ಸಿ. ಐ. ಯವರು ಅಲಂಕರಿಸಿ ಸಭೆಯನ್ನು ಪ್ರಕಾಶಗೊ
ಸಿದ್ದರು. ಅಲ್ಲಿನ ಬಾಲಿಕಾ ಪಾಠಶಾಲೆಯ ಲೇಡೀಸೂಪರೆಂಟಿಂಡೆಂಟರಾದ ಮಿಸ್
ಕೋರಾಬ್ಜಿಯವರು ಮಹಾರಾಣೀಯವರನ್ನು ಎದಿರ್ಗೊಂಡು ಹಸ್ತಲಾಘವವನ್ನು
ಕೊಟ್ಟು, ಆಗಾಧ್ರಾಸನದಲ್ಲಿ ಕುಳ್ಳಿರಿಸಿ, ಆ ಸಂಸ್ಥಾನದ ಸ್ತ್ರೀವಿದ್ಯಾಭಿವೃದ್ಧಿಯ ವಿವರ
ವನ್ನು ತಿಳಿಸಿದಮೇಲೆ—ಬರೋಡಾ ಮಹಾರಾಣಿಯವರು, ಸಭಾಸದರಾದ ಸ್ತ್ರೀಜನ
ರಿಗೆ ಹೇಳಿದುದನ್ನು ಕನ್ನಡಿಸಿರುತ್ತೇವೆ.

ಪ್ರಿಯಸಹೋದರಿಯರೆ! ನಿಮಗೋಸ್ಕರವಾಗಿ ಈ ಸಭೆಯು ಇಲ್ಲಿ ಸೇರಿರು
ವುದನ್ನು ನೋಡಿ ನನಗೆ ತೋರುವ ಈ ಮಾತುಗಳನ್ನು ಆದರದಿಂದ ಲಾಲಿಸಿ. ಪೂಜ್ಯ
ನಾದ ಭಗವದ್ಗೀತೆಯಲ್ಲಿ ಜ್ಞಾನಕ್ಕಿಂತಲೂ ಶ್ರೇಷ್ಠವಾದುದು ಯಾವದೂ ಇಲ್ಲವೆಂದು
ಹೇಳಿರುವುದು. ಆದರೆವಿದ್ಯೆಯಿಲ್ಲದೆ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ವಿದ್ಯೆಯೆ
ಜ್ಞಾನಕ್ಕೆ ತಾಯಿ. ಮತ, ಸಿರಿ, ಸುಖ, ಮೋಕ್ಷೆ—ಲೋಕವೆಲ್ಲ ಅಪೇಕ್ಷಿಸುತ್ತಿರುವ
ಇವುಗಳು ವಿದ್ಯೆಯಿಂದಲೇ ಸಾಧ್ಯವು. ಅಮೂಲ್ಯವಾದ ಮತ್ತು ಶಾಶ್ವತವಾದ ವಿದ್ಯೆಯ
ನ್ನು ಎಲ್ಲೆಲ್ಲೂ ಪಸರಿಸಬೇಕೆಂದು ವಿದ್ವತ್ಸಾಕ್ಷೆಪಾತಿಗಳು ಮಾಡುತಿರುವ ಸಾಹಸವನ್ನು
ಸ್ತ್ರೀ ವಿದ್ಯಾಭ್ಯಾಸಕ್ಕಾಗಿ, ಈ ಭರತಖಂಡದ ಅನೇಕ ಪ್ರದೇಶಗಳಲ್ಲಿ ಮಾಡಿರುವ
ಫಲಕೀರ್ತಿಯನ್ನೂ ಆಗಾಗ್ಗೆ ನಾವು ಕೇಳುತಲಿರುವೆವೆಷ್ಟೆ. ಈ ವಿಷಯದಲ್ಲಿ ಈ
ಸಂಸ್ಥಾನದಲ್ಲಿ ಕಲ್ಪಿಸಿ ಇರತಕ್ಕಷ್ಟು ಅನುಕೂಲ್ಯಗಳು ಇನ್ನೆಲ್ಲೂ ಇಲ್ಲವೆಂದು ನನಗೆ
ತೋರುವುದು. ವಿದ್ಯಾಸಕ್ತಿಯಲ್ಲೂ, ಅದಕ್ಕೆ ತಕ್ಕ ಧಾರಾಳದಲ್ಲೂ, ನಮ್ಮ ಮಹಾ
ರಾಜನಿಗೆ ಸಮಾನರಾದವರು ಅತಿವಿರಳ. ಪತಿಯನ್ನು ಹೊಗಳುವುದು ಪ್ರಿಯಸ
ತಿಯ ಧರ್ಮವೆಂದು ನಾನು ಹೇಳಿದುದಲ್ಲ. ಈ ವಿಷಯದಲ್ಲಿ ಅವರು ಮಾಡುತಲಿರುವ
ಪ್ರಯತ್ನಗಳನ್ನು ನೋಡಿ ನನಗೆ ಬಹಳ ಸಂತೋಷವಿರುವುದರಿಂದ ಈ ಸಮಯದಲ್ಲಿ
ಅವರಗುಣಾತಿಶಯವನ್ನು ಹೊಗಳದೆ ಇರಲಾರೆನು.

ಇದರಿಂದ ಸಂಸ್ಥಾನಕ್ಕೆ ಕಿಂಡಾದಾಗೆ ಸುವರ್ಣಾದಾಯವೇನೂ ಬರುವು
ದಿಲ್ಲ. ಪ್ರತಿಫಲವನ್ನೆಣಿಸದೆ ಅನಾಧಾರಣವಾದ ಔದಾರ್ಯದಿಂದ ಪ್ರೋತ್ಸಹಿಸಿ ಸ್ತ್ರೀ

ಪ್ರತಿ. ಅವಶ್ಯವಿರುವುದು. ಯಾವಕೆಲಸವನ್ನು ಅತಿಯಾಗಿ ಮಾಡಬಾ ರದು. ಸರಿಯಾಗಿ ಸಾಕಷ್ಟು ಬರಬೇಕಾದರೆ ವ್ಯಾಯಾಮವು ಮುಖ್ಯ. ವ್ಯಾಯಾಮ ದಿಂದ ನಮ್ಮ ದೇಹಗತವಾದ ಜಲಮಲರೂಪವಾದ ವಿಷಯದಾರ್ಥಗಳೆಲ್ಲಾ ವಿಸರ್ಜನ ಕ್ರೋತಗಳಿಂದ ವಿಸರ್ಜನೆಯಾಗುವುವು. ಇವುಗಳು ಸರಿಯಾಗಿ ವಿಸರ್ಜನೆಯಾಗದಿ ದ್ದಲ್ಲಿ ಕಳ್ಳಲಯುಕ್ತವಾದ ರಕ್ತವು ನಮ್ಮ ಮೆದಳಿನಲ್ಲಿ ಸೇರಿ ಅದರ ಆರೋಗ್ಯವನ್ನು ಕೆಡಿಸುವುದು. ಹಾಗೆ ಕೆಟ್ಟ ಮೆದೋಶಕ್ತಿಯುಳ್ಳವರು ಎಷ್ಟು ಓದಿದಾಗ್ಯೂ ಶುಂಠ ರಾಗುವುದೇನಾಶ್ಚರ್ಯ. ಬುದ್ಧಿಶಕ್ತಿಯು ಚನ್ನಾಗಿರಬೇಕೆಂದು ಅಪೇಕ್ಷಿಸುವವರು ಕ್ರಿಕೆಟ್, ಫುಟ್‌ಬಾಲ್ ಪ್ರತಿನಿತ್ಯವು ೫—೬ ವೈಲಿಗಳಿಗೆ ಕಡಮೆಯಿಲ್ಲದೆ ನಡೆಯು ವುದು, ಓಡುವುದು ಇವೇ ಮೊದಲಾದ ಬೆವರು ಬರತಕ್ಕ ಅಭ್ಯಾಸ ಕಾರಿ ಅಥವಾ ವ್ಯಾಯಾಮ ಕೆಲಸಗಳನ್ನು. ವಿಮಲವಾದ ವಾಯುಸಂಚಾರವಿಹ ಸ್ಥಳಗಳಲ್ಲಿ ಮಾಡ ಬೇಕು.

ಈ ಮುತ್ತುಸಾಮ್ಯಯ್ಯನವರು ಹೇಳಿರತಕ್ಕ ಬುದ್ಧಿವಾದಗಳು ವಿದ್ಯಾ ರ್ಥಿಗಳ ಅಭಿವೃದ್ಧಿಗೆ ಬಹಳ ಸಾಧಕವಾದವುಗಳು. ಅವುಗಳನ್ನು ವಿದ್ಯಾರ್ಥಿಗಳು ಅವರಿಗೆ ತಿಳುವಳಿಕೆಯೆಂದು ನಂಬಿದೇನೆ.

ಎಂ. ವೆಂಕಟ್ಟಕೃಷ್ಣಯ್ಯ.
ಮಿಲಿಟರಿ ಸೆಕ್ರೆಟರಿಯೆಟ್ ಹೆಡ್ ಕ್ಲರ್ಕ್

ಬೆಂಗಳೂರಿನಲ್ಲಿನ ವಿದ್ಯಾಭ್ಯಾಸ

ಸಂ: ಗಂಗಾಧರಯ್ಯನವರಿಗೆ ಬೆಂಗಳೂರಿನ ಪುಟ್ಟಣ್ಣಚೆಟ್ಟಿಯವರ ಪತ್ರಿಕೆಯಿಂದ ಯಾವ ಯಾವ ಶಾಲೆಗಳಲ್ಲಿ ವಿದ್ಯಾಭ್ಯಾಸವು ಬಹಳ ಚೆನ್ನಾಗಿ ನಡೆಯುವುದೆಂಬ ವಿಷಯವು ತಿಳಿಯಬೇಕೆಂದು ಅಪೇಕ್ಷೆಯಿರುವುದಾಗಿ ತಿಳಿಸಿದ್ದರು. ಬೆಂಗಳೂರಿನಲ್ಲಿ ಸ್ಕಾಟಿಷ್ ಮಿಷನರಿಗಳಿಂದ ಕಾಲೇಜಿಗೆ ಸೇರಿದ ಸಂಸ್ಕೃತವಿದ್ಯಾಭ್ಯಾಸವಿರುವುದಾಗಿಯೂ, ಹಾಗೂ ಮತ್ತು ಸಾಲೆಗಳಲ್ಲಿಯೂ ಎಲ್ಲಾ ವಿದ್ಯಾಭ್ಯಾಸಗಳಿಗೂ ಬಹುಮಾನ ಕೊಡುವ ಪದ್ಧತಿಯಿದ್ದು ಒಂದು ಸ್ಥಾನದ ಪಾಸಾಗಲೋಸುಗ ಸಭೆಯು ಅಲ್ಲಿ ಇರುತ್ತದೆ. ಈ ವಿಷಯ